
ಸಮಗ್ರ ದಾಸ ಸಾಹಿತ್ಯ

ಸಂಪುಟ : ೧೨



ಶ್ರೀ ಗೋಪಾಲದಾಸರ ಕೀರ್ತನೆಗಳು

ಸಮಗ್ರ ದಾಸಸಾಹಿತ್ಯ

ಸಂಪುಟ : ೧೨

ಶ್ರೀ ಗೋಪಾಲದಾಸರ ಕೀರ್ತನೆಗಳು

ಸಂಪಾದಕರು

ಡಾ. ಅಕ್ಕಮಹಾದೇವಿ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಬೆಂಗಳೂರು

SAMAGRA DASA SAHITYA VOLUME - 12 :
Keerthanas of Shree Gopaladasa, Edited by Dr. Akkamahadevi published by Sri Y.K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 53 + ೫೦೪
© ಕರ್ನಾಟಕ ಸರ್ಕಾರ

ಪ್ರಥಮ ಮುದ್ರಣ : ೨೦೦೩
ಪ್ರತಿಗಳು : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :
ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಂ ರಸ್ತೆ
ಬೆಂಗಳೂರು – ೫೬೦ ೦೫೨

ಮುದ್ರಕರು :
ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಡಾ. ಟಿ. ಎನ್. ನಾಗರತ್ನ

ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಮಂದಾಕಿನಿ

ಪ್ರೊ. ಸುಧಾಕರ

ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ ಸಾಹಿತ್ಯ-ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು ; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿಡಿ ಮತ್ತು ಅಂತರ್ಜಾಲದಲ್ಲಿ ಹೊರತರಬೇಕೆಂದಾಗ ಬಳಕೆದಾರರ ಅವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ, ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿಡಿ ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್

ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮುವ್ವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು), ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ, ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ಸುಬ್ರಮಣ್ಯಂ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ ಪಾಮರರನ್ನು ಏಕ ಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಓದಲಾರದ ಕನ್ನಡ ಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ), ನಾಲ್ಕುನೂರಕ್ಕೂ ಮಿಕ್ಕಿದ ದಾಸರ ಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೫ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' – ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೆ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ-ಪೀಳಿಗೆ' ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯವು ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ-ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿದ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರ ಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದು ಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯ ವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದ ವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದು, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದು ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು*, ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿ ಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ-ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ-ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿ ಕೊಡಬೇಕು - ಎಂಬುದಾಗಿ ನಿರ್ಧರಿಸಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ ಎಂದು ಘೋಷಿಸಿದರು. ಅದರಂತೆ ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಶ್ರೀ ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿದೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಕರ್ನಾಟಕದ ಸಾಹಿತ್ಯ ಪರಂಪರೆಯಲ್ಲಿ ಹರಿದಾಸರ ರಚನೆಗಳು ವಿಶಿಷ್ಟ ಸ್ಥಾನವನ್ನು ಪಡೆದಿವೆ. ಭಕ್ತಿಯ ಪ್ರಚಾರದೊಂದಿಗೆ ಸಮಾಜ ಸುಧಾರಣೆಯನ್ನೂ ಕೈಗೊಳ್ಳುವ ಮಾಧ್ಯಮವಾಗಿ ಕೀರ್ತನೆಯನ್ನು ಸಶಕ್ತವಾಗಿ ಬಳಸಿಕೊಂಡವರು ಹರಿದಾಸರು. ಇವರು ಕೇವಲ ಮಧ್ವಮತ ಪ್ರಚಾರಕರಲ್ಲ. ವೇದ ವೇದಾಂಗಗಳು, ಪುರಾಣಗಳು, ವಿವಿಧ ಶಾಸ್ತ್ರಗಳು, ಸಂಗೀತ ಮುಂತಾದವುಗಳ ಬಗೆಗಿನ ಜ್ಞಾನ ಹರಿದಾಸರ ಕೀರ್ತನ ಸಾಹಿತ್ಯದ ಮೂಲಕ ಹರಿದು ಬಂದಿದೆ.

ಶ್ರೀಪಾದರಾಜರಿಂದ ಪ್ರಾರಂಭವಾದ ಹರಿದಾಸ ಸಾಹಿತ್ಯ ವ್ಯಾಸರಾಯರಿಂದ ಸುಸ್ಥಿರ ಸ್ಥಿತಿಯನ್ನು ಪಡೆಯಿತು. ರಾಜಗುರುಗಳಾಗಿ ಮಠಾಧಿಪತಿಗಳಾಗಿ ಮತ್ತು ಧರ್ಮೋಪದೇಶಕರಾಗಿ ವ್ಯಾಸರಾಯರು ನಿರ್ವಹಿಸಿದ ಪಾತ್ರ ಸ್ಮರಣಾರ್ಹವಾದುದು.

ಪುರಂದರದಾಸರ ಕಾಲ ದಾಸಸಾಹಿತ್ಯದ ಸುವರ್ಣಯುಗವೆನಿಸಿತು. ಕರ್ಣಾಟಕ ಸಂಗೀತ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ಪುರಂದರದಾಸರು ಮತ್ತು ಕನಕದಾಸರು ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು. ಇವರ ಅನಂತರ ದಾಸಸಾಹಿತ್ಯ ಅವನತಿಯ ಹಾದಿ ಹಿಡಿಯಿತು. ವಿಜಯನಗರದ ಪತನದೊಂದಿಗೆ ಈ ಸಾಹಿತ್ಯವೂ ಚಲನಶೀಲತೆಯನ್ನು ಕಳೆದುಕೊಂಡಿತು. ಸುಮಾರು ೧೬೮೭ ರಲ್ಲಿ ವಿಜಯದಾಸರಿಂದ ಹರಿದಾಸ ಸಾಹಿತ್ಯಕ್ಕೆ ಪುನಃ ಚಾಲನೆ ಸಿಕ್ಕಿತು, ಹರಿದಾಸ ಸಾಹಿತ್ಯದ ದ್ವಿತೀಯ ಘಟ್ಟ ಪ್ರಾರಂಭವಾಯಿತು. ಇದಕ್ಕೆ ಮಂತ್ರಾಲಯದ ರಾಘವೇಂದ್ರರ ಪ್ರೇರಣೆಯೂ ಸಾಕಷ್ಟಿದೆ. ವಿಜಯದಾಸರು ದಾಸ ಪರಂಪರೆಯನ್ನು ಪುನರುಜ್ಜೀವನಗೊಳಿಸಿದ ಮಹಾತ್ಮರೆಂದು ಪ್ರಖ್ಯಾತರಾದರು. ಇವರ ಪ್ರಮುಖ ಶಿಷ್ಯರೇ ಗೋಪಾಲದಾಸರು.

ಹರಿದಾಸ ಪರಂಪರೆಯ ಮೂಲಸ್ತಂಭಗಳೆಂದು ಪ್ರಶಂಸೆ ಪಡೆದ ಮಹನೀಯರಲ್ಲಿ ಗೋಪಾಲದಾಸರೂ ಒಬ್ಬರು. ಪ್ರಥಮ ಘಟ್ಟದಲ್ಲಿ ದಾಸಸಾಹಿತ್ಯ

ವನ್ನು ಜನಪ್ರಿಯಗೊಳಿಸಿದವರು ಪುರಂದರ-ಕನಕರಾದರೆ ದ್ವಿತೀಯ ಘಟ್ಟ ದಲ್ಲಿ ವಿಜಯದಾಸರು, ಗೋಪಾಲದಾಸರು ಮತ್ತು ಜಗನ್ನಾಥದಾಸರನ್ನು ಹೆಸರಿಸಬೇಕು. ಗೋಪಾಲದಾಸರ ಮೊದಲ ಹೆಸರು ಭಾಗಣ್ಣ. 'ಭಕ್ತಿಯಲ್ಲಿ ಭಾಗಣ್ಣ' ಎಂದು ಪ್ರಸಿದ್ಧಿ ಪಡೆದ ಗೋಪಾಲದಾಸರ ಜೀವನದ ಬಗ್ಗೆ ತಿಳಿದು ಕೊಳ್ಳಲು ಹೆಚ್ಚಿನ ಆಧಾರಗಳಿಲ್ಲ. ಗೋಪಾಲದಾಸರ ತಮ್ಮ ರಂಗದಾಸರು ಬರೆದ 'ಗೋಪಾಲ ವಿಠಲರ ಚರಿತ್ರೆ ಪದ'ವೊಂದೇ ನಂಬಲರ್ಹ ಆಧಾರವಾಗಿದೆ. ಗೋಪಾಲದಾಸರ ರಚನೆಗಳಿಂದಲೂ ಕೆಲವು ವಿಷಯಗಳು ತಿಳಿದುಬರುತ್ತವೆ. ಇವುಗಳ ಜೊತೆಗೆ ಗೋಪಾಲದಾಸರ ಬಗ್ಗೆ ಜನಜನಿತವಾಗಿ ಬಂದಿರುವ ಕಥೆ ಗಳನ್ನು ಪರಿಶೀಲಿಸಬಹುದು.

ಗೋಪಾಲದಾಸರು ಕ್ರಿ.ಶ. ಸು. ೧೭೨೧ ರಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮಸರುಕಲ್ಲಿನಲ್ಲಿ ಜನಿಸಿದರು. ಇವರ ತಂದೆ ಮುರಾರಿ, ತಾಯಿ ವೆಂಕಮ್ಮ, ತಾತ ಮುದ್ಗಲಪ್ಪ. ಭಾಗಣ್ಣನೇ ಹಿರಿಯ. ಇವರಿಗೆ ದಾಸಪ್ಪ, ಶೀನಪ್ಪ, ರಂಗಪ್ಪ ಎಂಬ ಮೂವರು ತಮ್ಮಂದಿರು. ಇವರೂ ದಾಸಕೂಟಕ್ಕೆ ಸೇರಿದವರೇ. ಇವರದು ಸಾಮಾನ್ಯವಾದ ರೈತ ಕುಟುಂಬ. ಇವರ ಪೂರ್ವಜರು ಪುರಾಣ ಶಾಸ್ತ್ರ ಪಾರಂಗತರಲ್ಲ. ತಂದೆ ಮುರಾರಿಯ ಮರಣಾನಂತರ ಇವರ ಆಸ್ತಿ ಕರಗುತ್ತಾ ಬಂತು. ಜೀವನ ನಿರ್ವಹಣೆ ಕಷ್ಟವಾಗಿ ತಾಯಿ ವೆಂಕಮ್ಮ ಮಕ್ಕಳನ್ನು ಸಂಕಾಪುರಕ್ಕೆ ಕರೆತಂದಳು. ಏಳು ವರ್ಷಗಳ ಬಳಿಕ ಉತ್ತನೂರಿಗೆ ಬಂದರು. ಊರಿನ ಹೊರಗೆ ಇದ್ದ ಪಾಳು ಗುಡಿಯೊಂದು ಇವರ ವಾಸಸ್ಥಾನ ವಾಯಿತು. ಮನೆ ಮನೆ ಸುತ್ತಿ ಭಿಕ್ಷೆ ಬೇಡಿ ಮಕ್ಕಳನ್ನು ಸಾಕುತ್ತಿದ್ದಳು ವೆಂಕಮ್ಮ. ಆ ಊರಿನ ಉಪಾಧ್ಯಾಯರನ್ನು ಪ್ರಾರ್ಥಿಸಿಕೊಂಡು ತನ್ನ ಮಕ್ಕಳಿಗೆ ವಿದ್ಯೆ ಕೊಡಿಸಿದಳು. ಸಂಕಾಪುರದ ಶ್ಯಾನುಭೋಗ ಗುಂಡಪ್ಪನ ಮಗನೊಡನೆ ಭಾಗಣ್ಣ ನಿಗೂ ಉಪನಯನ ನಡೆಯಿತು. ಧರ್ಮೋಪದೇಶ, ಅಗ್ನಿಕಾರ್ಯ, ಗಾಯತ್ರೀ ಮಂತ್ರೋಪದೇಶಗಳೆಲ್ಲ ನಡೆದುವು. ಮೊದಲು ಪೆದ್ದನಂತಿದ್ದ ಭಾಗಣ್ಣ ಪವಾಡ ಪುರುಷನಂತೆ ವರ್ತಿಸುತ್ತಿದ್ದುದನ್ನು ನೋಡಿ ಜನ ಆಶ್ಚರ್ಯಪಟ್ಟರು.

ಎರಡು ವರ್ಷಗಳಾದ ಮೇಲೆ ಸಂಕಾಪುರ ಬಿಟ್ಟು ತಾಯಿ ಮತ್ತು ತಮ್ಮಂದಿರೊಡನೆ ಉತ್ತನೂರಿಗೆ ಬಂದು ನೆಲಸಿದ ಭಾಗಣ್ಣ ಜನರಿಗೆ ಭವಿಷ್ಯ ಹೇಳಲಾರಂಭಿಸಿದ. ಇದರಿಂದ ಆದಾಯ ಅಭಿವೃದ್ಧಿಯಾಯಿತು. ಬಂದ ಆದಾಯದಲ್ಲಿ ಅಗತ್ಯವಿದ್ದಷ್ಟನ್ನು ಮಾತ್ರ ಖರ್ಚು ಮಾಡಿ ಉಳಿದುದನ್ನು ಬಡವರಿಗೆ ದಾನ ನೀಡುತ್ತಿದ್ದ. ಗದ್ವಾಲದ ರಾಜ ರಾಮಭೂಪಾಲ ಭಾಗಣ್ಣನ

ಪಾಂಡಿತ್ಯವನ್ನು ನೋಡಿ ಸತ್ಕರಿಸಿದ. ಆದವಾನಿಯ ದಿವಾನ ತಿಮ್ಮಣ್ಣನೂ ಸ್ವಲ್ಪ ಕಾಲ ಭಾಗಣ್ಣನಿಗೆ ಆಶ್ರಯ ನೀಡಿದ್ದ. ಆ ಅವಧಿಯಲ್ಲೇ ಭಾಗಣ್ಣ ಉತ್ತನೂರಿನ ವೆಂಕಟೇಶ್ವರನ ಸನ್ನಿಧಿಯಲ್ಲಿದ್ದು 'ವೆಂಕಟಕೃಷ್ಣ' ಅಂಕಿತದಿಂದ ಕೀರ್ತನೆಗಳನ್ನು ರಚಿಸಲಾರಂಭಿಸಿದ. 'ಸಂಕಟಗಳನಟ್ಟಿ ದಾರಿಗೆ ವೆಂಕಟಕೃಷ್ಣನು ನೀನೆ ವಿಜಯ ವಿಠಲಯೆಂದು ಅಂಕುರವು ಪಲ್ಲೈಸಿ ಫಲಪ್ರಾಪ್ತಿಯಾಗಲೊ' ಎಂಬ ವಿಜಯ ದಾಸರ ಮಾತುಗಳಿಂದ ಹಾಗೂ ರಂಗಪ್ಪದಾಸರ 'ವೆಂಕಟಕೃಷ್ಣೆಂದು ಪದ ಗಳಿಗಂಕಿತವು ನೀಡುತಿರೆ' ಎಂಬ ಮಾತುಗಳಿಂದ ಭಾಗಣ್ಣ 'ವೆಂಕಟಕೃಷ್ಣ' ಎಂಬ ಮುದ್ರಿಕೆಯಿಂದ ಕಾವ್ಯ ರಚಿಸುತ್ತಿದ್ದ ವಿಷಯ ಸ್ಪಷ್ಟವಾಗುತ್ತದೆ. ಆದರೆ ಆ ಅಂಕಿತದಲ್ಲಿ ಕೀರ್ತನೆಗಳು ದೊರೆತಂತಿಲ್ಲ.

ವಿಜಯದಾಸರ ದರ್ಶನವಾದ ಬಳಿಕ ಭಾಗಣ್ಣನ ಜೀವನದಲ್ಲಿ ಮಹತ್ತ್ವದ ಬದಲಾವಣೆ ಉಂಟಾಯಿತು. ಅವರಿಂದ ದೀಕ್ಷೆಯನ್ನು ಸ್ವೀಕರಿಸಿ 'ಗೋಪಾಲ ವಿಠಲ' ಎಂಬ ಅಂಕಿತ ಪಡೆದ ಭಾಗಣ್ಣನೇ ಗೋಪಾಲದಾಸರಾದರು. ಅಂಕಿತ ಪ್ರದಾನವಾದ ವರ್ಷದ ಬಗ್ಗೆ ಚಿಪ್ಪಗಿರಿಯ ಹಳೆಯ ವಹಿಯೊಂದರಲ್ಲಿ ದಾಖಲೆ ಇದೆ. ಅದರ ಪ್ರಕಾರ 'ಕ್ಷಯನಾಮ ಸಂವತ್ಸರದ ಮಾರ್ಗಶಿರ ಶುದ್ಧ ತ್ರಯೋದಶಿ ಶುಕ್ರವಾರ ಅಶ್ವಿನಿ ನಕ್ಷತ್ರ ಹನುಮಂತದೇವರ ವ್ರತ ಸಂಗಮ ಕಾಲವು' ಎಂದರೆ ಕ್ರಿ.ಶ. ೧೭೪೬ ರಲ್ಲಿ ಗೋಪಾಲದಾಸರಿಗೆ ಅಂಕಿತ ಪ್ರದಾನ ವಾಯಿತೆಂದು ತಿಳಿಯಬಹುದು. ಇದಾದ ಮೇಲೆ ಗೋಪಾಲದಾಸರು ನೂರಾರು ಕೀರ್ತನೆಗಳನ್ನು ರಚಿಸತೊಡಗಿದರು. ಅನಂತರ ತಮ್ಮ ಸಹೋದರರಿಗೂ ದೀಕ್ಷೆ ಕೊಟ್ಟರು. ದಾಸಪ್ಪ, ಸೀನಪ್ಪ, ರಂಗಪ್ಪ ಕ್ರಮವಾಗಿ 'ಗುರುಗೋಪಾಲ', 'ವರದಗೋಪಾಲ' ಮತ್ತು 'ತಂದೆ ಗೋಪಾಲ' ಎಂಬ ಅಂಕಿತಗಳನ್ನು ಪಡೆದರು. ಹೀಗೆ ಗೋಪಾಲದಾಸರು ಮಾತ್ರವಲ್ಲದೆ ಅವರ ಮೂವರು ಸಹೋದರರೂ ಹರಿದಾಸ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನಿತ್ತಿದ್ದು ಗಮನೀಯ ವಿಚಾರ.

ಗೋಪಾಲದಾಸರ ಕೀರ್ತಿ ಎಲ್ಲ ಕಡೆಗೂ ಹಬ್ಬಿತು. ದಾಸರು ಶಿಷ್ಯ ಸಮೇತರಾಗಿ ತೀರ್ಥಯಾತ್ರೆಗೆ ಹೊರಟರು. ಉಡುಪಿಯ ಶ್ರೀಕೃಷ್ಣನನ್ನು ಸಂದರ್ಶಿಸಿದರು. ಪಂಡರಾಪುರಕ್ಕೆ ಹೋಗಿ ಅಲ್ಲಿ ಸ್ವಲ್ಪಕಾಲ ತಂಗಿದ್ದರು. ವಿಠಲನನ್ನು ಕುರಿತು... 'ಕೇಳಿಲ್ಲ ಕಂಡಿಲ್ಲ ಇಂಥ ಪುರುಷನ್ನ ಎಂದೂ', 'ಎಲ್ಲಿ ನೋಡಲು ಮತ್ತಲ್ಲಿ ನೀನಿರೆ ಬರಲಿಲ್ಲವೆಂಬುದೇನೋ ಗೋಪಾಲವಿಠಲ' ಎಂದು ಕೀರ್ತಿಸಿದ್ದಾರೆ. ಪಂಡರಾಪುರವಲ್ಲದೆ ಹಂಪೆ, ಕೊಲ್ಲಾಪುರ,

ಅಹೋಬಲ, ಶ್ರೀಮುಷ್ಣ, ತಿರುಪತಿ, ಮಂತ್ರಾಲಯ ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸಿ ತಮ್ಮ ಕೃತಿಗಳಲ್ಲಿ ಅಲ್ಲಿಯ ಮೂರ್ತಿಗಳನ್ನು ಸ್ತುತಿಸಿದ್ದಾರೆ.

ವಿಜಯದಾಸರ ಆದೇಶದ ಮೇರೆಗೆ ಗೋಪಾಲದಾಸರ ಬಳಿಗೆ ಶ್ರೀನಿವಾಸಾಚಾರ್ಯರೆಂಬವರು (ಭಾವಿ ಜಗನ್ನಾಥದಾಸರು) ಬಂದರು. ಅವರು ವಿಜಯದಾಸರನ್ನೇ ಧಿಕ್ಕರಿಸಿದ ಪರಿಣಾಮವಾಗಿ ಹೊಟ್ಟೆ ನೋವಿನಿಂದ ನರಳುತ್ತಿದ್ದಾಗ ಜೋಳದ ರೊಟ್ಟಿಗಳನ್ನು ನೀಡಿ ಗೋಪಾಲದಾಸರು ಅದನ್ನು ನಿವಾರಿಸಿದರೆಂಬ ವಿಚಾರ ಜನಜನಿತವಾಗಿದೆ. ಪ್ರತಿವರ್ಷವೂ ಗೋಪಾಲದಾಸರು ತಿರುಪತಿಯ ಬ್ರಹ್ಮೋತ್ಸವಕ್ಕೆ ತಪ್ಪದೆ ಹೋಗುತ್ತಿದ್ದರಂತೆ. ಒಮ್ಮೆ ಶ್ರೀನಿವಾಸಾಚಾರ್ಯರು ಅವರ ಜೊತೆಯಲ್ಲೇ ತಿರುಪತಿಗೆ ಹೊರಟು ಕಾಲುನಡಿಗೆಯಲ್ಲಿ ಬೆಟ್ಟ ಹತ್ತುತ್ತಿದ್ದಾಗ ಅನಾರೋಗ್ಯದಿಂದ ಸಾಯುವ ಸ್ಥಿತಿಗೆ ಬಂದರಂತೆ. ಆಗ ಗೋಪಾಲದಾಸರು ತಮ್ಮ ಗುರುಗಳಾದ ವಿಜಯದಾಸರನ್ನು ಸ್ಮರಿಸಿ, ಧನ್ವಂತರಿಯ ಸ್ತೋತ್ರ ಮಾಡಿ ತಮ್ಮ ಆಯಸ್ಸಿನಲ್ಲಿ ನಲವತ್ತು ವರ್ಷಗಳನ್ನು ಶ್ರೀನಿವಾಸಾಚಾರ್ಯರಿಗೆ ದಾನ ಮಾಡಿದರಂತೆ. ಗೋಪಾಲದಾಸರು ಈ ರೀತಿಯ ಪವಾಡ ಸದೃಶ ವರ್ತನೆಗಳಿಂದ ಜನಪ್ರಿಯವಾದುದರ ಬಗ್ಗೆ ಅನೇಕ ಕಥೆಗಳಿವೆ.

ಗೋಪಾಲದಾಸರಿಗೆ ಶಿಷ್ಯ ವೃಂದವೊಂದಿತ್ತು. ಶ್ರೀನಿವಾಸಾಚಾರ್ಯರು ಗೋಪಾಲದಾಸರ ಸೂಚನೆಯಂತೆ ಪಂಡರಾಪುರಕ್ಕೆ ಹೋಗಿ ಭೀಮರಥಿಯಲ್ಲಿ ಸ್ನಾನ ಮಾಡಿ 'ಜಗನ್ನಾಥ ವಿಠಲ' ಅಂಕಿತವನ್ನು ಪಡೆದು ಜಗನ್ನಾಥದಾಸರೆಂಬ ಹೆಸರನ್ನು ಪಡೆದರು. ಗೋಪಾಲದಾಸರ ತಮ್ಮಂದಿರು ಮೂವರು ಅಣ್ಣನಿಂದಲೇ ಅಂಕಿತ ಪಡೆದರು. ಸೀನಪ್ಪ, ದಾಸಪ್ಪ ಅಣ್ಣನಂತೆಯೇ ಅಪರೋಕ್ಷ ಜ್ಞಾನಿಗಳಾದರು. ವೆಂಕಟರಾಮಾಚಾರ್ಯರೆಂಬ ಹೆಸರಿನ ವಿವೇಕಹೀನನನ್ನು 'ವಾಸುದೇವ ವಿಠಲಾಂಕಿತ'ರಾದ ವ್ಯಾಸತತ್ತ್ವಜ್ಞರನ್ನಾಗಿ ಮಾಡಿದ ಮಹನೀಯರು, ಗೋಪಾಲದಾಸರು. ವ್ಯಾಸತತ್ತ್ವಜ್ಞರೇ ಐಜಿಸ್ವಾಮಿಗಳೆಂದು ಪ್ರಸಿದ್ಧರಾದರು. ಹೆಳವನಕಟ್ಟೆ ಗಿರಿಯಮ್ಮ ಗೋಪಾಲದಾಸರ ಪ್ರಮುಖ ಶಿಷ್ಯರಲ್ಲಿ ಒಬ್ಬರು. ಈಕೆಗೆ ಗೋಪಾಲದಾಸರು ರಂಗೋಲಿಯಲ್ಲಿ ಕೃಷ್ಣನ ಮೂರ್ತಿಯನ್ನು ಸಾಕ್ಷಾತ್ಕರಿಸಿಕೊಟ್ಟರಂತೆ.

ವಿಜಯದಾಸರ ಸ್ಫೂರ್ತಿಯಿಂದ ಕೀರ್ತನ ರಚನೆಗೆ ತೊಡಗಿ ನೂರಾರು ಕೀರ್ತನೆಗಳನ್ನು ಹರಿದಾಸ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ ಗೋಪಾಲದಾಸರು ಚಿತ್ರಭಾನು ಸಂವತ್ಸರದ ಪುಷ್ಯ ಕೃಷ್ಣಾಷ್ಟಮಿಯಂದು (ಕ್ರಿ.ಶ.೧೭೬೨)

ಉತ್ತನೂರಿನಲ್ಲಿ ನಿಧನರಾದರು. ಆ ಊರಿನಲ್ಲಿ ಗೋಪಾಲದಾಸರು ವಾಸ ವಾಗಿದ್ದ ಮನೆ ಇದೆ. ಗೋಪಾಲದಾಸರನ್ನು ಕುರಿತು ಅವರ ತಮ್ಮ ಸೀನಪ್ಪ ದಾಸರು ಬರೆದ ಕೀರ್ತನೆಯಲ್ಲಿ 'ಅಣ್ಣ ಭಾಗಣ್ಣ ನೀ ಕಣ್ಣಿಗೆ ಮರೆಯಾಗಿ ಪುಣ್ಯ ಲೋಕವ ಸೇರಿದ್ಯಾ' ಎಂದು ಕಂಬನಿ ಮಿಡಿದಿದ್ದಾರೆ. ಇನ್ನೊಂದು ಕೀರ್ತನೆಯಲ್ಲಿ ಅಣ್ಣನ ಜನನ, ತೀರ್ಥಯಾತ್ರೆ, ಪದಗಳ ರಚನೆ ಮತ್ತು ಮಧ್ವಮತ ಪ್ರಚಾರಗಳ ಬಗ್ಗೆ ಬರೆದಿದ್ದಾರೆ. ಇಂತಹ ರಚನೆಗಳಿಂದ, ಜನಜನಿತ ಕಥೆಗಳಿಂದ ಹಾಗೂ ಗೋಪಾಲದಾಸರ ಸಾಹಿತ್ಯ ಸೃಷ್ಟಿಯಿಂದ ಅವರ ಜೀವನ ಮತ್ತು ವ್ಯಕ್ತಿತ್ವದ ಪರಿಚಯ ನಮಗಾಗುತ್ತದೆ.

ಕೀರ್ತನೆಗಳು

ಗೋಪಾಲದಾಸರು ಕೀರ್ತನೆ, ಉಗಾಭೋಗ ಮತ್ತು ಸುಳಾದಿ ಎಂಬ ಮೂರು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ಇಲ್ಲಿ ೧೮೩ ಕೀರ್ತನೆಗಳಿವೆ. ಮೂರೇ ನುಡಿಗಳಿರುವ ಚಿಕ್ಕ ಕೀರ್ತನೆಯನ್ನೂ ಮೂವತ್ತು ನುಡಿಗಳಿರುವ ದೊಡ್ಡ ಕೀರ್ತನೆಯನ್ನೂ ಇವರ ರಚನೆಗಳಲ್ಲಿ ಕಾಣಬಹುದು. ಉಗಾಭೋಗಗಳು ಕಡಿಮೆ ಸಂಖ್ಯೆಯಲ್ಲಿವೆ. ಸುಳಾದಿ ಹಾಗೂ ಉಗಾಭೋಗಗಳಲ್ಲಿ ಇವರು ಹರಿಯಬಿಟ್ಟಿರುವ ತಾತ್ತ್ವಿಕ ಪ್ರತಿಪಾದನೆ ಗಮನಿಸತಕ್ಕದ್ದಾಗಿದೆ. ಸಂಗೀತ ಸಾಹಿತ್ಯಗಳನ್ನು ಸಮಪ್ರಮಾಣದಲ್ಲಿ ಬಳಸಿ ಹರಿದಾಸಸಾಹಿತ್ಯವನ್ನು ಶ್ರೀಮಂತಗೊಳಿಸಿದವರು ಇವರು.

ಭಗವಂತನ ಪ್ರಾರ್ಥನೆ

ಸಮಾಜದಲ್ಲಿ ಭಗವದ್ಭಕ್ತಿಯನ್ನು ಬೆಳೆಸಲು, ಮಧ್ವಮತ ತತ್ತ್ವ ಪ್ರಚಾರ ಮಾಡಲು ಹರಿದಾಸರು ಸಾಕಷ್ಟು ಶ್ರಮಿಸಿದ್ದಾರೆ. ಭಗವಂತನನ್ನು ಸ್ತುತಿಸಿ, ವರ್ಣಿಸಿ, ನಿಂದಾಸ್ತುತಿ ಮಾಡಿ, ದಾಸ್ಯಸಖ್ಯವಾತ್ಸಲ್ಯಾದಿ ಭಾವಗಳಿಂದ ಅರ್ಚಿಸಿ ಸೇವಿಸಿರುವುದನ್ನು ನೋಡಬಹುದು.

'ಶಾಪಾನುಗ್ರಹ ಶಕ್ತ'ನಾದ ಗಣಪತಿಯನ್ನು 'ಕರುಣಾಪೂರಿತ ಗೌರೀವರ ಕುಮಾರ'ನೆಂದೂ 'ಸುಂದರವದನಾರವಿಂದನಯನ'ನೆಂದೂ ಗೋಪಾಲ ದಾಸರು ವರ್ಣಿಸಿದ್ದಾರೆ. ಘನಸುಂದರಿಯಾದ ಗೌರಿಯ ಕಂದ ತನ್ನನ್ನು ರಕ್ಷಿಸಬೇಕೆಂದು ಬೇಡಿಕೊಂಡಿದ್ದಾರೆ.

ದೇವದೇವತೆಯರನ್ನು ಪ್ರಾರ್ಥಿಸುವಲ್ಲಿ ದಾಸರ ಅಂತರಂಗ ನಿವೇದನೆ, ಭಕ್ತಿಯ ಸ್ವರೂಪ, ದಾಸ್ಯ ಭಾವನೆ ವ್ಯಕ್ತವಾಗುತ್ತವೆ. ಗೋಪಾಲದಾಸರ ಸ್ತುತಿಪದಗಳು ಕೇವಲ ಸ್ತುತಿ ಪದಗಳಾಗಿರದೆ ತಾತ್ತ್ವಿಕ ಪ್ರತಿಪಾದನೆಯ ರಚನೆಗಳೂ ಆಗಿವೆ. ಭಗವನ್ನಾಮಸ್ಮರಣೆಯ ಫಲವನ್ನು ಹೀಗೆ ಪ್ರತಿ ಪಾದಿಸಿದ್ದಾರೆ.

ನಿನ್ನ ನಾಮದಿಂದ ಹೋಗುವಷ್ಟು ದೋಷ
ಎನ್ನಿಂದ ಮಾಡಲು ಇನ್ನಳವಲ್ಲವು (ಕೀ. ೨)

ದಾಸರ ಸ್ಥಿರಭಕ್ತಿಯ ದೃಢ ಪ್ರತಿಪಾದನೆಯನ್ನು ಹಲವೆಡೆಗಳಲ್ಲಿ ಕಾಣಬಹುದು.

ದುರಿತ ಬಂದರಾಗಲಿ ಹರುಷ ಬಂದರಾಗಲಿ
ಇರುಳು ಹಗಲು ನಿನ್ನ ಸ್ಥಿರಭಕುತಿ ಸ್ಮರಣೆಯಿತ್ತು
ಪೊರೆ ಎನ್ನ ಬಿಡದಂತೆ ಗೋಪಾಲವಿಠಲ (ಕೀ. ೨)

ಸಾಧಕನ ಭಕ್ತಿ ನವವಿಧವಾಗಿ ಹರಿಯುತ್ತದೆಂದು ಹೇಳುತ್ತಾರೆ. ಆದರೆ ಭಕ್ತ ಹಾಗೂ ಭಗವಂತನ ನಡುವಣ ಸಂಬಂಧವನ್ನನುಸರಿಸಿ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ, ಶಾಂತ ಎಂಬ ಪಂಚಭಾವಗಳಲ್ಲಿ ಭಕ್ತಿಯನ್ನು ನಿರೂಪಿಸುವುದುಂಟು. 'ನೀನೇ ಎನಗೆ ದಿಕ್ಕು' ಎಂದು ಸಂಪೂರ್ಣ ದಾಸನಾದಾಗ ಭಕ್ತನ ಯೋಗಕ್ಷೇಮ ವನ್ನು ಭಗವಂತ ನೋಡಿಕೊಳ್ಳುತ್ತಾನೆಂಬುದು ದಾಸರ ನಂಬಿಕೆ.

ಅನ್ಯ ದೈವವರಿಯದೆ ಅನ್ಯಕ್ಕೆ ಎರಗದೆ
ತನ್ನನೆ ನೆರೆನಂಬಿ ಚಿಂತಿಪರ
ತನ್ನವನೆಂತೆಂದು ತನ್ನ ತಿಳಿಸಿಕೊಟ್ಟು
ಘನ್ನ ಪದವಿಗೇರಿಸಿನ್ನು ತಾ ಸಲಹುವ (ಕೀ. ೧೨೩)

ನಿನ್ನ ದಾಸರ ದ್ವಾರವನ್ನು ಕಾಯ್ವರ ಮನೆ
ಕುನ್ನಿ ಎಂದೆನಿಸೆನ್ನ ಗೋಪಾಲವಿಠಲ

ಎಂದು ಕೇಳಿಕೊಂಡು 'ದಾಸರ ದಾಸರ ಮನೆಯ ಕುನ್ನಿ' ಎನಿಸಿಕೊಳ್ಳಲೂ ಅವರು ಅಂಜುವುದಿಲ್ಲ. ಗೋಪಾಲದಾಸರಲ್ಲಿ ತಾತ್ತ್ವಿಕ ನಿರೂಪಣೆಯೇ ಅಧಿಕವಾಗಿರುವುದರಿಂದ ಮಧುರ, ವಾತ್ಸಲ್ಯ ಭಾವಗಳಿರುವ ಕೀರ್ತನೆಗಳು ಒಂದೆರಡು ಹಣಕಿಕ್ಕಿವೆ, ಅಷ್ಟೆ.

ಹರಿಭಕ್ತಿಯ ಅಭಿವ್ಯಕ್ತಿಯಲ್ಲಿ ದಶಾವತಾರಗಳನ್ನು ವರ್ಣಿಸಿರುವುದನ್ನು ಕಾಣ ಬಹುದು. ಶ್ರೀಹರಿಯ ಸರ್ವವ್ಯಾಪಕತ್ವವನ್ನು ಹೇಳುತ್ತಾ ಅವನ ದಶಾವತಾರ ವನ್ನೂ ವರ್ಣಿಸುತ್ತಾರೆ (ಕೀ. ೧೫೫). ತಾವು ಎಷ್ಟು ರೀತಿಯಲ್ಲಿ ಬೇಡಿಕೊಂಡರೂ ಶ್ರೀಹರಿ ತಮ್ಮನ್ನು ನಿರ್ಲಕ್ಷಿಸುವ ಬಗೆಗೆ ಸಿಟ್ಟುಗೊಂಡ ದಾಸರು ಅವನನ್ನು ನಾನಾ ಪರಿ ಪ್ರಶ್ನಿಸುವ ನೆಪದಲ್ಲಿ ನಿಂದಾಸ್ತುತಿ ಮಾಡಿ ದಶಾವತಾರಗಳನ್ನು ಸ್ವಾರಸ್ಯಕರವಾಗಿ ವರ್ಣಿಸಿದ್ದಾರೆ (ಕೀ. ೩೧).

ಕಡುಗುಷ್ಟು ನಾರುತ ಮಡುವಿನೊಳಗೆ ಸೇರು...ಮತ್ಸ್ಯಾವತಾರ
ಬಿಡದೆ ಬೆಟ್ಟವ ಪೊತ್ತು ಕಡಲೊಳಗಿರು ನೀನು...ಕೂರ್ಮಾವತಾರ
ಅಡವಿ ಸೂಕರಜನ್ಮ ಬಿಡದೆ ಬರಲಿ ನಿನಗೆ...ವರಾಹಾವತಾರ
ಕೆಡಲಿ ನಿನ್ನ ರೂಪ ಕಡುಘೋರನಾಗೆಲೊ...ನರಸಿಂಹಾವತಾರ
ಒಡಲಿಗಿಲ್ಲದೆ ನೀನು ತಿರುಕೆಯನು ಬೇಡೋ...ವಾಮನಾವತಾರ
ಕೊಡಲಿಯ ಪಿಡಿದು ನೀನಡವಿ ಸಂಚಾರನಾಗೊ...ಭಾರ್ಗವಾವತಾರ
ಮಡದಿಯ ಕಳಕೊಂಡು ಜಡೆಯ ಧರಿಸೊ ನೀನು...ರಾಮಾವತಾರ
ತುಡುಗ ದನಗಾವನೆಂದು ನುಡಿಯಲಿ ಜನರೆಲ್ಲ...ಕೃಷ್ಣಾವತಾರ
ಉಡುವಸ್ತ್ರವಿಲ್ಲದೆ ಬತ್ತಲಾಗಿ ನಿಲ್ಲೊ...ಬೌದ್ಧಾವತಾರ
ಕಡುವೇಗದಲಿ ನೀನು ಕಲ್ಕಿರೂಪನಾಗೊ (ಕೀ. ೪೮)

ಇಲ್ಲಿ ಮೇಲುನೋಟಕ್ಕೆ ಶ್ರೀಹರಿಯನ್ನು ದಾಸರು ಬೈದಂತೆ ಕಂಡರೂ ಆ ಮೂಲಕ ಹರಿಯ ದಶಾವತಾರಗಳನ್ನು ಮೇಲಿನ ಕೀರ್ತನೆಯ ಒಂದೇ ನುಡಿಯಲ್ಲಿ ಸೊಗಸಾಗಿ ನಿರೂಪಿಸಿರುವುದನ್ನು ಕಾಣಬಹುದು. ದಾಸರು ದಶಾವತಾರವನ್ನು ಹೇಳುವುದರ ಜೊತೆ ಜೊತೆಯಲ್ಲೇ ತಮ್ಮನ್ನು ಕಾಪಾಡ ಬೇಕೆಂದೂ ಹಾಗೆ ಕಾಪಾಡಲು ಸಾಧ್ಯವಿಲ್ಲದಿದ್ದರೆ ನಿನ್ನ ಭಕ್ತವತ್ಸಲನೆಂಬ ಬಿರುದನ್ನು ಬಿಟ್ಟುಬಿಡಬೇಕೆಂದೂ ಭಗವಂತನನ್ನೇ ಆಗ್ರಹಿಸಿದ್ದಾರೆ.

ಭಾಗವತದ ಹಲವು ಪ್ರಸಂಗಗಳು ಹರಿದಾಸರ ಅಭಿವ್ಯಕ್ತಿಗೆ ಮಾಧ್ಯಮ ವಾಗಿವೆ. 'ನಾಳೆ ಬರುವೆನೆಂದು ಹೇಳಿ ಮಧುರೆಗೆ ಪೋದ ಬಹಳ ದಿನ ವಾಯಿತಲ್ಲೊ ಉದ್ಧವ' ಎಂಬ ಕೀರ್ತನೆಯಲ್ಲಿ ದಾಸರು ಗೋಪಿಯರೊಡನೆ ತಾವೂ ಒಬ್ಬರಾಗಿ ತಮ್ಮ ಅಸಹಾಯಕತೆ, ದೌರ್ಬಲ್ಯ ಹಾಗೂ ವಿರಹಯಾತನೆ ಗಳನ್ನು ತೋಡಿಕೊಳ್ಳುತ್ತಾ ಕೃಷ್ಣನ ಗುಣಗಳನ್ನು ವರ್ಣಿಸಿದ್ದಾರೆ. ಇನ್ನೊಂದೆಡೆ

ಮಗುವಾಗಿ ಮಗನಾಗಿ ಮಮತೆ ಪುಟ್ಟಿಸಿ ನಿನ್ನ
ಮಗುವ ರೂಪವ ತೋರಿ ಮರಳಿ ಎನ್ನ ಕಣ್ಣಿಗೆ
ಸಿಗದಂತೆ ನೀನು ಎನ್ನ ಮಗನೆಂದು ಪೇಳಿಕೊಂಡ
ಬಗೆ ಆವಲೀಲೆಯೊ... (ಕೀ. ೧೦೦)

ಎಂದು ದಾಸರಿಗೆ ಕೃಷ್ಣ ಸ್ವಪ್ನದಲ್ಲಿ ಕಾಣಿಸಿಕೊಂಡು ಮಮತೆ ಹುಟ್ಟಿಸಿ, ಮರೆಯಾದುದನ್ನು ಬಣ್ಣಿಸಿದ್ದಾರೆ.

ತಿಳಿಯದೆ ಸ್ವಪ್ನದಿ ಕಳವಳಿಕೆಯಿಂದ
ಸೆಳೆದು ನೂಕಿದೆನಲ್ಲ ಬಳಿಯನಿಲ್ಲಗೊಡದೆ
ಕಿಲಕಿಲನೆ ನಗುತ ಚಿನ್ನಬಾಲಕನಾಗಿ
ಸುಳಿದು ಆಡಿದರು ತಿಳಿಯದೆ ನಾ ಪೋದೆ
ತಳಕುಹಾಕಿ ಕಾಲು ತೊಡರಿಸಿಕೊಂಡರು
ಎಳೆದು ಎಳೆದು ನಿನ್ನ ಎಬ್ಬಟ್ಟಿದೆನಲ್ಲ (ಕೀ. ೧೭೧)

ಸ್ವಪ್ನದಲ್ಲಿ ಕಂಡ ಚಿನ್ನಬಾಲಕನಾದ ಬಾಲಕೃಷ್ಣನ ರೂಪು ತಮ್ಮ ಮನದಲ್ಲಿ ನೆಲೆಯಾಗಬೇಕೆಂದು ಆಲ್ಪರಿಯುತ್ತಾರೆ ದಾಸರು.

ಕಾಳಿಯ ಮರ್ದನದಂತಹ ಸಂದರ್ಭಗಳು ಹರಿದಾಸರ ಅದ್ಭುತ ವರ್ಣನೆಗಳಿಗೆ ಉದಾಹರಣೆಗಳಾಗಿವೆ. 'ನಳಿನ ಕೇತಕಿ ಎಳೆಯ ಮಾವಿನ ತಳಿಲವನದ ಒಳಗೆ ರಂಗನು ಕಾಳಿಂದಿ ತೀರದಿ ಗೆಳೆಯರ ಕೂಡಿ ಮಳೆಯ ಮಿಂಚಿನಂತ್ಹೊಳೆಯುತ್ತ ಕೊಳಲನೂದುತ್ತ' ಕೃಷ್ಣ ನಲಿವ ಸಂದರ್ಭವನ್ನು ಗೋಪಾಲದಾಸರು ತನ್ಮಯ ಭಾವದಿಂದ ವರ್ಣಿಸಿದ್ದಾರೆ.

ಹೊಕ್ಕ ಭರದಿ ದೇವಕಿ ಸುತನ ಸಿಕ್ಕಿಸಿಕೊಂಡು ಬಾಲಕೆ ಬಿಗಿಯಲು
ಲೆಕ್ಕಿಸದಲೆ ಕಾಲಿಕ್ಕಿ ಹಣೆಯಲ್ಲಿ ಫಕ್ಕನೆ ತುಳಿದನಕ್ಕರದಿ ತಕ್ಕತಥೈಯ
ಧಿಮಿಧಿಮಿಕೆಂದು ಕುಣಿಯೆ ಸೊಕ್ಕು ಉಡುಗಲು ಫಕ್ಕನೆ ಕಾಳಿಂಗ
ದಿಕ್ಕುಗಾಣದೆ ಪ್ರಾಣಕ್ಕೆ ಬಂದಿತೆಂದು ಕಕ್ಕಸದಿಂದುಸುರಿಕ್ಕುತಿರೆ (ಕೀ. ೧೫೧)

ಹೀಗೆ ಕಾಳಿಂಗನನ್ನು ಮರ್ದಿಸಿ ಇಂದಿರಾಪತಿ ಆನಂದದಿಂದಾಡುವ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ತಿರುಪತಿಯ ತಿಮ್ಮಪ್ಪನನ್ನು ಗೋಪಾಲದಾಸರು ಕೆಲವು ಕೀರ್ತನೆಗಳಲ್ಲಿ ಭಕ್ತಿಯಿಂದ ಸ್ಮರಿಸಿದ್ದಾರೆ. ಪ್ರತಿವರ್ಷ ವೇಂಕಟೇಶ್ವರನ ಬ್ರಹ್ಮೋತ್ಸವವನ್ನು

ನೋಡಲು ಹೋಗುತ್ತಿದ್ದ ಗೋಪಾಲದಾಸರು ಅದರ ಸಂಭ್ರಮವನ್ನು ಮನ ಮುಟ್ಟುವಂತೆ ವರ್ಣಿಸಿದ್ದಾರೆ.

...ನಿಜರಥಾರೂಢನಾಗಿ ಸುಜನರಿಂದೊಡಗೂಡಿ
ಗಜಸಿಂಹ ಮಯೂರ ದ್ವಿಜಸಿಂಗ ಸಾರಂಗ
ಮಜಭಾಪುರೆ ಎನಲು ತ್ರಿಜಗವು ತಲೆದೂಗೆ
ಅಜನು ಸ್ತುತಿಯ ಮಾಡೆ ಋಜುಗಣಾಧಿಪ ಪಾಡೆ
ಗಜಮುಖನಯ್ಯನು ನಿಜಾನಂದದಲಾಡೆ
ಕುಜನರೆದೆಯ ಮೆಟ್ಟಿ ರಜತಮ ಕಳೆಯುತ (ಕೀ. ೧೮೦)

ಹೀಗೆ ರಥೋತ್ಸವವನ್ನು ವರ್ಣಿಸುತ್ತಲೇ 'ಭವಕಡಲಿಗೆ ಕುಂಭ ಸಂಭವ'ನಾದ ವೇಂಕಟೇಶನನ್ನು 'ಮನಕೆ ಬಾರಯ್ಯ' ಎಂದು ಆತ್ಮೀಯವಾಗಿ ಕರೆದಿದ್ದಾರೆ.

ವರ್ಣಿಪೆ ತೀರ್ಥತಟದಲಿ ಉತ್ತಮಾಗ್ನೇಯ ಭಾಗದಿ
ಚಿತ್ತವೇದ್ಯದಿ ಕಲ್ಪತರು ಅಶ್ವತ್ಥರೂಪದಿ ಇರುವನ
ಕರಗಳೆರಡನು ಕಟಿಯಲಿಟ್ಟು ಕೋರೆಹಲ್ಲನೆ ತೋರುತ
ಧರಿಸಿ ಚಿನ್ಮಯ ಸಾಲಿಗ್ರಾಮದ ಸರವು ಈ ಪರಿ ಬೆಳಗುತ (ಕೀ. ೧೭೯)

ಈ ಕೀರ್ತನೆಯಲ್ಲಿ ಶ್ರೀಮುಷ್ಣಕ್ಷೇತ್ರದ ಭೂವರಾಹ ಸ್ವಾಮಿ ಕೈಗಳೆರಡನ್ನೂ ಸೊಂಟದ ಮೇಲಿಟ್ಟು ಕೋರೆದಾಡೆಯನ್ನು ತೋರಿಸುತ್ತಾ ಸಾಲಿಗ್ರಾಮದ ಸರವನ್ನು ಧರಿಸಿ ನಿಂತಿರುವುದನ್ನು ವರ್ಣಿಸುತ್ತಾ ಇಂತಹ 'ಸುಂದರಾನನ ಕಂಜಮಧುಪನನ್ನು ನೋಡಿದ ಕಾರಣ' ತಮ್ಮ ದುರಿತಗಳೆಲ್ಲ ನಿವಾರಣೆ ಯಾದುವು ಎಂದಿದ್ದಾರೆ ದಾಸರು.

ಅಹೋಬಲ ನರಸಿಂಹ ಕ್ಷೇತ್ರದಲ್ಲಿರುವ ತೀರ್ಥಗಳನ್ನು ಹೀಗೆ ಬಣ್ಣಿಸಿದ್ದಾರೆ :

ಸಿರಿದೇವಿ ಪೆಸರಿನ ತೀರ್ಥ ಇಲ್ಲುಂಟು
ಗರುಡತೀರ್ಥ ಉಂಟು ಉರಗತೀರ್ಥಉಂಟು
ನರರ ಉದ್ಧರಿಸಲು ವಾಯು ತೀರ್ಥಉಂಟು
ಪರಿಪರಿ ಪೆಸರಿನ ತೀರ್ಥಗಳಿಲ್ಲುಂಟು
ನರಹರಿ ತಾನೆ ಒಂದೊಂದು ತೀರ್ಥದಿ ಇದ್ದು
ಧರೆ ಮೇಲಿದ್ದ ಜನರ ಪೊರೆವ ತಿಳಿದವರಿಗೆ
ಕರುಣಾಕರದೇವ ಗೋಪಾಲವಿಠಲ ತನ್ನ
ಶರಣರ ಪೊರೆಯಲು ಇರುತಿಪ್ಪವನಿಲ್ಲಿ (ಕೀ. ೧೭೫)

ಅಹೋಬಲ ಕ್ಷೇತ್ರದ ತೀರ್ಥಗಳನ್ನೆಲ್ಲ ಬಣ್ಣಿಸಿ ಪ್ರತಿಯೊಂದರಲ್ಲೂ ನರಹರಿ ಇದ್ದು ಧರೆಯ ಜನರನ್ನು ಪೊರೆಯುವನು ಎಂದಿದ್ದಾರೆ. ಈ ದೇವರುಗಳನ್ನಲ್ಲದೆ ಕೊಲ್ಲಾಪುರದ ಕಮಲೆ, ಪಂಡರಾಪುರದ ಪಾಂಡುರಂಗ, ಯಂತ್ರೋದ್ಧಾರ ಹನುಮರನ್ನು ಸ್ತುತಿಸಿದ್ದಾರೆ.

ಗುರುಹಿರಿಯರ ಸ್ತುತಿ

ದೇವದೇವತೆಯರಂತೆ ತಮ್ಮ ಮೆಚ್ಚುಗೆಯನ್ನು ಗಳಿಸಿದ ಗುರುಹಿರಿಯರನ್ನು ಗೋಪಾಲದಾಸರು ಅನೇಕ ಕೀರ್ತನೆಗಳಲ್ಲಿ ಸ್ತುತಿಸಿದ್ದಾರೆ. ಮತಾಚಾರ್ಯರಲ್ಲಿ ಒಬ್ಬರಾಗಿ ಹರಿಸರ್ವೋತ್ತಮನೆಂದು ಪ್ರತಿಪಾದಿಸಿ ಧರೆಯೊಳು ಮೆರೆದ ಮಧ್ವಾಚಾರ್ಯರ ಸ್ತುತಿ ಹೀಗಿದೆ :

ವೇದಾರ್ಥಗಳನೆಲ್ಲ ವ್ಯಾಖ್ಯಾನ ಮುಖದಿಂದ
ಸಾಧಿಸಿ ಧರೆಗೆಲ್ಲ ಬೋಧಿಸಿ ಅವರಘ
ಭೇದವ ತರಿದೆ ಮನೋಭೀಷ್ಟ ಮೋ
ದದಿಗರೆದೆ ರಾಮನಾಮಸ್ವಾದ ಸವಿದೆ (ಕೀ. ೫೯)

ಗೋಪಾಲದಾಸರ ಏಳಿಗೆಗೆ ಮುಖ್ಯ ಕಾರಣರಾದ ವಿಜಯದಾಸರು ಅನೇಕ ಕೀರ್ತನೆಗಳಿಗೆ ವಸ್ತುವಾಗಿದ್ದಾರೆ. 'ಶರಣಜನರಪ್ರಿಯ ಪರಮ ಕರುಣಾನಿಧಿ' ಎಂದು ಪ್ರಶಂಸೆ ಪಡೆದ ವಿಜಯದಾಸರು ಕೈಗೊಂಡ ತೀರ್ಥಯಾತ್ರೆ, ತೋರಿದ ಪವಾಡಗಳು, ಮಾಡಿದ ಮತಪ್ರಚಾರ, ಆಚರಿಸಿದ ಸದಾಚಾರ, ಭಕ್ತರ ಬಗೆಗಿನ ವಾತ್ಸಲ್ಯಭಾವ ಮುಂತಾದ ವಿಷಯಗಳನ್ನು ವರ್ಣಿಸಿದ್ದಾರೆ.

ಎನ್ನಿಂದ ಆಗೋ ಸಾಧನವೆಲ್ಲ ನಿನ್ನದೊ ವಿಜಯರಾಯ
ಎನ್ನ ಪೊಂದಿದರೆಲ್ಲ ನಿನ್ನ ದಾಸರೊ ಗುರು ವಿಜಯರಾಯ (ಕೀ. ೮೭)

ಎಂದು ವಿಜಯದಾಸರ ಬಗೆಗಿರುವ ತಮ್ಮ ಗೌರವವನ್ನು ವ್ಯಕ್ತಪಡಿಸಿದ್ದಾರೆ. ಬೇರೆ ಬೇರೆ ಸಂದರ್ಭಗಳಲ್ಲಿ ಗುರುವಿನ ಚರಣ ಕಮಲವನ್ನು ಗೋಪಾಲದಾಸರು ಭಕ್ತಿಭಾವದಿಂದ ಸ್ಮರಿಸಿದ್ದಾರೆ. 'ಬರುವುದೆಲ್ಲ ಬರಲಿ ಸಿರಿಹರಿಯ ಕರುಣವಿರಲಿ' ಎಂದು ಹಾಡುತ್ತಾ 'ಗುರುಗಳ ಚರಣ ಸರೋರುಹ ಮಧುರಸ ತರತರ ತಪದಿ ಮೈಮರೆತಿರಲಿ' ಎಂದಿದ್ದಾರೆ (ಕೀ. ೩೭).

ವ್ಯಾಸರಾಯರು, ಪುರಂದರದಾಸರು, ವಾದಿರಾಜರು, ರಾಘವೇಂದ್ರ ಸ್ವಾಮಿಗಳು ಮುಂತಾದ ಹಿರಿಯರನ್ನು ಸ್ಮರಿಸಿ ವಂದಿಸುವಲ್ಲಿ ವಿನಯ, ವಿಶ್ವಾಸ ಗಳನ್ನು ತೋರಿದ ಗೋಪಾಲದಾಸರು ತಮ್ಮ ಶಿಷ್ಯರಾದ ವ್ಯಾಸತತ್ತ್ವಜ್ಞರನ್ನೂ ಗೌರವದಿಂದ ಕೀರ್ತಿಸಿರುವುದು ಅವರ ಸೌಜನ್ಯದ ಕುರುಹಾಗಿದೆ. 'ಕರುಣಿ ಗಳೊಳು ಅಗ್ರೇಸರ'ರಾದ ವ್ಯಾಸತತ್ತ್ವಜ್ಞರ ಗುಣಗಳನ್ನು ಕೀರ್ತಿಸುವಾಗಿನ ಗೋಪಾಲದಾಸರ ತನ್ಮಯತೆ ಯಾರನ್ನಾದರೂ ಮೆಚ್ಚಿಸುವಂಥದು.

ಆತ್ಮನಿವೇದನೆ

ಆತ್ಮನಿವೇದನೆ ಹಾಗೂ ಆತ್ಮಶೋಧನೆ ಭಕ್ತಿಮಾರ್ಗದ ಸಾಧಕರಲ್ಲಿ ಸಾಮಾನ್ಯ ವಾಗಿ ಕಂಡು ಬರುವ ಗುಣಗಳು. ಭಕ್ತನ ಮನಸ್ಸಿನ ತೊಳಲಾಟದ ಒಂದು ಭಾಗವಾಗಿ ಆತ್ಮಶೋಧನೆ ಅನೇಕ ಕೀರ್ತನೆಗಳಲ್ಲಿ ಅಭಿವ್ಯಕ್ತವಾಗಿದೆ. ಪ್ರಾಪಂಚಿಕ ಸುಖಗಳ ನಡುವೆ ಇದ್ದು ಆಧ್ಯಾತ್ಮಿಕ ಸಾಧನೆ ಮಾಡುವವರು ಜೋಡಿಕುದುರೆ ಗಳ ಸವಾರಿ ಮಾಡಬೇಕಾಗುತ್ತದೆ. ಆತ್ಮಶೋಧನೆಯ ಹಾದಿ ಹಿಡಿಯದವನು ಸನ್ಮಾರ್ಗಿಯಾಗಲಾರ.

ಭ್ರಾಂತಿ ಬಿಡದೊ ಭಾಗ್ಯ ಪುರುಷನೆ
ವಿಷಯಂಗಳ ಜರಿದು ಶಾಂತಚಿತ್ತನಾಗೋ ತನಕ (ಕೀ. ೧೩೭)

ವಿಷಯಲಾಲಸೆಯನ್ನು ಜರಿದು ಶಾಂತಚಿತ್ತನಾದ ಮೇಲೇ ಮನದ ಭ್ರಾಂತಿ ಬಿಡಲು ಸಾಧ್ಯ ಎಂದಿದ್ದಾರೆ. ಅಪರೋಕ್ಷಾನುಭವವನ್ನು ಪಡೆಯುವ ತನಕ ಭಕ್ತನ ಮನಸ್ಸಿನಲ್ಲಿ ಉಂಟಾಗುವ ಸಂಘರ್ಷ, ಶೋಧನೆ ಅನೇಕ ಕೀರ್ತನೆಗಳಿಗೆ ವಸ್ತುವಾಗಿರುತ್ತದೆ.

ಆವರೋಗವೊ ಎನಗೆ ದೇವಧನ್ವಂತ್ರಿ
ಸಾವಧಾನದಿ ಕೈಯ ಪಿಡಿದು ನೀ ನೋಡಯ್ಯ

ಕೈಹಿಡಿದು ತನ್ನನ್ನು ಸಾವಧಾನದಿಂದ ಕಾಪಾಡಬೇಕೆಂದೂ ಭಗವಂತನಿಗೆ ನಿವೇದಿಸಿಕೊಂಡು ಭಗವಂತನೇ ವೈದ್ಯನಾಗಿ ತನ್ನ ಭವರೋಗವನ್ನು ಕಳೆಯ ಬೇಕೆಂದೂ ಭಕ್ತ ಪ್ರಾರ್ಥಿಸುತ್ತಾನೆ :

ಅನಾಥ ಬಂಧು ಗೋಪಾಲ ವಿಠಲರೇಯ
ಎನ್ನ ಭಾಗದ ವೈದ್ಯ ನೀನೆಯಾದೆ

ಅನಾದಿ ಕಾಲದ ಭವರೋಗ ಕಳೆಯಯ್ಯ
ನಾನೆಂದಿಗೂ ಮರೆಯೆ ನೀ ಮಾಡಿದುಪಕಾರ (ಕೀ. ೯೪)

ಭಕ್ತನಾದವನಿಗೆ ಸಾಧನೆ ಬೇಕು. ಸಾಧನೆಯಿಲ್ಲದೆ ಮುಕ್ತಿ ದೊರೆಯುವುದಿಲ್ಲ.

ಎಂದಿಗೆ ನಿನ್ನ ಚಿತ್ತಕೆ ಬರುವುದೊ ಸ್ವಾಮಿ
ಅಂದೆ ಉದ್ಧರಿಸಯ್ಯ ಕರುಣಿಯೆ (ಕೀ. ೧೦)

ಎನ್ನುವಾಗ ಭಗವಂತನ ಪ್ರಾರ್ಥನೆಯಲ್ಲಿ ಜೀವನದ ಬಹುಕಾಲವನ್ನು ಕಳೆಯಬೇಕೆಂಬ ಭಕ್ತನ ಆಶಯವೂ ಧ್ವನಿಪೂರ್ಣವಾಗಿ ವ್ಯಕ್ತವಾಗುತ್ತದೆ. ಹರಿದಾಸರಲ್ಲಿ ಪ್ರಮುಖವಾಗಿ ಗುರುತಿಸಬೇಕಾದ ಅಂಶಗಳಲ್ಲಿ 'ದಾಸೋಹ' ಭಾವವೂ ಒಂದು. ಎಲ್ಲ ಚಿಂತೆಯನ್ನು ಬಿಟ್ಟು ಹರಿಯಲ್ಲಿ ಏಕಾಗ್ರಚಿತ್ತನಾಗಿ 'ನೀನಲ್ಲದೆ ಬೇರೊಬ್ಬರಿಲ್ಲ' ಎನ್ನುವ ಅಭಿಪ್ರಾಯ ವ್ಯಕ್ತ ಮಾಡುವವರೇ ನಿಜವಾದ ಹರಿದಾಸರು.

ನಿನ್ನ ಚಿತ್ತ ಎನ್ನಭಾಗ್ಯ ಇನ್ನೊಬ್ಬರೆನಗಿಲ್ಲ
ಮನ್ನಣೆ ಅಮನ್ನಣೆ ನಿನ್ನದೋ ಸರ್ವೇಶನೆ
ಬೆನ್ನು ಕೊಟ್ಟೆನೊ ನಿನಗೆ ಎನ್ನ ಏನನ್ನ ಮಾಡು
ಕಣ್ಣಲ್ಲಿ ಕಂಡಷ್ಟು ಎನ್ನ ಕೇಳೋಣ
ನಿನ್ನ ಬಣ್ಣಿಸಿ ನಾನು ಘನ್ನ ಬೇಡುವುದಿಲ್ಲ
ಎನ್ನದೆಂಬೊ ಅಹಂಕಾರವನ್ನು ಬಿಡಿಸೊ ದೇವ (ಕೀ. ೧೦೧)

ಅಹಂಕಾರ ವರ್ಜನೆ ಸಾಧಕನ ಗುರಿ. ಇಲ್ಲದಿದ್ದರೆ ಭಗವಂತನನ್ನು ಒಲಿಸಿ ಕೊಳ್ಳುವುದು ಸಾಧ್ಯವಿಲ್ಲ.

ತಮ್ಮ ಮನಸ್ಸಿನ ಚಂಚಲತೆ ಹಾಗೂ ವಿಷಯಾಸಕ್ತಿಯಲ್ಲಿ ಮುಳುಗಿ ಹೋಗಿರುವ ಮನಸ್ಸನ್ನು ಬಲವಂತದಿಂದ ಶ್ರೀಹರಿಯೆಡೆಗೆ ಹೊರಳಿಸುವ ನಿರಂತರ ಪ್ರಯತ್ನ ಗೋಪಾಲದಾಸರದು.

ಕಚ್ಚಲೆನಗೆ ಕಾಮಕ್ರೋಧಗಳೆಂಬ ಕುನ್ನಿಗಳು
ಪಚ್ಚಿತ್ತೈ ಮೋಹಮದ ಮತ್ಸರವು
ಅಚ್ಚ ವಿಷಯಗಳೆಂಬೊ ಕಿಚ್ಚಿನೊಳಗೆ ಕೆಡಹಿ
ಹುಚ್ಚುಗೊಳಿಸುವದಯ್ಯ ಎಚ್ಚರಿಸದಲಿನ್ನು (ಕೀ. ೧೬)

ಎಂದು ಪಶ್ಚಾತ್ತಾಪಪಟ್ಟಿದ್ದಾರೆ. ಭವದ ಜಂಜಾಟ ಎಂಥದು, ಅದರಿಂದಾಗುವ ಹಿಂಸೆಯ ಪರಿ ಎಂಥದೆಂಬುದನ್ನು 'ಜಗತನದೊಳು ಸುಖವಿಲ್ಲ' ಎಂಬ ಕೀರ್ತನೆಯಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ.

ಮೂರು ಬಣ್ಣಿಗೆಯ ಮನೆಗೆ ಮೂರೆರಡು ಭೂತಗಳು
ಮೂರುನಾಲ್ಕು ಪ್ರಾಕಾರಕ್ಕೆ ಮೂರಾರು ಛಿದ್ರಗಳು
ಮೂರು ಅವಸ್ಥೆಯು ದಿನಕೆ ಮೂರು ನೂರಾರು ಹತ್ತರಲ್ಲಿ
ಮೂರು ವಿಧದ ಅನ್ನದಿಂದ ಮೂರು ತಾಪಕ್ಕಾರೆ (ಕೀ. ೯೬)

ತಾಪತ್ರಯಗಳಿಂದ ಕೂಡಿದ ನವದ್ವಾರಯುಕ್ತವಾದ ಮಾನವ ಶರೀರಕ್ಕೆ ಮುತ್ತುವ ಅರಿಷಡ್ವರ್ಗಗಳು, ಅಷ್ಟಮದಗಳು, ಸಪ್ತವ್ಯಸನಗಳು, ಬಾಲ್ಯ, ಯೌವನಾದಿ ಅವಸ್ಥೆಗಳು, ಅವುಗಳಿಂದಾಗುವ ಹಿಂಸೆ, ನೋವು, ನಷ್ಟಗಳೆಲ್ಲವನ್ನೂ ವಿವರವಾಗಿ ಹೇಳಿ ಕೊನೆಗೆ, ಸಾವು ಸಮನಿಸಿದಾಗ ನಂಟರು ಯಾರೂ ಸಹಾಯಕ್ಕೆ ಬರುವುದಿಲ್ಲ. ನೀನೂ ಕೈಬಿಟ್ಟರೆ 'ಮತ್ಯಾರು ಗತಿ ಪೇಳೋ' ಎಂದು ಶ್ರೀಹರಿಯನ್ನು ಮೊರೆಹೊಕ್ಕಿದ್ದಾರೆ.

ಏಸೇಸು ಜನುಮಂಗಳು ಎನಗೆ ಬಂದು ಪೋದುವು
ನಾಶವಾಗಲಿಲ್ಲ ಮನದ ಆಸೆ
ಬೇಸರವಾಗಲಿಲ್ಲ ವಿಷಯಂಗಳಲ್ಲಿ ಬುದ್ಧಿ
ಸಾಸಿರದೊಳಗೊಂದು ಪಾಲಾದರು (ಕೀ. ೧೨)

ಹಲವು ಹನ್ನೆರಡು ಜನ್ಮಗಳನ್ನು ಕಳೆದು ಬಂದರೂ ತಮ್ಮ ತಮ್ಮ ಮನಸ್ಸಿನ ಚಾಂಚಲ್ಯ ಹೋಗಲಿಲ್ಲ ಎಂದು ವ್ಯಥೆಪಟ್ಟಿದ್ದಾರೆ.

ಪಂಚೇಂದ್ರಿಯಗಳು ಕೇವಲ ವಿಷಯಾಭಿಮುಖವಾಗಿರುವುದನ್ನು ಹೇಳುತ್ತಾ ಅವು ಹರಿಯ ವಿಷಯಕ್ಕೆ ಪ್ರೇರಿತವಾಗದಿದ್ದಾಗ, ಅದರಿಂದ ಪಾರಾಗಲು ಶ್ರೀಹರಿಯನ್ನು ಮರೆತದ್ದೇ ಕಾರಣ ಎಂದು ಮನವರಿಕೆಯಾಗಿದೆ ದಾಸರಿಗೆ.

ಒಂದಪರಾಧವೆಂದು ವಂದಿಸಲೇನಯ್ಯ
ಒಂದರ ಚಿಂತೆಯೆಂದು ಪೊಂದಿಸಲೇನಯ್ಯ
ಒಂದರ ಭಯವೆಂದು ಬೇಡಿಕೊಳ್ಳಲೇನಯ್ಯ
...ಒಂದಲ್ಲ ಎರಡಲ್ಲ ವಿವರಿಸಿ ಹೇಳಲಿನ್ನು
ಒಂದಪರಾಧವೆ ಇವಕೆ ಕಾರಣಮೂಲ

ಇಂದಿರೆ ಅರಸ ಗೋಪಾಲವಿಠಲ ಕೃಷ್ಣ
ತಂದೆ ನಿಮ್ಮ ವಿಸ್ಮೃತಿ ಎನಗೆ ಮುಖ್ಯಾಪರಾಧ (ಕೀ.೧೩)

ಇಂಥ ಅಪರಾಧದಿಂದ ಪಾರಾಗಲು 'ನಿನ್ನ ಸ್ಮೃತಿಯೆ ವಿಧಿ' ಎಂಬ ಗುರಿಯನ್ನಿಟ್ಟುಕೊಂಡು ಗೋಪಾಲವಿಠಲನನ್ನು ಪ್ರಾರ್ಥಿಸಿದ್ದಾರೆ.

ತಾವು ಬಾಳಿದ ರೀತಿಗೆ ತಾವೇ ಪಶ್ಚಾತ್ತಪ ಪಟ್ಟು, ತಮ್ಮ ಚಂಚಲ ಮನಸ್ಸನ್ನು ತಾವೇ ನಿಂದಿಸಿಕೊಂಡು, ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಶ್ರೀಹರಿಯೊಬ್ಬನೇ ತಮ್ಮನ್ನು ತಿದ್ದಲು ಸಾಧ್ಯ ಎಂದು

ಅನ್ನಂತ ಅಪರಾಧ ಎನ್ನಲ್ಲಿ ಉಂಟೊ ದೇವ
ಇನ್ನು ಮುಂದೆ ಆಗೋವು ಅನಂತವಿದ್ದರನ್ನ
ಮುನ್ನ ನಿನ್ನ ಆ ನಾಮವನ್ನು ನೆನೆಯದೆ
ಅನ್ನಂತ ಅಪರಾಧಕಧಿಕಾರಿ ಆನಾದೆನೊ (ಕೀ.೨)

ಸಂಪೂರ್ಣವಾಗಿ ಭಗವಂತನನ್ನು ಆಶ್ರಯಿಸುತ್ತಾರೆ.

ತತ್ತ್ವ ಪ್ರತಿಪಾದನೆ

ಆತ್ಮಶೋಧನೆಯ ಮುಂದುವರಿಕೆಯೇ ತಾತ್ತ್ವಿಕ ಚಿಂತನೆ. 'ನಾನು ಯಾರು, ಈ ಸೃಷ್ಟಿ ಹೇಗಾಯಿತು, ಪ್ರಪಂಚದಲ್ಲಿ ನನ್ನ ಸ್ಥಿತಿಗತಿ ಸ್ಥಾನಗಳೇನು, ಸಂಸಾರದಿಂದ ಮತ್ತು ಪ್ರಾಪಂಚಿಕ ಸುಖಗಳಿಂದ ಪಾರಾಗುವ ಬಗೆ ಯಾವದು' ಇತ್ಯಾದಿ ಪ್ರಶ್ನೆಗಳನ್ನು ಹಾಕಿಕೊಳ್ಳುವ ಚಿಂತನಶೀಲ ಮನಸ್ಸು ಹರಿದಾಸರಿಗಿದೆ. ಅದರಲ್ಲೂ ಮುಖ್ಯವಾಗಿ ವಿಜಯದಾಸರು, ಗೋಪಾಲದಾಸರು ಹಾಗೂ ಅವರ ಶಿಷ್ಯ ಪರಂಪರೆಯಲ್ಲಿ ತಾತ್ತ್ವಿಕ ಚಿಂತನೆಯ ಸಂದರ್ಭಗಳು ಹೆಚ್ಚು.

ದ್ವೈತಮತದ ಸಿದ್ಧಾಂತಗಳನ್ನು ಹರಿದಾಸರು ನಾನಾ ಬಗೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಗೋಪಾಲದಾಸರೂ ತಮ್ಮ ಅನೇಕ ಕೃತಿಗಳಲ್ಲಿ ಶ್ರೀಹರಿ ಸರ್ವಕ್ಕೂ ಸ್ವರೂಪಭೂತನಾದವನು, ಸರ್ವವ್ಯಾಪ್ತ, ಸರ್ವಜ್ಞ, ಅನಂತಾವತಾರಿ, ಬಿಂಬರೂಪಿ ಎಂಬ ವಿಚಾರಗಳನ್ನು ವಿವರಿಸಿದ್ದಾರೆ.

ಹರಿಯೆ ಸರ್ವೋತ್ತಮ ಹರಿಯೆ ಮೂಲದೈವ
ಹರಿ ಕ್ಷರಾಕ್ಷರದಿಂದ ವಿದೂರ ದೂರ
ಹರಿ ಜಗದ್ವ್ಯಾಪಕ ಸಕಲರಿಂದಲ್ಲಿ ಭಿನ್ನ

ಹರಿ ಮೂಲರೂಪ ಅವತಾರ ಅತ್ಯಂತ ಐಕ್ಯ
ಹರಿ ಚಿದಾನಂದ ಚಿನುಮಯ ಚಿದ್ರೂಪ (ಕೀ. ೧೪೭)

ಮಧ್ವಮತ ತತ್ತ್ವಗಳ ತಿಳಿವಳಿಕೆ ನೀಡಿ ಕಾಪಾಡಬೇಕೆಂದು ಹರಿಯನ್ನು ಪ್ರಾರ್ಥಿಸುತ್ತಲೇ ಜೀವನ ಪಾರತಂತ್ರ್ಯವನ್ನೂ ದೇವನ ಸ್ವಾತಂತ್ರ್ಯವನ್ನೂ ತಿಳಿಸುತ್ತಾರೆ.

ಜೀವ ಅಸ್ವತಂತ್ರ ದೇವ ನಿಜ ಸ್ವತಂತ್ರ
ಜೀವ ಜಡರು ದೇವರಾಧೀನ – ಎಂದಿದ್ದಾರೆ.

ಬಿಂಬ ಚಲಿಸಿದರೆ ಪ್ರತಿಬಿಂಬ ಚಲಿಸುವುದು
ಬಿಂಬ ಪೂರ್ಣನು ಪ್ರತಿಬಿಂಬನು ಅಲ್ಲ
ಉಂಬುಡುವೊ ಕ್ರಿಯೆಗಳು ಬಿಂಬ ಮಾಡಿಸಲು ಪ್ರತಿ
ಬಿಂಬಕ್ಕೆ ಉಂಟೆಂಬ ಬಿಂಬ ಕ್ರಿಯವು ಎನಗೆ (ಕೀ. ೧೨೦)

ಇಲ್ಲಿ ಶ್ರೀಹರಿ ಬಿಂಬ, ಜೀವ ಪ್ರತಿಬಿಂಬ ; ಶ್ರೀ ಹರಿ ಆಡಿಸಿದಂತೆ ಜೀವ ಆಡುವನು– ಎಂದು ಹೇಳಿ ಬಿಂಬ, ಪ್ರತಿಬಿಂಬಗಳ ತಾರತಮ್ಯವನ್ನು ನಿರೂಪಿಸಿದ್ದಾರೆ.

ತಾರತಮ್ಯ ಪಂಚಭೇದ ಸತ್ಯವೆಂದು
ಮಾರುತಮತ ಪೊಂದಿದವರನು ಪೊರೆಯೆಂದು (ಕೀ. ೬೦)

ಮಧ್ವಸಿದ್ಧಾಂತದ ಮುಖ್ಯ ಪ್ರಮೇಯಗಳಲ್ಲಿ ಒಂದಾದ ತಾರತಮ್ಯ ವಿಚಾರವನ್ನು ಜಗತ್ತಿನಲ್ಲಿಯ ಭೇದತತ್ತ್ವ ವಿಚಾರವನ್ನೂ ಸೂತ್ರಪ್ರಾಯವಾಗಿ ತಿಳಿಸಿದ್ದಾರೆ.

ನಿರುತ ಸುವರ್ಣಬ್ರಹ್ಮಾಂಡದಲ್ಲಿ ಹರಿ ಪೂರ್ಣವ್ಯಾಪ್ತ ಅಖಂಡನಾಗಿ
ಮಿರುವುತಲಿಪ್ಪ ಮಾರ್ತಾಂಡ ತೇಜೋಕಿರಣದಂತಿರುವ
ಪ್ರಚಂಡ ಆಹಾ ಹೊರಗೆ ಒಳಗೆ ಸರ್ವತ್ತರದಲಿ ಹರಿಮಯ
ವರಿತು ನಿನಗೆ ಎಲ್ಲಿ ದೊರಕಿದ ಸ್ಥಳದಿಂದ (ಕೀ. ೨೫)

ಸರ್ವವ್ಯಾಪಿಯಾದ ಹರಿಯ ಅಸ್ತಿತ್ವವನ್ನು ಹೇಳುವ 'ಪೂರ್ಣಮದಃ ಪೂರ್ಣಮಿದಂ' ಎಂಬ ಈಶಾವಾಸ್ಯದ ಭಾವವನ್ನು ಇಲ್ಲಿ ಕಾಣಬಹುದು.

ಒಂದು ಮೂರುತಿ ಒಂದೆರಡು ಮೂರುತಿ
ಪೊಂದಿ ಲಿಂಗದೇಹ ಇಪ್ಪ ಮೂರುತಿ
ಒಂದು ಮೂರು ಮೂರ್ತಿ ಅನಿರುದ್ಧ ಕಾಯ
ದಿಂದ ಒಳಹೊರಗೆ ವ್ಯಾಪ್ತವಾದ ಮೂರ್ತಿ...
ವಂದಿಸಿದರೆ ಎಲ್ಲ ಒಂದೆ ಮೂರ್ತಿ ಕಾಣೋ (ಕೀ. ೧೧೫)

ಪರಮಾತ್ಮ ನಾನಾ ರೂಪದಿಂದ ನಾನಾ ಸ್ಥಳಗಳಲ್ಲಿದ್ದರೂ ಮೂಲತಃ ಅವನದು ಒಂದೇ ರೂಪ ಎಂದಿದ್ದಾರೆ. 'ಈಶಾವಾಸ್ಯ ಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್' ಎಂಬ ಭಾವವನ್ನಿಲ್ಲಿ ಅಭಿವ್ಯಕ್ತಿಸಿದ್ದಾರೆ.

ಅಣು ಪರಮ ಅಣು ಅತ್ಯಣು ಬಲು ಅಣು
ಘನ ಘನ ಘನರೂಪ ಘನತರ ಘನತಮ
ಅಣುರೂಪದ ದ್ರವ್ಯ ಮನಸ್ಸಿಗೆ ಒಂದನ್ನು
ಎಣಿಕೆ ಹಿಡಿದೆನೆನಲು ಮನಕೆ ನಿಲ್ಲುವುದಲ್ಲ
ಘನರೂಪದ ದ್ರವ್ಯ ಆಕಾರದೊಳಗಿನ್ನು
ಅಣುವಾಗಿ ತೋರುವುದು ಅವ್ಯಾಕೃತ ದ್ರವ್ಯ (ಕೀ. ೧೨೬)

ಅಣುವಿನಲ್ಲೂ ಪರಮಾಣುವಿನಲ್ಲೂ ಘನದಲ್ಲಿಯೂ ದ್ರವ್ಯದಲ್ಲಿಯೂ ಎಲ್ಲದರಲ್ಲೂ ಹರಿ ಇರುವನೆಂಬ 'ಅಣೋರಣೀ ಯಾನ್ ಮಹತೋ ಮಹಿಯಾನ್' ಎಂಬ ತೈತ್ತಿರೀಯೋಪನಿಷತ್ತಿನ ಭಾವನೆಯೇ ಇಲ್ಲಿಯೂ ವ್ಯಕ್ತವಾಗಿದೆ.

ಶ್ರೀಲಕ್ಷ್ಮಿ ಹರಿಯ ಆಜ್ಞಾನುಸಾರ ಸೃಷ್ಟಿಕಾರ್ಯಗಳಿಗೆ ಹೇಗೆ ನೆರವಾಗುತ್ತಾಳೆ ಎಂಬ ವಿಚಾರವನ್ನು ಸುಂದರವಾಗಿ ವರ್ಣಿಸಿದ್ದಾರೆ.

ಗುಣತ್ರಯಾತ್ಮಕ ಚೂಲಿಯನು ಅಲಂಕರಿಸಿ
ವನಜಭವಾಂಡ ಪಾತ್ರೆಯನಲ್ಲಿರಿಸಿ
ಗಣನೆಯಿಲ್ಲದ ಜೀವಧಾನ್ಯ ತುಂಬಿರಿಸಿ
ಜನರ ಯೋಗ್ಯತೆ ಉದಕವನಲ್ಲಿ ಬೆರೆಸಿ
ಮಿನುಗುವ ಕರ್ಮ ಇಂಧನ ಕಾಲವೆ ಮಹಾ
ಅನಳ ಜನರ ಸಾಧನವೆಂಬ ದರ್ವಿಲಿ
ಇನಿತು ಪಾಕವ ಮಾಡಿ ಘನಮಹಿಮನ ಭೋ
ಜನಕನುಕೂಲ ಮಾಡ್ದ ವನರುಹನಯನೆ (ಕೀ. ೫೬)

ಬ್ರಹ್ಮಾಂಡವೆಂಬ ಪಾತ್ರೆಯಲ್ಲಿ ಜೀವರೆಂಬ ಧಾನ್ಯ ತುಂಬಿ ಜನರ ಯೋಗ್ಯತೆಯೆಂಬ ನೀರೆರೆದು ಕರ್ಮವೆಂಬ ಇಂಧನದಿಂದ ಅಡುಗೆ ಮಾಡಿ ಶ್ರೀಹರಿಯ ಭೋಜನಕ್ಕೆ ಅಂದರೆ ಸೃಷ್ಟಿಕಾರ್ಯಕ್ಕೆ ನೆರವಾಗುತ್ತಾಳೆ ಲಕ್ಷ್ಮಿ ಎಂದಿದ್ದಾರೆ ಗೋಪಾಲದಾಸರು.

ಭಗವಂತ ಸರ್ವತಂತ್ರ ಸ್ವತಂತ್ರ, ಜೀವಿಯಾದವನು ಪರಾಧೀನ. ಶ್ರೀಹರಿ ತನ್ನ ಭಕ್ತರಿಗೆ ಏನನ್ನು ಕೊಡುವುದಾದರೂ ಅದು ಪ್ರಾಣದೇವರ ಮುಖಾಂತರವೇ. ಹಾಗೆಯೇ ಭಕ್ತನೂ ತನ್ನ ಪೂಜಾದಿಗಳನ್ನು ಮುಖ್ಯ ಪ್ರಾಣಾಂತರ್ಗತನಾದ ಶ್ರೀಹರಿಗೇ ಸಲ್ಲಿಸಬೇಕು. 'ಗುರು' ಸ್ಥಾನವನ್ನು ಪಡೆದಿರುವ ಪ್ರಾಣದೇವರ ಸ್ತುತಿ ಹರಿದಾಸರಲ್ಲಿ ಒಂದು ಪರಂಪರೆಯಾಗಿ ಬಂದಿದೆ. ಅದರೊಂದಿಗೆ ಹನುಮ, ಭೀಮರನ್ನೂ ಸ್ತುತಿಸುವುದಿದೆ. ಹನುಮ, ಭೀಮ, ಈ ಎರಡೂ ಶ್ರೀಮನ್ಮಧ್ವಾಚಾರ್ಯರ ಮೊದಲಿನ ಎರಡು ಅವತಾರಗಳೆಂಬ ನಂಬಿಕೆ ಮಾಧ್ವರಲ್ಲಿದೆ. ಇದಕ್ಕೆ ಅನುಗುಣವಾಗಿ ಹನುಮ, ಭೀಮ, ಮಧ್ವರನ್ನು ಗೋಪಾಲದಾಸರೂ ಸ್ತುತಿಸಿದ್ದಾರೆ. 'ಇದು ಏನೊ ಚರಿತ ಯಂತ್ರೋದ್ಧಾರ' ಎಂಬ ಕೀರ್ತನೆಯ

> ವಾರಿಧಿ ಗೋಷ್ಪಾದ ನೀರಂತೆ ದಾಟಿದ
> ಧೀರ ಯೋಗಾಸನಧಾರಿಯಾಗಿಪ್ಪೊದು –

ಈ ನುಡಿಯಲ್ಲಿ ಹನುಮಂತ ಕಡಲನ್ನು ದಾಟಿದ ವಿಚಾರವಿದ್ದರೆ,

> ದುರುಳ ಕೌರವರನ್ನು ವರಗದೆಯಲಿ ಕೊಂದ
> ಕರದಲ್ಲಿ ಜಪಮಾಲೆ ಧರಿಸಿ ಎಣಿಸುವುದು–

ಎಂಬಲ್ಲಿ ಕೌರವರನ್ನು ಕೊಂದ ಭೀಮನ ಬಗೆಗೆ ಇದೆ,

> ಹೀನಮತಗಳನು ವಾಣಿಲಿ ತರಿದಂಥ
> ಜ್ಞಾನವಂತನೆ ಹೀಗೆ ಮೌನವ ಧರಿಸಿದ್ದು (ಕೀ. ೫೭)

ಇಲ್ಲಿ ಮಧ್ವಾಚಾರ್ಯರಾಗಿ ಅವತರಿಸಿ ಹೀನಮತಗಳನ್ನು ಅಲ್ಲಗಳೆದು ಮಧ್ವಮತ ಸ್ಥಾಪಿಸಿದ್ದನ್ನು ಹೇಳಿದ್ದಾರೆ. ಈ ಕೀರ್ತನೆಯೊಂದರಲ್ಲೇ ಹಂಪೆಯ ಯಂತ್ರೋದ್ಧಾರ ಹನುಮ, ಅಮಾಯಕನಾಗಿ ಮೌನದಿಂದ ಕುಳಿತು ಜಪಮಾಲೆ ಎಣಿಸುವುದನ್ನು ಕಂಡು ಸೋಜಿಗ ಪಟ್ಟು ಅವನ ಅವತಾರತ್ರಯವನ್ನು ವರ್ಣಿಸಿದ್ದಾರೆ.

ಹರಿಕೀರ್ತನೆ ಮಾಡುತ್ತಾ ತಾತ್ತ್ವಿಕ ವಿಚಾರಗಳನ್ನು ಹೇಳುತ್ತಲೇ ಅಲ್ಲಲ್ಲಿ

ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಡಂಭಾಚಾರಿಗಳನ್ನು ಕೆಲವು ಕಡೆ ಟೀಕಿಸಿದ್ದಾರೆ.

ಕಾಡಿಗೆ ಮಸಿ ಕನ್ನಡಿಗೆ ಪೂಸಿ ಇನ್ನು
ನೋಡಲು ಮೊಗವನ್ನು ಪಾಡಾಗಿ ತೋರೋದೆ
ಗಾಡಿಕಾರನು ತನ್ನೊಡಲಾಸೆಗೆ
ನಾಡೊಳಗಿಲ್ಲದಾಟಾಡಿ ಜನಮರುಳು
ಮಾಡಿ ಧನವನ್ನು ಕೂಡಿಸಿದಂದದಿ (ಕೀ. ೯೨)

.....ಇಂಥವೆಲ್ಲ 'ಮಾಡದೆ ಭಕುತಿಯ ಬೇಡದೆ ಮುಕುತಿಯ' ಆಡುವವರ ವಿಧಾನಗಳು. ಆದರೆ ಚಿಂತನಶೀಲನಾದವನು 'ಬಾಡಿಗೆ ಮನೆ ದೇಹ ಬಿಡಾರ ಸ್ಥಿರವಲ್ಲ' ಎಂದು ತಿಳಿಯುತ್ತಾನೆ.

ತಾತ್ತ್ವಿಕನಾದವನಿಗೆ ವೈರಾಗ್ಯ ಮುಖ್ಯ. ಆದರೆ ಹೆಣ್ಣು, ಹೊನ್ನು, ಮಣ್ಣುಗಳನ್ನು ಬಿಡುವುದೇ ವೈರಾಗ್ಯವೆಂದು ಭಾವಿಸಿದ್ದಾರೆ ಅನೇಕರು.

ವೈರಾಗ್ಯ ಮಾರ್ಗ ಕೇಳು ದಾರಿದ್ರ್ಯ ಮಾರ್ಗ ಕೀಳು
ಶ್ರೀರಮಣನ್ನ ಪಾದ ಆರಾಧಿಸುವುದಕ್ಕೆ
ನಾರಿಯ ಧಾರುಣಿಯ ಧನವ ಬಿಟ್ಟರಾಯಿತೆ (ಕೀ. ೧೪೨)

ಎಂದು ಪ್ರಶ್ನಿಸಿ 'ಅರಿಯದ ವೈರಾಗ್ಯವನ್ನು ಹರಹಿಕೊಳ್ಳುವುದಕ್ಕಿಂತ' ಅರಿತು ಗೋಪಾಲವಿಠಲನನ್ನು ಭಜಿಸುವುದೇ ಉತ್ತಮ ಮಾರ್ಗ ಎಂದಿದ್ದಾರೆ ದಾಸರು. ಇರುವುದನ್ನು ತೃಪ್ತಿಯಿಂದ ಅನುಭವಿಸಿ ಇಲ್ಲದ್ದನ್ನು ಬಯಸದೆ ಇರುವುದೇ ನಿಜವಾದ ವೈರಾಗ್ಯದ ಅರ್ಥ ಎಂದಿದ್ದಾರೆ. ಆತ್ಮೋದ್ಧಾರವೇ ಮುಖ್ಯ ಎಂಬ ಭಾವನೆ ಇವರದು. ಇಂಥ ಅಭಿಪ್ರಾಯಗಳ ಅಭಿವ್ಯಕ್ತಿಯೇ ಅವರ ಉಪದೇಶವಾಗಿದೆ.

ನಿನ್ನನರಿಯದೆ ಅನ್ಯರ ಬಲ್ಲೆನೆಂಬುದಕ್ಕಿಂತ
ಕಣ್ಣಿಲ್ಲದಿರುವ ಕುರುಡ ಮೇಲಯ್ಯ
ಪುಣ್ಯಪಾಪವರಿಯದೆ ಬದುಕುವ ಮನು
ಜನಿಗಿಂತ ನಾಯಿಕುನ್ನಿ ಲೇಸಯ್ಯ ಕುಲ
ಹೀನನಾದರು ಸುಖದುಃಖಗಳು

ನಿನ್ನಿಂದಾಯಿತೆಂಬ ಮತಿ
ಚೆನ್ನಾಗಿ ತಿಳಿಸಯ್ಯ ಗೋಪಾಲವಿಠಲ (ಕೀ. ೩)

ಸುಖದುಃಖಗಳಿಗೆಲ್ಲ ಭಗವಂತನೇ ಕಾರಣ ಎಂದಿದ್ದಾರೆ.

ಮಡಿಮಾಡಬೇಕು ಒಳ್ಳೆ ನಡತೆ ಕಲಿಯಬೇಕೆಂ
ದೆಡಹಿ ಮುಗ್ಗುತ ನೀರ ಮಡುವಿನೊಳಗೆ ಪೋಗಿ
ಬುಡುಗುಳಿಯಂತೆ ಮಿಂದು ಗುಡುಗುಡುಗುಟ್ಟುತಲಿ
ನಡುವೆ ಮಂತ್ರಗಳು ಕಡುವೇಗ ಪಟ್ಟೆನಾಮ
ಬಡಿದು ಮುದ್ರೆಯ ಹಚ್ಚಿ ಜಡದೇಹ ತೊಳೆದು ನಾ
ಮಡಿವಂತನೆನಿಸುವೆ ಬಡಿವಾರತನದಲ್ಲಿ... (ಕೀ.೧೫೨)

ಇದು ನಿಜವಾದ ಮಡಿಯಲ್ಲ. 'ಕಂಡಕಡೆಯೆಲ್ಲ ವ್ಯಾಪ್ತ ಗೋಪಾಲ ವಿಠಲನೆಂದು ದೃಢನುಡಿಯ ಒಮ್ಮೆ ನುಡಿದು ಮಡಿ ಮಾಡಿದವ ಮಡಿವಂತ' ಎಂದೂ ಕೇವಲ ತೋರಿಕೆಯ ಮಡಿ ಮಡಿಯಲ್ಲ 'ಸರ್ವಂ ಹರಿಕರ್ತಾ, ಸರ್ವಹರಿಮಯಂ' ಎಂದು ಶುದ್ಧ ಮನದವರಾಗುವುದೇ ಮಡಿ ಎಂದಿದ್ದಾರೆ.

ಶೃಂಗಾರ ಗದ್ದಿಗೆ ಬಂಗಾರಾಭರಣವಿಟ್ಟು
ರಂಗ ಒಲಿಯೊ ಎಂದು ಅಂಗೀಕರಿಸಲರಿಯೆ
ಅಂಗದ ಕೊರಡು ಶ್ರೀಗಂಧ ತೇದಿಡುವೆನೊ
ಕಂಗಳೆರಡು ದೀಪ ಕರವುಭಯ ಚಾಮರ
ಅಂಗದೊಳಿದ್ದಷ್ಟ ಕಮಲವೆ ಕುಸುಮವು
ಹಿಂಗದೆನ್ನಯ ಕಿಂಚಿದ್ಭಕುತಿಯೆ ನೈವೇದ್ಯ
ರಂಗ ದಿನದಿನದಿ ಮಾಡಿಸಿದ ಕರ್ಮವೆ ಕಪ್ಪ
ತುಂಗ ವಿಕ್ರಮ ಜಠರಾಗ್ನಿಯೆ ಆರತಿ ತು
ರಂಗ ವದನ ಸರ್ವಾಂಗ ಸಮರ್ಪಿಸಿ ಕ
ರಂಗಳ ಮುಗಿವೆ ಎನ್ನಂತರಂಗದಿ ನಿಲ್ಲೊ (ಕೀ.೪೮)

ಪರಿಪರಿಯಾದ ಪರಿಕರಗಳಿಂದ ಹರಿಪೂಜೆ ಮಾಡಲಾಗದಿದ್ದಲ್ಲಿ ತಮ್ಮ ಮನಸ್ಸು ಶರೀರ ಹಾಗೂ ಇತರ ಅಂಗಾಂಗಗಳನ್ನೇ ಪರಿಕರಗಳನ್ನಾಗಿ ಮಾಡಿ ಕೊಂಡು ಸರಳವಾಗಿ ಭಗವಂತನನ್ನು ಪ್ರಾರ್ಥಿಸಿ ತಮ್ಮ ಅಂತರಂಗದಲ್ಲಿ ನಿಲ್ಲು ಎಂದು ಬೇಡಿಕೊಂಡಿದ್ದಾರೆ. ಈ ನುಡಿ ನೋಡಿದಾಗ ಬಸವಣ್ಣನವರ 'ಉಳ್ಳವರು ಶಿವಾಲಯವ ಮಾಡುವರು' ಎಂಬ ವಚನ ನೆನಪಿಗೆ ಬರುತ್ತದೆ.

ಪಾಪವನ್ನು ವ್ಯಕ್ತೀಕರಿಸಿ ಪಾಪಿಪುರುಷನಿಗೆ ಪೂಜೆ ಮಾಡುವ ವಿಶಿಷ್ಟ ಬಗೆಯನ್ನು ವಿವರಿಸಿದ್ದಾರೆ 'ಪೂಜೆಯನು ಮಾಡಿರೊ ಪಾಪಿ ಪುರುಷನಿಗೆ' ಎಂಬ ಕೃತಿಯಲ್ಲಿ. ದೇವರಿಗೆ ಮಾಡುವ ಪೂಜಾ ಸಾಮಗ್ರಿಗಳಿಗಿಂತ ತದ್ವಿರುದ್ಧವಾಗಿವೆ.

> ಕಾಯಮಲತೋಯದ ಸ್ನಾನವನೆ ಮಾಡಿಸಿ
> ಬಾಯ ಮುಕುಳಿಸಿದಾಚಮನ ಎನಿಸಿ
> ಹೇಯ ಮೈಲಿಗೆವಸನ ವಸ್ತ್ರಗಳನೆ ಕೊಟ್ಟು
> ಕಾಯ ಕಳಚಿದ ರೋಮ ನಖಗಳ ಅಲಂಕರಿಸಿ (ಕೀ. ೧೮೨)

ಇದರಿಂದ ಪಾಪಿಯಾದವನು ಎಷ್ಟು ನಿಕೃಷ್ಟನಾದವನು ಎಂಬುದು ವಿದಿತವಾಗುತ್ತದೆ.

ಕೆಲವು ಗಹನವಾದ ವಿಚಾರಗಳನ್ನೂ ಸರಳವಾದ ರೂಪಕಗಳ ಮೂಲಕ, ಉಪಮೆಗಳ ಮೂಲಕ ಜನರಿಗೆ ನೇರವಾಗಿ ತಲುಪುವಂತೆ ವಿವರಿಸಿರುವುದನ್ನು ಕಾಣಬಹುದು. ಕೃಷ್ಣನಲ್ಲಿ ಭಕ್ತಿಯಿಲ್ಲದವನ ಕರ್ಮಾಚರಣೆ ಹೇಗೆ ವ್ಯರ್ಥ ಎಂಬುದನ್ನು ನಾನಾ ಪರಿ ಚಿನ್ನ ಅಲಂಕಾರ ಮಾಡಿ ಪೀತಾಂಬರ ಉಡಿಸಿದಂಥ ಅಷ್ಟ ಸಂಪತ್ತಿನ ದಿಟ್ಟಬಾಲೆಗೆ ಮೊಗದಲ್ಲಿ ಕುಷ್ಟ ಇದ್ದರೆ ಚೆಲುವಿಕೆಗೇ ಕುಂದುಂಟಾಗುವಂತೆ, ಕೃಷ್ಣನಲ್ಲಿ ಭಕುತಿ ಹುಟ್ಟದೆ ವೈಷ್ಣವನಾಗಿ ಉಳ್ಳಷ್ಟು ಕರ್ಮ ಮಾಡಲು ಭ್ರಷ್ಟ ಜನ್ಮ ಹೋಗಲು ಸಾಧ್ಯವೇ ? ಎಂದಿದ್ದಾರೆ (ಕೀ. ೯೨).

ಭಗವಂತನನ್ನು ಗಾಣಿಗನಿಗೂ ಭಕ್ತನನ್ನು ಎಳ್ಳಿಗೂ ಸಂಸಾರವನ್ನು ಗಾಣದ ಒರಳಿಗೂ ಹೋಲಿಸಿರುವ ರೂಪಕ ಸುಂದರವಾಗಿದೆ (ಕೀ. ೯೦). ಇಲ್ಲಿ ಜ್ಞಾನ ಭಕುತಿಯೆಂಬ ತೈಲವನ್ನು ತೆಗೆದು ಸರ್ವಜೀವರಿಗೆ ಎರೆಯ ಬೇಕೆಂದೂ ಇದೇ ಜೀವರಿಗೆ ನೀನು ಮಾಡುವ ಮರ್ಯಾದೆಯೆಂದೂ ಭಗವಂತನಿಗೇ ತಾಕೀತು ಮಾಡಿದ್ದಾರೆ ದಾಸರು.

ತಾತ್ತ್ವಿಕ ವಿಚಾರಗಳನ್ನು ಹೇಳುವಲ್ಲಿ ಗೋಪಾಲದಾಸರು ಬಳಸಿದ ಭಾಷೆ, ಭಾವ, ಬಂಧಗಳು ಬಿಗಿಯಾಗಿವೆ. ಹಾಗೆಯೇ ಅನೇಕ ಉಪಮೆಗಳು, ನಾಣ್ನುಡಿಗಳು ಬಳಕೆಗೊಂಡು ಭಾಷೆ, ಬಂಧಗಳು ಸರಳಸುಂದರವಾಗಿ ನಿರೂಪಿತವಾಗಿರುವುದೂ ಉಂಟು. ಉದಾಹರಣೆಗೆ 'ಕಾಗೆಯಂತೆ ಮೈಯ ಕರ್‍ರಗೆ ಮಾಡಿನ್ನು ರೋಗ ಬಂದೆಮ್ಮೆಯಂತೆ ನಾಮ ಬರಕೊಂಡು' 'ತೃಷೆಯಿಂದ

ನೀರ ರಭಸದಿ ಕುಡಿವಂಗೆ ಕಸುಕೊಂಡ ತೆರನಂತೆ ಕೈಯೊಳ ಪಾತ್ರೆಯ' 'ನದಿಗಳ ತೆರೆಯಂತೆ ಜನನಮರಣ' 'ಹಸಿದನ್ನವ ಕೊಂಬಾಗ ಹಾರಹೊಡದು ತುತ್ತು ಕೊಸರಿಬಿಟ್ಟಂತೆ' 'ಹುರಿದು ಬೀಜವ ಬಿತ್ತಿ ಫಲ ಅಪೇಕ್ಷಿಸಿದಂತೆ' ಇತ್ಯಾದಿ.

ಗೋಪಾಲದಾಸರ ಅನುಭವದ ವಾಣಿಗಳು ಕೆಲವು ಉಪದೇಶಪರವಾದ ಅಭಿವ್ಯಕ್ತಿಯಾಗಿ ಹೊರಹೊಮ್ಮಿವೆ. 'ನಂಬಿ ನೀ ಕೆಡದಿರು ಇಹಲೋಕ ಸುಖವೆಂಬ ಕಂಬಳಿಯೊಳಬುತ್ತಿ', 'ಮನುಜಜನ್ಮ ಮಹಾಸುಕೃತದ ಫಲ' ಎಂದು ಹೇಳಿ ಇಂಥ ಜನ್ಮವನ್ನು ಶ್ರೀಹರಿಯ ಕೀರ್ತನೆಯಲ್ಲಿ, ಗುರು ಉಪದೇಶ ಪಡೆಯುವಲ್ಲಿ, ಭಕ್ತಿಯ ಸಾಧನೆಯಲ್ಲಿ ಸಾರ್ಥಕಪಡಿಸಿಕೊಳ್ಳಬೇಕು ಎಂಬುದೇ ಅವರ ನಿಲುವು.

ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಹೊಣೆ ಹೊತ್ತ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ವೈ.ಕೆ. ಮುದ್ದುಕೃಷ್ಣ ಅವರಿಗೆ ವಂದನೆಗಳು. ಈ ಮಾಲೆಯ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಟಿ.ಎನ್. ನಾಗರತ್ನ ಅವರು ಈ ಕೃತಿಯನ್ನು ಸಂಪಾದಿಸಲು ಅನುವು ಮಾಡಿಕೊಟ್ಟಿದ್ದಾರೆ. ಅವರಿಗೂ, ಹಸ್ತಪ್ರತಿ ಸಿದ್ಧಪಡಿಸುವಲ್ಲಿ ಸಲಹೆ ಸೂಚನೆಗಳನ್ನೂ ನೀಡಿದ ಡಾ. ಆರ್.ವಿ.ಎಸ್. ಸುಂದರಂ ಅವರಿಗೂ ನನ್ನ ವಂದನೆಗಳು. ಹಸ್ತಪ್ರತಿಯನ್ನು ಪ್ರತಿಮಾಡಲು ನೆರವಾದ ಹೇಮಲತಾ, ಕವಿತಾ ಹಾಗೂ ಶಿವನಂಜಮ್ಮ ಅವರಿಗೆ ಕೃತಜ್ಞತೆಗಳು.

ಅಕ್ಕಮಹಾದೇವಿ

ಕೀರ್ತನೆಗಳ ಕ್ರಮಸೂಚಿ

ಭಾರತಿ

ಯತಿಗಳು ದಾಸರು

ಆತ್ಮ ನಿವೇದನೆ

ಶ್ರೀ ಗೋಪಾಲದಾಸರ ಕೀರ್ತನೆಗಳು

ಗಣೇಶ ಸ್ತುತಿ

೧

ಗಜವದನ ಪಾವನ ವಿಘ್ನನಾಶನ ಪ.

ವರ ಪಾಶಾಂಕುಶಧರ ಪರಮದಯಾಳೊ
ಕರುಣಾಪೂರಿತ ಗೌರೀವರಕುಮಾರನೆ ೧

ಸುಂದರವದನಾರವಿಂದನಯನ ಘನ–
ಸುಂದರಿ ಕಂದನೆ ಬಂದು ರಕ್ಷಿಸೊ ೨

ಗೋಪಾಲವಿಠಲನ ಅಪಾರ ಭಜಕನೆ
ಶಾಪಾನುಗ್ರಹಶಕ್ತಾನೇಕ ಮಹಿಮಾ ೩

ಭಗವಂತನ ಸಂಕೀರ್ತನೆ

೨

ಸುಳಾದಿ

ಧ್ರುವತಾಳ

ಅನ್ನಂತ ಅಪರಾಧ ಎನ್ನಲ್ಲಿ ಉಂಟೊ ದೇವ
ಇನ್ನು ಮುಂದೆ ಆಗೋವು ಅನಂತವಿದ್ದರನ್ನ
ಮುನ್ನ ನಿನ್ನ ಆ ನಾಮವನ್ನು ನೆನೆಯದೆ
ಅನ್ನಂತ ಅಪರಾಧಕಧಿಕಾರಿ ಆನಾದೆನೋ

ನಿನ್ನ ನಾಮದಿಂದ ಹೋಗುವಷ್ಟು ದೋಷ
ಎನ್ನಿಂದ ಮಾಡಲು ಇನ್ನಳವಲ್ಲವು
ಇನ್ನು ತಿಳಿದುಹೋಗೆ ಎನ್ನ ಮನವು
ನಿನ್ನ ನೆನೆಸದನ್ಯಕೆರಗುತ್ತದೆ
ಕಣ್ಣಲ್ಲಿ ಕಂಡರೆ ಕರ್ಣದಿ ಕೇಳಿದರೆ
ಇನ್ನೆಂಥ ವೈರಾಗ್ಯವನ್ನು ನಾ ತೋರುವೆ
ಕುನ್ನಿ ಸ್ವಪ್ನದಿ ಜ್ಞಾನವನ್ನು ತಂದುಕೊಂಡು
ಸನ್ನುತ ಪರರನ್ನವ ತಿಂದಂತೆ
ಎನ್ನ ದಾಸತ್ವವು ಇನ್ನಿಚ್ಛೈಸಲೇಕಯ್ಯ
ಅನ್ನಂತ ಪರಿಯಲಿ ಶಾಸ್ತ್ರಂಗಳೆಲ್ಲ ತಿಳಿದು
ತನ್ನ ಸತಿಯನು ಅನ್ಯರಿಗೊಪ್ಪಿಸಿ
ಹೆಣ್ಣು ಶಿಶುವು ಪಡೆದು ಕನ್ಯಾದಾನವ ಮಾಡಿ
ಪುಣ್ಯ ಗಳಿಸಿದಂತೆ ಎನ್ನ ಧರ್ಮವಯ್ಯ
ನಿನ್ನ ದಾಸನಾಗಿ ನಿನ್ನ ಮುದ್ರೆಯ ಧರಿಸಿ
ನಿನ್ನ ಹಾಡಿ ಪಾಡಿ ನಿನ್ನನು ಒಲಿಸದೆ
ಹೊನ್ನ ಉಳ್ಳವನಲ್ಲಿ ಚೆನ್ನಾಗಿ ಪೋಗಿನ್ನು
ನಿನ್ನಂಥ ದಾತನ್ನ ಇನ್ನೆಲ್ಲಿ ಕಾಣೆನೆಂ-
ದುನ್ನತ ಪರಿಯಲ್ಲಿ ಬಣ್ಣಿಸಿ ಕೊಂಡಾಡಿ
ಹೊನ್ನು ಗಳಿಸಿ ತಂದು ಅನ್ನದಾನವ ಮಾಡಿ
ಘನತೆ ಪಡೆದೆನೊ ನಿನ್ನನೊಯಿದು ಬೀರಿ
ಇನ್ನೇನಾಯಿತೆಂಬೊ ಪುಣ್ಯ ಪಾಪಂಗಳು
ಮುನ್ನ ಮಾಡಿದುದೆಲ್ಲಿ ಇನ್ನು ಮಾಡುತಲಿಪ್ಪೆ
ಸನ್ನುತ ಮುನಿಪ್ರಿಯ ಗೋಪಾಲವಿಠಲ
ಎನ್ನ ದೇಹ ಬಲು ಭಂಗಗೆಟ್ಟಿತಲ್ಲೋ ೧

ಮಠ್ಯತಾಳ

ಆಸೆ ಎಂಬೋದು ದೊಡ್ಡ ದೋಷವೆಂಬೋದು ತಿಳಿದು
ರಾಸಿ ನರಕದೊಳು ವಾಸ ಮಾಡುವೆನಯ್ಯ

ಹೇಸಿ ಜಂಬುಕ ತಾನು ಗ್ರಾಸಕಕ್ಕಿಯ
ವಾಸೆ ಎಂದು ತಿಳಿದು ಘಾಸಿಬಟ್ಟ ತೆರದಿ
ಮೋಸ ಹೋಗಿ ದುರಾಸೆಗೆರಗಿ ಇನ್ನು
ಮೀಸಲಾದ ಪುಣ್ಯಹ್ರಾಸ ಮಾಳ್ಪೆನಯ್ಯ
ಈ ಸಮಸ್ತ ದೋಷರಾಶಿ ಒಪ್ಪಿಸಿನ್ನು
ಬೇಸರದಲೆ ಶ್ರೀ ವಾಸುದೇವ ನಿನ್ನ ಸಾಸಿರ ನಾಮವು
ಸೂಸಿ ವೃಷ್ಟಿಗರೆದು ನಾಶಮಾಡು ಅಘ-
ಪಾಶ ಕಡಿಯೋ ಬೇಗ ಶೇಷಶಾಯಿ ಗೋಪಾಲವಿಠಲ ನಿಜ
ದಾಸರಲಿ ಭಕುತಿ ಲೇಸಾಗಿ ಈಯೋ ೨

ತ್ರಿಪುಟತಾಳ

ಆವಾವ ಕಾಲಕ್ಕು ಜೀವಯೋಗ್ಯತೆ ಅರಿದು
ದೇವ ನೀನು ಫಲವನೀವುತಲಿರೆ
ಆ ಒಂದು ಪರಿ ಯತನವ ಮಾಡಿ ನಿನ್ನ
ಸೇವೆಗೆ ಅನ್ಯಥವಾಗುವೆನೊ ತನುವಿನ ಗ್ರಾಸವು
ಕಾವುವಾತನೆ ಬಲ್ಲ ಹಾವು ಬಲ್ಲುದೆ ವೃಥಾ ಧಾವತಿ ಅಲ್ಲದೆ
ಹೇವ ಇಲ್ಲದೆ ಮಾನ ಈ ವಿಧ ಎಳೆದು
ಸಾವು ಕೊಲ್ಲುತಲಿದೆ ದೇವ ಕೇಳೋ
ಆವುದಾದರು ನಿಷ್ಠುರ ಆಡಿದಡೆ
ದೇವನೆ ಪ್ರೇರಕನೆಂದು ಅರಿಯದಲೆ
ನೋವಾಗುವೆನು ನಿನ್ನ ಭಾವಾರ್ಥ ತಿಳಿಯದೆ
ಆವ ಕಾರ್ಯದಲ್ಲಿ ಆವ ಕರ್ಮಗಳಲ್ಲಿ ಆವಾವರಲ್ಲಿನ್ನು
ಯಾವತ್ತರಲ್ಲಿ ನೀ ವ್ಯಾಪಕನಾಗಿನ್ನು
ಜೀವರ ಕೈಯ್ಯ ವ್ಯಾಪಾರ ಮಾಡಿಸಿನ್ನು
ಆ ಉದಕದಿ ಕಮಲವು ಇದ್ದಂತೆ
ಈ ಉಪಾಸನೆಯನ್ನು ಸಾವಧಾನದಿ ಮಾಳ್ಪ
ಜೀವರಿಗೆ ಇನ್ನು ನೀವರಿಯೆ ರಂಗ

ದೇವಕಿನಂದನ ಗೋಪಾಲವಿಠಲ
ಆವರಲ್ಲಿ ಇದ್ದರೆನ್ನ ಕಾವಭಾರ ನಿನ್ನದೋ ೩

ಅಟ್ಟತಾಳ

ಸಾಕು ಸಾಕು ದುರ್ವಿಷಯಕ್ಕೆರಗಿಸದೆ
ನೂಕಬೇಡವೊ ನರಕದ ಜನುಮಕೆ
ನೂಕುನೂಕು ದುರಿತ ಕುಪಥಗಳೆಲ್ಲ
ನೂಕಿಸಬೇಡವೋ ದಿನವ ಕಳೆಯದೆ ವ್ಯರ್ಥ
ಬೇಕು ಎನಿಸು ನಿನ್ನ ಶರಣರ ಸಹವಾಸ
ಸಾಕು ಸಾಕೆಂಬಂತೆ ಸಾರಿದೆ ನಿನ್ನ ನಾಮ
ವಾಕು ಎನಗೆ ಇತ್ತು ಸಹಕಾರವಾಗಿನ್ನು
ನೀ ಕಾಯಬೇಕೆನ್ನ ಸಾಕಲ್ಯಗುಣನಿಧಿ
ಲೋಕರಕ್ಷಕ ರಂಗ ಗೋಪಾಲವಿಠಲ
ವ್ಯಾಕುಲಗೊಳಿಸು ನಿನ್ನ ಕಳವಳಿಕೆಯೊಳು ೪

ಆದಿತಾಳ

ಧರೆಯೊಳು ಅಜ್ಞಾನವೆಂಬೊ ಕತ್ತಲೆಗಿನ್ನು
ಹರಿ ನಿನ್ನ ಚರಣಸ್ಮರಣೆದೀಪ ನಿಲ್ಲಿಸೆ
ಇರಬಲ್ಲುದೆ ತಾ ತಮವು ಹರಿದು ಪೋಗುವುದಯ್ಯ
ಕರುಣಾಕರನೆ ಸ್ಮರಣೆ ಫಲ ಉಳ್ಳವರಿಗೆ
ಕರಿಯೆಂಬೊ ದೋಷವಿನ್ನು ಹರಿಯು ಕಂಡ ತೆರದಿ
ಅರಿಯೆ ನಾನಾಪರಿ ಸಾಧನದೊಳಗೆ
ಹರಿ ನಿನ್ನ ಸ್ಮರಣೆಗೆ ಇನ್ನೊಂದು ನಾ ಕಾಣೆ
ಪರಮ ಮೂಢನು ನಾನು ಕರವೊಡ್ಡಿ ಬೇಡಿಕೊಂಬೆ
ವರವ ಪಾಲಿಸು ದೇವ ಕರುಣಾಕರ ಕೃಷ್ಣ
ದುರಿತ ಬಂದರಾಗಲಿ ಹರುಷ ಬಂದರಾಗಲಿ

ಇರುಳು ಹಗಲು ನಿನ್ನ ಸ್ಥಿರ ಭಕುತಿ ಸ್ಮರಣೆಯಿತ್ತು
ಪೊರೆ ಎನ್ನ ಬಿಡದಲೆ ಗೋಪಾಲವಿಠಲ ೫

ಜತೆ

ನಿನ್ನ ವೃಕ್ಷದ ಹಣ್ಣು ಅನ್ಯರು ಒಯ್ದರೆ
ಪುಣ್ಯ ನಿನ್ನದು ಕಾಣೊ ಗೋಪಾಲವಿಠಲ

೩

ಉಗಾಭೋಗ

ಅನ್ಯರಿಂದಲಿ ಸುಖವಾಯಿತೆಂಬುದಕಿಂತ
ನಿನ್ನಿಂದಾಯಿತೆಂಬ ಕ್ಲೇಶ ಮೇಲಯ್ಯ
ನಿನ್ನರಿಯದೆ ಅನ್ಯರ ಬಲ್ಲೆನೆಂಬುದಕ್ಕಿಂತ
ಕಣ್ಣಿಲ್ಲದಿರುವ ಕುರುಡ ಮೇಲಯ್ಯ
ಪುಣ್ಯಪಾಪವರಿಯದೆ ಬದುಕುವ ಮನು-
ಜನಿಗಿಂತ ನಾಯಿಕುನ್ನಿ ಲೇಸಯ್ಯ ಕುಲ-
ಹೀನನಾದರು ಸುಖದುಃಖಗಳು
ನಿನ್ನಿಂದಾಯಿತೆಂಬ ಮತಿ
ಚೆನ್ನಾಗಿ ತಿಳಿಸಯ್ಯ ಗೋಪಾಲವಿಠಲ

೪

ಸುಳಾದಿ

ಧ್ರುವತಾಳ

ಆಪತ್ತು ಕಾಲ ಈಗ ಬಂದಿದೆ ಅಯ್ಯ ಅಯ್ಯ
ಶ್ರೀಪತಿ ಕಾಯೊ ಆಶ್ರಿತಜನಬಂಧು
ನೀ ಪರಮಪುರುಷ ನಿತ್ಯ ತೃಪುತ ದೇವ

ನಾ ಪರದೇಶಿಯೊ ಹೇ ನಳಿನನಾಭ
ಅಪಾರ ದೋಷಿ ಇನ್ನು ಆನಹುದಯ್ಯ ಅಯ್ಯ
ನೀ ಪುಣ್ಯ ಗುಣನಿಧಿ ನಿರ್ದೋಷನಲ್ಲೆ
ಲೇಪರಹಿತ ನೀನು ಬಿಂಬನಾದ ಬಳಿಕ
ತಾಪ ಉಂಟೇನು ಪ್ರತಿ ಬಿಂಬಗಳಿಗೆ
ಭೂಪಾಲಕನು ಸುಖದಲ್ಲಿ ಇರಲಾಗಿ
ಆಪತ್ತು ಉಂಟೆ ಅವನ ಆಳುಜನಕೆ
ನೀ ಪರ ಉಪಕಾರಿ ನಿನಗೊಂದಪೇಕ್ಷೆ ಇಲ್ಲ
ಸಾಪಾಟಿ ಅಧಿಕ ಶೂನ್ಯ ಸರ್ವೋತ್ತಮ
ತಾಪತ್ರಯಂಗಳು ತ್ರಿವಿಧ ಗುಣದ ಕಾರ್ಯ
ನೀ ಪ್ರೇರಿಸಿದಂತೆ ನಿತ್ಯ ದಣಿಸೋವು
ನಾ ಪ್ರತಿಗಾಣೆ ನಿನಗೆ ಒಂದನ್ನ ಮಾಡಿ ತೋರ
ಆಪೂ ಸಾಪಿಗೆ ಮಾತ್ರ ಕರ್ತನಯ್ಯ
ಹೋಪ ಬಪ್ಪದು ಏನು ಒಂದಾದರೂ ಎನ್ನಿಂದ
ಕಾಪಾಲಿವರದ ಕಾರುಣ್ಯಾಂಕಾರ
ರಾಪು ಮಾಡುವೆ ನೀ ರಹಸ್ಯ ಮಾಡಿದ ಕಾರ್ಯ
ಕೋಪ ಸಲ್ಲದಯ್ಯ ಕೋದಂಡಪಾಣಿ
ಮಾಪು ಹಿಡಿದು ಇನ್ನು ಅಳೆಯ ಕುಳಿತ ಬಳಿಕ
ಲೋಪ ಮಾಡುವುದ್ಯಾಕೆ ಲೋಕದೊಳು
ಈ ಪರಿ ಎನ್ನ ಮನದ ಅಭಿಪ್ರಾಯ
ಗೋಪಾಲ ಸರ್ವಪಾಲ ಸರ್ವ ಇಷ್ಟ
ದ್ರೌಪದಿ ಮಾನದೊಡೆಯ ಗೋಪಾಲವಿಠಲ
ತಾಪಸರ ಮನದಿ ಸಿಲ್ಕಿ ಅಗಲದ ದೇವ ೧

ಮಠ್ಯತಾಳ

ನಿನ್ನದು ನೀ ನಿತ್ಯ ಎನ್ನದು ಅನಿತ್ಯ
ನಿನ್ನದು ಸ್ವಾಧೀನ ಎನ್ನದು ಪರಾಧೀನ
ನಿನ್ನಾನಂದ ನಿನಗೆ ನಿನ್ನಿಂದಾನಂದೆನಗೆ

ನಿನ್ನವ ನಾ ಅಧೀನಾಗೆ ಎನ್ನುವ ನೀ ಎನಗೆ
ಎನ್ನದು ಸಕಾಮ ನಿನ್ನದು ನಿಷ್ಕಾಮ
ಎನ್ನ ಒಳಗೆ ನೀನೆ ನಿನ್ನ ಒಳಗೆ ನೀನೆ
ಅನ್ಯ ಅಪೇಕ್ಷಮಾತ್ರವೆಂಬೋದು ಎನಗೆ ದೋಷ
ನಿನ್ನ ಅಪೇಕ್ಷವೆ ಎನ್ನ ಪೋಷಣೆ ಅಲ್ಲೆ
ಎನ್ನ ನೀ ಮರೆದರೆ ನಿನ್ನ ನಾ ಮರೆವೂವೆ
ಎನ್ನ ನೀ ತಿಳಿದರೆ ನಿನ್ನ ನಾ ತಿಳವೂವೆ
ಎನ್ನನು ನೀ ಮರದದಕನುಭೋಗ
ಭಿನ್ನ ವಿಷಯದಲ್ಲಿ ಇನ್ನು ಪೋಗೋದೆ ಸಾಕ್ಷಿ
ಎನ್ನ ವ್ಯಾಪಾರವು ನಿನ್ನಾಧೀನವಿರಲು
ಅನ್ಯಕೆ ಎಳೆದು ಬನ್ನಬಡಿಸ ಆವದು
ಅನ್ಯಾಯ ನ್ಯಾಯ ಇನ್ನೇನಿನ್ನೇನೊ
ಮನ್ನವಾಚಕಾಯ ಇನ್ನು ಎನಗೆ ದೇವ
ನಿನ್ನನ್ನೆ ಬೇಕೆಂಬೊ ಘನ್ನ ಆಸೆಯು ಬಹಳ
ಮನ್ನಿಸಿ ಬಿನ್ನಪ ಮನಕೆ ತಾ ನೀ ವೇಗ
ಸನ್ಮುನಿಗಳ ಪ್ರಿಯ ಗೋಪಾವಿಠಲ
ನಿನ್ನನಲ್ಲದೆ ಬೇರೆ ಇನ್ನಾರನ ಕೇಳ್ವೆ ೨

ರೂಪಕತಾಳ

ಎನ್ನ ಯೋಗ್ಯತೆ ಅರಿತು ಉಣಿಸೆನೆಂದರೆ ನೀನು
ನಿನ್ನ ಸಂಕಲ್ಪಕ್ಕೆ ಪ್ರತಿಕೂಲ ನಾನಲ್ಲ
ನಿನ್ನ ಭೃತ್ಯನು ನಾನು ನಿಜವೆಂಬೋದು ಇತ್ತೆ
ಎನ್ನ ಸ್ವರೂಪವು ದುಃಖಿ ಬೇರೆಲ್ಲಿಲ್ಲ
ಚೆನ್ನಾಗಿ ಚಿದ್ರೂಪಿ ನಿರ್ಗುಣ ಜೀವಕ್ಕೆ
ಇನ್ನು ಶೋಕಂಗಳು ಆವಪರಿ ಉಂಟು
ಭಿನ್ನ ತ್ರಿಗುಣದಿಂದ ಘನ್ನ ಶೋಕಗಳೆಂಬ
ಇನ್ನು ಜಡಂಗಳು ಬನ್ನ ಬಡಿಸುವುವೊ

ಎನ್ನ ಮನಸಿಗಿದು ನಿಜವು ತೋರುವುದಿಲ್ಲ
ಇನ್ನು ಬಿದ್ದಲ್ಲಿಂದ ಚಲಿಸದೆ ಜಡಗಳು
ಮುನ್ನ ಚೇತನಗಳು ದಣಿಸಬಲ್ಲುವೆ ದೇವಾ
ಇನ್ನು ಅವಕ್ಕೆ ಬೇರೆ ಅಭಿಮಾನ್ಯರುಂಟೆಂಬ
ಎನ್ನಂತೆ (ತ) ಸ್ವತಂತ್ರರವರಲ್ಲವೆ
ಇನ್ನೊಬ್ಬರಿನ್ನೊಂದು ಜಡಚೇತನಗಳಿಂದ
ಎನ್ನ ದಣಿಸುವರ ಕಾಣೆನಯ್ಯ ಸ್ವಾಮಿ
ಘನ್ನ ವೈಕುಂಠದಿನ್ನಲ್ಲಿ ಆಗೊ ಸುಖ
ಇನ್ನಿಲ್ಲೆ ಕೊಡುವ ಸ್ವಾತಂತ್ರ್ಯ ನಿನಗುಂಟಯ್ಯ
ನೀನಿಲ್ಲದಿಲ್ಲಿನ್ನು ಸುಖದುಃಖಗಳು ಒಂದು
ಎನ್ನಯ್ಯ ಎನ್ನಯ್ಯ ಏ ದೇವನೆ
ಕಣ್ಣಿನೊಳಗೆ ಕಣ್ಣು ಕರ್ಣದೊಳಗೆ ಕರ್ಣ
ಬೆನ್ನಿನೊಳಗೆ ಬೆನ್ನು ಇನ್ನು ಕಾಲೊಳು ಕಾಲು
ಎನ್ನ ಆಕಾರದೊಳೆಲ್ಲ ವ್ಯಾಪಿಸಿ ಇಪ್ಪ
ಚಿನ್ಮಯ ಜ್ಞಾನಾನಂದ ನಿರ್ದೋಷ ಪೂರ್ಣ
ಭಿನ್ನಕಾಮರಹಿತ ಗೋಪಾಲವಿಠಲ
ನಿನ್ನವರವನಯ್ಯ ಬಿನ್ನಪ ಚಿತ್ತೈಸು ೩

ಝಂಪೆತಾಳ

ಇದೆ ವೇಳ್ಯ ಇದೆ ಸಮಯ ಈಗಲೆ ನಿನ್ನಾಟ
ಒದಗಿ ದೊರಕಿದೆ ನಿನಗೆ ಒಳಿತಾಗಿ ನೋಡು
ಗದಗದನೆ ನಡುಗಿಸು ಉದರ ಹಸಿವೆಯ ಕೊಡಿಸು
ಒದರಿಸು ಎನಗಿನ್ನು ಆರ ನಾ ಕಾಣೆಂದು
ಕುದುರೆಯಂತೆ ಕುಟಿಲ ರೋಗಗಳ್ಹಚ್ಚು
ಒದಗಿ ನಡೆಯದಂತೆ ಇದ್ದಲ್ಲಿ ಕುಳ್ಳಿಸೊ
ಮದುವೆಗಳ ಮಾಡಿಸು ನದಿಗಳೊಳು ಮುಣುಗಿಸು
ಮಧುರ ಅನ್ನವ ಉಣಿಸು ಸದಾಚಾರಿ ಎಂದೆನಿಸು
ಇದಕ್ಕೊಂದೆ ಅದಕ್ಕೊಂದೆ ಇನ್ನೊಂದಕೆ ಒಂದೆ

ಇದರ ಭೋಗಗಳೆಲ್ಲ ಭಿನ್ನ ಎನ್ನಿಂದಯ್ಯ
ತುದಿಗೆ ನಿರ್ಗುಣನಾಗೆ ಒದಗೊದಾನಂದ ವ್ಯಕ್ತಿ
ಅದರ ಮೇಲೆ ಇನ್ನು ಅಲ್ಲಿ ಮಾಡಿಸಲಾಪ್ಯ
ಬದುಕು ಎನ್ನದು ಏನು ಕೆಟ್ಟು ಪೋಗುವುದು
ಪದೋಪದಿಗೆ ವಿಸ್ಮೃತಿಯಿಂದ ದಣಿವೆ
ಅದೇ ಸಮಯದಲ್ಲಿ ಉದ್ಧರಿಸಬೇಕು
ಹೃದಯದೊಳಗೆ ನಿನ್ನ ನಿದರ್ಶನವನ್ನು
ಸದಾ ಕಾಲದಲ್ಲಿ ತಾ ಸಾಕುವ ದೊರೆಯೆ
ಮದನಜನಕ ನಮ್ಮ ಗೋಪಾಲವಿಠಲ
ಒದಗಿ ಬಪ್ಪುವ ಹರುಷ ಕ್ಲೇಶದಿ ನಿನ್ನನು ತಿಳಿಸೊ ೪

ತ್ರಿಪುಟತಾಳ

ಇಂದ್ರಿಯಗಳಿಂದಲಿ ಆಗುವ ಕರ್ಮವು
ದ್ವಂದ್ವವಾಗ್ಯುಂಟು ಕೃಷ್ಣದ್ವೈಪಾಯನ
ಒಂದರೊಳಗೆ ಅಂದಿಸುತಲೆಲ್ಲಿ
ಸಂದಿ ಸಂದಿಗೆ ಬಿಡದೆ ಎನ್ನ ಎಳೆದು
ಒಂದು ಎನ್ನ ವಿಷಯ ನಿಜವಸ್ತುವಿರಲಾಗಿ
ಹಿಂದೆ ಮಾಡಿ ಅದರ ಹಿತ ಅರಸದೆ
ಬಂಧಕರನು ಮಾಡಿ ಬಯಕೆ ಪುಟ್ಟಿಸಿ ಬಾಹಿರ
ಕುಂದು ವಿಷಯಕಿನ್ನು ಮೋಸಗೊಳಿಸಿ
ಅಂಧಕನ ಪಿಡಿದು ಆಟ ಆಡಿಸಿದಂತೆ
ಸಂದಳಿ ಅಂಗಡಿಗೆನ್ನ ನೂಕಿ
ಬಂಧು ಅಲ್ಲದವರ ಬಂಧುಯೆಂದು ತಿಳಿಸಿ
ನಿದ್ರೆಲರಿಯದಾವಸ್ಥೆ ನಾ ನಿತ್ಯವೆಂದರಿವಿಸಿ
ಗಂಧವಲ್ಲದ್ದು ಎಲ್ಲ ಗಂಧವೆಂದರಿವಿಸಿ
ಚೆಂದವಲ್ಲದ ರಸವು ಚೆಂದವೆಂದು ತಿಳಿಸಿ
ಹಿಂದೆ ಮುಂದೆ ಕಾಣದಂತೆನ್ನ ಕುಳ್ಳಿಸಿ
ಎಂದಿಗೆ ನಾಶವಿಲ್ಲದ ಜೀವನಿಗೆ

ಬಂದು ಹೋಗುತಿನೆಂಬೊ ಮೃತ್ಯು ಭಯಪುಟ್ಟಿಸಿ
ಅಂದಾಗಿ ನೀ ಬಿಡದೆ ಈ ಪರಿ ಮಾಡಿಸಿ
ಎಂದಿಗಾ ಜೀವರು ಹೊಂದುವರು ನಿನ್ನ
ಗಂಧ ಸುಳಿದಂತೆ ಇದರ ಒಳಗೆ ಒಮ್ಮೆ
ತಂದು ಸ್ಮೃತಿಗೆ ನಿಜ ಇಂದ್ರಿಯಿಂದ ನಿನ್ನ
ಚೆಂದುಳ್ಳ ಗುಣಗಳು ಅನುಭವಕೆ ಬಂತೆ
ಅಂದಿಗೆ ಸಂದೇಹ ನಿವೃತ್ತಿ ಆಹೋದು
ಇಂದನ್ನಕ ನೋಡೆ ಈ ಬಟ್ಟೆ ಹಾ ಕೆಟ್ಟೆ
ಸಂದಿಲಿ ಇದ್ದನ್ನ ಈ ಪರಿ ಮಾಡಲು
ಅಂದವೆ ಅಂದವೆ ಅಪ್ಪಾ ಅಪ್ಪಾ
ವಂದಿಸಿ ಮೊರೆ ಇಟ್ಟೆ ಒಂದು ಆದರು ನಿ-
ನ್ನಿಂದಿಲ್ಲವಿಲ್ಲಾದಿಲ್ಲವೆಂದು
ಸಂದೇಹವನ್ನು ಬಿಟ್ಟು ಸುಂದರ ಮೂರುತಿ ಗೋಪಾಲವಿಠಲ
ತಂದೆ ನಿನ್ನ ಚಿತ್ತ ಬಂದದೆ ಮಾಡಯ್ಯಾ ೫

ಅಟ್ಟತಾಳ

ಹೇ ಅಚ್ಯುತನೆ ಹೇ ಅನಂತನೆ
ಹೇ ಅದ್ಭುತನೆ ಹೇ ಅಗೋಚರನೆ
ಹೇ ಅಗಮ್ಯನೆ ಹೇ ಅಹೋರಾಜ
ಹೇ ಅದಿತಿಸುತ ಹೇ ಅಕ್ರೂರ ಪಾಲ
ಹೇ ಅಹಲ್ಯಾರಕ್ಷಕ ಹೇ ಅಂಬರೀಷಪಾಲ
ಹೇ ಅಜಮಿಳವರದ ಹೇ ಆರಕಾಣೆಂದ ಗಜರಾಜವರದನೆ
ಹೇ ಅನಿಮಿತ್ತ ಬಂಧು ನಿತ್ಯ ನಿರಂಜನ
ಹೇ ಅಪ್ಪ ಅಯ್ಯ ಪೊತುರೆ ಪೊತುರೆ
ಹೇ ಅನಾದಿ ದೇವ ಆನಂದಪೂರ್ಣನೆ
ಹೇ ಅಘಟಿತಘಟಿತಾನಂತ ಐಶ್ವರ್ಯ
ಹೇ ಆಶ್ಚರ್ಯನೆ ಹೇ ಅಖಂಡಿತ
ಹೇ ಅರ್ಥಗರ್ಭ ಹೇ ಅಧೋಕ್ಷಜ

ಹೇ ಅಜ ಹೆದ್ದಯ್ಯಾ ನಾ ಅಜ್ಞಾ ನೀ ಪೂರ್ಣ
ಬಾ ಅಯ್ಯಾ ಕಾಯಯ್ಯಾ ತ್ರಾಹಿ ತ್ರಾಹಿ ಕೃಷ್ಣ
ನಾ ಅಲ್ಪ ನೀ ಪೂರ್ಣ ಭಳಿರೆ ಭಳಿರೆ ರಾಯ
ನೀ ಅಲ್ಲದಿಲ್ಲಿನ್ನು ಗೋಪಾಲವಿಠಲ
ಬಾ ಆಶ್ರಿತಜನಬಂಧು ಭಕುತಪಾಲಾ ೬

ಆದಿತಾಳ

ಪರರಿಗೆ ಹಿತವಾಗಿ ಎನ್ನಿಂದಲಿ ಇತ್ತೆ
ಇರಿಸು ಎನ್ನನು ಇತ್ತೆ ಧರೆಯ ಮೇಲೆ ದೇವ
ಶರಣಜನರ ಹಿತವೆ ಎನ್ನ ಹಿತವು
ಶರಣರ ಆಪತ್ತೆ ಎನ್ನ ಆಪತ್ತಯ್ಯ
ಹರಿಯೆ ನಾ ನಿನಗಿನ್ನು ವಂದಿಸಿ ಮೊರೆ ಇಟ್ಟೆ
ತರಳನ ಬಿನ್ನಪ ಮನಕೆ ತಾರೈ ದೇವ
ಧರೆಯ ಮೇಲಿನ್ನೆಷ್ಟು ಶರಣು ಜನರು ಉಂಟು
ನಿರುತ ಅವರಿಗಿನ್ನು ಎರಡೊಂದು ಗುಣದ
ಕರಕರೆ ಕ್ಲೇಶವು ಇರದಂತಲಿ ಮಾಡು
ಧರಣಿಯರಮಣ ತರಳ ಸಲಿಗೆಯಲ್ಲಿ ಇನ್ನೊಂದು ಬೇಡುವೆ
ಕರುಣಿಸೋದುಚಿತವೆ ಆಗಿತ್ತೆ ಕರುಣಿಸು
ಸ್ಥಿರ ಎನ್ನ ಗುರುವಿನ ಇನ್ನು ಮೊದಲುಮಾಡಿ
ಪರಿ ಪರಿ ಪರಿ ಇನ್ನೆಂತು ಉಂಟೊ
ಪರಿಹರಿಸುವರಿಗೆ ಹರುಷದಲ್ಲಿ ಇಟ್ಟು
ಬರಿದೆ ಎನ್ನನು ನೀನು ಅವರ ಕ್ಲೇಶಗಳೆಲ್ಲ
ಹರಹುವೊ ಎನ್ನಲ್ಲಿ ಸ್ಮರಣೆ ಪೂರ್ವಕವಾಗಿ
ದುರಿತಗಿರಿಕುಲಿಶ ದುಷ್ಟರಮರ್ದನ
ಶರಣರರಕ್ಷಕ ಕರುಣಾಕರ ಸ್ವಾಮಿ
ಮರುದಂತರ್ಗತ ಗೋಪಾಲವಿಠಲ
ಸರಿಬಂದುದು ಮಾಡೊ ಶರೀರ ಒಪ್ಪಿಸಿದೆ ೭

ಜತೆ

ಸಕಲ ಭಕುತರೆಲ್ಲ ಸುಖದಲ್ಲಿ ಇರಲೆಂಬೊ
ಕಕುಲಾತಿ ಎನಗೆ ಕರುಣಿಸೊ ಗೋಪಾಲವಿಠಲ

ಜ

ಸುಳಾದಿ

ಧ್ರುವತಾಳ

ಇಂದುವಿನ ಪೋಲ್ವಪಾದದಂದಿಗೆ ಗೆಜ್ಜೆಗುಲ್ಲು
ಮಂದ ಕದಳಿಸ್ತಂಭದಂದದಿ ಊರು ಜಾನು
ಚೆಂದದಿ ಉಡಿಗಂಟೆ ಕುಂದಣದುಡುದಾರ
ಬಿಂದುಲಿ ಖಡಿಯ ತೋಳ್ಬಂದಿ ಮುದ್ದಿನುಂಗುರ
ಗಂಧಪೂಸಿದ ಕಂದರದಿ ವಿಶಾಲಾಗ್ರ ನಖವು
ಪೊಂದಿಸಿ ಇಟ್ಟ ಕರ್ಣಕುಂಡಲಾನಂದ ಮುಖ
ಮಂದಹಾಸ ಅರವಿಂದ ನಯನ ಚೆಲ್ವ
ಅಂದವಾದರಳೆಲೆ ಸುಂದರ ಕಿರೀಟವು
ವೃಂದಾವನದಿ ಗೋವಿಂದ ಶ್ರೀಕೃಷ್ಣ
ಇಂದಿರಾಪತಿ ಅಮರೇಂದ್ರವಂದಿತ
ಕಂದರ್ಪಜನಕ ಏ ನಂದನಂದನ ಕಂದ
ಹಿಂದೆ ಕಾಳಿಂದಿ ಮೇಲೆ ನಿಂದು ಕುಣಿದಂತೆ
ಇಂದೆನ್ನ ಮನವೆಂಬೊ ಮಂದಿರದೊಳು ಬಂದು
ಧಿಂ ಧಿಮಿದಿಮಿಕ್ಕು ತೋಂ ಧಿಗಿಧಿಗಿ
ತಂದನ್ನ ತಾನಾ ತಥೈ ಎಂದು ಕುಣಿದಿನ್ನು
ಹಿಂದಿನ ದೋಷಂಗಳ ಕುಂದಲೊತ್ತಿನ್ನು ವೇಗ
ಮುಂದಿನ ದುಷ್ಕೃತವು ನಿಂದಿರದಂತಲಿ ಮಾಡೊ
ಮಂದಜನರ ದೋಷವೆಂಬೊ ಅಂಧಕಾರಕ್ಕೆ

ಸುಂದರಾಂಗನೆ ರವಿಯಂದದಿ ನೀ ಪೊಳೆಯೊ
ನಿಂದಿರುವೋದೆ ತಮ ಭಿಂದಿಸಿ ಪೋಗುವುದು
ಒಂದರಗಳಿಗೆನ್ನ ಮುಂದೆ ಬಿಡದಲೆ
ನಂದದಿ ಸುಳಿದೆನ್ನ ಮಂದನ್ನ ಮಾಡದೆ ಮು-
ಕುಂದ ನೀ ಎನಗೆ ಬಂಧು ಕಾಣಯ್ಯ ದೇವ
ಸಿಂಧುಶಯನ ರಂಗ ಗೋಪಾಲವಿಠಲ
ಹಿಂದೆ ಮುಂದೆ ಎನಗೆ ಒಂದಾಗಿ ಪೊರೆಯೊ ೧

ಮಠ್ಯತಾಳ

ಬಲಿಯ ದಾನವ ಬೇಡಿ ನೆಲನೆ ಈರಡಿ ಮಾಡಿ
ಸ್ಥಳವು ಸಾಲದೆ ಪಾದ ಬಲಿಯ ಶಿರದಲ್ಲಿಟ್ಟೆ
ಎಲೆ ದೇವ ಅದೆ ಪಾದ ಎನ್ನ ತಲೆಯ ಮೆಟ್ಟೆನಗೆ
ತುಳಿ ಎನ್ನ ದೋಷಗಳಳಿದು ಪೋಗುವಂತೆ
ಹಲವು ದೋಷಂಗಳಿಗೆ ಬಲು ಅಧಿಕಾರಿ ನಾನು
ನೆಲೆ ಆವದೊಂದಿನ್ನು ತಿಳಿಯ ಕುಳಿತರಿನ್ನು
ಹೊಳೆಯ ನೀರಿಗೆ ತೃಣವು ಮರಳಿ ಬೀಳೋದೆ ಅಡ್ಡ
ನಳಿನನಾಭನೆ ನೀನು ನೆಲೆಯ ಬಲ್ಲವನಯ್ಯ
ಸುಲಭದಿಂದಲಿ ನಿಚ್ಚಳನ ಮಾಡಿ ಎನ್ನ
ತಿಳಿಸಿ ನಿನ್ನ ರೂಪ ಇಳೆಯೊಳಗಿಡಿಸೆನ್ನ
ಖಳರ ಮರ್ದನನೆ ಗೋಪಾಲವಿಠಲ
ಕಾಲಕಾಲಕೆ ನಿನ್ನ ವಾಲಗದೊಳಗಿಡಿಸೊ ೨

ತ್ರಿಪುಟತಾಳ

ನೀನು ಪಿಡಿಯೆ ಕುಬುಜೆ ಯೌವನಳಾದಳು
ನೀನು ಸೋಕಲು ಶಿಲೆ ತಾನೆ ಸ್ತ್ರೀಯಾದಳು
ನಿನಗೆ ನೀ ವರದೆ ಅಂದು ಧ್ರುವರಾಯಗೊಲಿದಯ್ಯ
ಏನು ಸುಖ ಶಬರಿ ಫಲವನುಣ್ಣಿಸಿದಳು

ನೀನೊಲಿದವರ ಮಹಿಮೆ ನೀನೆ ಬಲ್ಲೆಯೊ ದೇವ
ಆನೇನು ಬಲ್ಲೆನು ನೀನು ತೋರಿಸಿದಷ್ಟು
ನೀನೆ ಎನಗೆ ಸ್ವಾಮಿ ನಾ ನಿನ್ನ ಭೃತ್ಯನೆಂಬೊ-
ದಾನು ಒಂದೆ ಬಲ್ಲೆ ಇನ್ನೊಂದು ಅರಿಯೆ ನಾ
ಮನಸಾವಾಚಾಕಾಯಾ ನಿನ್ನ ನಂಬಿದೆ ದೇವ
ಏನು ಮಾಡಿದದೊಳಿತೆ ನೀನೆ ಗತಿ ಎನಗೆ
ಕಾನನ ಪಟ್ಟಣ ಸಮವನು ಮಾಡಿದಂಥ
ಜ್ಞಾನಿಗಳೊಡನಿಡಿಸು ಅನಂತಕಾಲದಿ
ದಾನವಾಂತಕ ರಂಗ ಗೋಪಾಲವಿಠಲ
ದೀನರಕ್ಷಕ ಭಕ್ತರಾಧೀನ ದೇವ ೩

ಅಟ್ಟತಾಳ

ಹಿಡಿಯನೆ ಎನ್ನಲ್ಲಿ ಮಡಗಿಕೊಂಡಿದ್ದಿನ್ನು
ಬಿಡದೆ ಎನ್ನಿಂದ ಮಾಡಿಸಿದ ಕರ್ಮಗಳೆಲ್ಲ
ಸಡಗರದಿ ನಿನ್ನ ಅಡಿಗೆ ಅರ್ಪಿಸಿದರೆ
ಒಡನೆ ಎನ್ನನು ನೀನು ಕಡೆಯ ನೋಡಲಿಯಾಕೊ
ಪೊಡವಿಯೊಳು ನ್ಯಾಯಕೆ ದೃಢ ಭಕುತರಲ್ಲಿ ಬಾ
ಹಿಡಿದು ನಿನ್ನನು ನಾನು ಸಡಿಲದೆ ಕಟ್ಟುವೆ
ಬಡವನೆಂದು ಬಾಯ ಬಿಡುವುದೊಳಿತಲ್ಲ
ಬಿಡು ಹಾಗಾದರೆ ಭಕುತವತ್ಸಲ ಬಿರುದಿನ್ನು
ಸಡಗರದ ದೈವ ಗೋಪಾಲವಿಠಲ
ಕೊಡು ಭಕುತಿ ನಿನ್ನ ಅಡಿಗಳಲ್ಲೆನಗೆ

ಆದಿತಾಳ

ಹಾಗೆ ಹೀಗೆ ಮನವು ಭೋಗ ವಿಷಯಂಗಳಿಗೆ
ಹೇಗೆ ಹೋಗೆಳೆದರೆ ನೀನು ಸಾಗರದಂತೆ ಮಾಡೀಯ
ನಾಗಾರಿಕುಳ್ಳ ನಿಜಭಾಗವತರ ಮನೆ
ಬಾಗಿಲುಕಾಯುವಂಥ ಭಾಗ್ಯವನಿತ್ತು

ಹೇಗೆ ನಿನ್ನ ಚರಣಗಳಿಗೆ ಮರುಳಾಗುವಂತೆ ಮನ
ನಾಗಶಯನ ಮಾಡೊ
ರೋಗ ವಿಷಯಗಳೆಂಬೊ ಹಾದಿಗೆ ಹರವಿ ಮುಳ್ಳು
ಜಾಗರತದಲೆನ್ನ ಕಾಯಬೇಕಿನ್ನು
ಸಾಗರಶಯನ ಗೋಪಾಲವಿಠಲರೇಯ
ಚಾಗುಡಿಸಿಕ್ಕದೆ ನೀಗರಿ ಮುಂದಕ್ಕೆ (?) ೫

ಜತೆ

ಎನ್ನಪರಾಧ ಅನಂತವಿದ್ದರು ಕ್ಷಮಿಸಿ
ಮನ್ನಿಸಿ ಸಲಹೆನ್ನ ಗೋಪಾಲವಿಠಲರೇಯ

೬

ಈತನೀಗ ನಮ್ಮ ದೇವನು ಪ.

ಪ್ರೀತಿಯಿಂದಲಿ ಸ್ಮರಿಸುವವರ
ಪಾತಕಗಳ ಪರಿಹರಿಪ ಅ.ಪ.

ಅಕ್ರೂರನ ಪ್ರೀತನೀತ
ಚಕ್ರಶಂಖ ಧರಿಸಿದಾತ
ನಕ್ರಬಾಧೆಯ ತರಿದು ತನ್ನ
ಭಕ್ತರನ್ನ ಕಾಯಿದಾತ ೧

ಅಜಮಿಳನ್ನ ಸಲಹಿದಾತ
ವ್ರಜದ ಗೋವು ಕಾಯಿದಾತ
ಭಜಿಸುವವರ ಬಿಡನು ಪ್ರೀತ
ತ್ರಿಜಗದೊಳಗೆ ಮೆರೆವ ದಾತ ೨

ಸಕಲಗುಣಪೂರ್ಣನೀತ

ಸಕಲ ದೋಷದೂರನೀತ
ಸಕಲಾನಂದಪೂರ್ಣನೀತ
ಭಕುತಿಮಂತ್ರಕೊಲಿವ ದಾತ ೩

ಅನಾಥ ಬಾಂಧವನೀತ
ಅನಾದಿ ಕಾಲದವನಾತ
ಅನಾದಿ ಮೊರೆಯ ಕೇಳಿ
ಅನಿಮಿಷದೊಳು ಒದಗಿದಾತ ೪

ಕಮಲಮುಖಿಯ ರಮಣನೀತ
ಕಮಲಾಸನಜನಕನೀತ
ಕಮಲಾಕ್ಷ ಗೋಪಾಲವಿಠಲ ಹೃತ್-
ಕಮಲದೊಳು ನಿಲುವ ದಾತ ೫

೭

ಸುಳಾದಿ

ಧ್ರುವತಾಳ

ಎನ್ನ ಜ್ಞಾನಗಳೆಲ್ಲ ಎನ್ನ ಧ್ಯಾನಗಳೆಲ್ಲ
ಎನ್ನ ಮಾನಗಳೆಲ್ಲ ಎನ್ನ ಸ್ನಾನಗಳೆಲ್ಲ
ಎನ್ನ ಮಂತ್ರಗಳೆಲ್ಲ ಎನ್ನ ತಂತ್ರಗಳೆಲ್ಲ
ಎನ್ನ ದಾನಂಗಳೆಲ್ಲ ಎನ್ನ ಧರ್ಮಂಗಳೆಲ್ಲ
ಎನ್ನ ತೀರ್ಥಯಾತ್ರೆಯೆಲ್ಲ ಎನ್ನ ಯಾಗಂಗಳೆಲ್ಲ
ಎನ್ನ ಪುಣ್ಯಗಳೆಲ್ಲ ಎನ್ನ ಕೌಶಲ್ಯವೆಲ್ಲ
ಇನ್ನಿದರೊಳಗಿನ್ನು ಎನ್ನಿಂದಾದ ಸಾಧನ-
ವನ್ನು ಲೇಶವಾದರು ಕಣ್ಣಲಿ ಕಂಡದ್ದಿಲ್ಲ
ನಿನ್ನ ಸ್ವಭಾವವಯ್ಯಾ ನಿನ್ನ ಕರುಣರಸಕಿನ್ನು

ಆನೇನೆಂಬೆ ಎನ್ನೊಡೆಯನೆ ಕೇಳು
ಎನ್ನ ಕರ್ತೃತ್ವಗಳು ಇನ್ನು ಮುನ್ನಾದುದಲ್ಲ
ನಿನ್ನ ಅಧೀನವಯ್ಯ ಎನ್ನ ಫಲಾಫಲವು
ಮನ್ನಣೆ ಮಾಡಿಸುವಿ (ಅನ್ಯರಿಂದಲಿ ?) ನೀನು
ಮನ್ನಣೆಯನು ಕೊಂಬೆ ಎನ್ನಲ್ಲಿ ನಿಂತುಕೊಂಡು
ನಿನ್ನ ಭಕ್ತರವರನ್ನು ಪಾಲಿಸೊ ಬಗೆ
ನಿನ್ನವರ ಮಹಿಮೆ ನೀನೆ ಬಲ್ಲೆಯೊ ದೇವ
ನಿನ್ನನೆ ಗತಿ ಎಂದು ಬಿನ್ನಪ ಚಿತ್ತೈಸು
ಘನ್ನ ದಯಾನಿಧಿಯೆ ಪನ್ನಗಶಯನ ಗೋಪಾಲವಿಠಲರೇಯ
ನಿನ್ನನೆ ನಿನ್ನನೆ ನಿನ್ನನೆ ಮರೆಹೊಕ್ಕೆ ೧

ಮಠ್ಯತಾಳ

ಸಿರಿ ಅಜಭವ ಸುರ ಸನಕಾದಿಗಳಿಗೆ
ಹರಿ ನೀ ಚಲಿಸದಿರೆ ಬೆರಳು ಆಡಿಸಲಿನ್ನು
ತರವಲ್ಲವೆಂತೆಂದು ವರಶ್ರುತಿಸ್ಮೃತಿಗಳು
ಪರಿಪರಿಯಲಿ ಸ್ತುತಿಸಿ ಅರಸಿಕೊಂಡಾಡಲು
ಅರಿಯದೆ ನಾ ವ್ಯರ್ಥ ಮರುಳು ಕರ್ತೃತ್ವಾ-
ಧರಿಸಿಕೊಂಡು ಇನ್ನು ಬರಿದೆ ದಣಿದೆನಯ್ಯ
ಪರಮಮೂರ್ಖ ನಾನು ಮರೆಹೊಕ್ಕೆ ಮರೆಹೊಕ್ಕೆ
ಮರದದ್ದೆಲ್ಲ ನೀನು ಅರಿವು ಮಾಡೆನಗೀಗ
ಕರುಣಾಕರರಂಗ ಗೋಪಾಲವಿಠಲ
ಕರುಣಾಳೆಂಬುವುದು ಅರಿಯದಾದೆ ನಿನ್ನ ೨

ರೂಪಕತಾಳ

ಕರಚರಣಂಗಳ ಚೇಷ್ಟೇಪರಿ ವ್ಯಾಪಾರವು ಎನ್ನಿಂ-
ದರಿದು ಮಾಡಿದ್ದರೆ ಅರಿಯದಲೆ ಎನ್ನ
ಬೆರಳಿಂದ ಕಣ್ಣನು ಇರಿದುಕೊಬಲ್ಲೆನೆ ಚರಣದಿಂದಲಿ ಮುಳ್ಳು

ಭರದಿಂದ ತುಳಿವೆನೆ ಮರಳಿ ಎನ್ನ ಜಿಹ್ವೆ
ಮರೆದು ನಾ (ಕಡ್ವೆಳ್ವೆನೇ) ಕಡಿವೆನೆ
ತೆರೆವೆನೆ ನೀ ಬಾಯನು ತೆರೆಸದಿದ್ದರೆ ನಾನು
ಹರಿಯೆ ನೀ ಕರ್ತನಿರೆ ಬರಿದೆ ನಾ ಕರ್ತೆಂದು
ಉರುಲು ಹಾಕಿಸಿಕೊಂಡು ಗುರುಗುರು ಗುಟ್ಟುವೆನೆ
ಶರಣರಪಾಲಕ ಗೋಪಾಲವಿಠಲ
ಪೊರೆಯೆನ್ನ ದೊರೆಯೆ ನೀ ಪರಿಪರಿಯಿಂದಲಿ ೩

ಝಂಪೆತಾಳ

ಸರ್ವರಿಗೆ ಪ್ರೇರಕ ಸರ್ವಕರ್ತಭೋಕ್ತ
ಸರ್ವತ್ರದಲಿವ್ಯಾಪ್ತ ಸರ್ವಶಬ್ದವಾಚ್ಯ
ಸರ್ವಗುಣ ಪರಿಪೂರ್ಣ ಸರ್ವದೋಷದೂರ
ಸರ್ವಜ್ಞಾನಗಮ್ಯ ಸರ್ವಶಕ್ತಮೂರ್ತಿ
ಸರ್ವೇಶ ಚೆಲುವ ಗೋಪಾಲವಿಠಲರೇಯ
ಸರ್ವಾಂತರಿಯಾಮಿ ಸಾರ್ವಭೌಮ ನಮೋ ೪

ತ್ರಿಪುಟತಾಳ

ಬಂದವನು ನೀನೆ ಭಕ್ತರಮನದಲ್ಲಿ
ನಿಂದವನು ನೀನೆ ಪಂಡರಪುರದಲ್ಲಿ
ತಂದೆಯಾಗಿ ಎನಗೆ ತಾಯಿಯಾಗಿ ಎನಗೆ
ಬಂಧುವಾಗಿ ಎಮಗೆ ಸಂದೇಹವಿಲ್ಲದೆ
ಹಿಂದೆ ಮುಂದೆ ಏಕಾಗಿ ಒಂದೆ ಪರಿಯಲಿನ್ನು ಸಕಲಕಾಲಿನ್ನು
ಚೆಂದದಿ ಪಾಲಿಸಲಾನಂದದಿ ಎನ್ನಮನ–
ಮಂದಿರದಿ ಪೊಳೆದು ನಿಂದು ಆಡುವ ರಂಗ
ಒಂದೆ ದೈವವೆ ನಮ್ಮ ಗೋಪಾಲವಿಠಲ
ಕಂದನ ತಾಯಿ ಸಲಹಿದಂದದಿ ಸಲಹುವೆ ೫

ಅಟ್ಟತಾಳ

ಬೇ(ಬ್ಯಾ)ಡೆನ್ನಬಾರದೆ ನಾಡವಿಷಯಕೆ ಮನ
ಓಡಿದರೆ ನೀನು ಓಡುತಲಿಹರೆ
ಮಾಡಿಕೊಂಡ ಪತಿ ನೋಡುತಲಿರಲು ಸತಿ
ಈಡ ಒಬ್ಬನ ಬೇರೆ ನೋಡಿಕೊಂಡರೆ ಇನ್ನು
ಮಾಡುವನೊ ಕೃಪೆ ಕೇಡಾಗೋದಲ್ಲದೆ
ನಾಡದೈವದ ಗಂಡ ಗೋಪಾಲವಿಠಲ
ಖೋಡಿ ವಿಷಯಕ್ಕೆ ಮನ ಓಡಾಡದಂತೆ ಮಾಡೊ ೬

ಆದಿತಾಳ

ಗರತಿಯ ಲಕ್ಷಣ ದೊರಕಿಸು ಎನಗೆ
ಗರಳ ಎನಿಸು ಪರ ಅರಸಿಯಲಿ
ಕುರುಹ ತಿಳುಹಿಸು ನಿನ್ನ ತತ್ವಗಳಲ್ಲಿ
ಮರುಳು ಬಿಡಿಸು ಮನಮತಿಗಳಲ್ಲಿ
ತಿರುಗಿಸೆನ್ನನು ತೀರ್ಥಯಾತ್ರೆಗಳಲ್ಲಿ
ಹರಟೆಮಾಡಿಸು ಹರಿವಾರ್ತೆಗಳಲ್ಲಿ
ಕರವ ಮುಗಿಸು ನಿನ್ನ ರೂಪಂಗಳಲ್ಲಿ
ಕರವವಿಡಿಸು ನಿನ್ನ ಶರಣರಲ್ಲಿ
ಪರಮ ದಯಾಳು ಗೋಪಾಲವಿಠಲರೇಯ
ಕರೆವ ವಚನಗಳಲ್ಲಿ ಅರಿವಂತೆ ಮಾಡೊ ನಿನ್ನ ೭

ಜತೆ

ನಾನಾಡುವ ಮಾತೆಲ್ಲ ನಿನ್ನದೆ ಅಯ್ಯಾ
ನಾನರಿಯೆ ನೀನೆಗತಿ ಗೋಪಾಲವಿಠಲ

೮

ಸುಳಾದಿ

ಧ್ರುವತಾಳ

ಎಲೆಲೆ ದೋಷಂಗಳೆ ನಾ ನಿರ್ದೋಷನಾಶ್ರಿತನು
ಎಲೆಲೆ ದುರಿತವೆ ನಾನು ಬಲಪೂರ್ಣಾಶ್ರಿತನು
ಎಲೆಲೆ ಸುಖವೆ ನಾನು ಪೂರ್ಣಾನಂದನ ಆಳು
ಎಲೆಲೆ ಅಜ್ಞಾನವೆ ನಾ ಜ್ಞಾನಪೂರ್ಣನಾಶ್ರಿತನು
ಎಲೆಲೆ ಕಾಮವೆ ನಾನು ಪೂರ್ಣಕಾಮನ ಆಳು
ಎಲೆಲೆ ಕ್ರೋಧವೆ ನಾನು ಅಚ್ಚಕರುಣಾಕರನಾಳು
ಎಲೆಲೆ ಮೋಹವೆ ನಾನು ವ್ಯಾಪ್ತ ವಿಷ್ಣುವಿನ ಆಳು
ಎಲೆಲೆ ಲೋಭವೆ ನಾನು ಸಾರ್ವಭೌಮನ ಆಳು
ಎಲೆಲೆ ಮದವೆ ನಾನು ನಿರಹಂಕಾರಿಯಾಶ್ರಿತನು
ಎಲೆಲೆ ಮತ್ಸರವೆ ನಾನು ಕುಟಿಲರಹಿತನ ಆಳು
ಎಲೆಲೆ ನಿದ್ರೆಯೆ ನಾನು ಅನಿದ್ರೆಯನಾಳು
ಎಲೆಲೆ ಹಸಿವೆ ತೃಷೆಗಳೆ ನಾ ನಿತ್ಯತೃಪ್ತನ ಆಳು
ಸುಳಿಯಬೇಡಿನ್ನು ನೀವು ಸುತ್ತಲಾದರು ಎನ್ನ
ಬಲವಂತನಾದ ಹಿರಿಯ ಬಿಂಬಾಶ್ರಿತ
ಸ್ಥಳವಿಲ್ಲ ನಿಮಗೆ ನಿಲ್ಲಲೆನ್ನಲ್ಲಿ ನೋಡಲು
ತೊಲಗಿರಿ ತೊಲಗಿತ್ತ ಸುಳಿಯದಲೆ
ಮಲತಮಲ್ಲರಗಂಡ ಗೋಪಾಲವಿಠಲ
ಹಲವು ಪರಿಯಲಿ ನಮ್ಮ ಸಲಹೊ ದೇವ ೧

ಮಠ್ಯತಾಳ

ಗುಣಪೂರ್ಣ ಸುಖಪೂರ್ಣ ಅಣುಮಹದೊಳು ವ್ಯಾಪ್ತ
ಕ್ಷಣಲವತೃಟಿಕಾಲ ಕೊರತೆಯಿಲ್ಲವುಕಾಣೆ

ಗುಣಬದ್ಧನು ಅಲ್ಲ ಕೇವಲ ನಿರ್ಗುಣ
ಅಣುಮಾತುರವನ್ನ ಭಿನ್ನ ವಿಷಯರಹಿತ
ಅನ್ಯೋನ್ಯವಾಗೆ ಜೀವಜಡದಲಿದ್ದು
ಇನ್ನು ಕ್ರೀಡೆಯು ಮಾಳ್ಪ ಚಿನ್ನುಮಯನಾಗಿ
ತನ್ನ ಆನಂದಕ್ಕೆ ಲೇಶ ಕೊರತೆಯಿಲ್ಲ
ಇನ್ನು ಜೀವರಿಗಾಗಿ ಸಕಲ ಕ್ರೀಡೆಯ ಮಾಳ್ಪ
ಪುಣ್ಯ ಪಾಪಗಳಿಂದ ವಿಲಕ್ಷಣನಯ್ಯಾ
ಇನ್ನೇನೊರ್ಣಿಸುವೆ ಇವನ ಮಹಾಮಹಿಮೆ
ಅನಂತಗುಣಪೂರ್ಣ ಲಕುಮಿಗಾಗೋಚರ
ಎನ್ನಾಳುವಸ್ವಾಮಿ ಗೋಪಾಲವಿಠಲ
ತನ್ನ ನಂಬಿದವರ ತನ್ನಸದೃಶರ ಮಾಳ್ಪ ೧

ರೂಪಕತಾಳ

ನಿತ್ಯತ್ವ ನಿರ್ದೋಷ ನಿರ್ಗುಣ ಶ್ರೇಯಸ್ಸು
ಚಿತ್ತಾ ಭೃತ್ಯಭಾವನೆ ಆನಂದಬಲ
ಸತ್ವ ಜೀವರಲ್ಲಿ ಬಿಂಬ ಸದೃಶ ಉಂಟು
ನಿತ್ಯ ಸಂಸಾರಿಗೆ ನಿತ್ಯತ್ವದಲ್ಲಿ ಮಾತ್ರ
ಮತ್ತಾವ ತಾಮಸ ಜೀವರ್ಗೆ ಸಾದೃಶ್ಯ
ನಿತ್ಯತ್ವ ನಿರ್ಗುಣ ಎರಡುವಿಧ ಉಂಟು
ಸತ್ಯಜ್ಞಾನಿಗೆ ಸುಖ ಮಿಥ್ಯಾಜ್ಞಾನಿಗೆ ದುಃಖ
ವ್ಯಕ್ತಿ ಅಹುದು ಕೇವಲ ನಿರ್ಗುಣದಾಗ
ಸತ್ಯಸಂಕಲ್ಪ ಗೋಪಾಲವಿಠಲನ್ನ
ಭಕ್ತರಿಗೆ ಭಯವಿಲ್ಲ ಬಲು ಆನಂದ ೨

ಝುಂಪೆತಾಳ

ದ್ವೇಷಿ ಎಂತೆಂದುಪಾಸನೆಯ ಮಾಳ್ಪರಿಗೆ
ದ್ವೇಷಿಯಾಗಿ ದುಃಖ ಉಣಿಸುವನು

ದ್ವೇಷರಹಿತನೆಂದುಪಾಸನೆಯ ಮಾಳ್ಪರಿಗೆ
ಮೀಸಲಾನಂದ ಸುಖ ಮಿಗಿಲುಣಿಸುವ
ದೋಷವಾರದು ನೋಡು ಚೇತನ ಯೋಗ್ಯತೆ
ನಾಶಮಾಡದದರ ಬೀಜ ಮೂಲ
ಸಾಸಿವೆಯ ಬಿತ್ತಿನ್ನು ಸಾಸಿವೆಯ ಬೆಳೆವ ಕ-
ರ್ಪಾಸು ಬೆಳೆದರೆ ಇದು ದೋಷವಲ್ಲೆ
ವೈಷಮ್ಯ ನೈರ್ಗುಣ್ಯ ಈಷನ್ಮಾತ್ರ
ದೋಷಚಿಂತನೆ ಜಗದೀಶಗಿಲ್ಲ
ವಾಸುದೇವ ಗೋಪಾಲವಿಠಲನೆಂತು-
ಪಾಸನೆಯ ಮಾಳ್ಪರಿಗಂತಂತೆ ಫಲವೀವ ೪

ತ್ರಿಪುಟತಾಳ

ಹರಿ ಎಂಬೋವನಧಿಯು ಕರುಣವೆಂಬೋಜಲಕ್ಕೆ
ಎರಡು ದಡವು ಭಕುತಿ ವಿರಕುತಿಯನು ಮಾಡಿ
ವರಜ್ಞಾನವೆಂಬ ನಾವೆಯನು ಆಶ್ರೈಸಿ
ಪರಿಪರಿಗುಣವೆಂಬ ರತುನವ ಹುಡುಕುತ
ನಿರುತ ಅಲ್ಲಿಹ ದಿವ್ಯ ನೆರೆಕಥಾಮೃತ ಉಣುತ
ಮರೆಹೊಕ್ಕನೆನ್ನಿರೊ ಕೃಷ್ಣನೆಂಬೋಶರಧಿ ಬಿದ್ದು
ಬರಬೇಡಿರೆನ್ನಗೊಡವೆ ದುರಿತ ಕಾಮ ಕ್ರೋಧಗಳೆ
ಹರಿದು ಹೋಗುವಿರಿತ್ತಬರಲು ಯೋಗ್ಯರಲ್ಲ
ಶಿರವ ಚೆಂಡಾಡುವೆಮ್ಮರಸುಕಂಡರೆ ನಿಮ್ಮ
ಸರಿಹೋದ ಸ್ಥಳಗಳಲಿ ಇರಹೋಗಿ ಇರಹೋಗಿ
ಸಿರಿ ಮಹಾರಾಜ ಗೋಪಾಲವಿಠಲರೇಯನ
ಪರಿಚಾರಕರ ಪರಿಚಾರಕರಾಳು ನಾ ೫

ಅಟ್ಟತಾಳ

ಕೋಪಂಗಳೆನ್ನ ಸಂತಾಪ ಪಡಿಸದಿರಿ
ಶ್ರೀಪತಿಗ್ಹೇಳಿ ನಾ ಕೊಲೆಯ ಕೊಲ್ಲಿಸುವೆನು

ಕೋಪಂಗಳ್ಯಾ ಪುಣ್ಯಲೋಪ ಮಾಡಿಸದಿರಿ
ವ್ಯಾಪಕನಾದ ವಿಷ್ಣುವಿಗ್ಹೋಗಿ ಪೇಳುವೆ
ರೂಪಂಗಳೆ ಅನ್ಯರೂಪ ನೋಡಲು ಬೇಡಿ
ಆ ಪುರುಷ ಹೃಷಿಕೇಶಗೆ ಪೇಳುವೆ
ತಾಪಸರೊಡೆಯ ಗೋಪಾಲವಿಠಲ ಎನ್ನ
ಕಾಪಾಡುವನು ನಿನ್ನ ವ್ಯಾಪಾರ ನಿಲ್ಲಿಸಿ ೬

ಆದಿತಾಳ

ಭಕುತಸಾರ್ಥ (ನಾರ್ತ) ಭಯನಿವಾರಣ
ಮುಕುತಿದಾತ ಮುಕುಂದಾನಂದ
ಶಕುತ ವ್ಯಕುತ ಸಾರಭೋಕ್ತ
ಸುಖಸಮುದ್ರ ಸುರನದಿಜನಕ
ಅಕುಟಿಲ ಅಷ್ಟ (ಮುದ) ಮದ ಸಂಪನ್ನ
ಸ್ವಕುಲನಾಶಕ ಸ್ವಾರ್ಥರಹಿತ
ಸುಖಮಯಕಾಯ ಸುಲಭದೇವ
ಸಾಕಾರರೂಪ ಸರ್ವಜ್ಞನೆ
ಪ್ರಾಕೃತದೂರ ಪರಮ ಪುರುಷ
ನಾಕೇಶವಂದಿತ ಗೋಪಾಲವಿಠಲ
ಸಾಕುವ ಸರ್ವದಾ ಸನ್ನಿಧಿಯಲಿದ್ದು ೭

ಜತೆ

ಹರಿಯೆ ಸರ್ವೋತ್ತಮನೆಂದು ನಿಶ್ಚಯದಿಪ್ಪ
ನರಗೆ ನಿರಯವಿಲ್ಲ ಗೋಪಾಲವಿಠಲ ಬಲ್ಲ

೬

ಸುಳಾದಿ

ಧ್ರುವತಾಳ

ಎಲೊ ಎಲೊ ಸರ್ವಜ್ಞ ಸರ್ವೋತ್ತಮ ಶ್ರೀಹರಿ
ಚೆಲುವ ಸಾಕಾರ ಸಚ್ಚಿದಾನಂದ ಸಗುಣರಹಿತ
ಇಳೆಯನೆಲ್ಲವನುಂಗಿ ಇನಿತು ಈಡಾದೆ ನಿನ್ನ
ಬಲು ಉದರದಿ ಎಲ್ಲರನು ಅಡಗಿಸಿ
ಲಲನೆ ಲಕುಮಿ ತಾನೆ ಮೂರು ಬಗೆಯು ಆಗಿ
ಚೆಲುವ ನಿನ್ನ ಸೇವಿಪಳಾಕಾಲದಿ
ಪ್ರಳಯೋದಕ ಸಿರಿ ವಟದೆಲೆಯು ಭೂರೂಪಳಾಗಿ
ಬೆಳಕು ತೋರದೆ ದುರ್ಗೆ ತಮರೂಪಳಾಗೆ ಇನ್ನು
ಸುಲಭರೂಪದಿ ನೀನು ಎಲೆಯು ವಟದಮೇಲೆ
ಮಲಗಿ ಬಾಲಕನಾಗಿ ಮತ್ತೆ ಎಲ್ಲವಬಿಟ್ಟು
ಕಿಲಿಕಿಲಿ ನಗುತಲಿ ಕಾಲ್ಬೆರಳು ಬಾಯೊಳಗಿಟ್ಟು
ನಲಿದು ಚಪ್ಪರಿಸುವೆ ತಿಳಿದುತಿಳಿದು ಇನ್ನು
ಕೆಲಕಾಲವು ಭಕ್ತರು ಮಾಡಿದ ಸತ್ಕರ್ಮಂಗಳು
ಹಲವುಪರಿ ಭಕ್ತಿಯ ಮಾಡಿ ಅರ್ಪಿಸಿದುದೆಲ್ಲ
ಕೊಳುತ ಅವರ ರುಚಿಗಳನು ಎಲ್ಲವು ನೋಡಿ
ನಿಲಿಸುವೆ ಅವರವರ ನಿಜಪದವಿಯಲ್ಲಿ ಸ್ವಾಮಿ
ಭಳಿರೆ ಭಕ್ತವತ್ಸಲ ಗೋಪಾಲವಿಠಲ
ನಿಲಿಸಿ ಎನ್ನಲಿ ನಿರುತ ಲೀಲೆ ತೋರಿಸು ದೊರೆಯೆ ೧

ಮಠ್ಯತಾಳ

ಏಕಾಂತದಿ ಇಪ್ಪ ಲೋಕನೆಲ್ಲವ ನಿನ್ನ
ಆ ಕುಕ್ಷಿಯೊಳಿಟ್ಟು ಸಾಕುತ್ತ ಸರ್ವರ

ನೀ ಕರುಣಿಸಿ ಮುಖ್ಯ ಪ್ರಾಣನೊಬ್ಬಗಿನ್ನು
ಬೇಕಾದ ಎಚ್ಚರಿಕೆನಿತ್ತು ಸಕಲಜೀವ
ಜೋಕೆ ಮಾಡುವಿ ಇನ್ನು ಸ್ವಜ್ಞ ಅಸ್ವಜ್ಞರನು
ಸಾಕಲ್ಯಗುಣಪೂರ್ಣ ಗೋಪಾಲವಿಠಲ
ನೀ ಕರುಣಿಸುವೆಮ್ಮ ನಿರ್ವ್ಯಾಜದಿ ನಿರುತ ೨

ರೂಪಕತಾಳ

ಅನಾದಿಜೀವ ಲಿಂಗಬದ್ಧರುಗಳ ನುಂಗಿ
ತಾನಿಪ್ಪೆಪಾರು (ಪ್ಪಪಾರ) ಸುಪ್ತಾವಸ್ಥಿಯೋಪಾದಿ
ಜ್ಞಾನ ಅಜ್ಞಾನವು ಎರಡನ್ನು ಅರಿಯದೆ
ಜ್ಞಾನಸ್ವರೂಪವೆ ಆಚ್ಛಾದವಾಗಿರೆ
ಪ್ರಾಣಿಗಳನು ನಿನ್ನ ದೃಷ್ಟಿಯಿಂದಲಿ
ನೀ ನೆಚ್ಚಿಸಿನ್ನು ಉದ್ಧಾರ ಮಾಡುವೆನೆಂದು
ನಾನು ನನ್ನದು ಎಂಬೊ ಅಹಂಮತಿಯನೆ ಕೊಟ್ಟು
ನಾನಾ ಯೋನಿಗಳಲ್ಲಿ ತಂದ್ಹಾಕುವೆ
ಮಾನವ ಜನುಮದಿ ಮಹಾಸಾಧನವು ತೋರಿ
ಪ್ರಾಣಿಯ ನಿನ್ನ ತಿಳಿವಂತೆ ಮಾಳ್ಪೆ
ಜಾಣ ಚೆನ್ನಿಗರಾಯ ಗೋಪಾಲವಿಠಲ
ಕಾಣಿಸದನಕ ಕಾಣರು ನಿನ್ನ ೩

ಝಂಪೆತಾಳ

ಅನಂತ ಜನುಮದಲ್ಲಿ ಅನಂತ ಕಲ್ಪದಲ್ಲಿ
ಇನ್ನು ಮಾಡಿದೆನಯ್ಯಾ ನಿನ್ನ ಪ್ರೇರಣೆಯಿಂದ
ಕಿ(ಇ)ನ್ನು ಮಾಡುವನಾಗಿ ಮತ್ತೆ ಇಪ್ಪುವೆನಯ್ಯಾ
ಅನಂತಪಾಪಕ್ಕೆ ಅನಂತ ನಿನ್ನ ನಾಮ
ಎನ್ನಬಳಿಯಲ್ಲಿ ಈಗ ವಾಸವಾಗೆ ಓ ಅಯ್ಯಾ
ಎನ್ನ ದೋಷಗಳೆಂಬೊ ಇನ್ನು ಅರಸಿ ಅರಸಿ
ನಿನ್ನದೊಂದು ಸಾಕು ನಾಮ ಅದರನು (ಅವನು ?) ಕೆಡಿಸು

ಇನ್ನು ಅವಕೆ ಅಂಜೆ ಈ ಶಕುತಿ ಎನಗಿರಲಿ
ಘನ್ನದಯಾನಿಧೆ ಗೋಪಾಲವಿಠಲ
ನಿನ್ನ ಬಿಡೆ ನಿನ್ನ ಬಿಡೆ ನಿತ್ಯತೃಪ್ತ ೪

ತ್ರಿಪುಟತಾಳ

ಒಂದು ಶ್ರವಣದಿಂದ ಆವುದಾಗುವುದೆನಗೆ
ಚೆಂದದಿ ಪಾಲಿಸು ಆ ಶ್ರವಣವ
ಒಂದೆ ಸ್ನಾನದಲಿಂದ ಆವುದುದ್ಧರಿಪುದು
ಚೆಂದದಿ ಮಾಡಿಸೊ ಅದೆ ಸ್ನಾನವ
ಒಂದೆ ಮಂತ್ರದಲಿಂದ ಆವ ಸಿದ್ಧಿಯೊ ಎನಗೆ
ಚೆಂದದಿಂದಲಿ ಪಾಲಿಸೊ ಅದೆ ಮಂತ್ರವ
ಒಂದೆ ಗುರುವಿನಿಂದ ಆವ ಉದ್ಧಾರವೊ
ತಂದು ತೋರಿಸು ಮತ್ತೆ ಅದೆ ಗುರುವಿನ
ಒಂದೆ ನಿನ ಮೂರುತಿ ಆವುದೆನಗೆ ತಿಳಿಯೆ
ತಂದು ತೋರಿಸು ಎನ್ನ ಅನುಭವಕ್ಕೆ
ಒಂದೆ ಅರ್ಚನೆಯಿಂದ ಆವುದೊ ನಿನ್ನ ಪೂಜೆ
ಚೆಂದದಿ ತೋರಿಸೊ ಅದೆ ಬಗೆಯ
ಒಂದೆ ಪರಿಯು ಮನಕೆ ಆವುದು ನಿಲ್ಲದೊ
ಚೆಂದದಿ ಪಾಲಿಸು ಅದೆ ಜ್ಞಾನವು
ಸಂದೇಹದ ಕರ್ಮ ಸಾಸಿರ ಕೊಟ್ಟರು
ಮಂದಬುದ್ಧಿಯವ ಕಡೆ ಬೀಳೆನೊ
ಒಂದು ಕರ್ಮವು ಮಾಡೆ ಮತ್ತಾನಂತ ಕರ್ಮ
ಬಂದು ಒದಗುತಿವೆ ಸಂದೇಹಗೊಳಿಸುತ
ಬಂಧಕವೆ ಮತ್ತೆ ಬಲಿಕೆ ಮಾಡುತಲಿವೆ
ಎಂದಿಗೂ ಕಡೆ ಹಾಯುವುದು ಅರಿಯದೆ
ಮಂದರಧರ ನಮ್ಮ ಗೋಪಾಲವಿಠಲ
ತಂದೆಸಲಹೊ ನಿನ್ನ ಸಂದರುಶನ ಕೊಟ್ಟು ೫

ಅಟ್ಟತಾಳ

ಎಲ್ಲಿತನಕ ವಿಷಯ ವೆಗ್ಗಳಿಸುವಿ ಇನ್ನು
ಅಲ್ಲಿ ತನಕ ಮನನಿಲ್ಲದು ನಿನ್ನಲ್ಲಿ
ಜ್ವಲಿಸುತಯಿಪ್ಪ ಬಲ್ಲಿದಗ್ನಿಯ ಮೇಲೆ
ಹುಲ್ಲುಹಾಕುತ ಬರೆ ನಿಲ್ಲುವುದೆ ತಾಪ
ಎಲ್ಲ ಕಾಲವು ವಿಷಯದಲ್ಲೆ ಮನಸುಹೋಗಿ
ಸಲ್ಲಿಸಲ್ಲಿಸಿ ಸಾಕು ಎಂಬುವಂಥ
ಅಲಂಬುದ್ಧಿಯು ಇನ್ನು ಎಳ್ಳನಿತು ಇಲ್ಲ
ಕೊಲ್ಲುತದೆ ಕೊಂಡುವೊಯ್ದು ವಿಷಯಂಗಳಿ-
ಗೆಲ್ಲಿತನಕ ಹೀಗೆ ಎಳೆದರೆ ನಾ ನಿನ್ನ
ಗೆಲ್ಲುವತೆರನೆಂತು ಬಲ್ಲಿದ ಎಲೆದೇವ
ನಿಲ್ಲಿಸಿ ಈ ಪಾಪಸಂಚಿತ ಕೆಡಿಸಿನ್ನು
ಮೆಲ್ಲನೆ ಬಾಹೊ ಆಗಾಮಿಯ ಒತ್ತಿನ್ನು
ಸಲ್ಲಿಸು ಪ್ರಾರಬ್ಧ ಇಲ್ಲಿಗೆ ಎಂತೆಂದು
ಎಲ್ಲ ಮನಕೆ ಅದು ಅರಿವಿಸಿ ಚೆನ್ನಾಗಿ
ನಿಲ್ಲದೆ ನೀ ಸ್ಮರಣೆಗೆ ಬರುತಲಿದ್ದು
ನಲ್ಲ ನೀ ಕಾಯಬೇಕಲ್ಲದೆ ಎನ್ನನು
ಮಲ್ಲಮರ್ದನ ಗೋಪಾಲವಿಠಲ
ಕೊಲ್ಲೊಕಾಯೊ ಬಿಡೊ ನಿನ್ನ ನಂಬಿದೆನೊ ೬

ಆದಿತಾಳ

ವಿಷಯ ಬಂಧುಗಳೆನಗೆ ವಿಷಯರು ಆದರೆ
ವಶವಾಗಿ (ಗುವಿ ಎಂತೊ) ವೆಂತೊ ಮುಖ್ಯವಿಷಯ ನೀನು
ಕೆಸರೊಳಗೆ ಬಿದ್ದು ಕೆಸರಿಂದ ತೊಳೆದರೆ
ಹಸನಾಗೊದೆಂತೊ ಅವು ಕುಶಲಮೂರ್ತಿ
ಕಸುಗಾಯಿ ಎಂಬುವಂಥ ಬಿಸಿಲಲಿ ಬಡಿಸಿಕೊಂಡು
ರಸಪಕ್ವವಾಗಿನ್ನು ದ್ರವಿಸುತ ಶ್ರೀಹರಿಯೆ

ವಿಷಯವಾಗಲೊ ಮುಖ್ಯ ನಿನಗೆ ನಿರುತ
ವಸುದೇವಸುತ ನಮ್ಮ ಗೋಪಾಲವಿಠಲ
ಅಸಮದೈವವೆ ನಿನಗೆ ನಮೋನಮೋನಮೋ ಎಂಬೆ ೭

ಜತೆ

ಎಲ್ಲಿತನಕ ಮನಸು ಎರಗುತಿಪ್ಪುದು ಎನಗೆ
ಅಲ್ಲಲ್ಲಿ ವಿಷಯನಾಗೊ ಗೋಪಾಲವಿಠಲ

೧೦

ಏಕೆ ಮಮತೆ ಕೊಟ್ಟು ದಣಿಸುವಿ ರಂಗ
ನೀ ಕರುಣದಿ ಎನ್ನ ಪಾಲಿಸೊ ಕೃಷ್ಣ ಪ.

ನಿನ್ನ ಹಂಬಲಿಸದೆ ಅನ್ಯ ವಿಷಯಗಳಿ-
ಗೆನ್ನನೊಪ್ಪಿಸುವುದು ನೀತವೆ
ಮನ್ನಿಸಿ ದಯದಿ ನೀ ಎನ್ನ ಪಾಲಿಸಲು ನಾ
ನಿನ್ನ ನೇಮಕೆ ಪ್ರತಿಕೂಲನೆ ೧

ತನುವು ತನ್ನದು ಅಲ್ಲ ತನು ಸಂಬಂಧಿಗಳೆಂಬೋ
ತನುವ್ಯಾರೊ ತಾನ್ಯಾರೊ ಅವರಿಗೆ
ಧನ ಮೊದಲಾದ ವಿಷಯಗಳ ಅನುಭವ ಹಿಂ-
ದಿನ ದೇಹದಂತಲ್ಲವೆ ೨

ಇಂದ್ರಿಯಂಗಳು ವಿಷಯದಿಂದ ತೆಗೆಯಲು ಗೋ-
ವಿಂದ ಎನ್ನ ವಶಕೆ ಬಾರವೊ
ಇಂದಿರೆ ಅರಸ ಬ್ರಹ್ಮಾದಿವಂದಿತ ನಿನ್ನ
ಬಂಧಕ ಶಕುತಿಗೆ ನಮೋನಮೋ ೩

ಅರಿತು ಅರಿತು ಎನಗರೆಲವವಾದರು
ವಿರಕುತಿ ವಿಷಯದಿ ಬಾರದು

ಕರುಣಾಸಾಗರ ನಿನ್ನ ಮರೆಹೊಕ್ಕಲ್ಲದೆ
ಮರುಳು ನೀಗುವ ಬಗೆಗಾಣೆನೊ ೪

ಎಂದಿಗೆ ನಿನ್ನ ಚಿತ್ತಕೆ ಬರುವುದೊ ಸ್ವಾಮಿ
ಅಂದೆ ಉದ್ಧರಿಸಯ್ಯ ಕರುಣಿಯೆ
ಸುಂದರ ವಿಗ್ರಹ ಗೋಪಾಲವಿಠಲ ಸುಖ-
ಸಾಂದ್ರ ಭವಮೋಚಕ ನಮೋ ನಮೋ ೫

೧೧

ಏಕೆ ಮಲಗಿಹೆ ಹರಿಯೆ ಏಸು ಆಯಾಸ
ಜೋಕೆ ಮಾಡುವ ಬಿರುದು ಸಾಕಾಯಿತೇನೊ ಪ.

ತಮನೊಡನೆ ಹೋರಾಡಿ ತಪಿಸಿ ಮೈ ಬೆವರಿತೊ
ಅಮೃತಮಥನದಿ ಗಿರಿಯು ಅತಿಭಾರವಾಯ್ತೊ
ರಮಣಿಯನು ತರುವಾಗ ರಣರಂಗ ಬಹಳಾಯ್ತೊ
ಅಮರರಿಪುವನು ಸೀಳೆ ಆಯಾಸವಾಯ್ತೊ ೧

ಆಕಾಶ ಭೇದಿಸಲು ಆ ಕಾಲು ಉಳುಕಿತೊ
ಕಾಕುನೃಪರನು ಸೀಳಿ ಕರ ಸೋತಿತೊ
ಭೂದೇವಿಯನರಸಿ ಬಳಲಿಕೆಯು ಬಹಳಾಯ್ತೊ
ಲೋಕಭಾರವ ಇಳುಹಿ ಸಾಕುಸಾಕಾಯ್ತೊ ೨

ಚಪಲೆಯರ ಮೋಹಿಸಲು ಉಪಟಳವು ಬಹಳಾಯ್ತೊ
ಅಪವಿತ್ರನಡಗಿಸಲು ಅಧಿಕ ಶ್ರಮವಾಯ್ತೊ
ಕೃಪೆ ಮಾಡಿನೋಡಯ್ಯ ಕಣ್ಣುತೆರೆದು ಎನ್ನಕಡೆ
ಕಪಟನಾಟಕ ಶ್ರೀಗೋಪಾಲವಿಠಲ ೩

೧೨

ಸುಳಾದಿ

ಧ್ರುವತಾಳ

ಏಸೇಸು ಜನುಮಂಗಳು ಎನಗೆ ಬಂದು ಪೋದುವು
ನಾಶವಾಗಲಿಲ್ಲ ಮನದ ಆಸೆ
ಬೇಸರವಾಗಲಿಲ್ಲ ವಿಷಯಂಗಳಲ್ಲಿ ಬುದ್ಧಿ
ಸಾಸಿರದೊಳಗೊಂದು ಪಾಲಾದರು
ನಾಶವೈದಿತು ಹೀಗೆ ನಾನಾ ಹಿಂದಿನ ಜನ್ಮ
ಈ ಶರೀರವ ಧರಿಸಿ ಇಲ್ಲಿ ಬಂದೆ
ಭೂಸುರ ಜನ್ಮದಲ್ಲಿ ಬಂದೆ ಸುಕೃತ ಬಲು
ರಾಶಿ ಪುಣ್ಯಗಳು ಕೂಡಲಾಗಿ
ವಾಸಿ ಮತ್ತೇನಿದಕೆ ಬಾಳಿದುದಕೆ ವಿಷಯ
ರಾಶಿ ಗಳಿಸಿ ಉಂಬೋದೆ ಮಹಾ ಫಲವೊ
ದೇಶ ಕಾಲ ನೋಡಲನುಕೂಲವಾಗಿಹುದೊ
ವಾಸುದೇವನೆ ನಿನ್ನ ಇಚ್ಛೆಯೊಂದೆ
ಏಸು ಮಾತುಗಳನ್ನು ಆಡಿದರೇನು ನಿನ್ನ
ದಾಸರ ದಾಸತನ ಉಂಟಾಗಿತ್ತೆ
ಈ ಸಮಯವೆ ನೋಡು ಎನ್ನನುದ್ಧರಿಸಲು
ದೋಷರಹಿತ ಜ್ಞಾನಾನಂದಪೂರ್ಣ
ಲೇಶವಾದರು ನಿನ್ನ ತಿಳಿಯೋ ವಿಷಯದಲ್ಲಿ
ನಿಸ್ಸಂಶಯವೆಂಬುದೆ ಸರ್ವೇಶ್ವರ
ಸಂಶಯ ಮಿಕ್ಕ ಜ್ಞಾನಿ ಆನಹುದಿಲ್ಲ ವಿ-
ಶೇಷವಾಗಿನ್ನು ನೀನು ಅರಿಯದದ್ದೆ
ನೀ ಸ್ವತಂತ್ರನು ನಿನಗೆ ಬೇಕು ಬೇಡೆಂಬರಿಲ್ಲ
ಈ ಸಥೆಮಾತು ನೀನೆ ಕೊಟ್ಟದ್ದಲ್ಲೆ
ಈಷಣತ್ರಯದಲ್ಲಿ ಎಳೆವೆನ್ನ ಮನ ಸ-
ರ್ವೇಶನೆ ನಿನ್ನ ಕಡೆ ಮಾಡಬಹುದೊ

ನಾಶರಹಿತ ಶ್ರೀಶ ಗೋಪಾಲವಿಠಲ
ಶಾಶ್ವತವಾಗಿ ವಾಸವಾದ ಮೂರ್ತಿ ೧

ಮಠ್ಯತಾಳ

ಕಾಣೆನೋ ಕಾಣೆನೋ ಕಡೆ ದಾಟಿಸುವವರ
ಜ್ಞಾನ ಪ್ರೇರಕರ ನಾಕಾಣೆ ಕಾಣೆ ಇನ್ನು
ಗೇಣು ಮುಂದಕೆ ಸಾಗೆ ಮೊಳವು ಹಿಂದಾಗುವುದು
ಕಾಣಿ ಪೋದರೆ ಎನ್ನ ಪ್ರಾಣ ಒಪ್ಪಿಸುವೆನೊ
ಹಾನಿ ಜಯಾದಿಗಳನೇನು ತಿಳಿಯಲಿಲ್ಲ
ಶ್ವಾನ ಬುದ್ಧಿಯವನೋ ನಾನಾಕುಯೋಚಿಸುವೆ
ಜ್ಞಾನವಂತರ ಸಂಗವೇನೆಂತಾಗುವುದೊ
ಗೋಣು ಹಿಸುಕುವರ ಸಂಗವೆನಗೆ ಬಹಳ
ಶ್ರೀನಿವಾಸ ಶ್ರೀಶ ಗೋಪಾಲವಿಠಲ
ನಾನು ನಿನ್ನವರವನೋ ಏನು ಮಾಡಿದರು ೨

ರೂಪಕತಾಳ

ಇಂದ್ರಿಯಂಗಳನಿತ್ತೆ ಅದಕೆ ವಿಷಯಂಗಳಿತ್ತೆ
ಒಂದರ ಸಾಧನಗಳೊಂದಕ್ಕಾಗಿವೆ ಅಯ್ಯ
ಚೆಂದದಿ ನಿನ್ನಯ ಕಥೆಯ ಕೇಳುವ ಕರ್ಣ
ಮಂದಿವಾರ್ತೆಯ ಕೇಳಿ ಮರುಳಾದುವೋ
ಸುಂದರ ನಿನ್ನ ಮೂರ್ತಿಯ ನೋಳ್ಪ ಅಕ್ಷಿಗಳು
ಸೌಂದರ್ಯ ಸ್ತ್ರೀಯರ ನೋಡಲೆಳಸಿದವಯ್ಯ
ಇಂದಿರಾಪತಿ ನಿನ್ನ ನಿರ್ಮಾಲ್ಯ ತುಳಸಿಯ ಬಿಟ್ಟು
ಇಂದುಮುಖಿಯರ ಮೈಗಂಧಕೆಳಸಿತು ಘ್ರಾಣ
ಹೊಂದಿ ನಿನ್ನವರನಪ್ಪುವ ಸ್ಪರ್ಶೇಂದ್ರಿಯ
ಮಂದ ಸ್ತ್ರೀಯರ ಮೈಯ್ಯಾಲಿಂಗನಕ್ಕೆಳೆವುದು
ಅಂದದಿ ಸುಜನರರ್ಪಿಸಿದನ್ನಗಳ ಬಿಟ್ಟು
ನಿಂದ್ಯರ ಮನೆಯ ಓಗರ ಬಯಸುವುದು ಜಿಹ್ವೆ

ಇಂದ್ರಿಯಂಗಳು ಎಲ್ಲ ಈ ಪರಿ ಒಟ್ಟಾಗೆ
ಮುಂದಿನ ಗತಿಯೇನೊ ಮುಕುಂದನೆ
ಕಂದರ್ಪಜನಕ ಗೋಪಾಲವಿಠಲ ಕೃಷ್ಣ
ಮುಂದೇನು ಗತಿಯೆನಗೆ ಮುಕುಂದನೆ ೩

ಝಂಪೆತಾಳ

ಮದುವೆಯಾಗುವುದಕ್ಕೆ ಮಾಡಿದ ಸಾಧನ
ವಧೆಯಾನಂತರ ಉತ್ತರಕ್ರಿಯಕ್ಕಾದಂತೆ
ಉದರಕೋಸುಗವಾಗಿ ಇಟ್ಟ ಅನ್ನವ ಒಯಿದು
ಉದರದ ಮೇಲಿಡಲು ಕ್ಷುಧೆ ಪೋಪುದೆ
ಬಧಿರನ ಮುಂದೆ ಗಾಯನ ಮಾಡಿದಂತೆ
ಆದುದು ಎನಗಯ್ಯ ಕೊನೆಗೆ ನೋಡಾ
ಒದಗಿ ಬಾಹ ಪ್ಯಣದ ಗತಿ ತಪ್ಪದೊ
ಉದಯ ರಾತ್ರಿ ಮಧ್ಯವಾದದ್ದರಿಯೆ
ಇದೆ ಸಮಯ ಮೀರಿದರೆ ಮುಂದ್ಯಾರೊ ನಾನ್ಯಾರೊ
ನದಿಗಳ ತೆರೆಯಂತೆ ಜನನ ಮರಣ
ವಿಧಿಕುಲವು ಸುಮ್ಮನೆ ಬಾಹೋದಿಲ್ಲ
ವಿಧಿಜನಕನೆ ನೀನು ತಿಳಿಯದ್ದಿಲ್ಲವೊ
ಸುದರುಶನ ಪಾಂಚಜನ್ಯಪಾಣಿ
ಮಧುಸೂದನ ಕದನಕರ್ಕಶ ಮಲ್ಲರವೈರಿ ಹೃಷಿಕೇಶ
ಅದುಭುತಮಹಿಮನೆ ಅಲೌಕಿಕ
ಬುಧಜನಪ್ರಿಯ ಗೋಪಾಲವಿಠಲರೇಯ
ವಿಧಿ ನಿಷೇಧಕ್ಕೆ ನೀನೇ ನಿಯಾಮಕ ೪

ತ್ರಿಪುಟತಾಳ

ಚಿಂತಾಮಣಿಗಾದರು ಬೆಲೆಯ ಕಂಡವರುಂಟು
ಕಂತೆಗೆ ಬೆಲೆಯುಂಟೆ ನಾನಾ ಛಿದ್ರ
ಕಂತೆಯೊಳಗೆ ಮಣಿಯ ಕಟ್ಟಿದ ಕಾರಣ

ಸಂತೆ ಜನರು ಬಂದಿದ ನೋಳ್ಪರು
ಕಂತೆ ಬಿಡಿಸಿ ಮಣಿಯ ಕಡೆಗೆ ಮಾಡಿದರಾಗ
ಸಂತೆಯ ಜನರೆಲ್ಲ ಕಂತೆಯ ನೋಳ್ಪರೆ
ಕಂತೆಯಲ್ಲಭಿಮಾನ ಮಣಿಗಿದ್ದ ಕಾರಣ
ಸಂತೆ ಜನರು ಇದ ಬೆಲೆಗೆ ಬಳೆಸುವರಯ್ಯ
ಅಂತರ್ಮುಖರೆ ಇದರ ವಿವರ ಬಲ್ಲರಲ್ಲದೆ
ಚಿಂತಿತವಾಗುವುದೆ ಸರ್ವರಿಗೆ
ಶಾಂತಮೂರುತಿ ನಮ್ಮ ಗೋಪಾಲವಿಠಲ ನೀ
ನಿಂತಲ್ಲಿ ಸಕಲ ನಿಧಾನವುಂಟು ೫

ಅಟ್ಟತಾಳ

ಚೇತನನ್ನ ನೀನು ಜಡವ ಮಾಡುವೆ ಅ-
ಚೇತನ ಪಿಡಿದಿನ್ನು ಚೇತನ ಮಾಡುವೆ
ಪಾತಕ ಪಾವನವೆರಡು ನಿನ್ನಾಧೀನ
ಏತರವನು ನಾನಲ್ಲ ನಿನ್ನಾಧೀನ
ಕೋತಿಯ ಮರಿ ತಾಯ ಕಚ್ಚಿಕೊಂಡಿದ್ದಂತೆ
ಆ ತೆರವಯ್ಯ ನಿನ್ನ ಹಿಡಿತ ಬಲು-
ಪ್ರೀತಿಬಡಿಸು ಬಲು ಯಾತನೆ ಬಡಿಸಿನ್ನು
ಖ್ಯಾತಿ ಅಖ್ಯಾತಿಯು ನಿನ್ನದೋ ಸರ್ವೇಶ
ಸ್ವಾತಿಹನಿಯ ಕಪ್ಪೆಚಿಪ್ಪು ಬಯಸಿದಂತೆ
ಆ ತೆರದಲ್ಲಿ ನಿನ್ನ ಕರುಣಾರಸ ಬಿಂದು
ಏತರಿಂದಾಗಲಿ ಎರೆವುದಿಂದೆನ್ನಲ್ಲಿ
ಆತುರನಾಗಿ ಕೈಸೋತು ನಿಲ್ಲಿಸಿಯಿಪ್ಪೆ
ಜ್ಯೋತಿರ್ಮಯ ಮೂರ್ತಿ ಗೋಪಾಲವಿಠಲ ನೀ
ಪ್ರೀತನಾಗುವುದೇತರಿಂದಲಿ ಪೇಳೊ ೬

ಆದಿತಾಳ

ಮರವಾಗಿ ಮನೆಯಾಗಿ ಕಾಣಲಿಲ್ಲ

ಕೊರವ ನಾನಾಗಿನ್ನು ಕಾಣಲಿಲ್ಲ
ಎರಳಾಗಿ ಕಪ್ಪೆಯಾಗಿ ಕಾಣಲಿಲ್ಲ
ನೊರಜಾಗಿ ನೆಗಳಾಗಿ ಕಾಣಲಿಲ್ಲ
ಎರಡು ಪಕ್ಕದಿ ಹಾರಿ ಕಾಣಲಿಲ್ಲ
ಮರದಿಂದ ಮರಕಡರಿ ಕಾಣಲಿಲ್ಲ
ತುರುಕರುವು ಆಗಿ ಕಾಣಲಿಲ್ಲ
ಪುರ ನಿರ್ಮಿಸಿ ನಿನ್ನ ಕಾಣಲಿಲ್ಲ
ಪರಮಹಂಸನಾಗಿ ಕಾಣಲಿಲ್ಲ
ಗಿರಿ ಗುಹೆಗಳ ತುಕ್ಕಿ ಕಾಣಲಿಲ್ಲ
ಪರಿಪರಿ ವ್ರತ ಉಪಾಸನೆಗಳನೆ ಮಾಡಿ
ಬರಿದೆ ದಂಡಿಸಿ ತನುವ ಕಾಣಲಿಲ್ಲ
ನೆರೆ ಮರುಳಾಹಂಕಾರದಿ ಮಾಯಕೆ ಸಿಲುಕಿನ್ನು
ಅರಿದವ ನಾನಲ್ಲ ನೀನಿರೆ ನಾನಾರೊ
ತರಳನ ಅಪರಾಧ ತಾಳಿದೆ ನಿನಗಿನ್ನು
ಸರಿವುಂಟೆ ಸರಿವುಂಟೆ ಕರುಣಾನಿಧೆ
ಎರಡು ವಿಂಶತಿ ವತ್ಸರವಾಯಿತು ಈ
ಹರಣ ಧರಿಸಿ ಕರುಣಾಕರನೆ ನೀನು
ಇರುವ ಬಗೆಯ ಎಚ್ಚರಿಸಿದಂದಕೆ ಎನ್ನ
ಬರಿದೆ ಕಾಲವ ಪೋಗಗೊಡಲಾಗದೊ
ಗುರುದೇವತಾ ಪ್ರೀತಿಯಾಗಿ ಸಕಲ ಕರ್ಮಾ-
ಚರಣೆಯ ಮಾಡಿಸೋ ಹರೆ ಹರೆ ಹರೆ ಹರೆ
ಪರಮದಯಾನಿಧೆ ಗೋಪಾಲವಿಠಲ
ಇರುಳು ಹಗಲು ನಿನ್ನ ಸ್ಮರಣೆಯನೀಯೊ ೭

ಜತೆ

ಸಕಲಕ್ಕು ನಿನ್ನ ಬೇಡುವುದೇನೊ ವಿಷಯದಾ-
ಸಕುತಿಯ ಬಿಡಿಸೊ ಗೋಪಾಲವಿಠಲರೇಯ

೧೩

ಸುಳಾದಿ

ಧ್ರುವತಾಳ

ಒಂದಪರಾಧವೆಂದು ವಂದಿಸಲೇನಯ್ಯ
ಒಂದರ ಚಿಂತೆಯೆಂದು ಪೊಂದಿಸಲೇನಯ್ಯ
ಒಂದರ ಭಯವೆಂದು ಬೇಡಿಕೊಳ್ಳಲೇನಯ್ಯ
ಒಂದರ ಹರುಷವೆಂದು ಒಪ್ಪಿಕೊಳ್ಳಲೇನಯ್ಯ
ಒಂದರ ಕ್ಲೇಶವೆಂದು ಒದಗಿ ನುಂಗಲೇನಯ್ಯ
ಒಂದಲ್ಲ ಎರಡಲ್ಲ ವಿವರಿಸಿ ಹೇಳಲಿನ್ನು
ಒಂದಪರಾಧವೆ ಇವಕೆ ಕಾರಣ ಮೂಲ
ಇಂದಿರೆ ಅರಸ ಗೋಪಾಲವಿಠಲ ಕೃಷ್ಣ
ತಂದೆ ನಿಮ್ಮ ವಿಸ್ಮೃತಿ ಎನಗೆ ಮುಖ್ಯಾಪರಾಧ ೧

ಮಠ್ಯತಾಳ

ಜನನದ ಚಿಂತೆ ಜನಿಸುವ ಭಯವು
ಜನಿಸಿದರೆ ಹರುಷ ದಿನದಿನಕೆ ಆಸೆ
ಘನ ಆಸೆಯಿಂದಲಿ ಮೋಹ ಮೋಹದಿಂದ ಕ್ಲೇಶ
ಅನಂತರಪಾಯಗಳು ಒಂದೊಂದು ಅನಂತ
ಇನಿತಿನಿತು ಆವಾವ ಘನ ಕ್ಲೇಶಗಳಿಂದ
ದಣಿದು ದಣಿದು ದಣಿದು ಧೈರ್ಯ ಭ್ರಷ್ಟನಾಗಿ
ಮುಣುಗಿ ತೇಲುವೆನಯ್ಯ ಮುಂದುಗಾಣದೆ ಇನ್ನು
ಘನ ದಯಾವಾರಿಧಿ ಗೋಪಾಲವಿಠಲ
ನೆನೆಯದೆ ನಾ ನಿನ್ನ ಕೊನೆಗಾಣದೆ ಪೋದೆ ೨

ರೂಪಕತಾಳ

ಇಂದಿನ ಸಾಧನ ಏನು ಆದರು ಎಲ್ಲ
ಇಂದಿಗೆ ಇದರ ವಿಚಾರವು ತಿಳಿಯಿತು
ಮುಂದಿನ ಗತಿಗೆ ಮುಕುಂದ ಪೊಂದುವ
ಚಂದವನರುಹಯ್ಯ ಸುಂದರಾಂಗ ದೇವ
ನಿಂದಲ್ಲಿ ಕುಳಿತಲ್ಲಿ ಬಂದಲ್ಲಿ ಹೋದಲ್ಲಿ
ತಂದು ನೀಡು ನಿನ್ನ ಚೆಂದುಳ್ಳ ಸ್ಮೃತಿಯನು
ನಂದನ ಕಂದ ಗೋಪಾಲವಿಠಲ ಆಪ್ತ
ಬಂಧು ಕರುಣಾಸಿಂಧು ಗತಿ ನೀನೆ ಹಿಂದೆ ಮುಂದೆ ೩

ಝಂಪೆತಾಳ

ಸಲಹುವ ನೀನಯ್ಯ ಸಲಹಿಕೊಂಬುವ ನಾನು
ಫಲಿತಾರ್ಥ ಒಂದೆ ಸರಿ ಉಳಿದುದು ಏನಯ್ಯ
ಹಲವು ಪರಿ ಸಾಧನಗಳು ಕೂಡಿದರೇನು
ಕಳೆಯಬಲ್ಲುವೆ ಎನ್ನ ಭವರೋಗವ
ತಿಳಿದದ್ದು ಇಷ್ಟೆ ಸರಿ ನಳಿನನಾಭನೆ ನಿನ್ನ
ಸುಲಭ ಸ್ಮರಣೆಗಿಂತ ಮಿಗಿಲು ಇಲ್ಲ
ಚೆಲುವ ಕೇಳಯ್ಯ ಕೊಳ್ಳಯ್ಯ ನಿಲ್ಲಯ್ಯ
ಚಲಿಸಬೇಡೆನ್ನ ಮನದಿಂದಲಿನ್ನು
ಸಲಿಸಯ್ಯ ಸಂಸಾರ ಕೊಲೆಯ ತಾಳಲಾರೆ
ಬಳಲಿ ಬಳಲಿ ಬಾಯ ಬಿಡುತಲಿಹೆ
ಹೊಳೆಯಜನಕ ನಮ್ಮ ಗೋಪಾಲವಿಠಲ ನೀ
ತಿಳಿಸಬೇಕು ಎನ್ನ ಸ್ಥಿತಿಗತಿಯ ೪

ತ್ರಿಪುಟತಾಳ

ಆವಾಗ ಎನಗಿನ್ನು ನಿನ್ನ ಸ್ಮೃತಿಯು ಬಂತೆ
ಆವ ದೇಶವೆ ಪುಣ್ಯದೇಶವಯ್ಯ

ಆವ ಕಾಲದಲ್ಲಿ ನಿನ್ನ ಸ್ಮೃತಿಯು ಬಂತೆ
ಆವ ಕಾಲವೆ ಪುಣ್ಯ ಕಾಲವಯ್ಯ
ಆವ ಸಂಗತಿಯಿಂದ ನಿನ್ನ ಸ್ಮೃತಿಯು ಬಂತೆ
ಆವ ಸಹವಾಸವೆ ಸಜ್ಜನ ಸಹವಾಸ
ಆವ ನಿನ್ನ ಸ್ಮರಣೆರಹಿತವಾದ ಕರ್ಮ
ದೇವಾರ್ಚನಾದರು ಏನು ಫಲವೊ
ನಾ ಒಲ್ಲೆನಯ್ಯ ನಿನ್ನ ಸ್ಮರಣೆರಹಿತನಾಗಿ
ಜೀವಿಸಿಕೊಂಡಿನ್ನು ವ್ಯರ್ಥವಾಗಿ
ಪಾವನಕಾಯ ಗೋಪಾಲವಿಠಲ ನಿನ್ನ
ಸರ್ವದಾ ಸ್ಮರಿಸುವವನೆ ಜೀವನ್ಮುಕ್ತ ೫

ಅಟ್ಟತಾಳ

ನಿನ್ನ ಸ್ಮೃತಿಯೆ ವಿಧಿ ವಿಸ್ಮೃತಿ ನಿಷೇಧ
ಪುಣ್ಯವೆಂದರು ಇದೆ ಪಾಪವೆಂದರು ಇದೆ
ಇನ್ನಿಲ್ಲ ಇನ್ನಿಲ್ಲ ಇದಕಿಂತ ಸಾಧನ
ಸ್ತನ್ಯಪಾನವ ತಾ ಉಣಲೊಲ್ಲನು ಪುನಃ
ಇನ್ನೊಂದು ಅವಗಿಲ್ಲ ಇದೆ ಇದೆ ಉಪಾಯ
ತನ್ನ ಮೊದಲು ಮಾಡಿ ತೃಣಜೀವ ಕಡೆಯಾಗಿ
ಚೆನ್ನಾಗಿ ತತ್ವೇಶರಿನ್ನು ಲಕುಮಿ ಸಹಿ-
ತಿನ್ನವರವರ್ಗೆ ತನ್ನಿಯಾಮಕನಾಗಿ
ಎನ್ನ ಅಂತರ್ಯಾಮಿಯವನೆ ಮಾಡಿಪನೆಂಬೊ
ಇನ್ನಾವ ಸ್ಮೃತಿಯೇನು ಪುಣ್ಯಸಾಧನವಯ್ಯ
ಘನ್ನ ದಯಾನಿಧಿ ಗೋಪಾಲವಿಠಲ
ನೀನರಿಯದನ್ಯ ಪುಣ್ಯ ಪಾಪಗಳಿಲ್ಲ ೬

ಆದಿತಾಳ

ನಿನ್ನರಿಯದಿಪ್ಪುದೆ ಅಜ್ಞಾನವಯ್ಯ ಅಯ್ಯ
ಇನ್ನು ಅಜ್ಞಾನದಿಂದ ಅನ್ಯಥಾಜ್ಞಾನವಯ್ಯ

ಅನ್ಯಥಾಜ್ಞಾನ ಈಗ ಅಧಮಜೀವಿಗಳಿಗೆ
ಇನ್ನು ಮಿಥ್ಯಾಜ್ಞಾನವನ್ನು ಪುಟ್ಟಿಪುದಯ್ಯ
ಇನ್ನು ಆದುದಜ್ಞಾನ ಅರಿತು ಜ್ಞಾನಕ್ಕೆ ನೀನು
ಮುನ್ನ ಪ್ರೇರಕನಾಗಿ ಮುದದಿಂದ ಮಾಡಿಸುವೆ
ಘನ್ನ ಸ್ವಾಮಿಯು ನೀನು ಬನ್ನದಾಸನು ನಾನು
ನಿನ್ನ ತಿಳಿವ ಜ್ಞಾನ ಇನ್ನು ಎನಗೆ ಇತ್ತು
ಜನನ ಮರಣದ ಬಾಧೆಯ ಬಿಡಿಸಿನ್ನು
ಚೆನ್ನಾಗಿ ಸಲಹಯ್ಯ ಗೋಪಾಲವಿಠಲ ೭

ಜತೆ

ಅಪರಾಧ ಅನಂತ ಮಾಡಿ ನಾ ಮರೆಹೊಕ್ಕೆ
ಅಪಾರಕರುಣಿ ಗೋಪಾಲವಿಠಲ ಕಾಯೊ

೧೪

ಸುಳಾದಿ

ಧ್ರುವತಾಳ

ಒಂದು ನಿನ್ನ ಮೂರುತಿ ಬೊಮ್ಮಾಂಡದಿ ಇಪ್ಪುದು
ಒಂದು ನಿನ್ನ ಮೂರುತಿ ಬೊಮ್ಮಾಂಡ ಸುತ್ತಿಹುದು
ಒಂದು ನಿನ್ನ ಮೂರುತಿ ಬೊಮ್ಮಾಂಡದ ಹೊರಗೆ
ಗಂಧ ಪೂಸಿದಂತೆ ಅವ್ಯಾಕೃತ ವ್ಯಾಪಿಸಿ
ಇಂದಿರೆ ಅಭಿಮಾನಿ ಆ ತಥ್ಯ ನಿತ್ಯವಸ್ತು
ಎಂದಿಗೆ ಅಲ್ಲಿ ಬಿಡದೆ ಇಪ್ಪ ಮಹಾಮೂರುತಿ
ಒಂದೆ ನಿನ್ನ ಮೂರುತಿ ಮೂಲಾವತಾರ ಐಕ್ಯ
ಒಂದೆ ಬಲಜ್ಞಾನ ಆನಂದ ನಿರ್ದೋಷ
ಎಂದಿಗೂ ಜೀವ ಜಡದಿಂದ ಅಗಲದೆ ಇಪ್ಪ

ಸುಂದರವಿಗ್ರಹ ಗೋಪಾಲವಿಠಲ
ನಿಂದು ಭಕುತರಲಿ ಇಪ್ಪ ಕರುಣಿ ೧

ಮಠ್ಯತಾಳ

ಸರ್ವಾಪರೋಕ್ಷಿ ಸರ್ವಜ್ಞನೆ
ಸರ್ವಾನಂದಗುಣಗಣಪರಿಪೂರ್ಣ
ಸರ್ವೋತ್ತಮ ಸಾಕ್ಷಾತ್ಕಾರ
ಸರ್ವದಿ ವ್ಯಾಪ್ತ ಸರ್ವಚೇಷ್ಟ
ನಿರ್ವಿಕಾರ ನಿತ್ಯತೃಪ್ತ
ಗರ್ವಹರ ಗರುಡಗಮನ
ನಿರ್ವಧಿಕ ಅಂತರ್ಯಾಮಿರೂಪ
ಘನದಲ್ಲಿ ಅಣುಅಡಕ ಮೂಲರೂಪದಿ
ಅಣು ಘನ ಕಾರ್ಯಗಳು ನಿನ್ನ ಭಕುತರಿಗಾಗಿ
ದಿನದಿನಗಳಲ್ಲಿ ಮಾಡುತಲಿ ಇಪ್ಪೆ
ಘನಅಣುಪರಿಪೂರ್ಣ ಗೋಪಾಲವಿಠಲ
ನಿನಗಲ್ಲದೀಶಕುತಿ ಭಣಗುಗಳಿಗುಂಟೆ ೨

ತ್ರಿಪುಟತಾಳ

ನಿಷೇಧ ವಿಶೇಷ ವಿಭಾಗ ಮಾಡಲಾಗಿ
ನಿಷೇಧ ವಿಶೇಷ ವಸ್ತು ನೀನೆ
ವಿಶೇಷಾವಿಶೇಷ ವಿಭಾಗ ಮಾಡಲಾಗಿ
ವಿಶೇಷ ನಿಷೇಧವಸ್ತು ನೀನೆ
ಸಾಸಿರಕೆ ಬೆಲೆ ನೀನೆ ಕಾಸಿಗೆ ಬೆಲೆ ನೀನೆ
ಲೇಸು ಹ್ರಾಸಕೆ ಎಲ್ಲ ಶೇಷ ನೀನೆ
ದೋಷರಹಿತ ಭಕ್ತಪೋಷ ಆವಲಿದ್ದರು
ಕೇಶವಾಚ್ಯುತಾನಂತ ನಾಶರಹಿತ
ವಾಸುದೇವ ಮುಕುಂದ ಗೋಪಾಲವಿಠಲ
ದಾಸ ದಾಸ ದಾಸರ ಪೊರೆವ ಭಾರ ನಿನ್ನದೊ ದೇವ ೩

ಅಟ್ಟತಾಳ

ಗೋವಿಂದ ಗೋಪಾಲ ಗೋವರ್ಧನಧರ
ಗೋವಳರೊಡೆಯನೆ ಗೋವುಗಳ ಪಾಲ
ಜೀವಜಡದಿ ಭಿನ್ನ ಪಾವನ್ನ ಮೂರುತಿ
ಈವ ಕಾವ ಇಷ್ಟ ಯಾವತ್ತರಲಿ ವ್ಯಾಪ್ತ
ಕಾವಕರುಣಿ ರಂಗ ಗೋಪಾಲವಿಠಲ
ಕೋವಿದರಿಗೆ ನಿನ್ನ ಕುರುಹ ತೋರಿರುವಿ ೪

ಆದಿತಾಳ

ನಿನ್ನ ಇಚ್ಛೆಯಿಂದಲಿ ಜಗವ ಸೃಷ್ಟಿಸುವಿ
ನಿನ್ನ ಇಚ್ಛೆಯಿಂದಲಿ ಅವತಾರ ಮಾಡುವಿ
ನಿನ್ನ ಇಚ್ಛೆಯಿಂದಲಿ ಜಗವ ಪಾಲಿಸುವಿ
ನಿನ್ನ ಇಚ್ಛೆಯಿಂದಲಿ ಜಗವ ಸಂಹರಿಸುವಿ
ನಿನ್ನಗೆ ನೀನೆ ಪ್ರೇರಣೆಮಾಡುವಿ
ನಿನ್ನಿಂದ ನೀನೆ ಆನಂದಬಡುವಿ
ಭಿನ್ನ ವಸ್ತುವಿನಿಂದ ಇನ್ನಪೇಕ್ಷೆಯು
ಇನ್ನಿಲ್ಲ ಇನ್ನಿಲ್ಲ ಚಿನ್ನುಮಯ ನಿನಗೆ
ಇನ್ನು ಆವಾವ ಜೀವರುಗಳಿಗೆ
ಉನ್ನಾಹ ವ್ಯಕುತಿ ಮಾಡುವ ನೀನೆ
ಘನ್ನ ದಯಾನಿಧೆ ಗೋಪಾಲವಿಠಲ
ನಿನ್ನ ಮಹಿಮೆಗೆ ನಾ ನಮೋ ನಮೋಯೆಂಬೆ ೫

ಜತೆ

ಸ್ವತಂತ್ರ ಸ್ವಾಧೀನ ಪರತಂತ್ರಾದಿದೂರ
ಅತಂತ್ರರು ಪೊರೆಯೊ ಗೋಪಾಲವಿಠಲ

೧೫

ಉಗಾಭೋಗ

ಓವನ್ನ ಕಾಣದಲೆ ದೇಶದೇಶವ ತಿರುಗಿ
ಘಾಸಿಯಾದೆನೊ ಬಲು ಗರ್ವತನದಿ
ಈ ಶರೀರದೊಳಗೆ ವಾಸವಾಗಿ ಇದ್ದು ಕಾ-
ಣಿಸಿ ಕೊಳದೆ ಎನಗೆ ಮೋಸಗೊಳಿಪೆ
ಕೂಸಿನ ಮುಖಕೆ ಬೀಳದೆ ಜನನಿ ಮರೆಯಲಿರೆ
ಕೂಸಿಗಿನ್ನಾವ ಬಲ ರೋದನೊಂದೆ
ಆ ಶಿಶುವು ಕಳೆಗುಂದಿ ಸುಮ್ಮನಿದ್ದಿದ್ದರೆ
ಪೋಷಿಸುವ ಜನನಿ ತಾ ಸುಮ್ಮನಿಹಳೊ
ಕೂಸಿನಂತೆ ನಾನು ಜನನಿಯಂತೆ ನೀನು
ಏಸು ದಿನವೆಂದು ಉಪವಾಸವಿರಲಿ
ದಾಸರ ದಾಸತನ ಉಂಟಾಗೆ ನೀ
ಪೋಷಿಸುತಲಿ ಇಪ್ಪೆ ಇದ್ದಲ್ಲಲ್ಲೆ ಎನ್ನ
ಈ ಸಥೆಯ ಮಾತು ನೀನಾಡಿಸಿದ್ದಲ್ಲವೆ
ಶ್ರೀಶ ಗೋಪಾಲವಿಠಲ ಬಂಧು ಹಾ ಹಾ ಹಾ

೧೬

ಸುಳಾದಿ

ಧ್ರುವತಾಳ

ಕಚ್ಚಲೆನಗೆ ಕಾಮ ಕ್ರೋಧಗಳೆಂಬ ಕುನ್ನಿಗಳು
ಪೆಚ್ಚಿತ್ತೆ ಮೋಹಮದ ಮತ್ಸರವು
ಅಚ್ಚ ವಿಷಯಗಳೆಂಬೊ ಕಿಚ್ಚಿನೊಳಗೆ ಕೆಡಹಿ
ಹುಚ್ಚುಗೊಳಿಸುವುದಯ್ಯ ಎಚ್ಚರಿಸದಲಿನ್ನು
ನಿಚ್ಚಳ ದಾರಿಯನ್ನು ಮುಚ್ಚಿಸಿ ಕಾಣದಂತೆ

ಮೆಚ್ಚು ಆಯಿತು ಮನವು ಕುತ್ಸಿತಭೋಗದಲ್ಲಿ
ಅಚ್ಯುತ ನಿನ್ನ ಪಾದ ಅರ್ಚಕರಾದವರು
ಬೆಚ್ಚಿಸಿದಡಾಯಿತೆ ಉಚಿತವೆ ನಿನಗೆ
ನೆಚ್ಚದವನ ಪರರ ಇಚ್ಛೈಸಿದರೆ ಎನ್ನ
ವಾಂಛ್ಯ ನಿನ್ನದೊ ಅಲ್ಲೆ ವತ್ಸಾಸುರಮರ್ದನ
ಕಚ್ಚಿನಗಡಿಗೆಮ್ಮ ಹುಚ್ಚು ಮೋರೆಯಮರಿಗಿ
ಗಚ್ಚಿನ ಪೋತರಾಜ ರಚ್ಚಕಟ್ಟೆಯ ಎಲ್ಲಿ
ಬಿಚ್ಚಾಳೆಪಲ್ಲಿ ಶಡವಿ ಬನದ ಶಂಕರಿ
ಯಃಕಶ್ಚಿತ್ ದೇವತೆಗಳ ಇಚ್ಛಿಸಲಿಲ್ಲವಯ್ಯ
ಮಚ್ಛ ಕೂರ್ಮ ವರಾಹ ನಿಚ್ಚಳ ನಾರಸಿಂಹ
ಮೆಚ್ಚಿ ಭಕ್ತರ ಬಾಗಿಲು ಕಾಯಿದ ತ್ರಿವಿಕ್ರಮ
ಹೆಚ್ಚಿನ ಪರಶುಪಿಡಿದ ಭಾರ್ಗವ ದೇವೋತ್ತಮ
ಸಚ್ಚಿದಾನಂದ ರಾಮಕೃಷ್ಣ ಬೌದ್ಧ ಕಲ್ಕಿಯೆ
ಮಚ್ಛಾವತಾರ ಮೂಲರೂಪ ಐಕ್ಯನಾದ
ಸುಚಿತ್ರ ಚರಿತ್ರ ಜ್ಞಾನಾನಂದ ಗುಣಪೂರ್ಣ
ಇಚ್ಛೆ ಮಾತ್ರದಿ ಜಗವ ಸೃಷ್ಟಿಸ್ಥಿತಿಲಯವ ಮಾಳ್ಪೆ
ಕಶ್ಯಪಸುತನಾದ ಭಕ್ತವತ್ಸಲ ದೇವ
ಮೆಚ್ಚಿದೆ ನಿಮ್ಮ ಪಾದ ಗೋಪಾಲವಿಠಲ
ನುಚ್ಚು ಮಾಡಯ್ಯ ಕಾಮಕ್ರೋಧಗಳೆಂಬವು ಬೇಗ ೧

ಮಠ್ಯತಾಳ

ಅನಂತ ಸಾಧನೆಯೊಳು ಏನೊಂದು ನಾನರಿಯೆ
ಅನಂತ ದೋಷಗಳು ಮುನ್ನ ಮುನ್ನ ಮಾಡಿದಲ್ಲದೆ
ಇನ್ನು ಅದೆ ಹಾದಿಗೆ ಎನ್ನನ್ನು ಸೆಳೆದೊಯಿದು
ಹುಣ್ಣು ಹುಣ್ಣನು ಮಾಡಿ ಎನ್ನ ಕೊಲ್ಲಿಸಿದರೆ
ಇನ್ನಾರಿಗೆ ಪೇಳುವೆ ಘನ್ನ ದಯಾನಿಧೆ ಎನ್ನ ಯತ್ನವೇನು
ನಿನ್ನ ದಯಾರಸಕೆ ಚಿನ್ನನ ಬಾಯಿ ತೆರೆದು
ಚೆನ್ನಾಗಿ ಮಾತೆ ಮಣ್ಣು ಬೆಣ್ಣೆ ಸಮವನ್ನು ಮಾಡಿ ಉಣಿಸೆ
ಇನ್ನು ಅರಿಯದವಗೇನು ಒಂದೇ ರೂಪ

ಮುನ್ನ ಲೇಸು ಆಗೊ ಪುಣ್ಯ ಪಾಪಂಗಳು
ನಿನ್ನ ಅಧೀನವು ಎನ್ನ ಫಲಾಫಲವು ನಿನ್ನ ಸಂಕಲ್ಪಕ್ಕೆ
ಇನ್ನು ನಾಶವಾಗಿಲ್ಲ ನಿನ್ನ ಇಚ್ಛೆ ಬಂದಂತೆ ಮಾಡೊ ರಂಗ
ಚಿನ್ಮಯ ಮೂರುತಿ ಗೋಪಾಲವಿಠಲ
ಎನ್ನ ಮನೋಕಾರ್ಯವನ್ನು ನೀನೆ ಬಲ್ಲಿ ೧

ತ್ರಿಪುಟತಾಳ

ದೇವ ನಿನ್ನಲ್ಲಿ ದ್ವೇಷಮಾಡುವನಿಗೆ
ಆವ ಕಾಲಕ್ಕೆ ದುಃಖ ಭೋಗವೆ ಸಾಕ್ಷಿ
ಕೋವಿದರು ನಿನ್ನಲ್ಲಿ ಸ್ನೇಹ ಮಾಡುವರಿಗೊ
ಆವದಾದರು ಸುಖವ ತೋರುವುದಯ್ಯ
ನೀ ಒಲಿದವರಿಗೆ ಆವಾಗ ಸ್ಮರಣೆಗೆ
ದೇವ ಇನ್ನು ಬಾಹುವುದೆ ಸಾಕ್ಷಿಯು
ಆವ ದೇಶದಲ್ಲಿ ಆವ ದಿಕ್ಕಿನಲ್ಲಿ ಆವಾವ ಜನರಲ್ಲಿ
ಆವ ಕಾರ್ಯಗಳಲ್ಲಿ ಯಾವತ್ತರಲ್ಲಿ ನೀ ವ್ಯಾಪಕನಾಗಿನ್ನು
ಆವಾವ ಬಗೆ ಕಾರ್ಯವ ಮಾಡಿಸುವಂಥ
ಭಾವನೆ ಒಂದೆ ತಿಳಿಸುವುದು
ನಾ ಒಂದೊಲ್ಲೆನೊ ನಿನ್ನ ಸೇವೆ ಮಾತ್ರವಿನ್ನೀಯೊ
ಜೀವರಿಗೆ ಕರ್ಮದ ಅನುಭವ ಉಂಟು
ದೇವ ನೀ ನಿರ್ಲಿಪ್ತ ಆವಲ್ಲಿದ್ದರೇನು
ಆವಾವರಲ್ಲಿ ನೀ ಈವ ವ್ಯಾಪ್ತವು ಇನ್ನು
ದೇವ ನಿನ್ನ ಗುಣಗಳೇವೆ ಮಣಿಗಳು
ಭಾವ ಶುದ್ಧದಿ ಜ್ಞಾನವೆಂಬೊ ತಂತಿಲಿ
ಆವಾಗ ಪೋಣಿಸುತಿರುವಂತೆ ಮಾಡೆನ್ನ
ನಾ ಒಲ್ಲೆ ಇನ್ನೊಂದು ಈ ಉಪಾಯಕಿನ್ನು
ಕೋವಿದರ ಮನೆ ದ್ವಾರವು ಕಾವಂತೆ
ಆ ಊಳಿಗನ್ನ ಮಾಡಿ ಆವಲ್ಯಾದರು ಇಡಿಸು
ದೇವಾಧಿದೇವರೊಡೆಯ ಗೋಪಾಲವಿಠಲ
ಕಾವುವಾತನೆ ನೀನು ಆವಲ್ಲಿದ್ದರೆನ್ನ ೨

ಅಟ್ಟತಾಳ

ಅರಿಯದೆ ನಾ ಇನ್ನು ನರರ ಬೇಡಿದರೆ
ನರರಲ್ಲಿ ನೀ ಇನ್ನು ಪರಿಪೂರ್ಣವಲ್ಲವೆ
ಅರಿಯದೆ ಅನ್ಯದೇವರ ಭಜಿಸಿದರೆ
ಹರಿಯೆ ನೀ ಅಲ್ಲಿನ್ನು ಇರುವುದು ಮಿಥ್ಯವೆ
ಇರುವೆ ನೊಣ ಎಂಬತ್ತುನಾಲ್ಕು ಲಕ್ಷ
ಪರಿ ಜೀವರಲ್ಲಿ ಪರಿಪೂರ್ಣಮಯ ನೀನು
ಬರಿದೆ ನಮ್ಮನೇನು ಮರುಳುಗೊಳಿಸಬೇಡ
ಅರಿದು ನೋಡಲು ಸರ್ವಾಂತರದಲ್ಲಿ ನೀನೆ
ಮರುಳೆ ಆವಾವ ಜನಂಗಳಲ್ಲಿ ಇನ್ನು
ಪರಿಪರಿ ಜೀವರಾರಾಧಿಸಿದದೆಲ್ಲ
ಅರಿದು ಮನದೊಳು ಹರಿಯೆ ನಿನಗಿನ್ನು
ಕರವ ಮುಗಿದು ನಿಂದು ಭರದಿ ಅರ್ಪಿಸುವೆನೊ
ಕರುಣಾಕರ ರಂಗ ಗೋಪಾಲವಿಠಲ
ಶರಣು ಹೊಕ್ಕೆನೊ ಕಾಯೊ ಬಿರುದುಳ್ಳ ದೈವವೆ ೪

ಆದಿತಾಳ

ಕ್ಷೀರ ಉಕ್ಕಿದರು ನೀರು ಎರೆವರಯ್ಯ
ನೀರು ಉಕ್ಕಲು ಹರಿಗೋಲು ಹಾಕುವರಿನ್ನು
ಈರೇಳು ಧರೆಯೆಲ್ಲ ಮೇರೆತಪ್ಪಿ ಬರಲು
ಸೇರಿಸುವರ್‍ಯಾರೊ ತಡಿಗೆ ಮಾರಜನಕ ನೀನೆ
ಬಾರಿಬಾರಿಗಿನ್ನು ಭಕ್ತರಿಗೆ ಬಂದ ದೋಷ
ಹಾರಿಸುವುದಕಿನ್ನು ಕಾರಣಕರ್ತ ನೀನೆ
ಆರು ನಿನ್ನಂತೆ ಮತ್ತಾರು ಪೊರೆವರಿಲ್ಲ
ಕಾರುಣ್ಯ ಮೂರುತಿ ಕರಿರಾಜವರದ ರಂಗ
ಮಾರುತವಂದ್ಯ ಪಾದ ಗೋಪಾಲವಿಠಲ
ಅರಿಷಡ್ವರ್ಗಗಳ ದೂರಮಾಡಯ್ಯ ಬೇಗ ೫

ಜತೆ

ಪರಿಮಿತಿ ಇಲ್ಲದ ದುರಿತ ದೋಷವನಕೆ
ಪರಶು ನಿನ್ನ ನಾಮ ಗೋಪಾಲವಿಠಲ

೧೭

ಸುಳಾದಿ

ಧ್ರುವತಾಳ

ಕರೆದ ಮಾತಿಗೆ ನೀನು ಬರುವವನಲ್ಲ
ಅರುವಾಯಿತೆನ್ನ ಮನಕೆ ಅಪ್ರಮೇಯ
ತುರುವ ಸ್ವಭಾವ ನೀನು ತುರಿಸಿದರೆ ಲಭ್ಯ
ತುರಿಸುವ ಬಗೆಯ ತಿಳಿಯಬೇಕಾಯಿತು
ಪುರುಷ ನಿನಗೆ ಸಮಾಧಿಕರಿದ್ದರಾದಡೆ
ಒರಸ್ಯಾಡಬಹುದು ನಿನ್ನವರ ಕೂಡೆ
ಪರಮ ಅಸ್ವತಂತ್ರ ಪರಿಪಾಲಿತ ನಿನ್ನಿಂದ
ಒರೆಸುವೆ ಎಷ್ಟೆಂದು ವಾರಿಜಾಕ್ಷ
ಅರಸು ನೀನೆವೆ ನಿನ್ನ ಸ್ವರುಷ ಮಾಡುವುದಕ್ಕೆ
ಭರವಸೆ ಕೊಡುವುದೊ ಭಕ್ತಪ್ರಿಯ
ಪುರುಷನ ಕೂಡಲಿನ್ನು ಸಲಿಗೆ ಕೊಟ್ಟರೆ ಅರಸಿ
ಸರಸವಾಡುವಳು ತನ್ನ ಸರಿಬಂಡಂತೆ
ಅರಸರರಸ ಚೆಲುವ ಗೋಪಾಲವಿಠಲ ನಾ ಉ-
ಚ್ಚರಿಸುವೆ ನಿನ್ನ ಗುಣಕರ್ಮಗಳ ೧

ಮಠ್ಯತಾಳ

ಉರಗನಂದದ ಗುಣವುಳ್ಳ ಪುರುಷ ನೀನು
ಹರಿಯೆ ಮಾರ್ಜಾಲನಂದದ ಗುಣದವ

ಸರಿ ಬಿಡು ಮೂಷಕದ ಗುಣವುಳ್ಳವ ನೀನು
ಗರುಡನಂಥವ ನೀನು ವರಕಪಿಗುಣವುಳ್ಳವ ನೀನು
ಕರಿಯಂಥವ ನೀನು ಕಪ್ಪೆಯಂಥವ ನೀನು
ಪರಿಪೂರ್ಣ ನಿರ್ದೋಷ ಗೋಪಾಲವಿಠಲ
ಸರಿ ಬಂದಂತಾಡುವೆ ಸಲಿಗೆಯಿಂದಲಿ ನಾನು ೨

ತ್ರಿಪುಟತಾಳ

ಮಡಿವಾಳನಂಥವ ಮೈಲಿಗೆ ಕಳೆವಲ್ಲಿ
ಬಡಗಿಯಂಥವ ದೋಷವ ಕಳೆವಲ್ಲಿ
ತಡೆಯದೆ ಕುಲಾಲನಂಥವ ದೇಹವ
ಬಿಡಲು ಪುನಃ ಕೊಡುವಲ್ಲಿ ಮನೆಮಾಡಿ
ಪಿಡಿದು ಒಂದನಂತ ಮಾಡುವಲ್ಲಗಸಾಲಿ
ಪಿಡಿದು ಬಿಡದಿರುವಲ್ಲಿ ಊಷ್ಟ್ರನಂಥವ ನೀನು
ಬಡವ ಬಲ್ಲಿದನೆನ್ನದೆ ಬಿಡದೆ ಸರಿವೆರಸಿದ್ದು
ತಡೆಯದೆ ಸರ್ವ ವ್ಯಾಪಾರ ಮಾಡುವ
ಕಡು ದಯಾಸಾಗರ ಗೋಪಾಲವಿಠಲ
ನುಡಿದೆನೊ ನಾ ನಿನ್ನಲ್ಲಿದ್ದ ಗುಣಗಳಿಗೆ ೩

ಅಟ್ಟತಾಳ

ಆಳುಗಳಿಂದೊಂದು ಅಪರಾಧ ಬಂದರೆ
ತಾಳಿಕೊಂಡವ ಸ್ವಾಮಿ ಎನಗೆ ಕಾಣೊ
ಊಳಿಗವನ್ನು ಕೊಂಡು ಫಲ ಕೊಟ್ಟರಾಯಿತೆ
ಹೇಳಯ್ಯ ನಿನ್ನ ಸ್ವಾಮಿತ್ವ ಪೂರ್ಣತೆಯನ್ನು
ಊಳಿಗವನೆ ಮಾಡಿ ಫಲ ಬೇಡಿಕೊಂಬಂಥ
ಆಳು ನಾನಾಹುದಿಲ್ಲ ಯೋಚನೆ ಏತಕೆ
ವೇಳೆ ಸಮಯ ನೋಡಿ ಕೇಳಲಿಲ್ಲೆಂದರೆ
ವೇಳೆ ಯಾವುದು ನೋಡೊ ಭಕ್ತಬೇಡುವುದಕ್ಕೆ
ಕೇಳೆನ್ನ ಸ್ವಭಾವ ನಿನ್ನ ಭಕ್ತರಿಗೊಂದು

ಆಲಾಪ ಬಂದರೆ ಹೇಳಿಕೊಂಬುವುದುಂಟು
ಪಾಲಸಾಗರಶಾಯಿ ಗೋಪಾಲವಿಠಲ
ಪಾಲಿಸಬೇಕೆನ್ನ ಎಷ್ಟರ ಮಾತಯ್ಯ ೪

ಆದಿತಾಳ

ಎನ್ನದು ಸಾಕಾಗಿ ಇನ್ನೊಂದು ಕೊಡು ಎಂದು
ನಿನ್ನ ಬೇಡುವುದಿಲ್ಲ ಘನ್ನ ದಯಾನಿಧೆ
ನಿನ್ನ ಭಕುತಜನಕಿನ್ನೊಂದು ದುರ್ಘಟ
ಬನ್ನ ಬಂದರೆ ನಿನ್ನ ಬೇಡುವುದು ಬಿಡೆ
ಇನ್ನು ಅಪರಾಧವನ್ನು ಮೊದಲು ಮಾಡಿ
ಎನ್ನ ನೀ ದಣಿಸಿದರಿನ್ನಂಜುವನಲ್ಲ
ಸಣ್ಣಪರಾಧಕೆ ಕಣ್ಣಿಗೆ ತೋರದೆ
ಮುನ್ನಡಗುವುದೆ ಚಿನ್ಮಯ ದೇವ
ಪನ್ನಗಶಯನ ಗೋಪಾಲವಿಠಲ ಕೃಷ್ಣ
ನಿನ್ನವರ ದಯವಿರೆ ಇನ್ನೇನು ಮಾಳ್ಪೆಯೊ ೫

ಜತೆ

ಏನು ಬಂದರೆ ನಿನ್ನ ನಾನು ಬಿಡುವುನಲ್ಲ
ಮಾನ ನಿನ್ನದೊ ಜಾಣ ಗೋಪಾಲವಿಠಲ

೧೮

ಸುಳಾದಿ

ಧ್ರುವತಾಳ

ಕಾಯಕ್ಲೇಶವಬಡಿಸಿ ಕಂಡವರಿಗೆ ಹಾರೈಸಿ
ಸಾಯಾಸಬಟ್ಟು ನಾನಾಸಾಧನವನ್ನು ಮಾಡಿ

ಕಾಯ ನಿನ್ನ ಪ್ರೀತಿ ಆಯಿತೊ ಎಂದು ಎನ್ನ
ಸಾಯಾಸಕೆ ಇನ್ನಾರು ಸರಿಯಿಲ್ಲ ಎಂದುಕೊಂಬೆ
ನ್ಯಾಯವೊ ಅನ್ಯಾಯವೊ ನಾನರಿತವನಲ್ಲ
ಆಯವ ನೀನೆ ಬಲ್ಲೆ ಅವರವರದು
ಜ್ಯೋಯಿಸಿಯ ಧರ್ಮವು ಆಗುವದ್ಯಾಗೊ ಕಡೆಗೆ
ಮಾಯಮಾಡಲಿಬೇಡ ಮಾರಮಣ ಎನ್ನೊಡನೆ
ನ್ಯಾಯವೆಂದು ತಿಳಿದಿಪ್ಪೆ ನಾನು ಮಾಡುವ ಧರ್ಮ
ನ್ಯಾಯವೆಂಬೋದು ನೀನನ್ಯಾಯವ ಮಾಡುವಿನ್ನು
ನಾಯಕ ಕೇಳು ನಾ ಅನ್ಯಾಯ ಒಂದಾದ್ದೆಲ್ಲ
ನ್ಯಾಯವಾಗಿ ತೋರೋದು ನಿನ್ನ ಚಿತ್ತದಲ್ಲಿ
ಮಾಯಾರಹಿತ ನಮ್ಮ ಗೋಪಾಲವಿಠಲ
ದಾಯಿಗರಿಗೊಪ್ಪಿಸದೆ ಆಯವರಿತು ಪೊರೆಯೊ ೧

ಮಠ್ಯತಾಳ

ನಿನ್ನವನೆಂತೆಂದು ಪೇಳಿಕೊಂಬುವುದಕ್ಕೆ
ಇನ್ನಿತಾದರು ಸಾಧನವೆನ್ನಲಿಲ್ಲ
ನಿನ್ನವರಲ್ಲಿ ಭಕುತಿ ಇನ್ನು ಮೊದಲಿಗೆ ಇಲ್ಲ
ನಿನ್ನ ವಾರುತೆಯಲ್ಲಿ ನಿನ್ನ ಕೀರುತಿಯಲ್ಲಿ
ನಿನ್ನ ದಾಸರು ಎಲ್ಲಿ ಆನೆಲ್ಲಿ ನರಗುರಿಯು
ಬಣ್ಣಗೆಟ್ಟವನಯ್ಯ ಬರಿದೆ ನಿನ್ನವನೆಂದು
ನನ್ನೊಳಗೆ ನಾನು ಮದಸೊಕ್ಕಿ ತಿರುಗಿ
ಧನ್ಯನೆಂದುಕೊಂಡು ಧೈರ್ಯದಲ್ಲಿ ಇಪ್ಪೆ
ನಿನ್ನ ಚಿತ್ತದಲಿ ಹೊಂದಿನ್ನು ನೀನೆ ಬಲ್ಲೆ
ಅನ್ಯ ದೈವರಗಂಡ ಗೋಪಾಲವಿಠಲ
ನಿನ್ನ ದಯಾರಸವೊ ಇನ್ನೊಂದನರಿಯೆ ೨

ರೂಪಕತಾಳ

ಹಾಡಿ ಸುಖಿಪರು ಕೆಲರು ಬೇಡಿ ಸುಖಿಪರು ಕೆಲರು

ಮಾಡಿ ಸುಖಿಪರು ಕೆಲರು ನೀಡಿ ಸುಖಿಪರು ಕೆಲರು
ನೋಡಿ ಸುಖಿಪರು ಕೆಲರೊಡನಾಡಿ ಸುಖಿಪರು ಕೆಲರು
ನಾಡ ಜೀವರಿಗೆ ನಾನಾ ಕುಸಾಧನೆ ಉಂಟು
ಆಡುವ ನಾನಲ್ಲ ಬೇಡುವ ನಾನಲ್ಲ
ಪಾಡುವ ನಾನಲ್ಲ ಕಾಡುವ ನಾನಲ್ಲ
ನೀಡುವ ನಾನಲ್ಲ ಮಾಡುವ ನಾನಲ್ಲ
ಮಾಡಿಸಿ ಮಾಡುವ ಸಾಧು ಜೀವರ ಸಂಗ
ಕೂಡಿ ಒಡನಾಡಿನ್ನು ನೋಡುವ ಭಾಗ್ಯವು
ಬೇಡಿ ಹಾರೈಸಿ ನಾ ಬೆನ್ನು ಬಿದ್ದೆನು ದೇವ
ರೂಢಿಗಧಿಕ ನಮ್ಮ ಗೋಪಾಲವಿಠಲ
ಈಡು ಇಲ್ಲದ ದೈವ ಮಾಡು ಎನಗೆ ಕೃಪೆಯ ೩

ಝಂಪೆತಾಳ

ಸ್ನಾನ ಸಂಧ್ಯಾನ ಜಪತಪದಿ ಅನುಷ್ಠಾನ
ದಾನ ಸತ್ಕರ್ಮಂಗಳಲ್ಲಿ ಎನಗೆ
ಏನಾಯಿತು ಇಷ್ಟೆ ಸಾಕೆಂಬ ವೈರಾಗ್ಯ
ವನು ಕೊಡದಿರು ಎನಗೆ ಕರ್ಮಂಗಳಲ್ಲಿ
ಹೀನರ ಸಂಗದಲ್ಲಿ ಇಟ್ಟು ಎನ್ನನು ಬಹು
ದಿನಗಳು ಬದುಕಿಸೋಕಿಂತ ಹರಿಯೆ
ಜ್ಞಾನಿಗಳೊಡನೊಂದು ದಿನ ಬದುಕಿದುದಕೆ ಸ-
ಮಾನ ಉಂಟೇನಯ್ಯ ಸರ್ವೋತ್ತಮ
ಮಾನಿಸ ಜನ್ಮವು ಮೇಲೆ ವೈಷ್ಣವನಾಗಿ
ಶ್ರೀನಾಥ ಸೃಜಿಸಿದೆಯೊ ಅವನಿಯೊಳಗೆ
ಕಾಣೆನೊ ನಾನಿದಕೆ ತಕ್ಕ ಸಾಧನಗಳು
ನೀನೆ ಗತಿ ಎನಗೆ ಮುಕುಂದಾನಂದ
ನೀನು ಕರುಣಿಸಿದರೆ ಸಕಲ ಸಾಧನ ತನ್ನಿಂ
ತಾನೆ ಆಗುವುದಯ್ಯ ತಪ್ಪಿಸದಲೆ
ಹಾನಿ ಲಾಭವು ಎರಡು ಎನಗೆ ಬಂದರು ನೀ
ಧ್ಯಾನಿಸಿ ನಿನ್ನ ತಿಳಿವೊ ಜ್ಞಾನನೀಯೊ

ದೀನರಕ್ಷಕ ರಂಗ ಗೋಪಾಲವಿಠಲ
ನೀನೆ ಗತಿ ನಿನ್ನ ಬಿಡೆ ನಿತ್ಯತೃಪ್ತ ೪

ತ್ರಿಪುಟತಾಳ

ನಾನು ದೋಷಕಾರಿಯೊ ನೀ ನಿರ್ದೋಷನು ದೇವ
ನಾನು ದುಃಖಭರಿತ ನೀನು ಸುಖಪೂರ್ಣ
ನಾನು ಅಜ್ಞಾನಿಯೊ ನೀನು ಜ್ಞಾನಪೂರ್ಣ
ನಾನು ಅಲ್ಪಗುಣನೊ ನೀನು ಗುಣಪೂರ್ಣ
ನಾನು ಅಸ್ವತಂತ್ರ ನೀನು ಸ್ವತಂತ್ರನೊ
ನಾನು ನಾಶವು ಇಲ್ಲಾ ನೀನು ನಾಶವು ಇಲ್ಲ
ನೀನು ಅನಾದಿ ನಿತ್ಯ ನಾನು ಅನಾದಿ ಭೃತ್ಯ
ನೀನು ಎನಗೆ ಬೇಕು ನಾನು ನಿನಗೆ ಬೇಕು
ನಾನೆಂಬುವರು ಬೇರೆ ಇಲ್ಲದಿದ್ದರಾಯಿತೆ
ನೀನೆಂಬುವುದು ಇನ್ನೂ ಆರು ಬಲ್ಲರು ದೇವ
ಜ್ಞಾನಿ ಇವನೆಂದರೆ ಅಜ್ಞಾನಿ ಬ್ಯಾರುಂಟು
ದಾನಿ ಇವನೆಂದರೆ ದೀನನು ಬ್ಯಾರುಂಟು
ಜಾಣ ಇವನೆಂದರೆ ಜಡಮತಿಯೆಂಬುವರು ಉಂಟು
ಮಾನಿ ತಾನೆನೆ ಅಪಮಾನಿ ತಾ ಬ್ಯಾರುಂಟು
ಹೀನ ಎಂಬೊ ಅಹಂಕಾರವದು ಎನಗೆ ಇರಲಿ
ನಾನೆ ಕರ್ತನೆಂಬೋದೆನಗೆ ಎಂದಿಗೆ ಬೇಡ
ನಾನೆಂಬ ಅಸ್ವಾತಂತ್ರ್ಯ ವಸ್ತುವಿದ್ದಕಾರಣ
ನೀನೆಂಬ ಸ್ವಾತಂತ್ರ್ಯ ಪ್ರಕಟವಾಯಿತು ರಂಗ
ಏನೆಷ್ಟು ಸೌಭಾಗ್ಯವಿದ್ದ ಕಾಲಕು ನಿನಗೆ
ದಾನ ಬೇಡುವ ಜೀವರಿಂದಲೆ ಶೋಭಿತ
ನೀನೆ ನಿನಗೆ ಬೇರೆಕೊಟ್ಟು ಕೊಂಡಾಡೆಯಾ
ನೀನೆ ನಿನಗೆ ತುತಿ ಮಾಡಿಕೊಂಡೆಯಾ ದೇವ
ಶ್ರೀನಾಥ ಬಾರಯ್ಯ ಗೋಪಾಲವಿಠಲ
ಏನಾದರು ನಿನಗೆ ಎನಗೆ ಬಿಟ್ಟದ್ದು ಅಲ್ಲ ೫

ಅಟ್ಟತಾಳ

ಎಂಟು ಸೇರಿನದೊಂದು ಘಂಟೆಯ ನಿರ್ಮಿಸಿ
ಒಂಟಿಲಿ ಇಟ್ಟನ್ನು ಹಿಡಿದು ಬಾರಿಸಿದರೆ
ಘಂಟೆಯಲ್ಲಿದ್ದ ನಾದ ಘಂಟೆಯಿಂದದ ತಿಳಿವುದೆ
ಎಂಟು ತೊಲೆಯದೊಂದು ಸೊಂಟ ನಾಲಿಗೆಯನ್ನು
ಉಂಟಾದರಾಯಿತೆ ಘಂಟೆ ಶೋಭಿಸುವುದು
ಘಂಟೆಯಂತೆ ನೀನು ನಾಲಿಗೆಯಂತೆ ನಾನು
ಘಂಟೆಯೊಳಗೆ ನಾಲಿಗಡಕವಾಗಿಪ್ಪೋದು
ಬಂಟ ನಾ ನಿನ್ನೊಳು ಅಡಕವಾಗಿಪ್ಪೆನು
ನಂಟತನವು ನಿನಗೆನಗೆ ಹೀಗುಂಟು ವೈ-
ಕುಂಠ ಮೂರುತಿ ರಂಗ ಗೋಪಾಲವಿಠಲ
ಬಂಟರಿಂದಲೆ ನಿನ್ನ ಭಾಗ್ಯ ಶೋಭಿಸುವುದು ೬

ಆದಿತಾಳ

ಸಿರಿವಂತ ನೀನೆಂದು ಧರೆಯೊಳುತೋರಿದ
ಪರಮಭಕುತನಾದ ದರಿದ್ರ ಸುದಾಮನೆ
ಹರಿ ನಿರ್ದೋಷ ನೀನೆಂದು ಸ್ಮರಿಸಿ ಜಗದೊಳಗೆ
ಹರಹಿದ ಅಜಮಿಳ ಪರಮ ದೋಷಕಾರಿಯೆ
ಹರಿ ಸರ್ವೋತ್ತಮನೆಂದು ನರಗೆ ಅಂಜದಲಿದ್ದ
ತರಳ ಪ್ರಹ್ಲಾದ ಪರಮ ಛಲ ಪಾತಕಿಯೆ
ಹರಿಕಾರ್ಯವ ಅರಿತು ಅಸುರಗೆ ರಾಜ್ಯವ ಸೋತು
ಧರೆ ಚರಿಸಿದ ಪಾಂಡವರು ಅಜ್ಞಾನಿಗಳೆ
ಹರಿ ನೀ ಭಕ್ತರ ವಶಕರನು ಎಂಬುವುದಕೆ
ಪಿರಿದು ಕಾಲಕಟ್ಟಿದ ದುರುಳಳೇನಾ ಯಶೋದೆ
ಹರಿ ನಿನ್ನ ಶರಣರ ಸಿರಿಯು ಇನ್ನೆಂತೆಂತು
ಸರಿಗಾಣೆ ನಾ ನಿನ್ನ ಶರಣರಿಗೆ ನಮೋ ಎಂಬೆ
ಪರಮದಯಾಳುವೆ ಗೋಪಾಲವಿಠಲ
ಮೊರೆಹೊಕ್ಕೆನಿನಗಿನ್ನು ನೆರೆ ಬದುಕಿಸನುಗಾಲ ೭

ಜತೆ

ನಿನ್ನ ಚಿತ್ತದಲಿದ್ದದೆನಗೆ ಮಾಡಿಸು ದೇವ
ಇನ್ನೊಂದು ಆನೊಲ್ಲೆ ಗೋಪಾಲವಿಠಲ

೧೯

ಸುಳಾದಿ

ಧ್ರುವತಾಳ

ಕೇಳಯ್ಯ ದೇವ ನಿನ್ನ ಊಳಿಗನ ಬಿನ್ನಹ
ಏಳಿಲ ಮಾಡದಲೆ ಆಲಿಸಿ ಹರುಷದಿ
ತಾಳಲಾರೆನೊ ತಾಯಗರ್ಭದೊಳಿಹ ದುಃಖ
ಹೇಳಿಕೊಳ್ಳಲು ಜಲ ಪ್ರಳಯವಾಗಿಹುದು
ಏಳು ಪ್ರಾಕಾರ ಹೊಲೆಯ ಚೀಲದೊಳಗೆ ಹಾಕಿ ಬ-
ಹಳ ಪರಿಲಿ ಕುದಿದು ಬಾಳುವೆನು ದೇವ
ಕೋಳಿ ಕಲ್ಲನು ತಿಂದು ಗೋಳಿಟ್ಟು ಕೂಗಿದಂತೆ
ಬಾಳಿದೆನಯ್ಯ ಗರ್ಭದೊಳಿಂಥ ಸುಖದಿಂದ ವೇಳ್ಯವ
ಕಳೆದೆ ಹೀಗೆ ಏಳ್ಳೆದು ಮಾಸ ಮೇಲೆ ಪುಟ್ಟಿದೆ ರಂಗ
ಮೇಳವಗಟ್ಟಿ ಬಂಧುಗಳು ಎಲ್ಲರು ಬಂದು
ಕೇಳಿ ಮುಹೂರ್ತ ನಾಮಕರಣಗಳೆಲ್ಲನು ಮಾಡಿ
ಪಾಲಿಸಿದರಾಗೆ ಜೋಗುಳಪಾಡುತಲಿ
ಶೂಲೆ ಎಂದು ಉದರ ಚಾಲುವರಿದರಿನ್ನು
ಪಾಲನೆರೆವರಯ್ಯ ಬಾಲ ಹಸಿದನೆಂದು
ಆಲಸ್ಯದಿಂದ ಹಸಿದು ಅಳುವುತ್ತಿರೆ ಖಾರ
ಗಳನು ಹಾಕುವರು ತಿಳುವಿಕೆ ಇಲ್ಲದಲೆ
ಸೂಳೆಯ ಗುಡಿಸಿಲಂತೆ ಬಾಳಿವ್ಯಾಯಿತೆನ್ನದು
ಕೇಳಯ್ಯ ಹರಿ ಕರುಣಾಳುಗಳರಸನೆ

ಆಲದೆಲೆಯಶಾಯಿ ಗೋಪಾಲವಿಠಲ
ಘಾಸಿಮಾಡದೆ ವಾಕು ಲಾಲಿಪುದು ಜೀಯ ೧

ಮಠ್ಯತಾಳ

ಅನಂತ ಅನಂತ ದೇಹ ಅನಂತ ಅನಂತ ಜನುಮ
ಅನಂತ ಅನಂತ ಬಂಧು ಅನಂತ ಅನಂತ ಬಳಗ
ಅನಂತ ಅನಂತ ಸತಿ ಅನಂತ ಅನಂತ ಸುತರು
ಅನಂತ ಅನಂತ ತಾಯಿ ಅನಂತ ಅನಂತ ತಂದೆ
ಅನಂತ ಅನಂತ ಪರಿಯಲಿ ಹೀಗೆ ಪುಟ್ಟಿ ಪುಟ್ಟಿ
ಘನ್ನ ಬಂಧನದೊಳಗಿನ್ನು ಬೆಳೆದೆನಯ್ಯ
ಎನ್ನದಾವುದೊ ಜಾತಿ ಎನ್ನದಾವುದು ಕುಲವೊ
ಎನ್ನದಾವುದೊ ಗೋತ್ರ ಎನ್ನವರಾವರು
ಇನ್ನಾರದು ಪಿಂಡ ಇನ್ನಾರಿಗುದಿಸಿತು
ಬನ್ನಭವದೊಳು ಇನ್ನು ಹೊರಳಿ ಹೊರಳಿ
ಮುನ್ನ ನೆಲೆಯ ದಾರಿಯನ್ನು ಕಾಣದೆ ಪೋದೆ
ಚಿನ್ಮುಮಯ ಮೂರ್ತಿ ಗೋಪಾಲವಿಠಲ
ಹುಣ್ಣು ಹುಣ್ಣಾದೆನು ಜನನ ಮರಣಗಳಿಂದ ೨

ತ್ರಿಪುಟತಾಳ

ಜನುಮ ಜನುಮದಲ್ಲಿ ಅನುವಾಗಿ ಉಂಡಂಥ
ಜನನಿಯ ಮೊಲೆಪಾಲು ಎಣಿಕೆಮಾಡಲು ಇನ್ನು
ಘನವಾದುವಯ್ಯ ಕ್ಷೀರವನಧಿಗಿಮ್ಮಡಿ
ಎಣಿಸಲೊಶವೆ ಎಲುವು ಚರ್ಮ ರಕ್ತ ಮಾಂಸ
ಕೊನೆಗಾಣದಾದೆ ಮೇರುವಿನ್ನಾಲ್ಕು ಮಡಿ
ಕ್ಷಣ ಕ್ಷಣಕೆ ದೇಹ ಪರಿಮಾಣದ ಚರ್ಮ
ಅನುವರಿತು ನೋಡಾ ಅವನಿಗಿಂದ್ಯೆದು ಮಡಿ
ದಣಿದೆನಯ್ಯ ನಾನಾ ಬವಣೆಯಿಂದಲಿನ್ನು
ಕೊನೆಗಾಣೆ ಕೊನೆಗಾಣೆ ಇನಿತು ಇಷ್ಟಷ್ಟೆಂದು

ಕುಣಿಯ ಒಳಗೆ ಬಿದ್ದ ಕುರುಡನಂತಲಿ ಇನ್ನು
ಒಣಗಿ ಬಾಯಾರಿ ಆಲ್ಪರಿದೆನು ಅನುಗೆಟ್ಟು
ಕನಸಿನಾಗಿನ ಗಂಟಿನಂತೆ ಈ ಕಾಯವು
ಎನಗೆ ನಂಬುಗೆಯಿಲ್ಲ ಎನ್ನವ ಮೊದಲಿಲ್ಲ
ಅನುಗೆಟ್ಟೆ ಅನುಗೆಟ್ಟೆ ಅನಿಮಿತ್ತಬಾಂಧವ
ತನು ಸಂಬಂಧಿಗಳು ತಮ್ಮತ್ತಲೆಳೆವರು
ನಿನಗೆ ನಾ ಮೊರೆಯಿಟ್ಟೆ ಗೋಪಾಲವಿಠಲ
ನಿನಗೆ ನಾ ನಿನ್ನವನಾಗದಾದೆ ೩

ಅಟ್ಟತಾಳ

ಸುತನಾದೆ ನಾ ಮಾತಾಪಿತರಿಗೆ ಗತಿಯನ್ನು
ಪತಿಯಾದೆ ನಾ ನೋಡು ಸತಿಯಳಿಗೆ ಇನ್ನು
ಪಿತನಾದೆ ನಾ ಎನ್ನ ಸುತರಿಗೆಲ್ಲ ಇನ್ನು
ಇತರ ಜನರಿಗೆ ಬಂಧುಬಳಗವಾದೆ
ಮತಿಗೇಡಿ ನಾ ನಿನ್ನ ಗತಿಗೆ ದಾವದು ಅದೆ
ಪಥ ತಿಳಿಯದು ಜಗತ್ಪತಿ ನಿನ್ನ ಪೊಂದೋದು
ಪತಿತಪಾವನ ರಂಗ ಗೋಪಾಲವಿಠಲ
ಹಿತದಿಂದಲಿ ನಿನ್ನ ಸತತ ಭೃತ್ಯನೆನಿಸೊ ೪

ಆದಿತಾಳ

ನಿನ್ನವರ ಸೇವೆ ದೊರಕದು ಆವಾಗಲೆ ನಾ
ನಿನ್ನವನಾಗುವೆ ಆವುದು ತಪ್ಪಲು
ಸಾವುದು ತಪ್ಪದು ಆವಲ್ಲಿ ಇದ್ದರು
ಕಾವುವ ನೀನಯ್ಯ ಆವುದುವಲ್ಲೆ ನಿನ್ನವನೆಂದೆನಿಸೆನ್ನ
ಗೋವಳರೊಡೆಯ ಗೋಪಾಲವಿಠಲರೇಯ
ಭಾವಶುದ್ಧ ನೀ ಎಂಬೊ ಭಕುತಿಯನೀಯಿನ್ನು ೫

ಜತೆ

ಸಂಸಾರವೆಂಬಂಥ ಶರಧಿಯ ದಾಟಲು
ಕಂಸಾರಿ ನಿನ್ನ ಪಾದಕೆ ನೀ ಗತಿ ಎನ್ನು ?

೨೦

ಗೋಪಾಲವಿಠಲ ನೀ ಕಾಪಾಡೊ ಎನ್ನನು
ಅಪಾರ ಜನುಮದಿ ಪೊಂದಿ ಇಪ್ಪೆ ನಿನ್ನ ಪ.

ಉದಿತ ತರಣೀನಿಭ ಪದಪದ್ಮ ನಿನ್ನಯ
ಹೃದಯದೊಳಗಿರಿಸಿ ಮುದದಿಂದ ಧ್ಯಾನಿಪ
ಸದಯುಗಳ ಪಾದಪದುಮಸೇವೆಯನು
ಒದಗಿ ಪಾಲಿಸೊ ಶಶಿವದನ ಸಂ(ಕಂ)ಸದನನೆ ೧

ವಾಸುದೇವನೆ ಎನ್ನ ದೋಷಿಯೆಂತೆಂದರೆ
ಆಸರಿನ್ನ್ಯಾರು ನಿನ್ನ ದಾಸರದಾಸಗೆ
ದಾಸವಿನುತ ಹೀಗುದಾಸೀನ ಮಾಡಲು
ದಾಸಜನರು ನಿನ್ನ ಲೇಶವು ಮೆಚ್ಚರು ೨

ಪಿರಿಯರೆಲ್ಲರು ನಿನ್ನ ಚರಣವ ಪೂಜಿಸಿ
ಪರಮಾನುಗ್ರಹ ಪರಿಪಾಲಿಸಿಪ್ಪರೆನ್ನ
ನಿರುತದಿಬೇಡುವೆ ಗೋಪಾಲವಿಠಲ ಶ್ರೀಲೋಲನೆ
ದೊರೆಯೆ ನಿನ್ನ ಮೂರುತಿ ಬರವೆನ್ನ ಮನಸಿಗೆ ೩

೨೧

ಗೋವಿಂದ ವಿಠಲ ನಿನ್ನ ವಂದಿಸುವೆ ಸ್ವಾಮಿ
ನೀ ಒಲಿದು ರಕ್ಷಿಸುವುದು ಜೀವಿ ಇವ ಬಹುಕಾಲ
ಸಾವ ಸಾವ ನಿನ್ನ ಸೇವೆಯೊಳಗೆ ಇಟ್ಟು ಕಾವುದು ನಿರುತ ಪ.

ಆವ ಈ ಯುಗದಲ್ಲಿ ನಿನ್ನ ವಿಷಯರಾಗಿ
ಈವ ಸುಜನರು ಸ್ವಲ್ಪರು ತಾ ವ್ಯಾಪಿಸಿ ಇಹರು
ಅಸುರರೆ ಬಹುಳಾಗಿ ಆವದವಸ್ಥೆಗಳಲಿ
ನೀ ವರವನು ಕಲಿಗೆ ಇತ್ತ ಕಾರಣ ಉಪಜೀವರ ವ್ಯಾಪಾರ
ಈ ವಿಧದಲಿ ತಳೆದು ನಿನ್ನ ಹುಡುಕುತಲಿನ್ನು
ಜೀವಿ ಸಾತ್ವಿಕನು ಮೊರೆಯಿಡಲು ಬಿನ್ನಯಿಸಿದೆನೊ ೧

ಏನು ಸಾಧನವನು ಖೂಳವನು ಕಂಡಿನ್ನು
ನೀನು ವಂದಿಸಿವೆಂದರೆ ಜ್ಞಾನಭಕುತಿ ಉಳ್ಳ
ಜ್ಞಾನಿಗಳಲಿವಗೆ ನಾನು ಕಂಡೆನು ಭಕುತಿಯ
ಕ್ಷೋಣಿಯಲಿ ಭಕುತಿ ನಿನ್ನಲಿ ಪುಟ್ಟಲಿಬಹುದು
ಜ್ಞಾನಿಗಳ ದುರ್ಲಭ ನೀನು ಒಲಿವುವ ಅವಗೆ
ನಾನವರಲಿ ಭಕುತೀವೆ ನಾನಾಸಾಧನ ಫಲವಿದೆ ನೋಡಾ ೨

ಪ್ರಾರ್ಥಿಸುವೆ ನಾ ನಿನ್ನ ಪ್ರೇರಣೆಯ ಅನುಸಾರ
ಕೀರ್ತಿ ನಿನ್ನದು ಜಗದೊಳು ಪಾತ್ರ ಇವನೆಂದು
ನಿನ್ನ ಚಿತ್ತದಲಿ ಇತ್ತೆ ಸಾರ್ಥಕನ ಮಾಡು ಚೆಂ ಸ್ವಾ ?
ಕೀರ್ತನೆಯ ಮಾಡಿಸು ನಿನ್ನ ಪರವಾಗಿ ನಿಜ
ಸ್ಫೂರ್ತಿಸಖರಂಗ ಗೋಪಾಲವಿಠಲ ಶ್ರುತಿ
ಶಾಸ್ತ್ರಾರ್ಥವನುಸಾರ ಪ್ರಾಪ್ತಿ ನೀನಾಗಿವಗೆ ೩

೨೨

ಸುಳಾದಿ

ಧ್ರುವತಾಳ

ಚಿನುಮಯಮೂರುತಿ ಚಿತ್ರವಿಚಿತ್ರನೆ
ಘನಮಹಿಮ ಗಂಭೀರ ಕೀರ್ತಿದೋಷದೂರ
ಅನಿಮಿತ್ತ ಬಂಧು ದ್ರೌಪದಿಮಾನದೊಡೆಯ

ಗುಣಗಣಭರಿತ ಸೃಷ್ಟ್ಯಾದ್ಯಷ್ಟಕರ್ತನೆ
ಸನಕಾದಿಗಳೊಡೆಯ ಜ್ಞಾನಾನಂದಪೂರ್ಣ
ದಿನಕರಶತತೇಜ ದೀನಜನರಪಾಲ
ದನುಜಮರ್ದನರಂಗ ಧರ್ಮಜ ನುತಪಾಲ
ತನುಮನದೊಡೆಯ ಏ ತಾತ ಭಕ್ತವತ್ಸಲ
ಅಣೋರಣೀಯಾನ್ ಎಂಬೊ ಶ್ರುತಿಪಾದ್ಯ ಅಪ್ರಾಕೃತ
ಜನನಮರಣರಹಿತ ಜಾನಕಿರಮಣನೆ
ಕೊನೆಗಾಣರು ನಿನ್ನ ಗುಣ ಎಣಿಸಿ ಅಜಭವರು
ಇನಿತು ವರ್ಣಿಸೆ ನಿನ್ನ ಎನಗಳವಲ್ಲವು
ನಿನಗೆ ನೀ ಕರುಣಿಸಿ ನಿನ್ನ ಭಕ್ತರನ್ನ
ಘನತೆ ಮಾಡುವೆ ಎಣೆಯಾರು ನಿನಗಿನ್ನು
ದಿನಕರ ಶಶಿಗಳು ನಿನ್ನ ಆಜ್ಞೆಯಿಂದ
ದಿನವ ಚರಿಸುತಲಿ ನಿನ್ನ ಸೇವಿಸುವರೊ
ನಿನಗೆ ಸಮವಸ್ತು ಇಲ್ಲ ಗೋಪಾಲವಿಠಲ
ನಿನಗೊಬ್ಬರು ಸಮರಿಲ್ಲ ಸರ್ವೋತ್ತಮ ೧

ಮಠ್ಯತಾಳ

ಭಕ್ತವತ್ಸಲ ನೀನೆಂಬುವುದಕಿನ್ನು
ಭಕ್ತರು ಕರೆಯೆ ಬಂದೊದಗೋದೆ ಸತ್ಯ
ಸಕಲದೋಷದೂರ ನೀನೆಂಬುವುದಕಿನ್ನು
ಸಕಲದೋಷಿ ಅಜಮಿಳನ ಕಾಯ್ದುದೆ ಸತ್ಯ
ಸಕಲಜ್ಞಾನಭರಿತ ನೀನೆಂಬುವುದಕ್ಕೆ
ಭಕ್ತವಾಲ್ಮೀಕನ್ನ ಉಕುತಿನಿತ್ತದ್ದೆ ಸತ್ಯ
ಸಕಲಸಮರ್ಥನು ನೀನೆಂಬುವುದಕ್ಕೆ
ಭಕ್ತಕುಬ್ಜೆಯನ್ನೆ ಚಕಿತಮಾಡಿದ್ದೆ ಸತ್ಯ
ಸಕಲಸುಖಪೂರ್ಣ ನೀನೆಂಬುವುದಕ್ಕೆ
ಸಕಲ ಪದಾರ್ಥದಿ ಸಾರತೋರೋದೆ ಸತ್ಯ
ಲಕುಮಿರಮಣ ನಮ್ಮ ಗೋಪಾಲವಿಠಲ
ಭಕ್ತರಿಚ್ಛೆಯಗಾರ ಭಕ್ತರ ಮನದೊಡೆಯ ೨

ತ್ರಿಪುಟತಾಳ

ಇನ್ನಾವ ಜನ್ಮದ ಎನ್ನ ಸಾಧನೆಯೊ
ಇನ್ನಾವ ಜನ್ಮದ ಸಜ್ಜನ ಸಂಗತಿಯೊ
ಇನ್ನಾವ ಜನ್ಮದ ಶ್ರವಣ ಮನನದ ಫಲವೊ
ಇನ್ನಾವ ಜನ್ಮದ ದಾನ ಧರ್ಮದ ಫಲವೊ
ಇನ್ನು ನಿನ್ನನು ಏನು ಅರಿಯದಲಿದ್ದೆನ್ನ
ಘನ್ನ ಮಾಡಿನ್ನು ಅರಿದು ನಿನ್ನ ಪಾದಸುಖವನ್ನು ಸೇವಿಸುವ
ಚೆನ್ನದಾಸರಮನೆ ಕುನ್ನಿ ಎನಿಸಿ ಎನ್ನ
ನಿನ್ನ ಅಂಕಿತವಿತ್ತೆ ನಿನ್ನ ಕರುಣರಸಕ್ಕಿನ್ನು ಸರಿ ಉಂಟೆ
ಎನ್ನಪ್ಪ ಎನ್ನಯ್ಯ ಎನ್ನ ಸಾಕುವ ದೊರೆಯೆ
ನಿನ್ನ ಪಾದದ ಮೇಲೆ ಎನ್ನ ಶರೀರವನ್ನು ನಿವಾಳಿಸೆ
ಇನ್ನು ಬಿಡುವೆನಯ್ಯ ನಿನ್ನಂತೆ ಸಾಕುವರಿನ್ನೊಬ್ಬರಿಲ್ಲವೊ
ನಿನ್ನ ತೊತ್ತಿಗೆ ತೊತ್ತು ತೊಂಡ ನಾನಾಗುವೆ
ಇನ್ನು ಅಜನು ನಿನ್ನ ನಾಮಬಲದಮೇಲೆ ನಿನ್ನ ತೊತ್ತುಕೊಂಬಿ
ಅನ್ಯಾರನಲ್ಲಾಳು ಅನ್ನ ಭಕ್ಷ್ಯ ಉಳ್ಳಮನೆಯಿಂದ ಎಬ್ಬಿಟ್ಟು
ಕಣ್ಣಿಯ ಕಟ್ಟೊರಮನೆಯ ಹೊಗಿಸಬೇಡ
ನಿನ್ನ ಪಾದವನಂಬೆ ಅನ್ಯರಿಗಿತ್ತರೆ
ನಿನ್ನದೆ ಬಿರುದಿನ್ನು ಎನ್ನದೇನಾಯಿತು
ಪುರ್ಣ್ಯೋತ್ತಮ ನಮ್ಮ ಗೋಪಾಲವಿಠಲರೇಯ
ಬೆನ್ನು ಬಿದ್ದೆನೊ ಬಲುಬಣ್ಣಗೆಟ್ಟ ತೊತ್ತು ೩

ಅಟ್ಟತಾಳ

ಭೂತ ಹತ್ತಿದವ ಯಾತ್ಯಾತರೊಳಗಿನ್ನು
ನೀತವರಿಯದಲೆ ತಾ ತಿರುಗಿದಂತೆ
ನಾತ ಹತ್ತಿದ ಶ್ವಾನ ಜೋತು ಮುಖವು ಇರೆ
ಪಥಬಿಟ್ಟೆನ್ನ ಮಾತು ಕೇಳುವುದೆ
ವಾತಜಾತನ ಪ್ರೀತಿ ನಿನ್ನಲ್ಲಿ ಶಾಶ್ವತವಾದವ ನಿನ್ನ
ಆ ತೆರದಿ ಬಿಡುವೆನೆ ಕೌತುಕವಲ್ಲ ಮನೋವಾಕ್ಕಾಯದಿ ಮಾಡಿಪ್ಪ

ದಾತರದಾತ ಎನ್ನುತ್ತಮ ಮೂರುತಿ
ಈ ತೆರದಿ ನೀ ಪ್ರೇರಕನಾಗಿ ಅನ್ಯಥಕ್ಕೆರಗಿಸುವುದು
ನೀತವಲ್ಲವೊ ದೇವ ಬಾತೀಗೆ ಬಾರದ್ದಿನ್ಯಾತಕ್ಕೆ ಜನ್ಮವು
ತಾ ತೆಗೆದಕೊದನ್ನ ? ಈ ದೇಹ ನಿನ್ನಲ್ಲಿ
ಪ್ರೀತಿ ಒಂದಿದ್ದರಾಯಿತೆ ಸಾಕು ಶಾ-
ಶ್ವತ ದೈವವೆ ಗೋಪಾಲವಿಠಲ
ಸೋತೆನೊ ವಿಷಯದ ಯಾತನೆ ಬಿಡಿಸೊ ೪

ಆದಿತಾಳ

ನಿನ್ನಲ್ಲಿ ಭಕುತಿಯ ಇನ್ನುನಿಯ್ಯದಲೇವೆ
ಅನಂತ ಭಾಗ್ಯವನಿತ್ತರೆ ನಾನೊಲ್ಲೆನೊ
ನಿನ್ನಲ್ಲಿ ಭಕುತಿಯ ಚೆನ್ನಾಗಿ ಇತ್ತಿನ್ನು
ಅನ್ಯರಿಲ್ಲದ ಅರಣ್ಯದೊಳಿಡು ಲೇಸು
ಮನ್ನಣೆ ಮಾಡಿಸು ನಿನ್ನ ಬಲ್ಲವರಿಂದ
ಮನ್ನಣೆ ಆನೊಲ್ಲೆ ನಿನ್ನರಿಯದವರಿಂದ
ಹೊನ್ನು ಹೆಣ್ಣು ಮಣ್ಣು ಸಮವು ಮಾಡಿದಂಥ
ಪುಣ್ಯಾತ್ಮರಮನೆಯ ಕುನ್ನಿ ಎಂದೆನಿಸು
ಪನ್ನಗಶಯನ ಗೋಪಾಲವಿಠಲರೇಯ
ನಿನ್ನ ನಾ ಬಿಡೆನಯ್ಯ ಅನಂತಕಾಲದಲ್ಲಿ ೫

ಜತೆ

ಅನಂತ ಜನ್ಮಕ್ಕೆ ಅನಂತ ಮಾತಿಗೂ
ಅನಂತ ನೀನೆಗತಿ ಗೋಪಾಲವಿಠಲ

೨೩

ಉಗಾಭೋಗ

ತೀರಿತೆ ನಿನ್ನ ಸ್ಥಿತಿಸೃಷ್ಟಿಲಯ ವ್ಯಾಪಾರ

ಪೋರನೊಬ್ಬನಗಲಿಸಿ ಸೆಳೆದು ಒಯ್ದುದರಿಂದ
ಪೂರುತಿ ಆಯಿತೆ ನಿನ್ನ ಸಂಕಲ್ಪಕ್ಕೆ
ಕಾರುಣ್ಯನಿಧಿ ಕಪಟನಾಟಕನೆ
ಧಾರುಣಿಯೊಳಗವನ ಸೃಜಿಸಿ ಇಟ್ಟುದರಿಂದ
ಕೀರುತಿಯ ತಂದಿತ್ತ ಧರ್ಮದಲ್ಲಿ
ತೀರಿತೊ ಅವನ ಪುಣ್ಯ ತೋರಿತೊ ಮ್ಯಾಲಾವುದೊ
ತೋರದೆನಗೆ ಒಂದು ಆರಿಂದಾರೊ
ಭಾರವಾದರು ಬಲು ಪೊತ್ತಿದ್ದೆ ಎನ್ನೊಳಗೆ
ಕೀರುತ್ಯಪಕೀರುತಿನ್ನಾರದಯ್ಯ
ಭಾರ ಪೂರುತಿಯಾಯಿತೆ ಅವನ ಸಾಧನವೆಂಬೆನೆ
ತೋರುತದೆ ಮನಕೆ ಮತ್ತೆಲ್ಲಿ ಜನನ
ಭಾರ ನಿನ್ನದು ಎನ್ನ ಎಲ್ಲಿ ನೀನಿರಿಸಿದರು
ಸಾರಿ ಮೊರೆಯಿಡುವೆ ಲಾಲಿಸು ಬಿನ್ನಪ
ಭಾರತೀಶನೊಡೆಯ ಗೋಪಾಲವಿಠಲ
ಈ ರೀತಿ ಮಾಳ್ಪುದನರಿಯಲಿಲ್ಲ

೨೪

ದಯವಿರಲಿ ದಯವಿರಲಿ ದಾಮೋದರ ಪ.

ಸಯವಾಗಿ ಬಿಡದೆನ್ನ ಸಾಕುವ ಶ್ರೀಕೃಷ್ಣ ಅ.ಪ.

ಹೋಗಿ ಬರುವೆನಯ್ಯ ಹೋದಹಾಂಗೆಲ್ಲ
ಸಾಗುವವನಲ್ಲ ನಾ ನಿನ್ನ ಬಿಟ್ಟು
ತೂಗಿ ತೊಟ್ಟಿಲು ಕೊನೆಗೆ ಸ್ಥಳದಲ್ಲೆ ನಿಲ್ಲುವುದು
ಹ್ಯಾಗೆ ನೀ ನಡೆದಂತೆ ಹಾಗೆ ನಾ ನಡಕೊಂಬೆ ೧

ಇದ್ದಲ್ಲೆ ಎನ್ನನುದ್ಧರಿಪ ಶಕ್ತಿ ಅ-
ಸಾಧ್ಯ ನಿನಗೆಂದು ನಾ ಬಂದವನಲ್ಲ

ನದ್ಯಾದಿ ಕ್ಷೇತ್ರಮೂರ್ತಿಗಳಲ್ಲಿ ನಿಜ ಜ್ಞಾನ-
ವೃದ್ಧಜನರ ಹುಡುಕಿ ನಿನ್ನ ತಿಳಿಯಲು ಬಂದೆ ೨

ಸತತ ಇದ್ದಲ್ಲೆ ಎನ್ನ ಸಲಹೊ ಅದರೊಳಗಾಗಿ
ಅತಿಶಯವು ಉಂಟು ವಿಭೂತಿಯಲ್ಲಿ
ಗತಿಯು ಸಾಧನಕೆ ಅಭಿವ್ಯಕ್ತ ಸಂದರ್ಶನದಿ
ಸ್ಮೃತಿಗೆ ವಿಶೇಷ ಮಾರುತಿರಮಣ ನಿನ್ನ ೩

ನೋಡಿದೆನೆ ನಾ ನಿನ್ನ ನೋಡದೆ ಎಂದೆಂದು
ಪಾಡಿದೆನೆ ಆರಾರು ಪಾಡದೊಂದು
ಮಾಡಿದೆನೆ ಅರ್ಚನೆಯ ಮೀಸಲಾದುದು ಒಂದು
ಮೂಢಮತಿಯಲಿ ಮುಂದೆ ನಿಂದೆ ಕೈಮುಗಿದು ೪

ಬಂದೆನೊ ನಾನಿಲ್ಲಿ ಬಹುಜನ್ಮದ ಸುಕೃತ-
ದಿಂದ ನಿನ್ನ ಬಳಿಗೆ ಇಂದಿರೇಶ
ಒಂದು ಮಾತ್ರವು ಇಟ್ಟು ಸಕಲವು ಅರ್ಪಿಸಿದೆ
ಬಂಧನ ಕಡಿವ ಭಕುತಿಯು ಜ್ಞಾನ ನೀಡುವುದು ೫

ಬಿನ್ನಪವ ಕೇಳು ಸ್ವಾಮಿ ಎನ್ನನ್ನೊಬ್ಬನ್ನೆ ಅಲ್ಲ
ಎನ್ನ ಹೊಂದಿ ನಡೆವ ವೈಷ್ಣವರನ
ಇನ್ನವರಿಗೆ ಬಾಹೊ ದುಷ್ಕರ್ಮಗಳ ಕೆಡಿಸಿ
ಘನಗತಿಗೈದಿಸುವ ಭಕುತಿ ಕೊಡು ಕರುಣದಿ ೬

ರಾಜರಾಜೇಶ್ವರ ರಾಜೀವದಳನಯನ
ಮೂಜಗದೊಡೆಯ ಮುಕುಂದಾನಂದ
ಈ ಜೀವಕೀದೇಹ ಬಂದದ್ದಕ್ಕು ಎನಗತಿ ನಿ-
ರ್ವ್ಯಾಜದಿ ಸುರಗಂಗೆ ಸ್ನಾನವನು ಮಾಡಿಸೊ ೭

ಎನಗೆ ಆವುದು ಒಲ್ಲೆ ಎಲ್ಲೆಲ್ಲಿ ಪೋದರು
ಕ್ಷಣ ಬಿಡದೆ ನಿನ್ನ ನೋಳ್ಪ ಜ್ಞಾನವ ಕೊಡೊ

ಚಿನುಮಯಮೂರುತಿ ಗೋಪಾಲವಿಠಲ
ಘನಕರುಣಿ ಮಧ್ವಮುನಿಮನಮಂದಿರನಿವಾಸ ೮

೨೫

ಧ್ಯಾನಿಸು ಮನವೆ ನೀ ಧ್ಯಾನಿಸು ಪ.

ಧ್ಯಾನಿಸು ಮನವೆ ಶ್ರೀಹರಿಯ ಪಾದಧ್ಯಾನ
ನಿರುತ ಈ ಪರಿಯ ಆಹಾ
ಪ್ರಾಣಾಪಾನವ್ಯಾನೋದಾನಸಮಾನರ್ಗೆ
ಪ್ರಾಣನಾಗಿಪ್ಪ ಮುಖ್ಯ ಪ್ರಾಣಾಂತರ್ಗತನ ನೀ ಅ.ಪ.

ಪರಮಾಣು ಪ್ರದೇಶದಲ್ಲಿ ಪ್ರಾಣರಾಶಿ ಅನಂತುಂಟಲ್ಲಿ ಹೀಗೆ
ಒರಲುತಿದೆ ವೇದದಲ್ಲಿ ದೃಷ್ಟಾಂತವ ಪೇಳ್ವೆ ಕೇಳು ದೃಢದಲ್ಲಿ ಆಹಾ
ಪರಮಸೂಕ್ಷ್ಮ ವಟಮರನಾಗಿ ಅದರಲ್ಲಿ
ಪರಿಮಿತಿಲ್ಲದರ ಫಲದಬೀಜವನರಿತು ನೀ ೧

ನಿರುತ ಸುವರ್ಣಬ್ರಹ್ಮಾಂಡದಲ್ಲಿ ಹರಿ ಪೂರ್ಣವ್ಯಾಪ್ತ ಅಖಂಡನಾಗಿ
ಮಿರುವುತಲಿಪ್ಪ ಮಾರ್ತಾಂಡ ತೇಜೋಕಿರಣದಂತಿರುವ ಪ್ರಚಂಡ ಆಹಾ
ಹೊರಗೆ ಒಳಗೆ ಸರ್ವತ್ತರದಲ್ಲಿ ಹರಿಮಯ-
ವರಿತು ನಿನಗೆ ಎಲ್ಲಿ ದೊರಕಿದ ಸ್ಥಳದಿಂದ ೨

ಸಲಿಲಭೂಗಿರಿಲತೆ ನಾನಾವೃಕ್ಷಫಲಖಗಮೃಗ ಕಾನನ
ತೃಣ ಪೊಳೆವಪಾವಕತರುಪವನ ಮುಕ್ತಸ್ಥಳ ಅವ್ಯಾಕೃತ ಗಗನ ಆಹಾ
ಒಳಗೆ ಹೊರಗೆ ಹರಿ ಚಲಿಸದೆ ಇರುತಿಪ್ಪ
ಸ್ಥಳದ ನಿಲುವಿನಂತೆ ತಿಳಿದು ನೀ ಅದರಂತೆ ೩

ಕೇಶವ ವಿಶ್ವಮತ್ಸ್ಯಾದಿ ತೈಜಸ ಶ್ರೀಶ ಹಯಗ್ರೀವಾದಿ ಜೀವ
ರಾಶಿಯೊಳಿದ್ದಾನಾದಿ ಸರ್ವದೇಶ ವ್ಯಾಪಿಸಿದಂತಾಭೇದಿ ಆಹಾ

ಈ ಸಮಸ್ತಮೂರ್ತಿ ಶ್ರೀಶ ರಂಗನೆ ಎಂದು
ವಾಸನಾಮಯದಿಂದ ನೀ ಸೇವಿಸುತ್ತ ನಿತ್ಯ ೪

ಸಪ್ತಾವರಣ ಶರೀರದಿ ದಶಸಪ್ತದ್ವಿಸಹಸ್ರ ನಾಡಿಯಲಿ ದಶ-
ಸಪ್ತದ್ವಿಸಹಸ್ರ ರೂಪದಲ್ಲಿ ಹರಿವ್ಯಾಪ್ತ ನಿರ್ಲಿಪ್ತಸ್ಥಾನದಲ್ಲಿ ಆಹಾ
ಆಪ್ತನಂತಿರುವ ಸುಷುಪ್ತಿ ಸ್ವಪ್ನ ಜಾಗ್ರದಿ
ತಪ್ತಕಾಂಚನದಂತೆ ದೀಪ್ತಿಸುತಿಪ್ಪನ ೫

ಜೀವರಿಂದತ್ಯಂತ ಭೇದ ಪ್ರತಿಜೀವಾಂತರದಲಿ ಪ್ರಮೋದನಾಗಿ
ಆವಾಗ ಚರಿಸುವ ವೇದ ಪೇಳುವುದು ಸತ್ಯಂಭಿದಾ ಆಹಾ
ಈ ವೇದಾರ್ಥವು ಸಾವಧಾನದಿ ತಿಳಿದು
ಶ್ರೀವಾಯುಮತವ ಕೋವಿದರೊಡಗೂಡಿ ೬

ಶ್ರೀ ಕೇಶವನೆ ಮೂಲಾಸಿ ಶ್ರುತಿ ಏಕೋನಾರಾಯಣಾಸಿ ನಾನಾ
ಲೋಕ ಸೃಷ್ಟಿಪದ ತಾನಾಸಿ ತಾರಕಮಂತ್ರ ಉಪದೇಶಿ ಆಹಾ
ನೀ ಕೇಳು ನಿಗಮಾರ್ಥ ನೀಕರಿಸು ಸಂಶಯ
ಏಕಮೇವಾದ್ವಿತೀಯನೆಂಬೊ ಕೃಷ್ಣನಂಘ್ರಿಯ ೭

ಗಂಗಾಜನಕ ಸಿರಿರಂಗ ಉತ್ತುಂಗಗುಣಗಣತರಂಗ ಕಾ-
ಳಿಂಗಸರ್ಪನ ಮದಭಂಗ ಭುಜಂಗಶಯನ ಅಮಲಾಂಗ ಆಹಾ
ಪಿಂಗಳ ಇಡಾ ಮಂಗಳ ಸುಷುಮ್ನ ಸು
ಸಂಗಮ ಮಧ್ಯದಿ ತಿಮಿಂಗಿಲಂತಿಪ್ಪನ ೮

ಹೃದಯ ಸ್ಥಾನದಲ್ಲಿದ್ದ ಮೂರ್ತಿ ಬಲು ಅದುಭುತದಿವ್ಯಕೀರ್ತಿ
ಅದೆ ಪದುಮಜಾಂಡದಿ ಪರಿಪೂರ್ತಿ ದೊರೆವುದಕೆ ಬೇಕು ವಾಯುಸಾರ್ಥಿ ಆಹಾ
ಅದೆ ಬಿಂಬಮೂರ್ತಿ ಜೀವದಾಕಾರವಾಗಿ ತಾ
ಪದುಮಜಾಂಡದಲಿಪ್ಪ ಸದಮಲಾತ್ಮಕನ ೯

ಧರೆಯನಳೆದ ದಿವ್ಯಚರಣ ಅದು ಮೆರವುತಿಪ್ಪುದು ಕೋಟಿ ಅರುಣನಂತೆ
ಪರಿಪೂರ್ಣಭರಿತವು ಕಿರಣ ತನ್ನ ಸ್ಮರಿಸುವರಿಗೆ ಮಾಳ್ಪ ಕರುಣ ಆಹಾ

ತರುಣಿಯಂದದಿ ನಖದಿ ಸುರನದಿಯ ಪೆತ್ತ ನೂ-
ಪುರ ಗೆಜ್ಜೆಪೆಂಡೆಯ ಎರಡೈದು ಬೆರಳನು ೧೦

ಹರಡು ಜಂಘೆಯುಗಜಘನ ಸುರುಚಿರ ರೇಖಧ್ವಜವಜ್ರ ನಾನಾ ದಿವ್ಯ
ವರರೇಖೆಯಿಂದಲೊಪ್ಪುವನ ಜಾನು ಪರಮಶೋಭಿಸುವ ಸುಂದರನ ಆಹಾ
ಉರುಟುಕದಳಿಸ್ತಂಭದಂತಿರುವೊ ಊರುದ್ವಯ
ಸರಿಗಾಣೆ ಹರಿ ಉಟ್ಟ ವರಪೀತಾಂಬರವನು ೧೧

ಗಜಹಾನದಂತಿಪ್ಪ ಮಧ್ಯ ಬಲುವಿಜಯ ಒಡ್ಯಾಣ ಅಭೇದ್ಯಾಭೇದ್ಯ
ನಿಜಗಂಟೆ ಝಣರೆಂಬೊವಾದ್ಯ ಕುಬುಜೆ ಡೊಂಕು ತಿದ್ದಿದಾನಾದ್ಯ ಆಹಾ
ಅಜಜನಿಸಿದ ನಾಭ್ಯಂಬುಜದಳ ಚತುರ್ದಶ
ತ್ರಿಜಗಭರಿತ ಕುಕ್ಷಿ ನಿಜ ಸುಖಪೂರ್ಣನ ೧೨

ಉದರತ್ರಿವಳಿ ನಾನಾಹಾರ ದಿವ್ಯ ಪದಕ ಪಚ್ಚೆಗಳ ವಿಸ್ತಾರ ಬಲು
ಚದುರ ವೈಜಯಂತಿ ಮಂದಾರವನ್ನು ಮುದದಿಂದ ಧರಿಸಿದ ಧೀರ ಆಹಾ
ಪದುಮಜಭವರಿಂದ ತ್ರಿದಶರು ತಿಳಿದಿನ್ನು
ಸದಾಕಾಲ ಧೇನಿಪರು ಹೃದಯಾಂಬರದಲ್ಲಿ ೧೩

ಸಿರಿವತ್ಸ ಕೌಸ್ತುಭಹಾರ ಮ್ಯಾಲೆ ಸರಿಗೆ ನ್ಯಾವಳದ ಶೃಂಗಾರ ಸುಂ-
ದರವಾದ ಕಂಬುಕಂಧರ ಅತಿಗುರುತರ ಭುಜವು ಚತುರ ಆಹಾ
ಮರಿ ಆನೆ ಸೊಂಡಿಲಂತಿರುವ ಬಾಹುಕೀರ್ತಿ ಕೇತಕಿ
ಬೆರಳು ನಕ್ಷತ್ರದರಸಿನಂದದಿ ನಖ ೧೪

ಕರಚತುಷ್ಟಯದಲಿ ಶಂಖಚಕ್ರ ವರಗದಾಪದುಮ ನಿಶ್ಶಂಕನಾಗಿ
ಧರಿಸಿ ಮೆರೆವ ಅಕಳಂಕ ದುರುಳರ ತರಿವ ಛಲದಂಕ ಆಹಾ
ಬೆರಳ ಮಾಣಿಕದುಂಗರ ಕಡಗ ಕಂಕಣ
ಬಿರುದಿನ ತೋಳಬಂದಿ ಸಿರಿ ಭುಜಕೀರುತಿ ೧೫

ಅಗರುಚಂದನ ಗಂಧಲೇಪ ಕಂಬು ಸೊಗಸಾದ ಚುಬುಕ ಪ್ರಕಾಶ
ಚಿಗುರು ಚಂದ್ರೆಳೆದುಟಿ ಭೂಪ ನಸುನಗುವ ವದನ ಸುಸಲ್ಲಾಪ ಆಹಾ

ಮಗನಾಗಿ ತಾನು ಗೋಪಿಗೆ ವದನದೊಳಗೆ
ಜಗವೆಲ್ಲ ತೋರಿದ ಅಗಣಿತ ಮಹಿಮನ ೧೬

ಮುಗುಳು ಮಲ್ಲಿಗೆ ಮೊಗ್ಗೆ ದಂತಪಂಕ್ತಿ ಜಗವಮೋಹಿಸುವ ಸುಶಾಂತ ಜಿಹ್ವೆ
ನಿಗಮಕ್ಕೆ ವೇದ್ಯವಾದಂಥ ಬಹು ಬಗೆಯಲ್ಲಿ ಮೆರೆವ ಸುಪಂಥ ಆಹಾ
ನಗುವ ವದನ ಝುಗಝುಗಿಸುವ ಕುಂಡಲಕರ್ಣ
ಮಿಗೆ ಕೂರ್ಮಕದಪು ಸಂಪಿಗೆನಾಸಿಕವನ್ನು ೧೭

ಕರುಣಶಾಂತಶುಭನೋಟ ಕಂಗಳೆರಡರ ಚೆಲ್ವಿಕೆ ಮಾಟ ಇನ್ನು
ಅರವಿಂದದಳವೆನ್ನು ದಿಟ ಇನ್ನು ತರಣಿಚಂದ್ರಮರ ಕೂಟ ಆಹಾ
ಶರಣಜನರ ಮನೋಹರ್ಷವಾರ್ಧಿಗೆ ಚಂದ್ರ
ದುರುಳ ದಿತಿಜತಿಮಿರಕ್ಕೆ ಭಾಸ್ಕರನ ೧೮

ಪೊಳೆವ ಪುಬ್ಬುದ್ವಯ ಸ್ಮರನ ಚಾಪ ತಲೆಯ ತಗ್ಗಿಸುವಂಥಾ ರಚನಾ
ಫಾಲದಲಿಟ್ಟ ತಿಲಕ ಸುಂದರ ಲೋಕ ಕಳವಳಗೊಳಿಸುವ ಸುಗುಣ ಆಹಾ
ನಳಿನವದನದಲ್ಲಿ ಅಳಿಗಳಂತೊಪ್ಪುವ
ಸುಳಿಗುರುಳಿನ ಮ್ಯಾಲೆ ಒಲೆವ ಅರಳೆಲೆಯನ್ನು ೧೯

ಕೋಟಿಸೂರ್ಯ ಪ್ರಕಾಶ ಕಿರೀಟಕ್ಕೆ ಸಮ ಆವದೇಶದಲ್ಲಿ
ಸಾಟಿಗಾಣೆನೊ ವಿಶೇಷ ಕಪಟನಾಟಕ ನಿತ್ಯ ರಮೇಶ ಆಹಾ
ನೀಟಾಗಿ ನಖ ಲಲಾಟ ಪರಿಯಂತ್ರ
ನೋಟದಿಂದಲಿ ಈಶಕೋಟಿ ಸಹಿತನ ೨೦

ಕಾಮಾದಿಗಳೆಲ್ಲ ಜರಿದು ಮುಕ್ತಿಮಾರ್ಗ ಆವುದದರಿದು ಭೂಮಿ
ಹೇಮಕಾಮಿನಿಯರ ಜರಿದು ಅತಿಪ್ರೇಮದಿ ಗುರುತುಗಳ ಬೆರೆದು ಆಹಾ
ಸಾಮಜವರದ ಗೋಪಾಲವಿಠಲನ ಯಾಮ-
ಯಾಮಕ್ಕೆ ನಲಿದಾಡುತ್ತ ನೀ ನಿತ್ಯ ೨೧

೨೬

ಉಗಾಭೋಗ

ನಂಬು ನಂಬು ಎನ್ನ ಎಂದು ಆಡುವ ಸ್ವಾಮಿ
ಬಿಂಬನವನಲ್ಲವೆ ಎನಗೆ ಅಂದು ನೋಡೆ
ಸಂಭ್ರಮ ಪೂರ್ತಿಸದು ಕಾಂಬೋಣಾದರು ಮನದ
ಹಂಬಲವು ಬಿಡದೊ ವಿಷಯದಲ್ಲಿ
ನಂಬಿದರೆ ಅವನ ನಂಬಿದವನೆ ಅಲ್ಲ
ಅಂಬಿಕಾಹೃದಯಸ್ಥನೆನ್ನು ಭೇದವ ತಿಳಿದು
ಸಂಭ್ರಮದ ಜಾಗೃತಿ ಹುಟ್ಟಲಿ ಅವನಲ್ಲಿ
ಬೊಂಬೆಯಾಗಿ ಎದುರುನಿಂತು ತೋರಿ ಆಡೆ
ನಂಬುಗೆಯು ಸಾಲದೊ ಅಂಬುಜಾಕ್ಷ
ನಂಬಿ ಇಪ್ಪೆನು ಕಂಡ್ಯ ಈ ಪರಿ ಚಿನ್ನಾಟ
ಸಂಭ್ರಮದಲೆನ್ನ ಮೋಹಿಸಬ್ಯಾಡ
ನಂಬಿಗಿ ಬಲು ಉಂಟು ಆಗಿರಲಿ ನಿನ್ನಲಿ
ನಂಬುವರೊ ಜನ ಅನ್ಯ ಹಂಬಲಿಸದೆ
ನಂಬಿ ನಿನ್ನನರಿಯೆ ಹಿಂದೆ ಇಂದು ಮುಂದೆ ಘನ
ನಂಬುಗೆ ಇತ್ತರೆ ನಿನ್ನ ನಂಬುವೆನಯ್ಯ
ಬಿಂಬಮೂರುತಿಯೆ ಗೋಪಾಲವಿಠಲ

೨೭

ನಾನೆ ಭ್ರಮಿಸಿದೆನೊ ವಿಷಯದಿ ಮಮತೆ ನೀನೆ ಸೃಜಿಸಿದೆಯೊ ಪ.

ಅನಾದಿ ನಿಧಾನ ನೀನೆ ತಿಳಿದು ನೋಡೊ ಅ.ಪ.

ಕೇವಲಾನಂದ ಚಿನ್ಮಯರೂಪ ನೈಜಸ್ವಭಾವ ತ್ಯಜಿಸಿ ಅನ್ಯ-
ಭಾವವಾಶ್ರಯಿಸಲು ಶ್ರೀವರ ನಿನ್ನ ಬಂಧಕಶಕುತಿ

ಆವರಿಸೆನ್ನ ಕಾವಗೊಳಿಸಿ ಈ ವಿಧ ಬನ್ನ ಬಡಿಸುತಿದೆ
ಕೈವಲ್ಯದರಸನೆ ನೀ ವಿಚಾರಿಸಿ ಕಾಯೊ ೧

ಸ್ವತಂತ್ರ ನೀನು ಅಸ್ವತಂತ್ರ ನಾನು ದೂತನ್ನ ಈ ತೆರ
ಕಾತುರಗೊಳಿಪುದು ಏತರಘನವೊ ಇದರಿಂದ
ಖ್ಯಾತೇನುಫಲವೊ ಎನ್ನೊಳು ನಿನಗೇತಕೀ ಛಲವೊ ಭವದಿ ಕೈ-
ಸೋತು ಬಿನ್ನೈಸುವೆ ಮಾತುಮನ್ನಿಸಿ ಕಾಯೊ ೨

ಕಕ್ಕಸ ಭವದೊಳು ಠಕ್ಕಿಸಿ ಸಿಗಹಾಕಿ ಸಿಕ್ಕುಬಿಡಿಸದೆ ನೀ-
ನಕ್ಕು ಸುಮ್ಮನಿರಲು ದಿಕ್ಕ್ಯಾರೊ ಎನಗೆ ದಣಿದು ಮೊರೆ-
ಯಿಕ್ಕುವೆ ನಿನಗೆ ಬಂದು ಬೇಗ ನೀ ತಕ್ಕೊ
ನೀ ಕೈಗೆ ಎನ್ನವಗುಣ ಲೆಕ್ಕಿಸದಲೆ ಕಾಯ್ಯಬೇಕಯ್ಯ ಕೊನೆಗೆ ೩

ಪ್ರಿಯ ನೀನೆನಗೆಂದು ಅಯ್ಯ ನಿನ್ನ ನಂಬಲು ಮಯ್ಯ ಮರೆಸಿ ವಿ-
ಷಯದುಯ್ಯಾಲೆಗೊಪ್ಪಿಸಿದೆ ಸಯ್ಯಲೊ ದೊರೆಯೆ ಇಂಥವನೆಂದು
ಅಯ್ಯೊ ಮುನ್ನರಿಯೆ ಕರುಣಿ ಎಂಬೊ ಹಿಯ್ಯಳಿ ಸರಿಯೆ ಇನ್ನಾದರು
ಕಯ್ಯ ಪಿಡಿಯಲು ಕೀರ್ತಿ ನಿನಗೆಲೊ ಹರಿಯೆ ೪

ಮೊದಲೆಮ್ಮಾರ್‍ಯರು ನಿನ್ನ ಪದನಂಬಲವರಘ ಸದೆದು ಸಮ್ಮುದದಿಸಂ-
ಪದವ ನೀಡಿದೆಯಂತೆ ಅದನು ಮರೆದೆಯೊ ಶಕುತಿಯು ಸಾಲದಲೆ ಜ-
ರಿದೆಯೊ ಜನರು ಪೇಳಿದ ಮಾತು ಪುಸಿಯೊ ನಿಜ ತೋರಲು
ಬುಧನುತ ಗೋಪಾಲವಿಠಲ ಕೀರುತಿಯೊ ೫

೨೮

ಸುಳಾದಿ

ಧ್ರುವತಾಳ

ನಿನ್ನ ಸತಿಯಳಾದ ಸಿರಿಯ ಪದವಿಯ ನೋಡೊ
ನಿನ್ನ ಮಗನಾದ ಅಜನ ಪದವಿಯ ನೋಡೊ

ನಿನ್ನ ಮೊಮ್ಮಗನಾದ ಹರನ ಪದವಿಯ ನೋಡೊ
ನಿನ್ನ ಸೇವಕರೊಳು ಇಂದ್ರನ ಭಾಗ್ಯವ ನೋಡೊ
ನಿನ್ನ ಮಗಳು ಭಾಗೀರಥಿಯ ಭಾಗ್ಯವ ನೋಡೊ
ನಿನ್ನ ಭಕ್ತರಾದ ಗಂಧರ್ವರ ಭಾಗ್ಯವ ನೋಡೊ
ನಿನ್ನಿಂದವರನೆಲ್ಲ ಸೃಷ್ಟಿಸಲ್ಪಟ್ಟಿತು
ಎನ್ನನು ನೀನೆ ಸೃಷ್ಟಿಯ ಮಾಡಲಿಲ್ಲೆ
ತನ್ನ ಮಕ್ಕಳು ತಾಯಿ ಅನಂತವಿದ್ದರಿನ್ನು
ಮನ್ನಿಸಿ ಒಬ್ಬರನು ಮನ್ನಿಸದಲಿಪ್ಪೋಳೆ
ಇನ್ನು ಇವರು ಎಲ್ಲ ಏನಿತ್ತರೊ ನಿನಗೆ
ಮುನ್ನ ನಾನೇನು ನಿನಗೀಯದೆ ಪೋದೆ ರಂಗ
ಮನ್ನಿಸುವರು ನೀ ಮನ್ನಿಸಿದರಿವರು
ಕಣ್ಣಲ್ಲಿ ನೋಡರು ನೀ ಕರುಣಿಸದಿರಲಿನ್ನು
ಘನ್ನ ಘನ್ನ ಸೇವೆ ಇವರಿಗುಂಟಾದರಿನ್ನು
ಮುನ್ನ ಇವರ ಉಚ್ಛಿಷ್ಟನ್ನವಾದರು ಎನಗೆ
ಇನಿತಾದರು ಕಾರಣವಿಲ್ಲವೇನೊ
ನಿನ್ನ ಬೇಡುವ ಸಥೆ ಎಲ್ಲಿಂದ ಬಂತು ಎಂಬ್ಯಾ
ನಿನ್ನವರು ಕೊಟ್ಟಂಥ ಬಲವು ಎನಗೆ ಇದ್ದು
ಹಣ್ಣು ಉಂಟಾದ ವೃಕ್ಷ ಹಂಬಲಿಸೋರು ಜನರು
ನಿನ್ನಲ್ಲಿ ಇಹೋದಯ್ಯ ನೀನೆ ಬಲ್ಲೆಯೊ ದೇವ
ಘನ್ನ ಮಹಿಮ ಚೆಲುವ ಗೋಪಾಲವಿಠಲ
ನಿನ್ನಂತೆ ಸಾಕುವರಿನ್ನೊಬ್ಬರಿಲ್ಲ ದೇವ ೧

ಮಠ್ಯತಾಳ

ಧರೆಯೊಳಗಿಪ್ಪಂಥ ಪರಿಪರಿ ಕಮಲಗಳು
ಅರಳುವುದಕ್ಕೆ ಇನ್ನು ಮರಳೊಂದು ರವಿಯುಂಟೆ
ವರುಷ ಕಾಲಗಳಲ್ಲಿ ಸುರಿಸುವ ಮೇಘಗಳು
ಪರಿಪರಿ ಗ್ರಾಮಕ್ಕೆ ಪರಿಪರಿ ಬೇರುಂಟೆ
ಎರಡೇಳು ಲೋಕಕ್ಕೆ ದೊರೆ ನೀನಲ್ಲದೆ

ಮರಳಿ ಇನ್ನೊಂದು ದೈವವ ನಾಕಾಣೆ
ಕರುಣಾಕರರಂಗ ಗೋಪಾಲವಿಠಲ
ಮರೆಹೊಕ್ಕೆನು ಕಾಯೊ ಬಿರುದುಳ್ಳ ದೇವ ೨

ತ್ರಿಪುಟತಾಳ

ಪಿಡಿಯದೆ ಎನ್ನ ಕರವ ಸಡಿಲಬಿಟ್ಟರೆ ಇನ್ನು
ಪೊಡವಿಯೊಳಗೆ ನಿನ್ನ ಒಬ್ಬರು ನೆಚ್ಚರು
ಮಡದಿ ಪತಿಯರು ಕೂಡಿ ಪಡೆದು ಒಂದು ಶಿಶುವ
ಬಡಿದಾಡಿದೋಪಾದಿ ನಿನಗೆ ಎನಗೆ ನ್ಯಾಯ
ಕೆಡವ್ಯಾಟ ಬಿದ್ದಿದೆ ಬಿಡಿಸುವರಿಲ್ಲವೊ
ಬಿಡೆನೊ ನಿನ್ನ ಪಾದ ಎಂದೆಂದಿಗೆ
ಪೊಡವಿಯೊಳಗೆ ನಿನಗೆ ಸರಿಯಾರಿಲ್ಲವೊ ದೇವ
ದೃಢವಾಗಿ ನೀನಲ್ಲದೆನಗಿನ್ನು ಗತಿಯಿಲ್ಲ
ಬಿಡದೆ ಎನ್ನಲ್ಲಿ ಪಡೆದಂಥ ಸುತರನ್ನು
ಕೊಡುವೆ ನಿನಗೆ ಕೃಷ್ಣ ತಡೆಯದಲೆ ಇನ್ನು
ತುಡುಗುತನ ಬಿಡಿಸು ಕೆಡಿಸದೆ ಎನ್ನ ಕಂಡ
ಕಡೆಯ ವಿಷಯಗಳಿಗೆ ಎರಗಿಸದೆ
ಬಡವ ನಾನೆಂದು ಎನ್ನ ಕಡೆಗಣ್ಣಿಂದ ನೋಡಲು
ಬಡವ ನಾನಲ್ಲ ನಿನ್ನ ಒಡತಿಗೆ ಪಿಡಿತೊತ್ತು
ಕಡಲಶಯನ ರಂಗ ಗೋಪಾಲವಿಠಲ
ಕಡು ದೀನರಕ್ಷಕ ನಮೋ ನಮೋ ನಮೋ ೩

ಅಟ್ಟತಾಳ

ಊರ ಔತಣ ಹೇಳಿ ಸಾರಿ ಡಂಗುರ ಹೊಯಿಸಿ
ಧೀರರಾಯರಿಗೆಲ್ಲ ಸಾರಷಡ್ರಸವಿತ್ತು
ತೀರತೀರದಿ ಇನ್ನು ಬೀರುತ ಉಣುವಾಗ
ದ್ವಾರದಲೊಬ್ಬ ಮಧುಕರದವ ಬಂದು

ಆರಿಪಾರಿದರಿನ್ನು ಹಾರಿಸ್ಯಾಕುವರುಂಟೆ
ಕಾರುಣ್ಯಮೂರುತಿ ಕರುಣದಿಂದಲಿ ನೋಡೊ
ನೀರೊಳಗಿನ ಮತ್ಸ್ಯ ನೀರೆ ಬಯಸುವುವು
ಘೋರ ಅರಣ್ಯಕ್ಕೆ ಹಾರೈಸಬಲ್ಲವೆ
ಮಾರಜನಕ ನಮ್ಮ ಗೋಪಾಲವಿಠಲ
ಸೇರಿಸೊ ನಿನ್ನನು ಸೇರಿದವರ ಬಳಿಯ ೬

ಆದಿತಾಳ

ಒಂದೆ ಬೇಡುವೆ ನಿನ್ನ ಒಂದೆ ದೇವನೆ ಕೇಳೊ
ಒಂದೆ ಮನವ ಕೊಡು ವಂದಿಪೆ ನಿನ್ನನು
ಹಿಂದನಂತ ಜನ್ಮದಿ ಮಾಡಿದ ದೋಷ
ಮುಂದಾಗುವ ಅನಂತಾನಂತ ದೋಷಗಳಿಗೆ
ಒಂದು ಬಾರಿ ನಿನ್ನ ಸ್ಮರಣೆಯ ಮರೆಸದೆ
ಚೆಂದದಿ ಇತ್ತು ಆನಂದದಿ ಪೊರೆಯೊ
ಬಂದೆನೊ ನಾನಿತ್ತ ಬರಬಾರದೆ ಇನ್ನು
ನೊಂದೆನೊ ನಾ ಬಲು ಬಂಧನಕ್ಕೆ ಸಿಲುಕಿ
ತಂದುದಕ್ಕೆ ಇನ್ನು ತಂದ ಕಾರ್ಯ ಮಾಡಿಸಿ
ಪೊಂದಿಸು ನಿನ್ನ ಅರವಿಂದ ಚರಣದಲ್ಲಿ
ಕಂದರ್ಪನಯ್ಯ ಗೋಪಾಲವಿಠಲ ಇನ್ನು
ಎಂದೆಂದಿಗೆ ಎನಗೆ ನೀನೆ ಗತಿಯೊ ೭

ಜತೆ

ನಿನ್ನ ದಾಸರ ದ್ವಾರವನ್ನು ಕಾಯ್ವರ ಮನೆ
ಕುನ್ನಿ ಎಂದೆನಿಸೆನ್ನ ಗೋಪಾಲವಿಠಲ

೨೯

ಸುಳಾದಿ

ಧ್ರುವತಾಳ

ನಿನ್ನ ಸ್ಮರಣೆ ಎನಗೆ ತೀರ್ಥಯಾತ್ರೆಗಳಯ್ಯ
ನಿನ್ನ ಸ್ಮರಣೆ ಎನಗೆ ಯಜ್ಞದಾನಂಗಳಯ್ಯ
ನಿನ್ನ ಸ್ಮರಣೆ ಎನಗೆ ವ್ರತ ಚಾಂದ್ರಾಯಣಗಳಯ್ಯ
ನಿನ್ನ ಸ್ಮರಣೆ ಎನಗೆ ತಪಸ್ಸು ಸಿದ್ಧಿಗಳಯ್ಯ
ನಿನ್ನ ಸ್ಮರಣೆ ಎನಗೆ ಸಾಧನ ಸಂಪತ್ತುಗಳು
ನಿನ್ನ ಸ್ಮರಣೆ ಎನಗೆ ಬಲ ಧೈರ್ಯವೊ ಎನ್ನಯ್ಯ
ನಿನ್ನ ಸ್ಮರಣೆ ಎನಗೆ ಇಹಪರದಲ್ಲಿ ಲಾಭ
ನಿನ್ನ ಸ್ಮರಣೆ ಎನಗೆ ಸಿದ್ಧವಾದ ಮುಕುತಯ್ಯ
ನಿನ್ನ ವಿಸ್ಮರಣೆಯಿಂದ ಆವ ಕರ್ಮ ಮಾಡಲು
ಪುಣ್ಯದ ಫಲವದು ದೊರೆಯದು ಜೀವರಿಗೆ
ಕಣ್ಣು ಬಿಗಿದು ಕಟ್ಟಿ ಚಿತ್ರವ ಬರೆದಂತೆ
ನಿನ್ನರಿಯದ ಕರ್ಮ ಅನಂತ ಮಾಡಲೇಕೆ
ಕನ್ನಿಕೆಗೆ ಬಾಲ್ಯದಿ ಕಂಡವರು ಪತಿ ಆದಂತೆ
ನಿನ್ನ ಸ್ಮರಣೆಲ್ಲದ ಕರ್ಮ ಈ ಪರಿಯೊ ದೇವ
ನಿನ್ನ ವಿಸ್ಮರಣೆಯೆ ಗೋಹತ್ಯ ಬ್ರಹ್ಮಹತ್ಯ
ನಿನ್ನ ವಿಸ್ಮರಣೆಯೆ ಪಂಚಮಹಾಪಾತಕ
ನಿನ್ನ ವಿಸ್ಮರಣೆಯೆ ಸರ್ವ ಅಪರಾಧವಯ್ಯ
ನಿನ್ನ ವಿಸ್ಮರಣವೆ ಸಕಲ ನಿಷೇಧಗಳು
ನಿನ್ನ ಸ್ಮರಣವೆ ಇಷ್ಟಗಳಯ್ಯ
ನಿನ್ನ ಸ್ಮರಣೆ ಇರಲು ಅಧಮ ಕರ್ಮ ಮಾಡಲು
ಅನ್ಯಾಯವೆನಿಸದು ಆಗಮ ಸಮ್ಮತವು
ಘನ್ನ ದಯಾನಿಧೆ ಗೋಪಾಲವಿಠಲ
ನಿನ್ನ ಸ್ಮರಣೆ ಪುಣ್ಯ ನಿನ್ನ ವಿಸ್ಮರಣೆ ದೋಷ ೧

ಮಠ್ಯತಾಳ

ಜಡ ಚೇತನ ಜ್ಞಾನ ಅಡಿಗಡಿಗೆ ತಿಳಿದು
ಜಡಕೆ ಲಯವ ಬಗೆದು ಚೇತನಗಳೆರಡು
ದೃಢವಾಗಿ ತಾ ತನ್ನ ಒಡಲೊಳಗಿಪ್ಪನ್ನ
ಒಡೆಯನೆಂದು ತಿಳಿದು ಅಡಿಗಳಿಗೆ ಎರಗಿ
ಕೊಡುವವ ಕೊಳುವನು ಬಿಡದಲೆ ನೀನೆಂದು
ನಡೆಸುವ ನುಡಿಸುವ ಹರಿ ನೀನೆಂದರಿದು
ಎಡಬಲದಲಿ ಇನ್ನು ಪರಿವಾರ ಸಹವಾಗಿ
ಕಡಕವಿಲ್ಲದೆ ನೋಡಿ ಜಡಮತಿಯನೆ ಬಿಟ್ಟು
ನುಡಿವುದೆ ಸ್ಮರಣೆಯು ಕೊಡುವುದು ಮಹಾಫಲವು
ಕಡು ಮೂರ್ಖತನದಿ ಬಿಡದಲೆ ಹಗಲಿರುಳು
ನುಡಿನುಡಿಗೆ ಗರ್ಜಿಸಲ್ಯಾತಕೆ ಮೊರೆಯ
ಮಿಡುಕುವುದಲ್ಲದೆ ಮೃಢಸಖನು ಮೆಚ್ಚ
ಕಡಲಶಯನ ರಂಗ ಗೋಪಾಲವಿಠಲ
ಕೊಡು ನಿನ್ನ ಸ್ಮರಣೆ ಬಿಡದಲೆ ಕ್ಷಣಕ್ಷಣಕೆ ೨

ರೂಪಕತಾಳ

ನಾ ಕರ್ತನೆಂದದರಿಂದಲೇವೆ ಸಕಲ
ಶೋಕಾನರ್ಥಗಳು ಜೀವರಿಗೊದಗೋದು
ನೀ ಕರ್ತನೆಂದದರಿಂದ ಜೀವರಿಗೆ
ನರ್ಕಾದ್ಯನರ್ಥಗಳು ಆಗಲರಿಯವಯ್ಯ
ಈ ಕುರುಹಕೆ ತಂದು ದೃಷ್ಟಾಂತರವು ಇನ್ನು
ಆಕಳನ ಕೊಂದಂತೆ ಆ ವಿಪ್ರನೆ ಸಾಕ್ಷಿ
ಶೋಕ ಸುಖವೆರಡು ನೀನು ಮಾಡಿಸಿ ಇನ್ನು
ಹಾಕು ದ್ವಿಫಲವನು ಜೀವರ್ಯೋಗ್ಯತೆ ಅರಿದು
ನೀ ಕಾಣಿಸಿಕೊಂಬುವನೆ ನಿನ್ನ ಕರ್ತೃತ್ವಕ್ಕೆ
ಸಾಕಲ್ಯವಗರೆದು ಏಕ ಚಿತ್ತದಲ್ಲಿಪ್ಪ

ನೀ ಕರ್ತು ಮಮಸ್ವಾಮಿ ನಾ ಕುತ್ಸಿತಭೃತ್ಯ
ನೀ ಕಾಯೊ ಎನ್ನಯ್ಯ ಸಾಕುವ ಬಿರುದುಂಟು
ನಾ ಕೃತಘ್ನ ಬಲು ನೀ ಕರುಣಾಳಯ್ಯ
ನಾ ಕಪಟಿಯೊ ದೇವ ನೀ ದಯಾವಾರಿಧಿ
ಸಾಕಲ್ಯ ಗುಣಪೂರ್ಣ ಗೋಪಾಲವಿಠಲ
ಹಾಕದಿರೆನ್ನ ನಾನಾ ಕುಯೋನಿಗಳಲ್ಲಿ ೩

ಝಂಪೆತಾಳ

ಆವ ಲೀಲೆಯೊ ನಿನ್ನದಾವ ಸ್ವಭಾವವೊ
ಜೀವರೊಡನೆ ಆಟ ಆವ ಸುಖವೊ ನಿನಗೆ
ನಾವಸ್ವತಂತ್ರರು ನೀ ಸರ್ವಸ್ವತಂತ್ರ ಬಾ-
ಹುವುದೆಮ್ಮಿಂದ ಏನು ನಿನಗೆ ದೇವ
ನಾವು ಊಳಿಗರು ನಿನಗೆ ಬೇರೆವೆಂಬವೇನೊ
ನೀ ಊಳಿಗನಾಗಿ ಮಾಡಿಸಿ ನಮ್ಮಿಂದ
ಜೀವರಿಗೆ ಫಲವನು ತಂದು ತಂದು ಈವೆ
ದೇವ ನಿನಗೆ ನೋಡೆ ಒಂದು ಕಾರಣವಿಲ್ಲ
ದೇವ ನಿನಗೆ ನೋಡೆ ಒಂದು ಕರ್ಮಗಳಿಲ್ಲ
ಆವಾವ ಪರಿ ನಿನ್ನ ಲೀಲೆಗಳ ತೋರಿದಿ
ದೇವ ನೀ ಬಂಡಿಯ ಬೋವಾದೆ ಅರ್ಜುನಗೆ
ಆವುಗಳ ಕಾದೆ ಸನಕಾದಿಗಳ ಪಾಲಿಸಲು
ಆ ಉಗ್ರಸೇನನ ಸೇವೆಯನು ಮಾಡಿದೆ
ದೇವ ಗೋಪಿಯ ಕೈಯಲಿ ಕಟ್ಟಿ ಹಾಕಿಸಿಕೊಂಡೆ
ನೀ ವಟುವಿಪ್ರನಾಗಿ ಯಜ್ಞದಲಿ ಪೋಗಿ
ದೇವ ಭಿಕ್ಷವ ಬೇಡಿ ಭಕ್ತನ್ನ ಪಾಲಿಸಿದೆ
ಕಾವಲು ಕಾದೆ ಆತನ್ನ ಮನೆ ದ್ವಾರದಲಿ
ಆವ ಅಪೇಕ್ಷೆಯು ನಿನಗೆ ಒಂದು ಇಲ್ಲ
ಧಾವತಿಬಡುವೆ ನಿನ್ನ ಭಕುತರಿಗಾಗಿ
ನೋವಾಗುವೆ ನಿನ್ನಭಕ್ತರು ದಣಿದರೆ

ಆವ ನಿನ್ನ ಕಾರ್ಯ ಭಕ್ತರ ಪಾಲನೆ
ಆವ ನಿನ್ನ ಕ್ರಿಯ ದನುಜರ ಮರ್ದನೆ
ಆವ ವ್ಯಾಪಾರವು ನಿನಗೆ ಮಾಡೆಂಬರು ಪೇಳುವರುಂಟೆ ದೇವ
ಕಾವ ಕರುಣಿ ನಮ್ಮ ಗೋಪಾಲವಿಠಲ
ಸೇವಕನ ಪಾಲಿಸುವ ಬಗೆಯೆಂತೆಂತೊ ದೇವ ೪

ತ್ರಿಪುಟತಾಳ

ಎನ್ನ ಅಜ್ಞಾನವೆಲ್ಲ ನಿನ್ನಾಧೀನವಯ್ಯ
ಎನ್ನ ಕರಣಚೇಷ್ಟೆ ವ್ಯಾಪಾರ ನಿನ್ನಾಧೀನ
ಎನ್ನ ಪ್ರೇರಣೆ ಪ್ರತಿಕ್ಷಣಕೆ ನಿನ್ನಾಧೀನ
ಎನ್ನ ಸ್ಮರಣೆ ಸ್ಫುರಣೆ ನಿನ್ನಾಧೀನ ದಮ್ಮಯ್ಯ
ಎನ್ನ ಸ್ವಾಮಿಯೆ ನೀನು ನಿನ್ನ ಭೃತ್ಯನು ನಾನು
ಇನ್ನೊಂದು ನಾನರಿಯೆ ಎನ್ನೊಡೆಯನೆ ಕೇಳು
ಎನ್ನ ಐಶ್ವರ್ಯವು ನಿನ್ನ ಪರವಾಗಲಿ
ಎನ್ನ ಆರೋಗ್ಯವು ನಿನ್ನ ಪರವಾಗಲಿ
ಎನ್ನ ಆಯುಷ್ಯವು ನಿನ್ನ ಪರವಾಗಲಿ
ಎನ್ನ ಸಕಲ ವ್ಯಾಪಾರ ನಿನ್ನ ಪರ ಆಗಲಿ
ಎನ್ನ ಚರಣಗಳು ನಿನ್ನ ಯಾತ್ರೆಯ ಮೆಟ್ಟಲಿ
ಎನ್ನ ಕರಗಳಿನ್ನು ನಿನ್ನ ಪೂಜೆ ಮಾಡಲಿ
ಎನ್ನ ಕರ್ಣಗಳಿನ್ನು ನಿನ್ನ ಕಥೆ ಕೇಳಲಿ
ಎನ್ನ ಚಕ್ಷುಗಳು ನಿನ್ನ ಮೂರ್ತಿ ನೋಡಲಿ
ಎನ್ನ ಜಿಹ್ವೆಯು ಸತತ ನಿನ್ನ ಕೊಂಡಾಡಲಿ
ಎನ್ನ ಶಿರಸ್ಸು ನಿನ್ನ ಚರಣಕ್ಕೆರಗುತಿರಲಿ
ಎನ್ನ ಸರ್ವಾಂಗವು ಸಾಷ್ಟಾಂಗ ಹಾಕುತ
ಇನ್ನು ಹಗಲಿರುಳು ನಿನ್ನ ಓಲೈಸಲಿ
ಎನ್ನ ಮನೋವಾಕ್ಕಾಯದಿಂದಿನ್ನು
ಇನ್ನು ಮಾಡಿದ ಕರ್ಮ ನಿನ್ನ ಪರವು ಮಾಡಿ
ನಿನ್ನವನೆನಿಸಯ್ಯ ಘನ್ನದಯಾನಿಧಿ ಗೋಪಾಲವಿಠಲ
ಇನ್ನಿದೆ ಮಾಡಿಸೊ ಅನಂತ ಜನ್ಮಕ್ಕು ೫

ಅಟ್ಟತಾಳ

ಕೆಡಿಸುವನು ನೀನೆ ಇಡಿಸುವನು ನೀನೆ
ಕೊಡಿಸುವನು ನೀನೆ ಹಿಡಿಸುವನು ನೀನೆ
ಮಡದಿ ಇದ್ದರೆ ಮನೆ ಕಡುಶುಭ ಎಂಬೋರು
ಹುಡುಗರಿದ್ದರೆ ಮನೆ ಕಡುಶುಭ ಎಂಬೋರು
ಒಡವೆ ಇದ್ದರೆ ಮನೆ ಕಡುಶೋಭ ಎಂಬೋರು
ಪಡೆದರಿದ್ದರೆ ಮನೆ ಕಡುಶೋಭವೆಂಬೋರು
ಜಡಗಳ ಹಿಡಕೊಂಡು ಮಿಡುಕೊ ಜೀವರ ನೋಡಿ
ಎಡವಿ ಬಿದ್ದಂತ್ಯೆದೆ ಎನಗಾಗುತಿದೆ ದೇವ
ಜಡಮತಿ ಜಡಸ್ನಾನ ಜಡಕರ್ಮ ಜಡಪೂಜೆ
ಜಡದಿ ಭಿನ್ನ ನಿನ್ನ ಅಡವಿಗಳವಿಡಿಯದೆ
ಕಡೆಯಿಲ್ಲದ ಕರ್ಮ ಬಿಡದೆ ಮಾಡಲಿ ಯಾಕೆ
ಒಡೆಯ ನಿನ್ನ ಪ್ರೀತಿ ಪಡೆಯದರಿಯರಯ್ಯ
ಕಡು ಸಂಪತ್ತುಗಳು ನಿನ್ನಡಿಗಳು ಎನಗಿನ್ನು
ಬಿಡೆನು ಎಂದೆಂದಿಗು ದೃಢವಾಗಿ ಮನದೊಳು
ಕೊಡು ಇನ್ನು ಈ ಭಾಗ್ಯ ಒಡೆಯ ದೇವರದೇವ ಗೋಪಾಲವಿಠಲ
ಕೊಡು ಒಂದು ಕೊಡದಿರು ಬಿಡೆ ನಿನ್ನ ಚರಣವ ೬

ಆದಿತಾಳ

ದಣಿವು ಬಂದರೆನಗೆ ಏನು ಆವ
ಗುಣವು ಬಂದರೆ ಎನಗೆ ಏನು
ಜನುಮ ಬಂದರೆನಗೆ ಏನು ಸು-
ಗುಣವಾಗಿ ಬಂದರೆನಗೇನು
ನಿನಗೆ ನನಗೆ ಭೇದ ತಿಳಿದು
ನನಗೆ ದೇಹಕೆ ಭೇದ ತಿಳಿದು
ಕ್ಷಣಕ್ಷಣಕೆ ನೀ ಸ್ವಾಮಿಯೆಂದು
ಕ್ಷಣಕ್ಷಣಕೆ ನಿನ್ನ ಭೃತ್ಯನೆಂದು
ಎಣಿಸುತ್ತ ಎನಗಿಂತ ಗುಣಾಧಿಕರ ಹಿಡಿದು

ಫಣಿ ರುದ್ರ ಅಜ ಸಿರಿ ಪರಿಯಂತ್ರ ದಿನದಿನದಿ
ಅನುವರಿತು ಕೊಂಡಾಡಿ ಗುಣ ಉಪಾಸನೆಯನ್ನು
ಎನಗೊಂದು ಇರಲಯ್ಯ ಮುನಿಗಳ ಮನಃಪ್ರಿಯ
ಇನಿತು ಸುಖವೆ ಸಾಕು ಇನ್ನೊಬ್ಬರಿಗೆ ಅಂಜೆ
ಎನಗೊಂದು ಸುಖವಿಲ್ಲ ನಿನ್ನ ನೋಡೋದಕಿಂತ
ಗುಣಪೂರ್ಣ ಚೆಲುವ ಗೋಪಾಲವಿಠಲರೇಯ
ನಿನಗೆ ಎನಗೆ ಲೆಂಕೆ ಎನಗೊಬ್ಬರಿನ್ನಿಲ್ಲ ೭

ಜತೆ

ನಂಬಲು ನಾನಿನ್ನು ಎಷ್ಟರ ಮನುಜ
ನೀ ನಂಬಿಸಲು ನಂಬಿದೆ ಗೋಪಾಲವಿಠಲ

೩೦

ಸುಳಾದಿ

ಧ್ರುವತಾಳ

ನಿಲ್ಲುನಿಲ್ಲಯ್ಯ ದೇವ ನೀಲವರ್ಣದ ಸ್ವಾಮಿ
ಎಲ್ಲಿ ಪೋಗುತ ಇದ್ದಿ ಎನ್ನ ಠಕ್ಕಿಸಿ ಮುಂದೆ
ಸಲ್ಲದವನೆ ನಾನು ಸಾಕದಿದ್ದರೆ ನೀನು
ಬಲ್ಲಿದನೆ ಬಡವ ಬಡವ ಬಲ್ಲಿದನಯ್ಯ
ಎಲ್ಲ ಸಾಧನಗಳು ನಿನ್ನ ಬಳಿಯಲ್ಲುಂಟು
ಇಲ್ಲದ್ದೊಂದಿಲ್ಲ ಎನಗೆ ಇತ್ತ ನೀ ಒಲಿದ ಮೇಲೆ
ಎಲ್ಲ ನಿನ್ನೊಳಡಕ ಯೋಚಿಸಲಾಗಿ ಇನ್ನು
ಕಲ್ಲು ಮೃದುವಾಗುವುದು ಕಂಡಾಗಲೆ ನಿನ್ನ
ಹುಲ್ಲು ಪರ್ವತಭಾರ ಹರಿ ನಿನ್ನ ಕಾಣದಾಗ
ಎಲ್ಲಿಗೆಲ್ಲಿಯೊ ಆಗಿ ಎನಗೆ ತೋರುವುದಿನ್ನು

ಗಲ್ಲಗಲ್ಲವ ಬಡಿದು ಗಂಟಲನೆ ಸೆಳೆದುಕೊಂಡು
ಗುಲ್ಲು ಎಬ್ಬಿಸದೋಡಿಪೋದವನಂತೆ ನೀನು
ಮೆಲ್ಲ ಮೆಲ್ಲನೆ ಮನಕೆ ಬಂದು ಸುಳಿದುಪೋದರೆ
ಎಲ್ಲ ಸಂಪತ್ತು ಪೋಗಲಾಡಿಸಿಕೊಂಡವನು
ಎಲ್ಲಿ ತನಕ ಅವಗೆ ಕ್ಲೇಶವು ಆಗುವುದೊ
ಇಲ್ಲ ಸದೃಶ ಸ್ವಲ್ಪ ಆ ವಿಷಯದಲ್ಲಿನ್ನು
ಎಲ್ಲ ಸುರರೊಡೆಯ ಗೋಪಾಲವಿಠಲ
ಬಲ್ಲಿದ ನಿನ್ನ ಧ್ಯಾನ ಬಲ್ಲವಗನುಭೋಗ ೧

ಮಠ್ಯತಾಳ

ಧ್ಯಾನ ಮಾಡಿದವ ಸ್ನಾನ ಮಾಡಿದವ
ಧ್ಯಾನ ಮಾಡಿದವ ದಾನ ಮಾಡಿದವ
ಧ್ಯಾನ ಮಾಡಿದವ ಮೌನ ಮಾಡಿದವ
ಧ್ಯಾನ ಮಾಡಿದವ ನಾನಾ ಕರ್ಮಗಳು
ತಾನು ಮಾಡಿದವ ನ್ಯೂನ ಒಂದಿಲ್ಲವು
ಧ್ಯಾನಕ್ಕೆ ಹರಿಯೆ ನೀನು ಬಾರದಿರೆ
ನಾನು ಕಂಡ ವಿಷಯವನು ಧೇನಿಸುವೆ
ಜ್ಞಾನಪೂರ್ವಕವಾಗಿ ಧ್ಯಾನ ಮಾಡುವನಿಗೆ
ಕಾಣದೊಂದು ಇಲ್ಲ ಕರ್ಮ ಅದರೊಳಡಕ
ದೀನಜನಬಂಧು ಗೋಪಾಲವಿಠಲ
ಧ್ಯಾನಕ್ಕೆ ಎನಗೆ ನೀನು ವಿಷಯನಾಗು ೨

ರೂಪಕತಾಳ

ಆವಾವ ತೀರ್ಥವು ನಿನ್ನ ಬಳಿಯಲ್ಲುಂಟು
ಆವಾವ ಕ್ಷೇತ್ರವು ನಿನ್ನ ಬಳಿಯಲ್ಲುಂಟು
ಆವಾವ ತತ್ವವು ನಿನ್ನ ಬಳಿಯಲ್ಲುಂಟು
ಆವಾವ ಸಜ್ಜನರು ನಿನ್ನ ಬಳಿಯಲ್ಲುಂಟು

ಯಾವತ್ತು ನಿನ್ನಲ್ಲಿ ಉಂಟು ಯೋಚಿಸಲಾಗಿ
ಈ ವೇಳೆ ಆ ವೇಳೆ ಅನ್ನದೆ ಎಲೊ ದೇವ
ಪಾವನ ಪಾಪವು ಎಲ್ಲ ಶಕ್ತಿಗಳು
ದೇವ ನಿನ್ನಲ್ಲಿನ್ನು ತಾವಿಪ್ಪುವು ನೋಡೆ
ಈ ವೇಳೆಯಿತ್ತು ನೀ ನೋಡು ಯೋಚಿಸದೆ
ದೇವ ಒಬ್ಬರು ನಿಮಗೆ ಬ್ಯಾಡೆಂಬುವರಿಲ್ಲ
ದೇವಕೀನಂದನ ಗೋಪಾಲವಿಠಲ
ನೀ ಒಲಿಯಲು ಎನಗಿಲ್ಲ ಒಂದಸಾಧ್ಯ ೩

ಝಂಪೆತಾಳ

ಏಸು ಬಗೆ ಪೂಜೆಗಳು ನಿನಗೆ ಮಾಡುವೆ ಎಂಬ್ಯಾ
ನೀನಿತ್ತ ಬಂದೆನಗೆ ಒಲಿದಮೇಲಕೆ ದೇವ
ನಾನಾ ಜಲಗಳಲ್ಲಿ ನಾನಾ ಯೋನಿಗಳೈದಿ
ನಾನು ಇದ್ದುದೆಲ್ಲ ಸ್ನಾನಂಗಳು ನಿನಗೆ
ನೀನು ಎನ್ನನು ಎಲ್ಲಿ ನಿಲಿಸಿದ ಸ್ಥಳವೆಲ್ಲ
ಶ್ರೀನಿವಾಸನೆ ನಿನಗೆ ಅದೆ ಪೀಠವು
ಧೇನುಜನ್ಮಗಳಲ್ಲಿ ಬಂದು ಕರೆದ ಪಾಲು
ಶ್ರೀ ನಾರಾಯಣ ನಿನಗೆ ಅಭಿಷೇಕವು
ನಾನಾಪರಿ ಪುಷ್ಪ ಸಿರಿತುಲಸಿ ಸಿರಿಗಂಧಮರ
ನಾನಾ ಜನುಮಗಳಾಗಿ ನಾನು ಬಂದುದೆಲ್ಲ
ಶ್ರೀನಾಥ ನಿನಗೆ ಇವೆ ಪೂಜೆಗೆ ಆದೆನು
ನಾನಾವಸನವು ಜಡರುಗ್ಣ ಜನ್ಮಗಳಲ್ಲಿ
ನಾನು ಇದ್ದುದೆಲ್ಲ ನಿನಗೆ ಉಡಿಗಾಭರಣ
ಆನೆ ಕುದುರೆ ಅಂಡಜಾದಿ ಯೋನಿಗಳಲ್ಲಿ
ನಾನು ತಿರುಗಿದೆನಲ್ಲ ನಿನಗೆ ವಾಹನವಯ್ಯ
ನಾನಾ ಪದಾರ್ಥ ತಂಡುಲ ಮೊದಲಾದವುಗಳು
ಏನು ಐದಿದವೆಲ್ಲ ನಿನಗೆ ನೈವೇದ್ಯವು
ಭಾನು ಚಂದಿರ ಸಾಕ್ಷಿಯಾಗಿ ಮಾಡಿದ್ದೆ ದೀಪ

ನೀನು ಎನ್ನವನಾಗಿ ಇದ್ದು ಇದರೊಳಗೆಲ್ಲ
ಏನೇನು ಪರಿಪರಿ ಕರ್ಮ ಮಾಡಿಸಿದ್ದು
ಹೇ ನಾರಸಿಂಹ ಕಪ್ಪವು ನಿನಗೆ ಕಾಣೊ
ನೀನು ಮಂಗಳಮೂರ್ತಿ ಡಿಂಗರಿಗೆ ಬಲುಸಾರ್ಥಿ
ನೀನಾಗಿ ಮಾಡಿಸಿದುದೆಲ್ಲ ನಿನಗೆ ಆರ್ತಿ
ಜ್ಞಾನಮಯಕಾಯ ಗೋಪಾಲವಿಠಲರೇಯ
ನೀನಿತ್ತ ಬಾರೊ ನಿಜಭಕ್ತಜನರೊಡೆಯ ೪

ತ್ರಿಪುಟತಾಳ

ಮಾನವ ಯೊನಿಗಳು ಏನೇನು ಐದಿದವೆಲ್ಲ
ನಾನಾ ಬಗೆಯ ಪೂಜೆ ನಿನಗೆ ಸ್ವಾಮಿ
ನಾನು ನಿನ್ನನು ಬಿಟ್ಟು ಒಂದು ಕಾಲದಲಿನ್ನು
ಏನಿದ್ದೇನೊ ಚೆಲ್ವಚಿತ್ರಮಹಿಮ
ಕಾಣದೆ ಕೆಟ್ಟೆ ನಿನ್ನ ನಾನು ನನ್ನದು ಎಂಬೊ
ಹೀನಬುದ್ಧಿಯ ಮಾಯವು ಎನಗೆ ಪಚ್ಚಿ
ನಾನು ನೀನು ಎಂತೆಂಬೊ ಜ್ಞಾನವ ತಿಳಿಯದೆ
ಮಾನಸ ಪಶುವೊ ನಾ ಏನೆಂಬೆನೊ
ನೀನೆ ಅಲ್ಲವೆ ಎನಗೀ ಮಂದಬುದ್ಧಿಯಿತ್ತವ
ಏನು ಎನಗೆ ಕೆಟ್ಟದೊಂದು ಇಲ್ಲ
ಏನಾದದ್ದೆಲ್ಲ ಹಿಂದೆ ನಾನಾ ಕರ್ಮಗಳೆಲ್ಲ
ಮನಸಾ ವಾಚಾ ಕಾಯಾ ಮಾಡಿದದ್ದು
ಶ್ರೀನಾಥ ನಿನಗೆ ಮತ್ತೀಗ ಒಪ್ಪಿಸುವೆನೊ
ನಾನಲ್ಲ ಇದಕ್ಕೆ ಸ್ವತಂತ್ರನೆಂದು
ಏನು ಆದದ್ದು ಎಲ್ಲ ನೀನೆ ತೆಗೆದುಕೊಂಡು
ಹೀನ ನಾ ನೀನು ಸಾರ್ಥಕನ ಮಾಡು
ಭಾನುಶತತೇಜ ಗೋಪಾಲವಿಠಲ
ಕಾಣಿಸಿಕೊಂಡು ಕರ್ಮಕಾನನ ದಾಟಿಸೆನ್ನ ೫

ಅಟ್ಟತಾಳ

ಎನ್ನ ದಶ ಇಂದ್ರಿಯಗಳು ನಿನ್ನ ವಿಷಯೀಕರಿಸಲಿ
ಎನ್ನ ಮನಸು ಬಂದು ನಿನ್ನಲ್ಲೆ ಎರಗಲಿ
ಅನ್ಯವೆಂದರೆ ಎನಗೆ ವಮನ ಸರಿ ಆಗಲಿ
ನಿನ್ನನೆ ಹುಡುಕುತ ಎನ್ನ ಬುದ್ಧಿಯು ಇರಲಿ
ನಿನ್ನ ನೋಡಿ ನಲಿದಾಡಲೆನ್ನ ಚಿತ್ತ
ನೀನಲ್ಲದಿಲ್ಲೆಂಬೊ ಅಹಂಕಾರ ಎನಗಿರಲಿ
ಇನ್ನೇನು ಬೇಡುವುದಿಲ್ಲವೊ ಹೇ ಸ್ವಾಮಿ
ನಿನ್ನದೆಲ್ಲ ಎಂಬುವುದು ಪಾಲಿಸು
ಘನ್ನ ದಯಾನಿಧಿ ಗೋಪಾಲವಿಠಲ
ನೀನಲ್ಲದರಿಯೆ ನಾ ಇನ್ನೊಂದು ಸುಖವ ೬

ಆದಿತಾಳ

ಮೂರು ದಿನಕೆ ಒಮ್ಮೆ ಆಹಾರವನ್ನು ಕೊಂಡು
ನೀರು ಮಾತ್ರವೆ ಕೊಟ್ಟು ನಿಲ್ಲಿಸಿ ದೇಹವ
ಆರು ಎನಗೆ ಹತ್ತದಂತಲಾದರು ಏನು
ನಾರಿಸುತರು ಸೇರದಂತಲಾದರು ಮಾಡು
ಅರಿವರಿವರನ್ಯತ್ರರ ಕೂಡಿಸದ್ಹೋಗು
ಊರನೆ ಹೊರಡಿಸಿ ಕಾನನ ಸೇರಿಸು
ನಾರಾಯಣ ನಿನ್ನ ನಾನು ಬಿಟ್ಟವನಲ್ಲ
ಈ ರೀತಿ ಎನಗೆ ನೀ ಮಾಡಿದರು ಇನ್ನು
ಆರ ಭಾರಕೆ ಸರ್ವಕಾರಣ ನೀನೆಂದು
ಶರೀರ ಒಪ್ಪಿಸಿ ಕರವ ಮುಗಿದೆ
ಘೋರ ಸಂಸಾರದ ಬೇರ ಕಿತ್ತುವುದಕ್ಕೆ
ಬಾರಿಬಾರಿಗೆ ನಿನ್ನ ಸ್ಮರಣೆ ಬಲವಯ್ಯ
ಭಾರತೀಶನೊಡೆಯ ಗೋಪಾಲವಿಠಲ
ದೂರ ನೋಡದೆ ಮನಕೆ ಬಾರೊ ಸರ್ವದಾ ಸ್ವಾಮಿ ೭

ಜತೆ

ನೀನು ಧ್ಯಾನಕೆ ನಿತ್ಯ ನಿಲುಕುತಲಿರು ಎಂದೆ
ನಾನು ಅನ್ಯವನೊಲ್ಲೆ ಗೋಪಾಲವಿಠಲ

೩೧

ಉಗಾಭೋಗ

ನೀರೊಳಗೆ ನಿಂತು ನಿಡುಗುಷ್ಟು ನಾರುವಗೆ
ಚಾರು ಕಸ್ತೂರಿ ಲೇಪನದ ಮದವೊ
ಭಾರ ಬೆನ್ನಲಿ ಪೊತ್ತು ಕೈಕಾಲು ಮುದುರಿದಗೆ
ಧೀರಶೇಷಶಾಯಿಯಾದ ಮದವೊ
ಮೋರೆಯಲಿ ನೆಲ ಕೆದರಿ ಬೇರಮೆಲುವವಗೆ
ಸಾರಷಡ್ರಸ ಭೋಜನದ ಮದವೊ
ಕಾರು ಕರುಳನು ವನಮಾಲೆ ಹಾಕಿದವಗೆ
ಹಾರ ಪದಕಾದಿಗಳ ಹಾಕಿದ ಮದವೊ
ಮೂರಡಿಯ ಭೂದಾನ ಬೇಡಿದವಗೆ
ಸಾರಿದರಭೀಷ್ಟಗಳ ಪೂರೈಪ ಮದವೊ
ಧಾರುಣಿಯನಿತ್ತು ಕುಳ್ಳಿರೆ ಸ್ಥಳವಿಲ್ಲದವಗೆ
ಈರೇಳು ಲೋಕಗಳನಾಳ್ವ ಮದವೊ
ನಾರಿಯನು ಕಳಕೊಂಡು ವನವ ಸಂಚರಿಸಿದವಗೆ
ಮೂರುಧಾಮದಿ ರಮೆಯ ಭೋಗದ ಮದವೊ
ಪೋರನಾರಿಯರಿಂದ ಬೈಸಿಕೊಂಡವನಿಗೆ
ವಾರಿಜೋದ್ಭವಾದಿ ಸುರರ ಸಂಸ್ತುತಿಯ ಮದವೊ
ಊರೆಲ್ಲ ನೋಡೆ ಬತ್ತಲೆ ನಿಂತವಗೆ
ಚಾರು ಪೀತಾಂಬರವುಡುವ ಮದವೊ
ಘೋರ ತುರಗವನೇರಿ ಹಾರಿಸ್ಯಾಡುವಗಿನ್ನು
ವೀರಸಿಂಹಾಸನದಿ ಕುಳಿತ ಮದವೊ

ಮೂರುದಿನದರಸುತನ ಸ್ಥಿರವೆಂದು ನೀನೆಚ್ಚಿ
ಸೇರಿದವರನು ಬಿಡುವುದು ಧರ್ಮವೇನೊ
ಬಾರದೆ ತಪ್ಪದೊ ಹಿಂದಣ ಬವಣೆಗಳು
ದೂರ ವಿಚಾರಿಸೊ ಮಾರಮಣನೆ
ಶ್ರೀರಂಗರಾಜ ಗೋಪಾಲವಿಠಲ ನಿನ್ನ
ಸಾರಿದವರನು ಪೊರೆದು ಕೀರುತಿಯ ಪಡೆಯೊ

೩೨

ಉಗಾಭೋಗ

ಪರಮಪುರುಷ ಪಾಪನಾಶ ಪತಿತಪಾವನ ಪರತರ
ಪರಮ ಆಪ್ತ ಪರಾತ್ಪರಾತ್ಮಕ
ಪರಂಜ್ಯೋತಿಸ್ವರೂಪ ಪರಮಮಂಗಳ
ಪರಮ ಕರುಣಿ ಪಾಹಿ ಪಂಡರಿರಾಜ
ಪರಮಪುರುಷ ಶರಣಜನಪಾಲಕನೆ ಜಯ ಜಯ
ಶರಧಿ ಬಂಧನ ರಾಮ ಜಯ ಜಯ
ಶರಧಿಶಯನ ಶ್ವೇತವರ್ಣ ಶ್ವೇತವಾಹನ ಪ್ರಿಯನೆ
ಭಾರತೀಶನೊಡನೆ ಏ ಭೂ-
ಭಾರನಿಳುಹಿದ ಸ್ವಾಮಿ ನಮೋ ನಮೋ
ಚಾರು ಶ್ವೇತ ದ್ವೀಪವಾಸಿ ಗೋಪಾಲ ವಿಠಲ
ಸಾರ್ವಭೌಮ ಪರಮ ಪುರುಷ

೩೩

ಪೊರೆ ಎಮ್ಮ ಸ್ವಾಮಿ ನೀ ಜಗದಂತರಿಯಾಮಿ ಪ.

ಮಾರಜನಕ ನಿನ್ನ ಕೋರಿ ಬಂದೆನೊ ದೇವ
ಕ್ರೂರ ಕರ್ಮಾಂತರ ಹರಗೈಸೊ ನೀ ದೇವ ೧

ಭಕ್ತರ ಪಾಲಿಪ ಶಕ್ತಿ ನಿನ್ನದೊ ದೇವ
ಭಕ್ತಿಯಿಂದಲಿ ನಿನ್ನ ಪಾದ ತೋರಿಸೊ ದೇವ ೨

ಬಡವರ ಪಾಲಿಪ ಶಕ್ತಿ ನಿನ್ನದೊ ದೇವ
ಅಡಿಗಳಿಗೆರಗುವ ಒಡೆಯ ಗೋಪಾಲವಿಠಲ ೩

೩೪

ಸುಳಾದಿ

ಧ್ರುವತಾಳ

ಪೋಯಿತೆನ್ನ ಜನುಮ ವೃಥಾಯುವಾಗಿ ಇನ್ನು
ನ್ಯಾಯದ ಮಾರ್ಗವನು ಆಯವಳಿಯದೆ
ಬಾಯಿಮುಚ್ಚಿಕೊಂಡು ಬಹುಜನ್ಮದ ದುಷ್ಕೃತ
ಕಾಯದ ಸುಖಕ್ಕಾಗಿ ಕಂಡವರ ಹಾರೈಸಿ
ಛಾಯಗಾರಿಕೆ ತೋರಿ ಕ್ಷೇತ್ರವೃತ್ತಿಗಳಿಸಿ
ಮಾಯಾಪ್ರಪಂಚನಾಗಿ ಮದೋನ್ಮತ್ತದಿಂದಲಿನ್ನು
ಆಯುಷ್ಯವ ಕಳೆದೆ ಅಜ್ಞಾನತನದಲ್ಲಿ
ನಾಯಿಬದುಕಿನಂತೆ ಆಯಿತೆನ್ನದು ನೋಡು
ತಾಯಿಯ ಪಂಕ್ತಿಯಲ್ಲಿ ಪಾಯಸೂಟವ ಬಿಟ್ಟು
ದಾಯಿಗರಮನೆ ಪೀಯೂಷ ಉಂಡಂತೆ
ನಾಯಕನಿರಲು ಸತಿ ಅನ್ಯಾಯಕ್ಕೆ ಬಿದ್ದು ಪರ-
ನಾಯಕಗೆ ಬಲು ಸಾಯಾಸಬಟ್ಟಂತೆ
ನೋಯ ದಣಿದೆನಯ್ಯ ಸಾಯ (ಸಹಾಯ) ವಾಗುವರಿಲ್ಲ
ಕಾಯೊ ಲಕುಮಿರಮಣ ದಯದಿಂದಲಿ ಎನ್ನ
ಗಾಯತ್ರಿ ಪ್ರತಿಪಾದ್ಯ ಗೋಪಾಲವಿಠಲ
ಮಾಯಾರಹಿತ ಸೂತ್ರಧಾರಕ ಜಯ ಜಯ ೧

ಮಠ್ಯತಾಳ

ನಿನ್ನವನೆಂತಲೆ ಅನ್ಯರಿಗೆ ತೋರ್ವೆ
ನಿನ್ನ ಪ್ರೀತಿಯ ಧರ್ಮ ಎನ್ನೊಳೊಂದಿಲ್ಲ
ಅನ್ಯಕೆ ಮಾಡುವೆನೊ ಅರ್ಚನೆಗಳು ಎಲ್ಲ
ಪುಣ್ಯಾತುಮ ನಿನ್ನ ಪೂಜಿಸಲಿಲ್ಲಯ್ಯ
ಕಣ್ಣಿಗೆ ತೋರುವೆ ಹರಿಭಕ್ತನಂತೆ
ಕನ್ನಗಾರನಂತೆ ನಿನ್ನವರಲಿ ದೋಷ
ವನ್ನು ತಾ ಎಣಿಸುವೆ ಬಣ್ಣಗೆಟ್ಟು ಬಲು
ಇನ್ನು ಇದರ ಮೇಲೆ ನಿನ್ನವನೆಂತಾಹೆ
ಅನ್ಯಾಯನ್ಯಾಯ ಇನ್ನೇನಿನ್ನೇನು
ಘನದಯಾನಿಧೆ ಗೋಪಾಲವಿಠಲ
ಎನ್ನ ಗುಣದೋಷ ಎಣಿಸದೆ ಕಾಯಯ್ಯ ೨

ರೂಪಕತಾಳ

ಅನ್ಯವಿಷಯಕೆ ಬಟ್ಟಂತ್ತಿನ್ನು ಧಾವತಿಗಳು
ನಿನ್ನ ಪರ ಆದರೆ ಎನಗೆಲ್ಲೆವ ದೋಷ
ಹೊನ್ನು ಮಣ್ಣು ಮಿಕ್ಕ ಅನ್ಯವಾರ್ತೆಗಳಲ್ಲಿ
ಎನ್ನ ಮನವು ಎಳೆದು ಪುಣ್ಯವ ಪೋಗಾಡಿ ಹುಣ್ಣು ಆಗೋದ
ನಿನ್ನವರೆನ್ನುವರ ಬಾಗಿಲನ್ನು ಕಾಯಿದಿಹಂತೆ
ಕುನ್ನಿ ಎನಿಸು ಹರಿ ಎನ್ನ ಮನೋವಾಚಕಾಯದಿನ್ನು ಮಾಳ್ಪ
ಚೆನ್ನ ಕರ್ಮಗಳೆಲ್ಲ ನಿನ್ನಪರವೆ ಮಾಡು
ಇನ್ನೇನು ನಿನ್ನ ನಾ ಘನ್ನ ಬೇಡುವುದಿಲ್ಲ
ಮನ್ನಿಸಿ ಎನ್ನಮನ ಅಧೀನವ ಮಾಡು
ಪನ್ನಗಶಯನ ಗೋಪಾಲವಿಠಲರೇಯ
ನಿನ್ನ ಹೊರತು ಎನಗನ್ಯಥಾ ಗತಿಯಿಲ್ಲ ೩

ಝಂಪೆತಾಳ

ಗತಿ ಎಂಬುವುದೆ ನಿನ್ನ ಸ್ಮರಣವೆ ಗತಿ ಅನ್ಯ-

ಗತಿ ಎಂಬುವುದು ನಿನ್ನ ವಿಸ್ಮರಣೆ
ಹಿತ ಎಂಬುವುದು ನಿನ್ನ ಅರ್ಚನೆ ಹಿತವು
ಅಹಿತವೆಂಬುವುದು ನೀನೆ ತಾನೆಂಬೋದು
ಮತಿ ಎಂಬುವುದು ನಿನ್ನ ಮನದಲ್ಲಿ ತಿಳಿವುದು ಮಂದ-
ಮತಿ ಎಂಬುವುದು ನಿನ್ನನ್ನು ತಿಳಿಯದ್ದೆ
ಆತುಮಮೂರುತಿ ಅಂತರಾತುಮ ಮೂರುತಿಯಾಗಿ
ಸತತ ಮಾಡಿಸುವಿ ಸರ್ವಕರ್ಮವು
ಹಿತಕಾರ್ಯವೆಲ್ಲ ದೇವತೆಗಳ ದ್ವಾರ ಅ-
ಹಿತಕಾರ್ಯ ಅಹಿತ ಅಸುರರ ದ್ವಾರದಿಂದ
ಜಿತವಾಗಿ ಮಾಡಿಸಿ ಜೀವರಿಗೆ ಕರ್ಮಫಲ
ಮಿತಿ ತಪ್ಪದೆ ಉಣಿಸುವೆಯ ದೊರೆಯೆ
ಪತಿತಪಾವನ ರಂಗ ಗೋಪಾಲವಿಠಲ
ಪತಿತನ್ನ ಪೊರೆಯಯ್ಯ ಹಿತದಿಂದಲಿ ೪

ತ್ರಿಪುಟತಾಳ

ಅನಾದಿಕಾಲದಿಂದ ಆ ನಿನ್ನವನಾದೆನೆ
ಆನಾವದು ಮಾಡಿದ ಅಧರ್ಮವೆ ಧರ್ಮ
ಆನಾದರು ಇನ್ನು ಅನಂತ ಪಾತಕೊಂದು
ಕಾಣಿಸುತದೆ ದೇವ ಕಾರುಣ್ಯಸಾಗರ
ಏನು ಸ್ವಭಾವವೊ ಎನಗೆ ಕಾಣೆ ನೀನೆ ಬಲ್ಲ್ಯೋ
ನೀನೆಗತಿ ಎಂಬೊ ದೃಢವನು ದೊರಕುತದೆ
ನೀನಿರು ಸ್ವಾತಂತ್ರ್ಯ ಆನೇನು ಬಲ್ಲೆನೊ
ಏನಿದರ ಮೇಲೆ ನಾ ನಿನ್ನವನಾಹೆ ಹೇಗೆ
ಜ್ಞಾನಿಗಳು ಕಂಡರೆ ಹೀನನ ಮೇಲೆ ದಯ-
ವನು ಮಾಡುತಲಾರೆ ನ್ಯೂನಗಳೆಣಿಸದೆ
ನಾನಾದರು ಅವರ ಧೇನಿಸಿ ತಿಳಿಯಲರಿಯೆ
ತಾನಾಗೇವೆ ದಯವನು ಮಾಡುವರು ರಂಗಯ್ಯ
ನೀನೆ ಕಾರಣ ಪಯೋನಿಧಿ ನಿಷೇಧನೆಯಲ್ಲಿ
ಆನೊಬ್ಬರರಿಯೆನು ಅನಿಮಿತ್ತ ಬಂಧು ದೇವ

ದೀನರಕ್ಷಕ ಚೆಲುವ ಗೋಪಾಲವಿಠಲ
ಮಾನಾಭಿಮಾನದೊಡೆಯ ನಾ ನಿನ್ನ ಬಿಡೆನಯ್ಯ ೫

ಅಟ್ಟತಾಳ

ಕೆಟ್ಟದ್ದೆಲ್ಲ ಎನ್ನ ಕಾರ್ಯಗಳೇನು
ಕೊಟ್ಟದ್ದಿಲ್ಲ ನಿನ್ನ ಕೈಗೆ ನಾನೇನು
ಎಷ್ಟು ಕ್ಲುಪ್ತದೊಳಿಟ್ಟಷ್ಟೆ ಮಾಡಿಸುವಿನ್ನು
ಗಟ್ಯಾಗಿ ಕ್ಲುಪ್ತ ಮೀರಿ ಪಾಪಪುಣ್ಯ
ಅಟ್ಟಹಾಸವಾಗೆ ನಷ್ಟ ಮಾಡಿಸಿ ಇನ್ನು
ಇಷ್ಟು ಮಾತ್ರಕೆ ನಾ ಕೆಟ್ಟದ್ದೇನು ಹರಿ
ನಷ್ಟ ಇಷ್ಟ ಇನ್ನು ಆರಭಾರಗಳೆಲ್ಲ
ಸೃಷ್ಟ್ಯಾದ್ಯಷ್ಟಕರ್ತ ಕೃಷ್ಣ ನಿನ್ನದಯ್ಯ
ಇಷ್ಟದೈವ ನಮ್ಮ ಗೋಪಾಲವಿಠಲ
ಬಿಟ್ಟೇನೆಂದರೆ ಬಿಡೆ ಎಷ್ಟು ಸುಮ್ಮನಿರೆ ೬

ಆದಿತಾಳ

ಕಾಲಕಾಲಕೆ ನಿನ್ನ ಕಾರ್ಯಗಳನ್ನು ತಿಳಿಯೆ
ಪಾಲಿಸಬೇಕಯ್ಯ ಪರಮಪುರುಷ ಹರಿ
ಬಾಳುವೆಯ ಮಾಡಿಸು ವೇಳ್ಯೆ ವೇಳ್ಯೆಕೆ ನಿನ್ನ
ಊಳಿಗದೊಳಗಿಟ್ಟು ಕಾಲವ ಕಳೆಸೋದು
ತಾಳಿಮಿಕಿಯ ಕೊಡು ಕೋಪಾಟೋಪಗಳಲ್ಲಿ
ಆಳರಿತು ಪೊರೆಕಂಡ್ಯಾ ಗೋಪಾಲವಿಠಲ ೭

ಜತೆ

ನಾ ಅಪರಾಧ್ಯಯ್ಯ ನೀ ಅಲ್ಲೆ ಪ್ರೇರಕಾಹೆ
ಅಹಲ್ಯಾಶಾಪವಿಮೋಚ ಗೋಪಾಲವಿಠಲ

೩೫

ಸುಳಾದಿ

ಧ್ರುವತಾಳ

ಬಂದುನಿಲ್ಲಯ್ಯ ಭವದ ಸಿಂಧುವಿಗೆ ಅಗಸ್ತ್ಯ
ನಂದದಿ ಸೆಳೆದು ಎನ್ನ ಮಂದಿರದೊಳಗಿನ್ನು
ಇಂದಿರೆಯಿಂದೊಪ್ಪುತ ಕಂದಕಂದ ಬೊಮ್ಮ ಮತ್ತ
ನಂದಿವಾಹನ ಸುರರಿಂದ ವಂದಿತನಾಗಿ
ಚೆಂದುಳ್ಳ ಓಲಗ ಆನಂದದಿ ಕೊಳುತಲಿ
ಇಂದು ಬಾರಯ್ಯ ಬಲು ಸುಂದರವಿಗ್ರಹ
ಮಂದಮತಿ ನಾ ನಿನ್ನ ಮನದಣಿ ಬೇಡಿಕೊಂಬೆ
ಕಂದನ ಬಿನ್ನಪವ ತಂದೀಯೊ ತಾರೊ ಮನಕೆ
ಒಂದರಿತವನಲ್ಲ ಒಂದೆ ದೇವನೆ ಕೇಳು
ವಂದಿಸೊ ಬಗೆ ನಿನ್ನ ಒಂದಾದರು ಆನರಿಯೆ
ಕುಂದು ಮನುಜ ನಿನ್ನಾನಂದ ನೋಡೆನೆಂಬೊ
ಚೆಂದುಳ್ಳ ಬಹು ದಿವಸದಿಂದಲೆನ್ನ ಆಸೆಯ
ಮಂದರಧರ ಎನ್ನ ಮನದಭೀಷ್ಟೆ ಪೂರೈಸು
ಸಂದೇಹ ಮಾಡದಿರು ಸಾಧುಜೀವರಪಾಲ
ವೃಂದಾವನದ ಗೋವಿಂದ ಸಿರಿ ಕೃಷ್ಣ
ಮಂದಾಕಿನಿಯಜನಕ ಗೋಪಾಲವಿಠಲ
ಬಂದೆನ್ನ ರಕ್ಷಿಸಯ್ಯ ಭಕುತವತ್ಸಲದೇವ ೧

ಮಠ್ಯತಾಳ

ಕೊಡುವುದು ಹಿಡಿವುದು ಬಿಡುವುದು ಇಡುವುದು
ನಡೆವುದು ನುಡಿವುದು ಅಡಗೋದು ಮಡಗೋದು
ಒಡಲೊಳು ಪೋಗುವುದು ತಡೆವುದು ಅಲ್ಲಲ್ಲಿ

ಸಡಗರದಲಿ ತಿಳಿಸಿ ಕಡೆಹಾಯಿಸು ಭವದ-
ಕಡಲ ಎನ್ನನು ಬೇಗ ಮಡದಿಯರು ಮಕ್ಕಳು
ಒಡವೆಗಳಲಿ ಮನವು ಕಡಕವಿಲ್ಲದೆ ಎಳೆದು
ಪಡಬಾರದ ಭಂಗ ಬಡಿಸಿದ ಕಾಲಕ್ಕು
ದೃಢ ನಿನ್ನ ಜ್ಞಾನ ಕೊಡು ಎನಗೆಲ್ಲಲ್ಲಿ
ಮೃಡಸಖನೆ ಚೆಲ್ವ ಗೋಪಾಲವಿಠಲ ಎನ್ನ
ಹಿಡಿದಾಡಿಸೊ ದೊರೆಯೆ ಬಿಡದಿರು ಎನ್ನ ಕರವ ೨

ತ್ರಿಪುಟತಾಳ

ಆನಂದ ಕೊಡುವುದು ನಿನ್ನಂದ ಮಾತ್ರದಿ
ಆನಂದ ಕೊಡುವುದು ನಾನಂದ ಮಾತ್ರದಿ
ಆನಂದವೆಂಬ ಸಥೆಯು ಆನಾಡಲಿಲ್ಲವೆಂದು
ಆನಂದಮೂರುತಿ ಹರಿ ಆಡಿಸಿದನೆಂತೆಂದು
ಆನಂದನಾಗಿ ಶ್ರೀಮದಾನಂದ ತೀರ್ಥರ
ಆನಂದ ಉಕ್ತಿಯ ಆನಂದದಲ್ಲಿದ್ದರೆ
ಆನಂದ ಕೊಡುವುದು ಆನಂದಮೂರ್ತಿಯ
ಆನಂದವೆಂಬೋದು ನಿನ್ನ ನೋಳ್ಪುವುದೆ
ಆನಂದವೆಂಬೋದಿನ್ನೊಂದು ಅರಿಯೆನು
ಆನಂದಗುಣಪೂರ್ಣ ಗೋಪಾಲವಿಠಲ
ಈ ನಿಮಿಷವೆ ಸಾಕು ನಿನ್ನ ತಿಳಿವವ ಧನ್ಯ ೩

ಅಟ್ಟತಾಳ

ದೋಷದೂರನೆ ನಿನ್ನ ಸ್ಮರಿಸುವರಿಗೆ ದೋಷದ
ರಾಸಿ ಇನ್ನಾಶ್ರೈಸಲಿ ಬೇಕೆ
ನಾಶ ಮಾಡೆನ್ನಘರಾಸಿಗಳೆಲ್ಲನು
ಮೋಸಗೊಳಿಸಬೇಡ ದಾಸರ ಪ್ರಿಯನೆ
ಹೇಸಿಕ್ಕುಟ್ಟಿಸು ದುರಾಸೆಗೆ ಮನವನು
ಆಸೆ ತೋರಿಸು ನಿನ್ನ ಪಾದಕಮಲಾನಂದ

ಈಷನ್ಮಾತ್ರವನ್ನು ದಾಸತ್ವ ಎನ್ನಲ್ಲಿ
ವಾಸವಾಗೆ ಇತ್ತೆ ಪೋಷಿಸು ಶ್ರೀ ಹರಿ
ಈಶ ನೀನೆಂಬೋದು ದಾಸ ನಾನೆಂಬಂಥ
ಈ ಸಮಯದಿ ಅಲ್ಲ ಅನಾದಿಕಾಲದಲಿಂದ
ಶ್ರೀಶ ಬಾ ಎನ್ನಯ್ಯ ಗೋಪಾಲವಿಠಲ
ಮಾನಿಸದೆ ಎನ್ನ ಮನದೊಳಗೆ ನಿಲ್ಲು ೪

ಆದಿತಾಳ

ಒಂದು ದಿನದ ಗೆಳೆಯ ತಾನು
ಹೊಂದಿದವನು ಅಂದು ಅವಗೆ ದುಃಖ
ಚೆಂದದಿ ತರಿವನು ಕುಂದು ನಿಂದೆ ಆದರೆ
ನೊಂದುಕೊಂಬೋನು ಮನದಿ ಒಂದಾಗುವರು ತಮ್ಮನಂದಾಗಲಿ
ಇಂದಿರೇಶನೆ ಎನಗೆ ನಿನಗೆ ಗೆಳೆಯತನ
ಇಂದಾದುದಲ್ಲ ಅನಾದಿಕಾಲದಲಿಂದ
ಹೊಂದಿಕೊಂಡಿದ್ದ ಮೇಲೆ ಬಂದು ಎನಗೆ ದೋಷ
ನಿಂದಿರದಂತೆ ಮಾಡಬೇಕಲ್ಲದೆ ನೀ ಎನ್ನ
ಬಂಧನದೊಳಗ್ಹಾಕಿ ಬರಿದೆ ದಣಿಸುವರೆ
ತಂದೆಯ ಮೇಲೆ ಸ್ನೇಹ ಚೆಂದದುಂಟಾದದ್ದೆಮ್ಮ
ತಂದೆಯತಂದೆ ಕೇಳೊ ಬಂದೆ ನಾನದರೊಳು
ಹೊಂದಿದವ ನಿಮ್ಮ ಕಂದನ ಮತವನು
ಮಂದಮತಿಯ ಮಾತು ಮಾರಮಣ ಮನ್ನಿಸು
ವೃಂದಾರಕಪಾಲ ಗೋಪಾಲವಿಠಲ
ಬಂಧು ಎನಗೆ ಭವದಿಂದ ದಾಟಿಸು ಜೀಯ ೫

ಜತೆ

ಭಕುತಿಯನೀಯೆನಗೆ ಯುಕುತಿಯಿಂದಲಿ ನಿನ್ನ
ಉಕುತಿಲಿ ಪಾಡುವಂತೆ ಮಾಡು ಗೋಪಾಲವಿಠಲ

೩೬

ಬಂದೆ ಬಂದೆ ಸ್ವಾಮಿಯೆ ಬಂದೆ ಬಂದೆ ಪ.

ಬಂದೆ ಬಂದೆ ಗೋವಿಂದ ಗೋವಳ
ಬಾಂಧವ ಭಕ್ತವತ್ಸಲ
ಇಂದಿರೇಶ ಶ್ರೀ ವೆಂಕಟ ನಿನ್ನ
ಸಂದರುಶದಕೆ ಸಾಗಿ ನಾನಿಲ್ಲಿ ಅ.ಪ.

ನಡೆದು ನಡೆಸುತ ನುಡಿದು ನುಡಿಸುತ
ಅಡಿಗಡಿಗೆ ಕಾಪಾಡುತ
ಒಡನೆ ಆಡುತ ಬಿಡದೆ ಕ್ಷಣವನು
ಸಡಗರದಿ ಕರೆತರಲು ನಾನಿಲ್ಲಿ ೧

ಆಪ್ತ ಅನಿಮಿತ್ತ ವ್ಯಾಪ್ತ ಸರ್ವತ್ರ
ಗುಪ್ತ ಗುಣಗಣಪೂರ್ಣನೆ
ಪ್ರಾಪ್ತ ನೀನೆನಗಾಗಬೇಕೆಂದು
ವ್ಯಾಪ್ತಿ ನಿನ್ನದು ಹುಡುಕುತಲಿ ನಾ ೨

ಒಂದು ರೂಪದಿ ನಿಂದು ಎನ್ನಲ್ಲಿ
ಚೆಂದದಿಂ ಕರೆತಂದೆ ಇಲ್ಲಿ
ಒಂದರಿಯೆ ನಿನ್ನ ವಂದಿಸುವ ಬಗೆ
ಬಂದೊದಗೊ ನೀನೆನ್ನ ವದನಕೆ ೩

ಬಂದೆ ಬಂದೆ ನೀ ಬಂದಂತೆ ಕರ–
ತಂದುದಕೆ ಫಲ ನೀನೆ ಬಲ್ಲೆ
ಸಂದರುಶನ ನಿನಗೆ ನೀ ಮಾ
ಳ್ಪಂದವನು ನೋಳ್ಪಾತುರದಿ ನಾ ೪

ಏನು ಕೊಡಲಿಲ್ಲ ಏನು ಬೇಡಲಿಲ್ಲ
ಏನು ಪಡೆಯಲೊ ಕರುಣಿಯೆ

ನೀನು ಕೊಟ್ಟ ಸ್ವಾತಂತ್ರ್ಯದ ಫಲ
ನಿನಗೆ ಅರ್ಪಿಸಬೇಕೆನುತ ಇಲ್ಲಿ ೫

ರಕ್ಷಶಿಕ್ಷಕ ಮೋಕ್ಷದಾಯಕ
ಸೂಕ್ಷ್ಮ ಘನ ಮಹಾವ್ಯಾಪಕ
ಕುಕ್ಷಿಯೊಳು ಜಗದ್ಭರಿತ ಪೂರಿತ
ಅಕ್ಷಯಫಲದಾಯಕ ೬

ನಮೋ ನಮೋ ನಾಗಾರಿವಾಹನ
ನಮೋ ನಮೋ ಸುರಸುಪ್ರಸನ್ನನೆ
ನಮೋ ನಮೋ ಗೋಪಾಲವಿಠಲ
ನಮಿಪ ಭಕ್ತರ ಸಲಹುವನೆಂದು ೭

೩೭

ಬರುವುದೆಲ್ಲ ಬರಲಿ ಸಿರಿಹರಿಯ ಕರುಣವಿರಲಿ ಪ.

ಗುರುಗಳ ಚರಣಸರೋರುಹ ಮಧುರಸ
ತರತರ ತಪದಿ ಮೈಮರೆತಿರಲಿ ಅ.ಪ.

ಸತಿಯ ಮತಿಯು ಕೆಡಲಿ ಸುತರತಿಪತಿತರಾಗಿ ಬರಲಿ
ಜೊತೆಯೊಳಿದ್ದ ಹಿತ ಪ್ರತಿಕೂಲನಾಗಲಿ
ವತನ ಕೆಡುವ ಪ್ರಯತ್ನವು ಬರಲಿ ೧

ಅರಸು ಕರೆಸದಿರಲಿ ಸತಿ ಸರಸಸುರಿಸದಿರಲಿ
ನರಸಖನಿಗೆ ಭಾರ ಸಮರ್ಪಿಸಲಿ
ವಿರಸಮಾಡಿ ಮನೆ ಮುರಿಸುತ ಬರಲಿ ೨

ಮಾನಮಾಡದಿರಲಿ ಜನರಪಮಾನ ಮಾಡಿ ನಗಲಿ
ಜ್ಞಾನಹೀನನೆಂದೆನುತ ನಿಂದಿಸಲಿ
ಶ್ರೀನಿಧಿ ಗೋಪಾಲವಿಠಲ ಬೆರಿಲಿ ೩

೩೮

ಸುಳಾದಿ

ಧ್ರುವತಾಳ

ಭಕುತರ ಸೃಷ್ಟಿಯೇವೆ ನಿನ್ನ ಸೃಷ್ಟಿಯೊ ದೇವ
ಭಕುತರ ಸ್ಥಿತಿಯೇವೆ ನಿನಗೆ ಸ್ಥಿತಿಯು ಸ್ವಾಮಿ
ಭಕುತರ ಲಯವೆ ನೋಡು ನಿನಗೆ ಲಯವು ಇನ್ನು
ಭಕುತರ ಪ್ರೇರಣವೆ ನಿನಗೆ ಪ್ರೇರಣೆ ಕಾಣೊ
ಭಕುತರ ಜ್ಞಾನವೆ ನಿನಗೆ ಜ್ಞಾನವು ನೋಡು
ಭಕುತರ ಅಜ್ಞಾನವೆ ನಿನಗೆ ಸ್ವಾಧೀನವದು
ಭಕುತರ ಬಂಧದಿಂದ ಬಂಧನೆಂದೆನಿಸಿಕೊಂಬೆ
ಭಕುತರ ಮೋಚನವೆ ನಿನಗೆ ಮುಖ್ಯ ಮೋಚನ
ಭಕುತರಿಗೆ ಒಂದಾದರು ನಿನ್ನದು ಬಾರದು
ಭಕುತರದು ನಿನ್ನಲ್ಲಿ ಒಂದು ಇಲ್ಲದವಿಲ್ಲ
ಭಕುತರಿಗೆ ನಿನ್ನಾಧೀನ ನೀ ಭಕುತರಾಧೀನ
ಭಕುತರಿಗೆ ನೀ ಬೇಕು ನಿನಗೆ ಭಕುತರು ಬೇಕು
ಭಕುತರೆ ನಿನಗಿನ್ನು ಬ್ಯಾಡದಿದ್ದರೆ ಸ್ವಾಮಿ
ವ್ಯಕುತಿ ಮಾಡುವರಾರು ಈ ನಿನ್ನ ಗುಣಗಳ
ಸಕಲವುಳ್ಳವ ಶೌರ್ಯವಂತ ನೀನು ಆದರು
ರಿಕತನಿಂದಲೆ ಅದು ಪ್ರಕಟವಾಗಲಿಬೇಕು
ಭಕುತವತ್ಸಲ ನಮ್ಮ ಗೋಪಾಲವಿಠಲ
ಭಕುತರೆ ಬಲ್ಲಿದರೊ ನಿನ್ನ ಬಲದಿಂದ ಸ್ವಾಮಿ ೧

ಮಠ್ಯತಾಳ

ಜಗವು ನಿನ್ನ ಒಳಗೆ ನೀನು ಭಕುತರೊಳಗೆ
ಜಗವ ಪೊತ್ತಿಹೆ ನೀನು ನಿನ್ನ ಪೊತ್ತಿಹರವರು

ಜಗಕೆ ಮೋಹಕ ನೀನು ನಿನಗೆ ಮೋಹಿಸೊರವರು
ಜಗದಿ ವ್ಯಾಪ್ತ ನೀನು ನಿನ್ನ ವ್ಯಾಪ್ತರವರು
ಜಗದಿ ಭಿನ್ನನು ನೀನು ನಿನಗೆ ಭಿನ್ನರವರು
ಚಿಗಿದರೆ ಚಿಗಿವರು ನಗಿದರೆ ನಗುವರು
ಹಗೆಯು ಸ್ನೇಹವೆಲ್ಲ ನಿನ್ನಾಧೀನವೆಂದು
ಬಿಗಿದುಕೊಂಡಿಹರು ಬಗೆಯದೆ ಅನ್ಯರನ
ಖಗವಾಹನ ಚೆಲ್ವ ಗೋಪಾಲವಿಠಲ
ಅಗಲದೆ ನಿನ್ನನ್ನು ಅರ್ಚಿಸುವರು ಬಿಡದೆ ೨

ರೂಪಕತಾಳ

ಜಗವನೆಲ್ಲ ಸುತ್ತಿಸುವನೆ ನಿನ್ನ ಅವರು
ಮಗನ ಮಾಡಿ ಪಿಡಿದು ಮತ್ತೆ ಆಡಿಸುವರು
ಜಗವನೆಲ್ಲವ ಇಚ್ಛೆಯಲಿ ಕಟ್ಟುವನೆ ನಿನ್ನ
ಬಿಗಿದು ಕಟ್ಟುವರು ಕಾಲನೆ ಹಗ್ಗದಿಂದಲಿ
ಸೊಗಸಾದ ವೈಕುಂಠವಾಸವಾಗಿದ್ದನ್ನ
ಜಗದಲ್ಲಿ ನಿಂತು ಬಾ ಎಂದಿಲ್ಲಿ ಕರೆವರು
ಯುಗಮಹಾಪ್ರಳಯಕ್ಕೆ ಚಲಿಸದವನ ನಿನ್ನ
ಮಿಗೆ ಕೂಗಿ ಕರೆದು ಗಾಬರಿಗೊಳಿಸಿದರು ನಿನ್ನ
ಜಗಜನ್ಮಾದಿಕರ್ತ ಗೋಪಾಲವಿಠಲ
ಬಿಗುವು ಬೇರೆ ನಿನ್ನ ಭಕುತರ ಭಾಗ್ಯವು ೩

ಝಂಪೆತಾಳ

ನಿತ್ಯ ತೃಪ್ತನೆ ನಿನಗೆ ಅನ್ನವನೆ ಉಣಿಸಿದರು
ಸತ್ಯ ವಚನವು ಬಿಡಿಸಿ ಪಿಡಿಸಿದರು ಚಕ್ರವನು
ಭೃತ್ಯರಜಭವ ಮಹಾಮಹಿಮನೆ ಕಯ್ಯ
ಎತ್ತಿಹಾಕಿಸಿದರೆಲ್ಲರು ಉಂಡ ಪರ್ಣಗಳ
ರಕ್ತ ಶುಕ್ಲ ರಹಿತ ಕಾಯದವನ ನಿನ್ನ
ಮತ್ತೆ ಬಾಣದಿ ಎಚದು ತೋರಿದರು ನಿನ್ನವರು

ಸ್ತುತ್ಯ ನೀ ಸರ್ವೋತ್ತಮ ಅಹುದೊ ಅಲ್ಲವೊ ಎಂದು
ಎತ್ತಿ ಕಾಲಲಿ ಎದೆಗೆ ಒದ್ದರು ನಿನ್ನವರು
ಭಕ್ತವತ್ಸಲತ್ವ ತೋರುವುದಕೆ ನಿನ್ನ ಕಚ್ಚಿ
ಸುತ್ತಿದನು ಕಪಟದಲ್ಲಿ ನಿನ್ನವನು
ಮತ್ತೆ ಕಟ್ಟಿದ ಮೀಸೆಯನು ಪಿಡಿದು ಸತ್ಯವ್ರತ
ನಿತ್ಯ ಬಾಗಿಲ ಕಾಯಿಸಿದನು ಆ ಬಲಿರಾಯ
ಕಿತ್ತಿಕೊಂಡೋಡಿದನು ಕಿರೀಟ ನಿನ್ನವನು
ಮತ್ತೆ ಮಳೆಗರೆದು ಪರ್ವತ ಹೊರಿಸಿದರವರು
ಸತ್ಯಸಂಕಲ್ಪ ಗೋಪಾಲವಿಠಲರೇಯ
ಭಕ್ತರೊಳು ನಿನ್ನ ಆಟವ ತಿಳಿವ ಧನ್ಯ ೨

ತ್ರಿಪುಟತಾಳ

ನೋಡಿ ನೋಡಿಸಬೇಕು ಓಡಿ ಓಡಿಸಬೇಕು
ನೀಡಿ ನೀಡಿಸಬೇಕು ಆಡಿ ಆಡಿಸಬೇಕು
ಕೂಡಿ ಕೂಡಿಸಬೇಕು ಮಾಡಿ ಮಾಡಿಸಬೇಕು
ಕೇಡು ಲಾಭಂಗಳಿಗೆ ಭಿನ್ನವಾಗಿ ನೀನು
ಮಾಡುತ್ತ ಈಪರಿ ಸಿಲ್ಕಿ ನಿನ್ನವರೊಳು
ಕೂಡುತ ಮಲಗುತ ಏಳುತ ನಿಂತು ನೀ
ನೋಡುವರಿಗೆ ಬಿಂಬಕ್ರಿಯದ ಮೇಲಿನ್ನು
ಪಾಡಾಗಿ ತಿಳಿದರೆ ಸ್ವಾಮಿ ಭೃತ್ಯ ಕಾರ್ಯ
ಜೋಡೆರಡೊಂದಲ್ಲಿ ಮಾಡುವನು ಒಬ್ಬ
ಮಾಡಿಸುವ ತತ್ತದ್ಯೋಗ್ಯತೆ ಅನುಸಾರ
ಪ್ರೌಢ ನಿನಗೆ ಬಿಂದು ಫಲ ಅಪೇಕ್ಷೆಯು ಇಲ್ಲ
ಮಾಡುವಿ ಈಪರಿ ಭಕ್ತರಿಗೆ
ಮೂಢಶಂಕೆಯು ಸಲ್ಲ ವೈಷಮ್ಯ ನೈರ್ಗುಣ್ಯ
ಕೂಡದು ನಿನ್ನಲ್ಲಿ ಎಂದೆಂದಿಗು
ಪಾಡಿದವರ ಪ್ರಾಣ ಗೋಪಾಲವಿಠಲ
ಈಡ್ಯಾರೊ ನಿನಗೆ ನೀ ಮಾಡಿದ್ದೆ ಮಹಾಧರ್ಮ ೩

ಅಟ್ಟತಾಳ

ಭಕುತರು ಮಾಡಿದ್ದು ನೀ ಮಾಡಿದುದಯ್ಯ
ಭಕುತರು ನೋಡಿದ್ದೆ ನೀನು ನೋಡಿದುದಯ್ಯ
ಭಕುತರು ನೀಡಿದ್ದೆ ನೀನು ನೀಡಿದುದಯ್ಯ
ಭಕುತರು ಕೊಂಡದ್ದೆ ನೀನು ಕೊಂಡುದುದಯ್ಯ
ಭಕುತರು ಆಡಿದ್ದೆ ನೀನು ಆಡಿದುದಯ್ಯ
ಭಕುತರು ಬೇಡೋದು ನೀನು ಬೇಡುವುದಯ್ಯ
ಭಕುತರು ಉಂಡರೆ ನೀನು ಉಂಡವನಯ್ಯ
ಭಕುತರು ಉಟ್ಟರೆ ನೀನು ಉಟ್ಟವನಯ್ಯ
ಭಕುತರು ದಣಿದರೆ ನೀ ದಣಿವನಯ್ಯ
ಭಕುತರ ಹಿತವೆಲ್ಲ ನಿನ್ನ ಹಿತವು ಸ್ವಾಮಿ
ಭಕುತರಲ್ಲಿ ನಿನ್ನ ರತಿ ಅನುಗಾಲವು
ಭಕುತ ಬೇಸತ್ತರು ನೀ ಬೇಸರುವನು ಅಲ್ಲ
ಭಕುತರನು ಮತ್ತೆ ನೀನು ಹುಡುಕುತಿಪ್ಪೆ
ಭಕುತರು ನಿನ್ನ ಸುತ್ತಲೆ ಸಂಚರಿಸೋರು
ಮುಕುತಿದಾಯಕ ಸಿರಿ ಗೋಪಾಲವಿಠಲ
ಭಕುತರಲ್ಲೆವೆ ಆಸಕುತಿಯು ನಿನಗೆ ೬

ಆದಿತಾಳ

ಕಂಡರು ಕಾಣರು ಉಂಡದ್ದೆ ಉಣ್ಣರು
ಕೊಂಡದ್ದೆ ಕೊಳ್ಳರು ಪಂಡಿತರವರು
ಮಂಡೆಯ ತಗ್ಗಿಸಿ ನಿನ್ನ ಕೆಳಗೆ ಬಿದ್ದು
ಮಂಡಲದೊಳಗೆಲ್ಲ ಸಂಚರಿಸುವರು
ಪುಂಡರೀಕಾಕ್ಷ ನೀ ಅವರೆಲ್ಲಿ ಪೋದಲ್ಲಿ
ಕಂಡ್ಹಾಗೆ ತಿರುಗಿದಂತೆ ನೀನು ತಿರುಗುವಿ
ಖಂಡಾಖಂಡಮೂರ್ತಿ ವ್ಯಾಪ್ತ ನಿರ್ಲಿಪ್ತ ಉ-
ದ್ದಂಡ ಉತ್ತಮ ಪುರುಷೋತ್ತಮ ಸರ್ವೋತ್ತಮನೆ

ಪಾಂಡವಪಾಲಕ ಗೋಪಾಲವಿಠಲ
ಕಂಡ ಮಾತಿಗೆ ಇದಕನುಮಾನವ್ಯಾತಕೆ ೭

ಜತೆ

ಭಕುತರ ಭಾಗ್ಯವು ಜಗವೆಲ್ಲ ತುಂಬಿದೆ
ರಿಕತನೊಬ್ಬನೆ ಕಾಣೊ ಗೋಪಾಲವಿಠಲ

೩೯

ಮಂಗಳಂ ಮಂಗಳಂ ದಯಾನಿಧೆ
ಮಂಗಳಂ ಮಂಗಳಂ ಪ.

ದೇವ ದೇವೇಶ ದೇಹಿ ಕಲ್ಯಾಣಂ
ಶ್ರೀವರ ಶ್ರಿಂಗರ ಶ್ರೀ ಶ್ರೀನಿವಾಸ ೧

ನಂದನಂದನ ದಿವ್ಯಾನಂದ ಸುತೇಜ
ಇಂದಿವರಾಕ್ಷ ಮುಕುಂದ ಮುರಾರೆ ೨

ರಾಜರಾಜಿತ ಗೋಪಾಲವಿಠಲ ಮಹಾ
ರಾಜ ಭೋಜ ಕಲ್ಪರಾಜ ಸುತೇಜ ೩

೪೦

ಮಂಗಳಂ ಮಂಗಳಂ ಭವತು ತೇ ರಮಾಪತೆ ಪ.

ಮಂಗಳಂ ಮಧುವೈರಿ ದೇವವರೇಣ್ಯ ಅ.ಪ.

ಮಾರಜನಕ ದಿವ್ಯಸಾರ ಸುಂದರದೇಹ
ವಾರಿಜದಳನೇತ್ರ ಕಾರುಣ್ಯಗುಣನಿಧೆ ೧

ಮಣಿಮಯ ಶುಭಕರ ಕನಕಕುಂಡಲಧರ
ಮಿನುಗುವ ಮಕುಟಶೋಭನಕರಮೂರ್ತೆ ೨

ವೇದವಿಬುಧವಂದ್ಯ ಗೋಪಾಲವಿಠಲ
ಸಾಧುಸಜ್ಜನಪಾಲ ಶ್ರೀದೇವಿಲೋಲ ೩

೪೧

ಉಗಾಭೋಗ

ಮಾಡು ಎನಗೆಂದು ಪೇಳುವುದು ನಿನಗೆ ನೀತ
ಮಾಡಿಸಲು ಮಾಡೆನೆಂಬುವುದು ಎನಗೆ ನೀತ
ನೋಡು ಇದರೊಳು ಫಲವು ಆರದು ಗೆಲುವುದು
ನೋಡಬೇಕು ಕೊನೆಮೊದಲುವಿಡಿದು
ಮಾಡಿ ಬಂಧವು ಹಿಂದೆ ತಂದುಕೊಂಡವನಲ್ಲ
ನೋಡು ಮುಂದೆಮಾಡಿ ಬಿಡಿಸಿಕೊಂಬುವುದಲ್ಲ
ಪೀಡಿತನಾಗಿ ಹಸಿವಿಗೆ ಹದಕೆ ಪರಿಯಾಗಿಹ
ಮೂಢಶಿಶುವಿನ ಚಿಂತೆ ಆರದಯ್ಯ
ಓಡಿ ಆಡುವನಲ್ಲ ಕಂಡಕಡೆಯಲಿ ನಾನು
ಕೇಡು ಯಾರದು ನಿನ್ನವರು ಕೆಟ್ಟರೆ
ಮಾಡಿಸೆನಗೆ ಇಂದು ಬೇಡೋದೆನಗೆ ವಿಹಿತ
ಬೇಡಿದುದು ಕೊಡೆ ತಪ್ಪದು ನಿನಗೆ
ಪಾಡಿದವರ ಪ್ರಾಣ ಗೋಪಾಲವಿಠಲ
ಮಾಡಿ ಮಾಡಿಸು ಮಹಾಪ್ರೌಢದೊರೆಯೆ

೪೨

ಮುಖ್ಯಕಾರಣ ವಿಷ್ಣು ಸ್ವತಂತ್ರನೆ
ಸಖ್ಯ ಸತ್ವರ ಮೋಕ್ಷ್ಯ ಸರಸಿಜಾದ್ಯಮರೇಶ ಪ.

ತಿಳಿವೆಂಬುವ ನೀನೆ ತಿಳಿದು ತಿಳಿಸುವ ನೀನೆ
ತಿಳಿವ ವಸ್ತುವು ನೀನೆ ತೀರ್ಥಪದನೆ

ತಿಳಿದುದಕೆ ಫಲನೀನೆ ತಿಳಿಯಗೊಡದವ ನೀನೆ
ತಿಳಿವ ಸ್ವತಂತ್ರ ನಿನ್ನದು ತಿಳಿಸೊ ಸರ್ವೇಶ ೧

ಧ್ವನಿ ವರ್ಣಉಭಯ ಶಬ್ದದ ವಾಚ್ಯನು ನೀನೆ
ಗುಣದೇಶಕಾಲ ಕರ್ಮದನು ನೀನೆ
ತನು ಕರಣ ವಿಷಯ ಮನ ಜೀವಸ್ವಾಮಿಯು ನೀನೆ
ಅಣುಮಹಜ್ಜಗದಿ ಬಹಿರಂತರದಿ ವ್ಯಾಪ್ತ ೨

ವ್ಯಾಸಕಪಿಲ ಹಯಾಸ್ಯ ಧನ್ವಂತ್ರಿ ವೃಷಭ ಮಹಿ-
ದಾಸ ದತ್ತಾತ್ರಯಾದ್ಯಮಿತ ರೂಪ
ಈಸು ರೂಪದಿ ಜ್ಞಾನವಧಿಕಾರಿಗಳಿಗೊರೆದು
ಪೋಷಕನು ಆದೆ ಕೃಪಾಳುವೆ ಶ್ರೀಶ ೩

ಚೇತನನು ನಾನು ನೀ ಚೇಷ್ಟೆ ಮಾಡಿಸಲಾಗ-
ಚೇತನನು ಸರಿ ನೀನು ಸುಮ್ಮನಿರಲು
ಯಾತರವ ನಾನಯ್ಯ ನಿನ್ನಧೀನವು ಎಲ್ಲ
ಚೇತನನಹುದೊ ನೀ ಚಲಿಸೆ ಚಲಿಸುವೆನು ೪

ತಿಳಿ ಎನ್ನುವುದಕಾಗಿ ತಿಳಿಯತಕ್ಕದ್ದು ನೀನೆ
ತಿಳಿಸೊ ಸೋತ್ತುಮರೆಲ್ಲ ತಿಳಿದ ಶೇಷ
ತಿಳಿವಲ್ಲಿ ತಿಳಿಪಲ್ಲಿ ತಿಳುವಳಿಕೆ ನೀನಾಗಿ
ಚಲಿಸದಲೆ ಮನ ನಿಲಿಸೊ ಗೋಪಾಲವಿಠಲ ೫

೪೩

ಸುಳಾದಿ

ಧ್ರುವತಾಳ

ಮೃತ್ಯು ಕಾದಿಹುದಿನ್ನು ವ್ಯರ್ಥವೇತಕೆ ದಣಿವೆ
ಅರ್ತುಕೊ ಇದೆವೇಳೆ ಮರ್ತು ಕೆಡದೆ

ತೀರ್ಥಪಾದನ ಪಾದಕೀರ್ತನೆ ಮಾಡು ಮನದಿ
ಸ್ಫೂರ್ತಿಯ ಮಾಡುವನು ಸಾರ್ಥಕಾಗಿ
ರಾತ್ರಿಹಗಲು ನೀ ತ್ರಿಮೂರ್ತಿಯ ಮರೆಯದೆ
ಗಾತ್ರ ಉಪಯೋಗದ ಚಿಂತೆ ತೊರೆದು
ಅರ್ಥ ನಿನಗೆ ಮುಖ್ಯ ಅರ್ತುಕೊ ಆವುದೆಂದು
ವಾರ್ತೆಯ ಬಿಡು ಒಲಿಸಬೇಡ ಅನ್ಯ
ಶ್ರೋತ್ರ ಜಿಹ್ವೆ ನಾಸಿಕಮಾತ್ರದಿ ವಿಷಯದಲ್ಲಿ
ಅರ್ತು ಸಾಧಿಸು ಎಲ್ಲ ಶ್ರೀಹರಿಯ
ಮರ್ತರೆ ಮರೆವೆ ಅರ್ತರೆ ಅರಿವೆನೆಂಬ
ಸ್ಫೂರ್ತಿ ಬರುತಿರಲೊ ಆರ್ತನಾಗಿ ಶಾಸ್ತ್ರ
ಪ್ರತಿಪಾದ್ಯ ಮೂರುತಿ ತಿಳಿದು ಮನದಿ
ಸ್ತೋತ್ರವ ಮಾಡು ನೀ ಸತ್ಪಾತ್ರದಿಂದ
ಯಾತ್ರೆಯು ತೀರ್ಥಗಳು ಎಲ್ಲ ಇದರೊಳುಂಟು
ಮರ್ತು ಬಿಡಬೇಡವೊ ಶ್ರೀಹರಿಯ
ಕ್ಷೇತ್ರಜ್ಞನಮ್ಮ ಸಿರಿ ಗೋಪಾಲವಿಠಲ
ಮೂರ್ತಿಮಂತನಾಗಿ ಇಪ್ಪ ಎಲ್ಲ ಸ್ಥಳದಿ ೧

ಮಠ್ಯತಾಳ

ಧನವೋದನವು ಇನ್ನು ಧನದೊಳಗಿಪ್ಪನ್ನ
ನೆನೆದು ತೆಗೆದುಕೊ ಶೋಧನಮಾಡಿ ನೋಡಿ
ತನುವಿಗೆ ಕೆಲಸವಿಡು ತನುಬಂಧುಗಳ ನೋಡು
ಎಣಿಕೆಗೆ ತಂದು ಭಾಗವನು ಮಾಡು ನಾಲ್ಕು
ಎಣಿಸುತಲ್ಲಲ್ಲಿ ನೆನೆ ಎಲ್ಲ ಸ್ಥಳದಿ
ಗುಣ ಹರಿಯದೆಂದು ಗುಪ್ತನಾಗಿ ಇನ್ನು
ಅಣುಘನಪರಿಪೂರ್ಣ ಗೋಪಾಲವಿಠಲ
ಅನಿಮಿತ್ತ ಬಂಧ್ವೆಂಬ ಗುಣವುಂಟವನಿಗೆ ೨

ರೂಪಕತಾಳ

ಒಂದು ಅರ್ಥವು ನಿನಗೆ ದೊರಕಿದಡಾಯಿತೆ
ಚಂದದಿ ಚಿಂತಿಸು ಅನಂತಪರಿಯಲ್ಲಿ
ಒಂದುಭಾಗ ದೇವಸಮುದಾಯಕ್ಕೆ ಕೊಡು
ಒಂದುಭಾಗ ಪಿತೃಗಳಿಗೆ ಇನ್ನು ಮಾಡು
ಒಂದುಭಾಗ ಪರಿವಾರ ಬಂಧುಗಳಿಗೆ
ಚಂದದಿ ಕೊಟ್ಟು ಆನಂದ ಉಣುಕಂಡ್ಯ
ನಂದಗೋಪನ್ನ ಕಂದ ಗೋಪಾಲವಿಠಲನ್ನ
ಚಂದದಿ ನಿನ್ನ ಮನಮಂದಿರದೊಳು ತಿಳಿ ೩

ಝಂಪೆತಾಳ

ಜ್ಞಾನವೆ ಮುಖ್ಯಸಾಧನ ನಿನಗೆ ನೋಡು
ಏನು ಧನದಿಂದಾಗೊ ಕರ್ಮವದರೊಳಗುಂಟು
ಪ್ರಾಣಹಿಂಸರಹಿತಕರ್ಮ ಮಾಡು ನಿತ್ಯ
ಶ್ರೀನಿವಾಸನು ಅದಕೆ ಮೆಚ್ಚುವನು
ಜ್ಞಾನಮಯಕಾಯ ಗೋಪಾಲವಿಠಲರೇಯ
ಕಾಣಿಸುವ ನಿನಗೆ ಕರುಣವಮಾಡಿ ನಿರುತ ೪

ತ್ರಿಪುಟತಾಳ

ತನುವು ಮಂಟಪಮಾಡು ಮನವೆ ಪೀಠವ ಇಡು
ನೆನೆದು ಕುಳ್ಳಿರಿಸು ನಿನ್ನ ಒಳಗಿದ್ದ ಮೂರ್ತಿಯ
ಧ್ಯಾನ ಆವಾಹನಾದಿಗಳ ನೆನೆದು ಅಲ್ಲಿಪ್ಪ
ಅಣುಮಹಾಮೂರ್ತಿಗೆ ಅಭಿಷೇಕ ಮಾಡಿಸು
ಗುಣಮೂರರೊಳಗಿದ್ದ ಹರಿಯ ನೆನೆದು
ಜಿನಸು ವಸನಾಭರಣ ಧೂಪದೀಪವ ಮಾಡಿ
ನೆನಸು ಗಂಧ ಪುಷ್ಪವನು ಮಿಕ್ಕಾದದ್ದೆಲ್ಲ
ಗುಣ ಮೂರುವಿಧದ ಪದಾರ್ಥಗಳನ್ನೆಲ್ಲ

ನಿನಗೆ ಒಂದು ಉದಕಮಾತ್ರ ದೊರಕಿದರೆ
ಇನಿತು ಪರಿಯು ಎಲ್ಲ ಅದರಿಂದ ಚಿಂತಿಸೊ
ಧನದ ಪೂಜೆಗೆ ಅತ್ಯಾಯಾಸಪಡಲಿಬೇಡ
ಘನದೈವ ನಮ್ಮ ಗೋಪಾಲವಿಠಲರೇಯ
ನಿನಗೆಷ್ಟುಪರಿಯಲ್ಲಿ ಪೊರೆವನವನ ತಿಳಿ ೫

ಅಟ್ಟತಾಳ

ಒಳಗೆ ಬಂದರೆ ನಿನ್ನ ಒಳಗೆ ಇರುತಲಿಪ್ಪ
ಸುಳಿಯುತಿಪ್ಪ ನಿನ್ನ ಸುತ್ತ ಬಿಡದೆ ಬೆನ್ನ
ಹಲವುಪರಿಕರ್ಮ ನಿನಗಾಗಿ ಮಾಡುತ್ತ
ಚೆಲುವ ನಿರ್ಲಿಪ್ತನ್ನ ತಿಳಿಯದೆ ಕೆಡುವಿ ಯಾಕೆ
ಸುಲಭವಾಗಿ ಕರತಳದಲ್ಲಿದ್ದಂಥ
ಫಲವ ನೀ ಕಾಣದೆ ಬಲು ದಣಿಸುವುದೇನೊ
ಗೆಳೆಯನಾಗಿ ಪಾರ್ಥಗೊಲಿದ ನಮ್ಮ ಸ್ವಾಮಿ
ಚೆಲುವ ಗೋಪಾಲವಿಠಲರೇಯನ ನೀನು
ಗಳಿಗೆ ಮರೆಯಬೇಡ ಬಲುಪ್ರಿಯಾ ಬಲುಪ್ರಿಯಾ ೬

ಆದಿತಾಳ

ಈವಾಗ ಆವಾಗ ಎಂಬೋದು ಬೇಡವೊ
ದೇವನ ಸ್ಮರಣೆಯು ಬಾಹುದೆ ಕಾಲವು
ಪಾವಕ ಜಲದಲ್ಲಿ ಆ ವಾಯು ವಿಪ್ರರು
ಆವ ಸೂರ್ಯ ಅಧಿಷ್ಠಾನದಲ್ಲಿದ್ದು
ದೇವನ ಸ್ಮರಣೆಯು ಬರುತಿರಲಿ ಕಂಡ್ಯಾ
ಕಾವನು ಬಿಡನಿನ್ನು ಗೋಪಾಲವಿಠಲ ೭

ಜತೆ

ಗೃಹಮೇಧಿ ಮಾಡಿ ನಿನ್ನ ಗೃಹದೊಳಗಿಪ್ಪಂಥ
ಶ್ರೀಹರಿ ಗೋಪಾಲವಿಠಲನ್ನ ನೆನೆಕಂಡ್ಯಾ

೪೪

ರಂಗನ್ಯಾಕೆ ಮಮತೆಕೊಟ್ಟು ದಣಿಸುವಿ
ಕೃಷ್ಣ ನೀ ಕರುಣದಿ ಪಾಲಿಸೊ ಪ.

ತನುವು ತನ್ನದು ಅಲ್ಲ ....
ತನುವಿನ ಸಂಬಂಧಿಗಳೆಂಬೊ ಅವರ್ಯಾರೊ
ನಾನ್ಯಾರೊ ಅವರಿಗೆ ಧನ ಮೊದಲಾದ ವಿಷಯಂಗಳ
ಅನುಭವ ಹಿಂದಿನ ದೇಹದಂತರ ಅರಿಯೆವೊ ೧

ನಿನ್ನ ಹಂಬಲಿಸದೆ ಅನ್ಯ ವಿಷಯಗಳಿ
ಗೆನ್ನನೊಪ್ಪಿಸುವದು ನೀತವೆ
ಮನ್ನಿಸಿ ದಯದಿ ನೀ ಯನ್ನ ಪಾಲಿಸಲು ನಾ
ನಿನ್ನ ನೇಮಕೆ ಪ್ರತಿಕೂಲನೆ ೨

ಇಂದ್ರಿಯಂಗಳು ವಿಷಯಂಗಳಿಗೆಳೆಯೆ ಗೋ-
ವಿಂದಯೆನ್ನ ವಶಕೆ ಬಾರದು
ಇಂದಿರೆಯರಸ ಬ್ರಹ್ಮೇಂದ್ರವಂದಿತ ಸುಖ
ಸಾಂದ್ರ ಭವಮೋಚಕ ನಮೋ ನಮೋ ೩

ಅರಿತು ಅರಿತು ಯನಗರೆಲವವಾದರು
ವಿರಕುತಿ ವಿಷಯದಿ ಬಾರದು
ಕರುಣಾಸಾಗರ ನಿಮ್ಮ ದರುಶನವಲ್ಲದೆ
ಮರಳು ನೀಗುವ ಬಗೆ ಕಾಣೆನೊ ೪

ಎಂದಿಗೆ ನಿನ್ನ ಚಿತ್ತಕ್ಕೆ ಬರುವದೊ ರಂಗ
ಅಂದೆ ಉದ್ಧರಿಸಯ್ಯ ಎನ್ನನು
ಸುಂದರವಿಗ್ರಹ ಗೋಪಾಲವಿಠಲ ಸುಖ-
ಸಾಂದ್ರ ಭವ ಮೋಚಕ ನಮೋ ನಮೋ ೫

೪೫

ಸುಳಾದಿ

ಧ್ರುವತಾಳ

ಲಕುಮಿದೇವಿಗೆ ಈಶ ಎನಗೆ ನೀನೆವೆ ಈಶ
ಸಕಲ ಬೊಮ್ಮಾದಿ ಸುರರಿಗೆಲ್ಲರಿಗೆ ನೀ ಈಶ
ಮುಕುತಿದಾಯಕ ಸರ್ವವ್ಯಾಪ್ತನೆ ಸರ್ವೇಶ
ಭಕುತವತ್ಸಲ ಆರ್ತಜನಭಯನಿವಾರಣ
ಶಕುತಿಯುಕುತಿ ಸರ್ವಚೇಷ್ಟಪ್ರದಾಯಕ
ಸಕಲರಂತರಿಯಾಮಿ ಹೇ ಸರ್ವೋತ್ತಮ ಹರಿಯೆ
ಅಕಳಂಕಗುಣ ಅಪ್ರಾಕೃತನೆ ನಿರ್ದೋಷ
ಸಕಲತಾವಿಲಿ ವ್ಯಾಪ್ತ ಸರ್ವೇಶ ನಿರ್ಲಿಪ್ತ
ನಖಶಿಖವೆಲ್ಲ ಪೂರ್ಣ ಜ್ಞಾನಾನಂದ ಕಾಯ
ಮಕರಕುಂಡಲ ಕೊರಳಮಾಲೆಯಿಂದ ಶೋಭಿತ
ಭಕುತಜನಕೆ ಸುಖ ವ್ಯಕುತಮಾಡಿಪದಾತಾ
ಅಕಟಕಟ ನಾ ನಿನ್ನ ಅರಿಯದೆ ಮೋಸ ಹೋದೆ
ಉಕುತಿಗಳಿಂದ ನಿನ್ನ ಒಂದಿನವಾದರು
ಯುಕುತಿ ಪೂರ್ವಕವಾಗಿ ತುತಿಯನು ಮಾಡಲರಿಯೆ
ರುಕುಮಿಣಿಯ ವಲ್ಲಭ ಗೋಪಾಲವಿಠಲ
ಭಕುತರಲ್ಲಿ ನಿಂತಿರುವೆ ಭಯ ಅಭಯನೀವುತಲಿ ೧

ಮಠ್ಯತಾಳ

ಅಚ್ಯುತನೆ ಕೇಳು ಅನಂತನೆ ಕೇಳು
ಮತ್ಸ್ಯಾದಿಯೆ ಕೇಳು ಸಚ್ಚಿದಾನಂದ
ಸ್ವಚ್ಛುಳ್ಳ ವಿಗ್ರಹ ಸ್ವರಮಣ ಚೆಲ್ವ
ನಿಚ್ಚಳಾನಿಚ್ಚಳ ನಿತ್ಯತೃಪ್ತ ದೇಹ
ಹೆಚ್ಚಿನ ಹೆದ್ದೈವ ಹೇ ದೋಷ ದೂರ

ಕುಚ್ಛಿತ ನರರಿಗೆ ಕುರುವು ತೋರದವನೆ
ವತ್ಸನ ಬಿನ್ನಪ ಒದಗಿ ಮನಕೆ ತಂದು
ತುಚ್ಛೀಕರಿಸದಲೆ ತುತ್ತು ಮಾಡಿದ್ದಂತೆ
ಎಚ್ಚರಿಕೆಯನ್ನಿತ್ತು ಎಡಬಲದಲೆನಗೆ
ಇಚ್ಛೆಯು ನಿನ್ನಲ್ಲೆ ನ್ಯಾಯದಿಂದಲಿನ್ನು
ಅಚ್ಚಕರುಣಿ ರಂಗ ಗೋಪಾಲವಿಠಲ
ಪೆಚ್ಚಿದ ಅಘವೆಲ್ಲ ನುಚ್ಚುಮಾಡಿ ಸಲವೊ ೨

ರೂಪಕತಾಳ

ಭಕುತರಾಧೀನನಾಗಿ ನೀನು ಇರುವೆ ಅಯ್ಯ
ಭಕುತರಿಗಾಗಿ ನೀ ಕರ್ಮಗಳ ಮಾಡುವಿ
ಭಕುತರಿಗಾಗಿ ನೀ ವ್ಯಕ್ತವು ಆಗುವಿ
ಭಕುತರಿಗಾಗಿ ನೀ ಸಂಕಲ್ಪ ಮಾಡುವಿ
ಭಕುತರಿಗಾಗಿ ನೀ ಪುರಗಳ ಸೃಜಿಸುವಿ
ಭಕುತರಿಗಾಗಿ ನೀ ಉಣುತ ಉತ್ಸಾಹಪಡುವಿ
ಭಕುತರಿಗಾಗಿ ಅಳೆದೆ ಬಳೆದೆನೆಂಬಿ
ಭಕುತರಿಗಾಗಿ ನೀ ಹಿಗ್ಗುವಿ ಹಿತಬಡುವಿ
ಭಕುತರಿಗಾಗಿ ನೀ ಬಂದೆ ಹೋದೆನೆಂಬಿ
ಭಕುತರಿಗಾಗಿ ಸರ್ವಜಡಗಳ ಸೃಜಿಸುವಿ
ಭಕುತರಿಂದಲಿ ನೀನು ಭೇದನಾಗಿಪ್ಪೆ
ಭಕುತರು ಎಲ್ಲರು ನಿನ್ನಾಧೀನರಯ್ಯ
ಭಕುತವತ್ಸಲ ನಮ್ಮ ಗೋಪಾಲವಿಠಲ
ಭಕುತರಿಂದಲಿ ಬಾಹೊ ಫಲ ನಿನಗೊಂದಿಲ್ಲ ೩

ಝಂಪೆತಾಳ

ನಿನ್ನ ಭಕುತರು ನಿನ್ನನೆ ಹುಡುಕುವರು
ಚೆನ್ನಾಗಿ ನೀ ಇನ್ನು ಭಕುತರ ಹುಡುಕುವಿ
ನಿನ್ನನೆ ಆಶ್ರಯಿಸಿ ತಮ್ಮ ಮನಬಂದಂತೆ

ಇನ್ನಿಪ್ಪುವರು ಸುಸನ್ಮಾರ್ಗದಿಂದಲಿ
ನಿನ್ನ ಬಲದಿಂದಲೆ ಮೆರೆವುವರು ಸಿರಿಯಿಂದ
ನಿನ್ನ ಬಲದಿಂದಲೆ ಉರುವುವರು ಜಗವೆಲ್ಲ
ಅನ್ಯರ ಗಣನೆಯಿಲ್ಲ ಸ್ವಧರ್ಮದಿಂದಲೆ
ಘನತೆಯಿಂದಲಿ ಉಬ್ಬಿಕೊಂಡಿಹರಯ್ಯ
ಘನ್ನ ಮಹಾಮಹಿಮ ಗೋಪಾಲವಿಠಲ
ನಿನ್ನ ಭಕುತರಿಗೆ ನಿನ್ನ ಮಹಿಮೆಗೆ ನಮೋ ೪

ತ್ರಿಪುಟತಾಳ

ಇಟ್ಟು ನೋಡುವೆಯ್ಯ ಭಕುತರಲ್ಲೆ ನೀನು
ಬಿಟ್ಟು ನೋಡುವೆಯ್ಯ ಭಕುತರಲ್ಲೆ ನೀನು
ಕಟ್ಟಳೆಯ ಮಾಡಿ ಕರ್ಮ ಮಾಡಿಸುತ್ತ
ಇಷ್ಟಾನಿಷ್ಟವು ಎಂಬೊ ದಾರಿಯ ತೋರಿಸುತ್ತ
ಕಷ್ಟಗತಿಗೆ ಅವರ ಕೆಡಹದಲೆ
ದುಷ್ಟ ಜೀವರಿಗಿನ್ನು ಈ ಮೂರು ಕ್ರಿಯವು
ದೃಷ್ಟಿಲಾದರು ಅವರನೋಡಿಸದೆ
ಸೃಷ್ಟಿಸ್ಥಿತಿಲಯ ಮೂರರೊಳಗೆ ನೋಡೆ
ಸ್ಪಷ್ಟವಾಗಿ ತೋರೋದು ನಿನ್ನವರಿಗೆ
ದಿಟ್ಟನಾಗಿಪ್ಪರು ಕಳೆಯುಗುಂದದಲೆ
ನಷ್ಟಲಾಭಕ್ಕಿನ್ನು ಅಂಜದಲೆ
ಹುಟ್ಟಿಲಿ ಉದಕವು ಅಟ್ಟಿ ನೂಕದಂತೆ
ಭ್ರಷ್ಟ ಸಂಗತಿಗಿನ್ನು ಸಿಲುಕದಲೆ
ಇಷ್ಟದೇವ ನಮ್ಮ ಗೋಪಾಲವಿಠಲ
ಇಷ್ಟರೊಳಗೆ ಎಲ್ಲ ಇಷ್ಟವಸ್ತುವು ನೀನೆ ೫

ಅಟ್ಟತಾಳ

ಮಂದರಧರನೆ ಮಹಾ ಭಯಹಾರಿ
ಸುಂದರವಿಗ್ರಹ ಶುಭ್ರವರ್ಣ ಗೋ-

ವಿಂದ ಇಂದಿರಾಪತಿ ಇಂದುವದನ ಆ-
ನಂದಪೂರ್ಣನೆ ಅಜ್ಞಾನವಿನಾಶಕ
ವೃಂದಾವನದಿಂದ ನಂದಗೋಪಿಯಕಂದ
ಒಂದೆ ಮೂಲ ಅನಂತಾವತಾರದಿ
ನಿಂದು ಸಕಲರ ಮಂದಿರದೊಳಗೆ
ಚೆಂದದಿ ನಲಿನಲಿದಾಡಿ ಕುಣಿವ ಮು-
ಕುಂದ ಮುರಾರಿ ಮೂಜಗದೊಡೆಯ
ಮಂದಾಕಿನಿಯ ಪೆತ್ತ ಮಹದಾದಿ ದೈವ
ಬಂಧಕಮೋಚಕ ಭಕುತವತ್ಸಲ
ಸಿಂಧುಶಾಯಿ ಕರುಣಾಕರ ಕೃಷ್ಣ
ಬಂಧು ಅನಿಮಿತ್ತ ಗೋಪಾಲವಿಠಲ
ಸಂದರುಶನವಿತ್ತು ಸಲಹೆನ್ನ ಬಿಡದೆ ೬

ಆದಿತಾಳ

ನಿನ್ನ ವ್ಯಾಪಾರವೆ ಎನಗೆ ವ್ಯಾಪಾರವು
ನಿನ್ನ ತಿಳಿವ ಜ್ಞಾನ ಎನಗದೆ ಧನವು
ನಿನ್ನ ನೋಡುವ ರೂಪ ಎನಗದೆ ವಿಷಯವು
ನಿನ್ನೊಳಗಾಡೋದೆ ಎನಗೆ ಆನಂದವು
ಇನಿತು ಈ ಪರಿ ಸುಖ ಇರಲಾಗಿ ಎನಗೆ
ಇನ್ನಿದಲ್ಲದೆ ಭಿನ್ನ ವಸ್ತುವಿನಿಂದ
ನಿನ್ನಿಂದಾಗುವ ಸುಖ ಇನ್ನಾಗಬಲ್ಲುದೆ
ನಿನ್ನ ನಂಬಿದ ಅಚ್ಛಿನ್ನ ಭಕುತರೆಲ್ಲ
ನಿನ್ನ ವಿಷಯೀಕರಿಸಿನ್ನು ಇಪ್ಪುವರಯ್ಯ
ನಿನ್ನವರ ಕೃಪೆಯೆನಗಾಗುವುದಕ್ಕೆ
ನಿನ್ನ ಕರುಣದಿಂದ ಮನ್ನಿಸುವರಯ್ಯ
ಘನ್ನ ದಯಾನಿಧೆ ಗೋಪಾಲವಿಠಲ
ನಿನ್ನಲ್ಲದೆ ನಾ ಇನ್ನೊಂದರಿಯೆ ೭

ಜತೆ

ಜಗದ ಅಂತರಿಯಾಮಿ ಎನ್ನ ಅಂತರಿಯಾಮಿ
ಅಘದೂರ ಗೋಪಾಲವಿಠಲ ಅನಿಮಿತ್ತ ಬಂಧು

೪೬

ಉಗಾಭೋಗ

ಶರಧಿಯ ಉದಕವು ಮೇಘ ಬಾಯೊಳು ಬಿದ್ದು
ಧರೆಯೊಳಗೆ ಮಧುರವನು ತೋರಿದಂತೆ
ಕರಿಯದಂತವು ಜಗುಳಿ ಗುರುಗಳಂದಣವಾಗಿ
ಪರಿಪರಿಯ ಪೂಜೆ ಕೈಕೊಂಡ ತೆರದಿ
ಇರುತಿಪ್ಪ ನರನಿಗೆ ಹರಿ ನಿನ್ನ ಅರವಿಂದ-
ಚರಣದಾಶ್ರಯವ ಕೊಟ್ಟು ಪೊರೆಯೊ ಎನ್ನ
ಕರೆಕರೆ ಸಂಸಾರ ಉರಗನ ಹೆಡೆ ನೆರಳು
ಹರುಷವೆಂದು ಮಲಗಿಕೊಂಡ ತೆರದಿ
ಕರುಣಾಕರ ರಂಗ ಗೋಪಾಲ ವಿಠಲ
ಮರೆಹೊಕ್ಕರ ಕಾವ ಬಿರುದುಂಟು ದೇವ

೪೭

ಸಣ್ಣವರುದ್ಧುಸಕಾಗಿ ಬಿನ್ನಯಿಸುವೆನು ನಾನು
ಎನ್ನ ಆಳುವ ದೊರೆಯೆ ನಿನ್ನ ಸ್ವಾತಂತ್ರ್ಯ ಸಂಕಲ್ಪ
ಅರಿತವರಲ್ಲ ಚೆನ್ನಾಗಿ ಸಾಕಬೇಕು ಹರಿಯೆ ಪ.

ಸಾಧುಸಂಗಗಳಿಲ್ಲ ಓದಿ ಕೇಳಿದರಲ್ಲ
ಭೇದಅಭೇದಗಳ ಅರಿದುಯಿಲ್ಲ
ಕ್ರೋಧ ಬಿಟ್ಟವರಲ್ಲ ಸಾಧುಗಳು ಯೋಗ್ಯತೆಲಿ
ಹಾದಿ ಏನೀಜೀವರುಗಳಿಗೆ ಹೇ ಸ್ವಾಮಿ ೧

ವಸ್ತ್ರದ ಮೂಲವು ಹತ್ತಿಯ ಕಾಳಹುದು
ಬಿತ್ತಿ ಬೆಳೆಸಿ ಅದರ ವ್ಯಕ್ತಿ ಮಾಡಿ
ವಿಸ್ತರಿಸಿ ನೋಡಿಸಿದರೆ ಪಟ್ಟುವು ಆಗುವುದು
ವಸ್ತುಗಳ ವ್ಯಕುತಿ ನಿನ್ನಿಂದಾಗಬೇಕು ೨

ಮಾಡಲರಿಯರು ತುತಿಯ ನೋಡಲರಿಯರು ನಿನ್ನ
ಬೇಡಲರಿಯರು ತಮ್ಮ ಹಿತದ ಕಾಮ
ಮಾಡುವರು ನಿನ್ನವರ ಮಮತೆಯಾದರು ಮನಸು-
ಗೊಡು ಈಪರಿ ಜೀವಗಳಿಗೆ ಗತಿಯೇನೊ ೩

ನಿನ್ನಿಂದ ಸೃಷ್ಟಿಯಾದ ಜೀವರುಗಳಿಗಿನ್ನು
ಇನ್ನು ಮೂರು ಬಗೆಯ ಭಕುತರೊಳಗೆ
ಎನ್ನಿಂದ ಉತ್ತಮ ಮಧ್ಯಮಾಧಮರುಗಳು
ಇನ್ನಾವ ಇವರ ವಿವೇಕ ನೀ ಬಲ್ಲೆ ೪

ಎನಗಿಂದುತ್ತಮರು ಎನಗೆ ಪ್ರಾರ್ಥಿಸುವರು
ಎನಗೆಂದವರಲೆನಗೆ ಹಿತ ಪೇಳ್ವರು
ಘನ ಅವರ ಮಧ್ಯಸ್ಥರನು ಹುಡುಕ ತಿಳಿಯದು
ಅನುವರಿತು ಅವರವರ ಗತಿಗೆ ಅನುಕೂಲನಾಗು ೫

ನೀತವನು ನೀ ಬಲ್ಲೆ ಅವರವರ ಸಾಧನವು
ಯಾತಕೆ ಅವರಗೊಡವೆ ನಿನಗೆ ಎಂಬ್ಯ
ನೀತವಾಗಿದೆ ನೋಡೊ ಪರಸ್ಪರ ಜೀವರಿಗೆ
ಪ್ರಾರ್ಥನೆಯು ಎಂಬುವುದು ಮಾತು ಪುಸಿಯಲ್ಲ ೬

ನಿನ್ನವರು ಆಗಿ ಪಾಡನುಬಡುತ ಇಪ್ಪುವರ
ಕಣ್ಣಲಿಕಂಡು ನಾ ಬಿಡುವನಲ್ಲ
ಮನ್ನಿಸು ನಿನ್ನ ಚಿತ್ತ ಮನ್ನಿಸದಲೆ ಪೋಗು
ಎನ್ನ ಸ್ವಭಾವವಿದೆ ಗೋಪಾಲವಿಠಲ ೭

೪೮

ಸುಳಾದಿ

ಧ್ರುವತಾಳ

ಸೃಷ್ಟಿಗೊಡೆಯ ಕೇಳೆಂದಷ್ಟು ನಾ ತುತಿಸಲು
ದೃಷ್ಟಿಯಿಂದಲಿ ಎನ್ನಕಡೆಯೆ ನೋಡಲೊಲ್ಲೆ
ಅಷ್ಟ ಸೌಭಾಗ್ಯವೆಂಬೋದೆಷ್ಟು ಮದವೊ ನಿನಗೆ
ಗಟ್ಯಾಗಿ ನೀನಲ್ಲದನ್ಯರಿಲ್ಲವೆಂದರೆ
ಸೊಟ್ಟ ತಿರುಹಿ ಮೊಗ ಅಟ್ಟವೇರುತಲಿದೆ
ಎಷ್ಟಿಲ್ಲವೆಂದು ಕಣ್ಣ ಬಿಟ್ಟರಂಜುವನಲ್ಲ
ಗಟ್ಟಿ ಭಕುತಿಪಾಶದಿ ಕಟ್ಟಿ ಎನ್ನುದರದೊಳು
ಇಟ್ಟುಕೊಂಬೆನೊ ಏ ಜಿಷ್ಣು ಸಖನೆ ಕೃಷ್ಣ
ಭ್ರಷ್ಟನೆಂತೆಂದು ದೂರದೃಷ್ಟಿಲಿ ನೋಡಿದರೆ
ಬಿಟ್ಟುಕೊಡೊ ಭಕ್ತವತ್ಸಲನೆಂಬ ಬಿರುದು
ಅಷ್ಟ ಸಂಪತ್ತು ಮತ್ತಷ್ಟು ಕೊಡು ಎಂದು
ಕಷ್ಟ ಬಡಿಸಿ ನಿನ್ನ ಕಾಡಿ ಬೇಡುವನಲ್ಲ
ಕಷ್ಟ ಸಂಸಾರವೆಂಬೊ ಸುಳಿಯೊಳಗೆ ಎನ್ನ
ಇಟ್ಟು ನೋಡೋದು ನಿನಗೆಷ್ಟು ಸುಖವೊ ಕಾಣೆ
ಮೆಟ್ಟಿ ತುಳಿಯೊ ಬೆನ್ನಟ್ಟಿ ಬಾಹೊ ದುರಿತ
ಕುಟ್ಟಿ ಬಿಸಾಡೊ ಅರಿಷ್ಟ ಸಂಸಾರಬೇರ
ಸೃಷ್ಟ್ಯಾದ್ಯಷ್ಟಕರ್ತ ಗೋಪಾಲವಿಠಲರೇಯ
ಸ್ಪಷ್ಟರೂಪವ ತೋರೊ ಮುಟ್ಟಿ ಪೂಜಿಸಲು ೧

ಮಠ್ಯತಾಳ

ಭಕುತರಿಗಾಗಿ ನೀ ಜಗವ ಸೃಷ್ಟಿಸಿದಯ್ಯ
ಭಕುತರಿಗಾಗಿ ನೀ ಅವತಾರ ಮಾಡಿದಯ್ಯ

ಭಕುತರು ನಿನ್ನನು ಭಜಿಸದಿದ್ದರೆ ದೇವ
ಸಕಲಲೋಕರು ನಿನ್ನ ಅರಿಯುವರೆಂತೊ
ಮುಕುತಿದಾಯಕ ಮೂಲದೈವನೆಂತೆಂಬೋದು
ಸಕಲಲೋಕಕೆ ಕರಿರಾಜ ತೋರಿಸಿದನು
ಉಕುತಿಗಳಿಂದಲಿ ತುತಿಸಲು ಬಾಹೋದು
ಪ್ರಕಟಮಾಡಿದಳಯ್ಯ ಶಕುತಳು ದ್ರೌಪದಿ
ಸಕಲರಲ್ಲಿ ನೀನು ವ್ಯಾಪಕನೆಂಬೋದು
ಭಕುತ ಪ್ರಹ್ಲಾದ ಇರವ ತೋರಿಸಿದ ನರ
ಭಕುತರಿಂದಲಿ ನೀನು ಭಕುತರಾಧೀನ ದೇವ
ಭಕುತವತ್ಸಲ ನಮ್ಮ ಲಕುವಿಯ ರಮಣನೆ
ವಿಖನಸಪತಿ ನಮ್ಮ ಗೋಪಾಲವಿಠಲರೇಯ
ಭಕುತರ ಮುಂದೆ ನಿನ್ನ ಯುಕುತಿ ನಡೆಯದೊ ೨

ಝಂಪೆತಾಳ

ಶೃಂಗಾರಗದ್ದಿಗೆ ಬಂಗಾರಾಭರಣವಿಟ್ಟು
ರಂಗ ಒಲಿಯೊ ಎಂದು ಅಂಗೀಕರಿಸಲರಿಯೆ
ಮಂಗಳ ಮೂರುತಿ ಮನವೆ ಕುಳ್ಳಿರುಪೀಠ
ಗಂಗಾಜನಕನೆಂದೆನಿಸಿಕೊಂಬುದೆ ಸ್ನಾನ
ಅಂಗನೆ ದ್ರೌಪದಿ ಅಭಿಮಾನರಕ್ಷಕ
ಶೃಂಗಾರ ಬಿರುದು ವಸನಂಗಳು ನಿನಗೆ
ಅಂಗವೆ ಕೊರಡು ಶ್ರೀಗಂಧ ತೇದಿಡುವೆನೊ
ಕಂಗಳೆರಡು ದೀಪ ಕರವುಭಯ ಚಾಮರ
ಅಂಗದೊಳಿದ್ದಷ್ಟಕಮಲವೆ ಕುಸುಮವು
ಹಿಂಗದೆನ್ನಯ ಕಿಂಚಿದ್ಭಕುತಿಯೆ ನೈವೇದ್ಯ
ರಂಗ ದಿನದಿನದಿ ಮಾಡಿಸಿದ ಕರ್ಮವೆ ಕಷ್ಟ
ತುಂಗವಿಕ್ರಮ ಜಠರಾಗ್ನಿಯೆ ಆರತಿ ತು-
ರಂಗವದನ ಸರ್ವಾಂಗಸಮರ್ಪಿಸಿ ಕ-
ರಂಗಳ ಮುಗಿವೆ ಎನ್ನಂತರಂಗದಿ ನಿಲ್ಲೊ

ಸ್ವಾಂಗಾಯನಾಮ ಗೋಪಾಲವಿಠಲರೇಯ
ಸಂಗವಿಡಿಸೊ ನಿನ್ನ ಡಿಂಗರಿಗರೊಡನೆ ೩

ತ್ರಿಪುಟತಾಳ

ಒಡೆಯ ನಿನಗೆ ಮೊರೆಯಿಡುತಲಿದ್ದರೆ ಎನ್ನ-
ಕಡೆಗೆ ನೋಡಲೊಲ್ಲೆ ಬಡಿವಾರ ನಿನಗೆಷ್ಟೊ
ತಡೆಯದೆ ನಾನೊಂದು ನುಡಿಯ ನುಡಿವೆನಯ್ಯ
ಕಡುಗುಷ್ಟು ನಾರುತ ಮಡುವಿನೊಳಗೆ ಸೇರು
ಬಿಡದೆ ಬೆಟ್ಟವಪೊತ್ತು ಕಡಲೊಳಗಿರು ನೀನು
ಅಡವಿಸೂಕರಜನ್ಮ ಬಿಡದೆ ಬರಲಿ ನಿನಗೆ
ಕೆಡಲಿ ನಿನ್ನರೂಪ ಕಡುಘೋರನಾಗೆಲೊ
ಒಡಲಿಗಿಲ್ಲದೆ ನೀನು ತಿರುಕೆಯನು ಬೇಡೊ
ಕೊಡಲಿಯ ಪಿಡಿದು ನೀನಡವಿ ಸಂಚಾರನಾಗೊ
ಮಡದಿಯ ಕಳಕೊಂಡು ಜಡೆಯ ಧರಿಸೊ ನೀನು
ತುಡುಗ ದನಗಾವನೆಂದು ನುಡಿಯಲಿ ಜನರೆಲ್ಲ
ಉಡುವಸ್ತ್ರವಿಲ್ಲದೆ ಬತ್ತಲಾಗಿ ನಿಲ್ಲೊ
ಕಡುವೇಗದಲಿ ನೀನು ಕಲ್ಕಿರೂಪನಾಗೊ
ತಡೆಯದೆ ವರಗಳ ಕೊಡುವವನೆಂತೆಂದು
ನುಡಿದೆನೊ ನಾನಿಂಥ ಭಿಡಿಯ ಮಾತುಗಳ
ಕಡುದಯಾಸಾಗರ ಗೋಪಾಲವಿಠಲರೇಯ
ಹಿಡಿದು ಬಿಡೆನೊ ನಿನ್ನ ಬಡವರಾಧಾರಿ ೪

ಆದಿತಾಳ

ಈ ಪರಿ ನುಡಿದರೆ ಪಾಪವೆಂಬೋರೆ ಹರಿಯೆ
ಪಾಪವೆಲ್ಲಿಹುದೊ ನಿನ್ನ ವ್ಯಾಪಾರ ಇಂಥಾದ್ದು
ಪಾಪದ ಕಡಲಿನ ಕೂಪದೊಳಗೆ ಬಿದ್ದು
ತಾಪಕ್ಕಾರದೆ ನಿನ್ನ ಕೋಪದಿಂದಲಿ ನುಡಿದೆ
ಪಾಪಿ ಎಂತೆಂದು ಎನ್ನ ಹೋಪನೂಕಲು ಪತಿ-

ತಪಾವನ್ನನೆಂಬೊ ಬಿರುದುಂಟೆ ದೇವ
ಮೋಪಾಗಿದ್ದೇನೆ ನಾನು ಕಾಮಕ್ರೋಧದೊಳಗೆ
ರಾಪುಮಾಡದೆ ದೋಷ ಉಪ್ಪೆಂದು ಹಾರಿಸಿ
ಕುಪಥವ ತಪ್ಪಿಸಿ ಸುಪಥವ ತೋರಿಸೊ
ಶ್ರೀಪತಿ ಎನ್ನಮೇಲೆ ನೀ ಪ್ರೀತಿಯನ್ನೆ ಮಾಡೊ
ಅಪಾರ ನಾಮಗಳ ಲೇಪಿಸೆನ್ನ ಜಿಹ್ವೆಗೆ
ಪಾಪಗಳನೆ ಕಳೆಯೊ ದ್ರೌಪದಿಮಾನದೊಡೆಯ
ಭಾಪುರೆ ನಮ್ಮ ಗೋಪಾಲವಿಠಲರೇಯ
ನೀ ಪರದೇವತೆಂದು ನಾ ಪಾದ ಪಿಡಿದೆ ೫

ಜತೆ

ಎಂದಿಗಾದರು ನಿನ್ನ ಬಳಿಗೆ ಬಾಹೋದೆ ಸತ್ಯ
ಇಂದೆ ಮುಂದಕೆ ಕರೆಯೊ ಗೋಪಾಲವಿಠಲ

೪೯

ಸುಳಾದಿ

ಧ್ರುವತಾಳ

ಹರಿಯಭಕುತನಾಗು ಹರುಷದಿಂದಲಿ ಇನ್ನು
ಹರಿಯನ್ನು ತಿಳಿಯೊ ಸರ್ವಾಂತರದಿ
ಧರಣಿ ಆಕಾಶ ಸಲಿಲ ಗಿರಿ ಅಗ್ನಿ ವಾಯು ಮಿಕ್ಕ
ತರಣಿಯಲಿನ್ನು ಬಿಡದೆ ಹರಿಯು ಇಪ್ಪ
ಸ್ಥಿರವಾಗಿ ಅವರವರ ಗುಣಕರ್ಮಾದಿಗಳೆಲ್ಲ
ಹರಿಯೆ ವ್ಯಕುತಮಾಡಿಕೊಡುತಲಿಪ್ಪ
ಹರಿನಡೆದಂತೆ ನಡೆವುದು ಈ ಜಗವೆಂದು
ಅರಿಯೊ ಮುಖ್ಯವಾಗಿ ಮನದೀಶಗೆ

ಸಿರಿ ಅಜಭವಾದ್ಯರು ಹರಿಗೆ ಪರಿವಾರವೆಂದು
ತರತಮ ಮುಖ್ಯ ಮೂರುತಿಗಳ ಗುಣಿಸೊ
ಎರಡುದಾರಿಯ ಮಾರ್ಗವನು ಯೋಚಿಸುತ್ತ
ಸ್ಥಿರ ಅಸ್ಥಿರ ಆವುದೆಂದು ನೋಡು
ಸುರಯಾನ ಪಿತೃಯಾನ ಪರಿಪರಿಮಾರ್ಗವುಂಟು
ಅರಿಯೊ ನಿನಗೆ ಮುಖ್ಯ ಸುರಮಾರ್ಗವು
ಬರಿದೆ ಕರ್ಮಠಜನರು ಎರಗೋರು ಪಿತರಯಾನ
ಸ್ಥಿರವಲ್ಲ ಅದರಿಂದ ದೊರೆತ ಫಲವು
ಪರಮಜ್ಞಾನಿಗಳು ಪಥವ ಎಯ್ದುವಂಥ ವಿ-
ವರವ ಪೇಳುವೆನು ಹರಿಯ ಪ್ರೇರಣೆಯಂತೆ
ಪರಮದಯಾಳು ಶ್ರೀ ಗೋಪಾಲವಿಠಲನ್ನ
ಕರುಣ ಸಂಪಾದಿಸುವ ಭಕ್ತರಿಗೆ ೧

ಮಠ್ಯತಾಳ

ಏಕಪತ್ನೀವ್ರತವು ಜೋಕೆಯಿಂದಲಿ ಮಾಡು
ಕಾಕು ಆಗದಿರು ಕಂಡವರಿಗೆಲ್ಲ
ವ್ಯಾಕುಲವನು ಬಿಡು ವ್ಯಾಜ್ಯರಹಿತನಾಗು
ಸ್ವೀಕರಿಸು ಇನ್ನು ಸಿದ್ಧವಾದುದನ್ನು
ಬೇಕು ಎಂದೆನಿಸಿಕೊ ಭಕ್ತ ಜನರಿಗೆ
ನೀಕರಿಸು ನೀಚ ವಿಷಯಗಳೆಲ್ಲ
ಪಾಕಶಾಸನವಿನುತ ಗೋಪಾಲವಿಠಲ
ಸಾಕುವನು ನಿನ್ನ ಸರ್ವಸ್ಥಳದಲಿದ್ದು ೨

ರೂಪಕತಾಳ

ಗುಪ್ತದರ್ಚನೆಮಾಡು ವ್ಯಾಪ್ತನಾದ ಹರಿಯ
ಆಪ್ತರೊಳು ಕೂಡಾಲೋಚಿಸಿ
ಶಪ್ಥವಮಾಡು ಒಬ್ಬರ ಸಂಗವಲ್ಲೆಂದು
ತಪ್ತಶೀತಲಿನ್ನು ಸಮನು ಆಗು

ಕ್ಲುಪ್ತ ಬಿಡದು ಎಂದು ಸುಖದುಃಖಗಳನುಂಡು
ತೃಪ್ತಿಬಡಿಸು ನಿನ್ನ ಮನದಿ ಹರಿಯ
ಸಪ್ತತ್ರಯಕುಲ ನಿನ್ನದುದ್ಧಾರವಾಗೋದು
ಆಪ್ತವಾದ ತತ್ವ ಅರಿತುಕೊ ನೀ
ಸುಪ್ತಿಜಾಗರ ಸ್ವಪ್ನಾವಸ್ಥೆ ಕರ್ಮ ನಿ–
ರ್ಲಿಪ್ತಮಾರ್ಗಪಿಡಿದು ಹರಿಗರ್ಪಿಸು
ಸಪ್ತದ್ವಯ ಭುವನೇಶ ಗೋಪಾಲವಿಠಲ
ಕ್ಲುಪ್ತರೊಳು ನಿನ್ನ ಕೂಡಿಸದಲೆ ಪೊರೆವ ೩

ಝಂಪೆತಾಳ

ದರಿದ್ರನೆನಿಸಿಕೊ ಭಿನ್ನವಿಷಯ ಉಂಬಲ್ಲಿ
ಸಿರಿವಂತನೆನಿಸಿಕೊ ನಿನ್ನ ಸುಖ ನೀನುಂಡು
ಹೊರಗಿನ ವಿಷಯಗಳ ಕಂಡು ಮೋಸಹೋಗದೆ
ಎರಗು ನಿನಗೆ ಮುಖ್ಯವಿಷಯ ಶ್ರೀಹರಿಯೆಂದು
ದೊರೆವುದಕೆ ನಿನಗೆ ಈ ಸಾಧನೋಪಾಯವು
ಗುರುದ್ವಾರ ಪ್ರಸಾದವನ್ನು ಗಳಿಸು
ಎರಡು ಗುಣ ನಿನಗಿಂದಧಿಕರ ಮೊದಲು ಮಾಡಿ
ಪರಮೇಷ್ಠಿಪರಿಯಂತ ತಾರತಮ್ಯನುಸಾರ
ಅರಿದು ಅವರವರ ಪ್ರಸಾದವನ್ನು ಗಳಿಸು
ದೊರೆವುದು ನಿನಗೆ ಇದರಿಂದ ಸುಫಲವು
ಪರಮದಯಾಳು ಸಿರಿ ಗೋಪಾಲವಿಠಲನ
ಚರಣ ಸಾಧಿಸುವರ್ಗೆ ಇದೆ ಇದೆ ಮಾರ್ಗ ೪

ತ್ರಿಪುಟತಾಳ

ಇಂದ್ರೀಗಳೆಂಬುವು ನಿನ್ನ ಸುಖವುಬಡಿಸ
ಬಂದಿಲ್ಲ ನೋಡು ನೀ ಗೋಳಕ ಚಿಂತಿಸಿ
ಅಂದಬಡಲಿಬ್ಯಾಡ ಅಭಿಮಾನಮದದಿಂದ
ಕುಂದು ಮಾಡೋದು ನಿನ್ನಾನಂದ ವ್ಯಕ್ತಿಗೆ ಇನ್ನು

ಬಂದಬಂದಂತೆ ವಿಷಯಂಗಳಿಗೆಳೆದೊಯಿದು
ತಂದಿಪ್ಪವು ಪುನಃ ಜನನ ಮರಣಗಳು
ದ್ವಂದ್ವ ಜೀವರುಗಳು ಅಭಿಮಾನಿಗಳು ಆಗಿ
ಒಂದೊಂದು ಇಂದ್ರಿಯಲಿಪ್ಪುವರು
ಚೆಂದದಿ ತ್ರಿವಿಧ ಜೀವರ ಗತಿ ಅರಿತು ಮು-
ಕುಂದ ಕರ್ಮಗಳ ಮಾಡಿಸಿ ಫಲವನು
ತಂದೀವ ತತ್ವಾಭಿಮಾನಿಗಳಲಿದ್ದು
ಇಂದಿರಾಪತಿ ನಿರ್ದೋಷನಾಗಿ
ಸಂದೇಹವಿಲ್ಲದೆ ಸರ್ವೋತ್ತಮ ಹರಿಯೆಂದು ನಿನ್ನಮನದಿ
ನಿಂದಿರಿಸು ಇಂದ್ರಿನಿಯಾಮಕ ದೈವ ಗೋಪಾಲವಿಠಲ
ಬಂಧಕ ತರಿದು ಭಕುತನೆಂದೆನಿಸುವ ೫

ಅಟ್ಟತಾಳ

ಯಾಚನೆಯನು ಮಾಡು ಉಚ್ಚರಲ್ಲಿ ಪೋಗಿ
ಯೋಚಿಸು ಹರಿಯಲ್ಲಿ ಆಚಾರಮಾರ್ಗದಿ
ನೀಚಗತಿಗೆ ಕೈಯ್ಯಚಾಚಿ ಕುಗ್ಗದೆ ಕಾ-
ಲೋಚಿತವೆನ್ನದೆ ಸೂಚನೆಯಿಂದಲಿ
ನಾಚಿಕೆಯನು ಬಿಟ್ಟು ಬಿಚ್ಚದೆ ಅವರಲ್ಲಿ
ಆಚರಣೆಯ ಮಾಡು ವಾಚಾಮನಕಾಯಾ
ನೀಚಸಂಗವೆಂಬ ಶೌಚಶುದ್ಧಿಯನ್ನು
ಉಚ್ಚಸಂಗ ಉದಕ ಆಚಮನವು ಮಾಡು
ಶ್ರೀಚಕ್ರಧರನ ನೀ ವಿಚಾರಿಸುವ ತತ್ವ
ಯೋಚನೆಯನು ಮಾಡು ಭೂಚಕ್ರದೊಳಗೆಲ್ಲ
ಕೀಚಕಾರಿಗೀಶ ಗೋಪಾಲವಿಠಲನ್ನಾ-
ಲೋಚನೆಮಾಡನ್ಯಾಲೋಚನೆಯನು ಬಿಟ್ಟು ೬

ಆದಿತಾಳ

ಧನದ ಒಳಗೆ ಧನವ ಹುಡುಕು

ಗುಣಗಳೊಳಗೆ ಗುಣವ ಹುಡುಕು
ವಿನಯದೊಳಗೆ ವಿನಯ ಹುಡುಕು
ಧಣಿಗಳೊಳಗೆ ಧಣಿಯ ಹುಡುಕು
ಎಣಿಸಿ ನಾನಾಗುಣ ಶಕುತಿಯ ಮನಸಿನಲ್ಲಿ
ನೆನೆದು ನೆನೆದು ತನುವಿನಾಸೆ ತೊರೆದು ದುಷ್ಟ
ಗುಣ ಅಂಕುರ ಒಣಗಿಸಿನ್ನು ವನಜನಾಭನೆಂಬ ಸುಖ
ಗುಣಾಂಬುಧಿಯ ಗುಣಗಳನು ಸ್ಮರಿಸಿ
ಗುಣತ್ರಯದ ಕರ್ಮಬೀಜವು ದ-
ಹನವು ಮಾಡು ಜ್ಞಾನದಿಂದ
ಘನಮಹಿಮ ಚೆಲುವ ಗೋಪಾಲವಿಠಲನು ತನ್ನ
ನೆನೆದ ಹಾಗೆ ಎಲ್ಲ ನಿನ್ನ ಅನುಭವಕ್ಕೆ ಕಾಣಿಸುವ ೭

ಜತೆ

ಭಕುತ ಭಕುತ ನಾನು ಶಕುತ ನಾನಲ್ಲವೆನ್ನು
ಮುಕುತಿದಾಯಕ ಗೋಪಾಲವಿಠಲ ಒಲಿವ

೫೦

ಸುಳಾದಿ

ಧ್ರುವತಾಳ

ಹರಿಯೆ ಸರ್ವೋತ್ತಮ ಹರಿಯೆ ಪರದೈವ
ಪರಿಪೂರ್ಣಗುಣಭರಿತ ನಿರಾಶ್ರಯಾನಂತ
ಪರತತ್ವ ಪರಿಪೂಜ್ಯ ಪರಮಮಂಗಳಮೂರ್ತಿ
ಸಿರಿದೇವಿ ಪರಮೇಷ್ಠಿ ಹರರಿಂದ ವಂದಿತ
ಸ್ವರಮಣ ಶ್ರುತಿಪಾದ್ಯ ಜರಾಮರಣರಹಿತ
ಸುರರ ಪಾಲಕನೆ ನಿರ್ದೋಷಿ(ಷ) ಶಿಖಾಮಣಿ

ಕರಿರಾಜವರದನೆ ಕರುಣಾಕರ ದೇವ
ದುರುಳಮರ್ದನ ದೂರಾತಿದೂರನೆ
ಸುರಪತಿ ಸುರ ಮುನಿಗಳಿಂದ ಸೇವಿತ
ಗರುಡವಾಹನ ಚೆಲುವ ಸ್ಥಿರ ಭಕುತರೊಡೆಯ
ಸಿರಿದ್ರೌಪದಿ ಅಭಿಮಾನರಕ್ಷಕ ದೇವ
ಸ್ಮರಣೆ ಮಾತ್ರದಲ್ಲಿ ಅಜಮಿಳನ ರಕ್ಷಿಸಿದಂತೆ
ಪರಮ ದಯಾಳು ಗೋಪಾಲವಿಠಲರೇಯ
ಸರಿಯಿಲ್ಲದ ದೈವ ಮೊರೆಹೊಕ್ಕೆ ಕಾಯೊ ೧

ಮಠ್ಯತಾಳ

ಅನಂತ ಜನ್ಮದಿ ಅನಂತ ಪಾಪವ ಮಾಡಿ
ನಿನ್ನನು ಮರೆತೆನೊ ಸನ್ಮುನಿಗಳ ಪ್ರಿಯ
ಎನ್ನಂಥ ಪಾತಕಿಯ ಏನೆಂತು ಕರುಣಿಪೆಯೊ
ಬಿನ್ನಹಕ್ಕೆ ಬಾಯಿಲ್ಲ ನಿನ್ನ ಬೇಡಲೆನಗೆ
ಬೆನ್ನು ಬಿದ್ದವರನ್ನು ಮನ್ನಿಸಿ ಕಾಯುವಂಥ
ಘನ್ನ ಬಿರುದುಂಟೆಂದಿನ್ನು ನಾ ಮೊರೆಹೊಕ್ಕೆ
ಚಿನ್ಮಯ ಮೂರುತಿ ಗೋಪಾಲವಿಠಲರೇಯ
ಅನ್ಯರಿಗೊಪ್ಪಿಸದೆ ನಿನ್ನವರೊಳಿರಿಸೊ ೨

ತ್ರಿಪುಟತಾಳ

ಹಿಂದೆ ನಾ ಮಾಡಿದಂಥ ಕುಂದು ದೋಷಗಳಿಂದ
ಬಂದೆ ನಾ ನರಜನ್ಮ ಬಂಧನದೊಳಗಿನ್ನು
ಮುಂದಣ ಸಾಧನಗಳೊಂದು ನಾ ಕಾಣೆನಯ್ಯ
ಎಂದಿಗೆ ನಿನ್ನ ಅರವಿಂದ ಚರಣ ಬಳಿಗೆ ಪೊಂದಿಸಿಯೋ ಎನ್ನನು
ಕಂದರ್ಪಜನಕನೆ ನಿಂದಿರಿಸಿನ್ನು ನಿನ್ನ
ಚೆಂದದರೂಪವ ಆನಂದದಿ ಎನ್ನ ಮನಮಂದಿರದೊಳಗೆ
ಬಂಧನಾಗಲಿ ಸುಖ ಬಂದದಾಗಲಿ ಜನ
ನಿಂದೆ ಮಾಡಲಿ ಬಹು ವಂದಿಸುವರಾಗಲಿ

ಒಂದೆ ಮನವು ದೃಢದಿಂದ ನಿನ್ನರ್ಚಿಸಿದಂತೆ
ಛಿಂದೆ ಇಲ್ಲದ ಭಕ್ತಿ ಚೆಂದದಿ ಪಾಲಿಸಯ್ಯ
ಮಂದರಧರನೆ ಗೋಪಾಲವಿಠಲರೇಯ
ವಂದಿಸಿದೆನು ಮನ ಬಂದದ್ದು ಮಾಡೊ ೩

ಅಟ್ಟತಾಳ

ಪದ್ಧತಿ ತಿಳಿಸಿನ್ನು ಮಧ್ವಮತಾನುಸಾರ
ಶುದ್ಧ ಜ್ಞಾನವ ಕೊಟ್ಟಪದ್ಧಮತಗಳೆ ನಿ–
ಷಿದ್ಧವೆನಿಸಿ ಪೊದ್ದಿಸದಂತಘ ಒದ್ದು ಕಡೆಗೆನೂಕಿ
ತಿದ್ದಿಸಿ ಎನ್ನನು ಉದ್ಧರಿಸು ಪಾಪ–
ಕ್ಷದ್ದಿನೋಳ್ಹಾಕದೆ ಮುದ್ರೆಪಚ್ಚಿಸಿ ನಿನ್ನ
ಉದ್ಯೋಗದೊಳಗಿಡು
ಪ್ರದ್ಯುಮ್ನ ಮೂರುತಿ ಗೋಪಾಲವಿಠಲರೇಯ
ಬಿದ್ದೆ ಚರಣದ ಮೇಲೆ ಬದ್ಧಾಗಿ ಪಿಡಿಯೊ ೪

ಆದಿತಾಳ

ಆರೋಗ್ಯ ಆಯುಷ್ಯ ಐಶ್ವರ್ಯಗಳು ಮಾನ ಅಪೇಕ್ಷ
ಕೋರದಂತೆ ಮಾಡಯ್ಯ ಅನಾಥಬಂಧು
ಘೋರಿಸುತಿಪ್ಪ ಎನ್ನ ಆರುಮಂದಿ ಖಳರ ದೂರಮಾಡಿ ಇನ್ನು
ತೋರಿಸು ನಿನ್ನ ಚರಣ ಸೇರಿಸು ನಿನ್ನ
ಪರಿಚಾರಕರೊಳಗಿನ್ನು ಆರೆ ಸಂಸಾರದ ಮರೆಯ ಕೆಳಗೆ
ಶ್ರೀರಮಣನೆ ಚೆಲ್ವ ಗೋಪಾಲ ವಿಠಲಾ–
ಪಾರಗುಣನಿಧಿ ಸಾರಿದೆ ಕಾಯೊ ೫

ಜತೆ

ಎಂದಿಗೆ ನಿನ್ನಪಾದ ಚೆಂದದಿಪೂಜಿಸಲಿ
ಕುಂದು ಇಲ್ಲದ ಭಕ್ತಿಲಿ ಬೇಗ ಗೋಪಾಲವಿಠಲ

೫೧

ಸುಳಾದಿ

ಧ್ರುವತಾಳ

ಹಸಿದು ಉದರಗತಿಯ ಹದವನರಿಯದ
ಶಿಶುವಿನ ತಾಯಿ ಪಿಡಿದು ಮೊಸರನ್ನ ಉಣಿಸಿದರೆ
ಕೊಸರಿಕೊಳ್ಳುತಲಿಪ್ಪುದು ಒಲ್ಲೆನೆನ್ನಲಾ ಜನನಿ
ಶಿಶುವಿಗೆ ಅನ್ನವ ಉಣಿಸದಲೆ ಬಿಡುವಳೆ
ವಶವಾಗುವುದಕೆ ನಾನಾ ಬಣ್ಣಿಗೆಯೋಜನೆ
ಎಸಗಿ ಮಂಡೆಯ ನ್ಯಾವರಿಸಿ ಉಣಿಸೋಳಲ್ಲದೆ
ಶಿಶುವಿಗೇ (ನನ್ನ) ತನ್ನ ಹಸಿವೆ ಚಿಂತೆ ಮತ್ತುಂಟೆ
ಹಸಿವಿಗೆ ತನಗಿದು ವಿಷಯವೆಂಬ ಜ್ಞಾನ
ಶಿಶುವಿಗುಂಟಾಗಿದ್ದರೆ ಕೊಸರಿಕೊಂಬನೇನಯ್ಯ
ಮಶಕಂಗಳ ಬಾಧೆ ಮುನ್ನೆ ಏನಿದ್ದರು
ಶಿಶುವಿಗೇನಾದರು ನಿವಾರಿಸುವ ಬೇರಿರಲಾಗಿ
ಅಸುರಮರ್ದನರಂಗ ಗೋಪಾಲವಿಠಲ ನಿನ್ನ
ಶಿಶುವಿನ ಹಸಗೆಡಿಸದಿರು ಪಿಡಿದು ೧

ಮಠ್ಯತಾಳ

ವಿಹಿತ ಫಲವು ನೀನು ವಹಿಸದಿದ್ದಡೆ ದೇವ
ಸಾಹಸವು ಬರಿದಾಗೆ ಅಹಿತ ಮತ್ತಾರಿಗೆ
ಅಹಿವದನಕೆ ಮೂಷಕವು ಸಿಲ್ಕಿದರೆ
ವಿಹಿತ ಬಿಡುವುದೆ ಆಹಾರವೆಂದು ಅದಕ್ಕೆ
ಅಹಿಗೆ ಅನಿಲಾಹಾರವನು ಇತ್ತು ಮೂಷಕನ ಬಿಡಿಸೋದು
ಅಹಿಗಿತ್ತಂತೆ ಮಾಡು ನೀ ಮಹಿಸುರರ ಸಮ್ಮತಿ ಛಲವು ದೇವ
ವಹಿಸಬೇಕು ಧರ್ಮ ನಡೆಸಬೇಕಾಗಿತ್ತೆ

ಬಹಿರಂತರಭೂತ ಗೋಪಾಲವಿಠಲ
ಕುಹಕರ ಮರ್ದನ ಕುಜನ ಪ್ರದಾತನೆ ೨

ತ್ರಿಪುಟತಾಳ

ಕಂಟಕ ಪರಿಹಾರಕೆ ರಕ್ಷೆ ಮೆಟ್ಟಲಿಬೇಕು
ಕಂಟಕ ಪಾದರಕ್ಷೆಗೆ ಕುಂಟುಬೀಳಲು ಧರ್ಮವೆಂಬ ಪಾದವು ಜೀರ್ಣ
ಕಂಟಕಾರಿಯ ಮೆಟ್ಟಿಯೇನು ಫಲವೊ
ಒಂಟೆಡುಬ್ಬದಂಥ ಲೌಕಿಕರಿಂದಲೇನು
ಬಂಟಜನರು ಇದನು ಬಯಸುವರೆ
ಕುಂಟಲಗಿತ್ತಿಯ ಕೂಡಲಿ ಅನುದಿನ
ಒಂಟಿಲಿಡಿಸಬೇಡ ಲೌಕಿಕದಿ
ನೆಂಟರು ಬಹುಮಂದಿ ಸಹಾಯವಾಗಿ ಬಂದು
ಗಂಟು ಕೆಡದಂತೆ ಕಾಪಾಡಲಿ
ಕಂಟಕಹರ ಚೆಲ್ವ ಗೋಪಾಲವಿಠಲ
ಉಂಟಾದದಕೆ ಒಲ್ಲೆನೆನಲು ಬಿಡದೆ ಉಣಿಪ ೩

ಅಟ್ಟತಾಳ

ಮೂಕನಣಕಿಸಲಿ ತಾ ಕುಳಿತವನಿಗೆ
ಮೂಕತ್ವದ ಶೋಕ ಅವನಿಗೆ ಆಗುವುದು
ತಾ ಕುರುಡನಲ್ಲ ಪರರ ಅಣಕಿಸುವಂಗೆ
ಶೋಕವಬಡುವನೆ ಅಂಧಕನಂದದಿ
ವಾಕು ದಂತೋಚ್ಚರಣ ಪರರಣಕಿಪಗೆ
ವಾಕು ಸಂಬಂಧ ಕ್ಲೇಶ ತಾಕುವುದೆ ಅವಗೆ
ಶೋಕವಿಟ್ಟು ತಾನು ಪರರಣಕಿಸುವವ
ಶೋಕದ ಅನುಭವ ಅವನಿಗೆ ಇಪ್ಪುವುದೆ
ಶ್ರೀಕರುಣಾಕರ ನಿನಗೆ ಈ ಪರಿ ಅಹುದು
ನೀ ಕೇಳೆಲೊ ಸ್ವಾಮಿ ನಿನ್ನ ಭಕ್ತನಿಗೀಗ
ಲೌಕಿಕದೊಳಗಿರೆ ಸಾಕುವೆ ಇದರಂತೆ

ಏಕೋಮೇವದೇವ ಗೋಪಾಲವಿಠಲ
ನೀ ಕರಪಿಡಿದವಗೆ ತಾಕಬಲ್ಲದೆ ದುರಿತ ೪

ಆದಿತಾಳ

ನಮೋ ನಮೋ ಕಾರುಣ್ಯಮೂರ್ತಿ ದಯಾಪರ
ನಮೋ ನಮೋ ಸರ್ವಜ್ಞ ನಿತ್ಯ ನಿರಂಜನ
ನಮೋ ನಮೋ ಅಖಂಡವ್ಯಾಪ್ತ ನಿರ್ದೋಷನೆ
ನಮೋ ನಮೋ ದುಷ್ಟಶಿಕ್ಷ ಶಿಷ್ಟರಪಾಲ
ನಮೋ ನಮೋ ಬ್ರಹ್ಮಣ್ಯದೇವ ಭಕ್ತರ ಕಾವ
ನಮಿಸುವೆ ನಮಿಸುವೆ ನಮ್ರಭೂತನಾಗಿ
ಶಮಲಮತಿಯು ಕಡಿ ದ್ಯುಮಣಿಶತತೇಜ
ಯಮನೇಮಗಳಲ್ಲಿ ಮಮತೆ ನಿರಂತರ
ಸಮ ಅಧಿಕೆನಿಸದೆ ನೀ ಎಮಗಿರು ಸದಾ
ಸುಮನಸರೊಡೆಯ ಶ್ರೀಗೋಪಾಲವಿಠಲ
ನಮಿಸಿ ಬೇಡುವವರ ನೀನರಿಯದುದಲ್ಲ ೫

ಜತೆ

ಪತಿವ್ರತಾ ಸ್ತ್ರೀಗೆ ಆವ ವ್ರತವು ಇಲ್ಲ
ಪತಿ ಆಜ್ಞವು ಒಂದೆ ಗೋಪಾಲವಿಠಲ ತಂದೆ

Centre — ಲಕ್ಷ್ಮೀದೇವಿ

೫೨

ಸುಳಾದಿ
ಧ್ರುವತಾಳ

ಇಂದಿರಾದೇವಿ ಮಾತೆ ತಂದೆ ವಿಠಲನರ
ವಿಂದ ಚರಣಕಿನ್ನು ಅಂದಿಗೆ ಗೆಜ್ಜೆಯಾದೆ

ಹೊಂದಿಕೆಯಾದ ಊರು ಜಾನು ಕೈಯಮೇಲೆ
ಚೆಂದದ ಸ್ವರೂಪ ಪೀತಾಂಬರೊಡ್ಯಾಣಾದೆ
ಮಂದರಧರನೊಕ್ಷ ಸ್ಥಳದಲಿ ನೀ ನಿಂದೆ
ಕಂದರದಲಿ ಚಿತ್ರವೈಚಿತ್ರ್ಯ ಪರಿ
ಗಂಧವು ಪದಕ ಹಾರಂಗಳು ಪುಷ್ಪತುಲಸಿ
ಯಿಂದೊಪ್ಪುವ ಅಲಂಕಾರ ನಂದ ಶೋಭಿತಳಾದೆ
ಒಂದೊಂದು ಹಸ್ತದಲ್ಲಿ ಆಯುಧಗಳಾದೆ
ಚೆಂದುಳ್ಳ ಕಡೆಯ ತೋಳ್ಬಂದಿ ಭುಜಕೀರುತಿ
ಕುಂದು ಇಲ್ಲದೆ ಕರ್ಣಕುಂಡಲ ನಾನಾಪರಿ
ಅಂದವಾದರಳೆಲೆ ಸುಂದರ ಕಿರೀಟವು
ಸಂದಿಸಂದಿಗೆ ನಾನಾಭರಣಾಲಂಕಾರಳಾದೆ
ಇಂದಿರೇಶನ ಪ್ರತಿ ಅವಯವಗಳಲಿನ್ನು
ಇಂದಿರೆ ಪ್ರತಿ ಪ್ರತಿ ವಸ್ತುವಾದೆ
ಕಂದರ್ಪನಯ್ಯನ ಆನಂದ ಬೆರೆದು ಸುಖಿಸುರಿದೆ ನೀ
ಒಂದರಘಳಿಗೆ ಅಗಲದೆ ಇನ್ನು
ಕಂದ ಬೊಮ್ಮನು ಮತ್ತೆ ನಂದಿವಾಹನ ಅಮ
ರೇಂದ್ರ ಸನಕ ಸನಂದರಿಂದಲಿನ್ನು
ಕುಂದಿಲ್ಲದೋಲಗವ ನಂದದಿ ಕೊಳುತ ಮುಕ್ತ-
ರಿಂದ ಸೇವಿತಳಾಗಿ ಎಂದೆಂದು ಬಿಡದಲೆ
ಸಂದೇಹವಿಲ್ಲದೆ ಗೋಪಾಲವಿಠಲನ
ಪೊಂದಿ ಸುಖದಲಿ ಚೆಂದದಿ ಮೆರೆದೆ ೧

ಮಠ್ಯತಾಳ

ಹರಿ ಅನಿರುದ್ಧನಾಗೆ ಸಿರಿ ಶಾಂತಿದೇವಿಯಾದೆ
ಹರಿ ಪ್ರದ್ಯುಮ್ನನಾಗೆ ಸಿರಿ ಕೃತಿದೇವಿಯಾದೆ
ಹರಿ ಸಂಕರುಷಣನಾಗೆ ಸಿರಿ ಜಯದೇವಿಯಾದೆ
ಹರಿ ವಾಸುದೇವನಾಗೆ ಸಿರಿ ಮಾಯಾದೇವಿಯಾದೆ
ಎರಡೆರಡವತಾರಕ್ಕೆ ಮರಳಿ ಮರಳಿ ಚ-

ತುರವತಾರಗಳು ಆದೆ
ಪರಿಪರಿ ಅವತಾರಕ್ಕೆ ಪರಿಪರಿ ರೂಪಳಾದೆ
ಶರಣರ ಪಾಲಕ ಗೋಪಾಲವಿಠಲನ
ಚರಣ ಕಮಲವನ್ನು ಪರಿಪರಿ ಸೇವಿಸುತ ೨

ತ್ರಿಪುಟತಾಳ

ಧರೆಯ ರೂಪದಿ ಹರಿಗೆ ಕುಳ್ಳಿರೆ ಗದ್ದುಗೆಯಾದೆ
ಮೆರೆವ ಅವ್ಯಾಕೃತ ಗಗನವೆ ಕೊಡೆಯಾದೆ
ಎರಡೆರಡೊಂದು ರೂಪದಿ ಹರಿಯಿತ್ತಲು ರಮಾ
ಮರಳಿ ಶ್ರೀರೂಪದಿ ಹರಿಯಿಂದ ಬೆರೆದು
ಸ್ವರಮಣನ ರಮಿಸಿ ಯೋಗನಿದ್ರೆಯ ಮಾಡಿ
ಹರಿಯಾಜ್ಞದಿಂದ ಅಂಭ್ರಣಿರೂಪಳಾದೆ
ಪರಿಪರಿ ಶ್ರುತಿಯಿಂದ ಸೃಷ್ಟಿಯ ರಚಿಸೆಂದು
ಹರಿಯ ಕೊಂಡಾಡಿದೆ ಹರುಷದಿ ನಲಿದೆ
ಹರಿಯ ನಾಭಿಯಲಿನ್ನು ಸರಸಿಜ ರೂಪದಿ
ವಿರಿಂಚಿಯನೆ ಪಡೆದೆ ಕರುಣಾಕರೆ ಮತ್ತೆ
ಅರಿವಂತೆ ಅಜಗಿನ್ನು ತಪತಪವೆಂದು ಅ-
ಶರೀರ ಹಿತ ನುಡಿದೆ ಅವ್ಯಾಕೃತಕೆ ಅಭಿಮಾನಿ
ಪರಿಪೂರ್ಣ ಗುಣಭರಿತ ಗೋಪಾಲವಿಠಲನ
ಕರುಣದಿಂದೆರಡೆರಡು ಸೃಷ್ಟಿಯ ರಚಿಸಿದೆ ೩

ಅಟ್ಟತಾಳ

ಹರಿಯಾಜ್ಞೆಯಿಂದಲಿ ಜಡ ಪ್ರಕೃತಿ ದೆಸೆಯಿಂದ
ವರ ತ್ರಿಗುಣಾತ್ಮಕವಾದಂಥ ಮಹತತ್ವ ಅ-
ದರಿಂದ ವೈಕಾರಿಕ ತೈಜಸ ತಾಮಸವನ್ನು
ಭರಿತವಾದಂಥ ಅಹಂಕಾರ ತತ್ವ
ಪರಿಪರಿ ಸೃಷ್ಟಿಸಿದೆ ವರಮಾಯಾ ನೋವಿಲ್ಲದೆ

ಪರಮ ದಯಾಳು ಗೋಪಾಲವಿಠಲನು
ಕರುಣಿಸುವನು ನೀ ಕರವಿಡಿದವರ ೪

ಆದಿತಾಳ

ಮಹತತ್ವ ದೆಸೆಯಿಂದ ಬೊಮ್ಮನ ಸೃಷ್ಟಿಸಿದೆ
ಅಹಂಕಾರ ವೈಕಾರಿಕದಿಂದ ಮನಸ್ಸು ಆ
ಮಹ ಇಂದ್ರಿಯಗಳಿಗಭಿಮಾನಿ ದೇವತೆಗಳನ್ನು
ಅಹಂಕಾರ ಪಂಚ ತನ್ಮಾತ್ರೆಯನ್ನು ಸೃಷ್ಟಿಸಿದೆ
ಅಹಂಕಾರ ತೈಜಸದಿಂದ ಚಕ್ಷುರಾದಿ
ಇಹ ಇಂದ್ರಿಯಗಳನ್ನೆಲ್ಲ ಸೃಷ್ಟಿಸಿದೆ
ಅಹಂಕಾರ ತಾಮಸದಿಂದಲಿ ಪಂಚ-
ಮಹಾಭೂತಂಗಳ ಸೃಷ್ಟಿಸಿದೆ
ಮೋಹದಿಂದ ಸಕಲ ತತ್ವೇಶರ ಸೃಷ್ಟಿಸಿದೆ
ಆ ಹರಿ ಕರುಣಾಪೂರ್ಣ ಕಟಾಕ್ಷದಿ ಈ
ಮಹಾ ಜಗಕೆಲ್ಲ ಪ್ರೇಮದಿಂದ ಸಲಹುವೆ
ಮೋಹನ ಮೂರುತಿ ಗೋಪಾಲವಿಠಲನ
ಸಾಹಸವಿಲ್ಲದೆ ರಹಸ್ಯ ಪೂಜಿಪೆ ೫

ಜತೆ

ನಮೋ ನಮೋ ನಿನ್ನ ಪಾದಕಮಲವೆ ಮೊರೆ ಹೊಕ್ಕೆ
ಮಮತೆ ಪುಟ್ಟಿಸೆನಗೆ ಗೋಪಾಲವಿಠಲನಲ್ಲಿ

೫೭

ಕಮಲಮುಖಿಯೆ ಕಮಲಾಲಯೆ ಕಮಲೆ
ಕಮಲಾಕ್ಷಿಯೆ ಕೋಮಲೆ ಪ.

ಕಮಲನಾಭನ ಪಾದಕಮಲಯುಗಳ ಮಧುಪೆ
ಕಮಲಜ ಜನನಿಯೆ ಕಮಲಮಿತ್ರೆ ಸುಪ್ರಭೆ ಅ.ಪ.

ಅರುಣನ ಪೋಲುವ ಚರಣವು ಬಾಲಚಂದಿರನ ಸೋಲಿಪ ನಖವು
ಬೆರಳಲ್ಲಿ ಪಿಲ್ಲಿ ಕಾಲುಂಗುರ ಮೆಂಟಿಕೆ ಕಿರುಗೆಜ್ಜೆಂದಿಗೆ ಪೆಂಡೆಯು
ಕರಿಯ ದಂತದಂತೆ ಜಾನುದರ್ಪಣ ಜಂಘೆ ಉಟ್ಟ ದಟ್ಟಿಯು ನೆರಿಗೆಯು
ಹರಿನಡು ಕಿಂಕಿಣಿ ಭರದಿ ಒಡ್ಯಾಣವು ಉದರ ತ್ರಿವಳಿರೇಖೆ ವರ ಕಂಚುಕಧಾರಿ೧

ಕರಿಯ ಸೊಂಡಲಿನಂತೆ ಕರಯುಗದೊಳಗೊಪ್ಪುವ ಬೆರಳು ಮಾಣಿಕ್ಯದುಂಗುರ
ಹರಡಿ ಕಂಕಣ ವಂಕಿ ಬಿರುದಿನ ತೋಳ್ಬಂದಿ ಶಿರಿಭುಜದಲ್ಲಿ ಕೇಯೂರ
ಕೊರಳ ಒಪ್ಪುವ ಸರಗಳು ಪದಕವು ಉರೆ ವೈಜಯಂತೀ ಮಂದಾರ
ಮೆರೆವ ಚುಬುಕ ಬಿಂಬಾಧರ ಕೂರ್ಮಕದಪು ಕಿರಿದಂತ ರತುನದ ಕರಡಿಗೆ ವದನೆ ೨

ಸುರಭಿ ಚಂಪಕನಾಸಿಕ ಮೂಗುತಿ ಶಾಂತ ಪರಮ ಕರುಣ ನೋಟದ
ಹರಿಣನಯನೆ ಪುಬ್ಬುಸ್ಮರನ ಚಾಪದಂತೆ ಕರ್ಣಾಭರಣಲಂಕಾರ ಸಿರಿಕುಂಕುಮ
ಕಸ್ತೂರಿ ತಿಲಕದ ಮೇಲೆ ಅರಳೆಲೆ ಬೈತಲೆಯ ಸರ ಕುರುಳುಸುಳಿಯು
ಪರಿಪರಿ ರತ್ನ ಖಚಿತದ ವರ ಮಕುಟವು ಕೋಟಿ ತರಣಿಯಂತೊಪ್ಪುವ ೩

ತೆತ್ತೀಸಕೋಟಿ ದೇವತೆಗಳು ವಾಣಿ ಭಾರತಿ ಪಾರ್ವತಿ ಮೊದಲಾದ
ಉತ್ತಮಸ್ತ್ರೀಯರು ಛತ್ರಚಾಮರನೆತ್ತಿ ಬೀಸುವಲಂಕಾರ
ಸುತ್ತಗಂಧರ್ವರು ತುಂಬುರ ನಾರದರು ಸ್ವರವೆತ್ತಿ ಪಾಡುವ ಝೇಂಕಾರ
ತತ್ತರಿತರಿಘಟ್ಟ ಝಣುತ ಝಣುತ ಎಂದು ಎತ್ತ ನೋಡಿದರತ್ತ ತಥೈ ಎಂಬೊ ಶಬ್ದ ೪

ಪಕ್ಷಿವಾಹನನಾದ ಪಾವನಮೂರ್ತಿಯ ವಕ್ಷಸ್ಥಳದಿ ಶೋಭಿತೆ
ಲಕ್ಷ್ಮೀದೇವಿಯೆ ಸಲಕ್ಷಣೆ ಅಜ ಫಾಲಾಕ್ಷ ಸುರವಿನುತೆ
ಮೋಕ್ಷದಾಯಕಿ ಲೋಕರಕ್ಷಕಿ ರಮಾದೇವಿ ಇಕ್ಷುಧನ್ವನ ಜನನಿ
ಅಕ್ಷಯಫಲದ ಗೋಪಾಲವಿಠಲನ ಪ್ರತ್ಯಕ್ಷ ತೋರಿಸೆನ್ನಪೇಕ್ಷೆ ಪೂರೈಸೆ ತಾಯೆ ೫

೫೪

ಕಾಪಾಡೆಲೆ ಸಕಲಾಪಧ್ಧಾರಿಣಿ ಕೊಲ್ಲಾಪುರಗತ ಕಮಲೆ ಪ.

ಈ ಪರಿ ಹರಿಯ ದಯಾಪಾತ್ರಳೆ ಶುಭ
ನೂಪುರಾದಿ ಸುಕಲಾಪೆ ಶೋಭಿತೆ ಭ್ರೂ-

ಚಾಪ ಚಲನದಿಂದ ಪವಮಾನನಿ-
ಗೆ ಪದದೇ ಭವತಾಪಗಳಳಿದು ಅ.ಪ.

ಇಂದೀವರವರಮಂದಿರನಂದಿನಿ ಚಂದ್ರಜಯಿಪ ವದನೆ
ಬೃಂದಾರಕ ಮುನಿವಂದಿತ ಪದಯುಗೆ ಕುಂದಕುಟ್ಮಲರದನೆ
ಮದನೆ ಮುಕುಂದ ಹೃದಯಸದನೆ
ಇಂದ್ರನೀಲನಭ ಸುಂದರತನು ಗುಣ-
ಸಾಂದ್ರ ಇಂದುಮುಖಿ ಮಂದರಧರಗೋ-
ವಿಂದ ಬಂಧುನುತೆ ಬೃಂದಾವನಪತಿ
ನಂದನಂದನನಾನಂದಿನಿ ವಂದಿತೆ ೧

ಕನ್ಯಾಮಣಿ ಜಗನ್ಮಾನ್ಯಾಮೃತ ಪಾವನ್ನಾಧರ ಬಿಂಬೆ
ಘನ ಕಲಶ ಕುಚವನ್ನು ಧರಿಪ ಕಟಿಸಣ್ಣ
ಘನನಿತಂಬೆ ಅಂಬೆ ಚಿನ್ನಪುತ್ಥಳಿ ಬೊಂಬೆ
ಅನ್ನವಸನ ಧನಧಾನ್ಯಕಾಗಿ ಪರ-
ರನ್ನ ಯಾಚಿಸಿ ಬಲು ಖಿನ್ನನಾಗುತಲಿ
ನಿನ್ನನು ಮರೆದೆನು ಎನ್ನವಗುಣಗ-
ಳನ್ನು ಎಣಿಸದಿರು ಮನ್ನಿಸು ಬಿನ್ನಪ ೨

ಲೋಲಕುಂಡಲ ಕಪೋಲ ಶೋಭಿತ ಕೀಲಾಲಜಾತಪಾಣಿ
ಕೇಳಿಲಿ ಯಮುನಾಕೂಲದಿ ಹರಿ ದು-
ಕೂಲಚೋರನ ರಾಣಿ ಜಾಣೆ ಶುಶ್ರೋಣಿ ಜಗತ್ರಾಣಿ
ಕಾಳಕೂಟಸಮ ಕೀಳು ವಿಷಯದಲಿ
ಬೀಳುವುದೆನ್ನ ಮನ ಕೀಳಿಸಿ ಶ್ರೀಗೋ-
ಪಾಲವಿಠಲನನುಗಾಲ ಸೇವಿಪಂತೆ
ಶೀಲವೀಯೆಯೆಂದು ಕೇಳುವೆ ಲಾಲಿಸೆ ೩

೫೫

ಕೋಮಲೆ ರಮಾದೇವಿಯನ್ನ ನೋಡಬನ್ನಿರೆ
ಕಮಲಾರಿ ಸಹೋದರಿಯನೀಗ ಬೇಡಬನ್ನಿರೆ ಪ.

ಇಂದುನಿಭದ ಸುಂದರಿಯರು ಬಂದು ನೋಡಿರೆ ಈ
ಕುಂದರದನೆ ಮಂದರೋದ್ಧರನರ್ಧಾಂಗಿಯೆ ೧

ಭಕ್ತಿಯಿಂದ ಭಜಿಪರಿಗೆ ಮುಕ್ತಿಕೊಡುವಳೆ
ಶಕ್ತಿಯುಕ್ತಿಗಳನೆ ಕೊಟ್ಟು ಅರ್ತಿಮಾಳ್ಪಳೆ ೨

ದಾಸಿಯಾದರೆ ಶ್ರೀಶನರಾಣಿ ಪೋಷಿಸುವಳೆ
ಗೋಪಾಲವಿಠಲ ಘಾಸಿಮಾಡದೆ ಪೋಷಿಸೆನುವಳೆ ೩

೫೬

ಶ್ರೀ ಮಹಾಲಕ್ಷ್ಮೀ ಮಾತೆ ತ್ರಿಭುವನ ಜನನಿ
ಶ್ರೀಮಂತ ವಿಷ್ಣುವಾಮಾಂಕಸದನಿ ಪ.

ತಾಮರಸಾಸನ ವ್ಯೋಮಾಳಕ ಸುರ–
ಸ್ತೋಮ ವಿನುತೆ ಹೇ ಸೋಮ ಸಹೋದರಿ ಅ.ಪ.

ಗುಣತ್ರಯಾತ್ಮಕ ಚೂಲಿಯನು ಅಲಂಕರಿಸಿ
ವನಜಭವಾಂಡ ಪಾತ್ರೆಯನಲ್ಲಿರಿಸಿ
ಗಣನೆಯಿಲ್ಲದ ಜೀವಧ್ಯಾನ ತುಂಬಿರಿಸಿ
ಜನರ ಯೋಗ್ಯತೆ ಉದಕವನಲ್ಲಿ ಬೆರೆಸಿ
ಮಿನುಗುವ ಕರ್ಮ ಇಂಧನ ಕಾಲವೆ ಮಹಾ
ಅನಳ ಜನರ ಸಾಧನವೆಂಬ ದರ್ವಿಲಿ
ಇನಿತು ಪಾಕವ ಮಾಡಿ ಘನಮಹಿಮನ ಭೋ–
ಜನಕನುಕೂಲ ಮಾಡ್ವ ವನರುಹನಯನೆ ೧

ನಿಲಯಶಯ್ಯ ತಾಂಬೂಲಾಯುಧ ಚೇಲ
ಜಲಜ ಮಂದಾರ ಚಂಪಕ ಮೊಲ್ಲೆ ಬಕುಳ
ತುಲಸಿ ಕೇತಕಿ ದಿವ್ಯಗಂಧ ಪರಿಮಳ
ವಲಯ ಕಿರೀಟಕುಂಡಲ ರತ್ನಮಾಲಾ

ಹೊಳೆವ ಸುನವನವ ಕಳೇವರ ಕೊಳುತಲಿ
ಹಲವು ವಿಧಾರ್ಚನೆಗಳಲಿ ಪತಿಯನು
ಒಲಿಸಿ ವಲ್ಲಭನ ತೋಳಲಿ ಬಿಗಿದಪ್ಪಿದ
ಬಲುಸುಖಜಲನಿಧೆ ಸಲಹೆ ನಮಿಸುವೆ ೨

ಕಮಲ ಕುಟ್ಮಲರದನದಭಯಸುಪಾಣಿ
ವಿಮಲ ಸುಧಾಕರನಿಭ ಶುಭವದನೆ
ಭ್ರಮರಕುಂತಳೆ ಹೇಮಾಂಬರ ಚಾರು ಶ್ರೋಣಿ
ಅಮಿತ ಸುಗುಣೆ ಶೋಭಿತ ಅಬ್ಜಸದನೆ
ತಮಹಾರಿ ಗೋಪಾಲವಿಠಲನರ್ಧಾಂಗಿಯೆ
ಸಮರೂಪ ಸಮಕಾಲ ಸಮದೇಶ ವ್ಯಾಪುತೆ
ರಮೆ ಅನುಪಮೆ ಸಮೆ ನಮಿಸುವೆ ಎನ್ನ ಭವ-
ಶಮಲವಳಿದು ಹೃತ್ಕಮಲದಿ ಹರಿತೋರೆ ೩

ಹನುಮ-ಭೀಮ-ಮಧ್ವ

೫೭

ಇದು ಏನೊ ಚರಿತ ಯಂತ್ರೋದ್ಧಾರ ಪ.

ಇದು ಏನೊ ಚರಿತ ಶ್ರೀಪದುಮನಾಭನ ದೂತ
ಸದಾ ಕಾಲದಲಿ ಸರ್ವರ ಹೃದಯಾಂತರ್ಗತ ಅ.ಪ.

ವಾರಿಧಿ ಗೋಷ್ಪಾದನೀರಂತೆ ದಾಟಿದ
ಧೀರ ಯೋಗಾಸನಧಾರಿಯಾಗಿಪ್ಪೊದು ೧

ದುರುಳ ಕೌರವರನ್ನು ವರಗದೆಯಲಿ ಕೊಂದ
ಕರದಲ್ಲಿ ಜಪಮಾಲೆ ಧರಿಸಿ ಎಣಿಸುವುದು ೨

ಹೀನ ಮತಗಳನ್ನು ವಾಣಿಲಿ ತರಿದಂಥ
ಜ್ಞಾನವಂತನೆ ಹೀಗೆ ಮೌನವ ಧರಿಸಿದ್ದು ೩

ಸರ್ವವ್ಯಾಪಕ ನೀನು ಪೂರ್ವಿಕ ದೇವನೆ
ಶರ್ವನಪಿತ ಬಂದೀ ಪರ್ವತ ಸೇರಿದ್ದು ೪

ಗೋಪಾಲವಿಠಲಗೆ ನೀ ಪ್ರೀತಿ ಮಂತ್ರಿಯು
ವ್ಯಾಪಾರ ಮಾಡದೆ ಈ ಪರಿ ಕುಳಿತದ್ದು ೫

೫೮

ಎಂತು ತುತಿಸಲಿ ಎನ್ನದೇವನ ಸಂತತ ನಮ್ಮ ಸಲಹೋನ
ಅಂತರಂಗದಿ ಹರಿಯ ತೋರಿಸಿ ಸಂತೋಷದಿಂದ ನಲಿವ ಪವನನ ಪ.

ತಾನು ಮಾಡಿದ ಕರ್ಮಶೇಷವು ತಾನು ತಿಳುಹಿದ ಜ್ಞಾನಶೇಷವು
ತಾನು ಮಾಡಿದ ಭಕುತಿಶೇಷವು ನಾನಾ ಸಾಧನಶೇಷವು
ತಾನು ಕರುಣಿಸಿ ಜೀವ ಯೋಗ್ಯತೆಯೇನು (ಯನು?) ಅರಿತು ಕರ್ಮಮಾಡಿಸಿ
ತಾನು ಸಹಿತ ಧ್ಯಾನದಲಿ ಹರಿ ಕಾಣಿಸಿ ತೋರ್ಪ ಕರುಣೆಯ ೧

ಇವನ ಪ್ರೇರಣೆ ಹರಿಯ ಪ್ರೇರಣೆ ಇವನ ಸೇವೆಯು ಹರಿಯ ಸೇವೆಯು
ಇವನ ಕರುಣವೆ ಹರಿಯ ಕರುಣವು ಇವನ ಬಲವೇ ಪ್ರಬಲವು
ಇವನು ನಂಬಲು ಹರಿಯು ನಂಬುವ ಇವನು ಒಲಿಯಲು ಹರಿಯು ಒಲಿ
ಯುವ ಪವನಾಖ್ಯಾನಾಗಿ ನಮ್ಮನು ಪವನಗತಿ ಪೊಂದಿಸುವನ ೨

ಜ್ಞಾನ ಭಕುತಿವೈರಾಗ್ಯಖಣಿಯು ದಾನವಾಂತಕ ಧರ್ಮಶೀಲ
ಪೂರ್ಣಬೋಧೆಯ ಪುಣ್ಯನಾಮಕೆ ಪ್ರಾಣಾಪಾನವುದಾನರಿಗೆ
ಪ್ರಾಣ ಮುಖ್ಯ ಪ್ರಾಣ ಇವ ನಮ್ಮ ಪ್ರಾಣ ನಿಲ್ಲದು ಇವನು ಇಲ್ಲದಿರೆ
ಪ್ರಾಣಪತಿ ಗೋಪಾಲವಿಠಲನ ಕಾಣಿಸಿತೋರ್ಪ ಕರುಣೆಯ ೩

೫೯

ಎಣೆಯಾರೊ ನಿಮಗೆ ಕುಂಭಿಣಿಯ ಮಧ್ಯದ-
ಲಿನ್ನು ಮನಸಿಜ ಆರಂಭಿಸಿ ಮನು
ಮುನಿಕುಲ ಚಿಂತಾಮಣಿಯೆ ವಾದೇಂದ್ರ ಮರುತಮತ-
ವನಧಿಚಂದ್ರ ಕುಮತಗಜಗಣಕೆ ಮೃಗೇಂದ್ರ ಪ.

ಸ್ನಾನಾನುಷ್ಠಾನ ಕಾಲದಲ್ಲಿ ಶ್ರೀಶರಂಗ
ಪಾಣಿಯ ನ್ಯಾಸ ಧ್ಯಾನ ಮಾಡುವ ಧೀರ
ದಾನಾದಿ ಕರ್ಮ ಶಮೆದಮೆ ನಾನಾ
ಗುಣಾರ್ಣ ಭಜಿಸುವಂಥ ಧೀರ ಪ್ರಸನ್ನ ೧

ಹರಿಯೆ ಸರ್ವೋತ್ತಮ ಮರುತ ದೇವನೆ
ಗುರು ಎರಡುಮೂರು ಭೇದ ಸ್ಥಿರವೆಂದು ಸ್ಥಾಪಿಸಿ
ಧರೆಯೊಳು ಮೆರೆದೆ ವಾದಿಗಳುಕ್ತಿಧುರದಿಂದ
ತರಿದೆ ನಂಬಿದವರ ಕರುಣದಿ ಪೊರೆದೆ ೨

ವೇದಾರ್ಥಗಳನೆಲ್ಲ ವ್ಯಾಖ್ಯಾನ ಮುಖದಿಂದ
ಸಾಧಿಸಿ ಧರೆಗೆಲ್ಲ ಬೋಧಿಸಿ ಅವರಘ-
ಭೇದವ ತರಿದೆ ಮನೋಭೀಷ್ಟ ಮೋ-
ದದಿಗರೆದೆ ರಾಮನಾಮ ಸ್ವಾದ ಸವಿದೆ ೩

ದರಹಾಸಸರಿತೆ ತೀರ ಮಂತ್ರಾಲಯದಲ್ಲಿ
ಗುರುರಾಯ ಆಜ್ಞೆಯಿಂದವರ ಸನ್ನಿಧಿಯಲ್ಲಿ
ಸ್ಥಿರವಾಗಿ ನಿಂದೆ ಸುಮಹಿಮೆಯಲ್ಲಿ
ಮೆರೆವೆ ನೀ ಮುಂದೆ ದಯದಲೆನ್ನ ಪೊರೆಯಯ್ಯ ತಂದೆ ೪

ಮರುತಾಂತರ್ಗತ ಗೋಪಾಲವಿಠಲನ್ನ
ಹರುಷದಿ ಪೂಜಿಪ ಗುರು ಉಪೇಂದ್ರ-
ತೀರ್ಥರ ಕರಕಂಜಜಾತ ಭಕ್ತರಕಾಮ ವರ
ಪಾರಿಜಾತ ಕಾಮಧೇನು ಕರುಣಿಸೊ ದಾತ ೫

೬೦

ಕರವ ಮುಗಿದ ಮುಖ್ಯಪ್ರಾಣ
ದುರುಳರ ಸದೆದು ಶರಣರ ಪೊರೆಯೆಂದು ಪ.

ಜೀವೇಶರೈಕ್ಯವು ಜಗತು ಮಿಥ್ಯವೆಂದು
ಈ ವಿಧ ಪೇಳುವ ಮಾಯಿಗಳಳಿಯೆಂದು ೧

ತಾರತಮ್ಯ ಪಂಚಭೇದ ಸತ್ಯವೆಂದು
ಮಾರುತಮತ ಪೊಂದಿದವರನು ಪೊರೆಯೆಂದು ೨

ಇಲ್ಲಿ ಮಾತ್ರವು ಭೇದ ಅಲ್ಲಿ ಒಂದೆ ಎಂಬೊ
ಕ್ಷುಲ್ಲಕರ ಹಿಡಿದ್ಹಲ್ಲು ಮುರಿಯೆಂದು ೩

ಪರಿಪರಿ ಭಕ್ತರ ಹೃದಯಕಮಲದಲ್ಲಿ
ನಿರುತ ಮಾಡುವ ಕರ್ಮ ಶ್ರೀಹರಿಗೆ ಅರ್ಪಿತವೆಂದು ೪

ಹರಿ ಮಾಡೊ ವ್ಯಾಪಾರ ಬಲ್ಲಕಾರಣದಿಂದ
ಸಿರಿ ಗೋಪಾಲವಿಠಲಗೆರಗಿ ನಿಂದು ೫

೬೧

ಜಯ ಜಯ ಭೀಮಸೇನ ಪ.

ಜಯ ಭೀಮಸೇನ ದುರ್ಜಯ ಪರಾಕ್ರಮ ಧೀರಾ
ದಯಾಪಯೋನಿಧಿಯೆ ನಿರ್ಭಯ ವೈಷ್ಣವಾಗ್ರಣಿ ಅ.ಪ.

ಕುಂತಿಜ ಕುಮುದಸಖನ ಕುಲತಿಲಕನೆ
ಅಂತಕಾತ್ಮಜನನುಜನೆ ಅರ್ಜುನಾಗ್ರಜ
ಕಿಂತು ಜೀಮೂತ ಪ್ರಚಂಡ ಮಾರುತ ತಾತ
ಶಾಂತದಾನ ದ್ರುಪದನ ತನುಜೆಯ ನಿಜ
ಕಾಂತ ದಿಗಂತ ವಿಶ್ರಾಂತ ಮಹಿಮ ಮಣಿ
ಮಂತ ಅಂಬ ಸುವಿದಾರಿ ಸಹಜ ಬಲ
ವಂತ ದುರ್ಜನ ಕುಠಾರಿ ಕೌರವಸೇನಾ
ಕಾಂತಾರ ಪಾವಕ ದೀನೋದ್ಧಾರಿ ೧

ವೃಕೋದರ ವಿಷ್ಣುಸೇವಕ ವಿಜ್ಞಾನಾಂಬುಧಿ
ಬಕಮದಧ್ವಂಸಿ ಜಟಾಸುರಾಂತಕ ಹಿಡಿಂ-

ಬಕಾಸುರಗರ್ವಪರ್ವತ ಪವಿಧರ ಹಿಡಿಂ
ಬಕಿ ಚಿತ್ತಕುಮುದಕೋರಕ ಪೂರ್ಣೋಡುಪರಾಜ
ಅಕಳಂಕ ಧನುರಾಗಮಾಚಾರ್ಯ ನಿಪುಣ ಕೀ-
ಚಕ ಬಲ ನಿರ್ಮೂಲನ ದ್ರೋಣಾದಿ ಸೈ-
ನ್ಯ ಕುಮನ ಅಸುಹರಣ ಧಾರ್ತರಾಷ್ಟ್ರ
ನಿಕರವಾರಣ ವಿದಾರಣ ಪಂಚವದನಾ ೨

ಮಣಿಮಯರಥವೇರಿ ಫಣಿಕೇತನನನುಜನು
ನೆಣನು ದುರ್ಗುಣನು ಮಾರ್ಗಣಗಣದಿಂದಲಿ
ರಣಾಂಗಣದಿ ನಿನ್ನ ಸೆಣಸಲಾಕ್ಷಣ ನೋಡಿ
ತೃಣಮಾಡಿ ಗದೆಯಿಂದ ಹಣಿದು ಹಣೆಯ ಮೆಟ್ಟಿ
ಪಣದಿ ನುಡಿದವರ ರಣವ ತಿದ್ದಿ ಅತ್ಯು-
ಲ್ಬಣದಿಂದವಗೆ ಲಂಘಿಸಿ ವಕ್ಷದಿ ರಕ್ತ
ಕೊಣನ ಶಸ್ತ್ರದಿ ನಿರ್ಮಿಸಿ ಕದಡಿಗೂಡಿ
ರಣದೊಳೊಪ್ಪಿದ್ಯೊ ನಿನಗೆಣೆಯಿಲ್ಲವೆನಿಸಿ ೩

ಮದ್ದಾನೆ ರೂಪ ಧರಿಸಿ ಮಾಯದಲಿ ಬಂದಾ
ರುದ್ರಾನ ಯುದ್ಧದಿ ಗೆದ್ದುವೋಡಿಸಲಾಗ
ಕೃದ್ಧನಾಗಿ ವ್ಯಾಘ್ರಸಿಂಹರೂಪದಿ ಬರೆ
ಗುದ್ದಿ ಕೆಡಹಿ ವೇಗಕೆ ದಾರಿ ಕಟ್ಟಿದೆ
ಯಿದ್ಧರೆಯೊಳು ನಿಮಗೆಣೆಯಾರು ಮಹಾಬಲಿ
ಮದ್ರಾಧಿಪತಿಯ ಅಂಬರಕಟ್ಟಿ ರಾಜಸೂ-
ಯಾಧ್ವರದಲಿ ಮಾಗಧನ ಸಂಹರಿಸಿದತಿ
ಶುದ್ಧ ಸ್ವಭಾವ ಶೂರ ಸತತ ಸಾಧ್ಯ
ಸಿದ್ಧೇಶನಿಲ ಕುಮಾರ ನಮಿಪೆಯೆನ್ನ
ಉದ್ಧರಿಸುವುದಯ್ಯ ಶುದ್ಧ ಮನೋಹರ ೪

ಭೀಮಭವಾರಣ್ಯ ಧೂಮಕೇತನೆ
ನಮೋ ಶ್ರೀ ಮನೋಹರ ಗೋಪಾಲವಿಠಲನ್ನ
ಪ್ರೇಮ ಪುಣ್ಯ ಪುತ್ರ ಸೂತ್ರ ಸಜ್ಜನ ಮಿತ್ರ

ಶ್ರೀಮಂತ ಧೀಮಂತ ರಹಿತಾದಿಮಧ್ಯಾಂತ
ಭೀಮ ವಿಕ್ರಮ ಸಧ್ಬೀಮ ದುರ್ಜನರಿಗೆ
ಭೀಮಾದಿ ಅಮಿತ ರೂಪ ಸದ್ಗುಣಗಣ
ಧಾಮ ವೀರಪ್ರತಾಪ ಭಕುತಿ ಜ್ಞಾನ
ಕಾಮಿತಾರ್ಥಗಳಿತ್ತು ಪೊರೆಯಯ್ಯ ಅಸುವ ೫

೬೨

ಪೊಗಳಲೆನ್ನಳವೆ ನಿನ್ನ ಗುರುಗಳ ರನ್ನ ಪ.

ಪೊಗಳಲೆನ್ನಳವೆ ನಿನ್ನಗಣಿತಮಹಿಮೆಯ
ಖಗವಾಹನನ ದೂತ ತ್ರಿಜಗದೊಳ್ ಪ್ರಖ್ಯಾತ ಅ.ಪ.

ವಸುಧೆಯ ಮೇಲೇಸೊ ಅಸುರರು ಪುಟ್ಟಿ ತ್ರಿ-
ದಶರನ್ನು ಬಾಧಿಸೆ ಕುಸುಮಸಂಭವಗೆ ವಂ-
ದಿಸಿ ಮೊರೆಯಿಡಲಾಗ ಬಿಸಜನಾಭನು ಇದ್ದ
ದೆಸೆಗೆ ಪೋಗಿ ತಮ್ಮ ಕುಶಲಗಳನು ಪೇಳೆ
ನಸುನಕ್ಕು ಬೇಗನೆ ದಶರಥನಲ್ಲಿ ಉ-
ದಿಸಲು ಆತನ ಸೇವೆ ಉದ್ದಿಶವಾಗಿ ಅಂಜನೆ
ಬಸುರಲಿ ಬಂದು ಉದಿಸಿದಾಕ್ಷಣವೆ ತಾಮ-
ರಸಸಖನಿಗೆ ಲಂಘಿಸಿ ಇಂದ್ರನ ಚಾಪ
ಕೊಸರಿ ನಿರಾಕರಿಸಿ ಅಸುರರ ಜೀವ-
ದುಸಿರು ಸೆಳೆದಂಥ ಅಸಮಪರಾಕ್ರಮಿ ೧

ಕಂಜಮಿತ್ರನ ಸುತನೊಡನೆ ಸಖ್ಯವ ಮಾಡಿ
ಕಂಜನಾಭನ ಪಾದಕ್ಕೆರಗಿ ಮುದ್ರಿಕೆ ಕೊಂಡು
ಮಂಜಿನುದಕ ಬಿಂದುವಂತೆ ವನಧಿ ದಾಟಿ
ಸಂಜೆಯಚರನ ಪುರವ ಪೊಕ್ಕು ವನದೊಳು
ಕುಂಜರಗಮನೆಗೆ ಕುರುಹಕೊಟ್ಟಸುರರ
ಭಂಜಿಸಿ ಅಕ್ಷಕುವರನ ಸಂಹಾರ ಮಾಡಿ

ಕಂಜಸಂಭವನಾಸ್ತ್ರಕೆ ಸಿಲುಕಿ ಅಸುರಗೆ
ಅಂಜದುತ್ತರ ನಡೆಸಿ ದನುಜಬಲ
ಪುಂಜಗಳನೆ ವರೆಸಿ ಬಾಲದಲಿದ್ದ
ಪಂಜಿಲಿ ಪುರದಹಿಸಿ ಮರಳಿ ಬಂದು
ಕಂಜಜಾಂಡದ ದೊರೆಗೆರಗಿದ ಧೀರ ೨

ವಾನರ ನಿಕರವ ನೆರಹಿ ಸೇತುವೆ ಕಟ್ಟಿ
ಶ್ರೀನಾಥನಿಗೆ ವಾಹನನಾಗಿ ದನುಜರೊಳ್
ನಾನಾ ಯೂಥಪರನ್ನು ಕೊಂದು ಗಿರಿ ತಂದು
ದಾನವೇಂದ್ರನ ರಾಮ ಮುರಿಯಲಾಕ್ಷಣ ಬೇಗ
ಜಾನಕಾಕೃತಿ ತಂದು ಹರಿಗೆ ಅರ್ಪಣೆ ಮಾಡಿ
ದೀನನಾದ ವಿಭೀಷಣಗೆ ಪಟ್ಟವನು ಕಟ್ಟಿ
ಆ ನಾರದರು ಹರಿ ಆಜ್ಞೆಯಿಂದಲಿ ಬಂದು
ಹೀನ ದಶಾಸ್ಯನ ಗೆಲಿದ ಜಯವಂತನೀತನೇವೆ
ಎಂದೆನ್ನೆ ಹನುಮ ನಿನಗೇನುಬೇಕು ಬೇಡೆನ್ನೆ
ನಿನ್ನಯ ಪಾದಧ್ಯಾನ ನಿರುತ ನೀಡೆನೆ ಭಳಿರೆ ಶ-
ತಾನಂದ ಪದವಿಯ ಕೊಂಡ ಧೀರ ೩

ಕೃಷ್ಣನ ಸೇವೆಗೋಸುಗವೆ ಕುಂತಿಜನಾಗಿ
ಹುಟ್ಟಿದಾಕ್ಷಣ ಬೆಟ್ಟಕುಟ್ಟಿ ಹಿಟ್ಟನೆ ಮಾಡಿ
ಕೊಟ್ಟ ವಿಷವನುಂಡು ಅಹಿಗಳನೊರೆಸಿ ಕೈ-
ಕಟ್ಟಿ ಜಲದೊಳಿಡೆ ಬಂದು ಲಾಕ್ಷಾಗೃಹ
ಸುಟ್ಟು ಭಸ್ಮವಮಾಡಿ ಹಿಡಿಂಬಕನ ಕೊಂದು
ದಿಟ್ಟಘಟೋತ್ಕಚನ ಪಡೆದು ದನುಜೆಯಲ್ಲಿ
ಶಿಷ್ಟದ್ವಿಜನಿಗೊಲಿದು ಬಕನ ಸಂಹಾರ ಮಾಡಿ
ಕೃಷ್ಣಾಸ್ವಯಂವರದಿ ಜಿಷ್ಣುವಿಂದಲಿ ಲಕ್ಷ್ಯ-
ಕುಟ್ಟಿ ಕನ್ನಿಕೆವರಿಸಿ ಅಲ್ಲಿಗೆ ಬಂದ
ದುಷ್ಟರ ಸಂಹರಿಸಿ ಶಲ್ಯನ ವ್ಯೋಮ-
ಕಿಟ್ಟು ನೆಲದಲ್ಲಿರಿಸಿ ಇಂದ್ರಪ್ರಸ್ಥ
ಪಟ್ಟಣವಾಳಿದ ಶೂರ ಸಮೀರ ೪

ವೀರರಾಯರನೆಲ್ಲ ಸೆರೆಯನಾಳುವಂಥ
ಕ್ರೂರ ಜರೆಯ ಸುತನೊಡನೆ ಯುದ್ಧವ ಮಾಡಿ
ಚೀರಿ ಬೊಬ್ಬಿಡುತಲಿ ಅವನ ಸೀಳಿದ ಶಬ್ದ
ವಾರಿಜಜಾಂಡ ಒಡೆದ್ದಕ್ಕಿಮ್ಮಡಿಯಾಗೆ
ಮೂರೇಳುದಿಕ್ಕು ಜಯಿಸಿ ರಾಜಸೂಯಯಾಗವ
ಪೂರೈಸಿ ಕೃಷ್ಣಗೆ ಅಗ್ರಪೂಜೆಯಮಾಡಿ
ಅರಣ್ಯದಲ್ಲಿ ಪೋಗಿ ಮಣಿಮಂತ ಕಿಮ್ಮೀರರ
ವಿರಾಟನಗರದಿ ಕೀಚಕರನು ಕೊಂದು
ಧೀರ ಗೋವ್ಗಳ ಬಿಡಿಸಿ ಅಕ್ಷೋಹಿಣಿ
ಮೂರಾರುಗಳ ಬೆರೆಸಿ ಪಾರ್ಥನ ಧ್ವಜ-
ಕ್ಕೇರಿ ಶಬ್ದವ ಘೋಷಿಸಿ ಕೌರವ ಬಲ
ಆರಕ್ಷೋಹಿಣಿ ಸಂಹಾರ ಮಾಡಿದ ಧೀರ ೫

ನಡುರಣದಲಿ ಬಂದು ಘುಡುಘುಡಿಸುತ ನಿಂದು
ಜಡಜಂಗಮರೆಲ್ಲ ನಡುಗೆ ದುಶ್ಶಾಸನನ್ನ್ಹಿಡಿದು
ಕೆಡಹಿ ಬಡಿದೊಡಲಬಗೆದು ರಕ್ತ
ಕುಡಿದಂತೆ ತೋರಿಸಿ ಮಡದಿಗೆ ಕರುಳನ್ನು
ಮುಡಿಸಿ ಸುಯೋಧನನೊಡನೆ ಗದಾಯುದ್ಧ
ಬಿಡದೆ ಜಡಿದು ಮಾಡಿ ಒಡೆಯನಾಜ್ಞದಿ
ತೊಡೆಕಡಿದು ಪೊಡವಿಮೇಲೆ ಕೆಡಹಿ ಅಗ್ರಜಾನುಜ-
ರೊಡನೆ ಸಾಮ್ರಾಜ್ಯವ ಸಡಗರದಲಿ ಮಾಡಿ
ಹಿಡಿದು ಕಲಿಯ ಭಂಜಿಸಿ ಅಧರ್ಮವ
ಕೆಡಹಿ ಅಸಮನೆನಿಸಿ ಸನ್ಮಾರ್ಗವ
ದೃಢಭಕ್ತರಿಗೆ ತೋರಿಸಿ ಲೋಕದಿ ಖ್ಯಾತಿ
ಪಡೆದು ಮೆರೆದೆ ಶರ್ವನೊಡೆಯ ಭಾರತೀಕಾಂತ ೬

ಮಾಯಿಗಳು ಹೆಚ್ಚಿ ಮಹಿಯೆಲ್ಲ ವ್ಯಾಪಿಸೆ
ಆ ಯಜ್ಞಭುಜರು ಮತಿಗೆಟ್ಟು ಬಳಲುತ್ತ
ತೋಯಜಭವಗೆ ವಂದಿಸಿ ಪೇಳಲಾತನು
ಶ್ರೀಯರಸಗೆ ಪೇಳೆ ಹರಿ ನಿನ್ನ ಮೊಗನೋಡೆ

ಆಯವರಿತು ನೀನವನಿಯೊಳಗೆ ಮಧ್ಯ-
ಗೇಹಭಟ್ಟರಲ್ಲಿ ಜನಿಸಿ ಅಚ್ಯುತ ಪ್ರೇಕ್ಷಾ-
ಚಾರ್ಯರಿಂದುಪದೇಶಗೊಂಡು ಗ್ರಂಥವನೋದಿ
ನ್ಯಾಯಶಾಸ್ತ್ರವ ಮಾಡಿ ಸುರರಿಗೆ ಅದರರ್ಥ
ಪೀಯೂಷವನುಣಿಸಿ ಮೋಹಕಶಾಸ್ತ್ರ
ಹೇಯವೆಂದು ತೋರಿಸಿ ಅಜ್ಞಾನದ
ಮಾಯ ನಿರಾಕರಿಸಿ ಸರ್ವರಿಗೆಲ್ಲ
ಪ್ರಿಯ ಮಾರ್ಗವ ತೋರಿ ಮೆರೆದ ಮಾತರಿಶ್ವ ೭

ದಶಉಪನಿಷತ್ತುಗಳಿಗೆ ಟೀಕವಮಾಡಿ
ಪೊಸ ಗೀತಭಾಷ್ಯ ರುಗ್ಭಾಷ್ಯಾಣು ವೇದಾಂತ
ಅಸಮ ತಾತ್ಪರ್ಯನಿರ್ಣಯ ದ್ವಾದಶಸ್ತೋತ್ರ
ಕುಶಲದಿ ಯಮಕ ಭಾರತ ಗ್ರಂಥವ ಮಾಡಿ
ಕುಸುಮನಾಭತೀರ್ಥ ನರಹರಿತೀರ್ಥರು
ಎಸೆವ ಮಾಧವತೀರ್ಥ ಅಕ್ಷೋಭ್ಯತೀರ್ಥರಿ-
ಗುಸುರಿ ಸರ್ವಾರ್ಥಸಾರವ ತೋರಿ ಗ್ರಂಥವ
ವಸುಧೆಯ ಮೇಲಿರಿಸಿ ರಂಜಿಸುತಲಿ ಬ
ದರಿಗೆ ನಿರ್ಗಮಿಸಿ ಮರಳಿ ಬಂದು ದಶ
ದಿಶಗಳಗೆದ್ದ ದಶಪ್ರಮತಿರಾಯ ೮

ವಾಲುಕ ಮುಷ್ಟಿ ಅಷ್ಟವು ದಿಗ್ವಿಜಯ ರಾಮ-
ಲೋಲವಿಠಲ ನರಹರಿಮುನಿ ತಂದಂಥ
ಮೂಲಸೀತಾರಾಮ ಹಯಗ್ರೀವ ಮೂರುತಿ
ಸಾಲಿಗ್ರಾಮ ಶಂಖ ಮೊದಲಾದ ಪದಾರ್ಥ
ಭೂಲೋಕದೊಳು ನಿಮ್ಮ ಪೀಳಿಗೆಯಲ್ಲಿರಿಸಿ
ಶೀಲ ತ್ರಿವಿಕ್ರಮ ಪಂಡಿತಾಚಾರ್ಯರು
ಬಾಲನಾರಾಯಣ ಪಂಡಿತಾಚಾರ್ಯರ್ಗೆ
ಶೀಲಜ್ಞಾನವ ಬೋಧಿಸಿ ಸ್ತೋತ್ರ ಕೈಕೊಂಡು
ಖೂಳ ಮಾಯಿಗಳ ಭಂಜಿಸಿ ಅವರ ಮತ
ಗಾಳಿ ಮಾಡಿ ಓಡಿಸಿ ಸಿದ್ಧಾಂತವ

ಮೇಲು ಮೇಲೆಂದೆನಿಸಿ ಬದರಿಯಲ್ಲಿ
ಮೂರ್ಲೋಕಾಧಿಪ ವ್ಯಾಸಮುನಿಯ ಸೇವಿಪ ಧೀರ ೯

ಮೂರ್ಧತ್ತು ಎರಡು ಲಕ್ಷಣವುಳ್ಳ ಕಾಯನೆ
ಮೂರವತಾರ ಮುಖ್ಯಪ್ರಾಣರಾಯನೆ
ಮೂರೆರಡುರೂಪ ಮುನಿಕುಲ ಪ್ರದೀಪ
ಮೂರುಕೋಟಿರೂಪ ಮೂರೆರಡರಿಲೋಪ
ಮೂರೆಂಟು ತತ್ವೇಶರಿಗೆ ನಿಯಾಮಕ
ಮೂರೇಳಾಯತ ಮೂರೆರಡು ನೂರುಮಂತ್ರ
ಮೂರು ಅವಸ್ಥೆಯ ಜೀವರಲಿ ನಿಂತು ಮಾಡಿಪ
ಮೂರು ಶರೀರ ವ್ಯಾಪ್ತ
ನಾರಾಯಣ ಮೂರುತಿದೂತ ಆಪ್ತ ಮಧ್ವರಾಯ
ಮೂರುತಾಪದಿ ನಿರ್ಲಿಪ್ತ ಶಕ್ತಮುನಿ
ಮೂಉಲೋಕವ ಪೊತ್ತ ಮುಕುತಿಪ್ರದಾಯಕ ೧೦

ಆನಂದತೀರ್ಥ ನಿಜಾನಂದಚರಿತ ಪಂ–
ಚಾನನ ಸುರ ಮುಖ್ಯಾದ್ಯರಿಗೆಲ್ಲ ನೀ ಮುಖ್ಯ–
ಪ್ರಾಣನೆ ಅಹಿಪರ್ವತವನುಂಗುಟದಿ ಮೀಟಿ
ಶ್ರೀನಾಥ ನಿನ್ನ ಬಲವೆಷ್ಟು ಪೇಳೆನೆ
ಈ ನಳಿನಜಾಂಡವ ಒಡೆದು ತಾಳವ ಮಾಡಿ
ಅನಾಯಾಸದಲಿ ಘೋಷಿಪೆನೆಂದೆನೆ
ದಾನವಸಮುದಾಯತಿಮಿರಮಾರ್ತಾಂಡನೆ
ಜ್ಞಾನಮಯಾನಂದ ಗೋಪಾಲವಿಠಲನ
ಧ್ಯಾನಲೋಲತಿಬಲ ಭಕ್ತರ ದೋಷ–
ಕಾನನದಾವಾನಲ ಸ್ವರೂಪದ
ಆನಂದ ಕೊಡು ಸುಶೀಲ ಸುಮನಸ
ಮಾನಸಚಕೋರಸೋಮ ಸದ್ಗುಣ ಧಾಮ ೧೧

೬೩

ಭೀಮನ ನೋಡಿರೈ ಕುರುಕುಲ
ಸೋಮನ ಪಾಡಿರೈ ಪ.

ಕಾಮಜನಕ ಹರಿ ಯದುಕುಲ–
ತಿಲಕನ ಬಂಟ ನೆನೆವರ ನೆಂಟ ಅ.ಪ.

ಕುಂತಿಯ ಉದರದಿ ಜನಿಸಿದ
ಧರ್ಮನ ಅನುಜ ಪ್ರಾಣನ ತನುಜ
ಅಂತರಕ್ಹಾರುವ ಹಿಡಿಂಬಕಾಸುರನ
ತರಿದ ಹಿಡಿಂಬಿಯ ನೆರದ
ಸಂತರಿಗೆ ಬಾಧೆ ಬಡಿಸುವ ಬಕನ
ಕೊಂದಾ ಅದು ಬಲು ಚೆಂದ
ಕಂತುಪಿತ ವ್ಯಾಸನಾಜ್ಞದಿ ದ್ರೌಪದಿಯ
ತಂದನಾಯಾಸದಿಂದ ೧

ಅಂಧಕ ಕರೆಸಲು ಹಸ್ತಿನಪುರಕೆ
ಬಂದಾಗ್ರಹದಲಿನಿಂದ
ಬಂಧು ಸಹಿತ ದಿಗ್ವಿಜಯದಿ
ನೃಪರನು ಗೆಲಿದ ದ್ವಿಜರಿಗೆ ಒಲಿದ
ಅಂಧ್ವರಿ ಪ್ರಸ್ತದಿ ವರಯಜ್ಞವ
ಮಾಡಿ ಕೊಟ್ಟಾ ದ್ವಿಜರಿಗಭೀಷ್ಟ
ಸಂದಣಿಸಿ ಬಂದ ದ್ವಿಜರಿಗೆ ದ್ರವ್ಯದಾತನಾದ ವಿಖ್ಯಾತ ೨

ತಂದೆ ಕರೆದು ವನವಾಸಕೆ ಪೋಗೆನೆ
ಹೋಗಿ ದೈತ್ಯರ ನೀಗೆ
ಮಂದಗಮನೆಗೆ ಸೌಗಂಧಿಕ ತಂದಿತ್ತ
ಬಹು ಸಮರ್ಥಾ
ಸೈಂಧವನ ಸಖ ಕೋಟಿಕಾಖ್ಯನ

ಶಿರವರಿದ ಅವನನು ತರಿದ
ಇಂದುಮುಖಿ ಸಹಿತ ವಿರಾಟ
ಗೃಹದಲಿ ವಾಸವಾದಭವೇಶ ೩

ಮಲ್ಲ ಬರಲು ನೃಪನಾಜ್ಞದಿ
ಪಡೆಗಳ ಪಿಡಿದ ಅವನನು ಬಡಿದ
ಅಲ್ಲದ ಮತಿ ಮಾಡಿದ ಕೀಚಕನ
ಕರದ ಸಂದುಗಳ್ಮುರಿದ
ಬಲ್ಲಿದರಾಗಿಹ ಉಪಕೀಚಕರನ
ಸದೆದ ಕೀರ್ತಿಗೆ ಮುದದ
ನಿಲ್ಲದೆ ಬಂದ ಸುಶರ್ಮನ
ಕೈಸೆರೆತಂದ ನಿರ್ಭಯದಿಂದ ೪

ಕುರುಕುಲ ಅಧಮನ ಅನುಜರ
ಸಹಿತ ಹಿಡಿದ ಗದೆಯಿಂದ ಬಡಿದ
ಗುರುಸುತನ ಅಪರಾಧವ ಕ್ಷಮಿಸಿದ
ಧೀರ ಕದನಕಠೋರ
ಧರಣಿಯ ಭಾರವನಿಳುಹಲಿ
ಬಂದ ಶ್ರೇಷ್ಠ ಭಕ್ತರ ಪ್ರೇಷ್ಠ
ಸಿರಿಪತಿ ಗೋಪಾಲವಿಠಲನ
ಅಭಿನ್ನದಾಸ ಕಾಮಸನ್ಯಾಸ ೫

೭೪

ಮಂಗಳ ಮುಖ್ಯ ಪ್ರಾಣೇಶಗೆ ಜಯ
ಮಂಗಳ ವಾಯುಕುಮಾರಗೆ ಪ.

ಅಂಜನಾದೇವಿಯ ಕಂದಗೆ ಮಂಗಳ
ಕಂಜಾಕ್ಷಹನುಮಗೆ ಮಂಗಳ
ಸಂಜೀವನ ತಂದಾತಗೆ ಮಂಗಳ
ಸಜ್ಜನಪರಿಪಾಲಗೆ ಮಂಗಳ ೧

ಅತಿ ಬಲವಂತ ಶ್ರೀಭೀಮಗೆ ಮಂಗಳ
ಪೃಥ್ವಿಮಲ್ಲರ ಗೆಲಿದಗೆ ಮಂಗಳ
ಸತಿಗಳ ಸೀರೆಯ ಸೆಳೆದ ದೈತ್ಯನ ಕೊಂದ
ಶಿರವ ಚಂಡಾಡ್ದಗೆ ಮಂಗಳ ೨

ಸೀತಾದೇವಿಯ ಬಾಲಗೆ ಮಂಗಳ
ಶ್ರೀರಾಮರ ಬಂಟಗೆ ಮಂಗಳ
ಗೋಪಾಲವಿಠಲನ್ನ ಪೂಜೆಯ ಮಾಡುವೊ
ಗುರುಮಧ್ವಮುನಿರಾಯಗೆ ಮಂಗಳ ೩

೬೫

ಮುಖ್ಯ ಪ್ರಾಣನೆ ಕೈಯ ಮುಗಿದು ಬೇಡುವೆನಯ್ಯ ಪ.

ಭಕ್ತಿಪಾಲಿಸು ಹರಿಯ ಪಾದಬಳಿಯ
ಮುಕ್ತಿಯಿಂದಲಿ ವಿವಿಧ ಸಂಸಾರ ದಾಟಿ
ಶಕ್ತಿ ಎನಗೆ ಇತ್ತು ಸಲಹೊ ನಮಗೆ ಕರ್ತು ಅ.ಪ.

ನಿನ್ನ ಮತ ಪೊಂದಿಸು ನಿನ್ನ ಚಿಹ್ನೆಯ ಧರಿಸು
ನಿನ್ನ ಶಾಸ್ತ್ರದೊಳೆನ್ನ ಮುಳುಗಾಡಿಸು
ನಿನ್ನವರೊಳಗಿಡಿಸು ನಿನ್ನ ಮೂರ್ತಿಯ ತೋರಿಸು
ನಿನ್ನ ವ್ಯಾಪ್ತತ್ವ ಚೆನ್ನಾಗಿ ತಿಳಿಸು
ಇನ್ನು ದಿನದಿನದಿ ಎನ್ನಿಂದ ಮಾಡಿದ ಕರ್ಮ
ನಿನ್ನ ಅಂತರ್ಯಾಮಿಗೊಪ್ಪಿಸೊ
ಬಿನ್ನಪವ ಲಾಲಿಸು ಘನ್ನ ದಯಾಳುವೆ
ನಿನ್ನ ಹೊರತು ಎನಗೆ ಅನ್ಯಗತಿಯಿಲ್ಲ ೧

ನೀನು ಪಿಡಿಯಲು ಹರಿಯು ತಾನು ಪಿಡಿವನು
ನೀನು ಮುನಿದರೆ ಹರಿಯು ತಾನು ಮುನಿವ
ನೀನು ಮಾಡಿದ ಕರ್ಮ ನಮ್ಮ ನಿನ್ನ ಒಡೆಯಗೆ ಧರ್ಮ
ನೀನು ಇದ್ದರೆ ಹರಿಯು ತಾನು ಇರುವ

ನೀನು ಬಿಟ್ಟರೆ ಹರಿಯು ತಾನು ಇರುವ
ನೀನು ಬಿಟ್ಟರೆ ಹರಿಯು ತಾನು ಬಿಟ್ಟೋಡುವ
ನೀನಿತ್ತುದದು ಏನಾದದ್ದೆಲ್ಲ
ಜ್ಞಾನಸುಖದಾಯಕ ನಿಧಾನ ಮುಕ್ತಿಪ್ರದಾಯಕ
ದೀನರಕ್ಷಕಗುರುವೆ ದಾನಿ ಕಲ್ಪತರುವೆ ೨

ನವವಿಧ ನೀನು ಮುಖ್ಯಾಭಿಮಾನಿ
ಕವಿಗಳಿಗೆ ನೀನು ಕರುಣಿಸಿದರುಂಟು
ಭವರೋಗದ ಧಾತು ನೋಡಿ ನಡೆಸುವ ಮಂತ್ರಿ
ಭವರೋಗದಿ ಕಡೆಹಾಯ್ವುಪಾಯವ ತೋರಿಸೊ
ಭಗವದನುಗ್ರಹ ಎನ್ನಮೇಲೆ ಪರಿಪೂರ್ತಿಸಿ
ಭವನ ಬಿಡಿಸದೆ ಭಕುತಿಯೆನಗೆ ಇತ್ತು
ಭವಹಾರಿ ಚೆಲ್ವ ಗೋಪಾಲವಿಠಲನ ಅನು-
ಭವಕೆ ತಂದಿತ್ತೆನಗೆ ಬಹುಪಂಥದಲ್ಲಿರಿಸೊ ೩

೬೬

ರಾಮದೂತನ ಪಾದತಾಮರಸವ ಕಂಡ
ಆ ಮನುಜನೆ ಧನ್ಯನು ಪ.

ಶ್ರೀಮನೋಹರನಂಘ್ರಿ ಭಜಕ-
ಸ್ತೋಮಕುಮುದಕೆ ಸೋಮನೆನಿಸುವ
ಭೂಮಿಯೊಳೆದುಗಿರಿಯ ಸೀಮೆಯ
ಕಾಮವರದೊಳು ಪ್ರೇಮದಿಂದಿಹ ಅ.ಪ.

ಕೋತಿರೂಪದಿ ರಘುನಾಥನಾಜ್ಞೆಯನಾಂತು
ಪಾಥೋದಧಿಯ ಲಂಘಿಸಿ
ಖ್ಯಾತ ಲಂಕೆಯ ಪೊಕ್ಕು ಶೋಧಿಸಿ
ಮಾತೆಯನು ಕಂಡೆರಗಿ ದಶಮುಖ-

ಪೋತ ಖಳಕುಲವ್ರಾತ ಘಾತಿಸಿ
ಸೀತೆವಾರ್ತೆಯ ನಾಥಗರುಹಿದ ೧

ಪಾಂಡುಸುತನೆ ಪ್ರಚಂಡಗದೆಯನು ದೋ-
ರ್ದಂಡದೊಳು ಧರಿಸುತಲಿ
ಮಂಡಲದೊಳು ಭಂಡಕೌರವ
ಚಂಡರಿಪುಗಳ ಖಂಡ್ರಿಸಿ ಶಿರ
ಚೆಂಡಾಡಿ ಸತಿಗೆ ಕರುಳಿನ
ದಂಡೆ ಮುಡಿಸಿದುದ್ದಂಡವಿಕ್ರಮ ೨

ಧಾರುಣಿಯಲಿ ದ್ವಿಜನಾರಿಗರ್ಭದಿ ಬಂದು
ಮೂರೊಂದಾಶ್ರಮ ವಹಿಸಿ
ಧೀರ ನೀ ಏಳಧಿಕ ತ್ರಿದಶ
ಸಾರ ಗ್ರಂಥಗಳ್ವಿರಚಿಸುತ ಮಹ-
ಶೂರ ಶ್ರೀ ಗೋಪಾಲವಿಠಲನ
ಚಾರು ಚರಣಕೆ ಅರ್ಪಿಸಿದ ಗುರು ೩

೬೭

ಶರಣು ಹರಿಯಶರಣಗ್ರೇಸರನೆ ಹನುಮ ಭೀಮ ಮಧ್ವ
ಗುರುವೆ ನಿಮ್ಮ ಚರಣಕಮಲಕ್ಕೆರಗಿ ನಮಿಸುವೆ ಪ.

ಚಿನ್ನ ತಪುತಕಾಯ ನೊಸಲಲಿನ್ನು ಊರ್ಧ್ವಪುಂಡ್ರ ತುಲಸಿ
ಘನ್ನ ವೈಷ್ಣವನೆ ಮುದ್ದು ಸನ್ಯಾಸಿಯೆ ಅ.ಪ.

ಚಿನ್ನದೊಂಟಿ ಚೌಕಳಿ ಮೋಹನ್ನಸರ ಕಿರೀಟಧಾರಿ
ಮನುಜರ ರೂಪತಾಳ್ದ ಭೀಮಸೇನನೆ
ಕರ್ಣಕುಂಡಲವು ಕಚ್ಚುಟವು ಮೌಂಜಿ ಧರಿಸಿ ಕಪಿ
ವರ್ಣ ರೂಪನಾದ ಹರಿಯಭಜಕ ಹನುಮನೆ

ನಿನ್ನ ದರುಶನವು ಎನಗೆ ಇನ್ನು ಆದುದಕೆ ಫಲವು
ಅನ್ಯವಿಷಯ ಬಿಡಿಸಿ ಬೇಗ ಹರಿಯ ತೋರಿಸೊ ೧

ಮಧ್ಯಗೇಹ್ಯ ನೋಂಪಿ ಅಭಿವೃದ್ಧಿ ಆದದ್ದು ಕಂಡು
ಉದ್ಭವಿಸಿದಾನಂದತೀರಥಮುನಿ
ಶುದ್ಧ ಮೂಲ ಕಲಿಯ ಅಂಶ ಬದ್ಧದ್ವೇಷಿ ದು-
ರ್ಯೋಧನನ ಒದ್ದು ಕಾಯ ಹದ್ದಿನಿಂದ ಮುದ್ದಾಡಿಸಿದನೆ
ಸುದ್ದಿ ಕೊಂಡುಪೋಗಿ ಸೀತೆಯಿದ್ದ ಸ್ಥಳವ ನೋಡಿ ಅಸುರ-
ರೊದ್ದು ರಾಮರಿದ್ದೆಡೆಗೆ ಬಂದು ನಿಂತನೆ
ಬಿದ್ದೆ ನಿಮ್ಮ ಪಾದಗಳಿಗೆ ತಿದ್ದಿ ಎನ್ನ ಮತಿಯನಾದ್ಯ-
ವಿದ್ಯ ಗಂಟು ಬಿಡಿಸಿ ಉದ್ಧರಿಸುವುದು ೨

ಮೂರು ಅವತಾರದಲಿ ಮೂರು ಮೂರು ಭಕುತಿಯಿಂದ
ಮೂರುಮೂರ್ತಿಗಳ ಭಜಿಪ ಮೂಲಗುರುವೆ
ಸಾರುತಿಹವು ಶ್ರುತಿಯು ನಿಮ್ಮುದಾರ ಗುಣಗಳನು ಬಿಡದೆ
ಆರತರನು ಪೊರೆವ ಸಮೀರ ಸದ್ಗುಣ
ಭಾರತೀಶ ಭಯವಿನಾಶ ಸಾರ ಹೃದಯ ಸಾಧು ಸಾಧು
ಭಾರ ನಿನ್ನದಯ್ಯ ಎನ್ನುದ್ಧಾರ ಪ್ರಾಣನೆ
ತೋರುವುದು ನಿಮ್ಮ ಹೃದಯದ್ವಾರ ಗೋಪಾಲವಿಠಲ
ಮೂರುತಿಯ ಬಿಡದೆ ಎನ್ನ ಮನಕೆ ಒದಗಿಸೊ ೩

೭೮

ಹರಿಯೇ ನಮ್ಮಿರಿಯರು ಮಾಡಿದುಪಕಾರ
ಮರೆಯದೆ ಸಲಹೊ ಎನ್ನ ಪ.

ಜನಕನಾಜ್ಞೆಯ ತಾಳಿ ನೀನು
ವನವನವ ಸಂಚರಿಪ ಕಾಲದಿ
ಹನುಮಂತನಾಗಿ ಶರಧಿಲಂಘಿಸಿ
ವನಿತೆ ಕುಶಲವ ತಿಳುಹಿಸಿ

ಅನುಜ ಮೂರ್ಛಿತನಾಗೆ ಅಸುವಿತ್ತು
ದನುಜ ರಥವೇರಿ ರಣಕೆ ಬರಲಾ
ಕ್ಷಣ ವಾಹನನಾಗಿ ಜಯಪಡೆದು ನಿನ್ನ
ಘನತೆನುಳುಹಿದ ಕಾರಣ ೧

ಸುರದನುಜರಿಗಜೇಯ ಶೈವನು
ವರಬಲದಿ ಪಾಷಂಡ ದುರ್ಮತಿ
ಜರೆಯ ತನುಜನು ನಿನ್ನಕೂಡೆ ಸಂ
ಗರಕೆ ಬರಲು ನೀ ನಿಲ್ಲದೆ
ಶರಧಿಯೊಳು ಪುರರಚಿಸಿ ಇರುತಿರೆ
ವರವೃಕೋದರನಾಗಿ ದುಷ್ಟನ
ಸರಕುಮಾಡದೆ ಸೀಳಿ ನಿನ್ನ ಭಯ
ಪರಿಹರಿಸಿದ ಕಾರಣ ೨

ಹಿಂದಿನ ವೈರದಲಿ ಖಳಕು-
ಲೇಂದ್ರ ಮಣಿಮಂತನೆಂಬ ದೈತ್ಯನು
ಬಂದು ಅವನಿಯೊಳು ಪುಟ್ಟಿ ನೀನೆ ತಾ-
ನೆಂದು ದುರ್ಮತ ಪ್ರಬಲಿಸಿ
ಕಂದುಗೊರಳನೆ ಜಗಕೆ ಕಾರಣ-
ನೆಂದು ನಿನ್ನಾಚ್ಛಾದಿಸಿರಲಾ
ನಂದತೀರಥರಾಗಿ ನಿನ್ನನು
ಮುಂದಕೆ ತಂದ ಕಾರಣ ೩

ನಿನ್ನನೆ ಗುರುದೈವವೆಂಬರು
ನಿನ್ನ ಪ್ರೀತಿಯ ಸತತ ಪಡೆವರು
ನಿನ್ನವಜ್ಞತೆ ಲೇಶ ತಾಳರು
ನಿನ್ನ ಸೇವಿಸುವರು
ನಿನ್ನ ಅನುಗ್ರಹದಿ ಜಗವ ಪೊರೆವರು
ನಿನ್ನಲೆ ಪರಮಾದರವರಿಗೆ

ನಿನ್ನ ಕರುಣವರಲ್ಲಿ ಪೂರ್ಣಪ್ರ-
ಸನ್ನವಾಗಿದ್ದ ಕಾರಣ ೪

ಹರಿಯೆ ನಾ ನಿನ್ನವರವನು ನಿನ್ನ
ಶರಣು ಪೊಕ್ಕೆನು ಕರವ ಪಿಡಿದು ದು-
ಸ್ತರ ಭವಾಂಬುಧಿ ವೇಗದಾಟಿಸಿ
ನಿರುಪದ್ರವ ಸ್ಥಾನ ಪೊಂದಿಸಿ
ನಿರುತ ನಿನ್ನಾರಾಧನೆಯನಿತ್ತು
ಕರಣಗಳಿಗೆ ಪ್ರತ್ಯಕ್ಷನಾಗಿ
ಪರಮ ಭಕುತರ ಸಂಗಕೊಡು ಜಗ
ದ್ಗುರುವೆ ಗೋಪಾಲವಿಠಲ ೫

ಭಾರತಿ

೬೯

ಭಾರತಿ ಜನನಿ ಪಾಲಿಸೆ ನಿತ್ಯ ಮಾರುತನ ರಾಣಿ ಪ.

ಭಾರತಿ ಭಕುತಿಗೆ ಸಾರಥಿಯಾಗಿ ನೀ
ಪೂರತಿ ಕರಪಿಡಿ ಮಾರುತನ ರಾಣಿ ಅ.ಪ.

ಸುರರ ಸತಿಯರಿಗೆ ಧರೆಯೊಳವ-
ತರಿಸಿ ಶಾಪ ಪರಿದೆ
ದರುಶನ ಮಾತ್ರದಿ ವರವಿತ್ತು ಅವರಿಗೆ
ಪರಿಹರಿಸಿದೆ ಬಂದದುರಿತಗಳನು ತಾಯೆ ೧

ಜ್ಞಾನಶುಭಕಾಯಳೆ ಸಜ್ಜನರಿಗೆ
ಜ್ಞಾನಪ್ರದಾಯಕಳೆ
ಮಾನವ ಜನುಮದಿಂದೇನು ಸಾಧನ ಉಂಟು
ನ್ಯೂನ ಮಾಡಿಸದೆ ನಿಧಾನದಿ ಪಾಲಿಸೆ ೨

ನಂಬಿದೆ ನಿನ್ನ ಪಾದಯುಗಾಂಬುಜ-
ದಿಂಬು ತೋರೆನಗೆ ನಿಜ
ಕಂಬು ಚಕ್ರಾಂಕಿತ ಗೋಪಾಲವಿಠಲನ
ಅಂಬಕದಲಿ ನೋಳ್ಪ ಸಂಭ್ರಮ ಪಾಲಿಸೆ ೩

೭೦

ಭಾರತಿ ನೀ ಪರಿಪಾಲಿಸೆ ವಾರಿಜಾಂಬಕಿ ಮಾತ ಲಾಲಿಸೆ ಪ.

ಆರಾದ ಭವವೆಂಬ ಮಾರಿಯ ಹೊಯ್ಲಿಗೆ
ಶ್ರೀ ರಾಮನಪಾದದಿಚ್ಛೈಸಿ ವಿಘ್ನಹರಿಸಿ ಯತ್ನ ಪೂರೈಸಿ ೧

ಭಕ್ತಾಭಿಮಾನಿ ಸದ್ಯುಕ್ತಿಯುತ ಹರಿ
ಭಕ್ತನೆಂದೆನಿಸೆನ್ನ ವಾಗ್ವಾಣಿ ಪಲ್ಲವಪಾಣಿ ಪನ್ನಗವೇಣಿ ೨

ವೇದಾಂತವೇದ್ಯ ಗೋಪಾಲವಿಠಲನ
ಪಾದದೊಳಿರಿಸೆನ್ನ ಸತ್ಖ್ಯಾತೆ ಆಶ್ರಿತಪೋತೆ ಶ್ರೀಜಗನ್ಮಾತೆ ೩

೭೧

ಭಾರತಿ ಭಕುತಿಯನು ಕೊಡೆನಗೆ
ಮಾರುತಿ ಸತಿ ನೀನು ಪ.

ಮೂರು ಲೋಕದೊಳು ಯಾರು ನಿನಗೆ
ಸರಿ ಮಾರಾರಿಗಳಿಂದಾರಾಧಿತಳೆ ಅ.ಪ.

ಸುಂದರಿ ಶುಭಕಾರಿ ಸುಮನಸ-
ವೃಂದಶೋಭಿತಕಬರಿ
ಮಂದಹಾಸ ಮುಖದಿಂದಲಿ ನೋಡಿ ನಿನ್ನ
ಕಂದನೆಂದು ಎನ್ನ ಮುಂದಕೆ ಕರೆಯೆ ೧

ವಾಣಿ ಎನ್ನ ವದನದಲ್ಲಿಡು
ಮಾಣದೆ ಹರಿಸ್ತವನ
ವೀಣಾಧೃತ ಸುಜ್ಞಾನಿಯೆ ಪಂಕಜ-
ಪಾಣಿಯೆ ಕೋಕಿಲವಾಣಿಯೆ ಎನ್ನಯ ೨

ಮಂಗಳಾಂಗಿಯೆ ಎನ್ನ
ಅಂತರಂಗದಲ್ಲಿ ಮುನ್ನ
ತುಂಗವಿಕ್ರಮ ಗೋಪಾಲವಿಠಲನ್ನ
ಹಿಂಗದೆ ನೆನೆವ ಸುಖಂಗಳನು ಕೊಡೆ ೩

ಯತಿಗಳು-ದಾಸರು

೭೨

ವ್ಯಾಸರಾಯರ ದಿವ್ಯ ಪಾದಕಮಲವನು ಸೇವಿಸುವ ಭಕುತರಿಗೆ
ಏಸುಜನ್ಮದ ಸುಕೃತ ಒದಗಿ ಬಂದಿದ್ದವಗೆ
ಈ ಸೇವೆ ದೊರಕುವುದು ಸಾಸಿವೆನಿತಾದರು ಪ.

ಪನ್ನಗಶಯನನ ಪರಮ ಆಜ್ಞದಿ ತಾನು
ಇನ್ನು ಅವತರಿಸಿ ಇತ್ತ
ಬನ್ನೂರು ಗ್ರಾಮದಲಿ ನೆಲೆಸಿ ಬೆಳೆದು ಮತ್ತೆ
ಸ್ತನ್ಯಪಾನಗಳಿಲ್ಲದೆ
ಚೆನ್ನಾಗಿ ಬ್ರಹ್ಮಣ್ಯತೀರ್ಥರ ಸುತರೆನಿಸಿ
ಸನ್ಯಾಸಾಶ್ರಮ ಕೊಂಡು
ಚಿನ್ಮಯ ಹರಿಯನ್ನು ತನ್ನ ಮನದಲಿ ನೆನೆದು
ಅನ್ಯ ಗಣನಿಲ್ಲದೆ ಇನ್ನು ಸಂಚರಿಸಿದ ೧

ಶಾಪಾನುಗ್ರಹ ಸಮರ್ಥಿಕೆಯುಳ್ಳ ಚೆಲುವ ನಿಜ
ಶ್ರೀಪಾದರಾಯರಲಿ

ತಾ ಪ್ರೇಮದಿಂದ ವರವಿದ್ಯವನು ಓದಿ ಎಲ್ಲ
ಶ್ರೀಪತಿಗೆ ಅರ್ಪಿಸಿನ್ನು
ಅಪಾರ ಮಹಿಮನು ಸರ್ವೋತ್ತಮ ಹರಿಯೆಂದು
ಸ್ಥಾಪಿಸುತ್ತ ಸರ್ವಪರಿಲಿ
ಈ ಪೃಥ್ವಿಯೊಳಗಿದ್ದ ಮಾಯಿಗಳರ್ಥವೆಲ್ಲವನು
ಭೂಪ ಸೋಲಿಸಿ ಬಹು ಪ್ರತಾಪದಿಂದಲಿ ಮೆರೆದ ೨

ಸ್ನಾನವನು ಮಾಡಿ ಅಸಂಪ್ರಜ್ಞಾತ ಸಮಾಧಿಯಲಿ
ಧ್ಯಾನಕ್ಕೆ ಕುಳಿತಿರಲು
ಶ್ರೀನಿವಾಸನ ಪ್ರೇರಣೆಂದ ಸರ್ಪವು ಬಂದು
ನಾನಾ ಅಂಗಕೆ ಸುತ್ತಲು
ಜ್ಞಾನನಿಧಿ ಶ್ರೀಪಾದರಾಯ ಇದನು ತಿಳಿದು
ತಾನು ಮತ್ತಲ್ಲಿ ಬಂದು
ಜ್ಞಾನಪೂರ್ವಕದಿ ಅಹಿಯೊಡನೆ ಮಾತಾಡಿ ದೂರ-
ವನು ಮಾಡಿ ನೋಡಿ ನೀನು ಮನುಜಲ್ಲೆಂದು ೩

ನಾನಾಪರಿ ಗ್ರಂಥ ನ್ಯಾಯಾಮೃತ ಚಂದ್ರಿಕೆ-
ಯನು ತಾಂಡವತರ್ಕವು
ತಾನು ರಚಿಸಿ ದಿವ್ಯ ಉಕ್ತಿಗಳಿಂ-
ದನ್ಯ ಭಾಷ್ಯಗಳ ಮುರಿದು
ಶೂನ್ಯವಾದಿಗಳನ್ನು ಬಾಯಿಮುಚ್ಚಿಸಿ ಅವರ
ಜ್ಞಾನ ವೆಗ್ಗಳಿಸಗೊಡದೆ
ಶ್ರೀನಿವಾಸನೆ ಸರ್ವೋತ್ತಮನು ಜಗಕೆಂದು
ತಾನು ತೋರಿಸಿ ಮಧ್ವಮುನಿಯ ಮತ ಬಲಿಸಿದ ೪

ಎರಡು ನಾಲ್ಕುಮಂದಿ ಪರಮಶಿಷ್ಯರು ಆದ
ವರ ದಿಗ್ಗಜಗಳ ಪಡೆದು
ಸಿರಿ ವಾದಿರಾಜ ವಿಜಯೀಂದ್ರ ಗೋವಿಂದ ಒಡೆ-
ಯರು ಪುರಂದರದಾಸರು
ಗುರು ಪುರಂದರದಾಸರಿನ್ನು ಮುಂತಾದಂಥ

ಪರಿಪರಿಯ ಶಿಷ್ಯರುಗಳ
ಬೆರೆದು ಸಕಲಶಾಸ್ತ್ರ ಒರೆದು ಅವರುಗಳನ್ನು
ಪರಮಶುದ್ಧರ ಮಾಡಿ ಪರಲೋಕ ತೋರಿಸಿದ ೫

ದಾನ ಮಾನವು ವ್ಯಾಖ್ಯಾನ ಸುಳಾದಿಗಳ
ಗಾನ ಸಂಭ್ರಮದಿಂದಲಿ
ನಾನಾಪರಿಯಲಿ ಶ್ರೀ ಕೃಷ್ಣನ ಮೆಚ್ಚಿಸಿ ದುರಿತ-
ವನು ಕಾಲಲಿ ಒದೆವುತ
ತಾನು ನೋಡದೆ ಸಂಚಿತಾಗಾಮಿಗಳ ನೀ-
ಗಿನ್ನು ನೀ ಪ್ರಾರಬ್ಧ ಉಣುತ
ದೀನರನು ಪೊರೆದಾನಂದತೀರ್ಥರ ನಿಜ ಪಟ್ಟ-
ದಾನೆ ಎನಿಸಿ ಮೆರೆದು ಕ್ಷೋಣಿ ಉದ್ಧರಿಸಿದ ೬

ಮಧ್ವಮತವೆಂತೆಂಬೊ ಅಬ್ಧಿಯಲಿ ಚಂದ್ರನಂ-
ತುದ್ಭವಿಸಿ ಶರಣಾರಿಷ್ಟ
ಅದ್ವೈತ ಮತ ಕಾಲಲೊದ್ದು ಸದ್ಭಕ್ತರಿಗೆ
ತಿದ್ದಿ ಅಮೃತವುಣಿಸಿದ
ಗದ್ದುಗೆಯನೇರಿ ಮುನಿರಾಯ ತಾ ಕುಳಿತಿನ್ನು
ಪದ್ಧತಿಲಿ ಜಗವ ಪೊರೆದ
ಪ್ರದ್ಯುಮ್ನನಾಮ ಸಿರಿ ಗೋಪಾಲವಿಠಲನ
ಹೃದ್ವನಜದೊಳು ತೋರಿ ಹಿತದಿಂದ ಪಾಲಿಸುವ ೭

೭೩

ವಾದಿರಾಜ ಮುನಿಪ ಹಯಮುಖ
ಪಾದ ಕಮಲ ಮಧುಪ ಪ.

ನೀ ದಯದಲಿ ತವ ಪಾದಧ್ಯಾನವನು
ಆದರದಲಿ ಕೊಟ್ಟಾದರಿಸೆನ್ನನು ಅ.ಪ.

ಮೂಷಕ ಬಿಲದಿಂದ ಉದರ ಪೋಷಕ ಬರಲಂದು
ವಾಸುಕಿ ಭಯದಿ ನಿಮ್ಮಾಸನದೆಡೆ ಬರೆ
ಕ್ಲೇಶ ಕಳೆದು ಸಂತೋಷಗೈಸಿದೆ ೧

ಮುಂದೆ ಭೂತನರನ ಪ್ರೇರಿಸಿ ಹಿಂದೆ ಒಬ್ಬ ನರನ
ನಿಂದರಿಸತಿ ಆನಂದದಿಂದ ಜನ–
ವೃಂದ ನೋಡುತ್ತಿರೆ ಅಂದಣ ನಡೆಸಿದ್ಯೊ ೨

ಶಾಸ್ತ್ರ ಪ್ರಸಂಗದಲಿ ನಾರಾಯಣಭೂತರ ಗೆಲಿದಲ್ಲೆ
ಖ್ಯಾತಿಯಿಂದ ಬಹು ಮಾತನಾಡಿ ಶ್ರೀ–
ನಾಥನ ಮಂದಿರ ಪ್ರೀತಿಲಿ ತರಿಸಿದ್ಯೊ ೩

ತುರಗವದನ ಪಾದ ಭುಜ(ದಲಿ)ಗಳಲಿ
ಧರಿಸಿಕೊಂಡ ಮೋದ ಕಡಲೆಮಡ್ಡಿಯನು
ಕರದಿಂದುಣಿಸಿದ ಗುರುವರಶೇಖರ ೪

ಆ ಮಹಾ ಗೋಪಾಲವಿಠಲ ತಾಮರಸದಳಗಳ
ಧೀಮಂತರಿಗೆ ಸುಕಾಮಿತವನು ಕೊಡುವ
ಆ ಮಹಾಮಹಿಮ ೫

೭೪

ಗುರು ರಾಘವೇಂದ್ರರ ಚರಣ ಕಮಲವನ್ನು
ಸ್ಮರಿಸುವ ಮನುಜರಿಗೆ ಪ.

ಕರೆಕರೆಗೊಳಿಸುವ ದುರಿತ ದುಷ್ಕೃತವೆಲ್ಲ
ಕರಿಯು ಸಿಂಹನ ಕಂಡ ತೆರನಾಗುವುದಯ್ಯ ಅ.ಪ.

ಗುರುಮಧ್ವಮತವೆಂಬ ವರ ಕ್ಷೀರಾಂಬುಧಿಯಲ್ಲಿ
ಹರ ಧರಿಸಿದ ಶಶಿಯಂತುದಿಸಿ ಪರಮತ ತಿ–

ಮಿರಕ್ಕೆ ತರಣಿಕಿರಣನೆನಿಸಿ ಪಿರಿದು
ಮೆರೆವ ಸಿರಿ ರಾಮನರ್ಚಕರಾದ ೧

ಹರಿಯೆ ಸರ್ವೋತ್ತಮ ಸಿರಿಯು ಆತನ ರಾಣಿ
ಪರಮೇಷ್ಟಿ ಮರುತರೆ ಗುರುಗಳೆಂದು
ಗರುಡಶೇಷರುದ್ರ ಸಮರೆಂದು ಸ್ಥಾಪಿಸಿ
ಸ್ಥಿರ ತಾರತಮ್ಯ ಪಂಚಭೇದ ಸತ್ಯವೆಂಬ ೨

ಅಂಧಕರಿಗೆ ಚಕ್ಷು ವಂಧ್ಯರಿಗೆ ಸುರತರು
ಬಂದಬಂದವರಭೀಷ್ಟಗಳನಿತ್ತು
ಒಂದಾರುನೂರು ವತ್ಸರ ವೃಂದಾವನದಲ್ಲಿ
ಚೆಂದಾಗಿ ನಿಂದು ಮೆರೆವ ಕೃಪಾಸಿಂಧು ದೇವಾಂಶರ ೩

ರಾ ಎನ್ನೆ ದುರಿತರಾಶಿಗಳ ದಹಿಸುವ
ಘ ಎನ್ನೆ ಘನ ಜ್ಞಾನ ಭಕುತಿ ಈವ
ವೇಂ ಎನ್ನೆ ವೇಗದಿ ಜನನಮರಣ ದೂರ
ದ ಎನ್ನೆ ದ್ರವಿಣಾರ್ಥ ಶ್ರುತಿ ಪ್ರತಿಪಾದ್ಯನ ಕಾಂಬ ೪

ವರ ತುಂಗಾತೀರ ಮಂತ್ರಾಲಯ ಪುರದಲ್ಲಿ
ಪರಿಪರಿ ಸೇವೆ ಭೂಸುರರಿಂದ ಕೊಳುತ
ಸಿರಿಯರಮಣ ನಮ್ಮ ಗೋಪಾಲವಿಠಲನ
ಚರಣ ಸೇವಿಸುತಿಪ್ಪ ಗುರು ಶಿಖಾಮಣಿಯಾದ ೫

೭೫

ಸುಳಾದಿ

ಧ್ರುವತಾಳ

ಧರೆಯೊಳಗೆ ನಮ್ಮ ಗುರು ರಾಘವೇಂದ್ರರಿನ್ನು
ಇರುತಿಪ್ಪ ವಿವರವ ಅರಿತಷ್ಟು ವರ್ಣಿಸುವೆ

ಸ್ಥಿರವಾಗಿ ಮಂತ್ರಾಲಯಪುರ ತುಂಗಾತೀರದಿ
ಹರಿಭಕ್ತಪ್ರಹ್ಲಾದ ವರಯಾಗ ಇಲ್ಲಿ ಮಾಡಿ
ಸುರರಿಗಮೃತ ಉಣಿಸಿ ಪರಿಪರಿಕ್ರಿಯಮಾಡಿ
ಪರಿಶುದ್ಧ ಆದನೆಂದು ಅರಿತು ಈ ಸ್ಥಳದಲ್ಲಿ
ಗುರು ರಾಘವೇಂದ್ರರಾಯ ಶರೀರ ಪೋಗಾಡಿಸಿಲ್ಲಿ
ಪರಲೋಕಸಾಧನ ಪರಿಪೂರ್ತಿ ಮಾಡಿಕೊಂಡು
ಸಿರಿಕೃಷ್ಣನ ಚರಣಕ್ಕೆರಗಿ ಸಂತೋಷದಲ್ಲಿ
ಧರೆಯ ಮೇಲಿದ್ದ ಜನರ ಪೊರೆಯಬೇಕೆಂದೆನಲು
ಹರಿ ನೋಡಿದನಿವರ ಪರಮದಯಾಳುತನವ
ಗುರುವಂತರ್ಯಾಮಿಯಾಗಿ ವರವ ನೀಡಲು ಜಗಕೆ
ನರಹರಿ ತಾನೆ ನಿಂದು ನಿರುತ ಪೂಜೆಯಗೊಂಡು
ಸಿರಿವುಳ್ಳ ಕೀರುತಿಯ ಸುರರ ಪಾಲಕ ಚಕ್ರ-
ಧರ ನಾರಾಯಣ ತಾನಿವರ ಸನ್ನಿಧಾನನಾಗಿ-
ವರಿಗೆ ಫಲ ತಂದೀವ ಇಹಪರದಲ್ಲಿ ಇನ್ನು
ಕರುಣಾಕರ ರಂಗ ಗೋಪಾಲವಿಠಲ ತನ್ನ
ಶರಣರ ಪೊರೆವಂಥ ಚರಿಯ ಪರಿಪರಿವುಂಟು ೧

ಮಠ್ಯತಾಳ

ನರಹರಿಕೃಷ್ಣರಾಮ ಸಿರಿ ವೇದವ್ಯಾಸ
ಎರಡೆರಡು ನಾಲ್ಕು ಹರಿಮೂರ್ತಿಗಳು
ಪರಿವಾರ ಸಹಿತಾಗಿ ಸಿರಿಸಹಿತ ನಿಂದು
ಸುರಗುರು ಮಧ್ವಾಚಾರ್ಯರೆ ಮೊದಲಾಗಿ
ತರುವಾಯದಲ್ಲಿನ್ನು ತಾರತಮ್ಯಾನುಸಾರ
ಪರಿಪರಿಯತಿಗಳು ಇರುತಿಪ್ಪರು ಇಲ್ಲಿ
ಹರುಷದಿಂದಲಿ ವೇದ ಬರೆದು ಶಾಸ್ತ್ರಗಳಿನ್ನು
ಪರಿಪರಿ ಪುರಾಣ ಭಾರತಾಗಮದಲ್ಲಿ
ಸರಿಸರಿ ಬಂದಂತೆ ಸರಿಗಮವೆನುತಲಿ
ಭರದಿಂದಲಿ ಕುಣಿದು ಭಕುತಿಯಿಂದಲಿ ಇನ್ನು
ಹರಿಯ ಪೂಜಿಸುತ ಇರುಳು ಹಗಲು ಬಿಡದೆ

ಪರಿಪರಿ ವಿವರವ ಪರಿಪರಿ ಕೇಳ್ವರು
ಗರುಡವಾಹನ ರಂಗ ಗೋಪಾಲವಿಠಲ ತನ್ನ
ಶರಣರ ಪಾಲಿಸುತಿರುತಿಪ್ಪನಿಲ್ಲಿ ೨

ತ್ರಿಪುಟತಾಳ

ನರಹರಿ ರೂಪನಾಗಿ ವಾಸವಾಗಿ ಇಲ್ಲಿ
ದುರಿತದುಷ್ಕೃತ ಬ್ರಹ್ಮಹತ್ಯಗಳ ದೂರೋಡಿಸುವ
ಸಿರಿರಾಮನಾಗಿ ವಾಸವಾಗಿ ಇಲ್ಲಿ
ಪರಿಪರಿಯಿಂದ ದೇಶಾಂತರ ಅನ್ನಕಳಕೊಂಡು
ನರರಿಲ್ಲಿ ಬಂದರೆ ಸ್ಥಿರಪಟ್ಟಗಟ್ಟುವ
ಸಿರಿಕೃಷ್ಣನಾಗಿ ವಾಸವಾಗಿ ಇಲ್ಲಿ
ಪರಿಪರಿಯಲ್ಲಿ ಬಂದ ಪರಮಾತುರರಿಗೆ
ವರವೀವ ಪುತ್ರೋತ್ಸವ ಮದುವೆ ಮುಂಜಿ
ಹರಕೆಗಳ ಕೈಗೊಂಡು ಹರುಷಬಡಿಸುವ
ವರ ವೇದವ್ಯಾಸನಾಗಿ ವಾಸವಾಗಿ ಇಲ್ಲಿ
ಭರದಿಂದಲಿ ಬಂದ ದುರ್ವಾದಿಗಳನ್ನೆಲ್ಲ
ದೂರ ಓಡಿಸಿ ಮುರಿದು ಅವರ ಕುಶಾಸ್ತ್ರವ
ಹರಿ ಸರ್ವೋತ್ತಮನೆಂದು ಇರುವನಿಲ್ಲಿ ತೋರಿ
ಶರಣ ಜನಕೆ ಇನ್ನು ವರಜ್ಞಾನಸುಧೆಯ
ಕರೆದು ಕೊಡುತ ಇರುತಿಪ್ಪುವನಿಲ್ಲಿ
ಸಿರಿವಂದಿತಪಾದ ಗೋಪಾಲವಿಠಲ
ಪರಿಪರಿಯಲಿ ಓಲಗ ಕೈಕೊಳುತಿಪ್ಪ ೩

ಅಟ್ಟತಾಳ

ರಾಘವೇಂದ್ರನೆಂಬ ರೂಪ ತಾನೆಯಾಗಿ
ರಾಘವೇಂದ್ರನೆಂಬ ನಾಮ ಇಡಿಸಿಕೊಂಡು
ರಾಘವೇಂದ್ರರಿನ್ನು ಮಾಡಿದಂಥ ಪುಣ್ಯ
ಭೋಗವರಿತು ತನ್ನ ಭಾಗವತರ ಕೀರ್ತಿ

ಸಾಧಿಸಿ ಸಲಹಲು ಜಗದೊಳಗೆಲ್ಲ
ಮೇಘ ಸೂರ್ಯನಂತೆ ಅಮೋಘಕೀರುತಿಯನ್ನು
ರಾಘವ ಇವರಿಗೆ ರಾಜ್ಯದಿ ತಂದಿತ್ತ
ರಾಘವೇಂದ್ರ ಮೂರುತಿ ಗೋಪಾಲವಿಠಲ
ಭಾಗವತರಲ್ಲಿ ಬಹುಪೂಜೆಯನುಗೊಂಬ ೪

ಆದಿತಾಳ

ದಿನದಿನಕಿಲ್ಲಿ ನೂತನ ಪೂಜೆಗಳಾಗುವುವು
ದಿನದಿನಕಿಲ್ಲಿ ನೂತನ ಉತ್ಸವಗಳಾಗುವುವು
ದಿನದಿನಕಿಲ್ಲಿ ನೂತನ ವಾರ್ತೆಗಳಾಗುವುವು
ಜನರ ಸಂದಣಿ ಪ್ರತಿದಿನ ವಿಪ್ರಭೋಜನ
ಜನರ ಕೈಯಿಂದ ಪ್ರತಿಜನರೀಪ್ಸಿತ ತುಂಬುವರು
ಜನುಮ ಸಫಲ ತಮ್ಮ ಜನನವ ನೀಗುವರು
ದಿನಸಪ್ತಶತವರುಷದಿನ ಪರಿಯಂತರ
ದಿನಕರಶತತೇಜ ಜಗನ್ನಾಥ ತಾನಿಲ್ಲಿ
ಅನುವಾಗಿ ತಾ ನಿಂದು ಜನರ ಪಾಲಿಪುದ-
ಕ್ಕನುಮಾನ ಸಲ್ಲದು ಗುಣಗಣ ಪರಿ-
ಪೂರ್ಣ ಗೋಪಾಲವಿಠಲ ಅಣೋ-
ರಣೀಯ ಎಂಬುವಗೆ ಎಣೆಯಾರೊ ಜಗದೊಳಗೆ ೫

ಜತೆ

ಮಂತ್ರಸಿದ್ಧಿಯ ಕ್ಷೇತ್ರ ಇದು ನೋಡಿ ಕೋವಿದರು
ಮಂತ್ರಪ್ರತಿಪಾದ್ಯ ಗೋಪಾಲವಿಠಲ ನಿಂದ

೭೬

ಮುನಿಯ ನೋಡಿರೊ ಮುಕುತಿಧನವ ಬೇಡಿರೊ ಪ.

ಜನುಮರಹಿತನಾಗಿ ನಿಂದು
ಘನವರವೀರ ರಾಘವೇಂದ್ರ ಅ.ಪ.

ಸಂತರಗೂಡಿ ಸಕಲ ಚಿಂತೆಯ ಬಿಡಿ
ಪಂಥವನಾಡಿ ನಾನೆಂತೆಂಬೋದು ಬಿಡಿ
ಅಂತರಂಗದಲ್ಲಿ ಹರಿಯ ಚಿಂತಿಸಿ ಚಿತ್ತದಲ್ಲಿ ೧

ಗೋಳಕತ್ರಯ ಇನ್ನು ಕೇಳು ನಿರ್ಣಯ
ಆಲೋಚನೆಯಲ್ಲಿ ಶೀಲಮೂರ್ತಿಯ
ಅಳನ ಸಹಿತ ಇಪ್ಪನಲ್ಲಿ ಬಹಳ ಫಲವನೀವುತಲಿ ೨

ಮಂದಜಗವನು ಪೊರೆಯೆ ಒಂದು ರೂಪದಿ
ಬಂದು ಹರಿಯು ತಾನಿಲ್ಲಿ ನಿಂದೀರೂಪದಿ
ಸುಂದರಾಂಗ ಗೋಪಾಲವಿಠಲ ತಂದು ಫಲವನೀವುತಿಪ್ಪ ೩

೭೭

ರಥವನೇರಿದ ರಾಘವೇಂದ್ರರಾಯ ಗುಣಸಾಂದ್ರ ಪ.

ಸತತ ಮಾರ್ಗದಿ ಸಂತರ ಸೇವಿಪರಿಗೆ
ಹಿತದಿಂದಲಿ ಮನೋರಥವ ಕೊಡುವೆನೆಂದು ಅ.ಪ.

ಚತುರದಿಕ್ಕುವಿದಿಕ್ಕುಗಳಲ್ಲಿ ಹರಿವೊ ಜನರಲ್ಲಿ
ಮಿತಿಯಿಲ್ಲದೆ ಬಂದು ಓಲೈಸುತಲಿ ವರವ ಬೇಡುತಲಿ
ನುತಿಸುತ ಪರಿಪರಿ ನತರಾಗಿ ಹರಿಗೆ
ಗತಿಪೇಳದೆ ಸರ್ವಥಾ ನಾ ಬಿಡೆನೆಂದು ೧

ಅತುಳಮಹಿಮನೆ ಆ ದಿನದಲ್ಲಿ ದಿತಿಜವಂಶದಲಿ
ಉತ್ಪತ್ತಿಯಾಗಿ ಉಚಿತದಲ್ಲಿ ಉತ್ತಮಮತಿಯಲ್ಲಿ
ಅತಿಶಯವಿರುತಿರೆ ಪಿತನ ಬಾಧೆಗೆ ಮನ್ಮಥ-
ಪಿತನೊಲಿಸಿದ ಜಿತ ಕರುಣದಲಿ ೨

ಪ್ರಥಮ ಪ್ರಹ್ಲಾದ ವ್ಯಾಸಮುನಿಯೆ ಯತಿ ರಾಘವೇಂದ್ರ
ಪತಿತರುದ್ಧರಿಪ ಪಾವನಕಾರಿಯೆ ಕೈಮುಗಿವೆನು ದೊರೆಯೆ

ಕ್ಷಿತಿಯೊಳು ಗೋಪಾಲವಿಠಲನ ನೆನೆಯುತ ವರ
ಮಂತ್ರಾಲಯದೊಳು ಶುಭವೀಯುತ ೩

೭೮

ವಂದಿಸಿ ನೋಡುವ ಬಾರೆ ಇಂದುಮುಖಿಯಳೆ ರಾಘ-
ವೇಂದ್ರರ ವೃಂದಾವನವನು ಹಿಂದೆ ಮಾಡಿದ ಸುಕೃತ-
ದಿಂದ ಹರಿ ಇವರಲ್ಲಿ ನಿಂದು ತಾ ಪೂಜೆಯಗೊಂಬುದ ಪ.

ಬಹುಜನುಮಗಳಲ್ಲಿ ಅಹಿಶಾಯಿ ಇವರಿಂದ
ರಹಸ್ಯ ಅರ್ಚನೆಯ ಕೊಂಡು ಇಹಲೋಕದಲ್ಲಿ ಇವರ
ಮಹಿಮೆ ವ್ಯಕುತಿ ಮಾಡ್ದ ಸ್ವಾಹಾಕಾರಿಗಳು ಸರ್ವರ
ಸಹಿತ ಒಂದಂಶದಿ ಶ್ರೀಹರಿ ತಾನಿಲ್ಲಿ ನಿಂದು
ಇಹಪರ ಫಲಂಗಳನು ಪಾಲಿಸಿ ನಮೋ ಎಂದು ಬಂದು
ದೇಹಿ ಎಂದವರಿಗಿನ್ನು ವಹಿಸಿ ವರಗಳ ನೀಡುವ ೧

ನರಹರಿರೂಪ ತಾನಾಗಿ ಪರಿಪರಿಯಲಿ ಬಂದಂಥ
ದುರಿತ ಬ್ರಹ್ಮೇತಿಗಳು ದುಷ್ಟ ಕರೆಕರೆ ರಾಕ್ಷಸ
ಜನ್ಮ ಪಡೆದು ದಣಿಪೊ ಅವನೆಲ್ಲ ದೂರದಿ ಓಡಿಸುವ ಬಿಡದೆ
ಸಿರಿರಾಮರೂಪಾಗಿ ಅನ್ನ ದೊರೆಯದೆ ಬಂದವರಿಗೆ
ಸ್ಥಿರವಾದ ಪಟ್ಟವಗಟ್ಟುವ ಹರಿಕೇಕಿಗಳು ? ಶುಭ ಉಚ್ಚ
ವರಸಂಧಾನ ವೈಭೋಗವು ಸಿರಿಕೃಷ್ಣನಾಗಿ ನಡೆವ ೨

ವ್ಯಾಸರೂಪನಾಗಿ ಇಲ್ಲಿ ವಾಸವಾಗಿ ಬಂದಬಂದ
ದಾಸಜನರ ಅಜ್ಞಾನವ ಲೇಶವಿಡದೆ ಪರಿಹರಿಸಿ
ದೋಷಗಳ ತರಿದು ಉಪದೇಶ ಮಾಡುವನು ಸುತತ್ವ
ಶೇಷವೇಷ ಪ್ರಹ್ಲಾದ ವ್ಯಾಸಮುನಿಯೆ ರಾಘವೇಂದ್ರ-
ಗೀಸು ಬಗೆ ಪುಣ್ಯ ಇವರಿಗೆ ಕೇಶವನೆ ತಾ ಮಾ-
ಡಿಸಿ ಈ ಸುಖ ಇಹಪರದಲ್ಲಿ ಶಾಶ್ವತವಾಗಿತ್ತು ಸಲಹುವ ೩

ಅನಿರುದ್ಧಾದಿ ನಾಲ್ಕು ಮೂರ್ತಿ ಘನವಾಗಿ ತಾವಿದ್ದು ಪ್ರತಿದಿನ
ದಿನಕತಿಶಯವಾಗಿ ದಿನಕರನಂತೆ ಸರ್ವತ್ರ
ಮನೆಮನೆಯಲ್ಲಿ ತಾವಿದ್ದು ಅನುವಾಗಿ ಪೂಜೆಯಗೊಂಬರಾರು
ಕನಸು ಜಾಗರದಿ ಬಂದು ಎಳ್ಳನಿತು ಪೂಜೆ ತಪ್ಪಿದರೆ
ದಣಿಸಿ ದಂಡಿಸಿ ಮಾಡಿಪ್ಪರು ಜನರು ಮಾಡಿದ ಸುಕೃತ
ಅನುಕೂಲವೇನು ಒದಗಿತು ಮನೆಯ ಪುಣ್ಯ ಏನು ಏನು ಎಂಬೆ ೪

ಆವ ತೀರ್ಥದಲ್ಲಿ ಪೋಗಿ ಸೇವಿಸಿ ಬಂದುದಕಿಂತ
ತಾವಧಿಕವಾಗಿ ಫಲವ ಈವನು ಶ್ರೀಹರಿ ಲಕುಮಿ-
ದೇವಿಸಹಿತವು ಇದ್ದು ಕೋವಿದಗಿನ್ನು ಬಿಡದೆ
ಪಾವನ ಮಂಗಳಕ್ಷೇತ್ರ ಆವಾವ ವರ್ಣಿಪನೊ ಇತ್ತ
ಭೂವಲಯದೊಳಗೆ ಮಹಿಮದೇವ-
ದೇವೇಶ ಕೃಷ್ಣ ಗೋಪಾಲವಿಠಲ ಆವಾಗ ಸೇವಿಸಿಕೊಳುತಿಪ್ಪ ೫

೭೯

ಮಾರಮದಘನ ಸಮೀರ ಮಧ್ವಮತೋ-
ದ್ಧಾರ ಶುಭಗುಣಸಾಗರ ಧೀರ
ಗುರು ಸತ್ಯಬೋಧಾರ್ಯ ಹರಿಕರುಣದಲಿ
ಪರವರ್ಗವ ಗೆಲಿದು ಧಾರುಣಿಯೊಳು ಮೆರೆದೆ ಪ.

ಮುನಿ ನಿಮ್ಮ ಮಹಿಮೆಯನು ತಿಳಿಯದಲೆ ದಂಡೆತ್ತಿ
ಮನಸಿಜನು ಬರಲು ಕೇಳಿ ತಾಳಿ
ಘನಮಹಿಮ ಸತ್ಯಪ್ರಿಯ ಗುರು ಕರುಣ ದೃಢಕವಚ-
ವನು ಧರಿಸಿ ಧೀರರಾಗಿ ಸಾಗಿ
ಮನೋಜಯ ಅಷ್ಟಾಂಗ ಯೋಗಸಾಧನ ಬಲದಿ
ಮಣಿಯದಲೆ ಮಾರ್ಮಲೆತು ಕಲೆತು
ಪ್ರಣವಾದಿ ಮಂತ್ರ ಪ್ರತಿಪಾದ್ಯ ಮೂರ್ತಿಗಳ ಚ-
ಮ್ಮೊನೆ ಮಾಡಿ ಅದಿರ್ಪುತವನ ಹಳಿದು ಓಡಿಸಿದ ಸಮೀರ ೧

ಕುಸುಮಾಸ್ತ್ರನಂಗನಾಗಲು ಉಡುಸಹಿತ (ಹಿಮಗು-
ವೆಸಗಿ) ನಭಕೇರಿ ನಿಂದ ಮಂದ
ಸೊಶನ ಮೆಲ್ಲನೆಜರಿದ ವನಕೆಪೋದ ವಸಂತ
ಝಷ ಮಕರ ಜಲದೊಳಡಗೆ ನಡುಗೆ
ಎಸೆವ ಶುಕಪಿಕಸಮೂಹಗಳು ಭಯಪಟ್ಟು ಬಲು
ದಶದಿಶೆಗೆ ಓಡಿಪೋಗೆ ಕೂಗೆ
ಹೊಸ ಮಲ್ಲಿಕಾದಿ ಕುಟ್ಮಲಗಳಂಜಿ ಬಾಯಿ ಬಿಡಲು
ಯಶೋನಿಧಿಯೆ ತವಕೀರ್ತಿ ಪಸರಿಸಿತು ಭುವನದಲಿ ೨

ಮಾರನಪಜಯಕಂಡು ಕ್ರೋಧಾದಿವರ್ಗಗಳು
ದೂರದಲಿ ನಿಂದು ನಮಿಸೆ ಗಮಿಸೆ
ಧೀರ ನಿಮ್ಮ ಪಾಂಡಿತ್ಯಕಂಡು ತಲೆಬಾಗಿ ಫಣಿ
ಧಾರುಣಿ ತಳಕೆ ನಡೆದ ವಿಬುಧ
ವೀರಕರ್ಣನು ನಿಮ್ಮ ಮೀರ್ದತ್ಯಾಗವ ನೋಡಿ
ಸೇರ್ದ ರವಿಮಂಡಲವನು ಅವನು
ಶ್ರೀ ರಾಮವ್ಯಾಸಗೋಪಾಲವಿಠಲನಂಘ್ರಿ
ಆರಾಧಕರೆ ತಮ್ಮ ಚಾರುಚರಣಕೆ ನಮಿಪೆ ೩

೮೦

ಪುರಂದರರಾಯರ ಪುಣ್ಯನಾಮಸ್ಮರಣೆ ಇನ್ನು ಜಪಿಸಿರೊ ಸುಜನರು
ಅನಂತಜನುಮದಘವನ್ನು ಕಳೆದಮ್ಯಾಲೆ ಪುನರಾವರ್ತಿ ಬಾರದ
ಲೋಕ ಪೊಂದಿಪುದು ಪ.

ಆಗಮಾರ್ಥಗಳು ಅನುವಾಗಿ ಸಾರವ ತೆಗೆದು ರಾಗ ಪದ ಕಾವ್ಯದಿಂದ
ಶ್ರೀಗುರುಮಧ್ವಮುನಿಮತವ ಪೊಂದಿ ಬಲು ಭಾಗವತ ಧರ್ಮವಹಿಸಿ
ನಾಗಶಯನನ ಗುಣವ ಕೊಂಡಾಡಿ ಜಗದೊಳಗೆ ಯೋಗ್ಯಪ್ರಹ್ವದಿಂದ ಮೆರೆದ
ಸಾಗರವು ದಕ್ಷಿಣೋತ್ತರ ಪೂರ್ವ ಪಶ್ಚಿಮ ಯೋಗದಲಿ
ಚರಿಸಿ ಒಳಗಾಗದೆ ಕಲಿಯಗೆದ್ದ ೧

ನೋಡಿದ ಮಾತ್ರಿವರ ನಯನಗಳ ದೋಷಗಳು ಓಡಿದವು ಲೇಶವಿರದೆ
ಆಡಿದ ಮಾತುರದಿ ಇವರ ವಾರ್ತೆಯು ವದನ ಬೇಡದಿನ್ನೊಂದು ವಿಷಯ
ಮಾಡಿದ ಮಾತ್ರಿವರ ಅರ್ಚನೆಯ ಕರಗಳು ಮಾಡುವವು ಅನ್ಯಕರ್ಮ
ಕೂಡಿ ಮನಬೆರೆದು ಜಪಿಸುತ ನಿತ್ಯ ಧ್ಯಾನವನು ಮಾಡಿದವನ
ಪುಣ್ಯಕೀಡು ನಾ ಕಾಣೆ ೨

ಪೂಯೆಂದು ಉಚ್ಚರಿಸೆ ಪುಣ್ಯ ಕರ್ಮಕೆ ಧರ್ಮ ಸಹಾಯವಾಗಿ ಒದಗುವುದು
ರಾಯೆನ್ನೆ ಜ್ಞಾನಾಖ್ಯವೆಂಬ ರತುನಾರ್ಥಗಳು ಆಯಾಸಿಲ್ಲದೆ ಬಪ್ಪುವು
ದಾಯೆಂದು ಉಚ್ಚರಿಸೆ ಸರ್ವಕಾಮಗಳು ದದಾತಿ ಎಂದಾಗುವುವು
ರಾಯೆನ್ನೆ ರಾಜಗೋಪಾಲವಿಠಲ ತನ್ನ ಸಾಯುಜ್ಯವನು ಇತ್ತು
ಸಲಹುವನು ಸರ್ವದಾ ೩

೮೧

ಗುರು ವಿಜಯವಿಠಲ ನಿನ್ನ ಚರಣಯುಗಳಿಗೆ
ಎರಗಿ ನಮೋ ನಮೋ ಎಂದೆನೊ ಹರುಷದಲಿ ನೀ ನಮ್ಮ
ಗುರು ವಿಜಯದಾಸರನ ಕರುಣಿಸಿ ತಂದು ತೋರು ಬಾರೊ ಪ.

ಹಿಂದೆ ನೀನಿವರ ಪುರಂದರದಾಸರ ಮಂದಿರದಲಿ ಸೃಜಿಸಿ
ಚೆಂದ ಚೆಂದದ ಪರತತ್ವ ಕವನಗಳನ್ನು
ಕುಂದುಯಿಲ್ಲದಲೆ ನುಡಿಸಿ ಸಂದರುಶನವಿತ್ತು ಸಲಹಿ ಆಗಾಮಿಯನು
ಮಂದಸಂಚಿತವನಳಿಸಿ ನಿಂದ ಪ್ರಾರಬ್ಧ ಉಣ
ತಂದಿಟ್ಟು ಈ ಧರೆಗೆ ಮಂದಜನರನ್ನ ಪೊರಿಯೊ ಪರಿಯ ೧

ಆರುಮೂರೆರಡೊಂದು ಜನರು ಇವರಿಂದ ಉ-
ದ್ಧಾರ ಗತಿಯನು ಚಿಂತಿಸಿ ಮೂರು ಜನ್ಮಗಳಲಿ
ಬಿಡದೆ ಮೂಲವ ಕೆಡದೆ ಸೇರಿ ಮತ್ತಿವರ ಬಳಿಯ
ಶ್ರೀರಮಣ ನಿನ್ನ ವಿಚಾರವನು ಮಾಡುತ

ಸಾರಿಸಾರಿ ವರವಪಿಡಿದು ಕಾರಣರು ನಮಗಿ
ವರು ಕರ್ಮಮೂಲವ ಕೆಡಿಸಿ ನಾರಾಯಣನೆ ನಿನ್ನ ಪರನೆಂದು ತೋರುವ ೨

ನೀನು ನಡೆಯಲು ನಡೆದು ನೀನು ನುಡಿಯಲು ನುಡಿದು
ನೀನು ಪಿಡಿಯಲು ಪಿಡಿದು ನೀನು ಮಾಡಿಸೆ ಮಾಡಿ
ನೀನು ನೋಡಿಸೆ ನೋಡಿ ನೀನು ಕೂಡಿಸಲು ಕೂಡಿಯೆ
ನೀನು ಪರಿಪರಿ ಏನು ಮಾಡಿದ ಕರ್ಮ ಶ್ರೀನಾಥ
ನಿನಗರ್ಪಿಸಿ ನಾನಾಪರಿಯಲಿ ನಮ್ಮನ್ನು ಕೂಡಿಕೊಂಡಿನ್ನು
ಜ್ಞಾನ ಬೋಧಿಸಿ ನಿನ್ನ ಧ್ಯಾನದೊಳಿಪ್ಪಂಥ ೩

ನಿನ್ನ ಸೃಷ್ಟಿಯಾದಿ ಅಷ್ಟಕರ್ತೃತ್ವಗಳು ಚೆನ್ನಾಗಿ
ಮನದಿ ತಿಳಿದು ನಿನ್ನ ವಾಪ್ತತ್ವವನು
ಇನ್ನು ಹುಡುಕುತ ತಮ್ಮ ಮನಬಂದಂತೆ ನಡೆದು
ಪುಣ್ಯ ಪಾಪಂಗಳಿಗೆ ಹಿಗ್ಗಿಕುಗ್ಗದೆ ನೋಡಿ
ನಿನ್ನ ಪ್ರೀತಿದೆಂದರಿದು ಸನ್ಮತಿಯಿಂದ ಸಕಲ ಸ-
ಜ್ಜನರ ಸಮ್ಮತಿ ನಿನ್ನ ತುತಿಸುತ ಮೆರೆವ ಘನ್ನ ದಯಾನಿಧಿಯ ೪

ಆವದಿನ ನೀನಿವರ ಸೇವೆ ದೊರಕಿಸಿ ಎನಗೆ ಸಾವಾಸದಲ್ಲಿ ಇತ್ತು
ಕಾವು ಘನವಾಗಿ ಪ್ರತಿಕ್ಷಣಕೆ ಸ್ಮರಣೆಗೆ ಅನು-
ಭವಕೆ ತಂದುಕೊಳುತ ಜೀವಿಸುತ ನಮ್ಮನ ಪೊರೆದು ರಕ್ಷಿಸಿ ಬಿಡದೆ
ಪಾವನದ ದಾರಿತೋರಿ ಈ ವಿಧದಲಿ ನಿನ್ನ ಇ-
ರವ ತೋರುತ ಜಗದಿ ಧೀರರನ ಮಾಡಿ ನೀ ಅಲ್ಲಿ ಪೂಜ್ಯನೆಂಬಾ ೫

ಎಂದಿನಂತಾಡಿ ನಿನ್ನ ಯೋಚಿಸುತ ಬಪ್ಪರೊಳು ಇಂದು ಎನ
ಗೊಂದು ಪರಿಯ ಸಂದೇಹವನು ತೋರಲಾಗಿ
ಮನದಲಿ ಎನಗೆ ನಿಂದಿರದು ಏಕಸ್ಥಳದಿ
ನೊಂದ ದಣಿವಿಕೆಯೇನೊ ನೀನು ಬಲ್ಲೆಯೊ ಮನಕೆ
ತಂದು ಅನುಭವಕೆ ತೋರಿ ಚೆಂದತೋರದು ಅವರ
ಬಿಡಿಸಿ ಎನ್ನಿಡುವುದು ನಂದನಂದನ್ನಕಂದ ಮುಕುಂದ ೬

ಎಲ್ಲಿ ನೀನುಂಟು ಮತ್ತಲ್ಲಿ ಆವರುಂಟೆಂಬುದೆಲ್ಲ
ಬಲ್ಲರು ಸರಿಯೆ ಅಲ್ಲಿದ್ದು ನೀನು ನಮಗಿನ್ನು
ತಿಳಿಸುವ ಕರ್ಮ ಇಲ್ಲಿ ಈಗಾಗರಿಯದು
ಎಲ್ಲಿ ಸಕಲವು ಕರ್ಮ ಅಲ್ಲೆ ಒಪ್ಪಿಸಿದ್ದೇವೆ
ಬಲ್ಲಿದ್ದು ಮಾಡೊ ದೊರೆಯೆ ಎಲ್ಲ ನಾಮಕನು ನೀನೆ ಗೋಪಾಲವಿಠಲ
ಅಲ್ಲಲ್ಲಿ ಏನಯ್ಯ ಎಲ್ಲ ಭಕುತರೊಡೆಯ ೭

೮೨

ಚರಣಕಮಲವನ್ನು ನೆನೆವೆ ನಾ
ಗುರು ಚರಣವನ್ನು ನೆನೆವೆ ನಾ
ಚರಣಕಮಲವನ್ನು ನೆನೆದು ನೆನೆದು
ಹರಿಚರಣಕಮಲ ಅರ್ಚಿಸುವೆ ನಾ ಪ.

ಸುರ ದ್ವಿಜ ವೇಷದಿಂದುದಿತನ್ನ ತ್ರಾಣಿ
ಸುರಗಂಗೆಯನ್ನು ಸೇವಿಸಿದನ್ನ
ಸುರಮುನಿಯಿಂದುಪದೇಶನ್ನ ಭೂ
ಸುರರ ಕರುಣ ಸಂಪಾದಿಸಿದಾತನ್ನ ೧

ಪರಮತಗಳನು ಖಂಡ್ರಿಸಿದನ್ನ ಸತ್ಯ
ಹರಿವರನೆಂದು ಸ್ಥಾಪಿಸಿದನ್ನ
ಪರತತ್ವ ಆರು ಪದಳ್ಮ ? ತನ್ನವರ
ಗುರುಮಧ್ವಮತ ಹೊಂದಿಸಿದಾತನ್ನ ೨

ಪರಿಪರಿ ವ್ರತಾಚರಿಸಿದನ್ನ ಮನೋ
ದುರ್ವ್ಯಸನವ ಪರಿಹರಿಸಿದನ್ನ
ಪರಿಪರಿಯಾತ್ರಾ ಚರಿಸಿದನ್ನ ನಮ್ಮ
ಗುರುವರ ಶಿರೋರತುನನ್ನ ೩

ಶುದ್ಧಾದ ಸಂಪ್ರದಾಯಕನನ್ನ ತತ್ವ
ತಿದ್ದಿ ಮುದ್ದೆಮಾಡಿದಾತನ್ನ
ಅದ್ವೈತಮತ ದೂಷಿತನ್ನ ಸಿರಿ
ಮಧ್ವಮತಕೆ ಭೂಷಿತನ್ನ ೪

ಪರಸತಿ ಪರಧನ ತೊರೆದನ್ನ ತನ್ನ
ಪರಿಚಾರಕರಿಗ್ಹಿತ ಒರೆದನ್ನ
ಹರಿನಾಮಾಮೃತವನ್ನು ಸುರಿದನ್ನ ತನ್ನ
ಸರಿಬಂದಶಿಷ್ಯರ ಪೊರೆದನ್ನ ೫

ದೂರದರ್ಶಿ ಸರ್ವಕಂಡನ್ನ ನಿಜ
ಪ್ರಾರಬ್ಧಭೋಗವ ಉಂಡನ್ನ ತನ್ನ
ಆರಾಧಿಪುವರಘ ಖಂಡನ್ನ ನಮ್ಮ
ನಾರಾಯಣನ ನಿಜತೊಂಡನ್ನ ೬

ವೈಷ್ಣವ ಸಿದ್ಧಾಂತ ಒರೆದನ್ನ ಆ
ವೈಷ್ಣವಾಚಾರವ ತೋರಿದನ್ನ ವೀರ
ವೈಷ್ಣವದಾಸವರ್ಯನ್ನ ೭

ತಪಸೆ ಸಂಗರವೆಂದರಿದನ್ನ ತನ್ನ
ಸ್ವಪನದಿ ಬಿರುದು ತೋರಿದನ್ನ
ಉಪದೇಶ ಬಲಮಾಡಿದನ್ನ ನಿಜ
ಉಪಾಸನ ಜಪಿಸಿ ಪೇಳಿದನ್ನ ೮

ವಿಜಯವಿಠಲದಾಸನ್ನ ತನ್ನ
ಭಜಿಸುವರಿಗೆ ವರದಾತನ್ನ ಸಿರಿ
ಗೋಪಾಲವಿಠಲನ ಮಾತನ್ನ ನಿತ್ಯ
ಭಜಿಸಿ ಬದುಕುವೆ ಪುಣ್ಯಾತ್ಮ ೯

೮೩

ದುರಿತ ವಾರಿವಾಹ ಜಂಝಾನಿಳ ಶರಣು
ಶರಣು ನಮ್ಮ ಗುರುವೆ ವಿಜಯರಾಯ ಪ.

ಆಗಾಮಿ ಸಂಚಿತ ಅಖಿಳಕರ್ಮದೂರ
ರಾಗದ್ವೇಷಾದಿ ದುರ್ಗುಣವರ್ಜಿತ
ಭೋಗಪ್ರಾರಬ್ಧ ಭುಂಜಿಸುವ ಭೂದೇವ
ಭಾಗವತರನ್ನ ಬಿಡದೆ ಭಜಿಸುವರ ೧

ಈಷಣತ್ರಯ ದೂರ ಇಳೆಯೊಳಗೆ ಪುಣ್ಯ
ದೇಶ ಸಂಚಾರ ಪಾವನ ಶರೀರ
ದಾಸರ ನಿಜಪ್ರಿಯ ದಮೆಶಮೆಯಾದಿ ಪಾವನ
ತೋಷಭರಿತ ನಿತ್ಯ ಕೊಂಡಾಡುವ ಜನರ ೨

ಅಧ್ಯಾತ್ಮ ಅಮಿತ ಗೋಪ್ಯತತ್ವವಿಚಾರ
ಸ್ವಾಧ್ಯಾಯ ನಿಪುಣ ಸಕಲ ಜನ್ಮದಿ
ಅದ್ವೈತಮತಕೋಲಾಹಲ ಅಮಲಶೀಲ
ಸಿದ್ಧಾಂತ ಜ್ಞಾನನಿಧಿಯೆ ನಿಜಾಶ್ರಿತರ ೩

ಕಾಮಾದಿ ಷಡುರಿಪುಗಳನ ಗೆಲಿದು ಹೃದಯ
ವ್ಯೋಮದೊಳಗೆ ನಿತ್ಯದಿ ಪೂಜಿಸುವ ಮಹಿಮ
ನೇಮದಿಂದಲಿ ನಿಮ್ಮ ಸ್ಮರಿಸುವ ಜನರ ೪

ಭುವನ ಮಂಡಲಾಧಿಪ ಕವಿಗಳ ಶಿರೋರತುನ
ಭವದೂರ ಭಾಗ್ಯನಿಧಿಯೆ ಭಕ್ತರ
ಪವನಾಂತರ್ಗತ ನಮ್ಮ ಗೋಪಾಲವಿಠಲನ್ನ
ಸುವನಜಚರಣ ಸೇವೆಯಲಿಟ್ಟ ಗುರುರನ್ನ ೫

೮೪

ಭಜಿಸಿ ಬದುಕು ನಿತ್ಯ ವಿಜಯದಾಸರ ಪಾದ
ರಜವ ಸೇವಿಸೋ ಭಾಗ್ಯ ನಿಜವೊ ನಿಜವೊ ಪ.

ಕಾಮಧೇನುವ ಕಂಡು ಕರೆದು ಕೊಂಡಂತೆನ್ನ
ಗ್ರಾಮಗೋವಿನಪಾಲು ಕರೆಕೊಂಬಿ ವಿಹಿಯನ
ತಾಮರಸಬಂಧು ಕಂಡು ತಮಸುಹರಿದಂತೆ
ಧೂಮ ಪೊರಡುವ ಉರಿಗೆ ತಮವು ಓಡುವುದೆ ೧

ಕಲ್ಪವೃಕ್ಷವಕಂಡು ಬೇಡಿದ್ದು ಕೊಡುವಂತೆ
ವಳ್ಪ ಮುಂತಾದ ಗಿಡ ಕೊಡಬಲ್ಲುವೆ
ಕಲ್ಪಾಯು ಕೊಡುವ ಚಿಂತಾಮಣಿಯು ಕೊಡುವಂತೆ
ಅಲ್ಪ ಚಿಂತ್ರಣಿಬೀಜ ಅದು ತಾ ಕೊಡುವುದೆ ೨

ಹಲವು ಸಾಧನಮಾಡಿ ಬಳಲಲಿನ್ಯಾಕೆ ನೀ
ನಿಲಿಸು ನಿಗಮಗಳ ಧ್ಯಾಸ ನಿಜಮನಕೆ
ತಿಳಕೊ ಇವರೆ ನಿನಗೆ ಗತಿಪೊಂದಿಪುದಕೆ
ಒಲಿವ ಗೋಪಾಲವಿಠಲ ಸಂಶಯವಿಲ್ಲಿದಕೆ ೩

೮೫

ವಿಜಯ ಆರಿಂದಲೆನಗೆ ಆಗುವುದೊ
ವಿಜಯದಾಸರ ಕರುಣದಿಂದ ಬರುವುದು ಪ.

ಪರತತ್ವ ವಿಚಾರ ಪರಮನಿಷ್ಠರಸಂಗ
ಪರಿಪರಿಯ ಸುಕರ್ಮ ಪರಿಣಾಮವು
ಪರವಾದಿಗಳ ತುಚ್ಛೀಕರಿಸಿ ಅವರುಕ್ತಿಗಳ
ಹರಿಯೆ ಸರ್ವೋತ್ತಮನೆಂದರಿದು ಬಾಳುವಂಥ ೧

ಭೂಸುರರಸೇವೆ ಯಾತ್ರೆ ದಾನ ಧರ್ಮ
ಗ್ರಾಸ ಉಣ ಉಡುವೋದು ಲೇಸು ಎಲ್ಲ
ವಾಸುದೇವನ ಗುಣಗಳಾಸೆಯು ಕೇಳುತ
ಕ್ಲೇಶ ತಟ್ಟದೆ ಹರಿವುಪಾಸನೆಯ ಮಾಳ್ಪಂಥ ೨

ಜ್ಞಾನಿಗಳಿಂ ಮಾನಕ್ಷೋಣಿಯೊಳಗೆ ಶಶ್ಯ ?
ಹೀನ ಜನರಿಗೆ ದೈನ್ಯವನು ಬಡದೆ
ನಾನಾ ಪರಿ ಕವನಗಳು ಜ್ಞಾನಿ ಸಮ್ಮತ ರಚಿಸಿ
ಶ್ರೀನಿವಾಸನ್ನ ದಾಸಾನುದಾಸೆಂಬಂಥ ೩

ಬಂಧು ಜನಸಂದಣಿ ಚೆಂದುಳ್ಳ ಆಭರಣಾ–
ನಂದದಿ ಉಡುಗೊರೆ ಉತ್ಸಾಹವು
ಇಂದಿರೇಶನ ಸ್ತೋತ್ರದಿಂದಲೆ ದಿನವನ್ನು
ಒಂದು ಗಳಿಗೆ ಮರೆಯದಂದದಿ ಇರುವಂಥ ೪

ಅಪಾರ ಜನುಮ ಇವರ ಪಾದ ಆಶ್ರೈಸಿ
ಶ್ರೀಪತಿಯಧ್ಯಾನ ಮಾಡಿದ ಕಾರಣ
ಗೋಪಾಲವಿಠಲನ್ನ ರೂಪಧ್ಯಾನದಿ ನಿಲಿಸಿ
ಈ ಪರಿಯಲಿ ಎನ್ನ ಕಾಪಾಡು ಎಂತೆಂಬ ೫

೮೬

ವಿಜಯರಾಯರ ನೆನೆದು ದಿಗ್ವಿಜಯ ಮಾಡಿರೊ
ರುಜುಮಾರ್ಗ ಪಿಡಿಸಿನ್ನು ನಿಜಪುರಕೆ ಸೇರಿಪರೊ ಪ.

ಶ್ರವಣ ಮನನವು ನಿಧಿಧ್ಯಾಸನವು ಮಾಡುವಾಗ
ಕವನಗಳ ರಚಿಸೆ ನಿತ್ಯ ಕುಳಿತಿರುವಾಗ
ಭುವನೇಶನ ತತ್ವ ವಿವರವನ್ನು ಮಾಡುವಾಗ
ಪವನಮತ ಓದಿ ಸದಾಚಾರ ಕರ್ಮವು ಮಾಡುತ ೧

ಹರಿದಿನದಲಿ ಉತ್ಸಾಹ ಜಾಗರ ಮಾಡುವಾಗ
ಹರಿಯಾತ್ರೆ ತೀರ್ಥಗಳ ಚರಿಸುವಾಗ
ಪರಿಪರಿವ್ರತ ಚಾಂದ್ರಾಯಣವಾಚರಿಸುವಾಗ ೨

ಅರಸುಗಳಿಂದ ಆದರಕೊಂಬುವಾಗ
ಕರೆಕರೆಯ ಸಂಸಾರದಿ ತೊಳಲುವಾಗ
ಕರವೆತ್ತಿ ದಾನವನು ಕೊಡುವಾಗ ಕೊಂಬುವಾಗ
ದುರಿತಭಯಗಳು ತಡಹಿ ಬಿಡುವುವಾಗ ೩

ದ್ವೈತ ಅದ್ವೈತ ಪ್ರಸಂಗಗಳ ಮಾಡುವಾಗ
ಶೈತ್ಯ ವಾತ ಪಿತ್ತ ತೊಡರಿದಾಗ
ನೀತವಾದ ಮಂತ್ರಜಪಕೆ ಕುಳ್ಳಿರುವಾಗ
ವಾತ ನಿರೋಧಿಸಿ ಪ್ರಾಣಾಯಾಮ ಮಾಡುವಾಗ ೪

ನರಗಳನು? ವರಗಳನು ಕೊಡುವಾಗ
ಶರಣಜನರಿಂದ ಸೇವೆ ಕೈಕೊಳುವಾಗ
ಮರೆಯದೆ ಹರಿಸ್ಮೃತಿ ಮನದೊಳಗೆ ಮಾಡುವಾಗ
ಪರಿಪರಿಯ ಸುಖರಸವು ಸವಿವುವಾಗ ೫

ವಿ ಎಂದು ಜಪಿಸಲು ವಿರಕುತಿ ದೊರಕುವುದು
ಜ ಎನ್ನೆ ಜನನ ಮರಣ ನಾಶವು
ಯ ಎನ್ನೆ ಎಲ್ಲದಕ್ಕಿಂತ ಭಕುತ್ಯಧಿಕಿತ್ತು
ರಾ ಎನ್ನೆ ರಾಯ ರಾಯರನ ತೋರುವುದು ೬

ಹರಿಯೆ ನಿರ್ದೋಷ ಜ್ಞಾನಾನಂದ ಪರಿಪೂರ್ಣ
ಹರಿಯೆ ಸರ್ವತಂತ್ರ ಸ್ವತಂತ್ರನು
ಸಿರಿ ಅಜ ಭವರೆಲ್ಲ ಪರಿವಾರ ಹರಿಗೆಂದು
ಗುರುಗತ ಗೋಪಾಲವಿಠಲನ್ನ ಸ್ಮರಿಸುತ ೭

೮೭

ಸ್ಮರಿಸುವೆ ನಾ ನಿಮ್ಮ ಚರಣಕಮಲ ಗುರು ವಿಜಯರಾಯ
ಶರಣಜನರಪ್ರಿಯ ಪರಮ ಕರುಣಾನಿಧಿ ವಿಜಯರಾಯ ಪ.

ಜನ್ಮಾರಭ್ಯವು ನಿಮ್ಮ ಗುಣಕರ್ಮಗಳೆಲ್ಲ ವಿಜಯರಾಯ
ಇನ್ನು ನಾ ವರ್ಣಿಸಲೆಷ್ಟರವನು ಗುರು ವಿಜಯರಾಯ ೧

ದಿವಿಜರ ವೇಷದಿಂದವನಿಯೊಳುದಿಸಿದ್ಯೊ ವಿಜಯರಾಯ
ದಿವಿಜರಿಂದಲಿ ಪ್ರತಿದಿವಸ ಬಿಡದಲಿದ್ಯೊ ವಿಜಯರಾಯ ೨

ಭಾಗವತಧರ್ಮವಹಿಸಿ ತ್ರಿರಾವರ್ತಿ ವಿಜಯರಾಯ
ಭಾಗೀರಥಿಯ ಚೆನ್ನಾಗಿ ಸೇವಿಸಿದ್ಯೊ ವಿಜಯರಾಯ ೩

ಕಂಚಿಕಾಳ್ಹಸ್ತಿ ಶ್ರೀರಂಗ ಸೇತುಯಾತ್ರೆ ವಿಜಯರಾಯ
ಪಂಚವಾರವು ಸಂಚರಿಸಿ ಸೇವಿಸಿದಯ್ಯ ವಿಜಯರಾಯ ೪

ಮರಿಯಾದೆಯಿಲ್ಲದೆ ವರಗಿರಿಯಾತ್ರೆಯ ವಿಜಯರಾಯ
ಪರಿಪರಿ ಕ್ಷೇತ್ರಕ್ಕೆ ಪೋಗಿ ಪೂಜಿಸಿದಯ್ಯ ವಿಜಯರಾಯ ೫

ಮಹಿಯಲ್ಲಿ ತಿರುಗಿ ಸರ್ವಕ್ಷೇತ್ರದಿ ವಿಜಯರಾಯ
ವಹಿಸಿದಾಸತ್ವವೈಷ್ಣವ ಸಿದ್ಧಾಂತ ವಿಜಯರಾಯ ೬

ಗುರೂಪದೇಶಕನಾಗಿ ವ್ಯಾಸಕಾಶಿಯಲ್ಲಿದ್ಯೊ ವಿಜಯರಾಯ
ದುರ್ಯೋನಿಯಲಿ ಬಂದ ವಂಶ ಉದ್ಧರಿಸಿದ್ಯೊ ವಿಜಯರಾಯ ೭

ಸ್ವಚ್ಛವಾಗಿ ಗಂಗಾತೀರ ವಾಸಮಾಡಿ ವಿಜಯರಾಯ
ಹೆಚ್ಚಾದ ಪರ್ವಣಿಯೊಳು ಮತ್ಸ್ಯೋದರಿತೋರ್ದೆ ವಿಜಯರಾಯ ೮

ತುಂಗಾತೀರದಿ ಕುಳಿತು ಗಂಗೆ ಪೆಚ್ಚಿಸಿದಿ ವಿಜಯರಾಯ
ಅಂಗದ ಮುಸುಕಿಲಿ ಪಾಂಡುರಂಗನ್ನ ಕಂಡ್ಯೊ ವಿಜಯರಾಯ ೯

ಮಧ್ವಮತದ ಸಾರ ಕವನದಿ ರಚಿಸಿದ್ಯೊ ವಿಜಯರಾಯ
ಅದ್ವೈತಸಿದ್ಧಾಂತಾಬದ್ಧವೆನಿಸಿದ್ಯೊ ವಿಜಯರಾಯ ೧೦

ಶುದ್ಧ ತತ್ವಸಾರ ಸುಳಾದಿ ಪದಮಾಡಿ ವಿಜಯರಾಯ
ಹೃದ್ಯದಿ ಧಿಮಿಕೆಂದು ಹರಿಯ ಕುಣಿಸಿದ್ಯೊ ವಿಜಯರಾಯ ೧೧

ಸದಾಚಾರಸಂಪತ್ತು ಮಧುಕರವೃತ್ತಿಯು ವಿಜಯರಾಯ
ಕದನ್ನ ಉಂಡರಿಯರು ಶಿಷ್ಯಜನಸಂಘ ವಿಜಯರಾಯ ೧೨

ಭಕ್ತರ ಅಪಮೃತ್ಯುಬಿಡಿಸಿ ಆಯುನಿತ್ತೆ ವಿಜಯರಾಯ
ಪ್ರತ್ಯಕ್ಷವಲ್ಲವೆ ಮನವೆ ಇದಕ್ಕೆ ಸಾಕ್ಷಿ ವಿಜಯರಾಯ ೧೩

ನಿತ್ಯಾನ್ನ ಪುತ್ರೋತ್ಸವಗಳು ಭೃತ್ಯರಿಗೆ ವಿಜಯರಾಯ
ಮತ್ತೆ ಧರ್ಮ ಮುಂಜಿ ಮದುವೆಗಳ ಮಾಡಿಸಿದ್ಯೊ ವಿಜಯರಾಯ ೧೪

ಭಕ್ತಜನರಿಗೆ ತತ್ವೋಪದೇಶವ ಮಾಡಿ ವಿಜಯರಾಯ
ಹೃತ್ಕಮಲದಿ ಹರಿಯ ತಿಳಿಸಿ ಸದ್ಗತಿಗಭಯ ಇತ್ತ್ಯೊ ನೀ ವಿಜಯರಾಯ ೧೫

ಎಲ್ಲರಲಿ ಸಿರಿನಲ್ಲನ ಅಂಶವ ವಿಜಯರಾಯ
ನಿಲ್ಲಿಸಿದೆಯೊ ನಿನ್ನ ಬಗೆ ಬಲ್ಲವರ್ಯಾರೊ ವಿಜಯರಾಯ ೧೬

ಬಲ್ಲಿದ ನೀನೊಂದುರೂಪದಿ ಎನ್ನಲ್ಲಿ ವಿಜಯರಾಯ
ನಿಲ್ಲಿಸಿದ್ದರೆ ಎಲ್ಲ ಜನರು ಓಲೈಸೋರು ವಿಜಯರಾಯ ೧೭

ನಿಮ್ಮ ಪುಣ್ಯದ ಶೇಷವಿನ್ನು ಉಂಬೆವೊ ನಾವು ವಿಜಯರಾಯ
ನಿಮ್ಮ ಸಾಮರ್ಥ್ಯವು ನಿಮ್ಮದೆಂದಿಗು ವಿಜಯರಾಯ ೧೮

ಎನ್ನಿಂದ ಆಗೋ ಸಾಧನವೆಲ್ಲ ನಿನ್ನದೊ ವಿಜಯರಾಯ
ಎನ್ನ ಪೊಂದಿಹರೆಲ್ಲ ನಿನ್ನ ದಾಸರೊ ಗುರು ವಿಜಯರಾಯ ೧೯

ಈಗ ಈ ಯುಗದಿ ಸಾಧನವೆಂಬುದು ಕಾಣೆ ವಿಜಯರಾಯ
ಯೋಗಿ ನಿನ್ನವರಿಗೆ ಬೇಗ ಒದಗುವುದೊ ವಿಜಯರಾಯ ೨೦

ಗುರು ನಿನ್ನ ಕರುಣಕವಚತೊಟ್ಟ ಭಕುತರ್ಗೆ ವಿಜಯರಾಯ
ಸಿರಿವರ ಗೋಪಾಲವಿಠಲರೇಯ ಕೈಪಿಡಿವನೊ ವಿಜಯರಾಯ ೨೧

೮೮

ಕಂಡೆ ಕರುಣಿಗಳೊಳು ಅಗ್ರೇಸರರಾದ ಪಂಡಿತ ರಾಮಾರ್ಯರ
ಕೊಂಡಾಡಲಿವರನು ಎಷ್ಟರವ ನಾನು ಕಂಡೆ ಎನ್ನ ಮನಕುತ್ಸಾಹವಾಗಿ ಪ.

ಸಿರಿವೆಂಕಟನರಸಿಂಹಾಚಾರ್ಯರೆಂಬುವರ ಕ್ಷೀರಶರಧಿಯಲ್ಲಿ
ಪರಮಶೋಭಿತ ಚಂದ್ರನಂತೆ ಉದ್ಭವಿಸಿ ಸುಜನರಿಗೆ ಆಹ್ಲಾದವಾಗಿ
ವರವೇದಶಾಸ್ತ್ರಗಳನೋದಿಸಿ ಶಿಷ್ಯಜನಕೆ ಒರೆದೊರೆದು ಉಪದೇಶಿಸಿ
ಮರೆಯದೆ ಒಂದು ಕ್ಷಣ ಬಿಡದೆ ಹರಿಪರರಾಗಿ ಇರುವ ಮಹಾ
ಸುಗುಣರನ್ನು ಇಂದು ೧

ಚರಣವೆಂದರೆ ಇವರ ಚರಣವೆ ಸುಖಕರ ಹರಿಯಾತ್ರೆ ಪರವಾಗಿನ್ನು
ಕರಗಳೆಂದರೆ ಇವರ ಕರವೆ ಮಂಗಳಕರ ಹರಿಪೂಜೆಯಲ್ಲಿ ಸತತ
ಕರ್ಣಗಳು ಮುಂತಾದ ಸರ್ವೇಂದ್ರಿಯಗಳಿಂದ ಹರಿಯನ್ನೆ ವಿಷಯೀಕರಿಸಿ
ಇರುವ ಅನುಭೋಗವು ಇರತೋರಿ ತಮ್ಮ ನಿಜಕುರುಹ ನೋಡೆಂದು
ಚಪ್ಪರಿಸಿ ಬಿಗಿದಪ್ಪಿದುದ ೨

ಏಸುಜನ್ಮದ ಸುಕೃತ ಎನಗಿವರ ಕರುಣ ಉಪದೇಶ ಸ್ವಪ್ನದಿ ಆದುದಾ
ಕೇಶವನೆ ಈ ರೂಪದಿಂದ ಪೇಳಿದನ್ಹ್ಯಾಗೊ ಲೇಶ ನಾ ಅರಿದವನಲ್ಲ
ದಾಸವರ್ಯ ಗುರು ವಿಜಯರಾಯರೆ ಇಲ್ಲಿ ನಿಂದೆನ್ನ
ಪೋಷಿಸುವ ಬಗೆಯು ಹಾಗೋ
ವಾಸುದೇವ ಹಯಾಸ್ಯ ಗೋಪಾಲವಿಠಲನ ದಾಸರೊಳುತ್ತಮರ
ದಯಕೆ ಸರಿಯುಂಟೆ ೩

ಆತ್ಮನಿವೇದನೆ

೮೯

ಸುಳಾದಿ

ಧ್ರುವತಾಳ

ಅನಂತ ಜೀವ ಮುಕ್ತಿಯೋಗ್ಯರ ಒಳಗೆಲ್ಲ
ಆನೊಬ್ಬ ನೀಚಚೇತನನು ಕಾಣೊ
ನೀನೆ ಬಲ್ಲಯ್ಯ ಸ್ವಾಮಿ ಎನ್ನ ಸ್ವರೂಪವನು
ನಾನಾ ಯೋನಿಗಳಲ್ಲಿ ಹಾಕುವನೆ
ಶ್ವಾನ ಮುಂತಾದ ಜೀವರೆಲ್ಲರು ತಮ್ಮ ಗತಿ
ಅನೇಕ ಯೋನಿಗಳು ಐದಿ ಐದಿ ಮಾನವ
ಯೋನಿಯು ಮುಂತಾದ್ದೆಲ್ಲಿ ಬಂದು
ನಾನಾಪರಿ ಸಾಧನಗಳು ಮಾಡಿ ಕಾಣಿಸಿಕೊಂಡು
ನಿನ್ನ ಆತ್ಮಾನಂದ ಸುಖವನು ಭಂಜಿಸುವರು ಅಂತ್ಯದಲ್ಲಿ
ಜ್ಞಾನಭಕ್ತಿ ಎಂಬೋದು ಎಲ್ಲ ಜೀವರಿಗೆ ಬೇಕು
ನ್ಯೂನ ಅಧಿಕ ತಾರತಮ್ಯವಾಗಿ
ನೀನೆ ಗತಿಯೊ ಸ್ವಾಮಿ ಇನ್ನು ಬರಲಿಲ್ಲವೆಂದು
ತಾನು ಇಹು(ರು?)ವ ಜೀವ ಸಾಮಾನ್ಯನೆ
ಏನು ಎನಗೆನ್ನ ನಿನ್ನ ಮೂರ್ತಿಯೆಂದರೆ
ತಾನು ಪುಟ್ಟುವುದಯ್ಯ ಮಮತೆ ಮನಸಾ
ಪ್ರಾಣಿ ಒಬ್ಬ ಯಃಕಶ್ಚಿತ ತಿಳಿವುದಕ್ಕೆ ನಿನ್ನ
ನಾನಾ ಭಕುತರ ಕರುಣ ಅವಗೆ ಬೇಕು
ಏನು ಗಳಿಸಿದರನ್ನ ಗಳಿಸುವ ಹರಿ ನಿನ್ನ
ಜ್ಞಾನ ದೊರಕುವುದಿನ್ನು ಬಹು ದುರ್ಘಟ
ಜಾಣ ಚೆನ್ನಿಗರಾಯ ಗೋಪಾಲವಿಠಲ ನಿನ್ನ
ಕಾಣವುದಕ್ಕೆ ಜ್ಞಾನಚೇತನ ಬೇಕೊ ೧

ಮಠ್ಯತಾಳ

ಶ್ರುತಿ ಓದಲಿಬೇಕು ಸ್ಮೃತಿ ತಿಳಿಯಲಿಬೇಕು
ಇತರಾರ್ಥಗಳೆಲ್ಲ ನಿರಾಕರಿಸಲಿಬೇಕು
ಮತ ಅಭಿಮಾನಬೇಕು ಜಪತಪವು ಬೇಕು
ಪ್ರತಿ ಪ್ರತಿ ಕ್ಷಣದಲ್ಲಿ ಹರಿಯ ಸ್ಮರಣೆಬೇಕು
ಪೃಥ್ವಿ ಉದಕ ವಾಯು ಅಗ್ನಿ ಆಕಾಶವು
ಇತರ ದಶೇಂದ್ರಿಯ ತನ್ಮಾತ್ರಗಳೈದು
ಜಿತಮನ ಅಹಂಕಾರ ಮಹತತ್ವವಿನ್ನು
ಚತುರವಿಂಶತಿತತ್ವದಭಿಮಾನಿಗಳು
ಸತತ ಹರಿಯು ತಾನು ಸರ್ವದ್ವಾರದಿ ತನಗೆ
ಗತಿಗೆ ನಿಯಾಮಕನೆಂಬೊ ಸ್ಮೃತಿಬೇಕು
ಪತಿತಪಾವನ ಗೋಪಾಲವಿಠಲ ಲಕ್ಷ್ಮೀ-
ಪತಿ ಸರ್ವಸ್ಥಳದಿ ವ್ಯಾಪ್ತನೆಂದರಿಯಬೇಕು ೨

ರೂಪಕತಾಳ

ಮಾಡಬೇಕು ನಾನು ಮಾಡಿಲ್ಲವೆನಬೇಕು
ಆಡಬೇಕು ನಾನು ಆಡಿಲ್ಲವೆನಬೇಕು
ನೀಡಬೇಕು ನಾ ನೀಡಿಲ್ಲವೆನಬೇಕು
ನೋಡಬೇಕು ಕರ್ಮ ಮಾಡಿಸುವುದು ತನಗೆ
ಬೇಡಿಕೊಂಬುದಕಿನ್ನು ವಿಹಿತಾವಿಹಿತಗಳಿಗೆ
ಕೇಡು ಲಾಭಗಳಿಗೆ ಹಿಗ್ಗಿ ಕುಗ್ಗದಲೆ
ಓಡಿದರೆ ಬಹುಮಂದಿ ವಿಷಯಕ್ಕೆ ನಾ
ಓಡಿದೆನೆಂತೆಂಬೊ ನೋಡು ಶ್ರುತಿ ಇರಲು
ಮಾಡಬೇಕಾದರೆ ಒಂದು ಕರ್ಮ ಎಲ್ಲ
ಕೂಡಿದರೆ ಆಗುವುದೆಂದು ಅರಿದುಕೊ
ಪಾಡಿದವರ ಪ್ರಾಣ ಗೋಪಾಲವಿಠಲನ್ನ
ಮಾಡಿಪ್ಪ ಕರ್ಮ ಮುಖ್ಯವೆಂದರಿತು ಬಾಳೊ ೩

ಝುಂಪೆತಾಳ

ಒಬ್ಬನ ಕರ್ಮ ಅನಂತ ಜನರ ಕರ್ಮ
ಒಬ್ಬನ ದೋಷಕ್ಕನಂತ ಜನರ ಸಹಾಯ
ಒಬ್ಬನ ಸೃಷ್ಟಿಗಾನಂತಜನರ ಸೃಷ್ಟಿ
ಒಬ್ಬನ ಬಂಧ ಲಯ ಎಲ್ಲರಿಗೂ ಬಂಧ ಲಯ
ಒಬ್ಬೊಬ್ಬರ ಗತಿ ಇನ್ನು ಬೇರೆ ಉಂಟು ಇನ್ನು
ಒಬ್ಬರ ಕರ್ಮಗಳಿಗೆ ಕಡೆ ಮೊದಲಿಲ್ಲ
ಅಬ್ಜಸಂಭವಪಿತ ಗೋಪಾಲವಿಠಲ
ಅಬ್ಬರ ಮೂರ್ತಿ ಹೀಗೆ ಅಂದವರಿಗೆ ಸಾರ್ಥಿ ೪

ತ್ರಿಪುಟತಾಳ

ಜ್ಞಾನ ಉಳ್ಳವನಾಗಿ ಮಾಡಿದ ಪಾಪಕ್ಕೆ
ಜ್ಞಾನ ರಹಿತನಾಗಿ ಮಾಡಿದ ಪಾಪಕ್ಕೆ
ಏನು ಇದಕ್ಕೆ ಪ್ರಾಯಶ್ಚಿತ್ತವೆಂದರೆ
ಶ್ರೀನಿವಾಸನ ಸ್ಮರಣೆ ಮುಖ್ಯವಯ್ಯಾ
ನಾನೆಲ್ಲಿ ಕಾಣೆನೊ ಹರಿಯ ಸ್ಮರಣೆಯಿಂದ
ತಾನಾಗೊ ಸುಖಕ್ಕೆ ಇನ್ನೊಂದು ಕರ್ಮ
ಅನಂತಾನಂತ ಮಾಡಿದ ಕಾಲಕ್ಕೂ
ಪ್ರಾಣಿಗಳಿಗೆ ಸುಖ ದೊರೆಯದಿನ್ನು
ಏನಾದರು ಏನು ಸಕಲಕ್ಕು ಹರಿಮುಖ್ಯ
ತಾನು ತಾರಕನಾಗಬೇಕು ಮುಖ್ಯ
ದೀನಜನಬಂಧು ಗೋಪಾಲವಿಠಲ
ಜ್ಞಾನಿಗಳಲ್ಲಿ ನಿತ್ಯ ವಾಸವಾಗಿಪ್ಪ ಬಿಡದೆ ೫

ಅಟ್ಟತಾಳ

ಭಯಭಕುತಿ ಕರ್ಮ ಅನಂತಮಾಡಲು
ಸವೆಯದ ಪದವಿಯು ದೊರೆಯದು ದೊರೆಯದು

ಜಯವು ಕೊಡದು ಅದು ತ್ರಯಲೋಕದೊಳಗಿನ್ನು
ಲಯವಾದ ಜ್ಞಾನ ಭಕುತಿ ಪುಟ್ಟಿಸದು ಅದು
ಪ್ರಿಯವಲ್ಲ ಆ ಕರ್ಮ ಮಾಡೆ ಹರಿಗೆ ಏನು
ಭಯವುಳ್ಳ ಸ್ಥಳದಲ್ಲಿ ಸುಯೋಗ್ಯನ ಮಾಳ್ಪ
ಭಯನಿವಾರಣ ಸ್ವಾಮಿ ಗೋಪಾಲವಿಠಲ
ಭಯರಹಿತಮಾಳ್ಪ ಭಯ ಬಿಟ್ಟರ್ಚಿಸಲು ೬

ಆದಿತಾಳ

ನಿತ್ಯ ನೈಮಿತ್ತಿಕ ಮತ್ತೆ ತೀರ್ಥಯಾತ್ರೆ
ಹೊತ್ತು ಅರಿತು ಅಗ್ನಿಹೋತ್ರ ಅತಿಥಿಯ
ಹೆತ್ತ ತಾಯಿತಂದೆ ಪೂಜೆಯು ನಾನಾ
ಶ್ರುತ್ಯರ್ಥಗಳಲ್ಲಿ ಹೇಳಿದ ಕರ್ಮವು
ನಿತ್ಯ ಮಾಡದೆ ಹೋದರೆ ಭಯವಿಂತೆಂದು
ನಿತ್ಯ ಮಾಡಿದರೇನು ಇಷ್ಟವೆ ದೊರೆಯದು
ಭಕ್ತಿಪೂರ್ವಕವಾಗಿ ಭಯರಹಿತವಾಗಿ
ಮತ್ತವರ ಕರ್ಮವ ಮಾಡಲು
ಹತ್ತಿಕೊಡುವ ಬಂದಾನಂತವಾಗಿ
ತುತ್ತು ಮಾಡಿದಂತೆ ಸಾಧನವೆಲ್ಲ
ಭಕ್ತವತ್ಸಲ ಸ್ವಾಮಿ ಗೋಪಾಲವಿಠಲ
ಎತ್ತಲಾದರು ಏನು ಭಕ್ತಿಗೆ ಸಿಲುಕುವ ೭

ಜತೆ

ಜ್ಞಾನ ಭಕ್ತಿ ವಿರಕ್ತಿಯೆ ಸಾಧನ
(ಮೇಣು) ಇಲ್ಲದೆ ಇಲ್ಲ ಗೋಪಾಲವಿಠಲ

೯೦

ಸುಳಾದಿ

ಧ್ರುವತಾಳ

ಅರಿಯಾಗಿ ಸಖನಾಗಿ ಸರ್ವೇಶನೆ
ಅರಸಾಗಿ ಆಳಾಗಿ ಅಪ್ರಮೇಯ
ಸರಸಾಗಿ ವಿರಸನಾಗಿ ಸಿರಿಹರಿಯೆ
ಇರುಳಾಗಿ ಹಗಲಾಗಿ ಶ್ರೀವಿಷ್ಣುವೆ
ನರಕಾಗಿ ಸ್ವರ್ಗವಾಗಿ ನಾರಾಯಣ
ದುರಿತನಾಗಿ ದೂರಾಗಿ ದುರುಳಾಂತಕ
ವರ ಮಾತಾಪಿತನಾಗಿ ಪುರುಷೋತ್ತಮ
ಪುರನಾಗಿ ಕಾನನಾಗಿ ಪುರಂದರ
ತುರುವಾಗಿ ಕರುವಾಗಿ ದಾಮೋದರ
ಮರಿಯಾಗಿ ಮಗನಾಗಿ ಮಂಗಳಾಂಗ
ಧರೆಯಾಗಿ ಧೈರ್ಯನಾಗಿ ಶ್ರೀಕೃಷ್ಣನೆ
ನೆರೆಯಾಗಿ ನಂಟನಾಗಿ ಶ್ರೀರಂಗನೆ
ಹೊರಗಾಗಿ ಒಳಗಾಗಿ ಅನಂತನೆ
ಸರಳಾಗಿ ಕಠಿಣವಾಗಿ ಸರ್ವಜ್ಞನೆ
ಪರವಾಗಿ ಇಹವಾಗಿ ಪರಮೇಷ್ಠಿಯೆ
ದೂರನಾಗಿ ಸಾರ್‍ಯಾಗಿ ಮುಕುಂದನೆ
ಕಿರಿದಾಗಿ ಹಿರಿದಾಗಿ ತ್ರಿವಿಕ್ರಮ
ವರನಾಗಿ ಅಭಯನಾಗಿ ವಾಸುದೇವ
ಹಿರಿದಾಗಿ ಅಲ್ಪವಾಗಿ ಸಿರಿಕಾಂತನೆ
ಎರಡಾಗಿ ಏಕೋನಾಗಿ ಶ್ರೀಹರಿಯೆ
ಪರಿಪಾಲಿತನಾಗಿದ್ದ ಬಿಡದೆ ಎಂದೆಂದು ಎನ್ನ
ಸಂರಕ್ಷಿಸುವ ಭಾರಕರ್ತ ಮುಕ್ತ
ಅರಿದವನಿಗೆ ಲಭ್ಯ ಗೋಪಾಲವಿಠಲ
ದೊರೆಯೆ ಪೂರ್ಣಕಾಮ ನಿತ್ಯನಿರ್ಲಿಪ್ತ ೧

ಮಠ್ಯತಾಳ

ಬಲ್ಲೆನೆಂದವ ಅರಿಯ ಅರಿಯೆನೆಂದವ ಬಲ್ಲ
ಇಲ್ಲವೆಂದವಗುಂಟು ಇದ್ದೆನೆಂಬವಗಿಲ್ಲ
ಪೊಳ್ಳುಗಟ್ಯಾಗುವುದು ಗಟ್ಟಿ ಪೊಳ್ಳಾಗುವುದು
ಒಲ್ಲದವನೆ ಒಲಿವ ಒಲಿದು ಇದ್ದವ ಬಿಡುವ
ಕಲ್ಲುಕಲ್ಲಿಗೆ ತಾಕಿ ಅಗ್ನಿ ಪೊರಟರಿನ್ನು
ನಿಲ್ಲು ಅದಕ್ಕೆ ಒಬ್ಬ ಪುರುಷ ಬೇಕು
ಇಲ್ಲೊ ಸ್ತ್ರೀಲಿಂಗವು ಪುರುಷ ಎರಡು ಇದ್ದರೆ ಸೃಷ್ಟಿ
ಎಲ್ಲ ಆಗುವುದೆಂಬೊ ಸೊಲ್ಲನಾಡಲಿ ಬೇಡ
ಫುಲ್ಲಲೋಚನಕೃಷ್ಣ ಗೋಪಾಲವಿಠಲ
ಎಲ್ಲರಿಂದಲಿ ಭೇದ ಅಭೇದನಾಗಿಪ್ಪ ೨

ರೂಪಕತಾಳ

ಧನದಿಂದ ವಿಕ್ರಯ ಸಕಲ ಪದಾರ್ಥವು
ಧನವ ವಿಕ್ರಯಿಪಂಥ ಅರ್ಥಾವುದು
ಧನಕ್ಕಿಂತ ಉತ್ತಮ ಮನುಜರಾವೆ ನೋಡು
ಎನಗಿಂತ ಉತ್ತಮರಾದವರ
ಅನುಸಾರ್ಯಾಗಿ ನಡೆದು ಅಲ್ಲಿದ್ದ ಹರಿಯ
ಗುಣಗಳೇವೆ ಧನವ ಮಾಡಿಕೊಂಡು
ಮನೆಯ ಮಾಡಿಕೊಂಡು ಮೂರು ಅವಸ್ಥೆಯ
ನೆನೆದು ನೆನೆದು ದಿನ ಒಪ್ಪಿಸುವೆ
ಸನಕಾದಿಗಳ ಪ್ರಿಯ ಗೋಪಾಲವಿಠಲ
ಎನಗೆ ನೀ ವಿಷಯನೊ ಸರ್ವ ಪರಿಯಲಿ ೩

ಝಂಪೆತಾಳ

ಉಪಜೀವನವೆಂಬುದಾವುದು ನೋಡಲು
ವಿಪರೀತವಾಗಿಹುದು ಈಗ ನೋಡ

ತಪರಹಿತವಾಗಿ ಬಿಂಬನ್ನ ಮರೆದು ಅನ್ಯ ವಿಷಾ(ವಿಷಯ)
ಉಪಜೀವನವೆಂದು ತೋಷಬಡುವೆ
ಕಪರ್ದಕವಾದರು ಲಾಭವಾದರು ಕಾಣೆ
ತಪಿಸುವೆನು ಹಗಲಿರುಳು ವಿಷಯದಿಂದ
ಸ್ವಪನದಲ್ಲ್ಯಾದರು ನಿಜ ಸುಖವನ್ನು ಕಾಣೆ
ಉಪವಾಸ ಬಹು ಜನ್ಮ ದೀನ ಉದ್ಧಾರ
ಕೃಪಾಪೂರ್ಣ ನೀ ಎನಗೆ ಗುಪಿತ ಸಖನಾಗಿದ್ದು
ಉಪವಾಸದಲ್ಲಿ ಎನ್ನ ಇಡಲಿಬಹುದೆ
ಸಪುತದ್ವಿಲೋಕಕ್ಕೆ ಅನ್ನದಾತನೆಂದು
ಅಪರಿಮಿತ ನಿನ್ನ ಕೀರುತಿಯು ಎತ್ತ
ತೃಪುತನಾಗೊಂತೆನಗೆ ಅನ್ನ ನೀ ಉಣಿಸಿದರೆ
ನೀ ಪರಮ ಕರುಣಿ ಎಂದು ತುತಿಪೆ
ಕಪಟನಾಟಕಧಾರಿ ಗೋಪಾಲವಿಠಲ
ಅಪರಾಧ ಮುನ್ನ ನಾ ಮಾಡಿದವನೆ ೭

ತ್ರಿಪುಟತಾಳ

ನಾ ನಿನ್ನ ಮರೆವುದಕ್ಕೆನಗೊಂದುಪಾಧಿ ಉಂಟು
ನೀ ಎನ್ನ ಮರೆವುದಕ್ಕೆ ಆವ ಉಪಾಧಿಯೋ ?
ಅನಾದಿ ಅವಿದ್ಯೆ ಎನಗಾವರ್ಕವಾಗಿದೆ
ನೀನು ನೋಡದಂತೆನ್ನ ನಿನಗಾವ ಆವರ್ಕ
ಜ್ಞಾನಪೂರ್ಣನೆ ಎನಗೆ ನೀನೆ ಆವರ್ಕ ಅಭಿ-
ಮಾನಿಗಳೆ ಎನ್ನ ಸ್ವಾತಂತ್ರ್ಯರೆ
ನೀನೆ ಅವರಿಗೊಂದು ಮರ್ಯಾದೆ ಮಾಡಿಟ್ಟು
ಪ್ರಾಣಿಗಳಾವನ್ನ ಕರ್ತರೆನಿಪೆ
ಗಾಣ ಕಟ್ಟಿದ ಎತ್ತು ಏನು ಬಲ್ಲದೊ ತೈಲ
ತಾನು ಪಕ್ವವಾದ ಪ್ರಮಾಣವು
ಧೇನಿಪುವು ತಮ್ಮ ಆವಾಗ ಬಿಡೋನೆಂದು
ಗಾಣಿಗನಾಧೀನ ಎಲ್ಲ ಜೀವ

ನಾನೆ ಮುಂತಾದ ಎಲ್ಲ ಜೀವ ತಿಲಸ್ಥಾನ
ಗಾಣದ ಒರಳವೆ ಸಂಸಾರವೊ
ಅನಾದಿ ಅವಿದ್ಯ ಸಂಸಾರದೊಳು ಹಾಕಿ
ನೀನು ಮರ್ದಿಸಿ ಜ್ಞಾನ ಭಕುತಿ ತೈಲ–
ವನು ತೆಗೆದು ಸರ್ವ ಜೀವರಿಗೆ ಎರೆದು
ನೀನು ಮಾಡುವ ಮರಿಯಾದೆ ಇದು
ನಾನೇವೆ ಅಪರಾಧಿ ತಿಳಿಯದೊಂದೆನ್ನಿಂದ
ಕಾಣಿಸುತಲಿದೆ ಕರುಣಾಕರ
ಗೋಣಿ ಹೊರಿಸಿದವನೆ ಇಳಿಸಬೇಕಲ್ಲದೆ
ಏನನ್ನ ಸ್ವಾತಂತ್ರ್ಯ ಎಮಗೆ ಉಂಟೊ
ಜಾಣ ಚೆನ್ನಿಗರಾಯ ಗೋಪಾಲವಿಠಲ
ಜ್ಞಾನ ಅಂಬುಧಿ ನಿನ್ನ ಮರೆಯ ಹೊಕ್ಕೆ ೫

ಅಟ್ಟತಾಳ

ಆರಾಧಿತನಾಗು ಸರ್ವ ಇಂದ್ರಿಯಗಳಿಂದ
ಆರಾಧನೆಯ ಮಾಡಿ ಸಾರೆ ನೀನಲ್ಲದೆ
ಆರಾಧನೆಯಿಂದೊಂದು ಆಶೆ ಎನಗೆ ಬೇಡ
ಆರಾಧಿಸಿದೆನೆಂಬೊ ಅಹಂಕಾರವದು ಬೇಡ
ಆರಾಧನೆಯ ಸಾಧನಾರಾಧಕ್ಕಾಗಲಿ
ತಾರತಮ್ಯ ಪರಿವಾರ ಸಹಿತ ತಂತ್ರಸಾರ ಯುಕುತವಾದ
ಆರಾಧನೆಯ ಮಾಡಿ ಸಾರಭೋಕ್ತ ಸುಂದರ ಮೂರುತಿಯನು
ತೋರಿ ಎನ್ನೊಳಗೆ ಸ್ಫೂರುತಿಯನ್ನು ಕೊಟ್ಟು
ಕೀರುತಿ ನಿನ್ನದು ಕೊಂಡಾಡುತ ಸದಾ
ವಾರಣಾಸಿಯು ಮುಂತಾದ ಕ್ಷೇತ್ರಗಳೆಲ್ಲ
ತೋರಿಸಿ ಅಲ್ಲಲ್ಲಿ ಸ್ತೋತ್ರ ಮಾಡಿಸಿ ನಿನ್ನ
ಚಾರು ಚರಣದಲ್ಲಿ ಸೇರಿಸಿ ಸಲಹುವುದೊ
ಕಾರಣ ನೀ ಬಲ್ಲಿ ಎನ್ನ ತಂದುದಕಿನ್ನು
ನಾರಾಯಣ ನಿನ್ನ ತುತಿಯ ಮಾಡಿಸು ಪೂರ್ಣ

ಮೀರಿ ಬಂದುವು ದಿನ ಸಾರಿಪೇಳುತ ಹೀನೆ (ಹೀಗೆ ?)
ಶಾ(ಶ ?)ರೀರವೆಂಬುದು ಅನಿತ್ಯ ಬಲುಸಿದ್ಧ
ಊರಿಗೆ ಮುತ್ತಿಗೆ ಬರುತಿದೆ ಎಂಬಂಥ
ವಾರುತೆ ಆದರು ಸಾರೋರಪರೋಕ್ಷ
ಭಾರ ನಿನ್ನದು ಕಂಡ್ಯ ಗೋಪಾಲವಿಠಲ ವಿ
ಚಾರ ನಿನ್ನಲ್ಲಿರ್ಥಗಳೆ (ಇರುಳುಹಗಲೆ) ನಗಿರಲಿ ೬

ಆದಿತಾಳ

ಛಲವಾಗಿರಿಸು ಮತ್ಕುಲ ಸ್ವಾಮಿಯೆ ನಿಹ
ಫಲವು ಅಧಿಕ ನೋಡಿ ಕಲಿಯುಗ ಸಾಧನ
ಹಲವು ಬಗೆಯಲ್ಲಿ ಬೇಡುವುದೇನಿಲ್ಲ
ಸುಲಭದಿ ಸುರನದಿ ಸ್ನಾನವ ಮಾಡಿಸಿ
ಸ್ಥಳವ ಸೇರಿಸಿ ಬಂಧುಗಳ ಸಹಿತ ತಂ
ದಿಲ್ಲಿ ನಿಲ್ಲಿಸಿದಮ್ಯಾಲೆನ್ನ ತಿಳಿದದ್ದು ಮಾಳ್ಪೋದು
ಕಳವಳ ಇದರ ಹೊರತಂದು ಕಾಣಿಸೋದಿಲ್ಲ
ಉಳಿದ ಧರ್ಮಗಳ ಬಲ್ಲ ನಾನಾಗಲಿ
ತಿಳಿವಿಕೆ ಬಲುಕೊಡು ನಿನ್ನ ಕಥೆಯಲ್ಲಿ
ಚಲಿಸದೆ ಮನಸಿಗೆ ನಿಲುಕುತ ನೀನಿರು
ಗೆಲಿದೆ ನಾನಾ ಸಂಕಲಿಪಿಸಿದದನೆಲ್ಲ
ಸಲಿಗೆಲಿ ಎನೆ ನಾ ಬಿನ್ನೈಸಿದದನೆಲ್ಲ
ಭಳಿ ಭಳಿರೆ ಸ್ವಾಮಿ ಭಕುತ ಜನರ ಪ್ರೇಮಿ
ಚೆಲುವ ಶುಭಾಕಾರ ಚಕ್ರ ಶಂಖಧರ
ಬಲು ವೈಚಿತ್ರ್ಯ ಕೋಮಲಮನಪುರುಷ
ಜಲಜಾಕ್ಷನೆ ಮಹಾಕಲುಷ ಸಂಹಾರನೆ
ಜಲಜಸಂಭವಪಿತ ಜನನಮರಣದೂರ
ಚಲ ಅಚಲಾಗತ ಅಚಲಾನಂದನೆ
ಚಲಿಸುವ ಕರಣಕುಂಡಲಗಳ ಪ್ರಭೆಯ
ಕಳೆಯ ಪ್ರಕಾಶಿತ ಮೊಗನೆ ಮನೋಹಾರಾ–
ವಳಿ ಪಂಕ್ತಿಯ ಸುಜಠರ ಸಿರಿವತ್ಸ

ಸುಳಿಯ ಗುಂಭ ಪೊಕ್ಕುಳ ಕಟಿ ಸುಗುಣ
ಫಿಲ ಫಿಲಕು ಊರು ಎತ್ತಿಕುಣಿಯೋ ಚರಣ
ನಿಲುಕುತ ಇರು ಎನ್ನ ಮನಕೆ ಆಭರಣ
ಸುಲಭ ತಾರಕ ನೋಡು ಹರಿ ನಿನ್ನ ಸ್ಮರಣ
ಚೆಲುವ ದೇವರದೇವ ಗೋಪಾಲವಿಠಲ
ಸಲಿಗೆ ಬಿನ್ನಪಿದೊಂದು ಸಲಿಸೊ ಹೇ ಜೀಯ ೭

ಜತೆ

ಕಾರಣೆಲ್ಲದ ಕಾರ್ಯ ಮಾಡುವರುಂಟೇನಯ್ಯ
ಕಾರಣ ಪುರುಷ ಕೇಳೊ ಗೋಪಾಲವಿಠಲ

೯೧

ಸುಳಾದಿ
ಧ್ರುವತಾಳ

ಆನ್ಯಾತರವನಯ್ಯ ಅಲ್ಪ ಅತ್ಯಂತ ನಿರುತ
ಕಾಣೆ ನಾ ಒಂದಾದರು ನಿನ್ನ ಹೊರತು ದೇವ
ರೇಣು ಮಾತ್ರವಾದರು ನಿನ್ನ ಹೊರತು
ಜ್ಞಾನ ಅಜ್ಞಾನ ನಮಗೆ ಆಗುವುದೆ
ನಾನೆ ಮಾತ್ರವು ಅಲ್ಲ ಸಿರಿ ಅಜಭವಾದಿಗಳು
ನೀ ನಡೆಸದಿರುವುದು ನಿಶ್ಚೇಷ್ಟದಿ
ಅನಾದಿ ಕರ್ಮ ಬಂಧನಾಗಿ ಇಪ್ಪುವ ನಾನು
ಏನು ಬಲ್ಲೆನೊ ನಿನ್ನ ಮಹಿಮೆಯ
ಕಾಣೆ ನಾ ಒಂದಾದರು ನಿನ್ನ ಸ್ವತಂತ್ರವಿನಹ ಮನದಿ
ನಾನೆ ಸ್ವತಂತ್ರನೆಂದು ಹಿಗ್ಗಿ ಹಿಗ್ಗಿ
ನಾನಾ ಯೋನಿಗಳಲ್ಲಿ ಜನಿಸಿ ಜನಿಸಿ ಬಂದು
ಏನು ಬಟ್ಟ ಬವಣೆ ನೀನರಿಯೆ

ಖೂನವರಿಯದಪ್ಪಂದೆ ಒಳಗಿದ್ದು
ನಾನಾ ಚೇಷ್ಟೆಗಳೆಲ್ಲ ನೀನೆ ಮಾಡಿ
ಪ್ರಾಣಿಗಳಿಗೆ ಸುಖದುಃಖವುಣಿಸಿ ಒಡನೆ ಇದ್ದು
ನೀನು ನಿರ್ಲಿಪ್ತನಾಗಿ ನಿತ್ಯವಾಗಿ
ಜಾಣ ಚೆನ್ನಿಗರಾಯ ಗೋಪಾಲವಿಠಲ
ಕಾಣದೆ ನಿನ್ನ ನಾ ಬಲು ದಣಿದೆ ೧

ಮಠ್ಯತಾಳ

ದಾರಿದ್ರ್ಯವೆ ಸಿರಿಯು ಸಿರಿಯೆ ದಾರಿದ್ರ್ಯವು
ಆರೋಗ್ಯವೆ ರೋಗ ರೋಗವೆ ಆರೋಗ್ಯ
ಬಾರದ್ದೆ ಬಂದದ್ದು ಬಂದದ್ದೆ ಬಾರದ್ದು
ಸೇರದ್ದೆ ಸೇರಿದ್ದು ಸೇರಿದ್ದೆ ಸೇರದ್ದು
ತೋರದ್ದೆ ತೋರಿದ್ದು ತೋರಿದ್ದೆ ತೋರದ್ದು
ಕಾರಣ ಕಾರಣ ಓರಣ ಎಲ್ಲವು
ನಾರಾಯಣನು ಒಲಿದ ನರನಿಗೆ
ಈ ರೀತಿ ಮಾಡಿ ಅನುಭವಕೆ ಇನ್ನು
ತೋರಿಗೊಡುತಲಿ ಕ್ಷಣಕ್ಷಣಕೆ ಬಿಡದೆ
ಈ ರೀತಿ ತಿಳಿಸಿದ್ದು ಒಳಹೊರಗೆ
ಭಾರಕರ್ತನಾಗಿ ಬಹುವ್ಯಾಪ್ತಸ್ವಾಮಿ
ಆರು ಇದರ ವಿವರ ಅರುಹುವರೊ ಎನಗೆ
ಶ್ರೀರಮಣ ಚೆಲುವ ಗೋಪಾಲವಿಠಲ
ತಾರದವನೆ ಕೆಟ್ಟ ಅನುಭವಕೆ ನಿನ್ನ ೨

ರೂಪಕತಾಳ

ಕಂಡದ್ದೆ ಕಾಣದ್ದು ಕಾಣದ್ದೆ ಕಂಡದ್ದು
ಉಂಡದ್ದೆ ಉಣ್ಣನೆ ಉಣ್ಣನು ಉಂಡದ್ದೆ ಮರುಳೆ
ದಂಡನವೆ ಸುಖವು ಸುಖವೆ ದಂಡನವು
ಕೆಂಡ ಸೀತವು ಸಮವು ಆಗುವುದಲ್ಲದೆ

ಪುಂಡಾರೀಕಾಕ್ಷನ ಕಂಡ ಮೇಲಕ್ಕೆ ನಿನ್ನ
ಮಂಡಿಯವು ಬಾರದು ಮತ್ತೆ ಮನುಜಗೆ
ಪಾಂಡವಪ್ರಿಯ ಗೋಪಾಲವಿಠಲರೇಯ
ಕಂಡದ್ದಲ್ಲದೆ ಪಾರ್ಥಗೊಲಿದ ಮಹಾಮಹಿಮ ೩

ಝಂಪೆತಾಳ

ಆರನುದ್ಧರಿಸುವೆನೆಂದು ಮನದಿ ಮಾಳ್ಪೆ
ತೋರಿಕೊಡುವುವೆ ಸಕಲ ಸಾಧನಗಳವಗೆ
ಬಾರದಿದ್ದರೆ ಮನಕೆ ಅವಗೆ ಚೆನ್ನಾಗಿ ನಿಜ
ಪ್ರೇರಿಸುವಿ ವಿಧಿಯು ವಿಹಿತಾಚರಣಗಳಿನ್ನು
ಬಾರಿ ಬಾರಿಗೆ ಸ್ಮೃತಿಯು ತಂದಿತ್ತು
ದೂರವೆ ಮಾಳ್ಪೆ ದುರಿತಗಳ ಅಪಾರ ಇದ್ದರನ್ನ
ಕ್ರೂರನರರಿಂದ ಒಂದು ಧರ್ಮವಾದರು ಇನ್ನು
ಸೇರಿಸಿ ಕೆಡಿಸೆ ಕೊಡವಿ ಇನ್ನವರಿಗೆ
ಮಾರನಯ್ಯ ಚೆಲುವ ಗೋಪಾಲವಿಠಲ
ಬಾರೊ ನಿನಗಿನ್ನು ಈಡಾರೊ ಪ್ರಭುವೆ ೪

ತ್ರಿಪುಟತಾಳ

ಯೋಚನ್ಯಾತಕ್ಕೆ ದೇವ ಎನ್ನ ಪೊರೆವುದಕ್ಕೆ
ಸೂಚನೆ ತೋರಿ ಸುಮ್ಮನಾಗಲಿಬೇಡ
ನೀಚ ನಾನು ನಿತ್ಯದಲ್ಲಿ ನಿನ್ನ ಮರೆತು
ಯೋಚನೆ ಮಾಡುವೆ ಕಂಡವರ
ಚಾಚಿ ಚಾಚಿ ಕರಗಳು ಬೇಸತ್ತವು
ವಾಚ್ಯಾ ತುತಿಸಿ ವದನವೆಲ್ಲ ಕೆಟ್ಟಿತಯ್ಯ
ನಾಚಿಕೆಯಿಲ್ಲ ಇನ್ನು ಈ ಮನಸಿಗಿನ್ನು
ಮೋಚಕ ಮಾರ್ಗವು ಪಿಡಿಯದಿನ್ನು
ಮೋಚಕ ಮಾರ್ಗವ ವಿಚಿತ್ರ ಮಹಿಮ ನೀ

ಯೋಚಿಸು ಎನಗಾಗಿ ಊಚಗತಿಯ ಸಾಧನದ ಮಾರ್ಗಕ್ಕೆ
ನೀಚ ವಿಷಯಗಳಿಗೆ ನೀ ಎನ್ನ ಸೆಳೆದರೆ
ಯಾಚಕ ಎನ್ನಿಂದಲೇನಾಹುದೊ
ಖೇಚರವಾಸಿ ನೀ ನೀಚಸಾವಾಸಿ ನಾ
ಆಚಾರವೇನೊ ನೀ ಅರಿಯದಿದ್ದ
ಶ್ರೀ ಚಕ್ರಪಾಣಿ ಗೋಪಾಲವಿಠಲ ಕೇಳೊ
ನೀಚ ಎಂದರೆ ಎನ್ನ ಪೊರೆವರಾರೊ ೫

ಅಟ್ಟತಾಳ

ನೀನೊಲಿಯಲು ಅಜಭವಾದಿಗಳು ಒಲಿವರು
ನೀನೊಲಿಯಲು ಅಮರರು ಎಲ್ಲ ಕರೆವರು
ನೀನೊಲಿಯಲು ಅವನಿಯರೆಲ್ಲ ಒಲಿವರು
ನೀನೊಲಿಯಲು ಒಂದು ಬಾರದ್ದು ಎನಗಿಲ್ಲ
ದಿನವೆ ಒಂದು ಯುಗ ನಿನ್ನ ಕಾಣದ
ಘನಯುಗ ಒಂದಿನ ನಿನ್ನ ಕಾಣುವನಿಗೆ
ಕನಸೆ ಜಾಗ್ರವು ಮತ್ತೆ ಜಾಗ್ರವೆ ಕನಸಿನ್ನು
ಧನವೆ ನಿಧನವಯ್ಯ ಮನವೆರಗಿದವಗೆ
ನೆನೆದರೆ ಆಗೋದು ಸಕಲ ಸುಖವೆಲ್ಲ
ಇನಿತು ಇನಿತು ಎಂದು ವಿವರ ಪೇಳಲಿ ಸಲ್ಲ
ಧನ ವಸನವು ಪಶು ವನಿತೆ ಸುತರು ಮತ್ತೆ
ತನು ಆರೋಗ್ಯ ತಂದೆ ಜನನಿ ಸಹಿತಿನ್ನು
ಇನಿತು ಸುಖವುಯೆಲ್ಲ ಏಕವಾಗಿದ್ದವಗೆ
ಇನಿತು ಸುಖವು ಉಂಟು
ಇನಿತು ಸದೃಶ ಸ್ವಲ್ಪ ನೆನೆವ ಸುಖದ ಭೋಗ
ಅನುಭೋಗ್ಯನೆ ಬಲ್ಲ ಮನಜನೇನು ಬಲ್ಲ ಮಂದಬುದ್ಧಿಯವ
ಘನ ದಯಾನಿಧೆ ಗೋಪಾಲವಿಠಲ
ನಿನಗೆ ನೀ ಕರುಣಿಸಿ ನಿನ್ನವರವನೆನ್ನೊ ೬

ಆದಿತಾಳ

ಸಾಧನವೆ ಸಾಧ್ಯ ಸಾಧ್ಯ ಸಾಧನವು
ಕ್ರೋಧವೆ ಭಕುತಿಯು ಭಕ್ತಿಯು ಕ್ರೋಧವು
ಆದಿಯು ಅಂತ್ಯವು ಅಂತ್ಯವೆ ಆದಿಯು
ಭೇದವೆ ಅಭೇದವು ಅಭೇದವೆ ಭೇದವು
ನಾದದೊಳಗೆ ರೂಪ ರೂಪದೊಳಗೆ ನಾದ
ಸ್ವಾದದೊಳಗಸ್ವಾದಸ್ವಾದದೊಳಗೆ ಸ್ವಾದ
ಮಾಧುರ್ಯದೊಳಗೆಲ್ಲ ಮಾಧುರ್ಯ ವಸ್ತುವು
ಆದಿಮೂರುತಿ ದೇವ ನಿನ್ನನು ಭೋಗಿಸೆ
ಬಾಧೆ ಅವರು ತೋರರೊಂದಾದರವಗೆ
ಆದರಿಸುತ ಅಲ್ಲಿ ಇದ್ದ ಬಳಿಕ ಸ್ವಾಮಿ
ಕ್ರೋಧರಹಿತ ರಾಮಗೋಪಾಲವಿಠಲ
ಹಾದಿ ತೋರಿಸು ಪಥ ಯಾವುದು ಸಾಧನ ೭

ಜತೆ

ದಿನದಿನಕೆ ಅಭಿವೃದ್ಧಿ ಆಗಿ ನಿನ್ನಲಿ ಎನಗೆ
ಘನ ಜ್ಞಾನ ಭಕುತಿ ಕೊಡೊ ಗೋಪಾಲವಿಠಲ

೯೨

ಸುಳಾದಿ

ಧ್ರುವತಾಳ

ಆವ ಕರ್ಮಗಳಿನ್ನು ಆವ ಧರ್ಮಗಳಿನ್ನು
ಆವ ತೀರ್ಥಯಾತ್ರೆಯು ಆವಾವ ವ್ರತಂಗಳು
ಆವಾವ ಸಜ್ಜನರ ಸಹವಾಸಂಗಳು ಎಲ್ಲ

ಆವಾವ ವೇದಶಾಸ್ತ್ರ ದೇವತಾರ್ಚನೆಗಳೆಲ್ಲ
ದೇವ ನಿನ್ನ ಒಲಿಸುವ ಉಪಾಯಂಗಳು
ಆವಾವ ಪರಿ ಸಾಧನಂಗಳು ಎನ್ನು
ಈ ವಿಧಾನ ಸಾಧನಗಳಿನ್ನು
ತಾ ಒಪ್ಪಿಸಿ ಸಾಧನವ ಪೋಗಲಾಡಿಸಿತೋ
ನಾ ಒಂದರಿಯದಾದೆ ದೇವದೇವಾ
ಗೋವು ಕರೆದು ಪಾಲು ಹಾವಿಗೆರೆದಂತೆ
ಸಾವಿರ ಬಗೆ ಸಾಧನಂಗಳು ಎಲ್ಲ
ಈ ಉದ್ಧಾರಕ್ಕುಪಾಯವು ದಾವುದಯ್ಯ
ನೀ ಒಲಿವ ಬಗೆ ಇನ್ನಾವುದು ನಾನರಿಯೆ
ಭೂವಲ್ಲಭ ನಮ್ಮ ಗೋಪಾಲವಿಠಲರೇಯ
ಭಾವ ಶುದ್ಧದಿ ನಿನ್ನ ಸೇವಿಸದೆ ೧

ಮಠ್ಯತಾಳ

ಮನವು ಧನದಲ್ಲಿಟ್ಟು ಎಣಿಸಲು ಜೀವಂಗಳು
ಹಣವೆಣಿಕಲ್ಲದೆ ನಿನ್ನ ಎಣಿಸಲಿಲ್ಲ
ನೊಣನು ಅನ್ನದಲ್ಲಿಟ್ಟು ಉಣಕಲಿತರೆ ಇನ್ನು
ಗುಣ ಕೊಡಬಲ್ಲುದೆ ದಣಿಸದೆ ಬಿಡದನಕ
ಮನುಜ ಜಡನಾನು ಕುಣಿಯ ಕಾಣದೆ ಬಿದ್ದು
ಎಣಿಸುತಲಿದ್ದಂತೆ ಧನದ ವ್ಯಾಕುಲವಯ್ಯ
ಮಣಿಕಾಂಚನ ಮೃಣ್ಮಯ ಸಮವೆಂದು
ಮನದೊಳು ಮಾಡದೆ ಮನಸಿಜನಯ್ಯನೆ
ಎನಗೆ ನೀನೊಲಿಯೆ ನೀ ಬೋಧನಿತ್ತು ಇನಿತು ಕಾಣೆ
ನಿನಗೆ ನೀನೇ ಬಲ್ಲೆ ಎನಗಾವ ಸಾಧನೆಯ
ಕೊನೆ ಮೊದಲು ಕಾಣೆ ಗುಣಪೂರ್ಣ ಕಾಮನೆ
ಫಣಿಶಾಯಿ ನಮ್ಮ ಗೋಪಾಲವಿಠಲ
ತನುಮನದೊಡೆಯ ಅನುವರಿತು ಪೊರೆಯೋ ೨

ತ್ರಿಪುಟತಾಳ

ವಿಷಯಂಗಳೆಲ್ಲ ಇನ್ನು ವಿಷವೆಂದರಿದು ದು-
ರ್ವಿಷಯಕ್ಕೆರಗುವೆನೊ ದೆಸೆಗೆಟ್ಟು ಬರಿದೆ
ಹಸಿದು ಪೋಗಿ ಇನ್ನು ಅಸುರತನದಲೀಗ
ನಸುಗುನ್ನಿಕಾಯಿಯ ಮಸಳಿ ಮೆದ್ದರೆ
ತೃಷೆ ಹೋಗಬಲ್ಲದೆ ರಸ ಉಣ್ಣದನಕ
ಹಸಿಯ ವಸ್ತ್ರವ ಒಯ್ದು ಕೆಸರೊಳು ತುಳಿದರೆ
ಹಸನಾಗಬಲ್ಲುದೆ ವಸನಬೇಗ
ಬಿಸಜಾಕ್ಷ ನಿನ್ನ ಕರುಣ-
ರಸವೆಂಬ ಮಡುವಿನೊಳು ಶರೀರ ತೊಯಿದು
ಬಿಸಜಚರಣವ ತೋರೋ
ಕಸವ ಕಿತ್ತು ಕಾಮಕ್ರೋಧಂಗಳೆಲ್ಲ
ಉಸುರಿದೆ ನಿನಗೆ ನಾ ಅಸುರಮರ್ದನ ರಂಗ
ವಸುದೇವಸುತ ನಮ್ಮ ಗೋಪಾಲವಿಠಲ
ವಿಷಯದಾಸೆಗೆ ಮನ ವಶಮಾಡದಿರೋ ೩

ಅಟ್ಟತಾಳ

ಮಾಡದೆ ಭಕುತಿಯ ಬೇಡದೆ ಮುಕುತಿಯ
ನೀಡಬಲ್ಲೆಯೊ ದೇವ ನೋಡುವರ ಪುಣ್ಯ
ಕಾಡಿಗೆಮಸಿ ಕನ್ನಡಿಗೆ ಪೂಸಿ ಇನ್ನು
ನೋಡಲು ಮೊಗವನ್ನು ಪಾಡಾಗೆ ತೋರೋದೆ
ಗಾಡಿಕಾರನು ತನ್ನೊಡಲಾಸೆಗೆ
ನಾಡೊಳಗಿಲ್ಲದಾಟಾಡಿ ಜನ ಮರುಳು
ಮಾಡಿ ಧನವನ್ನು ಕೂಡಿಸಿದಂದದಿ
ಆಡಿಪಾಡಿ ಹರಿದಾಸನೆಂದು ಜನರ
ಬೇಡುವುದಕೆ ದ್ರವ್ಯ ಮಾಡುವೆ ಭಕುತಿಯ
ನೋಡುವಂತೆ ಜನರು ರೂಢಿಯೊಳೆನ್ನಂಥ

ಮೂಢನಿಲ್ಲೆಲೊ ದೇವ ಈಡ್ಯಾರೊ ಎನಗಿನ್ನು
ಮಾಡೆ ಮನದವಗೆ ಮಾಡಲೆಂತೊ ಕೃಪೆ
ಬಾಡಿಗೆ ಮನೆ ದೇಹ ಬಿಡಾರ ಸ್ಥಿರವಲ್ಲ
ನಾಡದೈವರ ಗಂಡ ಗೋಪಾಲವಿಠಲ
ಗೋಡೆ ಮರೆಯ ಭಕ್ತಿ ಮಾಡಿದರೊಲುಮೆ ಇಲ್ಲ ೪

ಆದಿತಾಳ

ಇಷ್ಟು ನಾನಾಪರಿ ಚಿನ್ನ ಅಲಂಕಾರ
ಉಟ್ಟ ಪೀತಾಂಬರ ಕೊಟ್ಟ ಪಟ್ಟಾವಳಿ
ಅಷ್ಟ ಸಂಪತ್ತಿನ ದಿಟ್ಟ ಕನ್ನಿಕೆಯನು
ದೃಷ್ಟಿಯೊಳಗೆ ಸಮವಲ್ಲದ ಬಾಲೆಗೆ
ನೆಟ್ಟನೆ ಮೊಗದಲ್ಲಿ ಕುಷ್ಟವು ಇದ್ದರೆ
ನಷ್ಟ ಚೆಲುವಿಕೆ ಇನ್ಯಾತಕಯ್ಯ
ಕೃಷ್ಣ ನಿನ್ನಲ್ಲಿ ಭಕುತಿ ಪುಟ್ಟದಲೇವೆ ಇನ್ನು
ವೈಷ್ಣವನಾಗಿ ಉಳ್ಳಷ್ಟು ಕರ್ಮಮಾಡಲು
ಭ್ರಷ್ಟ ಜನ್ಮಂಗಳು ಹೋಗಬಲ್ಲುವೇನಯ್ಯ
ಹುಟ್ಟಿದರು ಗೌಡ ಹೆಸರು ಇಕ್ಕದಲೆ
ಕೆಟ್ಟ ಕಬ್ಬಲಿಗಗೆ ಕೊಟ್ಟರೆ ತಾಳೋನೆ
ಸೃಷ್ಟಿಗೊಡೆಯ ನಮ್ಮ ಗೋಪಾಲವಿಠಲ
ನಿಷ್ಠೆಲಿ ಕೊಡು ನಿನ್ನ ಮುಟ್ಟಿ ಪೂಜಿಸಲು ೫

ಜತೆ

ಜ್ಞಾನವೇ ಭಕುತರಿಗೆ ನೀನೊಲಿಯೊ ಎನಗಿನ್ನು
ದಾನವಾಂತಕ ರಂಗ ಗೋಪಾಲವಿಠಲ

೯೩

ಸುಳಾದಿ

ಧ್ರುವತಾಳ

ಆವನ್ನೀ ಧರೆಯ ವ್ಯಾಪ್ತನೆಂದೆನಿಸುವ
ಆವ ಪುರುಷನೆ ನಮ್ಮ ಸ್ವಾಮಿ ಕಾಣೊ
ಆವಾವ ನಿರ್ದೋಷ ಎಂದೆನಿಸುವನೊ
ಅವನೆ ಎನ್ನ ಭಾಗ್ಯದೊಡೆಯ ಕಾಣೊ
ಆವಾವ ಜ್ಞಾನಪೂರ್ಣ ಪೂರ್ಣನೆಂದೆನಿಪನೊ
ಅವನೆ ಎನ್ನ ಮನದೊಡೆಯ ಕಾಣೊ
ಆವಾವ ಸರ್ವತ್ರ ವ್ಯಾಪ್ತನಾಗಿಪ್ಪನೊ
ಅವನೆ ಎನಗೆ ಮುಖ್ಯ ವಿಷಯ ಕಾಣೊ
ಆವನಿಂದ ಜಾಗ್ರವು ಸೃಷ್ಟಿ ಸ್ಥಿತಿಲಯವು
ಅವನೆ ಎನ್ನ ದಾತಾಶ್ರಿತನು ಕಾಣೊ
ಆವನಿಂದ ಬಂಧಕ ಮೋಚಕಾದದೊ
ಅವನೆ ಈಗ ಮನವೆ ಪಿಡಿಯೊ ಕಾಣೊ
ಆವನ್ನ ಕಾವನ್ನ ಬಾವನ್ನ ತಾವನ್ನ
ಈವನ್ನ ಪಾವನ್ನ ಪೂರ್ಣ ಗುಣಸಂಪನ್ನ
ಮಾವನ್ನಮರ್ದನ ಗೋಪಾಲವಿಠಲನೆಂಬ
ದೇವನ್ನ ತಂದು ತೋರು ಅನುಭವಕ್ಕೆ ೧

ಮಠ್ಯತಾಳ

ರಮ್ಮೆಯ ಅರಸನ್ನ ಬೊಮ್ಮನೈಯ್ಯನ್ನ
ಮೊಮ್ಮಗನೆಂದೆನಿಪ ಹರನ ಪೊರೆವನ್ನ
ಸುಮ್ಮನಸರನೆಲ್ಲ ಪರಿವಾರವು ಮಾಡಿ
ಬೊಮ್ಮಾಂಡವೆ ಮನೆಯ ಗಮ್ಯನೆಂದೆನಿಪನ

ಸುಮ್ಮನೆ ಹೋಗಿನ್ನು ಒಮ್ಮನದಲ್ಲಿ
ಘಮ್ಮನೆ ಅಳಗಿರಿತಿಮ್ಮನ್ನ ಕರೆದು ತಾ
ನಮ್ಮ ಸ್ಥಿತಿಯ ಪೇಳಿ ಸಮ್ಮತಿಸಿಕೊಂಬ
ಇಮ್ಮನ ಬ್ಯಾಡಿದಕೆ ಈಗಲೆ ಸಮ್ಯ (ಸಮಯ ?)ಯಿದಕೆ
ನಮ್ಮ ಪೊರೆವ ದಾತ ಗೋಪಾಲವಿಠಲ
ಹಮ್ಮ ತೊರೆದು ಅಧಮ್ಮನೆಂದವಗೊಲಿವ ೨

ರೂಪಕತಾಳ

ಆವನಲ್ಲಿ (ಜೀವನಲ್ಲಿ) ಅಸ್ವತಂತ್ರವೆಂಬೋದು ಸಿದ್ಧ
ಅವನಲ್ಲೆ ಅವನಿರೂಪವ ? ಅನುಭವ ತೋರುತ
ಅವನೆ ಅವನ ಮಹಿಮೆಯನು ಬಲ್ಲವ
ಅವನೆ ಸಕಲ ವಿಧಿಯನು ಮಾಡಿದವ
ಪಾವನ್ನನಾಗುವ ಅವನೆ ಕಂಡರೆ ಮನುಜ
ಆ ವೇಳ್ಯದಲಿ ಮನವೆ ಅನುಭೋಗವಲ್ಲದೆ
ದೇವಕಿನಂದನ ಗೋಪಾಲವಿಠಲ ತ-
ನ್ನವನೆಂದವನಿಗೆ ತನ್ನ ತೋರಿಸಿಕೊಂಬ ೩

ಅಟ್ಟತಾಳ

ಕುಣಿದು ಕುಣಿಸುವ ಮಣಿದು ಮಣಿಸುವ
ಉಣಿಸುವನುಂಡು ತನಗಭೇದಾಗಿ
ಎಣಿಕೆ ತಟ್ಟುವನಲ್ಲ ಅನುಮಾನ ವಸ್ತಲ್ಲ
ಘನ ಜಾಗ್ರ ಪ್ರತಾಪ ನಿತ್ಯವ್ಯಕ್ತ ದೇವ
ಎಣಿಸು ಮನವೆ ನಿನ್ನ ಎಲ್ಲ ಪ್ರಾವರ್ತಕ
ಕ್ಷಣ ಕ್ಷಣಕೆ ಇನ್ನು ಕಾಣಿಸುವನು ಆ-
ರನು ನಾಚದೆ ಪಿಡಿಯಿನ್ನು ನೂಕು ಸಕಲ ಅಘ
ಕ್ಷೀಣಿಸಿ ಪೋಗುವುದಿದಕೆ ಅನುಮಾನ ಸಲ್ಲದು
ಘನಮಹಿಮ ನಮ್ಮ ಗೋಪಾಲವಿಠಲನ್ನ
ನೆನೆಸುವುದೆ ಸುಖ ನಿನಗದೆ ಬಹುಲಾಭ ೪

ಆದಿತಾಳ

ಭಕ್ತರಿಗೆ ಭಕ್ತನಾಗು ಮುಕುತಿ ಬೇಕಿಚ್ಛೆ ಇತ್ತೆ
ಸಕಲ ವಿಷಯದಿ ವಿರಕ್ತಿವುಳ್ಳವನಾಗು
ಕಕುಲಾತಿ ಬಿಡು ಇನ್ನೊಂದು ದೈವಿಲ್ಲಯೆಂದು
ಲಕುಮಿರಮಣಲ್ಲಾಸಕುತಿಯುಳ್ಳವನಾಗು
ಸಕಲ ವಿಧಿ ನಿಷೇಧ ಹರಿಗೆ ಆಧೀನವೆಂದು
ಉಕುತಿಗಳಿಂದ ಹರಿಯ ತುತಿಗೆ ದೀಕ್ಷಿತನಾಗು
ಭಕುತವತ್ಸಲ ರಂಗ ಗೋಪಾಲವಿಠಲ
ಸಕಲ ಬಂಧವ ಬಿಡಿಸಿ ಸುಖ ಅಂಬುಧಿಯೊಳಿಡುವ ೫

ಜತೆ

ಸ್ವತಂತ್ರಾಸ್ವತಂತ್ರ ತಿಳಿದವನಿಗೆ ಪರ-
ತಂತ್ರವಿದೂರ ಗೋಪಾಲವಿಠಲ ಒಲಿವ

೯೪

ಆವ ರೋಗವೊ ಎನಗೆ ದೇವಧನ್ವಂತ್ರಿ ಪ.

ಸಾವಧಾನದಿ ಕೈಯ ಪಿಡಿದು ನೀ ನೋಡಯ್ಯ ಅ.ಪ.

ಹರಿಮೂರ್ತಿಗಳು ಕಾಣಿಸವು ಎನ್ನ ಕಂಗಳಿಗೆ
ಹರಿಯ ಕೀರ್ತನೆಯು ಕೇಳಿಸದೆನ್ನ ಕಿವಿಗೆ
ಹರಿ ಮಂತ್ರ ಸ್ತೋತ್ರ ಬಾರದು ಎನ್ನ ನಾಲಿಗೆಗೆ
ಹರಿ ಪ್ರಸಾದವು ಜಿಹ್ವೆಗೆ ಸವಿಯಾಗದಯ್ಯ ೧

ಹರಿಪಾದ ಸೇವೆಗೆನ್ನ ಹಸ್ತಗಳು ಚಲಿಸವು
ಗುರುಹಿರಿಯರಂಘ್ರಿಗೆ ಶಿರ ಬಾಗದು

ಹರಿಯ ನಿರ್ಮಾಲ್ಯವಾಘ್ರಾಣಿಸದು ನಾಸಿಕವು
ಹರಿಯಾತ್ರೆಗಳಿಗೆನ್ನ ಕಾಲೇಳದಯ್ಯ ೨

ಅನಾಥಬಂಧು ಗೋಪಾಲವಿಠಲರೇಯ
ಎನ್ನ ಭಾಗದ ವೈದ್ಯ ನೀನೆಯಾದೆ
ಅನಾದಿ ಕಾಲದ ಭವರೋಗ ಕಳೆಯಯ್ಯ
ನಾನೆಂದಿಗು ಮರೆಯೆ ನೀ ಮಾಡಿದುಪಕಾರ ೩

೯೫

ಸುಳಾದಿ

ಧ್ರುವತಾಳ

ಏನೋ ನಿನ್ನ ಮಹಿಮೆ ಆನೇನು ಕೊಂಡಾಡುವೆ
ಜ್ಞಾನಾನಂದಕಾಯ ಲೋಕಮೋಹಕ ದೇವ
ದೀನಜನರಪಾಲ ದಿನಕರ ಶತತೇಜ
ಗಾನಲೋಲಪ್ರಿಯ ಗಾಯಿತ್ರಿ ಪ್ರತಿಪಾದ್ಯ
ಜಾನಕಿರಮಣನೆ ಜಗಸೃಷ್ಟ್ಯಾದ್ಯಷ್ಟಕರ್ತ
ದಾನವಾರಿಯೆ ರಂಗದಾಸರ ಮನದೊಡೆಯ
ಮಾನಭಿಮಾನಕರ್ತ ಮನ್ಮಥನ ಜನಕ
ಶ್ರೀನಾಥ ಸರ್ವೋತ್ತಮ ಶೃಂಗಾರ ಮೂರುತಿಯೆ
ಧ್ಯಾನದಿ ಭಕ್ತರಿಗೆ ದೀಪ್ತಿಸುತ ಪೊಳೆವನೆ
ನಾನಾ ಪದಾರ್ಥದಲ್ಲಿ ನಾನಾ ದೇಶಗಳಲ್ಲಿ
ನಾನಾ ಕಾಲಗಳಲ್ಲಿ ನೀ ನಿತ್ಯ ನಿತ್ಯತೃಪ್ತ
ಅನಾದಿ ಕಾಲದೈವ ಅಪ್ರಮೇಯ
ವಾಣಿ ಭಾರತಿ ಅಜ ಸುರರಿಂದ ವಂದಿತನೆ
ಕ್ಷೋಣಿಯೊಳಗೆ ಸಮವಿಲ್ಲದ ದೈವವೆ
ಧೇನಿಸಿ ನೋಡಲು ದಿನದಿನಕೆ ವಿಚಿತ್ರ

ಜ್ಞಾನಿಗಳರಸನೆ ಗರುಡವಾಹನರಂಗ
ಕಾಣರು ನಿನ್ನ ಗುಣಹೀನ ಮನುಜರಿನ್ನು
ತಾನೆ ನೀನೆಂಬುವಗೆ ಏನೆಂಬೆ ಹರಿಯೆ
ನೀನೆ ಗತಿ ಅಂತ ನಂಬಿದ ಭಕ್ತರಿಗೆ
ಊನವಾಗೋವು ದೋಷ ಅನಂತವಿದ್ದರನ್ನ
ನಾನು ನಿನ್ನ ಬಣ್ಣಿಸಿ ಏನು ಬೇಡುವುದಿಲ್ಲ
ರೇಣು ಎನಿಸು ಎನಿಸು ಎನ್ನ ಜ್ಞಾನಿಗಳ ಪಾದದ
ನಾನು ನನ್ನದು ಎಂಬೊ ಹೀನಮತಿಯಲಿಂದ
ಗಾಣದ ಎತ್ತಿನಂತೆ ತಿರುಗುವೆ ಧರೆಮೇಲೆ
ಭಾನುಶತತೇಜ ಗೋಪಾಲವಿಠಲ
ದೀನರಿಗೆಲ್ಲ ದತ್ತ ಪ್ರಾಣದೇವ ೧

ಮಠ್ಯತಾಳ

ಎಲ್ಲಿ ನೋಡಲು ನೀನು ಅಲ್ಲಲ್ಲಿ ವ್ಯಾಪ್ತನು
ಎಲ್ಲಿ ನೋಡಲು ನೀನು ಅಲ್ಲಲ್ಲಿ ಪೂರ್ಣನು
ಬಲ್ಲಿದವರಿಗೆ ಬಲ್ಲಿದ ಬಲ್ಲವಗತಿಸುಲಭ
ಸಲ್ಲುವುದೊ ಬಿರುದು ಎಲ್ಲಿ ನಿನಗೆ ಸಮ-
ವಿಲ್ಲವು ನಾ ಕಾಣೆ ಮಲ್ಲರ ಮರ್ದನ
ಹುಲ್ಲು ಕಲ್ಲಿನಲ್ಲಿ ಎಲ್ಲದಿ ಭರತನೆ
ಎಲ್ಲ ಕಾಲವು ನಮ್ಮನೆಲ್ಲರ ಸಲಹುವಿ
ಜಲಧಿ ಒಳಗೆ ಇನ್ನು ಕಮಲವು ಇದ್ದಂತೆ
ಎಲ್ಲವನು ತೊರೆದು ನಿಲ್ಲಿಸಿ ಮನವನ್ನು
ಸೊಲ್ಲು ಎತ್ತಿ ಪಾಹಿ ಇಲ್ಲೆ ಆರಾಧಿಸಲು
ಚೆಲ್ಲಿ ಪೋಗದವರ ಮೆಲ್ಲನೆ ನೀ ಹೃದಯದಲ್ಲಿ ನಿಂತು ತೋರಿ
ಫಿಲ್ಲಕೆಂದು ಕುಣಿದು ಉಳ್ಳಷ್ಟು ದೋಷ
ವೆಲ್ಲ ಪೋಗಲಾಡಿ ಸಲ್ಲುವಂಥ ಪದವಿ
ಭಳಿರೆ ಇತ್ತು ಪೊರೆವಿ ಫುಲ್ಲನಾಭನೆ ಚೆಲ್ವ ಗೋ-
ಪಾಲವಿಠಲ ಒಲ್ಲೆನೆಂದರೆ ಬಿಡ ಎಳ್ಳಷ್ಟು ಕ್ಲುಪ್ತಕೆ ೨

ತ್ರಿಪುಟತಾಳ

ನಿನ್ನ ಜ್ಞಾನವಂತನೆಂದು ಇನ್ನು ಜ್ಞಾನ ಸಂಪಾದಿಸುವೆ
ನಿನ್ನ ದೋಷದೂರನೆಂದು ಎನ್ನ ದೋಷಂಗಳಟ್ಟುವೆ
ನಿನ್ನ ಗುಣಪೂರ್ಣನೆಂದು ಗುಣವಂತನಾಗುವೆ
ನಿನ್ನ ಸುಖಪೂರ್ಣನೆಂದು ಸಂತೋಷದಿಂದಲಿರುವೆ
ನಿನ್ನ ಬಲಪೂರ್ಣನೆಂದು ಬಲವಂತನಾಗುವೆ
ನಿನ್ನ ಜನನಮರಣರಹಿತನೆಂತೆಂದು ಕೊಂಡಾಡಿ
ಮುನ್ನೆ ಧರೆಯ ಮೇಲೆ ಎನ್ನ ಜನನ ಕಳೆವೆ
ನಿನ್ನ ಜಾರವಂತನೆಂದು ಎನ್ನ ಜಾರತ್ವ ಕಳೆವೆ
ನಿನ್ನ ಕಂಸಾರಿ ಎಂತೆಂದು ಎನ್ನ ಸಂಸಾರ ನೀಗುವೆ
ನಿನ್ನ ದನುಜಮರ್ದನನೆಂದು ಎನ್ನ ಅರಿಗಳ ಗೆಲ್ಲುವೆ
ನಿನ್ನ ಭಕ್ತವತ್ಸಲನೆಂದು ಇನ್ನು ಭಕ್ತಿ ಸಂಪಾದಿಸುವೆ
ನಿನ್ನ ಕರುಣಾಳೆಂತೆಂದು ಎನ್ನ ಕರಣ ಶುದ್ಧನಾಗುವೆ
ನಿನ್ನ ತೊತ್ತಿಗೆ ತೊಂಡನಾಗಿ ನಿನ್ನ ಭೃತ್ಯನಾಗುವೆ
ನಿನ್ನವರ ಮನೆ ಮುಂದೆ ಕುನ್ನಿ ಆಗಿ ಆನಿರುವೆ
ನಿನ್ನ ತೀರಥ ಪ್ರಸಾದ ನಿನ್ನ ಎಂಜಲುಗಳುಂಡು
ನಿನ್ನ ಬೇಡಿ ನಿನ್ನ ಕಾಡಿ ನಿನ್ನ ಹಾಡಿ ಹಾರೈಸಿ
ಎನ್ನ ದಿನಗಳ ಕಳೆವೆ ಮುನ್ನೆ ಕ್ಲುಪ್ತ ಪರಿಯಂತರ
ಪುಣ್ಯವೊ ಪಾಪಗಳೊ ಎನ್ನಿಂದ ಮಾಡಿಸೋ ಕಾರ್ಯ
ಮುನ್ನೆ ಏನಿದಕೆ ಫಲವೊ ನಿನಗೆ ನೀನೆ ಬಲ್ಲೆಯ
ಇನ್ನು ನಾ ಒಂದು ಬಲ್ಲೆನು ನಿನ್ನನೆ ಗತಿ ಎಂಬೋದು
ಚಿನ್ಮಯ ಮೂರುತಿ ಗೋಪಾಲವಿಠಲರೇಯ
ಧನ್ಯನಾಗುವೆ ಕೇಳು ನಿನ್ನವರ ಬಳಿವಿಡಿದು ೩

ಅಟ್ಟತಾಳ

ಹೀನರ ಒಳಗೆಲ್ಲ ಹೀನನು ನಾ ಬಲು
ಮಾನವರೊಳಗೆಲ್ಲ ಮಾನಗೇಡಿ ಬಲು

ದೀನರ ಒಳಗೆಲ್ಲ ದೀನನು ನಾ ಬಲು
ಹೀನ ದೀನ ಅಜ್ಞಾನಕೆಲ್ಲ ನಿನ್ನ
ಧ್ಯಾನ ನಾಮಬಲ ನಾನೊಂದು ಮಾಡಲು
ತಾನು ಇದರ ಮುಂದೆ ಏನೇನು ಮಾಳ್ಪವು
ಜಾಣ ಸುಂಕರಿಗಂಡವ(ವಾ)ನು ? ಬಂದರೆ ಇನ್ನು
ಗೋಣಿಯನೊಪ್ಪಿಸಿ ತಾನು ಸುಮ್ಮನಾಗೆ
ಏನು ಮಾಡುವನವ ಕ್ಷೋಣಿಯ ಒಳಗಿನ್ನು
ಶ್ರೀನಾಥ ನಿನ್ನ ದಾಸನಾದವನ ಇನ್ನು
ನಾನು ಕಾರಣವಲ್ಲ ಏನೇನು ಮಾಡೋವು
ದಾನವಾಂತಕ ರಂಗ ಗೋಪಾಲವಿಠಲ
ಮಾನಾಭಿಮಾನಕೆ ನೀನೆ ಗತಿಯೊ ದೇವ ೪

ಆದಿತಾಳ

ಜನರಲ್ಲಿ ಮನ ಹೋಗೆ ನಿನಗೆ ಹೋಯಿತು ಇನ್ನು
ಧನದಲ್ಲಿ ಮನ ಹೋಗೆ ನಿನಗೆ ಹೋಯಿತು ಇನ್ನು
ದಿನದಲ್ಲಿ ಮನ ಹೋಗೆ ನಿನಗೆ ಹೋಯಿತು ಇನ್ನು
ಗುಣದಲ್ಲಿ ಮನ ಹೋಗೆ ನಿನಗೆ ಹೋಯಿತು ಇನ್ನು
ಉಣಿಸಲ್ಲಿ ಮನ ಹೋಗೆ ನಿನಗೆ ಹೋಯಿತು ಇನ್ನು
ಕುಣಿದಾಡು ಮನ ಹೋಗೆ ನಿನಗೆ ಹೋಯಿತು ಇನ್ನು
ಎಣಿಸಲು ಮನ ಹೋಗೆ ನಿನಗೆ ಹೋಯಿತು ಇನ್ನು
ಅಣಕಿಸ ಮನ ಹೋಗೆ ನಿನಗೆ ಹೋಯಿತು ಇನ್ನು
ಅನುವುದಪ್ಪಿದುವೆಲ್ಲ ಅನುವು ಮಾಡಿನೋಡೆ
ನಿನಗೆ ಕಾರಣವಯ್ಯ ನೀನಿಲ್ಲದಾರಿಲ್ಲ
ನೀನು ಮಾಡಿಸಿದುದು ನಿನಗೆ ಸಮರ್ಪಿತ
ನಿನಗೆ ನೀನೇಗತಿ ಎನಗೆ ನೀನೇಗತಿ
ಘನಮಹಿಮ ನಮ್ಮ ಗೋಪಾಲವಿಠಲರೇಯ
ಅನುವು ತಪ್ಪಿದುವೆಲ್ಲ ಅನುವು ಮಾಡಿ ಪೊರೆಯೊ ೫

ಜತೆ

ನೀನು ಅನಾದಿಸ್ವಾಮಿ ನಾನು ಅನಾದಿಭೃತ್ಯ
ನೀನೆ ನೀನೆ ಗತಿಯೊ ಗೋಪಾಲವಿಠಲ

೯೬

ಒಗತನದೊಳು ಸುಖವಿಲ್ಲ ಒಲ್ಲೆಂದರೆ ನೀ ಬಿಡೆಯಲ್ಲ ಪ.

ಜಗದೊಳು ಹಗರಣ ಮಿಗಿಲಾಯಿತು ಪನ್ನಂಗನಗನಗರ ನಿವಾಸ ಅ.ಪ.

ಮೂರು ಬಣ್ಣಿಗೆಯ ಮನೆಗೆ ಮೂರೆರಡು ಭೂತಗಳು
ಮೂರು ನಾಲ್ಕು ಪ್ರಾಕಾರಕ್ಕೆ ಮೂರಾರು ಛಿದ್ರಗಳು
ಮೂರು ಅವಸ್ಥೆಯು ದಿನಕೆ ಮೂರುನೂರಾರುಹತ್ತರಲ್ಲಿ
ಮೂರು ವಿಧದ ಅನ್ನದಿಂದ ಮೂರುತಾಪಕ್ಕಾರೆ ೧

ಐದುಮಂದಿ ಭಾವನವರು ಐದುಮೈದುನರು ಕೂಡಿ
ಐದುಪರಿ ತಾನಾಗಿ ಮಾವನೈದು ಕತ್ತಲೆಕೋಣೆ –
ಗೈದುವಂತೆ ಮಾಡುವರು ಐದುತಂದು ಬೆಚ್ಚಿಸುವರು
ಐದನೆ ಬೊಕ್ಕಸದಮನೆ ಎಲ್ಲಿದೆಯೊ ನಾ ಕಾಣೆ ೨

ಆರಾರು ಎರಡುಸಾವಿರ ದಾರಿಲಿ ಹೋಗಿ ಬರುವರು
ಆರುಮೂರು ಮೂರುಸಾವಿರದಾರುನೂರು ನಿತ್ಯದಿ
ಆರುನಾಲ್ಕು ಮಂದಿ ಹಿರಿಯ ಪಾರುಪತ್ಯಗಾರರಿದಕೆ
ಆರು ಎರಡು ವಿಧದಲೆನ್ನ ಗಾರುಮಾಡುತಿಪ್ಪರೊ ೩

ಒಬ್ಬ ಬೆಳಕು ಮಾಡುವ ಮತ್ತೊಬ್ಬ ಕತ್ತಲೆಗೈಸುವ
ಒಬ್ಬ ಎರಡೂ ಮಾಡುವ ಮೇಲೊಬ್ಬ ನಿಂತು ನೋಡುವ
ಒಬ್ಬ ಮೂವರ ಒಳಗೊಳಗೆ ಹಬ್ಬಿಕೊಂಡು ಇರುವನಂತೆ
ಒಬ್ಬನ ಕಾಣದೆ ನಾ ತಬ್ಬಿಬ್ಬಿಗೊಳಗಾದೆ ೪

ಆರುಹತ್ತರ ಮೂಲದಿ ಆರುಮಂದಿ ಬಿಡದೆ ಎನ್ನ
ಘೋರೈಸುವರೊ ಮರುಳೊಂದು ವಿಚಾರ ಮಾಡಲೀಸರೊ

ಆರುಮೂರು ವಿಧದ ಸೋಪಸ್ಕಾರ ಒಂದಾದರು ಇಲ್ಲ
ಆರೆ ಇಬ್ಬರು ಸವತೇರ ಹೋರಾಟಕೇನೆಂಬೆ ೫

ಹಡೆದ ತಾಯಿ ಮಾಯದಿ ಹಿಡಿದು ಬದುಕು ಮಾಡಿಸುವಳು
ಒಡಹುಟ್ಟಿದ್ದೈವರೆನ್ನ ಕಡೆಗಣ್ಣಿಂದೀಕ್ಷಿಸರೊ
ಬಿಡದೆ ಹತ್ತಿರ ಕಾದಿಪ್ಪ ನುಡಿಸನು ಹಿರಿಯಣ್ಣನವನ
ಮಡದಿಯ ತ್ಯಾಗಕ್ಕೇನೆಂಬೆ ತನ್ನ ಒಡವೆ ಲೇಶವೀಯಳೊ ೬

ಅತ್ತೆ ಅತ್ತಿಗೆಯು ಎನ್ನ ಸುತ್ತಮುತ್ತ ಕಾದುಕಟ್ಟಿ
ಎತ್ತ ಹೋಗಲೀಸರೊ ನಿನ್ನತ್ತ ಬಾರಲೀಸರೊ
ಹೊತ್ತಿ ಬಂದೊದಗಿ ನೃಪನ ಭೃತ್ಯರು ಎಳೆದೊಯ್ವಾಗ
ಹೆತ್ತಯ್ಯ ನೀ ಬಿಡಿಸದಿರಲು ಮತ್ಯಾರು ಗತಿ ಪೇಳೊ ೭

ಮನೆಯೊಳು ನಾಳಿನ ಗ್ರಾಸಕ್ಕನುಮಾನ ಸಂದೇಹವಿಲ್ಲ
ಋಣದಿಂದ ಕಡೆಹಾಯ್ವ ಮಾರ್ಗ ಲೇಶ ನಾ ಕಾಣೆ
ಎಣಿಸಲು ಈ ಕಾಲಪುರುಷನ ಬಂಧನದಿಂದ ನಾನಿಷ್ಟು
ದಣಿದೆನು ಇನ್ನು ನಿನ್ನಣುಗರೊಳಗಾಡಿಸೊ ೮

ನಿನ್ನ ಹೊಂದಿ ಇಷ್ಟು ಬವಣೆಯನ್ನು ಬಡಲೀ ಜನರು
ನಿನ್ನ ದೂರಿ ನಗುವರೋ ನಾನಿನ್ನು ತಾಳಲಾರೆ
ಘನ್ನ ಕರುಣಿ ಸೌಭಾಗ್ಯಸಂಪನ್ನ ಗೋಪಾಲವಿಠಲ
ಬಿನ್ನಪವ ಚಿತ್ತೈಸಿ ನೀ ಮನ್ನಿಸಯ್ಯ ಮಾಧವ ೯

೯೭

ಜಯನಾರಸಿಂಹ ಕಾಯೊ ಪ.

ಘೋರ ಅಕಾಲ ಮೃತ್ಯು ಮೀರಿ ಬರುವುದು ಕಂಡು
ವೀರ ನೀ ಬಿಡಿಸದಿದ್ದರೆ ಇನ್ನಾರೊ ಶ್ರೀನರಸಿಂಹ ಕಾಯೊ ೧

ಭೀಷಣನೆ ಸುಭದ್ರ ದೋಷ ಮೃತ್ಯುವಿಗೆ
ಮೃತ್ಯು ಸುಷುಮ್ನನಾಡೀಸ್ಥಿತ ಪ್ರಭುವೆ ೨

ಜ್ಞಾನರಹಿತನಾಗಿ ನಾ ನಿನ್ನ ಮರೆತರೆ
ನೀನೆನ್ನ ಮರೆತಿದ್ದ್ಯಾತಕೆ ಪೇಳೊ ೩

ಪ್ರಬಲತಮನೆನಿಸಿ ಅಬಲರು ಕಾಡಿದರೆ
ಸುಬಲರು ಕಂಡು ಮೆಚ್ಚುವರೇನೊ ೪

ಪಾಲ ಮುನ್ನಿಗನಾದ ಪದುಮ ಮನೋಹರ ಗೋ-
ಪಾಲವಿಠಲ ಜಗತ್ಪಾಲ ಶ್ರೀ ನಾರಾಯಣ ೫

೯೮

ಉಗಾಭೋಗ

ತನ್ನನರಿಯದೆ ಅನ್ಯರ ಬಲ್ಲೆನೆಂಬುದಕಿಂತ
ಕಣ್ಣು ಇಲ್ಲದ ಈಪರಿ ಮಾನ ಉಳಿಸಯ್ಯ ಅ-
ಜ್ಞಾನಿಗಳ ಮುಂದೆನ್ನ ನಾನು ಎಂಬುದು ಬಿಡಿಸು
ಸಕಲ ಕರ್ತೃತ್ವದೊಳು ನೀನು ಎಂಬೋದು ತಿಳಿಸು
ಅಲ್ಲಲ್ಲಿ ಶ್ವಾನ ಸೂಕರ ನಾನಾ ಯೋನಿಗಳು ಇರಲಿ
ಜ್ಞಾನವಿದು ಒಂದೀಯೊ
ದೀನರೊಡೆಯ ಜ್ಞಾನಮಯ ಗೋಪಾಲವಿಠಲ
ಮೌನಿಗಳರಸ ನಮೋ ಎಂಬೆನೊ

೯೯

ಸುಳಾದಿ

ಧ್ರುವತಾಳ

ದೀನ ರಕ್ಷಕ ನಿನ್ನಾಧೀನದವ ನಾನು
ದಾನ ಬೇಡಿದೆ ನಾ ಧರ್ಮವಂತ
ಪ್ರಾಣಿಮಾತ್ರಕೆ ಹಿಂಸೆ ಪಾಪವೆನ್ನಿಂದೆನ್ನ ಬೇಡ

ನಾನಾ ಜೀವರಲ್ಲಿ ನಿನ್ನಂತೆ ತಿಳಿಸೊ
ಗೇಣು ಒಡಲಿಗಾಗಿ ಗೆದ್ದು ಹೋಗುವ ಮಾತು
ಏನಾದರೇನು ಎಂದೆಂದಿಗು ಬೇಡ
ಗಾಣಿಗ ತಿಲವ ಪಿಡಿದು ಗಟ್ಟಿಸಿ ತೈಲ ತೆಗೆದು
ದಾನವ ಮಾಡಿದಂತೆ ಧರ್ಮ ಒಲ್ಲೆ
ಮಾನಸದೊಳಗೆ ನಿನ್ನ ಮೂರುತಿ ಎನಗೆ ತೋರಿ
ಹೀನ ಕರ್ಮಗಳೆಲ್ಲ ಹಿಮ್ಮೆಟ್ಟಿಸೊ
ಶ್ರೀನಿವಾಸ ರಂಗ ಗೋಪಾಲವಿಠಲ
ಕಾಣೆನೋ ನೀನಲ್ಲದಾರೊಬ್ಬರಿನ್ನೆಂದಿಗೆ ೧

ಮಠ್ಯತಾಳ

ಮಾಯಾಧರನ ಮಾಯ ತಿಳಿಯದನಕ
ಮಾಯವ ನೀಗೊ ಉಪಾಯವ ಬಲ್ಲೆನೆ
ಮಾಯ ಪೊಂದಿಸುವುದು ನಿನ್ನ ಅಧೀನವೊ
ಮಾಯ ಬಿಡುವುದು ನಿನ್ನ ಅಧೀನವೊ
ಕಾಯಕ್ಲೇಶವ ಬಿಟ್ಟು ಕರ್ಮವ ಮಾಡಿದರೆ
ರಾಯ ನಿನ್ನ ಒಲುಮೆ ಆಯತಾಗುವುದೆ
ಮಾಯಾರಹಿತ ದೇವ ಗೋಪಾಲವಿಠಲನ
ಪಾಯಸ ತುಪ್ಪೆಂನ್ನಂಥ ನಾಯಿಗೆ ದೊರಕುವುದೆ ? ೨

ತ್ರಿಪುಟತಾಳ

ಗೋದಿಯ ಹೊಲದೊಳಗೆ ಹಾದಿ ದೊರಕಿದರೆ
ಆದರದಿ ಮನೆಮನೆಗೆ ಹೋಗಿ ಔತಣ ಪೇಳಿ
ಭೂದೇವ್ಯ ಮೇಲೆ ಭಕ್ಷ್ಯ ಸಂಖ್ಯೆಯ ಬರೆದು
ಪೋದ ಪೋದ ಜನಕೆ ಉಣಿಸೋರೇನೊ
ಮಾಧವಗಿನ್ನು ಸಾಧಿಸುತ ಸ್ವಲ್ಪ
ಆದೀತೆಂದು ಇನ್ನು ತಿಳಿಯದಲೆ
ವಾದಿಸುತಲಿ ತತ್ವ ಬರೆದೊರೆದು ಪರರಿಗೆ

ಬಾಧಿಸಿ ಬೋಧಿಸ ಪೇಳಿದೆನೊ
ಆದದ್ದು ಇದರೊಳಗೆ ಒಂದಾದರು ಕಾಣೆ
ಓದನಕೆ ಉಪಾಯ ಆಯಿತಲ್ಲ
ಶ್ರೀದೇವಿ ಅರಸ ಗೋಪಾಲವಿಠಲ ನಿನ್ನ
ಪಾದಕಮಲ ನಿರುತ ಸ್ವಾದವೆನಗೆ ತೋರೊ ೩

ಅಟ್ಟತಾಳ

ಇಂದು ಎನ್ನೊಳಗೆ ನೀ ಬಂದು ನಿಂದೆಯೊ ದೇವ
ಅಂದು ನಾ ನಿನ್ನವ ಇಂದು ನಿನ್ನವನೆ
ಒಂದಕೆ ಎನಗೊಂದು ಭೌತಿಕ ದೇಹವ
ಚೆಂದದಲಿತ್ತು ದೂರದಿಂದ ನೋಡುತಲಿದ್ದು
ಅಂದವು ನಿನಗಿದು ಆಟವಾಗಿದೆ ಒಂದು
ಇಂದಿರಾಪತಿ ಎಮ್ಮ ಕುಂದುಗಳೇನಯ್ಯ
ಹಿಂದು ಇಂದು ಮುಂದು ಎಂದೆಂದಿಗೆ ನಿನ್ನ
ಪೊಂದಿದವರ ಮನೆ ಕಂದ ನಾನಯ್ಯ ದೇವ
ಕಂದರ್ಪಜನಕ ಗೋಪಾಲವಿಠಲ ನಿನ್ನ
ಸಂದರುಶನದಿಂದ ನಂದವಬಡಿಸು ೪

ಆದಿತಾಳ

ಬೇಡುವರನಂತ ನೀಡುವ ನೀನೊಬ್ಬ
ಮಾಡುವಿ ಕರುಣವು ಮಾಡಿದರಿತು ಇನ್ನು
ಬಿಡುವಿ ನೀ ಭಕುತರನ ಭಕುತಿಯನ್ನು
ಮಾಡುವ ಸ್ವಾತಂತ್ರ್ಯ ಕೊಡುವುದೆಮಗಿನ್ನು
ನೀಡಿದರೆನಗುಂಟು ನೀಡದಿದ್ದರೆ ಇಲ್ಲ
ಕೋಡಗನ ಕೊರವ ಆಡಿಸಿದಂತೆ ನೀ
ನಾಡ ವಿಷಯಂಗಳಿಗೆ ಓಡಿ ಆಡಿಸಿ ಎನ್ನ
ಕೇಡು ಮಾಡಿಸಿ ದೂರ ನೋಡುವಿ ಕರುಣದಿ
ಗಾಢ ಅಹಂಕಾರವು ನೀಡದಲೆ ಎನ್ನಲ್ಲಿ

ಕಾಡೊ ದುರಿತ ಹೋಗಲಾಡಿಸಿ ಪೊರೆ ಎನ್ನ
ನಾಡದೈವರಗಂಡ ಗೋಪಾಲವಿಠಲ
ಬೇಡುವೆ ನಿನ್ನನು ಬೇಡೆನೊ ಅನ್ಯರ ೫

ಜತೆ

ಸ್ವತಂತ್ರ ನೀನು ಅಸ್ವತಂತ್ರತರ ನಾನು
ದಾತರದಾತ ಗೋಪಾಲವಿಠಲರೇಯ

೧೦೦

ನಾಳೆ ಬರುವೆನೆಂದು ಹೇಳಿ ಮಧುರೆಗೆ ಪೋದ ಬ-
ಹಳ ದಿನವಾಯಿತಲ್ಲೊ ಉದ್ಧವ ಪ.

ಕೇಳಿದ್ಯಾ ನೀ ಬಾಹ ವೇಳೆಯಲಿ ಕೃಷ್ಣನ
ಆಲೋಚನೆಯೊಳಿದ್ದೆವೊ ಅ.ಪ.

ಪಳ್ಳಿವಾಸಿಗಳು ನಾವು ಪರಿಪರಿ ಅಲಂಕರಿಸಿ ಒಲಿಸಿಕೊಂಬುದನರಿಯೆವೊ
ಗೊಲ್ಲ ಸತಿಯರು ಸದಾ ಗೋರಕ್ಷಕರು ಮೈಯ ಹೊಲೆ
ತೊಳೆಯಲರಿಯೆವೊ
ಬಲ್ಲಿದನ ಸಹವಾಸ ಮಾಡ್ಯವನ ಮಹಿಮೆಯನೆಲ್ಲ ತಿಳುಹಿಸಿಕೊಂಡೆವೊ
ಚಲ್ಲೆಗಂಗಳ ಚಪಲೆಯರು ಮಧುರೆ ನಾರಿಯರ ಒಲಪಿಗೆ ನಾವೆದುರೇನೊ ?೧

ಚೊಕ್ಕನಾದ ನಿತ್ಯ ತೃಪ್ತನಿಗೆ ಬೆಣ್ಣೆ ಕಳವಿಕ್ಕಿದೆವಲ್ಲವೊ
ಸಿಕ್ಕಿಸಿಕೊಂಡು ರಾಸಕ್ರೀಡೆಯೊಳವಗೆ ಸೊಕ್ಕಿನುಕ್ತಿಯ ನುಡಿದೆವೊ
ಕಕ್ಕುಲಾತಿಲಿ ಕಾಮಾಸಕ್ತರಿಗಿವ ನಮಗೆ ದಕ್ಕಿದನು ಎಂತಿದ್ದೆವೊ
ವಕ್ರಗತಿಯಾಗಿ ಅಕ್ರೂರ ಬಂದ್ಯೆಮ್ಮ ಚಕ್ರಧರನಗಲಿಸಿದನೊ ೨

ಧೀರ ಸ್ವರಮಣ ದೋಷದೂರನ್ನ ಅಲ್ಪ ಬಹುಜಾರನೆಂದರಿತೆವಲ್ಲೊ
ಆರಾರ ಮನಕಿನ್ನು ತೋರದವನ ನಮ್ಮ ಓರಗೆಯವನೆಂದರಿದೆವೊ

ಮುರಾರಿ ಅಜ ಪರಿವಾರದೊಡೆಯನ ನಾವು ಪೋರನೆಂದಾಡಿಸಿದೆವೊ
ನಾರಿಯರು ನಾವಲ್ಪ ದಾರಿದ್ರ್ಯ ದಷ್ಟರಿಗೆ ಶ್ರೀರಮಣನೆಂತೊದಗುವನೊ ೩

ನಿಧಿಯ ಬದಿಲಿದ್ದರು ವಿಧಿಸುವುದನರಿಯದೆ ಮದಡೆಯರಾದೆವೊ
ಮದನನಾಟಕೆ ಮನವಿಕ್ಕಿ ಅವನಿಂದೊಂದು ತತ್ವ ತಿಳಿಯಲಿಲ್ಲೊ
ಚದುರೆಯರು ನಮ್ಮ ಬಿಟ್ಟು ಕದಲನಿವನೆಂತೆಂಬ ಮದದಿ ಮೋಸಹೋದೆವೊ
ಮಧುರೆಯಿಂದೆಮ್ಮ ತಮ್ಮ ಹೃದಯದೊಳಿಪ್ಪನೆಂದು
ಚದುರ ಪೇಳಿಹನಂತೆಲೊ ೪

ಮತಿ ತಪ್ಪಿದೆವೊ ನಾವು ಸತಿಯರೆಲ್ಲೊಂದಾಗಿ ರಥವ ನಿಲಿಸದೆ ಹೋದೆವೊ
ಹಿತರಾರು ನಮಗೆ ಸಾರಥಿ ನಿನ್ನ ಸಹಾಯ ದೊರೆತರೆತನವ ಮಾಳ್ಪೆವೊ
ಪಥವ ತೋರಿಸೊ ನಮಗೆ ಮುಂದೆಮ್ಮ ಚೆಲ್ವ ಶ್ರೀಪತಿಯು ಬಂದೊದಗುವಂತೆ
ಗತಿಯಾರೊ ಅವನ್ಹೊರತು ಗೋಪಾಲವಿಠಲ ಅಚ್ಯುತನ ಮಹಿಮೆ ಕಾಣೆವೊ ೫

೧೦೧

ಸುಳಾದಿ

ಧ್ರುವತಾಳ

ನಿನ್ನ ಚಿತ್ತ ಎನ್ನ ಭಾಗ್ಯ ಇನ್ನೊಬ್ಬರೆನಗಿಲ್ಲ
ಮನ್ನಣೆ ಅಮನ್ನಣೆ ನಿನ್ನದೋ ಸರ್ವೇಶನೆ
ಬೆನ್ನು ಕೊಟ್ಟೆನೊ ನಿನಗೆ ಎನ್ನ ಏನನ್ನ ಮಾಡು
ಕಣ್ಣಿಲಿ ಕಂಡಷ್ಟು ಎನ್ನ ಕೇಳೋಣ
ನಿನ್ನ ಬಣ್ಣಿಸಿ ನಾನು ಘನ್ನ ಬೇಡುವುದಿಲ್ಲ
ಎನ್ನದೆಂಬೊ ಅಹಂಕಾರವನ್ನು ಬಿಡಿಸೊ ದೇವ
ಎನ್ನ ಸಂಕಲ್ಪವೆಲ್ಲ ನಿನ್ನ ಅಧೀನವಯ್ಯ
ನಿನ್ನ ಸಂಕಲ್ಪಕಿನ್ನು ಭಿನ್ನ ಭಿನ್ನಗಳಿಲ್ಲ
ನಿನ್ನಿಚ್ಛೆ ನೀ ಪ್ರೇರಕ ನಿನ್ನದೊ ಎನ್ನ ಭಾರ
ಇನ್ನು ಮುನ್ನೆಂದೆಂದು ಇನ್ನಿದೆ ಸಿದ್ಧವಯ್ಯ

ಇನ್ನೊಂದು ನಾನರಿಯೆ ಎನ್ನೊಡೆಯನೆ ಕೇಳೊ
ಮನ್ನವಚನಕಾಯದಿ ಇನ್ನೊಂದು ಹಾರೈಸೆ
ಬಿನ್ನಹ ಮಾಡಿದೆನೊ ನಿನ್ನ ನಿಲ್ಲಿಸಿಕೊಂಡು
ಚಿನ್ಮಯ ಮೂರುತಿ ಗೋಪಾಲವಿಠಲ
ನಿನ್ನ ಬೇಡುವೆನಲ್ಲದೆ ಅನ್ಯರಿಗೆ ಆಲ್ಪರಿಯೆ ೧

ಮಠ್ಯತಾಳ

ನಿನ್ನಿಂದಲಿ ದತ್ತ ಇನ್ನಾಗದ ವಸ್ತು
ಅನಂತವಿತ್ತರು ಇನ್ನೊಲ್ಲೆ ಇನ್ನೊಲ್ಲೆ
ಅನ್ಯಕರ್ಮವ ಮಾಡಿ ಅನ್ಯದೈವವ ಬೇಡಿ
ಎನ್ನುದರ ಪೂರ್ತಿಯಿನ್ನು ಮಾಡೋಕಿಂತ
ಬನ್ನಗೆಟ್ಟವನಾಗಿ ಅನ್ಯವಿಷಯ ಬಿಟ್ಟು
ನಿನ್ನವನಾಗಿನ್ನು ಅನ್ಯವಿಲ್ಲದೆ ಅ-
ರಣ್ಯವ ಸೇರಿನ್ನು ಹಣ್ಣುಹಂಪಲು ಮೆದ್ದು
ನಿನ್ನ ವಿಷಯ ಕರ್ಮ ನಿನ್ನ ವಿಷಯ ಧರ್ಮ
ಇನ್ನೇನಾದದ್ದು ನಿನ್ನ ಪರವ ಮಾಡಿ
ಎನ್ನ ಇಡಿಸಿದರೆ ಘನ್ನ ಉಪಕಾರವು
ಇನ್ನೆಂದಿಗೆ ಮರೆಯೆ ಚಿನ್ಮಯಮೂರುತಿ ಗೋಪಾಲವಿಠಲ
ನಿನ್ನ ಚಿತ್ತಕೆ ಬಾರದ್ದಿನ್ನೆಂದಿಗು ಒಲ್ಲೆ ೨

ರೂಪಕತಾಳ

ಹಾಗೆ ಇತ್ತೇ ಇನ್ನು ಹಾಗೆ ಆಗಲಿ ದೇವ
ಹೀಗೆ ಇತ್ತೇ ಇನ್ನು ಹೀಗೆ ಆಗಲಿ ದೇವ
ಹಾಗೆ ಹೀಗೆ ಇನ್ನು ಎರಡೂ ಆಗಲಿದೇವ
ಆಗಲಂಜುವನ್ಯಾರು ಈಗ ಅಳುಕುವನ್ಯಾರು
ಆಗುವಂಥ ಕಾರ್ಯ ಆಗಲೀಸನು ಯಾರು
ಆಗದಂಥ ಕಾರ್ಯ ಆಗು ಮಾಡುವನ್ಯಾರು
ಬಾಗಿದೆ ನಿನ್ನ ಚರಣಂಗಳಿಗೆ ನಾನು

ಹೇಗಾದರು ಲೇಸೆ ನೀನಿತ್ತ ಭಾಗ್ಯಕೆ
ಹೋಗ್ಲೊರಡೆಂದರೆ ಆಗೋದೆ ಎನ್ನಿಂದ
ಸಾಗಿ ಸಾಗಿ ಇನ್ನು ತೂಗೆ ತೊಟ್ಟಿಲು
ಹೋಗಿ ಹೋಗಿ ತನ್ನ ಸ್ಥಳಕೆ ನಿಲ್ಲುವುದು
ಸಾಗರಶಯನ ಗೋಪಾಲವಿಠಲರೇಯ
ಭೋಗ ತೀರಿಸಿ ದಾಸನಾಗ ಮಾಡೊ ದೇವ ೩

ಝಂಪೆತಾಳ

ನೀ ನಿತ್ಯ ನಾ ನಿತ್ಯ ಅನಾದಿಕಾಲದಿ
ಏನು ಆಗುವ ಪ್ರೀತಿ ನಿನ್ನಿಂದಲೆನಗೆ
ಕಾಣದೊಂದುಂಟೆ ನಿನ್ನ ಕಂಡವರಿಗೆ
ಜಾಣತನವೇಕೆ ಎನ್ನೊಡನೆ ಛಲಬೇಡ
ಪ್ರಾಣರಿಗೊಂದೊಂದು ಅನಿತ್ಯ ವಸ್ತುಗಳಲಿ
ಏನು ಭ್ರಮೆ ಪುಟ್ಟಿಸಿ ಮರುಳು ಮಾಡುವೆ ದೇವ
ಶ್ರೀನಾಥ ನಿನ್ನ ಸಾಹಸಕ್ಕೆ ನಾನೇನೆಂಬೆ
ಧೇನಿಸಿ ನೋಡೆ ಶತಾನಂದಗೆ ವಶವಲ್ಲ
ಕಾಣುವನೆ ಎನ್ನಂಥ ನರಗುರಿಯು ನಿನ್ನನು
ಶ್ರೀನಿವಾಸನೆ ನಮೋ ನಮೋ ಎಂಬೆನೊ
ದೀನರಕ್ಷಕ ದೇವ ಗೋಪಾಲವಿಠಲ
ನೀನು ಕುಣಿಸಿದಂತೆ ನಾನು ಕುಣಿವೆನಯ್ಯ ೪

ತ್ರಿಪುಟತಾಳ

ವಾಸುದೇವನೆ ನಿನಗೆ ವಾಸಿ ಒಂದೇ ಕೇಳೊ
ಈಶನೆಂಬೊ ಪೆಸರು ನಿನ್ನದಯ್ಯ
ದಾಸನೆಂಬೊ ಪೆಸರು ನಿನಗೆ ಎಂದಿಗು ಇಲ್ಲ
ದಾಸತ್ವತನವೆಲ್ಲ ನಮ್ಮದಯ್ಯ
ದಾಸರು ಇಲ್ಲದ ಈಶತ್ವ ಪ್ರಕಟಿಸದು
ಈಶನು ಇಲ್ಲದ ದಾಸತನವ್ಯಾಕೆ

ದೇಶ ಕಾಲ ಪಾತ್ರ ಈಸು ಕೂಡಿದಲ್ಲಿ
ಕಾಸು ಕೊಡುವ ದಾತರಿಲ್ಲದಿರೆ
ಕಾಸು ಇದ್ದವನಲ್ಲಿ ದೇಶ ಹೋಗುವುದು
ದೇಶವಿದ್ದಲ್ಲಿಗೆ ಕಾಸು ಬಾಹುವುದೆ
ದಾಸತ್ವ ಎನ್ನಲ್ಲಿ ಈಷನ್ಮಾತ್ರವನ್ನು
ಆಶ್ರೈಸಿ ಇತ್ತ ಈಶ ನೀ ಎನಗುಂಟು
ದೇಶದೇಶದವರು ಏಸುಕಾಲಕೆ ಕುರುಹು
ಮಾಸದೆ ಕಂಡರೆ ಪೋಷಿಸುವರು ಬಿಡದೆ
ಲೇಸಾಗಿ ಇಬ್ಬರು ಒಂದೇ ಸ್ಥಳದಲ್ಲಿ
ವಾಸವಾಗಿದ್ದು ನಾಶರಹಿತರಾಗಿ
ಕ್ಲೇಶಕೊಬ್ಬನ ಮಾಡಿ ಕ್ಲೇಶರಹಿತನಾಗಿ
ಘಾಸಿ ಪಡಿಸಿ ನಮ್ಮ ಮೀಸಲಾಗಿ ನೀನಿಂದು
ದೋಷರಹಿತ ರಂಗ ಗೋಪಾಲವಿಠಲ
ದಾಸರ ಬಿಡದಿರು ಏಸೇಸು ಬಂದರು ೫

ಅಟ್ಟತಾಳ

ಧನದಿಂದ ನಂಟರು ಕೆಲವರು ಎನಗಿನ್ನು
ತನುವಿನ ನಂಟರು ಕೆಲವರು ಎನಗಿನ್ನು
ಮನದಿಂದ ನಂಟರು ಕೆಲವರು ಎನಗಿನ್ನು
ದಿನದಿಂದ ನಂಟರು ಕೆಲವರು ಎನಗಿನ್ನು
ಗುಣದಿಂದ ನಂಟರು ಕೆಲವರು ಎನಗಿನ್ನು
ಇನಿತು ನಂಟರೊಳು ಎನಗೆ ಒಬ್ಬರ ಕಾಣೆ
ಅನುವಾಗಿ ಇದ್ದರೆ ಅಷ್ಟು ನಮ್ಮವರೆಲ್ಲ
ಅನುವು ತಪ್ಪಿದರಿನ್ನು ಆರು ನಮ್ಮವರಲ್ಲ
ನಿನಗೆ ಎನಗೆ ನಂಟತನವಿನ್ನು ಹೀಗಲ್ಲ ಅ–
ರೆನಿಮಿಷವಗಲದ ಅನಿಮಿತ್ತ ಬಾಂಧವನಾಗಿ
ಕ್ಷಣ ಬಿಡದಲೆ ಕಾಯ್ವ ಗೋಪಾಲವಿಠಲ
ನಿನಗೆ ಮಾಡುವುದೇನೊ ನಮೋ ನಮೋ ಎನ್ನಿಂದ ೬

ಆದಿತಾಳ

ನೀನೇವೆ ವೈಕುಂಠ ನೀನೇವೆ ಮುಕ್ತಿಯೆನಗೆ
ನೀನೇವೆ ಸಕಲತೀರ್ಥಯಾತ್ರೆಗಳೆನಗೆ
ನೀನೇವೆ ಇಹಪರದಲ್ಲಿ ಕಾಯಿದವ
ಆನೆಲ್ಲಿ ನೋಡಲು ನೀನೆ ಕಾಣಿಸುವಿ
ನೀನಿದ್ದ ಸ್ಥಳದಲ್ಲಿ ಸಕಲ ದೇವತೆಗಳು
ನೀನೇವೆ ಫಲಗಳ ಸಕಲರಲ್ಲಿದ್ದೀವೆ
ದೀನಜನರಪಾಲ ಗೋಪಾಲವಿಠಲ
ಜ್ಞಾನಿಗಳಿಗೆ ಪ್ರಿಯ ನಿನಗೆ ಜ್ಞಾನಿ ಪ್ರಿಯ ೭

ಜತೆ

ಕಾಣದವನು ನಿನ್ನ ಕಂಡದ್ದು ಹಾರೈಸುವ
ಕಾಣುವ ಬಿಡ ನಿನ್ನ ಗೋಪಾಲವಿಠಲ

೧೦೨

ಉಗಾಭೋಗ

ನೀನು ಕೊಡುವುದೆನಗೆ ಏನು ಎನಗಿಂದದರ
ಖೂನವಾದರು ತೋರು ಎನ್ನ ಕುರಿತು
ನಾನು ಬಲು ಅರಸಿ ನೋಡಿದರು ನಿಜಗಾಣೆನು
ಪಾಣಿದ್ವಯಮುಗಿದು ಬಿನ್ನೈಪೆ ದೇವ
ನೀನೊ ನಾನೊ ಪೇಳೊ ನಿನ್ನ ತಿಳಕೊಂಬಲ್ಲಿ
ಜ್ಞಾನಿಗಳೆ ಇದಕೆ ಮಧ್ಯಸ್ಥರಯ್ಯ
ಏನು ನೀ ಕೊಡುವುದು ಮುದವೆ ಎಲ್ಲಿಗೆ ಪೋದರು
ಕಾಣದೆ ಹುಡುಕುವೆ ಆನು ಏನೇನೆಂದು
ಶ್ರೀನಿವಾಸರಂಗ ಗೋಪಾಲವಿಠಲ ಆ-
ಧೀನ ನಿನ್ನದು ಎಂದೇನಿದ್ದರು

೧೦೩

ಉಗಾಭೋಗ

ನೋಡು ನೋಡದಲೆ ಇರು ಹರಿಯೆ ನೋಡಿಪನೆಂದು
ಮಾಡು ಮಾಡದಲೆ ಇರು ಹರಿಯೆ ಮಾಡಿಪನೆಂದು
ಕೂಡು ಕೂಡದಲೆ ಇರು ಹರಿಯೆ ಕೂಡಿಪನೆಂದು
ಓಡು ಓಡದಲೆ ಇರು ಓಡಿಪನರಿದಿನ್ನು
ಪಾಡು ಪಾಡದಲೆ ಇರು ಪಾಡಿಸುವನರಿದಿನ್ನು
ನೀಡು ನೀಡದಲೆ ಇರು ನೀಡಿಸುವನರಿದಿನ್ನು
ಬೇಡು ಬೇಡದಲೆ ಇರು ಬೇಡಿಸುವನರಿದಿನ್ನು
ಮಾಡಲೀಪರಿ ನೀನು ನಿತ್ಯದಲ್ಲಿ
ಕೇಡು ಎಂಬುವುದುಂಟೆ ಸಾಧನಕೆ ಎಂದೆಂದು
ಗಾಢಮತಿ ಪುಟ್ಟುವುದು ದಿವಸ ದಿವಸಕ್ಕೆ
ನೋಡಿದರೆ ಬಹು ಸುಲಭ ಗಾಢಸಂಗತಿ ಬ್ಯಾಡ
ಗೋಡೆಮರೆ ಇಲ್ಲಿದಕೆ
ಮಾಡಲಾಯಾಸವಿಲ್ಲ ಫಲವು ಅಧಿಕ
ಪಾಡಿದವರ ಪ್ರಾಣ ಗೋಪಾಲವಿಠಲ
ಪಿಡಿಯೆ ಬಂದನೆಂದವನ ಪಿಡಿದು ಬಿಡನೊ

೧೦೪

ಭ್ರಾಂತನಾದೆನಲ್ಲ ಪರಗತಿ ಚಿಂತೆಯೆಂಬೊದಿಲ್ಲ ಶ್ರೀ
ಕಾಂತನ ಪದಗಳ ಸಂತತ ಪೂಜಿಸಿ ಸಂತೋಷಿಸಲಿಲ್ಲ ಬರಿದೆ ಪ.

ಮೋಸ ಹೋದೆನಲ್ಲ ವಿಷಯದ ಆಶೆ ತೀರಲಿಲ್ಲ
ಹೇಸಿಕೆ ಭವಸುಖ ಲೇಸೆಂದೆನಿಪ ವಿಲಾಸವಾಯಿತಲ್ಲ ಬರಿದೆ ೧

ಮಂದನಾದೆನಲ್ಲ ದಿನಗಳು ಸಂದು ಹೋದವಲ್ಲ
ಮಂದರಧರ ಮುಕುಂದನಂಘ್ರಿಯ ಹೊಂದಿ ಸುಖಿಸಲಿಲ್ಲ ಬರಿದೆ ೨

ದೇಹ ನಿತ್ಯವಲ್ಲ ಮಮತೆ ಗೇಹ ವ್ಯರ್ಥವಲ್ಲ
ಮೋಹವಸ್ತು ಗೋಪಾಲವಿಠಲ ಮೋಹದರಸ ಬಲ್ಲ ಬರಿದೆ ೩

೧೦೫

ಉಗಾಭೋಗ

ಮನೆಯ ಕಟ್ಟುವರುಂಟು ಮಡದಿಮಕ್ಕಳುಂಟು
ಧನವ ಗಳಿಸುವರುಂಟು ಗಳಿಸದಿದ್ದವರುಂಟು
ಧನವ ಕಟ್ಟುವರುಂಟು ದಾನ ಮಾಡುವರುಂಟು
ಋಣವ ಕೊಟ್ಟವರುಂಟು ಋಣ ಮಾಡಿದವರುಂಟು
ಮಣೆಗಾರತನವಿದರೊಳೆಂದಿಗು ಬೇಡ
ಮುನಿಗಳು ಸಹಿತಾಗಿ ಮೋಸಹೋದರು ಇದಕೆ
ಗುಣಪೂರ್ಣ ಚೆಲ್ವ ಗೋಪಾಲವಿಠಲ ನಿನ್ನ
ಗುಣಚಿಂತೆಯೊಳಿಡು ಇಷ್ಟೆ ಸಾಕು

೧೦೬

ಸುಳಾದಿ

ಧ್ರುವತಾಳ

ಸಿರಿದೇವಿ ಅರಸನೆ ಶ್ರೀಕೃಷ್ಣ ನಮೋ ನಮೋ
ಸರಸಿಜಾಸನಪಿತ ನಿನಗೆ ನಮೋ
ಹರನಂತರ್ಗತಮೂರ್ತಿ ಸಂಕರ್ಷಣನೆ ನಮೋ
ಪುರುಹೂತಪಾಲಕ ಉಪೇಂದ್ರ ನಮೋ ನಮೋ
ತರುಣಿಯಂತರ್ಗತ ಶ್ರೀನಾರಾಯಣನೆ ನಮೋ
ವರ ಶಶಿ ಅಂತರ್ಗತ ದಧಿ ವಾಮನ ನಮೋ
ಸಿರಿ ಭಾಗೀರಥಿ ಪೆತ್ತ ವಾಸುದೇವನೆ ನಮೋ

ಸುರರ ಭೂಸುರರೊಡೆಯ ಶ್ರೀಹರಿ ನಮೋ ನಮೋ
ಕರುಣಾಕರರಂಗ ಗೋಪಾಲವಿಠಲ ನಿನ್ನ
ಪರಿವಾರ ಮೂರ್ತಿಗಳಿಗೆ ನಮೋ ನಮೋ ನಮೋ ಎಂಬೆ ೧

ಮಠ್ಯತಾಳ

ಜನನಿ ಎಂದು ಒಮ್ಮೆ ಕರೆವೆ ಆನಯ್ಯ ನಿನ್ನ
ಜನಕನೆಂದು ಒಮ್ಮೆ ಕರೆವೆನಯ್ಯ
ನಿನ್ನ ಭೃತ್ಯನೆಂದು ಒಮ್ಮೆ ಕರೆವೆನಯ್ಯ
ನಿನ್ನ ಸೋದರನೆಂದು ಒಮ್ಮೆ ಕರೆವೆನಯ್ಯ
ನಿನ್ನ ಬಂಧುವೆಂದು ಒಮ್ಮೆ ಕರೆವೆನಯ್ಯ
ನಿನ್ನ ದಾತನೆಂದು ಒಮ್ಮೆ ಕರೆವೆನಯ್ಯ
ಎನ್ನ ಇಷ್ಟದೈವ ಗೋಪಾಲವಿಠಲ
ನಿನ್ನನು ಎನ್ನವಯವಗಳಿಗೆ ನೆನೆವೆ ೨

ರೂಪಕತಾಳ

ನಿನ್ನನ್ನೇವೆ ಎನ್ನ ಶಿರಸು ಎಂದು ಕರೆವೆ
ನಿನ್ನನ್ನೇವೆ ಎನ್ನ ನಯನವೆಂದು ಕರೆವೆ
ನಿನ್ನನ್ನೇವೆ ಎನ್ನ ಕರ್ಮವೆಂದು ಕರೆವೆ
ನಿನ್ನನ್ನೇವೆ ಎನ್ನ ನಾಸಿಕವೆಂದು ಕರೆವೆ
ನಿನ್ನನ್ನೇವೆ ಎನ್ನ ವದನ ಎಂದು ಕರೆವೆ
ನಿನ್ನನ್ನೇವೆ ಎನ್ನ ಜಿಹ್ವೆ ಎಂದು ಕರೆವೆ
ನಿನ್ನನ್ನೇವೆ ಎನ್ನ ಭುಜವು ಎಂದು ಕರೆವೆ
ನಿನ್ನನ್ನೇವೆ ಎನ್ನ ಬಾಹು ಎಂದು ಕರೆವೆ
ನಿನ್ನನ್ನೇವೆ ಎನ್ನ ಕರಗಳೆಂದು ಕರೆವೆ
ನಿನ್ನನ್ನೇವೆ ಎನ್ನ ಹೃದಯ ಎಂದು ಕರೆವೆ
ನಿನ್ನನ್ನೇವೆ ಎನ್ನ ಊರು ಜಾನು ಎಂದು ಕರೆವೆ
ನಿನ್ನನ್ನೇವೆ ಎನ್ನ ಪಾದವೆಂದು ಕರೆವೆ

ನಿನ್ನನ್ನೇವೆ ಎನ್ನ ಸರ್ವವ್ಯಾಪಕನೆಂದು
ಬಣ್ಣಿಸಿ ಬಗೆಬಗೆಯಲಿ ನಾ ತಿಳಿಯುವೆ
ಚಿನ್ಮಯಮೂರ್ತಿ ಗೋಪಾಲವಿಠಲ
ನಿನ್ನನು ಎನ್ನವಯವಂಗಳಲ್ಲಿ ನೆನೆವೆ
ನಿನ್ನವರ ಸಹಿತಾಗಿ ಎನ್ನಲಿ ಪರಿಪೂರ್ಣ ೩

ಝಂಪೆತಾಳ

ಸಪ್ತಾವರಣ ಕಾಯ ಪ್ರಾಕಾರ ಮನೆಯಲ್ಲಿ
ಸಪ್ತಮದ್ವಾರಂಗಳಲ್ಲಿ ನೀನು
ಸಪ್ತಮರೂಪದಿ ತನ್ನಿಯಾಮಕನಾಗಿ
ವ್ಯಾಪ್ತಿಸಿ ಅಲ್ಲಿ ಗುಪ್ತನಾಗಿ
ತಪ್ತ ಕಾಂಚನದಂತೆ ಪೊಳೆವುತ್ತ ಸಿರಿಸಹಿತ
ಗುಪ್ತ ತಾ ಗುಣಬಂಧನಂತೆ ನೀನು
ಶಪ್ತ ಮಾಡಿ ಸೃಷ್ಟಿಸ್ಥಿತಿಲಯಗಳನು ನೀನು
ಕ್ಲುಪ್ತ ಮೀರದಲೇವೆ ಮಾಡಿಸುವಿ
ಸುಪ್ತ ಜಾಗ್ರತ ಸ್ವಪ್ನಾವಸ್ಥೆ ಕಾಲಂಗಳಲ್ಲಿ
ಆಪ್ತನಾಗಿ ಆದರಿಸಿ ಎನ್ನ
ಸಪ್ತೆರಡು ಭುವನದೊಡೆಯ ಗೋಪಾಲವಿಠಲ
ಕುದಿತದೊಳಗೆ ಎನ್ನ ಕೂಡಿಸದೆ ಪೊರೆಯೊ ೪

ತ್ರಿಪುಟತಾಳ

ನಿನ್ನ ಮತ್ಸ್ಯರೂಪ ಎನ್ನರಿಷ್ಟವ ಕಳೆವೆ
ನಿನ್ನ ಕೂರ್ಮರೂಪ ಎನ್ನ ಭಾರ ವಹಿಸುವೆ
ನಿನ್ನ ವರಾಹರೂಪ ಎನಗೆ ವರವಾಗಲಿ
ನಿನ್ನ ನರಮೃಗರೂಪ ಎನ್ನ ಅರಿಗಳ ಸೀಳಲಿ
ನಿನ್ನ ವಾಮನರೂಪ ಎನ್ನ ಸೇವೆಗೊಳಲಿ
ನಿನ್ನ ಭಾರ್ಗವ ರೂಪ ಎನ್ನ ಅಷ್ಟಮದ ಕಡಿಯಲಿ

ನಿನ್ನ ರಾಮರೂಪ ಎನ್ನ ಸ್ಮರಣೆಗೊದಗಲಿ
ನಿನ್ನ ಕೃಷ್ಣರೂಪ ಎನ್ನಭೀಷ್ಟನೀಯಲಿ
ನಿನ್ನ ಬೌದ್ಧರೂಪ ಎನ್ನ ವಿಷಯ ಬಿಡಿಸಲಿ
ನಿನ್ನ ಕಲ್ಕಿರೂಪವು ಎನ್ನ ಮನನಿಲ್ಲಿಸಲಿ
ನಿನ್ನನಂತ ರೂಪವು ಎನ್ನನುದ್ಧರಿಸಲಿ
ಚಿನ್ಮಯ ಮೂರುತಿ ಗೋಪಾಲವಿಠಲ
ನಿನ್ನ ತಿಳಿವ ಧನ್ಯ ಇನ್ನು ಮಾಡಿದ್ದು ಪುಣ್ಯ ೫

ಅಟ್ಟತಾಳ

ಕಣ್ಣು ಮಾಡುವ ಕಾರ್ಯ ಕರ್ಣ ಮಾಡುವುವೊ ನಿನ್ನ
ಕರ್ಣ ಮಾಡುವ ಕಾರ್ಯ ಕಣ್ಣು ಮಾಡುವುದಯ್ಯ
ಬೆನ್ನು ಮಾಡುವ ಕಾರ್ಯ ವದನ ಮಾಡುವುದು
ನಿನ್ನ ವದನ ಮಾಡುವ ಕಾರ್ಯ ಬೆನ್ನು ಮಾಡುವುದು
ನಿನ್ನ ಚರಣ ಮಾಡುವ ಕಾರ್ಯ ಕರವು ಮಾಡುವುದು
ನಿನ್ನ ಕರವು ಮಾಡುವ ಕಾರ್ಯ ಚರಣ ಮಾಡುವುದಿನ್ನು
ನಿನ್ನ ಅವಯವಂಗಳು ಎಲ್ಲಿ ನೋಡಲು ಅಕ್ಷಿ
ನಿನ್ನ ಅವಯವಂಗಳ ರೂಪ ಅನಂತಾನಂತವಾಗಿ ತೋರುವುವು
ಇನ್ನು ಮೊದಲು ಕೊನೆ ಬಣ್ಣಿಸಿ ನೋಡಲು
ಎನ್ನಿಂದಲೊಶವೆ ಚಿನ್ಮಯಚಿದ್ರೂಪ
ಅನ್ನಂತಮಹಿಮ ಗೋಪಾಲವಿಠಲರೇಯ
ನಿನ್ನ ನೋಡುವರೊಳಗೆ ಎನ್ನನು ಇಡಿಸೊ ೬

ಆದಿತಾಳ

ಅನಂತ ಜನರು ನಿನ್ನ ನೋಡಲು
ನ್ಯೂನವಾಗದು ನಿನ್ನ ಕಾಂತಿಗೆ
ಅನಂತ ಜನರು ನಿನ್ನ ಪಾಡಲು
ನ್ಯೂನವಾಗದು ನಿನ್ನ ನಾಮಕ್ಕೆ

ಅನಂತ ಜನರು ನಿನ್ನ ಬೇಡಲು
ನ್ಯೂನವಾಗದು ನಿನ್ನ ವೇಷಕ್ಕೆ
ಅನಂತ ಜನರು ನಿನ್ನ ಸೇವಿಸೆ
ನ್ಯೂನವಾಗದು ನಿನ್ನ ಸೇವೆಯು
ಅನಂತ ಜನಕೆ ವರವಿತ್ತರೆ
ನ್ಯೂನವಾಗದು ನಿನ್ನ ಬಲಕೆ
ಅನಂತನೆಂದು ಕರೆದವರಿಗೆ
ಅನಂತನಾಗಿ ತೋರುತಲಿಪ್ಪ
ಅನಂತ ಜನಕೆ ಅನಂತಕರ್ಮ
ಅನಂತ ಜನಕೆ ಅನಂತಫಲವು
ಅನಂತ ಗುಣನಿಧಿ ಗೋಪಾಲವಿಠಲ
ಅನಂತ ಕಾಲಕ್ಕೆ ನೀನೆ ಗತಿಯೊ ೭

ಜತೆ

ನಿನಗೆ ನಿನ್ನ ಪರಿವಾರ ಮೂರ್ತಿಗಳಿಗೆ
ವಿನಯದಿ ನಮಿಸಿದೆ ಗೋಪಾಲವಿಠಲ ಕಾಯೊ

೧೦೭

ಸುಳಾದಿ

ಧ್ರುವತಾಳ

ಹರಿಯ ಸೇವಿಸುವವ ಅವ ಪಾಮರನೆ ಮರೆದು
ಹರಿಯ ಸೇವಿಸುವವ ಅವ ಪಾಮರನು ಅಲ್ಲೆ
ಹರಿಯ ತಿಳಿಯದವನು ಅವನು ಜ್ಞಾನಿಯೆ ನೋಡಾ
ಹರಿಯ ತಿಳಿದವ ಪೂರ್ಣ ಅವನಜ್ಞಾನಿಯೆ ನೋಡಾ
ಹರಿಯ ಕರ್ತ ನಾ ಕರ್ತನಲ್ಲನೆಂದವ ಜ್ಞಾನಿ

ಹರಿಕರ್ತೃ ನಾನು ಕರ್ತೃನೆಂದವನು ಜ್ಞಾನಿಯೆ
ಹರಿಯೆ ಸ್ವತಂತ್ರ ನಾನಲ್ಲವೆಂದವ ಜ್ಞಾನಿ
ಹರಿಯೆ ಸ್ವತಂತ್ರ ನಾನು ಸ್ವತಂತ್ರನೆಂದವ ಜ್ಞಾನಿಯೆ
ಹರಿ ಮಾಡಿಸಲು ಮಾಡಿದೆನೆಂಬುವ ಜ್ಞಾನಿ
ಹರಿ ಮಾಡಿ ಮಾಡಿಸಲು ಮಾಡಿದೆಂದವ ಜ್ಞಾನಿ
ಹರಿ ಮಾಡೆನ್ನೆ ಮಾಡಿದೆನೆಂದವನು ಜ್ಞಾನಿ
ಹರಿ ಮಾಡಿದರೆ ನಾ ಮಾಡೇನೆಂದವ ಜ್ಞಾನಿಯೆ
ಹರಿಯೆ ಕೂಡ ನಾನು ಮಾಡಿದೆಂಬುವ ಜ್ಞಾನಿಯೆ
ಹರಿಯೆ ಮಾಳ್ಪವ ನಾನ್ಯಾತಕಲ್ಲೆಂದವ ಜ್ಞಾನಿ
ಹರಿಯನರಿಯದವ ಅವನು ಒಬ್ಬ ಜ್ಞಾನಿಯೆ
ಹರಿಯ ಬಲ್ಲೆನೆಂದವ ಅವನು ಒಬ್ಬ ಜ್ಞಾನಿಯೆ
ಹರಿಯೆ ಸರ್ವಚೇಷ್ಟಪ್ರದ ಗೋಪಾಲವಿಠಲ ನರ-
ಹರಿ ಎಂದರಿದವನು ನರನೆ ನರನೆ ನೋಡಾ ೧

ಮಠ್ಯತಾಳ

ಮಂತ್ರಮಾಡಿದರೇನು ತಂತ್ರ ತೋರಿದರೇನು
ಎಂತೆಂತು ಕರ್ಮ ನಿರಂತರ ಮಾಡಲೇನು
ಚಿಂತನೆ ಹರಿ ಸ್ವತಂತ್ರ ಪರತಂತ್ರ
ಇಂತು ಜೀವೇಶರ ವಿವೇಕನರಿಯದಾ-
ನಂತ ಜನುಮಗಳು ಆಗಿ ಬಂದಿದ್ದರು
ಸಂತೋಷವ ಕೊಡವು ಸಾಧನ ಕರ್ಮಗಳು
ದಂತಿ ಮಜ್ಜನ ಕಾಣೊ
ಹರಿಯ ತಿಳಿಯದ ಕರ್ಮ
ಗ್ರಂಥಿ ಬಿಡುವುದಲ್ಲ ಅಜ್ಞಾನದ ಸರಕು
ನಿಂತು ನಿದ್ರೆ ಮಾಳ್ಪನಂತೆ ಕೊನೆಗೆ ಸೌಖ್ಯ
ಚಿಂತಿತ ಫಲದಾತ ಗೋಪಾಲವಿಠಲ-
ನೆಂತೆಂತುಪಾಸ್ಯರಂತಂತೆ ಫಲವೀವ ೨

ರೂಪಕತಾಳ

ಚೇತನರೆಸರಿ ಜೀವ ಚಲನೆ ಮಾಡಿಸೆ ಹರಿ
ಚೇತನವೆ ಜಡತುಲ್ಯ ಚಲನೆಮಾಡಿಸದಿರಲು
ಚೇತನಾಚೇತನಕೆ ಸಾಮ್ಯವೆ ಸರಿ ಹರಿವಿನಹ
ಯಾತರಿಂದಲಿ ನೋಡು ವಿಜ್ಞಾನಿಚೆ ? ಪ್ರಯತ್ನವು
ಪಾತಕ ಪುಣ್ಯಕ್ಕು ಹರಿಯೆ ಪ್ರೇರಕನೆಂದು
ತಾ ತಿಳಿದು ಇಪ್ಪುವಗೆ ಯಾತನೆಂಬುದು ಎಲ್ಲೊ
ತಾ ತಿಳಿಯದಲೆ ಪುಣ್ಯಮಾತುರಕೆ ನಾನೆನಲು
ಪಾತಕವನೆ ಮಾಡಿ ಪುಣ್ಯವಾದರು ನೋಡ
ಪತಿವ್ರತೆ ಸ್ತ್ರೀ ತನ್ನ ಪತಿ ಆಜ್ಞದಿಂದ ವಿ-
ಜಾತಿ ಪುರುಷನ್ನ ಅನುಸರಿಸೆಂದು ಆಜ್ಞೆ ಕೊಡೆ
ಮಾತು ಪತಿಯದು ನಡೆಸೆ ಪಾತಕವಳಿಗೆ ಉಂಟೆ
ಯಾತನೆಗೆ ಸರಿ ಯೋಗ್ಯಕರ್ಮ ಮಾಡಿದರಾಗೆ
ಪಾತಕಿಲ್ಲವು ನೋಡು ನೋಡಿ ನೋಡು
ಜ್ಯೋತಿರ್ಮಯ ಮೂರ್ತಿ ಗೋಪಾಲವಿಠಲ
ಯಾತರವ ನಾನಲ್ಲ ಎಲ್ಲ ನಿನ್ನಾಧೀನ ೩

ಝಂಪೆತಾಳ

ಹರಿ ಮಾಡೆನಲು ಮಾಡೆನೆಂಬುವಗೆ ಸಂಸಾರ
ಹರಿಯೆಂಬುವುದು ಲಕ್ಷ ಹರಿದಾರಿ ಜಲವುದ್ದ
ಶರಧಿಂದ ಕಡೆ ಬೀಳಲರಿಯನವನೆಂದಿಗು
ಹರಿಯ ತೋರದು ಅವಗೆ ಎಂದೆಂದಿಗು
ಹರಿ ಕೂಡ ನಾನು ಮಾಡಿದೆನೆಂಬುವಗೆ
ಶರಧಿ ಹರಿಗೋಲು ಹುಟ್ಟಿಲ್ಲದ್ಹಾಕಿದಂತೆ
ಹರಿ ಮಾಡಿಸಲು ಮಾಡೇನೆಂಬುವಗೆ ಭವಶರಧಿ
ಹರಿಗೋಲಿಟ್ಟು ಹುಟ್ಟು ಹಾಕಿದಂತೆ
ಹರಿ ಮಾಡಿಸಲು ನಾನು ಮಾಡಿದೆನೆಂಬುವನಿಗೆ

ಶರಧಿ ಅರೆಕಾಲು ಪರಿಮಾಣ ಜಲವು
ಹರಿಯ ಕರ್ತೃತ್ವವು ಅರಿದಹಾಗೆಲ್ಲ ಭವ-
ಶರಧಿ ಬತ್ತುವುದಿನ್ನು ಅರಿದವರಿಗೆ
ಹರಿ ಮಹಾರಾಜ ಗೋಪಾಲವಿಠಲ ತನ್ನ
ಅರಿದಂತೆ ಅರಿವ ಅರಿದಿರುವವರಿಗೆ ೪

ತ್ರಿಪುಟತಾಳ

ಮರೆದು ಮಾಡಿದ ಕರ್ಮ ಮಹಾಮಹತ್ತಾದರು
ಹುರಿದು ಬೀಜವ ಬಿತ್ತಿ ಫಲ ಅಪೇಕ್ಷಿಸಿದಂತೆ
ದೊರಕಿಸಿಕೊಡದಿನ್ನು ಯೋಗ್ಯಗತಿಯು ನೋಡಾ
ಮರಳಿ ಸಂಸಾರದಿ ತಂದಿಡುವುದು
ಅರಿದು ಮಾಡಿದ ಕರ್ಮ ಅಲ್ಪವಾದರು ನೋಡು
ಪರಮತ್ಯುತ್ತಮವಾದ ಫಲಗಳ ಕೊಡುವುದು
ಸರಿಬಿಡು ಹರಿ ಅರಿದು ಕುಕರ್ಮವನ್ನೆ ಮಾಡೆ
ಮರೆದವನಂತೆ ಮರಳಿ ಫಲಯ್ಯೆದ
ಕುರುಡ ಜನ್ಮಾರಭ್ಯ ಕುರಿತು ಅವಗೆ ಒಂದು
ಗುರುತ ಪೇಳಲೆನ್ನ ಅದರ ಕುರುಹನರಿವನೆ
ಅರಿದು ಬಹುದಿನ ನಾನಾ ಅರ್ಥವು ಮಧ್ಯ
ಕುರುಡನಂತಿಪ್ಪನ ಕುರಿತು ಅಣಕಿಸಿ ಒಂದು
ಗುರುತು ತೋರಿ ಅದರ ಕುರುಹ ಪೇಳೆನ್ನೆ ಹುಟ್ಟು-
ಗುರುಡನಂದದಿ ತಾನು ಹುಡುಕ್ಯಾಡುವನೆ ನೋಡಾ
ಶರಣಜನರಪಾಲ ಗೋಪಾಲವಿಠಲ ತನ್ನ
ಅರಿದವರ ಹಿಂದೆ ತಿರುಗುವ ಕ್ಷಣಬಿಡದೆ ೫

ಅಟ್ಟತಾಳ

ಕರ್ತೃತ್ವವೆಂಬುದು ಜೀವ ಸ್ವರೂಪವು
ಹತ್ತಿ ಇಪ್ಪುದು ನೋಡು ಅನಾದಿಯಿಂದಲಿ ನಿತ್ಯ

ದತ್ತವಾಗಿದೆ ಈಶನಿಂದವೆಂಬ ಮಾತು
ಅರ್ತು ನೋಡಿ ಹರಿಯ ಹೊರ್ತು ಆಗುವುದಲ್ಲ
ಮರ್ತರೆ ಮರೆವುವ ಅರ್ತರೆ ಅರಿವುವ
ಕರ್ತೃಕಾರ್ಯತಾ ಸರ್ವಸ್ವತಂತ್ರ ಹರಿತಾನು
ಸೂತ್ರನಾಟಕ ಸರ್ವಚೇಷ್ಟೆ ತಾ ಮಾಡಿಸೆ
ಕೀರ್ತಿ ಅಪಕೀರ್ತಿ ಜೀವರ್ಗೆ ತಂದೀವ
ಸ್ವಾರ್ಥಪಾರರಹಿತ ಗೋಪಾಲವಿಠಲ
ಆರ್ತಿತರಿವ ಅರಿದ ಭಕ್ತರ ಮನದ ೬

ಆದಿತಾಳ

ಮಾಡಲಿಬೇಕು ಎಲ್ಲ ಮಾಡಿಲ್ಲವೆನಬೇಕು
ನೋಡಲಿಬೇಕು ಎಲ್ಲ ನೋಡಿಲ್ಲವೆನಬೇಕು
ಬೇಡಲಿಬೇಕು ನಾನೆ ಬೇಡಿಲ್ಲವೆನಬೇಕು
ಓಡಲಿಬೇಕು ನಾನೆ ಓಡಲಿಲ್ಲೆನಬೇಕು
ಆಡಲಿಬೇಕು ನಾನೆ ಆಡಿಲ್ಲವೆನಬೇಕು
ನೀಡಲಿಬೇಕು ನಾನೆ ನೀಡಿಲ್ಲವೆನಬೇಕು
ಕೇಡು ಲಾಭಕೆ ಮನವ ಕೆಡಿಸದೆ ಒಂದೇ ರೀತಿ
ನೋಡಿದವರಿಗೆ ಉನ್ಮದನಂತೆ ತೋರುತ್ತ
ಗೂಢನಾಗಿ ಹರಿಯ ಗುಣಗಳ ಕೊಂಡಾಡುತ್ತ
ರೂಢಿಲಿ ಈ ವಮುವನ್ನು ಮಾಡಿದಲ್ಲ ಸಾಧನ
ಪಾಡಿದವರ ಪ್ರಾಣ ಗೋಪಾಲವಿಠಲ ತಾನು
ನೋಡು ಈ ಪರಿ ಇದ್ದವಗೆ ಮಾಡುವಗತಿಗೆ ಹವಣಿ ೭

ಜತೆ

ಸಕಲ ಸಾಧನ ಹರಿಯಾಧೀನ ತಿಳಿವುದೆ ಸುಖ
ವೃಕೋದರನೊಡೆಯ ಗೋಪಾಲವಿಠಲ ಒಲಿವ

೧೦೮

ಸುಳಾದಿ

ಧ್ರುವತಾಳ

ಹೊತ್ತು ಹೋಗದಿನ್ನು ಅನಾದಿ ಅವಿದ್ಯಾವಿನ್ನು
ಹೊತ್ತಿಸಲು ಜ್ಞಾನಾಗ್ನಿ ಬಲ ಸಾಲದು
ಹೊತ್ತು ಬಹು ಆಯಿತು ಇನ್ನು ತೀರದಲ್ಲ
ಹೊತ್ತು ಹಾಕೋ ಉಪಾಯ ತಿಳಿಯಲಿಲ್ಲ
ಹೊತ್ತು ಬಹು ದಣಿದು ಮಮತೆಂಬೊ ಭಾರವ ಪೊತ್ತು
ಹೊತ್ತು ಆವುದೊ ಎನಗೆ ನಿನ್ನ ತಿಳಿಯೆ
ಹೊತ್ತಾಡುವುವು ಎನ್ನ ಕಾಯಾದಿಗಳು ಬಿಡದೆ
ಹೊತ್ತ್ಹಾಕುವುವು ನಾನಾ ವಿಷಯಗಳಿಗೆ
ಹೊತ್ತು ಒಂದಿನದ ಒಳಗಾಗಿ ಲವಕಾಲ
ಹೊತ್ತು ನಿನ್ನ ಸಂಸ್ಮೃತಿಯು ಮನಕೆ ಬಂತೆ
ಹೊತ್ತು ಅಂದರೆ ಅದೆ ಹೊತ್ತು ಸರಿಕಾಣೆಯ್ಯ
ಹೊತ್ತವನೆ ಸರಿ ಬರಿದೆ ಹೊತ್ತು ವ್ಯರ್ಥ
ಹೊತ್ತು ಆಡುವ ದೊರೆಯೆ ಗೋಪಾಲವಿಠಲ
ಹೊತ್ತು ನಡೆಸುವ ಪಾದದ್ವತ್ತಿಲಿಡಿಸೆನ್ನ ೧

ಮಠ್ಯತಾಳ

ನಿನ್ನ ಸ್ಮೃತಿಯೆ ಕಾಲ ವಿಸ್ಮೃತಿಯೆ ಅಕಾಲ
ನಿನ್ನ ಸ್ಮೃತಿಯೆ ಪುಣ್ಯ ವಿಸ್ಮೃತಿಯೆ ಪಾಪ
ನಿನ್ನ ತಿಳಿದವ ಸರ್ವ ತಿಳಿದವ
ನಿನ್ನ ಅರಿಯದವ ನಿರಯ ಬಿದ್ದವ
ನಿನ್ನಿಂದಲಿ ಒಂದು ಕರ್ಮ ಮಾಡಿದವ
ಇನ್ನು ನಾನಾ ವಿಧಿಯು ತಾನು ಮಾಡಿದವ

ಪುಣ್ಯವೆಂದರು ಇದೆ ಪಾಪವೆಂದರು ಅದೆ
ಅನ್ಯಾಸಕ್ತಿ ಎಂಬುದೆನಗೆ ದೋಷ
ನಿನ್ನಾಸಕ್ತಿಯು ಎಂಬುದೆನಗೆ ಪುಣ್ಯ
ಎನ್ನ ಯತನವೇನು ಇನ್ನಿದಕಾದರು
ನಿನ್ನ ಕರುಣದಿಂದೆ ಇಂದು ಆಗಲು ಬೇಕು
ಘನ್ನ ದಯಾನಿಧೆ ಗೋಪಾಲವಿಠಲ
ಅನಂತಾನಂತ ಅಘಟಿತ ಮಹಾಘಟಿತ ೨

ರೂಪಕತಾಳ

ನಿನ್ನ ಕರುಣವೆಂಬ ಘನ್ನ ಮಹಾಸೋನೆಗೆ
ಎನ್ನ ದೋಷವೆಂಬ ವಹ್ನಿ ತಾ ನಿಲ್ಲುವುದೆ
ನಿನ್ನ ಕರುಣರಸದ ಬಲವೆಲ್ಲಿ ನೀನೆಲ್ಲಿ
ಎನ್ನಲೂ ಎನೆಸಲ್ಲ ಬಲ್ಲಮಾತಿಗೆ ದೇವ
ನಿನ್ನ ಕರುಣದಿಂದ ಪೋಗುವಷ್ಟು ಪಾಪ
ಎನ್ನಿಂದಲಾಗುವುದೆ ಎಲೆ ಎಲೆ ಸರ್ವಜ್ಞ
ನಿನ್ನ ಅನಂತಕ್ಕೆ ಅಂತ್ಯ ಎಂಬುದು ಇಲ್ಲ
ಕಣ್ಣಿಲಿ ಕಟ್ಟಿಸಿಕೊಂಡಿ ಎಂತೊ ಕರುಣಿ
ನಿನ್ನ ಅಣುತ್ವಕ್ಕೆ ವಿಶ್ರಾಂತಿಯಿಲ್ಲ ಸರಿ
ಇನ್ನೇಕಕಾಲದಲ್ಲೆ ಅಣುಮಹತ್ತುರೂಪ-
ವನ್ನೆ ಒಂದರಲ್ಲೆ ತೋರ್ಪುದೆಂತೊ
ಚಿನ್ನುಮಯಮೂರುತಿ ಗೋಪಾಲವಿಠಲ
ನಿನ್ನ ಆಟವನ್ನು ಬಲ್ಲರೊ ನಿನ್ನವರು ೩

ಝಂಪೆತಾಳ

ಕೋಡಗ ತನ್ನ ಮರಿಯ ಕಚ್ಚಿಕೊಂಡು ಇನ್ನು
ಓಡ್ಯಾಡಿದರು ಇನ್ನು ನಾನಾ ಕಡೆಗೆ
ಬಿಡಿಸಿಕೊಳ್ಳದೆ ಇಪ್ಪವ ಸ್ವಾತಂತ್ರ್ಯ

ಕೋಡಗನದೊ ಅದರ ವತ್ಸನದೊ
ನೋಡೆನ್ನನು ಬಡಿದು ಆಡುವ ಆಟವು
ಓಡಿಸಿದಂತೆ ನಾ ಓಡಾಡುವೆ
ಕೋಡಗ ತನ್ನ ಕೂಸುಕೊಂಡೇ ತಾನು
ಓಡ್ಯಾಡಿ ಫಲ ಮೆದ್ದರಿನ್ನು ಮೆಲಿಪುವುದು
ಕೇಡು ಲಾಭದ ಸ್ಥಿತಿಯ ಕೂಸು ಬಲ್ಲುದೆ ಇನ್ನು
ಕೋಡಗ ಕುಣಿಸಿದಂತೆ ಕುಣಿವುದು
ರೂಢಿಗೊಡೆಯ ದೇವ ಗೋಪಾಲವಿಠಲ ನೀ
ಆಡಿಸಿದಂತೆ ನಾ ಆಡುವೆನೊ ೪

ತ್ರಿಪುಟತಾಳ

ಎಷ್ಟು ಆದುವು ನೋಡು ಎನಗೆ ಬಂದ ಯೋನಿ
ಕಷ್ಟಬಟ್ಟುದು ಕಡೆ ಮೊದಲೆ ಇಲ್ಲ
ವೈಷ್ಣವ ಜನ್ಮಂಗಳು ಇದಕ್ಕಿಂತಧಿಕಾಗಿ
ಕೊಟ್ಟುದು ಹಾಗೆ ಸಾರಿ ಜ್ಞಾನವಿತ್ತು
ಎಷ್ಟು ಕಡಿಮೆ ನೋಡು ಆಗ ಈಗಲು ನೋಡಾ
ನಷ್ಟ ಅನಂತ ಮಾಡಿ ಈ ಜ್ಞಾನನೆನ್ನ
ಬಟ್ಟೆಬವಣೆ ಎಷ್ಟು ಈಗ ವೈಷ್ಣವನಾಗಿ
ಪುಟ್ಟುವುದಕ್ಕೆನಗೆ ಪುಣ್ಯಪುರುಷ
ಎಷ್ಟು ಮಂದಿ ಜನ ಎನಗೆ ಸಹಾಯವಾಗಿ
ಸೃಷ್ಟಿ ಮಾಡಿಸಿಪ್ಪುದು ನೀನರಿಯಾ
ಶಿಷ್ಟ ಜನರ ಪಾಲ ಗೋಪಾಲವಿಠಲ
ಗಟ್ಯಾಗಿ ಪಡೆದೆನ್ನ ಸಾಕಬೇಕು ೫

ಅಟ್ಟತಾಳ

ಸನ್ಯಾಸಿ ಎನಿಸಿ ನಾ ನಿನ್ನ ಕಾಣಲಿ ಇಲ್ಲ
ಹನ್ನೆರಡು ನಾಲ್ಕೊರುಷ ನರಕ ಭೋಗಿಸಿಯಿಪ್ಪೆ

ಇನ್ನು ವೈದಿಕನಾಗಿ ಬ್ರಹ್ಮದ್ರೋಹವು ತಾಕಿ
ಬನ್ನಬಟ್ಟುಯಿಪ್ಪೆ ಇನ್ನು ಕೆಲವು ಹಿಂದೆ
ಹೆಣ್ಣಿಗಾಗಿ ಪೋಗಿ ಮುನ್ನೆ ಪ್ರಾಣವು ಕೊಟ್ಟು
ಇನ್ನು ಅದರ ಶೇಷ ಈಗನುಭವಿಸುವೆ
ಇನ್ನು ನಾನಾದೋಷ ಘಟಿಸಿ ಇಪ್ಪವು ಬಹಳ
ನಿನ್ನ ಕರುಣದಿಂದ ಕಡೆಹಾಯಿಸೆಂದೆನಿಪೆ
ಅನಿಮಿತ್ತ ಬಂಧು ಗೋಪಾಲವಿಠಲ
ನಿನ್ನ ಬಿಟ್ಟವನಲ್ಲ ಏನು ಬಂದರನ್ನ ೬

ಆದಿತಾಳ

ಪಾಹಿ ಪಂಢರಿರಾಯ ಪಾಲಿತ ನಿನ್ನಿಂದ
ಪಾಹಿ ಪಾಂಡವಪಾಲ ಪಾಪವಿನಾಶನ
ಪಾಹಿ ಅಹೋಬಲ ಶ್ರೀನಾರಸಿಂಹನೆ
ಪಾಹಿ ಅಳಗಿರಿ ತಿರುಮಲರಾಯನೆ
ಪಾಹಿ ಪಾಹಿ ರಾಮ ತ್ರಾಹಿ ತ್ರಾಹಿ ಹರೆ
ಹಾ ಹಾ ಅಲೌಕಿಕ ಹೋ ಹೋ ಸುಖಪೂರ್ಣ
ಮಹಾತಿಸುಂದರ ಮನ್ಮಥ ಮನ್ಮಥ
ದೇಹಿ ಜ್ಞಾನ ಭಕ್ತಿ ವೈದೇಹಿರಮಣನೆ
ರಹಸ್ಯದಲಿ ನಿನಗಭಿವಂದಿಸುವೆ ಎನಗೆ
ದೇಹ ತಂದಿತ್ತಂತೆ ತತ್ಕಾರ್ಯ ಸಾಧನ
ಬಹಳಾಗಿ ಮಾಡಿಸಿ ಬಂದು ಒದಗಿ ನೀನು
ಶ್ರೀಹರಿ ಕಾಣಿಸಿಕೊಂಡು ಕಾಯೋ ನ-
ರ ಹರೆ ಸಾದೃಶ್ಯರಹಿತ ಗೋಪಾಲವಿಠಲ
ಪಾಹಿ ಪಾಹಿ ನಮೋ ನಮೋ ಸ್ವಾಮಿ ೭

ಜತೆ

ಅಪರಾಧ ಅನಂತ ಮಾಡಿ ನಾ ಮರೆಹೊಕ್ಕೆ
ಅಪಾರ ಕರುಣಿ ಗೋಪಾಲವಿಠಲ ಕಾಯೊ

ಲೋಕನೀತಿ

೧೦೯

ಉಗಾಭೋಗ

ಆರಿಗಾರಾಗುವರೊ ಆಪತ್ತು ಕಾಲಕ್ಕೆ
ಆರಿಗಾರೊದಗುವರೊ ಸಂಪತ್ತು ಕಾಲಕ್ಕೆ
ಆರಿಂದ ಬಪ್ಪುವುದು ಆರಿಂದ ತಪ್ಪುವುದು
ಆರಸಿ ನೋಡುವುದು ಇದರ ಕಾರಣವನು ಇದ
ಕಾರು ವಾರಣದಲಿ ನೋಡಿ
ಆರೋಪಿಸಲು ಎಲ್ಲ ಭಾರ ಅವಗೆ
ಕಾರುಣ್ಯ ಮೂರುತಿ ಗೋಪಾಲವಿಠಲ
ಈ ರೀತಿ ಅರಿದವಗೆ ಇಲ್ಲೆ ಪೊರೆವ

೧೧೦

ಎಷ್ಟು ಮಮತೆಯೊ ನಿನಗೆ ಭ್ರಷ್ಟಮನವೆ
ಕಷ್ಟ ದೇಹವ ನೆಚ್ಚಿ ಇವನೆ ಕಳೆದಿ ಪ.

ಹಿಂದೆ ಅನಂತ ಜನುಮಗಳಲ್ಲಿ ಇನ್ನು
ತಂದೇಸುಮಂದಿಗಳು ತಾಯೇಸು ಎನಗೆ
ಬಂದ ಸತಿಸುತರೇಸು ಬಂಧು ಜನರುಗಳೇಸು
ಇಂದೊಬ್ಬರನ್ನ ಕರೆತಂದದ್ದೇನೊ ಮರುಳೆ ೧

ಚಿನ್ನಬೆಳ್ಳಿ ನಾನಾ ಬಣ್ಣ ಬಿರುದುಗಳನ್ನು
ಅನಂತ ಗಳಿಸಿ ಅನಂತ ಹರುಷದಲಿ
ನನ್ನವರು ನನ್ನದು ಎಂಬ ದೋಷದ ಮದದಿ
ಇನ್ನು ದೇಹವ ಧರಿಸಿ ಇನ್ನು ಎಚ್ಚರಿಯೊ ೨

ನಿನ್ನ ಕಣ್ಣ ಮುಂದೆ ಪೋಪ ಜೀವರು ಕಂಡು
ಇನ್ನು ನಿನಗೆ ನಾಚಿಕೆ ಬಾರದೆ

ಇನ್ನು ಮುನ್ನೆ ನಾಳಿಗೆಂಬೊ ಘನ್ನ ಆಸೆ
ಚೆನ್ನಾಗಿ ಬಿಡುಕಂಡ್ಯ ಖೂಳ ಮನವೆ ೩

ಆಸೆ ಎಂಬೋದು ಸಂಧಿಸಿಕೊಂಡರೆ ನಿನಗೆ
ದೋಷವೆಂಬೊ ರಾಶಿ ಆಶ್ರಯಿಸೋದು
ಮೀಸಲ ಮಾಡು ಮನ ಮೋಸಹೋಗದೆ
ಹೃಷಿಕೇಶನ ಚರಣ ವಿಶೇಷವಾಗಿ ಸ್ಮರಿಸೊ ೪

ಸತಿ ಸುತರು ಇತರ ಜನ ಹಿತವಾದ ಧನ ದೇಹ
ಇತರ ನೋಡಲು ಮೋಹ ಅಧಿಕವಾಗಿ
ಪತಿತಪಾವನ ರಂಗ ಗೋಪಾಲವಿಠಲ
ಜಿತವಾಗಿ ಭಕುತಿ ಇಟ್ಟು ಮುಕುತಿಯ ಪಡೆಯೊ ೫

೧೧೧

ಏನು ಸುಖವೋ ಎಂಥಾ ಸುಖವೊ ಪ.

ಹರಿಯ ಧ್ಯಾನ ಮಾಡುವವರ ಸಂಗ ಏನು ಸುಖವೊ ಅ.ಪ.

ತಂಬೂರಿ ಮೀಟುತ್ತ ಹೃದಯ
ಅಂಬಕದಿಂದ ಆನಂದ
ಅಂಬುಗರೆಯುತ ಬಲು
ಸಂಭ್ರಮದಿಂದಿಹರ ಸಂಗ ೧

ಗೆಜ್ಜೆಯು ಕಾಲಲ್ಲಿ ಕಟ್ಟಿ
ಲಜ್ಜೆ ಬಿಟ್ಟು ಹರಿಯ ನಾಮ
ಗರ್ಜನೆ ಮಾಡುತ್ತ ಅಘ-
ವರ್ಜರಾಗಿಹರ ಸಂಗ ೨

ಸ್ವರ್ಣಲೋಷ್ಠ ಸಮವೆಂದು
ತನ್ನದೆಂಬೊ ಹಮ್ಮು ತೊರೆದು

ಘನ್ನ ಮಹಿಮನ್ನ ಪಾಡಿ
ಧನ್ಯರಾಗಿಹರ ಸಂಗ ೩

ಪುಷ್ಪದಿ ಸುಗಂಧ ಹ್ಯಾಂ-
ಗಿಪ್ಪುದೊ ತದ್ವತ್ತು ಜಗ-
ದಪ್ಪ ಬೊಮ್ಮಾದಿಗಳಲ್ಲಿ
ಇಪ್ಪನೆನ್ನುವರ ಸಂಗ ೪

ದರ್ವಿಯಂತೆ ದೇಹವನ್ನು
ಸರ್ವದಾ ತಿಳಿದು ಶೇಷ-
ಪರ್ವತವಾಸನ್ನ ನಂಬಿ
ಉರ್ವಿಯೊಳಗಿಹರ ಸಂಗ ೫

ನಡೆವೋದು ನುಡಿವೋದು ನಿರುತ
ಕೊಡುವೋದು ಕೊಂಬೋದು ಜಗ-
ದೊಡೆಯನ ಪ್ರೇರಣೆಯೆಂದು
ನುಡಿದು ಹಿಗ್ಗುವರ ಸಂಗ ೬

ಸೃಷ್ಟಿಗೊಡೆಯನ ಮನ-
ಮುಟ್ಟಿ ಭಜಿಸುತ್ತ ಜ್ಞಾನ
ಕೊಟ್ಟ ಗೋಪಾಲವಿಠಲ-
ಗಿಷ್ಟರಾಗಿಹರ ಸಂಗ ೭

೧೧೨

ಸುಳಾದಿ

ಧ್ರುವತಾಳ

ಮಡಿ ಮಾಡಬೇಕು ಒಳ್ಳೆ ನಡತೆ ಕಲಿಯಬೇಕೆಂ-
ದೆಡಹಿ ಮುಗ್ಗುತ ನೀರ ಮಡುವಿನೊಳಗೆ ಪೋಗಿ

ಬುಡುಗುಳಿಯಂತೆ ಮಿಂದು ಗುಡುಗುಡುಗುಟ್ಟುತಲಿ
ನಡುವೆ ಮಂತ್ರಗಳು ಕಡುವೇಗ ಪಟ್ಟೆನಾಮ
ಬಡಿದು ಮುದ್ರೆಯ ಹಚ್ಚಿ ಜಡದೇಹ ತೊಳೆದು ನಾ
ಮಡಿವಂತನೆನಿಸುವೆ ಬಡಿವಾರತನದಲ್ಲಿ
ಅಡಿಗಡಿಗೆ ಕಾಮಕ್ರೋಧ ಒಡಲೊಳು ಮಲಮೂತ್ರ
ಜಡಿತ ರಕ್ತಮಾಂಸ ಕಡುಘೋರ ಇಂದ್ರಿಯಗಳು
ಕೊಡದೊಳು ಮದ್ಯ ತುಂಬಿ ಮುಡಿಗೆ ಪೂಮಾಲೆ ಸುತ್ತಿ
ಕಡು ಪರಿಮಳದ್ರವ್ಯ ಸುಗಂಧಲೇಪಿಸಿ
ನಡು ಬೀದಿಯೊಳಗಿಟ್ಟು ಬೆಡಗು ತೋರಿಸಿ ಇನ್ನು
ಮಡಿ ಮಾಡಿದರದು ಮಡಿಯಾಗಬಲ್ಲುದೆ
ಕಂಡಕಡೆಯೆಲ್ಲ ವ್ಯಾಪ್ತ ಗೋಪಾಲವಿಠಲನೆಂದು
ದೃಢನುಡಿಯ ಒಮ್ಮೆನುಡಿದು ಮಡಿಮಾಡಿದವ
ಮಡಿವಂತ ಮಡಿವಂತ ಮಡಿವಂತನೊ ೧

ಮಠ್ಯತಾಳ

ಮಡುವಿನೊಳಗೆ ಇದ್ದ ಕರಿರಾಜನ ನೋಡು
ಕಡು ಛಲ ಭಕುತ ಪ್ರಹ್ಲಾದನ ನೋಡು
ಅಡವಿಯೊಳಗೆ ಭಜಿಸಿದ ಧ್ರುವರಾಯನ ನೋಡು
ಕಡುಪಾತಕಿಯಾದ ಅಜಮಿಳನ ನೋಡು
ಎಡೆಯ ಕೊಂಡೋಡಿದ ಹನುಮಂತನ ನೋಡು
ಕಡೆ ಮೊದಲಿಲ್ಲದ ಮುನಿಗಳನೆ ನೋಡು
ಕಡಲಶಯನ ಗೋಪಾಲವಿಠಲ ನಾಮ
ನುಡಿದರಲ್ಲದೆ ಮಡಿಮಾಡಿ ದಣಿದರೆ ೨

ತ್ರಿಪುಟತಾಳ

ಗುರುಮುಖವಿರಬೇಕು ಹರಿದೈವವೆನಬೇಕು
ಪರ ಉಪಕಾರ ಇರಬೇಕು ಪ್ರತಿಕ್ಷಣ
ಪರರು ತನ್ನವರು ಸಮವೆಂದು ತಿಳಿಯಬೇಕು

ಹಿರಿದು ಹಿಗ್ಗದೆ ತಾನಸ್ವತಂತ್ರನೆನಬೇಕು
ಪರಮಾಣು ಸ್ಥಳದಲ್ಲಿ ಹರಿವ್ಯಾಪ್ತನೆನಬೇಕು
ಈ ಪರಿಯಲ್ಲಿ ತಿಳಿದರೆ ಅವನೆ ಮುಕ್ತಿಯೋಗ್ಯ
ಸಿರಿಯರಮಣ ನಮ್ಮ ಗೋಪಾಲವಿಠಲನ್ನ
ಕರುಣಕ್ಕೆ ಪಾತ್ರನಾದವನೆ ಇದನರಿವ ೩

ಅಟ್ಟತಾಳ

ನಿತ್ಯ ಸಂಸಾರಿಗೆ ಅತ್ಯಂತ ದೂರವು
ದೈತ್ಯಗಂತು ಸ್ವಪ್ನದಲ್ಲೂ ನಾಸ್ತಿ
ಸತ್ವಜೀವರಿಗೆ ಹರಿಕರುಣವನೆ ಮಾಡಿ
ತತ್ವಾಭಿಮಾನಿ ದೇವತೆಗಳಿಗೆ ಪೇಳಿ
ಮೊತ್ತ ದೋಷಗಳ ಕರಿಯಾಧೀನ ಮಾಡಿ
ಉತ್ತಮ ಕರ್ಮಗಳ ಮಾಡಿಸಿ
ಸತ್ಯಲೋಕಾಧಿಪನ ಕಲ್ಪಾಂತರದಲ್ಲಿ
ಸತ್ವಜೀವಿಗಳು ವಿರಜೆಯಲಿ ಬೊಮ್ಮನ ಸಹ
ಮುಕ್ತಿಯೈದುವರು ಶಕ್ತ್ಯಾನುಸಾರದಿಂದ
ಸತ್ಯಸಂಕಲ್ಪ ಗೋಪಾಲವಿಠಲನ್ನ
ಭೃತ್ಯರೆ ಧನ್ಯರೊ ಉತ್ತಮೋತ್ತಮರು ೪

ಆದಿತಾಳ

ಎತ್ತ ಪೋದರೇನು ಎತ್ತ ನಿಂತರೇನು
ಚಿತ್ತ ಬಂದಂತೆ ಚಿಗಿದಾಡಿದರೇನು
ಚಿತ್ತದಲ್ಲಿ ಹರಿಯ ಕಾಂಬುವ ಭಕುತರಿಗೆ
ಮತ್ತೆ ಇತರ ಜನರವರಿಗೆ ಸರಿಯೆ
ಮತ್ತೆ ವ್ಯಾಘ್ರನ ನೋಡಿ ನರಿ ಸುಟ್ಟುಕೊಂಡಂತೆ
ಚಿತ್ತಕ್ಕೆ ಬಂದ ಪರಿಪರಿ ಗಣನೆಯೇನೊ
ಉತ್ತಮೋತ್ತಮ ನಮ್ಮ ಗೋಪಾಲವಿಠಲನ
ಚಿತ್ತಾನುಸಾರ ನಡೆದವರೆ ಧನ್ಯರೊ ೫

ಜತೆ

ಆವಾವ ಕರ್ಮಗಳು ದೇವಗರ್ಪಿಸುವ
ಜೀವರೆ ಧನ್ಯರೊ ಗೋಪಾಲವಿಠಲ

೧೧೩

ಸುಮ್ಮನೆ ಬರುವುದೆ ಮುಕ್ತಿ ಗುರುಧರ್ಮಭಿಕ್ಷವ ಬೇಡಿದವಗೆ ಸುಕೀರ್ತಿ ಪ.

ಮನದಲ್ಲಿ ದೃಢವಿರಬೇಕು ದುಷ್ಟಜನಸಂಸರ್ಗಗಳನು ಬಿಡಲಿಬೇಕು
ಅನುಮಾನವನು ಸುಡಬೇಕು ತನ್ನ ತನುಮನಧನವನೊಪ್ಪಿಸಿಕೊಡಬೇಕು ೧

ಕಾಮಕ್ರೋಧವ ಬಿಡಬೇಕು ಹರಿನಾಮ ಸಂಕೀರ್ತನೆಯನು ಮಾಡಬೇಕು
ಹೇಮದಾಸೆಯ ಬಿಡಬೇಕು ಹರಿನಾಮವೆ ಗತಿಯೆಂದು ನೆರೆ ನಂಬಬೇಕು ೨

ವ್ಯಾಪಾರ ವರ್ಜಿಸಬೇಕು ಜ್ಞಾನದೀಪದ ಕಾಂತಿಯಲ್ಯೋಲಾಡಬೇಕು
ಪಾಪರಹಿತನಾಗಬೇಕು ನಮ್ಮ ಗೋಪಾಲವಿಠಲನ್ನ ನೆರೆನಂಬಬೇಕು ೩

ತತ್ತ್ವಪ್ರತಿಪಾದನೆ

೧೧೪

ಸುಳಾದಿ
ಧ್ರುವತಾಳ

ಅಪಕಾರ ಉಪಕಾರ ಹರಿಯೆ ನಿನ್ನಿಂದಲೇವೆ
ರಿಪು ಮಿತ್ರಗಳ್ವ್ಯಾಪಾರ ಹರಿಯೆ ನಿನ್ನದು ನೋಡಾ
ಕಪಟ ನಿಷ್ಕಪಟತ್ವ ನಿನ್ನಿಂದಲಾಗುವುದು
ಶಪಥ ಅಶಪಥಗಳು ನಿನ್ನಾಧೀನವು ಸ್ವಾಮಿ

ಕ್ಲಿಪುತ ಅಕ್ಲಿಪುತಗಳು ನಿನ್ನಾಧೀನವು ನೋಡಾ
ಅಪರಾಧ ಸುಪರಾಧ ನಿನ್ನಾಧೀನವು ನೋಡಾ
ಅಪವರ್ಗ ಸುಪವರ್ಗ ನಿನ್ನಾಧೀನ
ಸಪುತ ದ್ವಿಲೋಕ ಸುಪುತ ದ್ವೀಪ ನಿನ್ನಾಧೀನವು
ಸಪುತ ವರ್ಣವು ಉಳ್ಳ ಬೊಮ್ಮಾಂಡ ನಿನ್ನಾಧೀನ
ಸ್ವಪನಜಾಗ್ರಸುಷುಪ್ತಿ ವ್ಯಾಪಾರ ನಿನ್ನಾಧೀನ
ಸಫಲ ನಿಷ್ಫಲ ಸರ್ವಸಾಧನ ನಿನ್ನಾಧೀನ
ಉಪದೇಶಾನುಪದೇಶಗಳು ನಿನ್ನಾಧೀನ
ಗುಪುತವ್ಯಾಪುತ ಮೂರ್ತಿ ಗೋಪಾಲವಿಠಲ
ತೃಪುತ ನಿತ್ಯ ನಿರ್ಲಿಪ್ತ ನಿರ್ದೋಷ ನಿಜಾನಂದ ೧

ಮಠ್ಯತಾಳ

ಲೋಕಲೋಕಾದಿಗಳಲ್ಲಿ ವ್ಯಾಪ್ತ
ಲೋಕಾಧಿಪತಿಗಳಿಗೆ ಒಡೆಯ
ಸಾಕಾರನಾಗಿ ಸಾಕುವನು
ಆಕಾರ ಅಂತ್ಯ ಕಂಡವರಿಲ್ಲ
ಜೋಕೆ ಮಾಡುವ ಗತಿಗಳ ಅರಿದು
ನಾ ಕಾಣೆ ಇನ್ನೊಂದೊಸ್ತು ಸಾದೃಶ್ಯವ
ಶ್ರೀಕರುಣಾಕರ ಗೋಪಾಲವಿಠಲ
ಏಕನಲ್ಲದೆ ಅನ್ಯರ ನಾ ಕಾಣೆ ಪ್ರಭುವಿನ್ನು ೨

ರೂಪಕತಾಳ

ಹರಿ ಅರಿವಂತೆ ಪರಿಚಾರಕರರಿವನಾವ
ಹರಿ ಸೇವೆಕೊಂಡಂತೂಳಿಗವ ಕೊಂಬನಾವ
ಹರಿ ತಿಳಿದಂತೆ ತಿಳಿದು ಸಾಕುವನಾವ
ಹರಿ ನೋಡಿದಂತೆ ಪರಿವಾರ ನೋಡುವನಾವ
ಹರಿ ಆಳಿದಂತೆ ಪರಿಚಾರಕರಾಳುವನಾವ

ಹರಿ ಸಾರ್ವಭೌಮ ಸುರ ಚಕ್ರವರ್ತಿ ನೋಡು
ಸಿರಿ ರಾಜಾಧಿರಾಜ ದೊರೆ ಮಹರಾಜ
ಸಿರಿ ಅಜಭವವಂದ್ಯ ಗೋಪಾಲವಿಠಲ
ದೊರೆ ಒಬ್ಬನಲ್ಲದೆ ನರರು ಪ್ರಭುಗಳೆ ೩

ಝಂಪೆತಾಳ

ತನ್ನ ಯೋಗಕ್ಷೇಮವನ್ನು ಅರಿಯದ ಪ್ರಭುವು
ಇನ್ನಾವ ಪರಿವಾರದಿರವನು ಬಲ್ಲನು
ತನಗಾಗೊ ಸುಖದುಃಖ ತಾನರಿಯದವ
ಅನ್ಯರಿಗನುಭವ ತಂದೀಯಲಾಪನೆ
ಭಿನ್ನ ಕಾಮದಲ್ಲಿ ಬಯಕೆ ಉಳ್ಳವನು
ಚಿನ್ಮಯ ಹರಿಯಂತೆ ನಮ್ಮ ಪಾಲಿಸುವನೆ
ಅನಂತಗುಣಪೂರ್ಣ ಗೋಪಾಲವಿಠಲ
ಇನ್ನಿಂಥ ಪ್ರಭುವಿರಲು ಅನ್ಯರ ಗೊಡವ್ಯಾಕೆ ೪

ತ್ರಿಪುಟತಾಳ

ಬೊಮ್ಮಾಂಡವೆ ಪುರವು ಬೊಮ್ಮನಯ್ಯನೆ ಪಿತನು
ರಮೆದೇವಿಯೆ ಮಾತಾ ಸುಮನಸರೆ ಬಂಧು
ಧರ್ಮಾಧರ್ಮಗಳೆಂಬ ನಿರ್ಮಳೆಂಬೆರಡು ವೃತ್ತಿ
ಕರ್ಮವೆಂಬ ಭೂಮಿಯಲ್ಲಿ ಬಿತ್ತಿ
ನಮ್ಮ ಯೋಗ್ಯತೆ ತಕ್ಕ ಸಂಬಂಧ ಫಲಗಳು
ಒಮ್ಮೆಗಾದರು ಕೊಡಲು ಕಡಿಮೆ ಇಲ್ಲದಂತೆ
ಎಮ್ಮಯ್ಯ ಸಾಕು ಸಂಬಂಧವದು ಇಲ್ಲ
ಹಮ್ಮು ಸಲ್ಲದು ನರನೆ ಈ ಮಹಿ ನಿನ್ನದೆ
ನಮ್ಮ ಸಾಕುವ ದೊರೆ ಗೋಪಾಲವಿಠಲ
ಆ ಮಹಿಮನಿರಲಾಗಿ ನಿಮ್ಮ ನುತಿಸಲ್ಯಾಕೆ ೫

ಅಟ್ಟತಾಳ

ಜನನಿ ಗರ್ಭದಲ್ಲಿ ತನುವು ಪೊರೆದನಾವ
ಜನಕನ ಉದರದಿ ತಂದು ಇಟ್ಟವನಾವ
ಎನಗೆ ಶ್ರೀಹರಿಪಾದವನಜಧ್ಯಾನದ ಬಲ
ಇನಿತಾದರೆನ್ನಲ್ಲಿ ಅನುವಾಗಿ ಇತ್ತೆ
ಮನೆಗೆ ಇದ್ದಲ್ಲಿಗೆ ತನಗೆ ತಾನೆ ಸರ್ವ
ಘನಕಾಮ ಕನಕ ವಸನ ಮುಂತಾದುವು ಎಲ್ಲ
ಸೆಣಸ್ಯಾಡಿ ಒಲ್ಲೆಂದರೆ ಬಿಡುವವು ಕಾಣೊ
ಸನಕಾದಿಗಳ ವಂದ್ಯ ಗೋಪಾಲವಿಠಲ
ಘನದೈವ ಎನಗಿರೆ ಮನುಜರ ಮಾತೇನು ೬

ಆದಿತಾಳ

ಹರಿಯನರಿಯದವನೆ ದರಿದ್ರ
ಹರಿಯನರಿದ ಬಡವ ಸಂಪನ್ನ
ಹರಿಯು ಈಯದ ವರವು ಅನಿತ್ಯ
ಅರಿಯದುಣುವನ ಸಿರಿಯು ಮಿಥ್ಯಾ
ಹರಿಯ ಭಜಿಸದೆ ಬದುಕಿದ್ದೆ ವ್ಯರ್ಥ
ಹರಿಗೆ ತನ್ನ ಶರಣರೆಲ್ಲ ಸ್ವಾರ್ಥ
ಹರಿ ಅವತಾರ ಗೋಪಾಲವಿಠಲ
ದೊರೆ ಒಬ್ಬನೆ ಮನವೆರಕ ಎನಗಿನ್ನು ೭

ಜತೆ

ರಾಜಾಧಿರಾಜ ಗೋಪಾಲವಿಠಲ ಮಹಾ-
ರಾಜನಿರಲು ಅನ್ಯರಾಜರ ಗೊಡವ್ಯಾಕೆ

೧೧೫

ಸುಳಾದಿ

ಧ್ರುವತಾಳ

ಅಪರೋಕ್ಷವೆಂಬುದು ಬಹುದೂರವಿಲ್ಲವಿನ್ನು
ಸ್ವಪರೋಕ್ಷ ದಾರಢ್ಯದಂತೆ ತಿಳಿದಿರುವುದು
ಅಪವಾದದ ಮಾತಲ್ಲ ಆಲಿಸಿದರೆ ತಿಳಿವುದು
ಕಪಟರಹಿತರಾದ ಕೋವಿದರು
ಶಪಥ ಮಾಡಲಿಬೇಕು ಸರ್ವೋತ್ತಮ ಹರಿಯೆಂದು
ಚಪಲ ಸಂದೇಹವನ್ನು ಬಿಟ್ಟು
ತಪಸು ಎಂದು ತಿಳಿದು ತ್ರಿವಿಧ
ತಾಪತ್ರಯವು ಅಪವರ್ಗ ಸುಪವರ್ಗ ದಾರಿ ಹಿಡಿದು
ಕುಪಿತನಾಗದೆ ದುಷ್ಟ ಉಕ್ತಿ ಸುಜನಕ್ಕೆ
ಕ್ಲುಪ್ತ ಅಧಿಕಹ್ರಾಸ ಇಲ್ಲವೆಂದು
ಗುಪಿತದಲ್ಲಿ ಹರಿಯ ಗುಣಗಳ ಕೊಂಡಾಡಿ
ಸ್ವಪನ ಜಾಗ್ರತಿ ವ್ಯಾಪಾರಗಳ ತಿಳಿದು
ಸುಫಲ ದುಷ್ಫಲಗಳು ಈಶಾಧೀನ ತಿಳಿದು
ರಿಪು ಮಿತ್ರಗಳ ವ್ಯಾಪಾರ ಹರಿಯೆ ಎಂದು
ಸಪುತಧಾತುಗಳನ್ನಮಯಾದಿ ಕೋಶಗಳು
ಸಪುತ ದಶಸಹಸ್ರ ದ್ವಿನಾಡಿಯಲಿ
ಗುಪಿತನಾಗಿದ್ದ ಹರಿಯ ಗುಣರೂಪ ಕ್ರಿಯೆಗಳ
ಜಪಿಸು ಏಕೀಭೂತ ಬಿಂಬದಲ್ಲಿ
ಕಪಿಲ ಮೊದಲಾದ ಭಗವದವತಾರ
ತಪಮಾಡಿ ಚಿಂತಿಸು ಬಿಂಬಕ್ರಿಯ
ಗುಪಿತ ವ್ಯಕುತ ನಿನ್ನ ಗೋಪಾಲವಿಠಲ
ತಪಸಿಗೆ ಲಭ್ಯನಾಹ ಈ ಪರಿ ಚಿಂತಿಸೆ ೧

ಮಠ್ಯತಾಳ

ಒಂದು ಮೂರುತಿ ಒಂದೆರಡು ಮೂರುತಿ
ಪೊಂದಿ ಲಿಂಗದೇಹ ಇಷ್ಟ ಮೂರುತಿ
ಒಂದು ಮೂರು ಮೂರ್ತಿ ಅನಿರುದ್ಧಕಾಯ-
ದಿಂದ ಒಳಹೊರಗೆ ವ್ಯಾಪ್ತವಾದ ಮೂರ್ತಿ
ಚೆಂದವಾದ ಹೃದಯ ಸದನದಲ್ಲಿಪ್ಪ ಮೂರುತಿ
ಒಂದೇಳು ದಳದಿ ಬಿಡದೆ ತಿರುಗುವ ಮೂರುತಿ
ಒಂದು ಹತ್ತು ಮೂರ್ತಿ ಚತುರ್ವಿಂಶತಿ ಮೂರ್ತಿ
ಒಂದು ನವಮೂರುತಿ ಮತ್ಸ್ಯಾದಿಗಳಿನ್ನು
ಒಂದೆ ಕೃದ್ಧೋಲ್ಕಾದಿ ಮೂರುತಿಗಳು
ಒಂದು ಮೂರು ಮೂರ್ತಿ ವಟು ಜಾಮದಗ್ನಿ
ಸಂದಿಸಂದಿಗೆ ವ್ಯಾಪ್ತ ಮೂರುತಿಗಳ ತಿಳಿದು
ವಂದಿಸಿದರೆ ಎಲ್ಲ ಒಂದೆ ಮೂರ್ತಿ ಕಾಣೋ
ಇಂದಿರೆಯರಸ ಗೋಪಾಲವಿಠಲರೇಯ
ವಂದಿಸಿದಂತೆ ತನ್ನವರಲಿಪ್ಪುವನು ಬಿಡದೆ ೨

ರೂಪಕತಾಳ

ಸಾಸಿರನಾಮಕ್ಕೆ ಸಾಸಿರ ಮೂರುತಿ
ಸಾಸಿರದಳದಲ್ಲಿ ವಾಸವಾದ ಮೂರುತಿ
ದಾಸೋಹಂ ಎಂದವಗೆ ಬಿಡದೆತೋರುವ ಮೂರುತಿ
ಲೇಸು ಹ್ರಾಸಗಳಿಗೆ ಹಿಗ್ಗಿಕುಗ್ಗದ ಮೂರುತಿ
ಕಾಸಿಗೆ ಬೆಲೆಯಾಗಿ ಕ್ರಯವಾಗದ ಮೂರುತಿ
ದೇಶ ದೇಶದಿ ವ್ಯಾಪ್ತವಾಗಿದ್ದ ಮೂರುತಿ
ನಾಶರಹಿತ ಸ್ವಪ್ರಕಾಶವಾದ ಮೂರುತಿ
ದೋಷರಹಿತ ಮೂರುತಿ ಗೋಪಾಲವಿಠಲ
ವಾಸವಾಗಿ ಹೃದಯದೊಳಗಿಪ್ಪ ಮೂರುತಿ ೩

ಝಂಪೆತಾಳ

ಕಣ್ಣಿನೊಳಗೆ ಇದ್ದು ಕಾಣಿಸುವ ಮೂರುತಿ
ಕರ್ಣಂಗಳಲ್ಲಿ ನಿಂತು ಕೇಳಿಸುವ ಮೂರುತಿ
ಭಿನ್ನ ಭಿನ್ನ ಮೂರುತಿ ಬೀಜವಾದ ಮೂರುತಿ
ಅನ್ಯೋನ್ಯ ಆಶ್ರಯವಾಗಿದ್ದ ಮೂರುತಿ
ತನ್ನ ನೆನೆವರಿಗೆ ತಗುಲಿ ತೊಲಗದ ಮೂರುತಿ
ನಿನ್ನವನೆಂದವಗೆ ನೆಲೆಯಾದ ಮೂರುತಿ
ಚಿನ್ಮಯ ಮೂರುತಿ ಗೋಪಾಲವಿಠಲ
ಅನ್ಯ ಜನರಿಗೆ ಅವೇದ್ಯನಾದ ಮೂರುತಿ ೪

ತ್ರಿಪುಟತಾಳ

ಏಸು ಜನ್ಮದ ಉಪಾಸನೆ ಮಾಡಲು
ವಾಸನಾ ರೂಪದಿ ಒಲಿದು ತೋರಿದ ಮೂರುತಿ
ಕೇಶವ ಮತ್ಸ್ಯಾದಿ ಅವತಾರ ರೂಪದಿ
ದಾಸ ಜನರಿಗೆ ಒಲಿದು ತೋರುವ ಮೂರುತಿ
ಈ ಶರೀರ ಹೃದಯಾಕಾಶದಲ್ಲಿ ನಿಂದು
ಸುಷುಪ್ತಿಲಾತ್ಮಗೆ ಸುಖವುಣಿಸುವ ಮೂರುತಿ
ಭಾಸುರ ಮೂರುತಿ ಭವಗಳ ಕಳೆದಿನ್ನು
ವಾಸವಾಗಿ ನಿತ್ಯದಿ ನಲಿದು ಆಡುವ ಮೂರುತಿ
ವಾಸುದೇವಾಚ್ಯುತ ಗೋಪಾಲವಿಠಲ
ಶ್ರೀಶ ಕೃಷ್ಣ ಎನ್ನ ಪೋಷಿಸುವ ಮೂರುತಿ ೫

ಅಟ್ಟತಾಳ

ಸೃಷ್ಟಿಸ್ಥಿತಿಲಯಕಾರಣ ಮೂರುತಿ
ನಿಷ್ಟಾನಿಷ್ಟಪ್ರದವಾದ ಮೂರುತಿ

ಇಷ್ಟಾರಿಷ್ಟಕ್ಕೆ ತೊಡಕಾದ ಮೂರುತಿ
ಬಿಟ್ಟೇನೆಂದರು ಬಿಡಲೀಯದ ಮೂರುತಿ
ನಷ್ಟ ಜನರಿಗಿನ್ನು ವರ್ಜಿಸುವ ಮೂರುತಿ
ಮುಟ್ಟಿ ಭಜಿಸುವರಿಗೆ ಮುಂದೊಲಿದು
ಸ್ಪಷ್ಟವಾಗಿ ಸುಳಿದಾಡುವ ಮೂರುತಿ
ದಿಟ್ಟಿಸಿ ನೋಡಲು ಸರ್ವ ವಸ್ತುಗಳಿಗು
ಗಟ್ಟಿಯಾಗಿ ಬಿಂಬವಾಗಿದ್ದ ಮೂರುತಿ
ಇಷ್ಟದೈವವು ನಮ್ಮ ಗೋಪಾಲವಿಠಲ
ಕಷ್ಟ ಸಂಸಾರದ ಕಡಲ ದಾಟಿಪ ಮೂರುತಿ ೬

ಆದಿತಾಳ

ತಾರಕ ಕಾರಣವಾದಂಥ ಮೂರುತಿ
ತಾರಕ ಮಂತ್ರೋಪದೇಶಕ ಮೂರುತಿ
ಆರಬ್ಧಾಂತಗಾಮಿನಿಯಾದ ಮೂರುತಿ
ಭಾರಕರ್ತ ಅನಿಮಿತ್ತ ಬಂಧು ಮೂರುತಿ
ನಾರಿ ದ್ರೌಪದಿ ಅಭಿಮಾನಕಾಯ್ದ ಮೂರುತಿ
ನಾರಿಯರ ವ್ರತಕೊಲಿದಂಥ ಮೂರುತಿ
ಪೋರರ ಒಡಗೂಡಿ ಆಡಿದ ಮೂರುತಿ
ನಾರಾಯಣಿ ರೂಪವಾದ ಶ್ರೀ ಮೂರುತಿ
ವಾರಿಜೋದ್ಭವಪಿತ ಗೋಪಾಲವಿಠಲ
ಕಾರಣನಾಗೆನ್ನ ಕಾಯ್ವಂಥ ಮೂರುತಿ ೭

ಜತೆ

ಖಂಡಾಖಂಡ ಧ್ಯಾನ ಬಿಡದೆ ನಿತ್ಯವು ಮಾಡೆ ಅ-
ಖಂಡೇಶ ಗೋಪಾಲವಿಠಲ ನಿನಗೆ ಒಲಿವ

೧೧೬

ಸುಳಾದಿ

ಧ್ರುವತಾಳ

ಆಡಿ ಆಡಿಸುವನು ನಾಡ ಜೀವನರನ್ನು
ಮಾಡಿ ಮಾಡಿಸುವನು ನಾಡಜೀವರ ಕಯ್ಯ
ಬೇಡಿ ಬೇಡಿಸುವನು ನಾಡಜೀವರ ಕಯ್ಯ
ನೋಡಿ ನೋಡಿಸುವನು ನಾಡಜೀವರುಗಳ
ಓಡಿ ಓಡಿಸುವನು ನಾಡಜೀವರನ್ನು
ನೀಡಿ ನೀಡಿಸುವನು ನಾಡಜೀವರ ಕಯ್ಯ
ಕೇಡು ಲಾಭವು ಎರಡು ಕೂಡಿ ಹರಿ ಅಧೀನ
ಮಾಡಿಸುವ ಯೋಗ್ಯತೆ ಹಿಡಿದು ಸಾಧನವ
ರೂಢಿಯೊಳಗೆ ಇನ್ನು ಈಡಾದ ವಸ್ತುವಿಲ್ಲ
ನಾಡಜೀವರಿಗೀತನಲ್ಲದೆ ಗತಿಯಿಲ್ಲ
ಪೀಡೆ ಮನವೆ ನಿನ್ನ ನಾಡಯೋಚನೆ ಹೋಗ-
ಲಾಡಿ ಹರಿಯ ಪಾದ ನೋಡಿ ಸುಖಿಯಾಗಿರು
ನಾಡದೈವರ ಗಂಡ ಗೋಪಾಲವಿಠಲನ್ನ
ಹಾಡಿ ಪಾಡಿ ಕೊಂಡಾಡಿ ಬೇಡಿಕೊ ಪದ್ಧತಿಯ ೧

ಮಠ್ಯತಾಳ

ನನ್ನದೆಂಬುದರೊಳು ನಿನ್ನದೆ ಹರಿಯೆನ್ನು
ಉಣ್ಣೊ ಊಟವು ಎಲ್ಲ ನಿನ್ನದೆ ಹರಿಯೆನ್ನು
ಚಿನ್ನ ರೌಪ್ಯಗಳು ಬಣ್ಣ ಬಿಳಿದು ಎಲ್ಲ
ಕಣ್ಣಲ್ಲಿ ಕಂಡದ್ದು ನಿನ್ನದೆ ಹರಿ ಅನ್ನು
ಪುಣ್ಯ ಪಾಪಗಳು ನಿನಗೆ ಮಾಡಲಿಕ್ಕೆ
ಇನ್ನು ಸ್ವಾತಂತ್ರ್ಯವು ಎಂದೆಂದಿಗೆ ಇಲ್ಲ

ಕಣ್ಣು ಇಲ್ಲದವಗೆ ಅನ್ನ ಉಣಿಸಿದಂತೆ
ಪುಣ್ಯಾತ್ಮ ದೇವ ಎನ್ನ ಪಾಲಿಸುವನು
ನಿನ್ನ ಕರ್ತೃತ್ವವು ಹರಿ ಅಧೀನವು
ಮನ್ನಿಸುವನು ತನ್ನ ಮನ ಬಂದಂತಾಡಿ
ಅನ್ಯದೈವರ ಗಂಡ ಗೋಪಾಲವಿಠಲ
ಅನಂತ ಶಕ್ತನು ಅನಂತ ಗುಣಪೂರ್ಣ ೨

ರೂಪಕತಾಳ

ಊರ ಒಳಗಿನ ವಸ್ತು ಆರಾದರು ಒಯ್ದರೆ
ದೂರು ಹಾಕಿ ತಳವಾರರ ಹೊಡೆದಂತೆ
ಕ್ರೂರವಚನ ನಿಷ್ಠುರ ಜಿಹ್ವೆ ನುಡಿದರೆ
ಸೇರದೆ ಪರರ ಪಲ್ಲುದುರ ಬಡಿದಂತೆ
ಆರು ಮೆಚ್ಚದ ತಪ್ಪು ಕರಗಳು ಮಾಡಿದರೆ
ಹುರಿ ಬೆನ್ನ ಚರ್ಮ ಹಾರ ಹೊಡೆದಂತೆ
ಆರಾರಲ್ಲಿ ಕರ್ತ ಕಾರಯತಾ ಪ್ರೇರಕ
ಮಾರಜನಕನೆ ವ್ಯಾಪಾರ ಮಾಡಿಸಿ ಜೀವ
ನರಗೀ ಪ್ರಕಾರ ಕರ್ಮಫಲವುಣಿಸುವ
ಆರು ಈತಗೆ ಒಂದು ಸರಿಯಾದ ವಸ್ತುವಿಲ್ಲ
ವಾರಿಜನಾಭನೆ ಸರ್ವೋತ್ತಮ ಕಾಣಿರೋ
ಶ್ರೀರಮಣ ನಮ್ಮ ಗೋಪಾಲವಿಠಲ
ಧೀರರಿಗೆ ಧೀರ ಕಾರುಣ್ಯಸಾಗರ ೩

ಝಂಪೆತಾಳ

ದೇವನೆಂದರೆ ನಮ್ಮ ದೇವ ಈತನೆ ಕಾಣೊ
ದೇವಾದಿ ದೇವತೆಗಳಿಗೆ ದೇವದೇವರೆಂಬೊ ಮಿಕ್ಕ
ದೇವತೆಗಳಿಗೆಲ್ಲ ದೇವ ಈತನೆ ಕಾವುತಾನೆ ನೋಡಿ
ದೇವನಿಲ್ಲದ ಸ್ಥಳವು ಆವಲ್ಲಿ ಇಲ್ಲವಿನ್ನು

ದೇವ ಸರ್ವತ್ರದಲ್ಲಿ ವ್ಯಾಪಕ ಭಾವ ಶುದ್ಧದಲಿನ್ನು
ಸೇವಿಸಿದರಿನ್ನು ದೇವ ದೇವಕ್ಕಿಗೆ ಕಂದನಾದ
ಗೋವಳರೊಡೆಯ ನಮ್ಮ ಗೋಪಾಲವಿಠಲನ
ಕಾವೊಘನವಯ್ಯ ಇನ್ನಾವಲಿದ್ದರನ್ನ ೪

ತ್ರಿಪುಟತಾಳ

ಲೋಕಲೋಕದೊಳು ಅನೇಕ ಜೀವರುಂಟು
ಲೋಕಲೋಕಾಚಾರ ಅನೇಕ ಕರ್ಮಗಳುಂಟು
ಲೋಕ ಲೋಕದೊಳಗೆ ತ್ರಿವಿಧ ಜೀವರುಂಟು
ಲೋಕ ಲೋಕಕೆ ಎಲ್ಲ ಸಾಕುವನೊಬ್ಬನೆ
ಕಾಕುಗೊಂಡಿನ್ನು ಕಂಡವರಿಗೆ ಬೇಡಿದರೆ
ತಾ ಕೊಡುವರೆಲ್ಲಿಂದ ತಾ ಕಾಣದವರೆಲ್ಲ
ಸಾಕುವನೊಬ್ಬನೆ ಸಕಲ ಜೀವರುಗಳ
ನೀ ಕೇಳು ಮನವೆ ನಿನ್ನಾವ್ಯಾಕುಲವನು ಬಿಡು
ಏಕ ಚಿತ್ತದಲಿನ್ನು ಏಕೋದೇವನ ಭಜಿಸು
ಸಾಕಲ್ಯ ಗುಣಪೂರ್ಣ ಗೋಪಾಲವಿಠಲ
ಲೋಕದಿಂದಲಿ ಭಿನ್ನ ಲೋಕರ ಪಾಲಕ ೫

ಅಟ್ಟತಾಳ

ತ್ರಿವಿಧ ಜೀವರು ಉಂಟು ತ್ರಿವಿಧ ಕರ್ಮಗಳುಂಟು
ತ್ರಿವಿಧ ಗುಣಗಳುಂಟು ತ್ರಿವಿಧ ಕಾರ್ಯಗಳುಂಟು
ತ್ರಿವಿಧರೊಳೊಂದೊಂದು ತ್ರಿವಿಧ ಬಗೆಯೆ ಉಂಟು
ತ್ರಿವಿಧ ಜೀವರ ಕಾರ್ಯ ಶ್ರೀಹರಿ ಆಧೀನ
ತ್ರಿವಿಧರಿಂದಲಿ ಭಿನ್ನ ತ್ರಿವಿಧರ ಪಾಲಕ
ತ್ರಿವಿಕ್ರಮಮೂರ್ತಿ ಗೋಪಾಲವಿಠಲನ್ನ
ತಿಳಿದು ಸಾಕಲ್ಯದಿ ತಿಳಿಯಲು ವಶವಲ್ಲ ೬

ಆದಿತಾಳ

ಈತನೆ ನಮ್ಮ ದೇವ ಈತನೆ ನಮ್ಮ ಕಾವ
ಈತನೆ ನಮ್ಮ ತಂದೆ ಈತನೆ ನಮ್ಮ ತಾಯಿ
ಈತನೆ ನಮ್ಮ ಬಂಧು ಈತನೆ ನಮ್ಮ ಬಳಗ
ಈತನೆ ಇಹ ನಮಗೀತನೆ ಪರವೊ
ಈತನೆ ದೇಶವು ಈತನೆ ದಿಕ್ಕಿನ್ನು
ಈತನೆ ಗತಿ ಇನ್ನೊಂದು ದೈವವಿಲ್ಲ
ವಾತಜಾತನಪಿತ ಗೋಪಾಲವಿಠಲ
ಸೋತೆನೆಂದವರ ಬೆನ್ನಟ್ಟಿ ಪಾಲಿಸುವನು ೭

ಜತೆ

ಬಿಡೆನು ಬಿಡೆನು ಇನ್ನು ಮುಂದೆ ಇದೆ ದೈವ
ಪಿಡಿದೆ ಗೋಪಾಲವಿಠಲನ ಅಡಿಗಳ ಅನುದಿನ

೧೧೭

ಸುಳಾದಿ

ಧ್ರುವತಾಳ

ಆದಿನಾರಾಯಣ ಅನಿಮಿತ್ತ ಬಂಧು ದೇವ
"ಭೇದಕಾರ್ಯತೋ ಗುಣವಾನ್ ಜ್ಞಾನಾನಂದ ಪೂರ್ಣ"
ವೇದಾಂತವೇದ್ಯ ಅವತಾರ ಮೂಲಕ್ಕೆ ಐಕ್ಯ-
ನಾದ ಬಿಂದು ಘೋಷ ಸರ್ವರಂತಲಿ ಪೂರ್ಣ
ಮೇದಿನಿಯೊಳಗಂತರ್ಬಹಿ ನಾರಾಯಣ ವ್ಯಾಪ್ತ
ಭೇದಾಭೇದವು ನಾಶ ಜನನಮರಣರಹಿತ
ಆದಿಯಲ್ಲಿ ಪೂರ್ಣ ಸಾಧುಜೀವರಪಾಲ ಸರ್ವಕಾಲದಲ್ಲಿ

ಶೋಧಿಸಿ ತಿಳಿವೋದು ಜಡಚೇತನದಿ ಭಿನ್ನ
ಕ್ರೋಧರಹಿತ ಸಕಲ ದೋಷದೂರ ರಂಗ
ಮೋದತೀರ್ಥರ ಉಕ್ತಿ ಸಾಧಿಸಿ ಅರಿದರೆ
ಆದರಿಸುವನು ಹರಿ ಅವಲ್ಲಿದ್ದ ರನ್ನ
ಮಾಧವನ ಕೂಡ ವಿರೋಧ ಮಾಡಿದಂತೆ ಅಲ್ಲ
ಖೇದಗೊಂಡು ಬರಿದೆ ಏನಾದರೂ ನೋಡಲಿ
ಖೇದಗೊಂಡು ಬರಿದಾಗದೆ ಪೇಳುವುದಿಲ್ಲ
ಶ್ರೀಧರ ಸೃಷ್ಟಿಸ್ಥಿತಿಲಯಕೆ ಕಾರಣ
ಯಾದವರ ಕೂಡಲಿ ಅಜ್ಞ ಜನಮೋಹ
ಈ ಧರೆಯೊಳಗಾಡಿ ಬಗೆ ಬಗೆ ತೋರಿದ
ಕಾದಿ ಸೋತು ಬಾಣದಿಂದ ಪೆಟ್ಟನೆ ತಿಂದ
ಆದಾವ ಜನರಿಗೆ ಅಜ್ಞಾನ ತೋರಿದ
ಕಾದನು ಗೋವುಗಳ ಭಕ್ತರ ಪಾಲಿಪ
ಈ ದೇವಕಿಗೆ ತಾ ಸುತನು ಆದ
ಓದನಗಳು ಉಂಡ ಉದ್ಧರಿಪ ಭಕ್ತರ
ಭೇದಾಭೇದ ತೋರಿದ ಅಸುರರಿಗೆ
ವಾದ ಸಲ್ಲದು ಕೋವಿದರಾದರು ಕೇಳಿ
ವಾದಿಸುವರಿಗೆ ನರಕವು ತಪ್ಪದು
ಭೂದೇವಿ ಅರಸ ಗೋಪಾಲವಿಠಲನ್ನ
ಪಾದ ಸೇವಕರಿಗೆ ಬಾಧೆ ಬಂಧನವಿಲ್ಲ ೧

ಮಠ್ಯತಾಳ

ಒಂದೆ ದೇವನು ತಾನು ಅನಂತ ಅನಂತವತಾರ
ಒಂದೊಂದು ಅವತಾರಕ್ಕೆ ಮೂಲ ರೂಪದಲ್ಲಿದ್ದ
ಒಂದೆ ಬಲ ಜ್ಞಾನ ಆನಂದ ನಿರ್ದೋಷ
ಒಂದಾನಂತ ರೂಪವರಿದು ಕಡೆಯ ಮಾಡಿ
ಒಂದವತಾರ ನೋಡೆ ಒಂದೆ ಸಮಾನವಿನ್ನು
ಕುಂದು ಕೊರತೆಯಿಲ್ಲ ಹರಿಗುಣ ಬಲಜ್ಞಾನ

ಒಂದರೊಳನಂತ ಅನಂತಾನಂತ
ಎಂದೆಂದಿಗು ತಾನು ಒಂದೆ ಪರಿಯಲಿ ರೂಪ
ಸಂದೇಹವು ಬೇಡಿ ಸಜ್ಜನರೆ ಕೇಳಿ
ಇಂದಿರಾದೇವಿ ತಾನು ಚಂದದಿ ಹರಿ ನಖವು
ಎಂದು ಪಿಡಿದು ತಾನು ಎಣಿಸಲಾರದ ರೂಪ
ಅಂದದ್ದೆ ಆನಂದ ಅಬ್ಧಿಯೊಳಗೆ ಮುಳುಗಿ
ಮಂದರಧರನ ತಾ ಪೊಂದಿ ಕೊಂಡಾಡಿದಳು
ಮಂದ ಜನರು ಕೇಳಿ ಇಂದಿರೇಶನ ರೂಪ
ಒಂದೆರಡೆಂಬಂಥ ಮಿತಿ ಇಲ್ಲವು ಕಾಣೊ
ಸಿಂಧುಶಯನ ಗೋಪಾಲವಿಠಲರೇಯ
ಒಂದೆ ದೈವವೆನ್ನ ಚೆಂದದಿ ಪಾಲಿಸುವ ೨

ರೂಪಕತಾಳ

ಪತಿ ಉಪಾಸನೆಯನ್ನು ಇಂದಿರಾದೇವಿಗೆ
ಪಿತನುಪಾಸನೆಯನ್ನು ಬೊಮ್ಮಾದಿಗಳಿಗಯ್ಯ
ಪಿತನಪಿತನುಪಾಸನೆಯು ಹರಾದಿಗಳಿಗೆ ಸತತ
ಭೃತ್ಯಭಾವ ಇಂದ್ರಕಾಮರಿಗಯ್ಯ
ಇತರ ಜನರಿಗೆಲ್ಲ ಇದರಂತೆ ತರುವಾಯ
ಗತಿ ಹೊಂದುವರಿಗೆಲ್ಲ ಸ್ವಾಮಿ ಭೃತ್ಯನ್ಯಾಯ
ಜಿತ ನಿತ್ಯ ಸಂಸಾರಿಗಳ ಉಪಾಸನೆ ಎನ್ನು
ಪಥತಪ್ಪಿ ಕಂಡ ದೇವತೆಗಳ ಭಜನೆಯು
ಹಿತ ದೈವ ಒಂದೆ ಅಹಿತ ದೈವ ಒಂದೆ
ಇತರ ದೈವಗಳೆಲ್ಲ ಕರ್ಮಠರೆಂದೆಂದು
ಪೃಥಿವಿಯೊಳಗೆ ಸಂಚರಿಸುತಿಪ್ಪರು
ಗತಿಗೇಡಿಗಳೆಲ್ಲ ಹರಿಯನ್ನು ತಮ್ಮ ಸಮಾ-
ನಿತನ ಮಾಡಿಕೊಂಡು ಮತಿಗೇಡಿಗಳು ಆಗಿ
ಮಿತಿ ತಪ್ಪಿ ತಮ್ಮ ತಮ್ಮ ಗತಿಗಳನೈದೋರು
ಪತಿತಪಾವನ ರಂಗ ಕ್ಷಿತಿಯ ಒಳಗೆ ಇನ್ನು

ಕೃತಿಯ ಮಾಡಿಸುವನು ತ್ರಿವಿಧ ಜೀವರ ಕೈಯ
ಅತೀತನಾಗತಬಂಧು ಗೋಪಾಲವಿಠಲನು
ಗತಿ ಎಂದು ನಂಬಲು ಹಿತದಿ ಪಾಲಿಸುವ ೩

ಝಂಪೆತಾಳ

ಧರೆಯೊಳು ರಾಮಕೃಷ್ಣಾವತಾರಗಳನ್ನು
ನರರಂತಾಗದೆ ಪ್ರಾಕೃತವೆಂಬದರಿ
ಮರಳುಗೊಳ್ಳಲಿ ಬೇಡ ಹಿರಿಯರಾದರು ಕೇಳಿ
ಅರಿದು ಪೇಳುವೆ ಹರಿ ಪ್ರೇರಣೆಯಿಂದ
ಹರಿಯೆ ನಾರಾಯಣ ಮೂಲರೂಪದಿ ತಾನು
ಇರಲಾಗಿ ಕ್ಷೀರಸಾಗರದಲಿನ್ನು
ಪರಮ ಕ್ರೂರತನದಿ ಬಲಿಚಕ್ರವರ್ತಿ ತಾನು
ಹರಿಯ ಕಿರೀಟ ಎತ್ತಿಕೊಂಡೋಡಲು
ಗರುಡ ವೇಗನೆ ಕಂಡು ಮರಳಿ ತಂದು ಇನ್ನು
ಸಗ್ರನೆ ಗೋಮಂತ ಪರ್ವತದಲಿದ್ದ
ಸಿರಿಕೃಷ್ಣಗೆ ತಾನು ಹರುಷದಿ ಇಡಲಾಗಿ
ಸರಿ ಹೋಗೋದೆ ಬೇರೆ ಬೇರೆ ಆದರೆ
ಹರಿ ಮೂಲವು ಇನ್ನು ಅವತಾರಗಳಿಗೆಲ್ಲ
ಎರಡಿಲ್ಲವು ಕಾಣೊ ಜ್ಞಾನಿಗಳ ಕೇಳಿ
ಮರಳಿ ಹಿಂದಾದ್ದು ಮುಂದಾಗುವುದಿನ್ನು
ಎರಡು ಪರಿ ಅನ್ನವನು ಒಲ್ಲೆನೆಂದು
ದುರುವಾಸ ಮುನಿ ಬಂದು ಹರಿರಾಮನ ತಾನು
ತ್ವರಿತದಲಿ ಅನ್ನವನು ಬೇಡಲಾಗಿ
ಸಿರಿರಾಮನು ತಾನು ಕರವನೆತ್ತೀಯಲು
ಹರುಷದಲಿ ಉಂಡು ಸಂತೋಷವಾಗನೆ
ಬರಿದೆ ಪ್ರಾಕೃತ ಶರೀರವಾದಡೆ ಇನ್ನು
ದೊರಕುವುದೆ ಈ ಪರಿ ಸಮ ರತುನವು
ಹರಿಗೆ ಪ್ರಾಕೃತ ಶರೀರವೆಂದವಗೆ ನರಕವು

ಹರಿಪರನೆಂದವಗೆ ಇಹಪರ ಸುಖವು
ದುರುಳಜನಮರ್ದನ ಗೋಪಾಲವಿಠಲನಿಗೆ
ಸರಿಯಿಲ್ಲ ಸರಿಯಿಲ್ಲ ಪರದೇವತೆ ೪

ತ್ರಿಪುಟತಾಳ

ಜಗಕೆ ಒಡೆಯನಾಗಿ ಜಗವ ಪಾಲಿಸುವನು
ಜಗಕೆ ಕರ್ತನಾಗಿ ಸೃಷ್ಟಿಯ ಮಾಳ್ಪನು
ಜಗಕೆ ಭಿನ್ನವಾಗಿ ಲಯವನು ಮಾಡುವ
ಜಗಜನ್ಮಾದಿಕರ್ತ ನಮ್ಮ ರಂಗ
ಜಗದೇಶ್ವರನು ತಾನು ಜಗುಳಿಸಿದರೆ ಬೆರಳ
ಜಗದ ಜೀವರು ಚಲಿಸಲೊಶವಲ್ಲವು
ನಗವ ಪಿಡಿದು ಇನ್ನು ಚೇತನ ಮಾಡಬಲ್ಲ
ಸೊಗಸಾಗಿ ಜಡ ಚೇತನಗಳ ಮಾಡಬಲ್ಲ
ಜಗವ ಸೃಷ್ಟಿಸಿ ಬೊಂಬೆಯಂತೆ ಕರುಣಿಸಬಲ್ಲ
ಜಗವನೆಲ್ಲ ನುಂಗಿ ಒಬ್ಬನೆ ಇರಬಲ್ಲ
ಜಗದೀಶನ ಲೀಲೆ ಮಕ್ಕಳಾಟಿಕೆ ಕಾಣೊ
ಜಗದೊಳೀತಗೆ ಒಂದು ಸರಿಯ ವಸ್ತು
ಮಿಗಿಲು ಉಂಟೆಂದರೆ ಹೀಗೆ ಹ್ಯಾಗೆನ್ನಬಹುದು
ಜಗದೀಶ್ವರನ ಇಚ್ಛೆ ಇಂಥಾದೆ
ಮಗಳಿಗೆ ಪತಿಯಾದ ಮಗಳಿಗಳಿಯನಾದ
ಮಗುವಾಗಿ ಗೋಪಿಯ ಮೊಲೆಯನುಂಡ
ಬಗೆ ಬಗೆ ಜಗದೊಳು ಹಗರಣ ತೋರಿದ
ನಗುಬಾಟ ಈ ದೈವ ನಮ್ಮ ನಿಮ್ಮಿಂದೇನು
ಜಗದೊಳಗಿನ್ನು ತ್ರಿವಿಧ ಜೀವಿಗಳು ತಾವು
ರಘುಪತಿ ನಡೆಸಿ ನುಡಿಸಿದಂತೆ ನುಡಿವೋರು
ಜಗದ ವಲ್ಲಭ ನಮ್ಮ ಗೋಪಾಲವಿಠಲನು
ಅಗಲ ನಂಬಿದವರ ಸೊಗಸಾಗಿ ಪೊರೆವುವ ೫

ಅಟ್ಟತಾಳ

ಉತ್ತಮರೊಳಗೆಲ್ಲ ಉತ್ತಮ ಈತನೆ
ನಿತ್ಯ ವಸ್ತುಗಳಲ್ಲಿ ಹರಿ ಒಬ್ಬನೆ ನಿತ್ಯ
ಸತ್ಯಸಂಕಲ್ಪನು ಸತ್ಯಮಹಿಮನು
ಸತ್ಯವಾಕ್ಯನು ವರವನಿತ್ತರೆ ತಪ್ಪನು
ಮತ್ತೆ ಈ ತೆರದಿ ದೇವತೆಗಳೆಲ್ಲ ತಾವು
ಚಿತ್ತಜನಯ್ಯನ ಆಜ್ಞದಿಂದಲೆ ವರ-
ವಿತ್ತು ಪಾಲಿಸುವರು ಶಕ್ತರಲ್ಲ ತಾವು
ಮೃತ್ಯು ಲಾಭಾಲಾಭ ಹರಿ ಆಧೀನವು
ಕರ್ತ ಭೋಕ್ತನೀತನಲ್ಲದಿಲ್ಲವಿನ್ನು
ವ್ಯರ್ಥ ಮನುಜ ನಿನ್ನ ಪುತ್ರ ಮಿತ್ರರಿನ್ನು
ನಿತ್ಯರೆಂದು ನೀನು ಸ್ವಾರ್ಥದಿ ಕೆಡಬೇಡ
ನಿತ್ಯದಿ ಹರಿಪಾದ ಅರ್ಥಿಲಿ ಸ್ಮರಿಸುವರ
ಉತ್ತಮರ ಸಂಗ ಹತ್ತಿಕೊಂಡಿರು ಇನ್ನು
ಇತ್ತಲನ್ಯವರ ಅಹಿತವ ನುಡಿದರೆ
ಕತ್ತಲೆ ಪದವಿಗೆ ನಿನ್ನನು ಹಾಕುವ
ಚಿತ್ತಜನಯ್ಯನ ಭೃತ್ಯರಲ್ಲಿ ಇನ್ನು
ಜತ್ತಾಗಿ ಭಕುತಿಡೆ ಹತ್ತೆಗರುವ ಹರಿ
ಉತ್ತರ ಪೇಳುವೆ ನಿನಗಿಂದೆರಡು ಗುಣ
ಉತ್ತಮರವಿಡಿದು ಅಜ ಸಿರಿ ಪರಿಯಂತ
ಭೃತ್ಯಭಾವ ವಹಿಸಿ ಚಿತ್ತಶುದ್ಧನಾಗಿ
ನಿತ್ಯವುಳ್ಳ ಪದವಿ ನಿತ್ಯ ನಿತ್ಯ ಪಡೆಯೊ
ಭಕ್ತವತ್ಸಲ ರಂಗ ಗೋಪಾಲವಿಠಲ
ಎತ್ತ ನೋಡಿದರತ್ತ ಸುತ್ತ ನಲಿವುತಿಪ್ಪ ೬

ಆದಿತಾಳ

ಕಾರಣವೆಂಬಂಥ ಕಾರ್ಯ ಸರ್ವರಿಗುಂಟು
ಕಾರಣ ಶ್ರೀಮುಖ್ಯ ಹರಿಕಾಣೊ

ಕಾರಣರು ನಮಗೆ ಹರಿಯ ತೋರಿಸುವಂಥ
ಕಾರಣಕರ್ತರ ಪೇಳುವೆನು
ಕಾರಣಕೆ ಮಾಡುವ ಕಾರ್ಯಗಳೆಲ್ಲ ಜಡ
ಕಾರಣದಿಂದೇನು ಫಲವಿಲ್ಲ
ಕಾರಣ ಪ್ರಥಮ ಶ್ರೀಮರುತ ನಮಗೆ
ಕಾರಣ ಈತನವರೆಲ್ಲ ನಮಗೆ
ಕಾರಣವಂತರಾದ ಕಾರಣದಿಂದಲಿ
ಕಾರಣ ದ್ವಾರಕೆ ಕಾರ್ಯವಯ್ಯ
ಕಾರಣೆಲ್ಲದ ಕಾರ್ಯ ಒಂದಾದರು ಇಲ್ಲ
ಕಾರಣಕೆ ಕಾರಣ ಮಾಡಿಸುವ
ಕಾರಣ ಶ್ರೀಹರಿಗೆ ನಮೋ ನಮೋ
ಕಾರುಣ್ಯ ಮೂರುತಿ ಶ್ರೀಗೋಪಾಲವಿಠಲ
ಕಾರಣವಿಲ್ಲದೆ ಕಾರ್ಯ ಮಾಡಿಸನು ೭

ಜತೆ

ಈ ಪರಿ ತಿಳಿದವರಿಗೆ ಆಪತ್ತು ಹರಿಸಿ
ತಾ ಪಾಲಿಸುವ ಬಿಡದೆ ಗೋಪಾಲವಿಠಲ

೧೧೮

ಆಪ್ತ ಮಾತಿದು ನಿಜ ಪ್ರಾಪ್ತ ಜನಕೆ
ಕುಪ್ತ (ಕುಪಿತ ?) ರಾದರೆ ಕೇಳಿ ಅಪ್ರಾಪ್ತರು ಪ.

ಹರಿಯ ಪೂಜಿಸಿ ನೆಚ್ಚಿ ಪರಿವಾರ ಬಿಟ್ಟರೆ
ನಿರಯವೆ ಪ್ರಾಪ್ತಿ ಸಂದೇಹವಿಲ್ಲ
ಹಿರಿಯ ಹರಿಗೋಲ ನಂಬಿ ಕಿರಿದ್ಹುಟ್ಟುಗಳ ಬಿಡಲು
ಭರದಿ ಹೊಳೆದಾಟಿ ತಾ ದಾರಿಯ ಸೇರುವನೆ ೧

ಕೃಷ್ಣನಲ್ಲಿ ದ್ವೇಷ ನಾರಾಯಣನಲ್ಲಿ ಭಕುತಿ
ಎಷ್ಟು ಮಾಡಿದರು ಗತಿ ಪೊಂದುವನೆ
ಸಿಟ್ಟಿನಲಿ ಸರ್ಪನ ತುಟಿ ತುದಿಯ ಚಿವುಟಿದರೆ
ಎಷ್ಟು ಸುಖ ಐದುವನು ನಷ್ಟವಿಲ್ಲದೆ ೨

ಹರಿಯಲ್ಲಿ ದ್ವೇಷ ಹರನಲ್ಲಿ ಭಕುತಿ ಮಾಡಿದರೆ
ಪರಮಪದ ದೊರಕುವುದೆ ಮರುಳನಲ್ಲದೆ
ಶರಧಿ ಆಶ್ರೈಸಿದ್ದ ಮಚ್ಚನ ಬಲಮಾಡಿ
ಶರಧಿಯನು ದೂಷಿಸಲು ಹರುಷಬಡುವುದೆ ೩

ಹರನ ದ್ವೇಷವ ಮಾಡಿ ಹರಿಯ ಪೂಜೆಯ ಮಾಡೆ
ಪರಮಗತಿಯಾಗುವುದೆ ಪತಿತನಿಗೆ
ಹರವಿಯಿಲ್ಲದ ಪಾಕ ಕರವಿಟ್ಟು ಕಲಸಿದರೆ
ವರ ಭೋಜನವು ಅವಗೆ ಒದಗಿ ಆಗುವುದೆ ೪

ದೇವನಿಗೆ ಕರ್ತೃತ್ವ ಉಂಟು ಎಂದವ ಗೆದ್ದ
ದೇವನಲ್ಲದೆ ಜೀವನೆನಲು ಬಿದ್ದ
ಪಾವನ್ನ ಮೂರುತಿ ಗೋಪಾಲವಿಠಲನಂಘ್ರಿ
ಸೇವಕಗೇನು ಗತಿ ಆದವರಿಗೆ ಆಗಲಿ ೫

೧೧೯

ಸುಳಾದಿ

ಧ್ರುವತಾಳ

ಆವ ವಿಷ್ಣುನೆ ಜೀವದಂಗುಟ ಮಾತ್ರ ಮೂರುತಿ
ಆವ ವಿಷ್ಣುನೆ ಜೀವದಾಕಾರ ಮೂರುತಿ
ಆವ ವಿಷ್ಣುನೆ ಸರ್ವವ್ಯಾಪ್ತ ಮೂರುತಿ

ಆವ ವಿಷ್ಣುನೆ ಜೀವಕ್ಕಾವರ್ಕವಾದ ಮೂರುತಿ
ಆವ ವಿಷ್ಣುನೆ ಜೀವಾಧಿಷ್ಠಾನ ದೇಹ ಮೂರುತಿ
ಆವ ವಿಷ್ಣುನೆ ಮೂಲದವತಾರ ಮೂರುತಿ
ಆವ ವಿಷ್ಣುನೆ ಮಧ್ಯ ಅಜಾದಿ ಮೂರುತಿ
ಆವ ವಿಷ್ಣುನೆ ಜೀವ ಸರ್ವ ವಿಶ್ವಾದಿ ಮೂರುತಿ
ಆವ ವಿಷ್ಣುನೆ ಅನಂತಾವತಾರ ಮೂರುತಿ
ಆವ ವಿಷ್ಣುನೆ ಜೀವದ ಪ್ರತಿಪಾದ್ಯ ಮೂರುತಿ
ಆವ ವಿಷ್ಣುವಿನಾಧೀನವಾಗದ ಠಾವಿಲ್ಲ ಎಲ್ಲಿ ನೋಡಾ
ಆವ ವಿಷ್ಣು ಸರ್ವಜ್ಞ ಸಾಕಾರ ಜ್ಞಾನಾನಂದ
ಯಾವತ್ತು ಏಕಮೇವಾದೇವಾ
ಶ್ರೀವಿಷ್ಣು ನಮ್ಮ ಸ್ವಾಮಿ ಗೋಪಾಲವಿಠಲ
ಪಾವನ್ನ ಮೂರುತಿ ಪರಮಪುರುಷ ನೋಡು ೧

ಮಠ್ಯತಾಳ

ಪೃಥಿವಿ ಅಪ್ಪು ಅಗ್ನಿ ವಾಯುರಾಕಾಶವು
ತತು ತನ್ಮಾತ್ರ ಶಬ್ದಾದಿ ವಿಷಯಂಗಳು
ಜಿತ ತೈಜಸ ವೈಕಾರ ಸತು ಮಹಾ
ತತುವ ಹರಿಗೆ ಸ್ವರೂಪಭೂತ
ತತುಗಳು ಜಡವಲ್ಲ ಎಲ್ಲ ಆನಂದಮಯ
ಗತಿ ಕೊಡುವುವು ಒಂದಕ್ಕೆ ಒಂದೊಂದೆ ಪೂರ್ಣ
ಖತಿಗೊಳಿಸುವುವಲ್ಲ ಖಂಡಖಂಡವಲ್ಲ
ಚತುರವು ಇವು ಬಲು ಹರಿಯೆ ಇವು ಎನ್ನಿ
ಸತತ ತಾ ತನ್ನ ಸ್ವರೂಪಭೂತ ತತ್ವಪ್ರವೇಶವೆ
ಮತಿಯೆ ಪ್ರಕೃತಿ ಅಂಶಗಳಿಗೆ
ಸತತ ಬಿಂಬನಾಗಿ ಸವಿಯದೆ ಎಂದೆಂದು
ಕ್ಷಿತಿಯಲಿ ಜೀವರ ಗತಿಗೆ ಸಾಧನ ಮಾಳ್ಪ
ಪತಿತ ಪಾವನ ವಿಷ್ಣು ಗೋಪಾಲವಿಠಲ
ಸತತ ಕ್ರೀಡೆಯ ಮಾಳ್ಪ ಚೇತನತನದಿ ೨

ರೂಪಕತಾಳ

ವಿಷ್ಣು ವರುಣವಿನ್ನು ವಿಷ್ಣು ಕಾಲವು ನೋಡು
ವಿಷ್ಣುನೆ ಆಕಾಶ ಅವ್ಯಾಕೃತಕೆ ಬಿಂಬ
ವಿಷ್ಣುನೆ ಮಹದಾದಿ ವಿಷ್ಣುನೆ ಅಹಂಕಾರಿಕ
ವಿಷ್ಣು ವೈಕಾರಿಕಾ ವಿಷ್ಣು ತೈಜಸವಿನ್ನು
ವಿಷ್ಣು ಪಂಚಮಹಾಭೂತ ವಿಷ್ಣು ತನ್ಮಾತ್ರೆಗಳು
ವಿಷ್ಣುನೆ ಕಾರ್ಯಕಾರಣ ತತ್ವಜಡಗಳಿಗೆ ಬಿಂಬ
ವಿಷ್ಣುನೆ ತತ್ವಾಭಿಮಾನಿಗಳಲ್ಲಿ ಬೇರೆ
ತತ್ತದಾಕಾರನಾಗಿ ಇಷ್ಟರ ಒಳಗಿನ್ನು
ವಿಷ್ಣುನೆ ಅವರವರ ಸತತ ಪ್ರವರ್ತಕನಾಗಿ
ಇಷ್ಟಾನಿಷ್ಟಗಳಿಗೆ ತೊಡಕದಿದ್ದು
ವಿಷ್ಣುನಾಮಕ ಚೆಲುವ ಗೋಪಾಲವಿಠಲ ಸರ್ವಂ
ವಿಷ್ಣುಮಯಂ ಜಗತ್ತು ವ್ಯಾಪಿಸಿಪ್ಪ ೩

ಝಂಪೆತಾಳ

ವಿಷ್ಣು ಇಪ್ಪ ತತ್ವರೂಪ ತಾನಾಗಿ
ಇಷ್ಟ ತತ್ವಗಳಿಗೆ ಬಿಂಬನಾಗಿ
ವಿಷ್ಣು ತಾನಿಪ್ಪುದಾಶ್ಚರ್ಯವೆಂದೆನ್ನದಿರಿ
ವಿಷ್ಣು ದಾಸರಿಗೆ ಸ್ವರೂಪಭೂತ
ಇಷ್ಟು ತತ್ವಂಗಳು ಜೀವ ಸ್ವರೂಪದಂತೆ
ಸ್ಪಷ್ಟವಾಗಿಪ್ಪುದು ತಿಳಿದವರಿಗೆ
ಕಷ್ಟಬಡಿಸುವರೆಲ್ಲ ಎನ್ನೆ ಅನ್ಯಾಯ
ಮುಟ್ಟಿಸುವ ಒಂದೊಂದ ಭೇದವ
ನಷ್ಟವಾಗುವುದಲ್ಲ ಜೀವರ ಸ್ವರೂಪ
ಬಿಟ್ಟು ಹೋಗುವುದಲ್ಲ ಎಂದೆಂದಿಗು
ಸ್ಪಷ್ಟವಾಗಿ ಇದರ ಅನುಭವವೆಂಬುವುದು
ವಿಷ್ಣುದಾಸರೆ ಇದರ ವಿವರವ ಬಲ್ಲರು

ಇಷ್ಟಮೂರುತಿ ನಮ್ಮ ಗೋಪಾಲವಿಠಲ
ಇಷ್ಟರಲ್ಲಿ ನಿಂತು ಹರಿ ಏನೇನು ನೋಳ್ಪ ೪

ತ್ರಿಪುಟತಾಳ

ಭಿನ್ನವಾದ ವೃತ್ತಿರೂಪ ಸುಖದುಃಖವು
ಇನ್ನು ಸ್ವರೂಪ ಅನುಭವ ಉಂಟು
ಚಿನ್ಮನಸಿನ ಮನಸಿನ ದ್ವಾರವಿನ್ನು ಅಭಿಮಾನದಲ್ಲಿ
ತನ್ನದೆಂದರಿವ ಭಿನ್ನವಾದ ದುಃಖವ
ತನ್ನ ಪ್ರಕಾಶ ಅಭಿಮಾನವಿದ್ದಲ್ಲೆಲ್ಲ
ತನ್ನದೆಂದೇ ತಿಳಿವ ಅಭಿಮಾನದಿ
ಇನ್ನು ಹೀಗೆ ವೃತ್ತಿರೂಪ ದುಃಖವಿನ್ನು
ತನ್ನಭಿಮಾನದಿಂದಲೆ ಅನುಭವ
ಚೆನ್ನಾಗಿ ಲಿಂಗಭಂಗವಾಗುವ ತನಕ
ಇನ್ನು ಹೀಗೆ ಅನುಭವಿಪ ಜೀವನು
ಮುನ್ನ ವೃತ್ತಿರೂಪ ಸುಖವು ಮತ್ತೆ ಹೀಗೆ
ಇನ್ನು ಅನುಭವವೆಲ್ಲ ಒಂದೆ ನೋಡು
ತನ್ನದೆಂಬ ಅಭಿಮಾನ ಬಿಟ್ಟು ನಿರ್ಗುಣದಲ್ಲಿ
ಅನ್ನರಸ ಪಾನಂಗಳು ಎಲ್ಲ ಹರಿಯೆ ಉಣುವ-
ವನೆಂದು ತಿಳಿದು ಉಂಬ ಜೀವರಿಗೆ
ಚಿನುಮಯ ಬಿಂಬ ತಾನುಂಡು ಎಲ್ಲ
ಭಿನ್ನರಸ ಸುಖವ್ಯಂಜಕ ಮಾಡಿ
ಆನಂದವನು ಜೀವನಿಗೆ ಅಭಿವ್ಯಕ್ತಿ ಮಾಳ್ಪ
ಇನ್ನಿವನಿಗೆ ವಿಪರೀತ ದುಷ್ಟ ಜೀವನರಿಗೆ
ಇನ್ನು ದುಃಖ ಅಭಿವ್ಯಕ್ತಿ ಮಾಳ್ಪ
ಪುಣ್ಯ ಪಾಪಗಳೆರಡು ಜೀವಕ್ಕೆ ಸಹಾಯವಾಗಿ
ತನ್ನದೆಂಬೊ ಮಾತು ಮಾತ್ರ ಇನ್ನು ಪುಸಿಯು
ಭಿನ್ನನಾಗ್ಯಾಡುವನು ಅಭಿಮಾನದಿ
ಅನಂತ ಗುಣಪೂರ್ಣ ಗೋಪಾಲವಿಠಲ
ಚೆನ್ನಿಗನ ಮಹಿಮೆ ಚಿತ್ರವಿಚಿತ್ರವು ೫

ಅಟ್ಟತಾಳ

ಒಂದು ರಸದಲ್ಲಿ ಬಿಂದು ಉದರದಿ ಬಿದ್ದರೆ
ಇಂದಿರೆ ಉಂಟಲ್ಲಿ ವಿರಿಂಚಿ ಶಿವನುಂಟು
ಚೆಂದದಿ ಗರುಡಶೇಷ ಇಂದ್ರಾದಿ ಸುರರೆಲ್ಲ
ಹೊಂದಿರುವರು ತಮ್ಮ ತತ್ವದ ರಸ
ಇಂದಿರೇಶ ವಿಭಾಗವ ಮಾಡಿ ತರತಮ-
ದಿಂದಲೆ ಆರಾರ ಭಾಗ ಪೊಂದಿಸಿ ಈವ
ಇಂದಿರಾದೇವಿಗವ್ಯಕ್ತ ರಸದಲ್ಲೆ ಅಭಿಮಾನ
ಮಂದಜಜನಕಗೆ ಮಹಾ ತತ್ವರಸವಿನ್ನು
ಇಂದುಮೌಳಿಗೆ ಅಹಂಕಾರ ರಸದಲ್ಲಿ
ಇಂದ್ರಾದಿ ಸುರರಿಗೆ ವೈಕಾರಿಕ ರಸ
ತಂದುಕೊಡುವ ತೈಜಸರಸ ತಾರತಮ್ಯ
ದಿಂದ ಭೌತಿಕರಸ ಬಪ್ಪುದು ಮನುಜರ್ಗೆ
ತಂದುಕೊಡುವ ಒಂದರೊಳಗೆ ಎಲ್ಲ
ಒಂದೆ ವಿಷಯ ಬಹುಮಂದಿಗೆ ಅನುಭೋಗ
ತಂದಿಪ್ಪುದು ಪೃಥಿವಿಗಂಧ ತನ್ಮಾತ್ರೆಯಂತೆ
ಮಂದ ಅಸುರ ದೈತ್ಯವೃಂದಕ್ಕೆ ಇದರೊಳು
ಗಂಧ ಬೇರೆ ಉಂಟು ಒಂದೆ ರಸದಲ್ಲೆ
ಮಂದಾಕಿನಿಯಲ್ಲಿ ಮೈಲಿಗೆ ವಸ್ತ್ರ ತೊಳೆದರೆ
ತಂದುಕೊಡುವುದು ತದ್ಭೂಷಣ ಆ ವಸ್ತ್ರಕ್ಕೆ
ಸುಂದರ ಮೂರುತಿ ಗೋಪಾಲವಿಠಲ
ಬಂಧುವಾದನು ಸಾಧು ಜೀವರ್ಗೆ ೬

ಆದಿತಾಳ

ದೇವಿಯಿಂದಲಿ ಕ್ರೀಡೆ ದೇವನಾಡುವ ತತ್ವ
ದೇವತೆಗಳನ್ನೆಲ್ಲ ಕಾವಲಿಟ್ಟಿನ್ನು
ಆವರ್ಕ ಪ್ರಕೃತಿಗಳಲ್ಲಿ ತಾ ನಿಂತು

ತ್ರಿವಿಧ ಮೂಲರ ಜಗಕೆ ವೃಕ್ಷವಾಗಿ
ಶ್ರೀವಿಷ್ಣುನೆ ಅಲ್ಲಿ ವಿಟಪನಾಗಿ ಸರ್ವ-
ಜೀವರಿಗಾಶ್ರಯನಾಗಿ ಪಾಲಿಸುವ
ಆವ ಈ ವೃಕ್ಷದ ಮೂಲ ಕಂಡವರಿಲ್ಲ
ದೇವದೇವೇಶನಲಿ ಲೀಲೆಯೆಷ್ಟೋ
ದೇವಿ ಲಕುಮಿ ಸಾಕಲ್ಯ ತಿಳಿಯದೆ ಶ್ರೀ
ಭಾವವನು ತಾನು ನಂದದೊಳು ಮುಣುಗಿ
ಶ್ರೀವರ ಪ್ರೇರಕನೆಂದು ತುತಿಸಿ ಇನ್ನು
ಭಾಮೆ ಗಂಡನ ಕೊಂಡಾಡಿಹಳು
ಜೀವರು ತಮ್ಮ ತಮ್ಮ ಯಾವತ್ತು ಶಕ್ತಿಲಿ
ದೇವನ ಸ್ತುತಿಸಿ ಧೇನಿಸುವರು
ಗೋವರ್ಧನೋದ್ಧಾರ ಗೋಪಾಲವಿಠಲನ್ನ
ದೇವನ ಮಹಿಮೆ ಬಲ್ಲವರಾರು ೭

ಜತೆ

ಆಪ್ತ ಉಪಾಸನೆ ಗುಪ್ತದಿ ಇದು ಮಾಡಿ
ಪ್ರಾಪ್ತನಾಗುವ ಗೋಪಾಲವಿಠಲ ನಿಮಗೆ

೧೨೦

ಇದೆ ಪಾಲಿಸಿದೆ ಪಾಲಿಸಿದೆ ಪಾಲಿಸಯ್ಯ ಪ.

ಪದುಮ ಸಂಭವ ಪಿತನೆ ಪದೆಪದೆ ಎನಗಿನ್ನು ಅ.ಪ.

ಜೀವ ಅಸ್ವತಂತ್ರ ದೇವ ನಿಜ ಸ್ವತಂತ್ರ
ಜೀವ ಜಡರು ದೇವರಾಧೀನವೆಂದು
ಜೀವೋತ್ತಮರಲ್ಲಿ ಭಕುತಿ ಜಡದಲ್ಲಿ ವಿರಕುತಿ
ಕಾವ ಕೊಲ್ಲುವುದೆಲ್ಲ ಹರಿಯೆಂಬ ಜ್ಞಾನ ೧

ಬಿಂಬ ಚಲಿಸಿದರೆ ಪ್ರತಿಬಿಂಬ ಚಲಿಸುವುದು

ಬಿಂಬ ಪೂರ್ಣನು ಪ್ರತಿಬಿಂಬನು ಅಲ್ಲ
ಉಂಬುಡುವೊ ಕ್ರಿಯೆಗಳು ಬಿಂಬ ಮಾಡಿಸಲು ಪ್ರತಿ-
ಬಿಂಬಕ್ಕೆ ಉಂಟೆಂಬ ಬಿಂಬ ಕ್ರಿಯವು ಎನಗೆ ೨

ಎನ್ನ ಬಿಂಬನೆ ಸರ್ವರ ಬಿಂಬನೆಂತೆಂದು
ಇನ್ನು ಪ್ರತಿಬಿಂಬಗಳ ಭೇದವ ತಿಳಿದು
ಮನ್ನಣೆ ಉತ್ತಮಗೆ ಅಮನ್ನಣೆ ನೀಚರಿಗೆ
ಭಿನ್ನ ಭಿನ್ನರಿಗೆ ಫಲಗಳನ್ನು ಕೊಡುವ ಜ್ಞಾನ ೩

ಪುಣ್ಯಪಾಪಗಳೆರಡು ಇನ್ನು ಆಗುತಲಿರಲು
ಎನ್ನವೆಂದು ಹಿಗ್ಗಿ ಕುಗ್ಗದಲೆ
ಭಿನ್ನ ಪುಣ್ಯದ ಜೀವ ಭಿನ್ನ ಪಾಪದ ಜೀವ
ಇನ್ನು ಮುನ್ನು ತಿಳಿವ ಚೆನ್ನ ಜ್ಞಾನವು ಎನಗೆ ೪

ಬಂಧನ ನಿವೃತ್ತಿ ಎಂದಿಗೊ ಎನಗೆಂದು
ಸಂದೇಹದಿಂದ ನಾ ಕೇಳಲಿಲ್ಲ
ಸುಂದರ ಮೂರುತಿ ಗೋಪಾಲವಿಠಲ
ಕುಂದಿಲ್ಲದಲೆ ಎನಗೆ ನವವಿಧ ಭಕುತಿಯ ೫

೧೨೧

ಇರಬೇಕು ಸಜ್ಜನರಿಗೆ ದುರ್ಜನ
ಪರಿಪರಿ ಪಾಲಿಪುದು ಒಂದು ಸಮಯದಿನ್ನವರ ಪ.

ಮೇಲಾದ ತೆಂಗು ಏಲಕ್ಕಿ ಬಾಳೆಯ ಗಿಡವ
ಜಾಲಿಯಾದಿ ಗಿಡದ ಮುಳ್ಳುಗಳಿಂದಲೆ
ಪಾಲನೆಯ ಮಾಡುವರು ಪ್ರಾಕಾರವನ್ನೆ ಮಾಡಿ
ಕಾಲಕಾಲಕೆ ತಂದು ಕಲಿಪರು ಬಿಡದೆ ೧

ತುಲಸಿಯ ಗಿಡವನ್ನು ಬೆಳೆಸಬೇಕಾದರೆ

ಹೊಲಸು ಉಳ್ಳಿಯ ತಂದು ನಿಲಿಸುವರು
ಕೆಲಕಾಲ ಬೆಳೆದು ಪಂಟಿಯಗಟ್ಟೋದಲ್ಲದೆ
ಹೊಲಸು ಉಳ್ಳಿಂದೇನು ಅಳುಕು ಆಗುವುದೆ ೨

ನಯನಕ್ಕೆ ರೆಪ್ಪೆಯಿದ್ದಾಗಪಾಯವ ನೀಗಿ ಕರನಿಟ್ಟು
ದಯಾನಿಧಿಯು ಪರಿಪಾಲಿಸುವನು ಬಿಡದೆ
ಭಯನಿವಾರಣ ರಂಗ ಗೋಪಾಲವಿಠಲನಾಶ್ರ್ಯ-
ಸಿಯಿದ್ದಂಗೆ ದುರುಳರ ಭಯವೆ ಮರುಳೆ ೩

೧೨೨

ಉಗಾಭೋಗ

ಎಂತು ಪೋಪುದು ಮನದ ಕಿಂತು (ಚಿಂತೆ ?) ಎಂಬೋದು ಎನ್ನ
ಅಂತರಂಗದಲ್ಲಿಪ್ಪನು ಸುಂದರಾಂಗ
ಪಿಂತಿನ ಸಂಸಾರ ಮರದು ಪೋಗಿತ್ತು ಈಗ
ಚಿಂತನೆಗೆ ಬಂದು ಬಹುದಣಿಸುವುದು
ಎಂತು ವಿಹಿತದಲ್ಲಿ ಬಿಡಿಸುವೆ ಈ ಅರ್ತಿ
ನಿಂತಲ್ಲಿ ಕುಳಿತಲ್ಲಿ ಹತ್ತಿಹ್ಯದು
ನಿಂತು ಮಾತೆಯಲ್ಲಿ ಪುಟ್ಟಿಸಿದವನಾರು
ಚಿಂತಾಯಕ ದೇವ ಗೋಪಾಲವಿಠಲ ನಿ-
ಶ್ಚಿಂತನಿಗೆ ವಿಷಯನಾಗಿರು ಸರ್ವದಾ

೧೨೩

ಸುಳಾದಿ

ಧ್ರುವತಾಳ

ಎನಗಿಂದುತ್ತಮರಿಲ್ಲವೆಂಬೋದೊಂದು ದೋಷ
ಎನಗಿಂತ ನೀಚ ದೊಡ್ಡವನೆಂಬೋದಿದೊಂದು ದೋಷ

ತನಗಿಂದಧಿಕನ್ನ ಸಮಾನವೆಂಬೋದು ದೋಷ
ತನ್ನಿಂದ ಭಿನ್ನ ವಸ್ತು ತನ್ನದೆಂಬೋದು ದೋಷ
ತನಗೆ ತಾನರಿಯ ಅನ್ಯ ಬಲ್ಲೆನೆಂಬೋದು ದೋಷ
ತನಗೆ ತಾ ತುತಿಸಿಕೊಂಡು ಧನ್ಯನೆಂಬೋದು ದೋಷ
ತನಗೆ ಶಕುತಿ ಇದ್ದು ಕರ್ಮ ಬಿಟ್ಟುಕೊಡುವುದೆ ದೋಷ
ತನಗಿಲ್ಲದ ಕರ್ತೃತ್ವ ತಾನು ಎಂಬೋದು ದೋಷ
ಇನಿತು ದೋಷಂಗಳೆಲ್ಲ ಎಣಿಸಿದಡಾಯಿತಿನ್ನು
ತನಗೆ ಈಶಗೆ ಐಕ್ಯ ಪೇಳುವುದಕ್ಕಿಂತ ದೋಷ
ಸನಕಾದಿಗಳ ಒಡೆಯ ಗೋಪಾಲವಿಠಲನ
ನೆನೆಸದಲಿದ್ದವಗೆ ದೊಡ್ಡ ದೋಷ ೧

ಮಠ್ಯತಾಳ

ಬೊಮ್ಮಾಂಡ ವ್ಯಾಪ್ತನ ಬಯಲು ಎಂಬೋದು ದೋಷ
ಬೊಮ್ಮನ ಸೃಜ್ಜನ ಪುಟ್ಟಿದನೆಂಬೋದು ದೋಷ
ಬೊಮ್ಮಾಂಡ ಸಂಹಾರಗೆ ಲಯ ಪೇಳ್ವುದೆ ದೋಷ
ಬೊಮ್ಮನ ಪಿತನಲ್ಲದೆ ಇನ್ನೊಂದೆಂಬೋದೆ ದೋಷ
ಸುಮನಸರಪ್ರಿಯ ಗೋಪಾಲವಿಠಲಂಗೆ
ಸಮ ಉಂಟೆಂಬುವಗೆ ಸರಿಯಿಲ್ಲದ ದೋಷ ೨

ರೂಪಕತಾಳ

ಮಾಡಬೇಕು ಮಂದ್ಯೆಲ್ಲ ಸಾರುತಿರಲು
ಮಾಡದೆ ಇದ್ದದ್ದು ಮುಖ್ಯವಾದ ದೋಷ
ಬೇಡಬೇಕೆಂದು ಜಗವೆಲ್ಲ ಪೇಳುತಿರಲು
ಬೇಡದಲಿಪ್ಪೋದು ಅಗತ್ಯವಾದ ದೋಷ
ನೋಡಬೇಕೆಂದು ಲೋಕವೆಲ್ಲ ಪೇಳುತಿರಲು
ನೋಡದಲಿಪ್ಪೋದು ನೋವಾಗುವುದೆ ದೋಷ
ಕೂಡಿ ಆಡಿ ತನ್ನಲ್ಲಿ ಫಲವನರಿಯದೆ
ನಾಡ ದೇವತೆಗಳಿಗೆ ಹಾರೈಸುವುದೆ ದೋಷ

ರೂಢಿಗೊಡೆಯ ನಮ್ಮ ಗೋಪಾಲವಿಠಲನ
ನೋಡಿ ಪೂಜಿಸದವಗೆ ನಿತ್ಯ ದೋಷ ೩

ಝಂಪೆತಾಳ

ಆವಾವನು ಈ ಜಗಕೆ ದೇವನೆಂದರಿಯದೆ
ಆವನಿಂದೀ ಜಗಕೆ ಸೃಷ್ಟಿಯೆಂದರಿಯದೆ
ಆವನಿಂದೀ ಜಗವು ಪಾಲನೆಂದರಿಯದೆ
ಆವನಿಂದೀ ಜಗವು ಲಯವು ಎಂದರಿಯದೆ
ದೇವರಿಗೆ ಜೀವರಿಗೆ ವಿಲಕ್ಷಣರಿಯದ
ಆವಾವನು ಕರ್ಮ ಅನಂತ ಮಾಡಿದರು
ಆವನಿಗೆ ಅನಂತ ದೋಷವಾಗಿ ತೋರುವುದು
ಆವ ಕರ್ಮವು ಕಡೆಯ ಗೆಲಿಸಲರಿಯವು
ಜೀವಜಡಭಿನ್ನ ಗೋಪಾಲವಿಠಲರೇಯ
ಆವನಿಗೆ ತಾ ಒಲಿವ ಅವನೆ ಅರಿವ ೪

ತ್ರಿಪುಟತಾಳ

ಅನ್ಯದೈವರಿಯದೆ ಅನ್ಯಕ್ಕೆ ಎರಗದೆ
ತನ್ನನೆ ನೆರೆನಂಬಿ ಚಿಂತಿಪರ
ತನ್ನವನೆಂತೆಂದು ತನ್ನ ತಿಳಿಸಿಕೊಟ್ಟು
ಘನ್ನ ಪದವಿಗೇರಿಸಿನ್ನು ತಾ ಸಲಹುವ
ಅನ್ಯ ಆಸೆಯು ಉಳ್ಳ ಜೀವರೆಲ್ಲರಿಗೆ
ಅನ್ಯನಂತವರಿಗೆ ತೋರುತಿಪ್ಪ
ತನ್ನವ ಅನ್ಯನೆಂಬ ವೈಷಮ್ಯ ನೈರ್ಗುಣ್ಯ
ಇನ್ನಿಲ್ಲ ಇನ್ನಿಲ್ಲ ಈಶಗಿನ್ನು
ಭಿನ್ನ ಜೀವರ ಗತಿ ಅರಿತು ಪಾಲಿಸುವನು
ಇನ್ನೊಬ್ಬರಿಗೆ ಪೂರ್ಣ ಲಭ್ಯನಲ್ಲ
ಘನ್ನ ಮಹಾಮಹಿಮ ಗೋಪಾಲವಿಠಲ
ತನ್ನ ತಿಳಿವರನು ತನ್ನವನೆಂತೆಂಬ ೫

ಅಟ್ಟತಾಳ

ಇವನಂಥ ವಸ್ತುವು ಇಂದ್ರರೊಳಗಿಲ್ಲ
ಇವನಂಥ ವಸ್ತುವು ರುದ್ರಾದಿಯೊಳಗಿಲ್ಲ
ಇವನಂಥ ವಸ್ತುವು ಬೊಮ್ಮಾದಿಯೊಳಗಿಲ್ಲ
ಇವನ ಸತಿಯಳಾಗಿ ಸಿರಿದೇವಿ ಓಲೈಸೆ
ಅವರ ಪಾಡೇನಜಭವಾದಿಗಳಿವನ
ನವವಿಧ ಭಕುತಿಂದ ಸೇವಿಸುತಿಪ್ಪರು
ಭವನಾಶ ಭಯಹಾರಿ ಗೋಪಾಲವಿಠಲ
ಭುವನೆರಡೇಳಕ್ಕೆ ಒಡೆಯ ಕಾಣೊ ೬

ಆದಿತಾಳ

ಒಳಗುಂಟು ಹೊರಗಿಲ್ಲ ಒಳಗಿಲ್ಲ ಹೊರಗುಂಟು
ತಿಳಿಯದಿಪ್ಪನು ನಾನಾ ಸ್ಥಳದಿ ವ್ಯಾಪುತನಾಗಿ
ಬೆಳಕು ಕತ್ತಲು ಇನ್ನು ಸ್ಥಳ ಎರಡೆನ್ನದೆ
ಬಲು ಸುಂದರಾಂಗನಂತ್ಹೊಳೆವುತಲಿಪ್ಪನು
ಸುಲಭ ಭಕುತರಿಗೆ ಗೋಪಾಲವಿಠಲರೇಯ
ನೆಲೆಯಾಗುವನು ತನ್ನ ತಿಳಿದರ್ಚಿಪುವಗೆ ೭

ಜತೆ

ಹಿರಿದು ಕಾರ್ಯಕೆ ಇವನೆ ಕಿರಿದು ಕಾರ್ಯಕೆ ಇವನೆಂ
ದರಿದು ಭಜಿಸಿರೊ ಗೋಪಾಲವಿಠಲ ಒಲಿವ ೮

೧೨೪

ಸುಳಾದಿ

ಧ್ರುವತಾಳ

ಎಲ್ಲೆಗೇಹ ಎಲ್ಲೆದಯ್ಯಾ ವ್ಯಕ್ತಿ ಕ್ಷೇತ್ರ
ಎಲ್ಲೆದಯ್ಯಾ ಗ್ರಾಮ ಸ್ಥಳವು ಎಲ್ಲೆದಯ್ಯಾ ದೇಶವಾಸ

ಎಲ್ಲೆದಯ್ಯಾ ಧನವು ಧಾನ್ಯ ಎಲ್ಲೆದಯ್ಯಾ ಸತಿಯು ಸುತರು
ಎಲ್ಲೆದಯ್ಯಾ ವಸನ ಪಶುವು ಎಲ್ಲೆದಯ್ಯಾ ಬಂಧು ಬಳಗ
ಎಲ್ಲೆದಯ್ಯಾ ಒಡವೆಗಳು ಎಲ್ಲೆದಯ್ಯಾ ಕರಿ ಊಷ್ಟಗಳು
ಎಲ್ಲೆದಯ್ಯಾ ಆಳು ವೇಳ್ಯ (ವ್ಯಾಳೆ)
ಎಲ್ಲೆದಯ್ಯಾ ಕೂಪ ತಟಾಕ ಎಲ್ಲೆದಯ್ಯಾ ವೃಕ್ಷಗಳು
ಎಲ್ಲೆದಯ್ಯಾ ಮುತ್ತು ಮಾಣಿಕ್ಯ
ನಿಲ್ಲದೆ ಪೋಗೊ ನೀರಗುಳ್ಳೆಯಂತೆ ದೇಹಕ್ಕೆ
ಇಲ್ಲದ ಕರ್ತತ್ವ ಇನ್ನೆಲ್ಲಿಂದ ಪಚ್ಚಿಕೊಂಬಿ
ಸಲ್ಲದು ನಿನಗೀವಾಕು ಎಲ್ಲಿ ಪೋದರು ಅನ್ಯ
ಗೆಲ್ಲಲಾರೆಯೊ ಜೀವ ಬಲ್ಲವಿಕೆಲ್ಲ ನಿನಗೆ
ಎಲ್ಲ ನನ್ನದೆಂಬೋದು ಒಳಿತಲ್ಲವೊ ನಿನಗೆ
ನಿಲ್ಲಿಸಿ ನಿನ್ನ ಮುಂದೆ ಎಲ್ಲವು ಹೋಹಾಗ
ಕಲ್ಲು ಹೊಡೆದಂತೆ ನೀ ಮೆಲ್ಲನೆ ನೋಡುತಿಪ್ಪೆ
ನಿಲ್ಲದೆ ನೀನು ಬಿಟ್ಟು ಚೆಲ್ಲಿ ಹೋಗುವಾಗ
ಹುಲ್ಲುಕಡ್ಡಿಯನ್ನ ನೀ ಬಾಯಲ್ಲಿ ಕೊಂಡುಹೋಗುವ್ಯ
ಎಲ್ಲರೂಪದಲ್ಲಿ ಶ್ರೀವಲ್ಲಭ
ಅಲ್ಲಲ್ಲಿ ತಾನೆ ಇದ್ದು ಜೀವರೆಲ್ಲರ ಪಾಲಿಸಿನ್ನು
ಗುಲ್ಲು ಎಬ್ಬಿಸಿ ಪ್ರಳಯದಲ್ಲಿ
ಎಲ್ಲರ ನುಂಗೊ ಬಲ್ಲಿದರಂಗ ನಮಗೆಲ್ಲರಿಗೊಡೆಯ ಕಾಣೊ
ಮಲ್ಲಮರ್ದನರಂಗ ಗೋಪಾಲವಿಠಲ ತಾ
ಬಲ್ಲದೆ ಮಾಡಿಸುವ ಎಲ್ಲ ಕಾಲದಲಿನ್ನು ೧

ಮಠ್ಯತಾಳ

ಕಣದ ಒಳಗೆ ಧಾನ್ಯ ಒಣಗ ಹಾಕಿದರೆ
ಮನೆಗೆ ತರಲಾಗಿ ಕಣದಲಿ ಉಳಿದವೆ ಅಷ್ಟು
ಒನಕೆಯಿಂದಲಿ ಧಾನ್ಯ ಘನವಾಗಿ ಕುಟ್ಟಿದರೆ
ಒನಕೆ ನುಂಗಿದವೆಷ್ಟು ಅನ್ಯವರಿತು ನೋಡಿ
ಶುನಕಗೆ ಪುಷ್ಕರಣಿ ಮಲ್ಕರ್ಣಿ ? ಇರಲು
ದಣಿ ಕುಡುವುದೆ ಉದಕ ಕೊನೆನಾಲಿಗಿಲಲ್ಲದೆ

ಮಣಕಕೆ ಸೇರು ತುಪ್ಪ ಮನೆಯೊಳಗಾದರೆ
ಮಣಕಕೆ ಬಂದುದೇನು ಮಡಿ ? ಮಾತ್ರವು
ಕನಸಿನೊಳಗೆ ಹಣವು ಕಂಡ್ಹಾಗೆ ಕೊಟ್ಟರೆ
ಎಣಿಸಿ ಕೊಡಬಲ್ಲ್ಯಾ ಋಣದವ ಬೇಡಿದರೆ
ಮುನಸು ಗುಟ್ಟಿದವನ ಮುದ್ದಾಡಿದರಿನ್ನು
ಮನಸಿಗೆ ಹರುಷತ್ವ ಮದಡ ಜೀವವೆ ಕೇಳು
ಧನತೂಗೋ ತಕ್ಕಡಿ ಮನೆಯೊಳಗಿರಲಿಕ್ಕೆ
ಧನ ಹೋದರೆ ತಕ್ಕಡಿನ್ನ ಕೇಳೋರುಂಟೆ
ಗುಣಹೀನ ಜೀವ ನಿನಗೆ ಅಲ್ಲದವೆಲ್ಲ ನನಗೆ
ನನ್ನದೆಂಬೊದೆನಿತು ನೀತಿಯ ಕಾಣೊ
ಸನಕಾದಿಗಳೊಡೆಯ ಗೋಪಾಲವಿಠಲನ್ನ
ಅನುವಾಗಿ ನೀ ತಿಳಿದು ಗುಣವುಪಾಸನೆ ಮಾಡು ೨

ತ್ರಿಪುಟತಾಳ

ಆರಿಗೆ ವಶವಲ್ಲದಲಂಕೆಯ ಕಟ್ಟಿದ
ಧೀರರಾದಂಥ ಸುರರಿಂದ ಪೂಜೆಯಗೊಂಡ
ಆ ರಾವಣನು ಕಡೆಗೆ ಆದ ತೆರನು ನೋಡು
ಆರಾದರು ಅವಗೆ ಆಯುಷ್ಯವಿತ್ತರೆ
ಆರಿಂದ ಮರಣವು ಆಗಲಿಕ್ಕಿಲ್ಲವೆಂದು
ಆ ರುದ್ರನಿಂದ ವರವನು ಪಡಿದಿದ್ದಂಥ
ಆ ರಕ್ಕಸ ಹಿರಣ್ಯಕರಾದರುಳುಹಿದರೆ
ಆರಿಗೆ ಆರಿಲ್ಲ ಹಾರದಿರೆಲೊ ಬರಿದೆ
ಕ್ರೂರಕಂಸನ ನೋಡು ದುರಿಯೋಧನರ ನೋಡು
ಆರು ಇವರಿಗೆ ತನ್ನವರು ಇದ್ದಿಲ್ಲವೆ
ದೂರು ಮಾತ್ರವೆ ತನ್ನವರು ತನ್ನದೆಂಬೋದು
ಆರಿಗಾರಿಲ್ಲ ವಿಚಾರವ ಮಾಡಲು
ಮೂರು ದಿನದ ಭಾಗ್ಯ ಸ್ಥಿರವೆಂದು ನಂಬಿ ನೀ
ಕಾರಣಕರ್ತನ ಮರೆಯದಿರು
ಸೇರು ಈತನವರ ದ್ವಾರದ ಬಳಿಯಲ್ಲಿ

ಕಾರುಣ್ಯದಿ ಪಾಲಿಸುವ ಕರುಣಾಕರರಂಗ
ಮಾರಜನಕ ಚೆಲುವ ಗೋಪಾಲವಿಠಲನ್ನ
ಆರುಮೂರುಭಕ್ತಿಲಿ ಬಾರಿಬಾರಿಗೆ ಸ್ಮರಿಸೊ ೩

ಅಟ್ಟತಾಳ

ನಷ್ಟವೆಂಬೋದು ನನ್ನದೆಂಬೋದು ಬಲು ನಷ್ಟ
ಇಷ್ಟರೊಳಗೆ ಕೃಷ್ಣ ನೀನೆ ಎಂಬೋದು ನಿಷ್ಟ
ಕಷ್ಟದೊಳಗೆ ಪುನಃ ಹುಟ್ಟಿ ಹೋಹೋದೆ ಕಷ್ಟ
ನಿಷ್ಠೆಯೊಳಗೆ ಹರಿಸ್ಮರಣೆ ಮಾಡೋದೆ ನಿಷ್ಟ
ಅಷ್ಟ ಕರ್ತೃತ್ವವು ಶ್ರೀಹರಿ ಅಧೀನವು ಎಂದು
ಭ್ರಷ್ಟ ಸಂಸಾರವ ದಾಟುವವನೆ ದಿಟ್ಟ
ಸೃಷ್ಟಿಗೊಡೆಯನಾದ ಗೋಪಾಲವಿಠಲ
ಮುಟ್ಟಿ ಪೂಜಿಸುವರ ಬಿಟ್ಟೆನೆಂದರು ಬಿಡ ೪

ಆದಿತಾಳ

ಧರೆಯೊಳು ಇದ್ದಂಥ ಈ ಪರಿಪರಿಪದಾರ್ಥ
ಹರಿಯಿಂದ ನಿರ್ಮಿತಕರವಾದುವು ಎಲ್ಲ
ಅರಿದು ನೋಡಿ ಇನ್ನು ಕರಕರೆಗಳು ಬಿಟ್ಟು
ಕರಣ ಶುದ್ಧಿಯಲಿನ್ನು ಕರವೊಡ್ಡಿಕೊಂಡು ನಿಂದು
ವರ ಉದಕದಲಿಂದ ಹರಿಗರ್ಪಿತವೆಂದು
ಹರುಷದಲಿ ತಿನ್ನು ಸ್ಥಿರಪದವಿಯ ಪಡಿ
ಬರಿದೆ ನನ್ನದು ಎಂಬೋ ಮರುಳ ಕರ್ತೃತ್ವವ
ಮರೆದು ದುರ್ವೃತ್ತಿಯ ತೊರೆದು ಲೌಕಿಕವ
ಕರುಣಾಕರ ರಂಗ ಗೋಪಾಲವಿಠಲನ್ನ
ಶರಣರ ಮರೆಬಿದ್ದು ನೆರೆ ಬದುಕನುಗಾಲ ೫

ಜತೆ

ಡೊಂಬನ ಗೂಡಿನಂತೆ ನಂಬದಿರೀದೇಹ
ನಂಬು ಗೋಪಾಲವಿಠಲನಂಬುಜ ಚರಣ

೧೨೫

ಉಗಾಭೋಗ

ಎಷ್ಟು ಮಂದಿ ಧರಣಿ ಆಳಿ ಅರಸುಗಳೆನಿಸಿ
ನಷ್ಟವಾಗಿ ಪೋದರಲ್ಲ ನೋಡ ನೋಡ
ಕಟ್ಟಿಕೊಂಡೊಯ್ದರೆ ತೃಣವಾದರು ಹಿಂದೆ
ಇಷ್ಟನಿಷ್ಟಕೆ ಪಾತ್ರರಾಗುವರು
ದಿಟ್ಟ ತಾ ಹರಿಗೋಲ ದಾಟಿಪೆನೆಂದು
ಹುಟ್ಟಿಲಿ ನೀರು ತಿರುಹಿ ಕಡೆದಾಟಿಸೆ
ಹುಟ್ಟಿದ ಆ ಕೀರ್ತಿ ಹಾಕಿದವನದು ಎಂದು
ಕೊಟ್ಟವರವಗುಂಟು ಬಹುಮಾನವ
ಎಷ್ಟೇ ಉದಕದಿ ಹುಟ್ಟು ಹೊರಳಿ ಆಡಿದರದಕೆ
ಎಷ್ಟು ಹತ್ತೋದು ಜಲವು ಅಷ್ಟೇ ಅಲ್ಲದೆ
ಇಷ್ಟು ಹರಿಯಾಧೀನ ನಂಬಿದಂಬಿಗನಯ್ಯ
ಇಷ್ಟರೊಳು ಚೆಲುವ ಗೋಪಾಲವಿಠಲ
ಇಷ್ಟವಾಗಿ ಸರ್ವಾಭೀಷ್ಟಗಳನೀವ

೧೨೬

ಸುಳಾದಿ

ಧ್ರುವತಾಳ

ಒಂದು ರೂಪ ನೋಡೆ ಅನಂತಪೂರ್ಣವಿನ್ನು
ಒಂದು ಅವಯುವವೆ ಪೂರ್ಣವಯ್ಯ
ಒಂದು ರೂಪದೊಳಗೆ ಅನಂತ ರೂಪಗಳು
ಒಂದು ರೂಪದಿಂದ ಭೇದಾಭೇದನಾಗಿಪ್ಪ
ಒಂದು ಧನುರ್ಧರ ಒಂದು ಅರಿಶಂಖಧರ

ಒಂದು ಚತುರ್ಭುಜ ಒಂದು ದ್ವಿಭುಜರೂಪ
ಒಂದು ಚತುರಹಸ್ತ ಒಂದು ದ್ವಿಹಸ್ತ
ಒಂದು ಏಕಮುಖ ಒಂದು ಚತುರಮುಖ
ಒಂದು ಸಾಸಿರಮುಖ ಒಂದು ಗಜಮುಖ
ಒಂದು ಮತ್ಸ್ಯಮುಖ ಒಂದು ಸೂಕರಮುಖ
ಒಂದು ಕ್ರೂರಮುಖ ಒಂದು ಶಾಂತಮುಖ
ಒಂದು ಶ್ಯಾಮವರ್ಣ ಒಂದು ರಕ್ತವರ್ಣ
ಒಂದು ಪೀತವರ್ಣ ಒಂದು ಶುಭ್ರವರ್ಣ
ಒಂದು ಭಯಪ್ರದ ಒಂದು ಅಭಯಪ್ರದ
ಒಂದು ಅಣುವಾಗಿಪ್ಪುದು ಒಂದು ಮಹತ್ತಾಗಿಪ್ಪುದು
ಒಂದು ಕುಳಿತಿಪ್ಪುದು ಒಂದು ನಿಂತಿಪ್ಪುದು
ಒಂದು ಕೇವಲ ಲಘು ಒಂದು ಮಹಾ ಗುರು
ಒಂದು ಕಡೆ ಓಡ್ಯಾಟ ಒಂದು ಕಡೆ ಸಂಹಾರ
ಒಂದು ಕಡೆ ಸೃಷ್ಟಿಯು ಒಂದು ಕಡೆ ಪಾಲನೆ
ಒಂದು ರೂಪದಲ್ಲಿನ್ನು ನಿಂದು ನಾನಾ ವೈಚಿತ್ರನಾಗಿ ತೋರುವ ದೈವ
ಸುಂದರ ಮೂರುತಿ ಗೋಪಾಲವಿಠಲ
ಒಂದೊಂದನಂತರೂಪ ಅನಂತ ಒಂದೆ ರೂಪ ೧

ಮಠ್ಯತಾಳ

ಒಂದು ರವಿಯ ತೇಜ ಒಂದು ದ್ವಿರವಿ ತೇಜ
ಒಂದಕ್ಕೊಂದು ಅಧಿಕ ಹತ್ತು ರವಿಯ ತೇಜ
ಒಂದು ಬಲ ಜ್ಞಾನಪೂರ್ಣವಾದ ರೂಪ
ನಿಂದಿವೆ ಮಲಗಿವೆ ಮಲಗಿ ತಿರುಗಿವೆ
ಪೊಂದಿಕೊಂಡಿಹವೇಕವೆಂದಿಗು ಭೇದಗಳಿಲ್ಲ
ಮಂದಜನರ ಮನಕೆ ಮಹಾಕಳಂಕ
ಗಂಧಾದಿ ಶಬ್ದವೆಲ್ಲ ಸ್ವರೂಪಭೂತ
ಇಂದ್ರಿಯಗಳೆಲ್ಲ ಒಂದೊಂದು ಪೂರ್ಣವು
ಪೊಂದಿಪ್ಪುವು ನೋಡನಂತ ಬೊಮ್ಮಾಂಡಗಳು

ಇಂದಿನ ಅತೀತ ಅನಾಗತವೆಲ್ಲ
ಒಂದೊಂದು ರೂಪದಿ ಪೊಂದಿಕೊಂಡಿಪ್ಪುವು
ಒಂದು ಆದರು ಅಂತ ಕಂಡೆನೆಂಬುವರಾರು
ನಂದನಂದನಕಂದ ಗೋಪಾಲವಿಠಲ
ಒಂದು ತೋರುವ ತತ್ತದ್ಯೋಗ್ಯತೆಯನುಸಾರ ೨

ರೂಪಕತಾಳ

ಒಂದು ಕಡೆಯಲ್ಲಿ ರಾವಣನ ಸಂಹಾರ ಮಾಡುವ
ಒಂದು ಕಡೆಯಲ್ಲಿ ತತ್ವಜ್ಞಾನ ಬೋಧಿಸುತಿಪ್ಪ
ಒಂದು ಕಡೆಯಲ್ಲಿ ತುರುಗಳನು ಕಾಯುವ
ಒಂದು ಕಡೆಯಲ್ಲಿ ಕ್ರೂರಜನರ ಸದೆಬಡಿಯುವ
ಒಂದು ಕಡೆಯಲ್ಲಿ ಕುರುಪಾಂಡವರ ಕಡಿದಾಡಿಸುವ
ಒಂದು ಕಡೆಯಲ್ಲಿ ಗೋಪಸ್ತ್ರೀಯರ ಒಡನಾಡುವ
ಒಂದು ಕಡೆಯಲ್ಲಿ ಗೋವರ್ಧನಗಿರಿಯನೆತ್ತುವ
ಒಂದು ಕಡೆಯಲ್ಲಿ ಬ್ರಹ್ಮಾದ್ಯರಿಂದ ಪೂಜಿಸಿಕೊಂಬ
ಒಂದು ಕಡೆಯಲ್ಲಿ ಕಂಸನ ಹನನ ಮಾಡುತಿಪ್ಪ
ಒಂದು ಕಡೆಯಲ್ಲಿ ಯಶೋದೆಯ ಮುಂದಾಡುತಿಪ್ಪ
ಒಂದು ಕಡೆಯಲ್ಲಿ ಪಾಲು ಮೊಸರು ಕದ್ದು ತಿಂದು
ಇಂದುಮುಖಿಯರ ಮುಂದೆ ಇಲ್ಲೆಂದಾಡುತಿಪ್ಪ
ಒಂದು ರೂಪದಲ್ಲೆ ಈ ಪರಿಪರಿ ರೂಪ
ಚೆಂದದಿ ತೋರುತಿಪ್ಪ ಒಂದೆರಡೆನೆ ಸಲ್ಲ
ಕಂದರ್ಪಜನಕ ಗೋಪಾಲವಿಠಲ ತನ್ನ
ಪೊಂದಿದವರ ಮನಕೆ ಒಂದನಂತಾಗಿ ತೋರ್ಪ ೩

ಝಂಪೆತಾಳ

ಒಂದು ಕಡೆಯಲ್ಲಿ ದ್ರೋಣ ಭೀಷ್ಮಾದಿಗಳನೆಲ್ಲ
ಕೊಂದು ಕೊಂದರ್ಜುನ ಕೊಲ್ಲು ನೀ ಎನುತಿರ್ಪ
ಒಂದು ಕಡೆಯಲ್ಲಿ ಅರಿಸೈನ್ಯಕ್ಕೆ ಬಲವಾಗಿ

ಮುಂದರಿದು ಮತ್ತವರ ಮೋಹಗೊಳಿಸುತಲಿಪ್ಪ
ಒಂದು ರೂಪದಿ ಪಾರ್ಥನಿಗೆ ತತ್ವ ತಿಳಿಸುತ್ತ
ಬಂದ ಅರಿಗಳ ಅಸ್ತ್ರಗಳ ತಾನೆ ವರೆಸುತಲಿಪ್ಪ
ಒಂದು ರೂಪದಲ್ಲಿ ಅರ್ಜುನನ ಆಲಿಂಗಿಸಿ
ಬಂದ ಆಯಾಸಗಳ ಬಡಿಸದೆ ನಿಂದಿಪ್ಪ
ಒಂದು ರೂಪದಿ ದೇವದತ್ತ ಶಂಖವನೂದಿ
ತಂದೀವ ಬಲವ ಪ್ರತಿಕ್ಷಣಕೆ ಪಾರ್ಥನಿಗಿನ್ನು
ಮಂದ ಅಸುರರಿಗೆ ಇದೆ ಶಬ್ದದಿಂದ ಅವರ
ಕುಂದು ಮಾಡುವ ಬಲವ ಒಂದು ರೂಪದಲ್ಲಿನ್ನು
ಒಂದೊಂದನಂತಾನಂತ ರೂಪನಾಗಿ
ಮುಂದರಿದ ಕುರುಸೈನ್ಯವ ಕೊಂದು ಕೊಂದ್ವಾಕುತಿಹ
ಮಂದಾಕಿನೀಜನಕ ಗೋಪಾಲವಿಠಲ ಹೀ-
ಗೆಂದು ತಿಳಿದರ್ಚಿಪಗೆ ಬಂಧನವ ಕಡಿವ ೪

ತ್ರಿಪುಟತಾಳ

ಮತ್ಸ್ಯಾದಿ ಕೇಶವಾದಿ ಅನಿರುದ್ಧಾದಿ ಅಜಾದಿ
ವಿಶ್ವಾದಿ ಹಯಾದಿ ಶಿಂಶುಮಾರ ಕಪಿಲವ್ಯಾಸ
ಸ್ವಚ್ಛವಾದನಂತ ರೂಪಗಳೆಲ್ಲವು
ನಿಚ್ಚನಿಚ್ಚ ಕೃಷ್ಣನಲ್ಲೆ ನಿತ್ಯವಾಗಿ
ಎಚ್ಚೆತ್ತಿಪ್ಪುವು ಕಾಣೊ ಲೇಶಸಂಶಯವಿಲ್ಲ
ಅಚ್ಚನಿಟ್ಟಂತೆ ಮತ್ತೊಂದೆ ಪಾದದಲ್ಲಿನ್ನು
ಅಚ್ಯುತನರೂಪ ಒಂದು ದುರ್ಬಲ ಪ್ರಬಲ ನೀ-
ಚೋಚ್ಚವಿಲ್ಲವೊ ನಿತ್ಯ ವ್ಯಕ್ತ
ಅಚ್ಚು ಬೆಲ್ಲವ ಒಂದು ಆವಕಡೆ ತಿಂದರು
ಹುಚ್ಚ ಒಂದು ಕಡೆ ಹುಳಿ ಸಿಹಿ ಎನಿಪುದೆ
ಮಚ್ಚರ ಜನರಿಗೆ ಮರುಳುಗೊಳಿಸಿ ಹೀಗೆ
ನಿಚ್ಚವಾದ ನಿರಯ ಪೊಂದಿಸುವ
ಸ್ವಚ್ಛ ಮೂರುತಿ ನಮ್ಮ ಗೋಪಾಲವಿಠಲ
ಅಚ್ಚ ಕರುಣಿ ಕಾಣೊ ಆರ್ತಜನಕೆ ನಿತ್ಯ ೫

ಅಟ್ಟತಾಳ

ಅಣು ಪರಮಅಣು ಅತ್ಯಣು ಬಲು ಅಣು
ಘನ ಘನ ಘನರೂಪ ಘನತರ ಘನತಮ
ಅಣುರೂಪದ ದ್ರವ್ಯ ಮನಸ್ಸಿಗೆ ಒಂದನ್ನು
ಎಣಿಕೆ ಹಿಡಿದೆನೆನಲು ಮನಕೆ ನಿಲ್ಲುವುದಲ್ಲ
ಘನರೂಪದ ದ್ರವ್ಯ ಆಕಾರದೊಳಗಿನ್ನು
ಅಣುವಾಗಿ ತೋರುವುದು ಅವ್ಯಾಕೃತ ದ್ರವ್ಯ
ಘನವ್ಯಾಪ್ತಿ ಉಳ್ಳದ್ದಾದರು ಸರಿಯೇವೆ
ಘನಹರಿ ದ್ರವ್ಯದಲ್ಲಿ ಅಣುವಾಗಿ ತೋರೋದು
ಚಿನುಮಯ ಹರಿ ತಾನು ಚಿದ್ರೂಪಕೆ ಬಿಂಬ
ಎನೆ ಸಲ್ಲ ಮನುಜ ಘನ ಸೋಜಿಗವುಂಟು
ಅನುವಾದ ಪಂಚಮಹಾಭೂತ ಅವ್ಯಕ್ತಕೆ
ಮನಸಿಜನಯ್ಯ ತಾ ಬಿಂಬನಾಗಿಪ್ಪನು
ಎಣಿಸಿ ಧೇನಿಪ್ಪಂಗೆ ಎಲ್ಲಕ್ಕೆ ಹರಿಬಿಂಬ
ಘನ ಜಾಗ್ರತನಯ್ಯ ಗಣನೆ ಮಾಡಲು ಅನ್ಯ
ಸನಕಾದಿಗಳೊಡೆಯ ಗೋಪಾಲವಿಠಲ
ಅನಿಮಿಷರಿಗೆ ತಿಳಿಯ ಅಗೋಚರನಯ್ಯ ೬

ಆದಿತಾಳ

ಚತುರವಿಂಶತಿ ತತ್ವ ಸ್ವರೂಪಭೂತವು
ಪತಿತಪಾವನನಾದ ಹರಿಯಲ್ಲಿ ಇಪ್ಪುದು
ತತು ತತುರೂಪ ತದ್ವರ್ಣ ತದಾಕಾರ
ಗತಿಗೆ ನಿಯಾಮಕ ಸತತ ಬಿಂಬನಾಗಿ
ಖತಿಗೊಳಗಾಗದೆ ಖಂಡಾಖಂಡನಾಗಿ
ಜಿತವಾದ ತನ್ನ ಸ್ವರೂಪದಿಂದಲೆ
ಇತರಾಪೇಕ್ಷೆಯು ಇಲ್ಲ ಇವರಿಂದಲಿ ಬಂದ
ಅತಿಶಯ ಬೇಕಿಲ್ಲ ಆಶ್ರಿತ ಜನಪಾಲ

ಜಿತವಾದ ಜಡಕೆ ಬಿಂಬವಾದ ಬಳಿಕಿನ್ನು
ತತುವ ಜೀವರಿಗೆಲ್ಲ ಬಿಂಬನಾಗೋದಾಶ್ಚರ್ಯ
ಇತರ ಜೀವರಿಗೆಲ್ಲ ನಿಶ್ಚಯ ನಿತ್ಯದಿ
ಗತಿ ಬೇಕಾದವನಿಗೆ ಇದೆ ಚಿಂತನೋಪಾಯ
ಇತರ ದೈವರ ಗಂಡ ಗೋಪಾಲವಿಠಲ
ಚ್ಯುತದೂರ ನಿತ್ಯ ಆಶ್ರಿತ ಜನಪಾಲ ೭

ಜತೆ

ವಿಶ್ವರೂಪ ದರುಶನಾಧಿಕಾರಿಗಳು ಅರಿದು
ವಿಶ್ವನಾಮಕ ಗೋಪಾಲವಿಠಲನ ಭಜಿಸಿ

೧೨೭

ಸುಳಾದಿ

ಧ್ರುವತಾಳ

ಚ್ಯುತರಹಿತವಾದಂಥ ಗತಿಯು ಬೇಕೆಂಬುವರಿಗೆ
ಜಿತಜ್ಞಾನ ಭಕುತಿ ವಿರಕುತಿಯು ಬೇಕು
ಪತಿವ್ರತೆ ತಾನೆಂಬೋದು ಮನಕೆ ಲೇಶವ ತಾರದೆ
ಪತಿತನಾಗಿರಬೇಕು ಅಂತರದಿ
ಪತಿತ ಬಾಹ್ಯರ ಕಂಡು ಪರವೆ ಮಾಡದೆ ತನ್ನ
ಮತಿಯಲ್ಲಿ ತಿಳಿದುಕೊಂಡು ಮೌನಧರಿಸಿ
ಅತಿ ಆಯಾಸವು ಪಡದೆ ಅಲ್ಪ ಬಂದರು ತಾ ಪೂ-
ರ್ಣತೆಯನ್ನು ಮಾಡಿಕೊಂಡು ತುಷ್ಟನಾಗಿ
ಮತಿ ಎರಡು ಪ್ರಕಾರ ಮಾಡದೆ ಸಗುಣದಿಂದ
ಅತಿವೇಗ ಬಿಡಿಸಿ ನಿರ್ಗುಣಕೆ ನಿಲ್ಲಿಸಿ
ಹಿತಾಹಿತದ ದಾರಿ ವಿವರವನ್ನೆ ಅರಿದು

ಸತಿಸುತರ ಮನಕೆ ಸಿಕ್ಕದಲೆ
ವ್ಯಥೆ ಬಂದ ಕಾಲದಲ್ಲಿ ಹರುಷ ಮನಕೆ ತಂದು
ಅತಿ ಸುಖ ಬಂದಾಗಲು ವ್ಯಥೆಯ ತಿಳಿದು
ಸತತ ನಿತ್ಯವಾದ ವಸ್ತು ಆವುದು ಅದಕೆ
ಪ್ರತಿಬಿಂಬ ತಾನು ಎಂದು ತಿಳಿದುಕೊಂಡು
ಸ್ವತಂತ್ರಾಸ್ವತಂತ್ರ ವಿವೇಕವನ್ನೆ ತಿಳಿದ
ಸ್ವತಂತ್ರ ದೃಢವ ತನ್ನಲ್ಲಿರವ ನೋಡಿ
ಚತುರವಿಧ ಉಪಾಯದಿಂದ ತನ್ನ ಸ್ವರೂಪ
ಚ್ಯುತನಲ್ಲವೆಂದು ತನ್ನ ತನ್ನ ಸ್ಥಿತಿಯನರಿದು
ಪತಿತನಾಗೋದೆಲ್ಲ ತನಗೆ ಬಂದ ದೇಹಗಳೆಂದು
ಹಿತ ಮಾಡದೆ ಅಲ್ಲಲ್ಲಿ ಮಮತೆ ಬಿಟ್ಟು
ತತುವ ವಿವೇಕ ಜ್ಞಾನವುಳ್ಳವನಾಗಿ ಶಾ-
ಶ್ವತವೆಂಬ ಜ್ಞಾನ ಸಂಸಾರದಲ್ಲಿ ಬಿಟ್ಟು
ಕ್ರತು ಮೊದಲಾದ ಕರ್ಮ ಹರಿ ಮಾಡಿ ಮಾಡಿಸಿದ
ಸ್ಥಿತಿಯನರಿದು ತನ್ನ ಕೃತಿಯ ಮರೆದು
ದ್ವಿತೀಯ ತೃತೀಯ ತತ್ವ ಚತುರವಿಂಶತಿ ದಶ
ತೃತೀಯ ಮಂಡಲತತ್ವ ಭಾಗವರಿದು
ಅತಿ ದೂರನಾಗಿ ಅದಕ್ಕೆ ತತುವಿಲಕ್ಷಣ ತನ್ನ ಜಡವಸ್ತುವಿನಕಿಂತ
ಶತಗುಣ ವಿಲಕ್ಷಣನೆಂದು ಮತಿ ಮಾತ್ರದದರಲ್ಲಿ
ಸತತ ತಾನಾಗೆ ಶಾಶ್ವತ ವಸ್ತುವಿನ್ನು
ಜಿತವಾಗಿ ಪಿಡಿದುಕೊಂಡು
ಪತಿತಪಾವನನಾದ ಗೋಪಾಲವಿಠಲನಲ್ಲಿ
ರತಿ ಉಳ್ಳವನಾದರೆ ಪಥಪೊಂದುವನು ಗತಿಗೆ ೧

ಮಠ್ಯತಾಳ

ಪ್ರಥಮಸಾಧನ ಜೀವ ಅಸ್ವತಂತ್ರ
ದ್ವಿತೀಯ ಸಾಧನ ಹರಿ ಸ್ವತಂತ್ರ ಸ್ಮೃತಿ
ತೃತೀಯ ಸಾಧನ ಜಡಚೇತನ ಜ್ಞಾನ

ಚತುರ ಸಾಧನ ಪೂರ್ಣ ಅಪೂರ್ಣವು
ಚತುರ ಸಾಧನದೊಳಗೆ ಸರ್ವಸಾಧನವಡಕ
ಮತಿಯಿಂದಲಿ ಇದನೆ ಮತ್ತೆ ವಿಸ್ತರಿಸಲು
ಶತ ಸಹಸ್ರವು ಆಗಿ ಸಾಧನ ಕಾಣಿಸುವು
ಸತುವ ಜೀವ ಮಾತ್ರಕ್ಕೆ ಸಾಧನ ಹೊರ್ತು
ಗತಿ ಆಗದು ಕಾಣೊ ಎಷ್ಟು ಸಾಧನೆ ಮಾಡೆ
ಗತಿ ಅಗತಿ ಗಮನ ಸ್ವರ್ಗ ನರಕಗಳಲ್ಲಿ
ಮಿತಿ ಇಲ್ಲದೆ ಪುನಃ ಸುತ್ತುತಲೆ ಇರುವ
ಚ್ಯುತದೂರ ಚೆಲುವ ಗೋಪಾಲವಿಠಲ
ಸ್ವತಃ ಒಲಿದರೆ ಒಲಿವ ಯತನಕ್ಕಗೋಚರ ೧

ರೂಪಕತಾಳ

ಕರ್ತೃ ನಾನೆಂದರೆ ದೋಷ ಫಲವು ಪ್ರಾಪ್ತಿ
ಕರ್ತನಲ್ಲೆಂದರೆ ಸಾಧನಕ್ಕೆ ಫಲವಿಲ್ಲ
ವ್ಯರ್ಥ ಸುಮ್ಮನಿಪ್ಪುದಕ್ಕೆ ಜೀವ ಜಡವಲ್ಲ
ಕರ್ತೃ ಜೀವೆಂಬುವುದು ಶೃತಿ ಸ್ಮೃತಿಗಳಲಿ ಸಿದ್ಧ
ಕರ್ತೃ ಜೀವೆಂಬುವುದು ಜೀವ ಸ್ವಾಧೀನಲ್ಲ
ಕರ್ತೃನಿಷ್ಠ ಧರ್ಮ ಕೊಟ್ಟರಿವರಿಗೆ ಉಂಟು
ಕೊರ್ತೆ ಮಾಡುವನಲ್ಲ ಕೊಟ್ಟ ಕರ್ತೃತ್ವನ್ಯ
ನಿಷ್ಟವಾಗಿ ಜೀವಕ್ಷತ್ತಿ ತಾ ಇಪ್ಪುದು
ಸ್ಫೂರ್ತಿ ಬಂದರೆ ಅರಿವ ಸ್ಫೂರ್ತಿ ಬರದಿರೆ ಮರೆವ
ಗಾತ್ರ ಹಸಿದರೆ ಅಳುವ ಗಾತ್ರ ತುಂಬಲು ನಲಿವ
ಕೀರ್ತಿ ಅಪಕೀರ್ತಿ ತನ್ನದೆಂದು ಹಿಗ್ಗುವ
ವ್ಯರ್ಥ ಇದರಿಂದ ಆನಂದ ಆಚರಿಸುವ
ಸ್ವಾರ್ಥ ಸುಖವನರಿಯ ಹರಿ ಕರ್ಮಕನಾಗಿ
ಸ್ಫೂರ್ತಿ ತಂದಿತ್ತರೆ ಸುಖವೆ ಬಡುವೆ
ಮರ್ತರೆ ಮರೆವುವನು ಸ್ವಾರ್ಥ ಪುಟ್ಟದೊ ಹರಿಯು ತಿಳಿಸದಿರಲು
ಕರ್ತೃ ಕಾರ್ಯ ತಾ ವಿಷ್ಣು ಗೋಪಾಲವಿಠಲ
ಪಾತ್ರಾಪಾತ್ರವರಿತು ಫಲವನೀವ ೨

ಅಟ್ಟತಾಳ

ಅನಾದಿಯಿಂದಲೆ ಹರಿ ತನ್ನ ಸ್ವಾತಂತ್ರ್ಯ
ನಾನಾ ಜೀವರಲ್ಲಿ ವಿವರಮಾಡಿ ಇಟ್ಟಿರುವ
ತಾನು ಅಭೇದನಾಗಿ ಸರ್ವಾಂತರದಿದ್ದು
ನ್ಯೂನಾಧಿಕವೆನಿಪ ಅಧಿಕಾರಾನುಸಾರ
ಶ್ರೀನಾರಿಯಲ್ಲಿ ಶತಸಹಸ್ರ ಭಾರವನಿಟ್ಟ
ಅನಿಲನಲ್ಲಿ ಶತವು ಇಟ್ಟು
ತಾನು ಇಟ್ಟನು ರುದ್ರನಲ್ಲಿ ತದರ್ಧವು
ನ್ಯೂನ ಇದರೊಳಗರ್ಧ ಇಂದ್ರಗಿತ್ತ
ಅನಿಮಿಷ ಗಂಧವು ಋಷಿಕ್ಷಿತಿಪರು ಕ್ರ-
ಮಾನುಸಾರವು ಇತ್ತ ಮನುಷ್ಯರಿಗೆ
ಏನಿತ್ತ ಸ್ವಾತಂತ್ರ್ಯ ತಾನೆ ಇಟ್ಟುಕೊಂಡು
ನಾನಾ ಪರಿಯ ಆಟ ಆಡಿಸುವ
ಆನೆಯಲ್ಲಿ ಇದ್ದು ಗೋಣಿಯ ಹೊರಿಸುವ
ಹೊನ್ನಿನಲ್ಲಿದ್ದರು ತೃಣವು ಭಾರ
ಇನಿತಿಗ್ಗೆಚ್ಚಗೊಡ ಅಲ್ಲಲ್ಲಿ ಸ್ವಾತಂತ್ರ್ಯ
ತಾನು ಸಮ ಸರ್ವತ್ರ ದ್ರವ್ಯಪೂರ್ಣ
ಪ್ರಾಣಿಗಳಿಗೆ ಮಾತ್ರ ತಿಳಿಯಗೊಡದೆ ತನ್ನ
ತಾನು ಬಡಿದಾಡಿಸುವ ಜೀವಿಗಳನ
ತಾನು ಜ್ಞಾನ ಬಲಪೂರ್ಣನು ಆದರು
ಪ್ರಾಣಿಗಳ ಸ್ಥಿತಿಯ ಅರಿತು ಚರಿಯ ಮಾಳ್ಪ
ಆನಂದ ಸುಖಸಾಂದ್ರ ಗೋಪಾಲವಿಠಲ
ಜ್ಞಾನಿಗಳಿಂದೀಗೆ ತಿಳಿಯಪಡುವ ೪

ತ್ರಿಪುಟತಾಳ

ನೋಡು ಕರ್ಮಗಳಿನ್ನು ಅನಂತವಾಗ್ಯುಂಟು
ಮಾಡಿ ಪೂರೈಪುದೆ ಅಂತೆ ಎಲ್ಲ
ಮಾಡಿದೆನೆಂಬ ಅಹಂಕಾರ ಬಂದೊದಗಿದರೆ

ಮಾಡಿದವು ನಷ್ಟ ಮೇಲಿನ್ನು ದೋಷ
ಮಾಡದಿಪ್ಪವೆ ನಡೆಯದ ಕರ್ಮ ಮಾಡೋದಕಿಂತ
ಮೂಢನಾಗಿಪ್ಪುವಡೆ ಜಡನು ಲೇಸು
ನೋಡು ಸಕಲ ಕರ್ಮ ಆವುದರೊಳು
ಅಡಕ ಮಾಡಿದರೆ ಪುರುಷ ಕೊಡುವಂಥದು
ಮಾಡು ಹರಿಕಥಾಶ್ರವಣಾಖ್ಯ ಕರ್ಮವು ಮನಕೆ
ಕೂಡಿದರೆ ಪುನಃ ಪುನಃ ಮಾಡಬೇಕೊ
ಮಾಡಿದಂತೆ ಮನನ ಮಾಡಿ ಮನದಲ್ಲಿ ಗುರುತು
ಮಾಡಬೇಕಿನ್ನು ಮಹಾಶ್ರದ್ಧೆಯಿಂದ
ಮಾಡಿ ಮಾಡಿಸುವಂಥ ಹರಿಯ ತಿಳಿದರೆ ಕೈಯ್ಯ-
ಗೂಡುವುದು ಒಂದಕಾನಂತ ತಿಳಿಪ
ಮಾಡಿ ಮಾಡಿ ಹೀಗೆ ಅರ್ಪಣ ಬುದ್ಧಿಯಲಿ
ಮಾಡದೆ ಕರ್ಮಫಲ ಕೊಡುವವನಲ್ಲ
ನೋಡು ಒಂದು ಜನ್ಮ ಶ್ರವಣವ ಮಾಳ್ಪ
ನೋಡು ಒಂದು ಜನ್ಮ ಮನನ ಮಾಳ್ಪ
ನೋಡು ಶತಜನ್ಮವು ನಿಧಿಧ್ಯಾಸವು ಮಾಡಿ
ನೋಡುವ ಸಂಪ್ರಜ್ಞ ಸ್ಥಿತದಿ ಹರಿಯ
ಮಾಡುವನು ಆಮೇಲೆ ಅಸಂಪ್ರಜ್ಞ ಸಮಾಧಿ
ಕೂಡುವನು ಅನ್ಯ ಎಚ್ಚರವ ಮರೆದು
ನೋಡುವ ಜನರಿಗೆ ಜಡನಂದದಿ ಕಾಂಬ
ಮಾಡನು ಬಾಹಿರ ವಿಷಯದಲಿ ಮನವ
ಪಾಡಿದವರ ಪ್ರಾಣ ಗೋಪಾಲವಿಠಲ
ನೀಡುವನು ಗತಿ ಅವರ ಯೋಗ್ಯತರಿತು ॥

ಅಟ್ಟತಾಳ

ತಿಳುವನಾಗಲಿ ಬೇಕು ತನಗಿಂದುತ್ತಮರಿಂದ
ತಿಳಿದಾಡುತಿರಬೇಕು ತನ್ನ ಸಮಾನಿಕರಿಂದ
ತಿಳಿಯ ಪೇಳಲಿಬೇಕು ತನಗಿಂದವರಾರಿಗೆ
ತಿಳಿದವರವರ ಸ್ಥಿತಿಗಳು ಅರಿದಿನ್ನು

ತಲೆವಾಗಿ ಸತ್ವರಿಗಭಿಮುಖವಾಗಿ ಸಂಚರಿಸು-
ತಲಿರಬೇಕು ಚಲಿಸದೆ ನೀಚರ್ಗೆ
ಅಲ್ಪರಿಯದೆ ಅರ್ಥ ಬಲವಂತರ ಕಂಡು
ಹಳಿದು ತನ್ನ ನಿಜ ಬಡತನ ಪೇಳದೆ
ಗಳಿಸಿ ದ್ರವ್ಯದಿ ಪೂಜೆ ಹರಿಯ ಒಲಿಸೇನೆಂಬ
ಕಳವಳವನು ಬಿಟ್ಟು ಮಲರಹಿತನಾಗಿ
ಸಲಿಲದಿಂದಲೆ ಹರಿ ಸಂತೋಷಬಡಿಸಿನ್ನು
ಕಿಲಿಕಿಲಿ ನಗುತಲಿ ದುಷ್ಟರ ಎದುರಿಗೆ
ಸಿಲುಕದೆ ಅವರಿಂದರ್ಚನೆ ಒಮ್ಮೆ ಆದರು
ಬಲರಹಿತರ ಬಳಿಯಲಿ ಇದ್ದ ತನ್ನ ಭಾಗ
ತಿಳಿದುಕೊಂಡು ಹರಿಗೆ ಅರ್ಪಣೆಮಾಡಿ
ಜಲದಲ್ಲಿ ಇದ್ದ ಕಮಲದಂತೆ ಸಂಸಾರ-
ಸುಳಿಗೆ ಸಿಕ್ಕದೆ ಬಯಲಿಗೆ ಬೀಳೊ ಬಗೆ ಇದೆ
ಮಲೆತ ಮಲ್ಲರಗಂಡ ಗೋಪಾಲವಿಠಲ
ಸುಲಭನು ಈ ಪರಿ ತಿಳುವಿಕಿದ್ದವಗೆ ೬

ಆದಿತಾಳ

ದ್ವೇಷಿಯಾದವರಿಗೆ ದ್ವೇಷಿಯಾಗಿರುವ
ದಾಸನಾದವರಿಗೆ ಪೋಷಿಯಾಗಿರುವ
ದೋಷರಹಿತನೆನ್ನ ದೋಷ ಕೆಡಿಸುವ
ನಾಶರಹಿತನೆನ್ನ ನಾಶದೇಹವನೀಯ
ದೋಷಕ್ಕೆ ಕ್ಲೇಶ ತಾ ಉಣಿಸಿ ಬಿಡುವುದು
ದ್ವೇಷಕ್ಕೆ ದುಃಖ ಶಾಶ್ವತವೆಂದೆಂದು
ದೋಷಕ್ಕೆ ಪ್ರಭೇದ ನಾನಾಬಗೆ ಉಂಟು
ದೋಷವಲ್ಲವೆ ನೋಡು ಅನೃತವೆಂಬೋದು
ಈ ಸಮಸ್ತ ಜನ ಬಿಡದಲೆ ಆಡೋದು
ನಾಶವಿಲ್ಲದ ಭೇದ್ಯಾಭೇದ್ಯ ಜೀವರಿಗಿತ್ತ
ನಾಶನಾದೆನಲ್ಲ ಎಂದೆನುವುದು ತಾನು
ಮೃಷಕಾಣತ್ವಾದಿಗಳನೆಲ್ಲ ತಾನಾಗೆ

ಶಾಶ್ವತವೆಂದು ತಾ ಕ್ಲೇಶವ ಬಡುವದು
ನಾಶ ತಿಳಿದು ತನ್ನ ತಾನೆವೆ ಭೇದಿಸಿಕೊಂಡು
ಮೋಸ ಹೋಗುವ ತನ್ನ ವಾಸಿಯ ಅರಿಯದ
ದೋಷ ಇನ್ನದರಿಂದೆ ಹೇಸಿ ಸಂಸಾರದಿ
ಬೇಸರದಲೆ ಇದ್ದು ಬೆಂದು ಬೆಂಡಾಗುವ
ಏಸೇಸು ಜನುಮವು ಬಂದರು ದು–
ರ್ವಿಷಯದಾಸೆಯ ಬಿಡದಲೆ ಲೇಸು ದೊರೆಯದಿನ್ನು
ಶ್ರೀಶನ ಕರುಣವು ಸಂಪಾದಿಸಲಾಯಿತೆ
ಏಸೇಸು ಜನುಮದಿ ಮಾಡಿದಘವು ತೂಲ–
ರಾಶಿಗೆ ವಹ್ನಿಸ್ಪರ್ಶವಾದಂತೆ ವಿ–
ನಾಶನವಾಗೋವು ದೋಷ ಕಾರ್ಯಗಳೆಲ್ಲ
ಭಾಸುರ ಮೂರುತಿ ಗೋಪಾಲವಿಠಲ
ಶಾಶ್ವತನಾಗಿನ್ನು ಸಾಕುವ ಬಿಡದೆ ೭

ಜತೆ

ಹರಿ ಕರ್ತೃತ್ವ ತಿಳಿದು ತಾರತಮ್ಯ ಪಂಚಭೇದ
ಅರಿದವರಿಗೆ ಒಲಿವ ಗೋಪಾಲವಿಠಲ

೧೨೮

ಜ್ಞಾನವಿಲ್ಲದ ಕರ್ಮ ಏನು ಮಾಡಿದರೇನು
ಆನೆ ತಿಂದ ಕಪಿತ್ಥ ನಾನಾ ಪರಿಯಲಿ
ಕಾಯವನು ದಂಡಿಸಲ್ಯಾತಕೆ
ಶ್ರೀನಿವಾಸನು ಒಲಿಯನು ಮನುಜ ಪ.

ನಿನ್ನ ಉನ್ನತವೆಷ್ಟು ನೀನಾವ ಜಾತಿಯವ
ನೀನಾರ ಬಲದಲಿರುವಿ ನಿನಗೆ
ನಿನ್ನವರಿಗೆ ನೀನರಿತು ನೋಡಿಕೊ
ನಿನಗೆ ಸಥೆಯಾದದಿನ್ನು ಏನು ಕಾಣದೆ ಬರಿದೆ

ನಾನೆ ಮಾಡಿದೆನೆಂಬೋದೇನು ಈ
ಅನ್ಯಾಯವ ಹೇನು ತನ್ನ ಮ್ಯಾಲೆ
ಗೋಣಿಯ ಹಾಕಿಕೊಂಡಂತೆ ನಾನು
ನನ್ನದು ಎಂಬುದನು ಬಿಡದಲೆ ವ್ಯರ್ಥ ೧

ವಹ್ನಿಯಂತೆಂಬಂತೆ ಇನ್ನು ನಿನ್ನಲ್ಲಿರಲು
ಪುಣ್ಯದಂಕುರ ಫಲಿಸೋದೆ
ಕಣ್ಣಲ್ಲಿ ನೋಡಲರಿಯದ ಕರ್ಮ
ಅನಂತವನ್ನು ಮಾಡಲು ತಿಳಿಪೋದೆ
ಎಣೆಯಿನ್ನೆಷ್ಟಿರಲು ಇನ್ನು ಜೋಡಿಯ ಮುಂದೆ
ತನ್ನ ಬಲವನು ನಡೆವದೆ ತನಗೆ ಮಾಡಿ-
ಸಿನ್ನು ಜೀವಕ್ಕೆ ಫಲತರಿದು
ಮುನ್ನ ತಂದುಕೊಡುವ ಚಿನ್ಮಯವರಿಯದೆ ೨

ಕೇಳುವನು ದಾರು ಹೇಳುವನು ದಾರು
ಅರಿವವನು ದಾರು ತಾಳಿ ಮಿತಿ ಕೊಡುವರು
ಆಲೋಚಿಸಿ ನೋಡು ಮನದಿ ಪಾಲಸಾಗರ
ಶಾಯಿ ಗೋಪಾಲವಿಠಲನ್ನ ಊಳಿಗ
ಮಾಡಿನ್ನು ಬಾಳುವೆ ಮಾಡದಲೆ ೩

೧೨೯

ಸುಳಾದಿ
ಧ್ರುವತಾಳ

ಧ್ಯಾನ ಮಾಡು ಮನವೆ ದೈನ್ಯ ವೃತ್ತಿಯಲಿನ್ನು
ಜ್ಞಾನವಂತನಾಗಿ ಗೆದ್ದು ವಿಷಯ
ಹಾನಿ ಲಾಭಗಳಿಗೆ ಹರುಷ ಕ್ಲೇಶವು ಪಡದೆ
ಜಾಣತನದಿ ಚಿಂತಿಸು ಜಗದೀಶನ್ನ

ನಾನು ಎಂಬೋದು ಬಿಟ್ಟು ನಿತ್ಯದಲ್ಲಿ ಇನ್ನು
ಜ್ಞಾನಪೂರ್ಣ ಶ್ರೀಹರಿಯ ಧ್ಯಾನಿಸಿನ್ನು
ಯೋನಿ ಎಂಬತ್ತು ಲಕ್ಷ ಬಂದ ಕಾಲಕ್ಕು
ನೀನು ಪಕ್ವ ಬಾರದ ಗತಿಯು ಇಲ್ಲ
ಕಾಣೆ ನಿನಗೆ ಮುಖ್ಯ ಸಾಧನ ಸಂಪತ್ತು
ಮಾನವ ಯೋನಿಯಲ್ಲೆ ಗಳಿಸಬೇಕು
ಕ್ಷೋಣಿಯೊಳಗೆ ಈ ಜನ್ಮ ಬಪ್ಪುದೆ ದುರ್ಘಟ
ಶ್ರೀನಾಥನ ಕಾರುಣ್ಯವೆಂದು ತಿಳಿಯೊ
ಶ್ವಾನಸೂಕರ ನಾನಾ ಯೋನಿ ಬಂದ ಕಾಲಕ್ಕೆ
ಮಾನಿಸನಾಗೆ ಚಿಂತಿಸಲಿಬೇಕು
ಜ್ಞಾನ ಅಲ್ಲಿ ದೊರೆಯದೊ ಕುತ್ಸಿತ ಯೋನಿಯಲ್ಲಿ
ನಾನಾ ಬವಣೆಯುಂಟು ನಾನೇನೆಂಬೆ
ನಾನಾ ಕುಜೀವರಿನ್ನು ನಾಲ್ಕು ಬಗೆಯ ಕರ್ಮ
ತಾವು ಮಾಡುತ್ತಿಹರೊ ದೇಹಧಾರಿಗಳಾಗಿ
ಕಾಣಿಸುವರು ಎಲ್ಲ ಜಗದ ಒಳಗೆ ಇನ್ನು
ಜ್ಞಾನ ಮಾತ್ರ ನೀ ಪಿಡಿದು ಕುಳಿತುಕೊ
ಗೇಣು ಮೊಳವು ಅಣುರೇಣುಸ್ಥಳದ ಪರಿ
ನಾನಾ ದೇಹಧಾರಿಗಳಿಂದ ಆಗುವ ಕರ್ಮ ಕಾಣೊ
ನಿನ್ನಲ್ಲಿ ಇದ್ದು ಸ್ವಾಮಿ ಮಾಡಿಪನೆಂದು
ಖೂನ ಪಿಡಿದು ಕುಣಿಕುಣಿದಾಡೊ
ನಾನು ಅಸ್ವತಂತ್ರ ನನ್ನಂತೆ ಅವರೆಂದು
ಕಾಣು ಅಲ್ಲಿ ವ್ಯಾಪಾರ ಹರಿಯೆ ಎಂದು
ಮಾನವ ಬಿಟ್ಟು ಮಮತೆಯಲ್ಲಿ ನಮೋ ಎಂದು
ಪ್ರಾಣನ ಸಾಕ್ಷಿಯಾಗಿ ಹರಿಗರ್ಪಿಸು
ಹೀನರಲ್ಲಿ ದಯಘನಗಳಲ್ಲಿ ಸೇವೆ
ನೀನು ಅರಿತು ಮಾಡು ನಿತ್ಯದಲ್ಲಿ
ದೀನಜನಬಂಧು ಗೋಪಾಲವಿಠಲನ್ನ
ಕಾಣು ಚೇತನಾಚೇತನದಿ ಇಪ್ಪನೆಂದು ೧

ಮಠ್ಯತಾಳ

ಭಾವಾದ್ವೈತ ಕ್ರಿಯಾದ್ವೈತ ದ್ರವ್ಯಾದ್ವೈತ
ಇವು ಮೂರನ್ನು ದೇವನಲ್ಲಿ ಇಪ್ಪುವೆಂದು ಅರಿದು ನೋಡು
ಆವಾವಲ್ಲಿ ಚಿಂತಿಸು ಬಿಡದೆ
ಕಾವ ಕೊಲ್ಲುವಲ್ಲಿ ಈವಲ್ಲಿ ಕೊಂಬಲ್ಲಿ
ಧಾವತಿಗಳಲ್ಲಿ ಸುಲಭ ಸೂಕ್ಷ್ಮದಲ್ಲಿ
ಭಾವ ಕ್ರಿಯಾದ್ರವ್ಯ ದೇವದೇವ ಎಂದು ನೀ
ವಿವೇಕದಿ ನೀಚ ಉಚ್ಚ ಕ್ರಮದಿ
ಜೀವಿಗಳ ಗತಿಯು ಜಿತವಾಗಿ ಅರಿತು
ಭಾವಶುದ್ಧದಲಿ ಭಕುತಿಪೂರ್ವಕದಿಂದ
ನೀ ಒಲಿಒಲಿದು ತಿಳಿದು ಒಲಿಸು ಒಲಿಸಿ ಪಾಡು
ಸೇವ್ಯ ಸೂತ್ರವು ನಿಂದ್ಯ ನೋವು ದಂಡನೆಯೆಲ್ಲ
ದೇವ ಪೂಜ್ಯ ಎಂಬ ಭಾವಕ್ರಿಯವ ಗಳಿಸು
ಆವ ವಿಷಯದಲ್ಲಿ ದೇವದೇವರನ್ನು
ಸಾವಧಾನದಿ ಹುಡುಕಿ ಪಾವನಾಂಗನಾಗೊ
ಕೋವಿದರ ಪ್ರಿಯ ಗೋಪಾಲವಿಠಲ
ಕಾವ ನಿನ್ನ ಬಿಡದೆ ಆವಲ್ಲಿ ಇದ್ದರು ೨

ರೂಪಕತಾಳ

ನೋಡಿಸಿದರೆ ನೋಡು ಆಡಿಸಿದರೆ ಆಡು
ಕೂಡಿಸಿದರೆ ಕೂಡು ಓಡಿಸಿದರೆ ಓಡು
ಬೇಡಿಸಿದರೆ ಬೇಡು ನೀಡಿಸಿದರೆ ನೀಡು
ಮಾಡಿಸಿದರೆ ಮಾಡು ವಿಹಿತ ಅವಿಹಿತಗಳು
ಕೇಡು ಎಂದು ತಿಳಿಯೊ ಅವಿಹಿತ ಮಾಡಿಸಿದರೆ
ಕೇಡು ಲಾಭಂಗಳು ಮಾಡಿಸಿದರೆ ನೀನು
ಬೇಡಿಕೊ ದೈನ್ಯದಿ ಪಶ್ಚಾತ್ತಾಪನಾಗು
ನೋಡು ನಿನಗಾವ ವಿಷಯಂಗಳಲ್ಲಿನ್ನು

ಮಾಡಿಸುವ ಅನುಭವ ಹರಿಯೆ ಎನ್ನು
ಕೂಡಿಸು ಯಾವತ್ತು ಜಡಚೇತನಗಳಲ್ಲಿ
ಗೂಡು ಮಾಡಿಟ್ಟಂಥ ಮೂರ್ತಿಗಳೆಲ್ಲ
ಕ್ರೋಡೀಕರಿಸಿ ಧ್ಯಾನ ಮಾಡು ನಿನ್ನ ಮನದಿ
ಕೇಡು ತೋರದು ನಿನ್ನ ಸಾಧನಕ್ಕೆ
ಮೂಢ ಮತಿಯಲ್ಲಿ ಜಡ ಪ್ರತಿಮೆ ಪಿಡಿದು
ಮಾಡೊ ಅಲ್ಲಿ ಪೂಜೆ ಇದೆ ಬಗೆ ಚಿಂತಿಸು
ಷೋಡಶ ಕಳೆಯುಳ್ಳ ಲಿಂಗದ ಒಳಹೊರಗೆ
ಮಾಡಿ ಮಾಡಿಸುವ ಹರಿಯ ಮಹಿಮೆ ತಿಳಿ
ನಾಡಿಗೊಡೆಯ ರಂಗ ಗೋಪಾಲವಿಠಲ
ಈಡಿಲ್ಲದ ದೈವನ ನೋಡು ಮನದಿ ನಿಲ್ಲಿಸಿ ೩

ಝಂಪೆತಾಳ

ಒಂದೆ ಪಿಡಿದು ಮತ್ತಾನಂತವ ಚಿಂತಿಸು
ಒಂದೆ ಚಿಂತಿಸುತ್ತಾನಂತವೆಲ್ಲ
ತಂದುಕೊ ನಿನ್ನಲ್ಲಿ ಕ್ಷಣಕ್ಷಣಕ್ಕೆ ಸ್ಮೃತಿಯನ್ನು
ಸಂದೇಹ ಬಿಟ್ಟು ಸರ್ವೋತ್ತಮನೆಂದು ಭಿ-
ನ್ನಾದಿಯನ್ನು ತಿಳಿಯದಿರು ಹರಿ ಅಂಶಿ ಅಂಶಕ್ಕೆ
ಒಂದೊಂದೆ ಪೂರ್ಣ ಬಲ ಉಳ್ಳವೆಂದು
ಇಂದ್ರಿಯಗಳು ಎಲ್ಲ ಪೂರ್ಣಮಯ ಎಂತೆಂದು
ಒಂದು ರೂಪನ್ನ ಇಂದ್ರಿ ಭೇದವು
ಪೊಂದಿಪ್ಪುವು ಕಪಿಲಾದಿ ನಾಮಗಳಿಂದ
ಗಂಧ ಆಘ್ರಾಣಿಸುತ್ತ ನೋಡುತ್ತ ಕೇಳುತ್ತ
ನಿಂದಿಪ್ಪುವು ಪೂರ್ಣವಾಗಿ ತನ್ನ ಮನ
ಬಂದಂತೆ ಕ್ರೀಡೆಗಳನ್ನು ತೋರಿ
ಸಂದಿಸಂದಿಲಿ ಇನ್ನು ವ್ಯಾಪ್ತನಾಗಿ ಇನ್ನು
ಒಂದು ಪಿಡಿದು ನೋಡಿ ಆಡಿ ಕಂಡೆವೆನಲು
ಇಂದಿರೆಗೆ ತಿಳಿಯಲಗೋಚರವು
ಬಂದು ನಿಲ್ಲುವ ತತ್ತತ್ಯೋಗ್ಯತಾನುಸಾರ

ಸಂದರುಶನವಿತ್ತು ಸಲಹುವನೊ
ಒಂದು ಕೊಂಡು ಮತ್ತೊಂದು ಕೊಡುವನಲ್ಲ
ಒಂದು ಕೊಳ್ಳದೆ ಮತ್ತೆ ಈವನಲ್ಲ
ಒಂದು ಕೊಟ್ಟರೆ ಮತ್ತೊಂದು ಕೊಡುವನಲ್ಲ
ಒಂದಕ್ಕನಂತವ ಅನಂತಕ್ಕೆ ಒಂದೀವಾ-
ನಂದ ಮೂರುತಿ ನಮ್ಮ ಗೋಪಾಲವಿಠಲ
ಅಂದಿ ಕೈತೋರಿ ಅಂದದಂತೆ ಪೊಳೆವ ೪

ತ್ರಿಪುಟತಾಳ

ಮಾಡುವ ಕರ್ಮವುಂಟು ನೋಡುವ ಕರ್ಮವುಂಟು
ಬೇಡುವ ಕರ್ಮವುಂಟು ಮಾಡಿಸುವುದುಂಟು ಮಾಡಿ
ಮಾಡಿಸುವರು ಸಾಂಶ ಸುರಾದಿ ದಿವಿಜರು
ಮಾಡುವರು ಮಾತ್ರ ನಿರಾಂಶರು
ನೋಡುವರು ಉತ್ತಮರು ಕರ್ಮಾಧಮರು
ಬೇಡಿ ಮಾಡುವ ಕರ್ಮ ಸರ್ವ ಜೀವರಿಗುಂಟು
ಕೂಡುವ ಮಲಗುವ ಓಡುವ ನಿಲುವ
ಮಾಡುವ ನಾಲ್ಕು ಕರ್ಮದೇಹಿಗಳು
ಮಾಡಿಸುವ ಹರಿಯೆಂದು ತಿಳಿಯಬೇಕು
ಮಾಡಿಸುವರ ದಯ ಮಾಡುವರ ದಯ
ನೋಡುವರ ದಯ ಬೇಡು ನಿನಗೆ ಬೇಕು
ಮಾಡುವ ಕರ್ಮವು ಈ ಪರಿ ತಿಳಿಯದೆ
ಮಾಡಲು ಏನೇನು ಫಲಬಾರದು
ನಾಡನೆಲ್ಲ ತಿರುಗಿ ತೀರ್ಥಾದಿಗಳ ಮಿಂದು
ಮಾಡೆ ನಾನಾ ದಾನ ಯಜ್ಞಾದಿಗಳೆಲ್ಲ
ಕೂಡಿಸವು ಗತಿಗೆ ಎಂದೆಂದಿಗು
ಮಾಡಿದವರ ಪ್ರಾಣ ಗೋಪಾಲವಿಠಲ
ಮಾಡಿ ಮಾಡಿಸುವಂಥ ಕರ್ತನರಿತು ಬಾಳು ೫

ಆದಿತಾಳ

ಮುಕ್ತ ಅಮುಕ್ತ ಚೇತನದೊಳಗೆಲ್ಲ
ನಿತ್ಯಾನಿತ್ಯ ಜಡಗಳ ಒಳಗೆಲ್ಲ
ತತ್ತತ್ತದಾಧಾರ ಸತ್ತ್ವವೃತ್ತಿಯೊ
ನಿತ್ಯ ಮುಕುತ ನಿರ್ಲಿಪ್ತ ನಿರಾಶ್ರಯ
ಸತ್ವಾದಿರಹಿತ ನಿತ್ಯಾನಂದಮೂರ್ತಿ
ಚಿತ್ರಚಾರಿತ್ರ ವಿಮಲಜ್ಞಾನಪೂರ್ಣ
ಭಕ್ತವತ್ಸಲ ಬಂಧಕಮೋಚಕದೇವ
ರಕ್ತಶುಕ್ಲ ಶ್ಯಾಮಲ ವರ್ಣ
ತತ್ತಳಿಸುವ ಹರಿಮೂರ್ತಿಯ
ಸುತ್ತ ಪರಿವಾರ ನಿಲ್ಲಿಸಿ ನಿನ್ನಯ
ಹೃತ್ಕಮಲದಲ್ಲಿ ನಿತ್ಯ ವಾಸವಾದ
ನಿತ್ಯ ಮೂರುತಿಯನು ಚಿತ್ತಜನಯ್ಯ ಸರ್ವೋತ್ತಮ ಹರಿಯ
ಮತ್ತೆ ಪೇಳಿದಂತೆ ಭಗವಂತನೆ ರೂಪ-
ಕತ್ಯಂತ ಅಭೇದ ಚಿಂತಿಸಿ ತುತಿಸಿ
ಪ್ರತ್ಯೇಕ ಪ್ರತ್ಯೇಕಾಧಿಷ್ಠಾನಗಳಲ್ಲಿ
ಭಕ್ತಿಪೂರ್ವಕದಿ ಎತ್ತಿ ಕರವ ಮುಗಿದ-
ತ್ಯಂತ ಮಹಿಮನೆ ನಿತ್ಯ ಕಾಯೊ ಎಂದು
ಉತ್ತಮರ ಸಂಗ ಜತ್ತಾಗಿ ಮಾಡಿನ್ನು
ಸತ್ಯಸಂಕಲ್ಪ ಗೋಪಾಲವಿಠಲರೇಯ
ತುತ್ತು ಮಾಡಿಪಂತೆ ಸಾಧನ ಮಾಡಿಪ ೬

ಆದಿತಾಳ

ಎಂತೆಂತು ಬಿಂಬನ್ನ ಚಿಂತನೆ ಮಾಡಲು
ಅಂತಂತೆ ಬರುವನು ಪ್ರತಿಬಿಂಬಕ್ಕೆ ಸ್ವ-
ತಂತ್ರ ಒಂದು ಮಾತ್ರ ಹೊರ್ತಾಗಿ
ಚಿಂತಿಸಿ ನೋಡಲು ಜೀವ ಚಿದ್ರೂಪನು
ಸಂತೋಷಾದಿಗಳೆಲ್ಲ ಹರಿಯಾಧೀನ ನಿ-

ರಂತರ ಪರಾಧೀನ ಜೀವ ಸ್ವಾಮಿ
ಭೃತ್ಯ ನ್ಯಾಯವೆಂದು ಉಪಾಸನೆ ಎದುರಿಲಿ
ಚಿಂತಿಸಿ ಕರಮುಗಿದು ಚಿಂತನೆ ಮಾಡಲು
ಸಂತೋಷದಲ್ಲಿ ಪ್ರಾಣದ್ವಾರ
ಚಿಂತಾಯಕ ತನ್ನ ಮೂರ್ತಿ ತೋರಿ ಭವ-
ಗ್ರಂಥಿಯ ಹರಿಸುವ ತಡವಿಲ್ಲದೆ
ಶಾಂತಮೂರುತಿ ನಮ್ಮ ಗೋಪಾಲವಿಠಲ
ನಿಂತಲ್ಲಿ ನಿಧಾನವಾಗಿ ಉಣಿಸುವ ೭

ಜತೆ

ಚಲಅಚಲಗಳಲ್ಲಿ ಈ ಪರಿ ಧ್ಯಾನಿಸೆ
ಒಲಿವ ಗೋಪಾಲವಿಠಲ ಇವಗೆ ಕರುಣದಲ್ಲಿ

೧೩೦

ಧ್ಯಾನವನೆ ಮಾಡು ಬಿಂಬಮೂರುತಿಯ ಪ.

ಆನಂದದಲಿ ಕುಳಿತು ಅಂತರಂಗದಲಿ ಅ.ಪ.

ಸದಾಚಾರನಾಗಿ ದ್ವಾದಶ ಗುರುಗಳಿಗೆರಗಿ
ಮುದದಿಂದ ಮೂಲಮಂತ್ರವನು ಜಪಿಸಿ
ಸದಮಲ ಭಕುತಿಯಲಿ ದೇಹಸ್ಥನ ತಿಳಿದು
ಪದಮಾಸನವ ಹಾಕಿ ಪರಮ ವಿಶ್ವಾಸದಲಿ ೧

ಅಂಗವನು ಚಲಿಸದೆ ಚೆಂದಾಗಿ ದೃಢದಿಂದ
ಕಂಗಳನು ಮುಚ್ಚಿ ಇಂದ್ರಿಯಂಗಳ ಜರಿದು
ಮಂಗಳ ಶೋಭಿತನ ಅಖಂಡ ಧ್ಯಾನವನು ಅಂತ
ರಂಗದಿ ನಿಲಿಸಿ ಎಲ್ಲವನು ಕಾಣೊ ೨

ಭಗವದ್ರೂಪಗಳೆಲ್ಲ ಒಂದು ಸಾರಿ ಸ್ಮರಿಸಿ
ಮಗುಳೆ ಪರಮ ಗುರುವಿನ ಮೂರ್ತಿಯನು
ತೆಗೆದು ಆವಾಹನವನೆ ಮಾಡಿ ಅಲ್ಲಿಂದಲೆ
ಸ್ವಗುರು ಬಿಂಬಮೂರುತಿಯಲಿ ಐಕ್ಯವನೆ ಮಾಡೊ ೩

ತಿರುಗಿ ಮೆಲ್ಲಗೆ ಮೂರು ರಂಧ್ರದಿಂದಲಿ ನಿನ್ನ
ವರಮೂರ್ತಿಯಲಿ ಚಿಂತನೆಯ ಮಾಡೊ
ಭರದಿಂದ ಎಲ್ಲವನು ತಂದು ಹೃದಯದಲ್ಲಿ
ಸ್ಥಿರವಾಗಿ ಇಪ್ಪ ಮೂರುತಿಯೊಡನೆ ಕೂಡಿಕೊ ೪

ಆತನೆ ಬಿಂಬಮೂರುತಿಯೆಂದು ತಿಳಿದುಕೊ
ಆ ತರುವಾಯ ನಾಡಿಗಳ ಗ್ರಹಿಸಿ
ಆ ತೈಜಸನ ತಂದು ವಿಶ್ವಮೂರುತಿಯಲ್ಲಿ
ಪ್ರೀತಿಯುಳ್ಳವನಾಗಿ ಪತಿಕರಿಸು ಮರುಳೆ ೫

ಜ್ಞಾನಪ್ರಕಾಶದಲಿ ನಿನ್ನ ಹೃದಯ-
ಸ್ಥಾನ ಚೆನ್ನಾಗಿ ಅಷ್ಟದಳಕಮಲ ಮಧ್ಯ
ಶ್ರೀನಿವಾಸಮೂರ್ತಿ ನಿಲ್ಲಿಸಿ ಬಾಹ್ಯದಲಿ
ಏನೇನು ಪೂಜೆಗಳ ಅದನೆ ತಿಳಿದು ಮಾಡೊ ೬

ಗುಣ ನಾಲ್ಕರಿಂದ ಉಪಾಸನೆಯನು ಮಾಡು
ಕ್ಷಣಕ್ಷಣಕೆ ಹರಿರೂಪ ನೀ ನೋಡುತ
ಅಣುರೇಣು ಚೇತನಕೆ ತಾನೆ ನಿಯಾಮಕ
ಫಣಿಶಾಯಿಯಲ್ಲದೆ ಮತ್ತೊಬ್ಬರಿಲ್ಲವೆಂದು ೭

ಮಮತೆಯನು ತೊರೆದು ಮೇಲೊಂದಪೇಕ್ಷಿಸದೆ
ಸಮ ವಿಷಯವ ತಿಳಿದು ಒಂದೆ ಭಕುತಿಯಲಿ
ಸಮಾಧಿಗೊಳಗಾಗಿ ದಿವ್ಯದೃಷ್ಟಿಯಲಿ
ಕ್ರಮದಿಂದ ಭರಿತಭಾವವನು ಕಾಣೊ ೮

ಈ ಪರಿ ಧೇನಿಸಲು ದೇವ ಕರುಣವ ಮಾಳ್ಪ
ಪಾಪ ಸಂಚಿತವು ಪ್ರಾರಬ್ಧ ನಾಶ
ಅಪರೋಕ್ಷಿತನಾಗಿ ನಿನ್ನ ಯೋಗ್ಯತೆಯಿದ್ದಷ್ಟು
ಗೋಪಾಲವಿಠಲನೊಲಿವನಾಗ ೯

೧೩೧

ನಂಬಿ ನೀ ಕೆಡದಿರು ಇಹಲೋಕಸುಖವೆಂಬ ಕಂಬಳಿಯೊಳಬುತ್ತಿ
ನಿಂಬೆಲೆಯಾಗಿನೂಟ ಪರಲೋಕ ಸುಖಸಾರವೆಂಬೋದೆ ನಿಜ ಭಕುತಿ ಪ.

ನ್ಯಾಯವಿಲ್ಲದೆ ನಿನ್ನ ಕಾಯ ಪೋಷಣೆಂಬೋದು
ತೋಯದೊಳಗಿನ ಹೋಮ
ಆಯಾಸವನು ಬಟ್ಟು ಮನೆಯ ಕಟ್ಟುವುದೆಲ್ಲ
ಹೇಯಗೊರಳೆ ಧಾಮ
ಮಾಯಕೆ ಸಿಲುಕಿ ತನ್ನವರ ಕೂಡುಂಬೋದು
ವಾಯಸಗಳ ಪ್ರೇಮ
ನೋಯದು ಮನಸಿಗೆ ಹೇಯ ತಾ ಪುಟ್ಟದು
ನಾಯ ಬುದ್ಧಿಯ ಕಾಮ ೧

ದಣಿಸಿ ತನ್ನ ದೇಹ ಧನವ ಕೂಡಿಸುವುದು
ನೊಣ ಜೇನಿನ ವೃತ್ತಿ
ಬಣಗು ದೈವಂಗಳ ಭಕ್ತಿಲರ್ಚಿಸುವುದೆ
ಹೆಣಕೆ ಮಾಡಿದ ಅರ್ಥಿ
ವನಿತೆ ಸುತರು ಬಂಧುಜನಸ್ನೇಹವೆಂಬೋದು
ಪ್ರಣತಿಯೊಳಗಿನ ಜ್ಯೋತಿ
ಒಣಗಿಪೋಗಲು ತಾ ಉಪಜೀವನವೆಂಬೊ ತೈಲ
ಕ್ಷಣವು ನಿಲ್ಲದು ಪ್ರೀತಿ ೨

ಹರಿಯರ್ಪಣವಿಲ್ಲದವ ಕರ್ಮ ಮಾಡಲು
ಹುರಿದು ಬಿತ್ತಿದ ಬೀಜ

ಸಿರಿಮಧ್ವಮತವನು ಪೊಂದದ ವಿಪ್ರನು
ದುರುಳ ನೀಚಾಂತ್ಯಜ
ಪರಧನ ಪರಸತಿ ಪರನಿಂದೆಗಳುಪಿದ
ನರ ನೆರೆ ನರಕಭಾಜ
ಸಿರಿಹರಿಯ ಮರೆದು ದಿನವಕಳೆವನಾಯು
ಕರಗಿತೋ ನಿರ್ವ್ಯಾಜ ೩

ಪರಪೀಡಕನಾಗಿ ಇದ್ದವನ ಜನ್ಮ
ವರುಷ ನೂರಿದ್ದರೇನು
ಪರರಿಗೆ ಹಿತವಾಗಿ ವರುಷ ಬಾಳಿದವನು
ಎರಗು ವೈಕುಂಠವನು
ದುರುಳ ಮತವ ಪಿಡಿದು ಶ್ಲಾಘ್ಯ ಮಾಡಿದವನು
ನಿರಯವ ಬಿದ್ದವನು
ಅರಿತು ಮಾತಾಪಿತರ ಹಿರಿದರ್ಚಿಸಿದವನು
ಕರೆಕರೆ ನೀಗುವನು ೪

ಆಸೆ ಅರ್ಥದಲ್ಲಿಟ್ಟು ಹರಿಯ ಸೇವಿಸುವಂಥ
ದಾಸ ಅಶ್ವದಾಸ
ಆಸೆಯನೆ ಕೊಟ್ಟು ಭಾಷೆ ತಪ್ಪಿದಂಥ
ಈಶನಧಃ ಕೇಶ
ದಾಸತ್ವ ವಹಿಸದೆ ಕಾಶಿರಾಮೇಶ್ವರ
ದೇಶ ತಿರುಗಲಾಭಾಸ
ಹೇಸಿ ಸಂಸಾರದ ಕ್ಲೇಶವೆಂಬೋದು ಕೃಷ್ಣೋ-
ಪಾಸನದಿಂದ ನಾಶ ೫

ಹಲವು ಸಾಧನಗಳ ಮಾಡುತಲಿದ್ದರೇನು
ಹೊಲಬ ಪಿಡಿಯದನಕ
ಛಲವ ಪಿಡಿದರೇನು ತಿಳಿವಿಕೆ ನಿಜವಿಲ್ಲ
ಒಲುಮೆಯಾಗದನಕ
ಕೆಲಕಾಲ ಸುಜನರೊಳಾಡುತಲಿದ್ದರೇನು

ತಲೆಯ ಬಗ್ಗಿಸದನಕ
ಹಲವು ಸಾಧನಕೆಲ್ಲ ಬಲವಂತನೊ ಹರಿ
ತಿಳಿಯೊ ಬಂಧಮೋಚಕ ೬

ಎಷ್ಟು ಸಾಧನಗಳು ಕೂಡಿದ್ದರೇನಿನ್ನು
ದೃಷ್ಟಿಗೆ ಹರಿ ತೋರ
ನಷ್ಟ ಮಾಳ್ಪವು ಎಲ್ಲ ಅಹಂಕಾರವೊಂದಿರೆ
ಶಿಷ್ಟ ಜನಕೆ ದೂರ
ಇಟ್ಟು ತೊಟ್ಟು ಬಹಳ ದಿಟ್ಟ ಸ್ತ್ರೀಯಳು
ಸ್ಪಷ್ಟ ಕುಷ್ಠಿಯ ಶೃಂಗಾರ
ಎಷ್ಟು ಶೋಭಿತಳಾಗೆ ಅವಳ ಪತಿಯು ಕ-
ನಿಷ್ಟಳಾದ ಅವಳ ಸೇರ ೭

ಗುಣತ್ರಯಕನುಸಾರ ಮಾಡಿದ ಕರ್ಮಗ-
ಳುಣಬೇಡ ನೀನೀಗೆ
ಗುಣಿಸು ಶ್ರೀಹರಿಯನ್ನು ನಖಶಿಖತನಕ ಹೃ-
ದ್ವನಜದೊಳಗೆ ಹೊರಗೆ
ಮನುಜಜನ್ಮ ಮಹಾಸುಕೃತದ ಫಲ
ನಿನಗೆ ಬಂದಿದೆ ಈಗೆ
ಕ್ಷಣಿಕವನಿತ್ಯವಸಾರ ಕಳೇಬರ
ದಿನ ಪೋಗುತಿದೆ ಬೇಗೆ ೮

ಗುರು ಉಪದೇಶವೆಂಬುದೆ ಮಹಾದುರ್ಲಭ
ಪರಮ ಮಂಗಳಕರವೊ
ಕರಕರೆ ಸಂಸಾರ ಶರಧಿಯ ದಾಟಲು
ಹರಿಗೋಲು ಸ್ಥಾನೀಯವೊ
ದೊರಕೆ ಮರೆಯಬೇಡ ಗುರು ವಿಜಯ-
ರಾಯರ ಚರಣವ ಸಾರೆಲವೊ
ಪರಮಮಂಗಳ ಮೂರ್ತಿ ಗೋಪಾಲವಿಠಲ
ದೊರಕುವ ದೂರಿಲ್ಲವೊ ೯

೧೩೨

ಸುಳಾದಿ

ಧ್ರುವತಾಳ

ನಿನ್ನ ನಿರ್ದೋಷನೆಂದು ನಾ ನಿರ್ದೋಷಿ ಆಗುವೆ
ನಿನ್ನ ಸರ್ವಜ್ಞನೆಂದು ಜ್ಞಾನವಂತನಾಗುವೆ
ನಿನ್ನ ಬಲವು ಪೂರ್ಣನೆಂದು ನಾ ಬಲಿಷ್ಠನಾಗುವೆ
ನಿನ್ನ ಸುಖಪೂರ್ಣನೆಂದು ಇನ್ನು ನಾ ಸುಖಿಸುವೆ
ನಿನ್ನ ವ್ಯಾಪ್ತನೆಂತೆಂದು ಇನ್ನು ಶೋಕ ನೀಗುವೆ
ನಿನ್ನ ಸ್ವತಂತ್ರನೆಂದು ಎನ್ನ ಸ್ವತಂತ್ರ ಬಲಿಪೆ
ನಿನ್ನ ಅನಾದಿ ಎಂದು ಇನ್ನು ನಿತ್ಯ ನಾನಾಹೆ
ನಿನ್ನ ನಿರ್ಗುಣನೆಂದು ನಾ ನಿರ್ಗುಣನಾಗುವೆ
ಭಿನ್ನ ಕಾಮರಹಿತ ಗೋಪಾಲವಿಠಲ
ನಿನ್ನಾಧೀನವು ದೇವ ಎನ್ನ ವಿಭವಾತಿಶಯ ೧

ಮಠ್ಯತಾಳ

ಸ್ವಾಮಿಯೆಂದು ನಿನ್ನುಪಾಸನೆಯನು ಮಾಡಿ
ಸ್ವಾಮಿಯಾಗುವೆನಯ್ಯ ಎನಗಿಂದವರಿಗೆ
ಪ್ರೇಮನೆಂದು ನಿನ್ನುಪಾಸನೆಯನು ಮಾಡಿ
ಪ್ರೇಮ ಪಡಿವೆನಯ್ಯ ಎನ್ನಿಂದುತ್ತಮರ
ಕಾಮಪೂರ್ಣನೆಂದು ನಿನ್ನ ವಂದಿಸಿ ಭಿನ್ನ
ಕಾಮರಹಿತ ಆತ್ಮಕಾಮವುಳ್ಳವನಾಹೆ
ಸಾಮಜವರದನೆ ಗೋಪಾಲವಿಠಲ
ತಾಮಸಜನವೈರಿ ಆ ಮಹಾಗುಣಪೂರ್ಣ ೨

ರೂಪಕತಾಳ

ಶುದ್ಧಾತ್ಮನೆಂದು ಅಶುದ್ಧ ಪದಾರ್ಥದಲಿ
ಇದ್ದವ ನಾ ನಿನ್ನ ಬುದ್ಧಿಂದ ಕೊಂಡಾಡಿ

ಅಧ್ಯಾತ್ಮ ಮೊದಲಾದ ತ್ರಿವಿಧ ತಾಪಂಗಳ
ಒದ್ದು ನಾ ಬಿಡುವೆನು ನಿನ್ನ ವಂದಿಸಿ
ಉದ್ಧಾರಕ ಸರ್ವ ಜಗಕೆ ನೀನೆಂತೆಂದು
ಉದ್ಧರಿತನಾಗುವೆ ದಿನದಿನ ನಿನ್ನಿಂದ
ಮಧ್ಯ ಆದಿ ಅಂತ್ಯರಹಿತನೆಂದು ನಿನ್ನ ತುತಿಸಿ
ಶುದ್ಧವಾದ ನಿನ್ನ ಲೋಕದಿ ಹೊಂದಿರುವೆ
ಛೇದ್ಯ ಭೇದ್ಯ ರಹಿತನೆಂದು ನಿನ್ನ ತುತಿಸಿ
ಛೇದ ಭೇದಗಳಿಗೆ ದೂರ ನಾನಾಗಿರುವೆ
ಭದ್ರಮೂರುತಿ ಚೆಲುವ ಗೋಪಾಲವಿಠಲ
ಸಾದೃಶ್ಯರಹಿತನೆಂದು ಧನ್ಯನಾನಾಗುವೆ ೩

ಝಂಪೆತಾಳ

ಜನನ ಮರಣರಹಿತನೆಂದು ನಿನ್ನನು ಭಜಿಸಿ
ಜನನ ಮರಣಗಳಿಂದ ದೂರನಾಗುವೆನಯ್ಯ
ತನುವು ಅಪ್ರಾಕೃತನೆಂದು ನಿನ್ನ ತಿಳಿದೆನ್ನ
ತನುವಿನ ಭ್ರಮಣತ್ವನೆಲ್ಲಿ ನೀಗುವೆನಯ್ಯ
ನಿನಗೆ ನಿನ್ನವತಾರಕೈಕ್ಯವನು ಚಿಂತಿಸಿ
ತೊಲಗದಾನಂದದಲ್ಲಿ ನಿನ್ನ ವಿಷಯೀಕರಿಸುವೆ
ನಿನಗೆ ನಿತ್ಯತೃಪ್ತ ಅನಿದ್ರನೆಂದರಿತು
ಎನಗಿಪ್ಪ ಹಸಿವೆ ತೃಷೆ ನಿದ್ರೆಗಳ ನೀಗುವೆ
ಅನಿಮಿಷರೊಡೆಯ ಗೋಪಾಲವಿಠಲ ಎಂತು
ನೆನವುವರು ನೀನವರ ಗುಣದಂತೆ ಗುಣವೀವೆ ೪

ತ್ರಿಪುಟತಾಳ

ತನು ಹೃದಯಾಕಾಶವನಜಮಂಡಲದಲ್ಲಿ
ದಿನಕರನಂತೆ ತಾ ಹರಿ ನಿಲ್ಲಿಸಿ
ಘನಜ್ಞಾನವೆಂಬ ಕಿರಣಗಳೆಲ್ಲ ಪಸರಿಸಿ
ಮನವೆಂಬ ರಥವೇರಿ ತಿರುಗಾಡುತ

ಅನುವಾದ ಬುದ್ಧಿಯನು ಅರುಣನ ಸಾರಥಿ ಮಾಡಿ
ಘನವಾದ ಭವಾಂಬುಧಿ ಒಣಗಿಸುವ
ದಿನದಿನ ತನ್ನ ನೂತನ ಧ್ಯಾನವನ್ನೆ ಇತ್ತು
ಜನನಿಯ ಮೊಲೆ ಹಾಲು ಉಣಿಸನಯ್ಯ
ತನು ಸಂಬಂಧಿಗಳಂತೆ ಬಂಧು ಅಲ್ಲವು ಕಾಣೊ
ಅನಿಮಿತ್ತ ಬಾಂಧವ ಅಪ್ರಮೇಯ
ಸನಕಾದಿಗಳೊಡೆಯ ಗೋಪಾಲವಿಠಲ
ಅನುವಾಗಿ ಅವರವರ ಗುಣದಂತೆ ಉಪಾಸ್ಯ ೫

ಅಟ್ಟತಾಳ

ದುಃಖಿಷ್ಟರಿಗೆ ದುಃಖ ವ್ಯಕ್ತ ಮಾಡುವನಾಗಿ
ದುಃಖಿ ಎಂತೆಂದು ತಾ ಕರೆಸಿಕೊಂಬುವನಯ್ಯ
ರಕ್ಕಸರಿಗೆ ನೀಚರ ಮಾಡೋದರಿಂದ
ಚೊಕ್ಕ ತಾ ಅವರನೆಂತೆಂದು ಬಂಧನೆನಿಸಿಕೊಂಬ
ದಿಕ್ಕಾಗಿ ಅವರವರ ಸಾಧ್ಯ ಸಾಧನಕರ್ಮ
ವ್ಯಕ್ತ ಮಾಡೋದರಿಂದ ಬಾಧ್ಯ ಬಾಧಕನೆಂಬ
ಉಕ್ತಿಲಿ ಕರೆಸಿಕೊಂಬುವ ಹೇಯತ್ವಗಳಿಂದ
ಲಕ್ಕುಮಿಪತಿ ಆವ ದಾವ ನಿಷೇಧವಿಲ್ಲ
ಭಕ್ತವತ್ಸಲ ದೇವ ಗೋಪಾಲವಿಠಲ
ಸಿಕ್ಕದೆ ಮನೆ ಮನೆ ತುಕ್ಕುತ ಚರಿಸುವ ೬

ಆದಿತಾಳ

ತಾರಕಹರಿ ಮುಖ್ಯ ಕಾರಣಕರ್ತ
ಮುರಾರಿ ಬೊಮ್ಮ ಕಾರಣನೈದಿರಿ
ಆರಾರಿಗೊರಗಳು ನೀವರು ಇವರೆಲ್ಲ
ಬಾರದಿದ್ದರೆ ಸರಿ ಹರಿ ತರಿದೊಟ್ಟುವ
ಮೀರ ಶಕ್ಯರು ಅಲ್ಲ ಈ ಶಕ್ತಿಯು ಒಬ್ಬ
ರಾರಾದರು ವಿಚಾರಿಸೆ ನೋಡಲು

ಭಾರನಿಳುಹೆ ಭೂದೇವಿಯಾಗೇಳವ
ತಾರಮಾಡುವ ಜೀವರ ಉದ್ಧರಿಸಲು
ಈರೇಳು ಜಗವ ಸೃಷ್ಟಿಸಿ ಒಡನಿದ್ದು
ಆರ ಭಾರಕೆ ಎಲ್ಲ ಕಾರಣನಾಗಿಹ
ಈರೀತಿ ಸೃಷ್ಟಿಸ್ಥಿತಿಲಯ ವ್ಯಾಪಾರವೆಲ್ಲ
ಮಾರನಯ್ಯಗೆ ಕ್ರೀಡೆ ನಾರಿಗೆ ಸಂಪತ್ತು
ಮೂರು ವಿಧ ಜೀವರಿಗೆಲ್ಲ ಭೋಗ
ನಾರಾಯಣನ ವ್ಯಾಪಾರವಯ್ಯ
ವಾರಿಜಭವನಯ್ಯ ಗೋಪಾಲವಿಠಲ
ದೂರಕೆದೂರತಿ ಸಾರಿಗೆ ಸಾರ್‍ಯಾ ೭

ಜತೆ

ಎಂತೆಂತು ತನ್ನನ್ನು ಭಜನೆಯ ಮಾಳ್ಪರಿಗೆ
ಅಂತಂತೆ ಆಗಿ ಪೊಳೆವ ಗೋಪಾಲವಿಠಲ

೧೩೩

ಸುಳಾದಿ

ಧ್ರುವತಾಳ

ನೀನು ಪುಟ್ಟಿಸಲು ಪುಟ್ಟುವಜೀವ ನಾನಯ್ಯ
ನೀನು ಪೋಷಿಸಲು ಪೋಷಿಸಿಕೊಂಬೆ ನಾನಯ್ಯ
ನೀನು ಚಲಿಸಲು ಚಲಿಸುವೆನಯ್ಯ ನಾನು
ನೀನು ತಡಹಲು ತಡಹುವೆನಯ್ಯ ನಾನು
ನೀನು ನುಡಿಸಲು ನುಡಿವುದು ನಾಲಿಗೆ
ನೀನೆ ವ್ಯಾಪ್ತನು ಸ್ಥೂಲಸೂಕ್ಷ್ಮ ದೇಹಗಳಲ್ಲಿ
ನೀನೆ ಕರ್ತ ಭೋಕ್ತ ನೀನೆ ಆಧಾರನು

ನೀನೆ ನೇಮಿಸಿದಂತೆ ಲಾಭ ನಷ್ಟಂಗಳು
ನೀನೆ ಸರ್ವಚರಾಚರ ಪ್ರೇರಕ ನೀನೆ
ನೀನೆ ಸ್ವತಂತ್ರಾಸ್ವತಂತ್ರ ಸ್ವಪ್ರಕಾಶ
ನೀನೆ ವ್ಯಾಪಕ ಸರ್ವ ಜೀವ ಜಗತ್ತಿನಲ್ಲಿ
ನೀನೆ ನೀನೆ ನೀನೆ ಗೋಪಾಲವಿಠಲ ೧

ಮಠ್ಯತಾಳ

ನಾನಾ ಯೋನಿಗಳಲ್ಲಿ ಜನಿಸಿ ಬರಲಿಕ್ಕೆ
ನಾನು ಸ್ವತಂತ್ರನೇನೊ ಪೇಳೆಲೊ ಹರಿಯೆ
ನೀನು ಸೃಷ್ಟಿಸುವೆ ಕರ್ಮನೆವನ ಮಾಡಿ
ಏನೊ ಕರ್ಮಕೆ ಸ್ವಾತಂತ್ರ್ಯ ನಿನ್ನ ವಿನಹ ಉಂಟೆ
ನೀನೆ ಕಾರಣ ಯೋಗ್ಯತೆ ನಿನ್ನಾಧೀನ
ಏನಾದ ಕರ್ಮದ್ವಯ ನೀನೆ ಮಾಡಿಸುವಿ
ನೀನೆ ಮಾಡಿದ್ದೆಂದು ನಿನಗೆ ಸಮರ್ಪಿತವು
ನಾನು ನಿನ್ನಾಧೀನ ಗೋಪಾಲವಿಠಲ ೨

ರೂಪಕತಾಳ

ಪೃಥಿವಿಪತಿ ಒಂದು ರಥವ ನಿರ್ಮಾಣವ ಮಾಡಿ
ಅತಿ ಉತ್ತಮವಾದ ವಾಜಿಗಳನ್ನು ಕಟ್ಟಿ
ಮಥನಿಸಿ ಸೂತನೊಬ್ಬನ ಮಾಡಿ ಆ ಕ್ಷಣ
ರಥದ ಮಧ್ಯದಲ್ಲಿ ತಾ ಕುಳಿತು ಕಂದನ ಸಹ
ಪಥವನರಿತು ನಡೆಸೆಂದು ಸೂತಗೆ ಪೇಳೆ
ಯಥಾಯಥಾ ಮನದಿಚ್ಛೆ ಬಂದಂತೆ ನಡೆಸೋರು
ರಥಕೆ ಸ್ವಾತಂತ್ರ್ಯ ಆವುದು ಪೇಳೊ ಹರಿಯೆ
ರಥ ಎನ್ನ ದೇಹವು ಪೃಥಿವಿಪತಿ ನೀನು
ರಥಿಕರೆ ತಾತ್ವಿಕರು ಕಂದನಂದದಿ ನಾನು
ಅತಿ ಉತ್ತಮ ವಾಜಿಗಳೆ ಇಂದ್ರಿಯಗಳು
ಜತನಾಗಿ ಪಿಡಿದ ಹಗ್ಗವೆ ಎನ್ನ ಮನಸು

ಖತಿಯಿಂದ ಪಿಡಿದಟ್ಟುವ ಮಣಿಯೆ ಕರ್ಮಂಗಳು ಆ
ರಥಕೆ ಈ ರಥಕೇನು ಭೇದ ಉಂಟೆ
ಹಿತದಿಂದ ಪೇಳೆಲೊ ರಥಾಂಗಪಾಣಿಯೆ ಪಾ-
ರಥನಪಾಲಕನೆ ಗೋಪಾಲವಿಠಲ ಕೇಳೊ
ಸತತ ನೀ ಪ್ರೇರಕ ಸಥೆ ನಿನ್ನದೊ ೩

ಝಂಪೆತಾಳ

ಪತಿಯು ತಾನಾಗಿ ತನ್ನ ಸತಿಗೆ ಪಾಪಪುಣ್ಯದ
ವ್ರತವ ಮಾಡೆಂದು ನಿರೂಪ ಕೊಡಲು ಇದೆ
ಶ್ರುತಿಸ್ಮೃತಿ ನಿರ್ಣಯಗಳು ಪೇಳುತಲಿವೆ
ಪತಿ ನೀನು ಎನಗೆ ಸತಿಯು ನಿನಗೆ ನಾನು
ಪತಿತಪಾವನ ಪಾಪ ನಿರ್ಲೋಪನಹುದು ಜಗ
ತ್ಪತಿ ಎಂದೆನಿಸಿಕೊಂಬ ಅತಿಶಯವು ನಿನಗಯ್ಯ
ಹಿತದಿಂದ ಕೇಳೊಂದು ದೃಷ್ಟಾಂತರವು ಎನ್ನ
ಮತಿ ನೀ ಪ್ರೇರಿಸಿದಂತೆ ಪೇಳುವೆನೊ ಹರಿಯೆ
ಅತಿಸೀತ ಬಾಧಿಸೆ ವಹ್ನಿ ಆಶ್ರೈಸುವರೊ
ಜಿತವಾಗಿ ಸೀತ ವಹ್ನಿಗೆ ಲೇಪಿಸುವುದೆ
ಪತಿತಪಾವನ ಪಾಪ ನಿರ್ಲೇಪ ನೀ ಸತ್ಯ
ದಿತಿಜ ಮರ್ದನನೆ ಗೋಪಾಲವಿಠಲ ನಿನ್ನ
ಕೃತಿ ಅತಿ ಆಶ್ಚರ್ಯವು ಹಿತವೊ ಭಕ್ತರಿಗೆ ೪

ತ್ರಿಪುಟತಾಳ

ತರಣಿ ಉದಿತನಾಗೆ ತಮವು ನಿಲ್ಲುವುದೆ
ಗರುಡನೆದುರಿಗೆ ಉರಗ ಸರಸವಾಡುವುದೆ
ಹರಿಯ ಕೂಡ ಕರಿ ತಿರುಗಿ ಕಾದುವುದೆ
ಹರಿ ನಿನ್ನ ಕರುಣವಾಗಲು ದುರಿತದ ಭಯವೆ
ಸುರಪತಿ ವಜ್ರಕ್ಕೆ ಗಿರಿ ಪ್ರತಿನಿಧಿಯೆ
ಪರಮ ಬಲಾಢ್ಯನಿಗೆ ಹೇಡಿ ಅಂಜಿಕೆಯೆ

ಉರಿವ ಮಾರಿಗೆ ತೃಣವು ಅಣಕವಾಡುವುದೆ
ಪರಮಪುರುಷ ನಿನ್ನ ಸ್ಮರಣೆ ಬಲವಿರಲಿಕ್ಕೆ
ದುರಿತಕಂಜೆನೊ ಜವನ ದಂಡಕಂಜೆನೊ
ಪರಮ ದಯಾಳು ಗೋಪಾಲವಿಠಲ ನಿನ್ನ
ಕರುಣಬಲಕಿನ್ನು ಮಿಗೆ ಬಲವಿಲ್ಲವೊ ೫

ಅಟ್ಟತಾಳ

ನಿತ್ಯ ಪತ್ನಿ ಭಾವ ಲಕುಮಿಗಿತ್ತವ ನೀನು
ಸತ್ಯ ಲೋಕಾಧಿಪತ್ಯ ಬೊಮ್ಮಗಿತ್ತೆಲೊ ದೇವ
ಮೃತ್ಯುಂಜಯಗೆ ಕೈಲಾಸವಿತ್ತವ ನೀನು
ಭೃತ್ಯ ಇಂದ್ರಗೆ ತ್ರಿವಿಷ್ಟಪ ಕೊಟ್ಟೆ ಈ
ಮರ್ತ್ಯಲೋಕದ ಸಂಪದವಿಗಲ್ಲದೆ ಏಕ
ಛತ್ರಾಧಿಪತಿಗೆ ಒಂದು ಅಸ್ತಿನಾಸ್ತಿಗಳುಂಟೆ
ಅತ್ಯುನ್ನತ ನೀನು ಅಹಿರಾಜತಲ್ಪನೆ
ಮುತ್ತಿವೆ ರೋಮ ರೋಮಕೆ ಕೋಟಿ ಬ್ರಹ್ಮಾಂಡ
ನಿತ್ಯ ಖಗನು ವಾಹನನೇನೊ ನಿನ್ನ
ಕೃತ್ಯ ನೋಡಲು ಅತ್ಯಾಶ್ಚರ್ಯ ತೋರುತಲಿದೆ
ಸತ್ಯಸಂಕಲ್ಪನೆ ಗೋಪಾಲವಿಠಲ
ಉತ್ತಮರಿಗೆ ಸುಲಭ ಭೃತ್ಯಪಾಲಕನೆ ೬

ಆದಿತಾಳ

ಜಲಧಿ ಪೊಕ್ಕರು ಬಿಡೆ ಜಲದಲಡಗೆ ಬಿಡೆ
ನೆಲದ ಮರೆಯಲಿ ಪೊಕ್ಕರೆ ನಿನ್ನ ಬಿಡೆನೊ
ಬಲುಘೋರರೂಪತನದಲಂಜಿಸಲು ಬಿಡೆ
ಸುಲಭದಿ ಗತಿಯಿಲ್ಲ ಯಾಚಕನೆನೆ ಬಿಡೆ
ಬಲವಂತಿಕೆಯಲಿ ಪರಶು ತೋರಲು ಬಿಡೆ
ತಲೆ ಜಡೆಗಳು ತಪಸಿಯಾದರು ಬಿಡೆ
ಕುಲಹೀನನಾಗಿ ದನಗಾಯ್ದರು ಬಿಡೆ

ಬಲು ಅರ್ಭಕನೆಂದು ಬತ್ತಲಾದರು ಬಿಡೆ
ಸಿಲುಕದೆ ವಾಜಿಯನೇರಿ ಓಡದಂತೆನ್ನ
ತಲೆ ನಿನ್ನ ಕಾಲಿಗೆ ಕಟ್ಟಿ ಕೆಡಹುವೆನೊ
ಖಳರ ವಂಚಿಕೆ ವೇಷಗಳ ಬಲ್ಲೆನೊ ನಾನು
ಸುಲಭದಿಂದಲಿ ಕಾಯೊ ಗೋಪಾಲವಿಠಲ ೭

ಜತೆ

ಗಿರಿಯನೆತ್ತುವನಿಗೆ ಹರಳು ಭಾರವೆ ದೇವ
ಪೊರೆಯೆನ್ನ ಕರುಣಾಳು ಗೋಪಾಲವಿಠಲ

೧೩೪

ಸುಳಾದಿ

ಧ್ರುವತಾಳ

ನೀನೆ ಎನಗೆ ಬಂಧ ನೀನೆ ಎನಗೆ ಮೋಚ
ನೀನೆ ಎನಗೆ ಲಿಂಗ ನೀನೆ ಗುಣತ್ರಯವು
ನೀನೆ ಎನಗೆ ಲಾಭ ನೀನೆ ಎನಗೆ ನಷ್ಟ
ನೀನೆ ಎನಗೆ ಧರ್ಮ ನೀನೆ ಎನಗೆ ಅಧರ್ಮ
ನೀನೆ ಎನಗೆ ಸೃಜ್ಯ ನೀನೆ ಎನ್ನ ಪಾಲಕ
ನೀನೆವೆ ಸಂಹಾರಕ ನೀನೆ ಎನಗೆ ಕರ್ತೃ
ನೀನೆ ಸರ್ವಪ್ರೇರಕ ನೀನೆ ಎನಗೆ ಸ್ವಾಮಿ
ಜ್ಞಾನಮಯ ಆನಂದವಿಠಲ
ನೀನೆ ಸರ್ವವ್ಯಾಪ್ತ ನಿತ್ಯ ತೃಪ್ತ ೧

ಮಠ್ಯತಾಳ

ಭಿನ್ನ ಭಿನ್ನ ಪುಣ್ಯ ಭಿನ್ನ ಭಿನ್ನ ಪಾಪ
ಭಿನ್ನ ಭಿನ್ನ ಜೀವಕ್ಕಿನ್ನು ಉಣಿಸುವೆ

ಅನ್ಯ ವಿಷಯದಲ್ಲಿ ನನ್ನದೆಂಬೊ ಮಮತೆ
ಇನ್ನು ಪೆಚ್ಚಿ ಹರಿಯೆ ನಿನ್ನ ತಿಳಿಸದೆ
ಬನ್ನ ಬಡಿಸುವಿ ಮುನ್ನ ತೋರದಂತೆ
ಭಿನ್ನ ಪುಣ್ಯಬೀಜ ಭಿನ್ನ ಪಾಪಬೀಜ
ಇನ್ನು ಕೆಡವುದೆಂದು ಮುನ್ನ ಅರಿಯ ಒಂದು
ಘನ್ನ ದಯಾನಿಧಿ ಗೋಪಾಲವಿಠಲ ನಿನ್ನ
ಚುನ್ನಾಟಕೆ ಇನ್ನು ನಮೋ ಎಂದೆ ೨

ರೂಪಕತಾಳ

ಅನ್ಯ ವಿಷಯಗಳೆ ಭಿನ್ನ ಧರ್ಮವೆನಗೆ
ನಿನ್ನ ವಿಷಯೀಕರಿಸುವುದೆ ಪುಣ್ಯ ಧರ್ಮ
ವೆನಗೆ ಇಂತು ಈ ಪರಿ ಇರಲಾಗಿ ಏ ದೇವ
ಎನ್ನ ದಣಿಸುವುದು ಇನ್ನಾವ ನ್ಯಾಯವೊ
ಎನ್ನ ಮಮತೆ ಭಿನ್ನದಲ್ಲಿ ಪುಟ್ಟಿಪುವು
ನಿನ್ನಾಧೀನ ಮತ್ತೆ ನೀ ಅದಕೆ ಪ್ರೇರಕ
ಭಿನ್ನ ಕಾಮರಹಿತ ಗೋಪಾಲವಿಠಲ
ನಿನ್ನವ ನಿನ್ನವ ನಿನ್ನವರವನೊ ೩

ಝಂಪೆತಾಳ

ಅಲ್ಲದೆ ಅಹುದೆಂಬೊ ಬಲ್ಲದ್ದು ಅರಿಯೆನು
ಕಲ್ಲು ಕಠಿಣವೆಂಬೊ ಜ್ಞಾನವಿಲ್ಲ
ಬೆಲ್ಲ ಬೇವು ಎಂಬೊ ತೆರನಂತೆ ಬಿಟ್ಟಿಹೆ
ಅಲ್ಲವಯ್ಯ ಎನಗೆ ಹೀಗ್ಯಾಕೆ ತಿಳಿಪೆ
ಸಲ್ಲದು ಈ ಮೇಲೆ ಮೋಸಗೊಳಿಸಿದರೆನಗೆ
ನಿಲ್ಲಯ್ಯ ನಿನಗೆ ನಿನ್ನ ಭಕುತರಾಣೆ
ಬಲ್ಲೆ ನಾನೆಲ್ಲ ನಿನ್ನ ಮಾಯವೆಂಬುವುದು
ಇಲ್ಲ ನೀನಲ್ಲದೀಜಗಕೆ ಸ್ವತಂತ್ರ
ಎಲ್ಲ ಸುರರೊಡೆಯ ಗೋಪಾಲವಿಠಲರೇಯ
ಬಲ್ಲವರ ಮುಂದೆ ಬಚ್ಚಿಡುವುದೊಳಿತಲ್ಲ ೪

ತ್ರಿಪುಟತಾಳ

ಎನ್ನ ಮನಸ್ಸಿನಲ್ಲಿ ನಿನ್ನ ಮನಸ್ಸು ಇಟ್ಟು
ಭಿನ್ನ ವಿಷಯದಲ್ಲಿ ಎನ್ನ ಎಳೆವೆ
ಎನ್ನ ವಸ್ತದ ಖೂನ ಇನ್ನು ನಾನರಿಯದೆ
ಭಿನ್ನ ವಿಷಯದಲ್ಲಿ ಮೋಸಹೋದೆ
ಎನ್ನಂತೆ ನೀ ಬೇರೆ ಮೋಸಹೋಗುವನಲ್ಲ
ಇನ್ನು ತ್ರಿಗುಣಗಳಿಗೆ ನಿಯಾಮಕ
ನಿನ್ನ ವಿಷಯಗಳಿಗೆ ನಿನಗೆ ಅಭೇದ
ಎನ್ನ ವಿಷಯಕ್ಕೆ ಎನ್ನ ಭೇದಾಭೇದ
ಇನ್ನಿತು ಈ ಬಗೆ ಇಪ್ಪುವದೆಲ್ಲದು
ನಿನ್ನಾಧೀನ ದೇವ ನಿನ್ನವನೊ
ಅನಂತ ಗುಣಪೂರ್ಣ ಗೋಪಾಲವಿಠಲ
ಇನ್ಯಾತಕೆ ಸಂಶಯ ನೀನಲ್ಲದೊಂದಿಲ್ಲ ೫

ಅಟ್ಟತಾಳ

ಒಂದೆ ಅನಂತಾಗಿ ಹೊಂದಿವೆ ವ್ಯಾಪ್ತನೆ
ಮಂದಮತಿ ನಾ ತಿಳಿಯೆ ನಿನ್ನೊಡವೆ
ಎಂದಿಗೆ ಈ ಬಂಧ ಚಿಂದಿ ಆಗುವುದೊ ಮ-
ತ್ತೆಂದಿಗೆ ಲಿಂಗದೇಹವು ದಹಿಸುವುದೊ
ಎಂದಿಗೆ ನಿನ್ನ ಪದಾಂಬುಜ ದೊರೆವುದೊ
ಎಂದಿಗೆ ತ್ರಿಗುಣಾತೀತನಾಗುವೆನೊ
ಸುಂದರಮೂರುತಿ ಗೋಪಾಲವಿಠಲ
ತಂದೆ ನಿನ್ನ ಪಾದ ಅಂದಿಸೊ ಮನಕೆ ೬

ಆದಿತಾಳ

ಕಾಲ ಎನಗೆ ಕಾರಣಲ್ಲ ಕರ್ಮ ಎನಗೆ ಕಾರಣಲ್ಲ
ಶೀಲ ವಿಮಲ ಕಾರಣಲ್ಲ ಕಾಮ ಎಂಬೋದೆ ಕಾರಣಲ್ಲ

ಮೇಲು ಮೇಲು ಪೂರ್ವಕ ಕರ್ಮ ಕಾರಣಗಳಿಗೆ ಕಾರಣ ನೀನೆ
ಪಾಲಸಾಗರಶಾಯಿ ಚೆಲ್ವ ಗೋಪಾಲವಿಠಲ
ಆಲೋಚನೆಯು ಇಲ್ಲ ಎನಗೆ ಆಪ್ತಬಂಧು ನೀನೆ ನೀನೆ ೭

ಜತೆ

ಹಿಂದೆ ಇಂದು ಮುಂದೆ ಮತ್ತೆ ಎಂದೆಂದಿಗೆ ಇದೆ
ಒಂದೆ ಮಾತಯ್ಯ ಗೋಪಾಲವಿಠಲಯ್ಯ

೧೩೫

ಪಾಲಿಸಯ್ಯ ಪವನನಯ್ಯ
ಪಾಲವಾರಿಧಿಶಯ್ಯ ವೆಂಕಟರೇಯ ಪ.

ಕಾಲಕಾಲಕೆ ಹೃದಯಾಲಯದೊಳು ನಿನ್ನ
ಶೀಲ ಮೂರುತಿ ತೋರೊ ಮೇಲು ಕರುಣದಿ ಅ.ಪ.

ಶ್ರೀಶ ಸಂಸಾರವೆಂಬೊ ಸೂಸುವ ಶರಧಿಯೊ-
ಳೀಸಲಾರೆನು ಹರಿಯೆ ಏ ದೊರೆಯೆ
ದಾಸನೆಂತೆಂದ ಮ್ಯಾಲೆ ಘಾಸಿಗೊಳಿಸುವುದು
ಲೇಸು ನಿನಗಲ್ಲವಯ್ಯ ಹೇ ಜೀಯಾ
ದೋಷರಾಶಿಗಳೆಲ್ಲ ನಾಶನ ಮಾಡಿಸು
ವಿಶೇಷವಾದ ಜ್ಞಾನ ಲೇಸು ಭಕುತಿನಿತ್ತು
ಆಸೆಯ ಬಿಡಿಸೆನ್ನ ಮೀಸಲ ಮನ ಮಾಡಿ
ನೀ ಸುಳಿವುದು ಶ್ರೀನಿವಾಸ ಕೃಪಾಳೊ ೧

ಮೂರು ಗುಣಗಳಿಂದ ಮೂರು ತಾಪಗಳಿಂದ
ಮೂರು ಅವಸ್ಥೆಯಿಂದ ಮುಕುಂದ
ಮೂರು ಐದರಿಂದ ಮೂರು ಏಳರಿಂದ
ಮೂರರ ದಾರಿಗಾಣದೆ ಮೂರಾದೆ

ಮೂರು ಹಿಡಿಸಿ ಮ್ಯಾಲೆ ಮೂರೆರಡೋಡಿಸಿ
ಮೂರು ಮೂರು ಭಕ್ತಿಯ ಮೂರುಕಾಲಕೆ ಇತ್ತು
ಮೂರು ರೂಪನಾಗಿ ಮೂರು ಲೋಕವನೆಲ್ಲ
ಮೂರು ಮಾಡುವ ಬಿಂಬಮೂರುತಿ ವಿಶ್ವ ೨

ಕರುಣಾಸಾಗರ ನಿನ್ನ ಸ್ಮರಣೆ ಮಾತ್ರದಿ ಸಕಲ
ದುರಿತ ಪರಿಹಾರವೆಂದು ನಾ ಬಂದು
ಮರೆಹೊಕ್ಕಮ್ಯಾಲೆನ್ನ ಪೊರೆಯಬೇಕಲ್ಲದೆ
ಜರಿದು ದೂರ ನೂಕುವರೆ ಮುರಾರಿ
ಮರುತಾಂತರ್ಗತ ಗೋಪಾಲವಿಠಲ ಈ
ಶರೀರವೆ ನಿನ್ನ ಚರಣಕರ್ಪಿಸಿದೆನೊ
ಸರಿ ಬಂದದ್ದು ಮಾಡೊ ಬಿರುದು ನಿನ್ನದು ದೇವ
ಪರಮ ದಯಾನಿಧೆ ಉರಗಾದ್ರಿವಾಸ ೩

೧೩೬

ಸುಳಾದಿ

ಧ್ರುವತಾಳ

ಪ್ರಸ್ತುಮಾಡುವಂಥ ಕರ್ತ ನಾನಲ್ಲವಯ್ಯ
ವಸ್ತು ಬೇರೆ ಇದ್ದಾನೆ ಒಳಹೊರಗೆ ನೋಳ್ಪುದು
ಪುಸ್ತಕವಲ್ಲವಿದು ಬಿಚ್ಚಿತೋರಿಪುದಕ್ಕೆ
ವಿಸ್ತರಿಸಿ ನೋಡಿ ವಿವೇಕರು
ಅಸ್ತಮಾನುದಯತನಕ ಅದರಿವೆಯಾಗೊಬ್ಬ ಗೃ-
ಹಸ್ಥ ನಮಗೆಲ್ಲರಿಗೆ ಒಡೆಯ ಕಾಣೊ
ಹಸ್ತದಿ ಕನ್ನಡಿ ಪಿಡಿದು ಕರ್ತೃತ್ವ ಎನಗೆಂದರೆ
ಹುಸ್ತು ಹೋದಾವು ನಿಮ್ಮ ವಚನಂಗಳು
ಹೊಸ್ತಿಲ ಮುಂದೆ ನಿಂತು ಗೋವಿಂದ ಎಂದರೆ

ವಸ್ತುವೆನಿಸುವುದೆ ದೇವ ನಮಸ್ಕಾರಕ್ಕೆ
ಕಸ್ತೂರಿ ಭರಣಿಯೊಳು ಪರಿಮಳ ಎಚ್ಚಿದ್ದರೆ
ವಸ್ತು ಇದೆ ಎಂಬೋರೆ ಭರಣಿಯನ್ನು
ದುಸ್ತರ ನಮಗಿದು ಆಸ್ತಿಕತನದಿ ನೋಡಿ
ಸ್ವಸ್ತದಲ್ಲಿಪ್ಪೋದು ಯೋಚಿಸದೆ
ವಸ್ತುವಾಹನ್ನ ಗೋಪಾಲವಿಠಲನೆ
ಪ್ರಸ್ತಮಾಡಿಸುವ ಬಗೆಯ ಕೇಳಿ ೧

ಮಠ್ಯತಾಳ

ಒಂದು ಜೀವನಲ್ಲಿ ಕರ್ತೃವಾಗುವನು
ಒಂದು ಜೀವನಲ್ಲಿ ಭೋಕ್ತೃವಾಗುವನು
ಒಂದೊಂದು ಪದಾರ್ಥದಲ್ಲಿ ತಾನೆ ಇದ್ದು
ಒಂದೊಂದುರೂಪದಿ ಒಂದೊಂದಾಗಿ ಬಂದು
ಒಂದಕ್ಕೊಂದು ಭೇದ ಒಂದು ವಿಷಯದಲ್ಲಿ
ಒಂದೆ ಒಂದಾಗುವನೊಂದರಲ್ಲಿ ನೋಡಾ
ಒಂದರ ದ್ವಾರದಿ ಒಂದಕೆ ಫಲವೀವ
ಒಂದರಲ್ಲ್ಯೆಣಿಸುವ ಒಂದರಲ್ಲಿ ಇಪ್ಪ
ಒಂದರಲ್ಲಿ ಇಲ್ಲವೆಂಬ ವಚನ ಸಲ್ಲ
ಒಂದೆ ದೈವ ನಮ್ಮ ಗೋಪಾಲವಿಠಲ
ವಂದಿಸಿ ತಿಳಿವರಿಗಾನಂದ ಬಡಿಸುವ ೨

ರೂಪಕತಾಳ

ತಾ ಎಂದೆನಿಸಿಕೊಂಡು ತಾನೆ ತಾಹುವನು
ಬಾ ಎಂದೆನಿಸಿಕೊಂಡು ತಾನೆ ಬಾಹುವನು
ಪೋ ಎಂದೆನಿಸಿಕೊಂಡು ತಾನೆ ಪೋಗುವನು
ಕೋ ಎಂದೆನಿಸಿಕೊಂಡು ತಾನೆ ಕೊಂಬುವನು
ಆ ಎಂದು ಕ್ಷ ಎಂದು ಐವತ್ತೊಂದಕ್ಷರ
ಬಾಯಿಂದ ಉಚ್ಚರಿಸಿ ಕಾಯಶುದ್ಧಿಯ ಮಾಡಿ

ಮಾಯ ಪೊಂದಿಸದಂತೆ ತತ್ವಗಳ ತೋರಿಸಿ
ಕಾಯಿದು ಕೊಂಬನು ತಡವಿಲ್ಲದೆ ಭಕುತಿ
ಬಾಯ ಬಡಿಯ ಭಕ್ತರಿಂದ ಆದ ಕರ್ಮ
ಬಾಯ ಬಡಿಯ ಭಕ್ತರಲ್ಲದವರನಿನ್ನು
ನಾಯಕನಾಗಿ ಸರ್ವರಂತರಂಗದಿ ನಿಂತು
ನಿಯಾಮಕನಾಗಿ ನಿತ್ಯ ಕುಣಿಸ್ಯಾಡುವ
ಮಾಯಾರಹಿತ ದೇವ ಗೋಪಾಲವಿಠಲ
ತಾಯಿ ಲಾಲಿಸಿದಂತೆ ತನ್ನವರ ಪೊರೆವ ೩

ಝಂಪೆತಾಳ

ನಾನೆ ಕರ್ತನೆಂದು ನಾಲ್ಕು ದಿಕ್ಕುಗಳಿಂದ
ನಾನಾ ಪದಾರ್ಥಗಳನು ತರಿಸಿ
ಜ್ಞಾನವಿಲ್ಲದೆ ಯಜ್ಞಸ್ನಾನ ಗೋದಾನ ಭೂ-
ದಾನ ಹಿರಣ್ಯದಾನ ಭೂಸುರರಿಗುಣಿಸೆ
ನಾನಾವ್ರತ ಚಾಂದ್ರಾಯಣಗಳಿನ್ನು
ಗಾನ ಗಾಯತ್ರಿ ಜಪಮಂತ್ರಗಳು
ಏನು ಏಸೊಂದು ಕರ್ಮಗಳ ಮಾಡಿದರು
ಶ್ರೀನಿವಾಸನು ಇದರಿಂದೊಲಿಯನು
ಕಾಣದ ಕರ್ಮವನಂತ ಮಾಡೋಕಿಂತ
ಜ್ಞಾನಪೂರ್ವಕದಿ ಗೆಲುವ ಯೋಚನೆ
ನೀನು ಎನ್ನ ಸ್ವಾಮಿ ನಾನು ನಿನ್ನ ಭೃತ್ಯನೆಂದು
ದೈನ್ಯಬಟ್ಟುದಕ್ಕೇನೇನು ಸಮಾನವುಂಟೆ
ದಾನವಾಂತಕ ಗೋಪಾಲವಿಠಲರೇಯ
ನೀನೆ ಗತಿಯೆಂದವಗೆ ನಿಜವ ತಿಳಿಪುವ ೪

ತ್ರಿಪುಟತಾಳ

ನಿತ್ಯದಲ್ಲಿ ನಿಷ್ಕಾಮಕರ್ಮಗಳ ಮಾಡೆ
ಪ್ರತ್ಯಕ್ಷದಲ್ಲಿ ತಾ ನಿಂತು ಫಲವೀವ

ಸತ್ಯ ಅದಕೆ ಫಲವಿತ್ತರೆ ತಪ್ಪನು
ಭಕ್ತಿರಿಚ್ಛೆಗನಾಗಿ ಬಹುಬೇಗ ಒಲಿವನು
ಮತ್ತೊಂದು ಫಲಕಾಗಿ ಮತ್ತೊಂದು ಕರ್ಮಮಾಡೆ
ದೈತ್ಯರ ದ್ವಾರದಿ ಫಲಗಳನೀವನು
ನಿತ್ಯವಲ್ಲವೊ ಅದು ತತ್ಕಾಲಕ್ಕೆ ಸುಖ
ಚಿತ್ತಜನಯ್ಯನ ಚರಿತೆ ಹೀಗೆ
ಭಕ್ತರಾದವರಿಂಥ ಕರ್ಮ ಮಾಡಿದರೆ
ಕ್ಲುಪ್ತಿಗೆ ಕಡಿಮಿಲ್ಲ ಅಧಿಕಾನಂದವು ಹ್ರಾಸ
ಉತ್ತಮ ಅಪರೋಕ್ಷ ಆದಮೇಲಕೆ ಹೀಗೆ
ಜತ್ತಾಗಿ ಪ್ರಾರಬ್ಧ ಉಣಿಸುವುದು ಸಂ-
ಚಿತ ಆಗಾಮಿಯು ನಾಶವಹುದು ಕ್ಷಣದಿ
ಸತ್ಯಸಂಕಲ್ಪ ಗೋಪಾಲವಿಠಲನ್ನ
ಭಕ್ತರಿಗೆ ಕೇಡಿಲ್ಲ ಭಯವಿಲ್ಲವೊ ೫

ಅಟ್ಟತಾಳ

ಒಂದು ಫಲವು ಒಬ್ಬನಿಂದಾದರೆ ಇನ್ನು
ಎಂದಿಗು ಅವನ ಉಪಕಾರ ಮರೆಯದೆ
ಬಂಧಕ ನಮಗೆ ಅನಾದಿಕಾಲದಿಂದ ಇದ್ದದ್ದು ತನ್ನ
ಚಂದುಳ್ಳ ನೋಟದಿ ಆನಂದಬಡಿಸುವ
ಹಿಂದೆ ಮುಂದೆ ಅನಿಮಿತ್ತ ಬಂಧುವಾಗಿ
ಇಂದಿರಾಪತಿ ದಯಾಸಿಂಧು ಕರುಣಾಳು
ಕಂದರ್ಪಜನಕ ಗೋಪಾಲವಿಠಲನ್ನ
ಎಂದಿಗು ಮರೆಯದೆ ಮನಮಂದಿರದೊಳಗೆ ೬

ಆದಿತಾಳ

ಮಾಡಿಬಲ್ಲ್ಯಾ ಒಂದದರಿಂದಲಿ
ನೋಡಿ ಬಲ್ಲ್ಯಾ ಒಂದದರಿಂದಲಿ
ಕೂಡಿಬಲ್ಲ್ಯಾ ಒಂದದರಿಂದಲಿ

ಬೇಡಿಬಲ್ಲ್ಯಾ ಒಂದದರಿಂದಲಿ
ಗಾಡಿಕಾರ ಗೋಪಾಲವಿಠಲನೊ-
ಳಾಡಿಬಲ್ಲ್ಯಾ ಒಂದದರಿಂದಲಿ ೭

ಜತೆ

ಕರ್ತೃ ಎನಿಸುವ ನಮ್ಮ ಕರ್ತೃವೆ ತಾನಾಗಿ
ಸೂತ್ರಧಾರ ಗೋಪಾಲವಿಠಲ ಕಾಯ್ವ

೧೩೭

ಭ್ರಾಂತಿ ಬಿಡದೊ ಭಾಗ್ಯ ಪುರುಷನೆ ಪ.

ವಿಷಯಂಗಳ ಜರಿದು ಶಾಂತಚಿತ್ತನಾಗೋತನಕ
ಹೇ ಪ್ರಾಣಿ ನಿನ್ನ ಅ.ಪ.

ಕಾಲಕಾಲಕೆ ಹರಿಕಥಾಶ್ರವಣ ಗುರುಗಳ ಮುಖದಿಂದ
ಕೇಳಿದ್ದೆ ಕೇಳುತ ಪೇಳುತ ಮನನ ಮಾಡುತ್ತ
ಕೇಳಿದಂತೆ ಧ್ಯಾನವ ಮಾಡುತ್ತ ಮಾಡಿದ್ದನು ಭವಕೆ
ಮೇಲಾಗಿ ಬಂದೊದಗೋತನಕ ೧

ಪಾಂಚಜನ್ಯ ಅರಿಪಾಣಿ ಸರ್ವೇಶ ತದ್ರಾಣಿ ಲಕುಮಿ ವಿ-
ರಿಂಚಿ ವಾಯುಸಮ ವಾಣಿ ಭಾರತಿಭುಜಂಗ ಪತಿಯು
ಪಂಚಾನನ ಖಗ ಸುತ್ರಾಮ ಕಾಮ ಈ ಬಗೆ ತಾರತಮ್ಯ
ಪಂಚಭೇದವ ತಿಳಿಯೋತನಕ ೨

ಪೂರಕ ಕುಂಭಕ ರೇಚಕದಿಂದಲಿ ಹೃದಯಸ್ಥ ಭೌತಿಕ
ಮಾರುತನ ಜಯಿಸಿ ಅಣಿಮಾದಿ ಸಿದ್ಧಿ ಅಷ್ಟಾಂಗಯೋಗ
ಧಾರಣನಾಗಿ ನಿಸ್ಸಂಗದಿ ಚರಿಸಿ ಭಾರತಿಪತಿಯಾದ ಸ-
ಮೀರನ ಒಲುಮೆ ಪಡೆಯೋತನಕ ೩

ಅಂಶಿ ಅಂಶ ವೇಷಾಧಿಷ್ಠಾನ ಅಂತರ್ಯಾಮಿಗಳ
ಸಂಶಯ ರಹಿತತ್ಯಂತ ಭೇದವು ರೂಪಗಳ ತಿಳಿದು
ಕಂಸಾರಿಯ ಕರುಣ ಬಲಮಾಡಿ ಹಿಂಸೆಗಳೀಡ್ಯಾಡಿ
ಹಂಸೋಪಾಸಿಯಾಗೋತನಕ ೪

ಹಂಚುಹಾಟಕ ಸಮದರ್ಶಿ ಎನಿಸಿ ಶೀತೋಷ್ಣವ ಸಹಿಸಿ
ಸಂಚಿತಾಗಮಗಳನೆ ದಹಿಸಿ ಇಂದ್ರಿಯಗಳ ಜಯಿಸಿ
ಪಂಚ ವೃತ್ಯಾತ್ಮಕ ಮನ ವಶೀಕರಿಸಿ ಧ್ಯಾನದೊಳು ಶ್ರೀಹರಿ
ಮಿಂಚಿನಂದದಿ ಪೊಳೆಯೋತನಕ ೫

ವಿಷಯಾವಿಷಯಂಗಳ ರೂಪವ ತಿಳಿದು ವಶವಾಗದನ್ಯ
ವಿಷಯವೆಂಬೋದನ್ನು ತಾನರಿದು ದುರಾಶೆಯ ತೊರೆದು
ಹಸಿ ತೃಷೆ ಹಗಲಿರುಳು ಮಾಡದಲೆ ಹರಿದಾಸರ ಬೆರೆದು
ಕುಶಲ ವಾರ್ತೆಗಳಾಡೋತನಕ ೬

ಸ್ವತಂತ್ರ ಅಸ್ವತಂತ್ರ ವಸ್ತು ವಿವೇಕವ ತಿಳಿದು
ಸ್ವತಂತ್ರನೆ ಮುಖ್ಯ ಶ್ರೀಹರಿಯೆಂದು ಧ್ಯಾನಕೆ ತಂದು
ಸ್ವತಂತ್ರನಲ್ಲವೊ ನೀ ಬಂದು ಆಪ್ತ ನೀನೆಂದು
ವ್ಯಾಪ್ತದರ್ಶಿ ಆಗೋತನಕ ೭

ಸಕಲೇಂದ್ರಿಯಗಳಿಂದ ಶ್ರೀಹರಿಯ ವ್ಯಕತತಿಗೆ ತಂದು
ಕಕುಲಾತಿ ಹಗಲಿರುಳು ಬಿಡುತಲಿ ಮುಕುತರಟ್ಟಿದಲ್ಲಿ
ಲಕುಮೀಶ ಗೋವಿಂದನ ಮೂರ್ತಿಯ ಭಕುತಿಲಿ ತನ್ನ
ಸುಖ ವಿಷಯನೆಂದರಿಯೋತನಕ ೮

ಬಿಂಬ ಭಾವ ಕ್ರಿಯ ದ್ರವ್ಯಾ ದ್ವೈತವ ತಿಳಿದು ಸರ್ವಗತ
ಬಿಂಬ ಮಮ ಸ್ವಾಮಿ ಗೋಪಾಲವಿಠಲನಲ್ಲದಿನ್ನಿಲ್ಲ
ಎಂಬುದನರಿತು ಅನ್ಯ ಸ್ವತಂತ್ರವ ಜರಿದು ಸರ್ವ ವ್ಯಾಪಾರದಿ
ಬಿಂಬಕ್ರಿಯವ ಕಾಣೋತನಕ ೯

೧೩೮

ಮಧ್ವಮುನಿಮನಮಂದಿರನಿವಾಸ ಸಿರಿಕೃಷ್ಣ
ಉದ್ಧರಿಸಬೇಕು ಎಲ್ಲರನ ಪ.

ಶುದ್ಧರಿಗೆ ಸದ್ಗತಿ ಮಿಶ್ರರಿಗೆ ಮಧ್ಯವು
ಪೊದ್ದಿದ ತಾಮಸರಿಗೆ ತಮೋಗತಿಯಿತ್ತು ಅ.ಪ.

ಸತ್ವರಿಗೆ ನವವಿಧ ಭಕುತಿಯನೆ ತೋರಿಸಿ
ಮತ್ತೆ ಮಧ್ಯಮರಿಗೆ ಸಂಶಯ ಪುಟ್ಟಿಸಿ
ಮತ್ತರಿಗೆ ನವವಿಧ ದ್ವೇಷಪರಿಪೂರ್ತಿಸಿ
ನಿತ್ಯದಲಿ ಮಾಡಿದ ಸಾಧನವು ಹೆಚ್ಚಿಸುತ ೧

ಒಬ್ಬರ ಕರ್ಮದಲಿ ಒಬ್ಬರು ರತರಾಗೆ
ಹಬ್ಬಲೀಸದೆ ವೇಗ ಹತನಬಡಿವುದು
ಕೊಬ್ಬು ಮುರಿವುದು ಅಧಿಕ ಒಚ್ಚೆಯನು ಮಾಡಿದರೆ
ಒಬ್ಬರ ವಿಷಯಗಳಿಗೆ ಸಾಗದಂತೆ ಇನ್ನು ೨

ದೇಹ ಸಂರಕ್ಷಣೆಯಲ್ಲಿ ಇನ್ನು
ಸಹಾಯವಾಗಿ ಒಂದೆ ತ್ರಿವಿಧರಿಗೆ
ಶ್ರೀಹರಿ ನೀ ಇನ್ನು ಮಾಡಿ ನಿತ್ಯದಲ್ಲಿ
ರಹಸ್ಯ ಅವರವರ ಅರಿತು ಸುಖವ ಕೊಡುತ ೩

ದುಷ್ಟಜೀವ ದುಷ್ಟಶಾಸ್ತ್ರ ದುಷ್ಟಕರ್ಮಗಳಿನ್ನು
ಇಟ್ಟುದರಿಂದ ವಿವೇಕ ನಮಗೆ
ಬಿಟ್ಟುಕೊಡಬಹುದಿರವ ತಿಳಿದ ಬಳಿಕ
ನಷ್ಟ ಇದು ಬ್ಯಾರೆ ಇಷ್ಟ ನಮಗೆಂತೆಂದು ೪

ಈ ವಿಧದಲಿ ನಿತ್ಯ ಪೊರೆದು ಎನ್ನ ಮರೆದೆ
ಈವ ವೈಷಮ್ಯ ಸಂಶಯಗಳ ಬಿಡಿಸಿ

ಶ್ರೀವಾಯುಮತದ ಅನುಸಾರ ಜ್ಞಾನವನಿತ್ತು
ಆವಾಗ ಗೋಪಾಲವಿಠಲ ತಿಳಿಸುತ ನಿನ್ನ ೫

೧೩೩

ಸುಳಾದಿ

ಧ್ರುವತಾಳ

ಮುಕುತಿಯು ಬೇಕು ಎಂಬಾಸಕುತಿ ಉಳ್ಳವರೆಲ್ಲ
ಯುಕುತಿಯ ಕೇಳಿ ಎನ್ನ ಶಕುತಿದ್ದಷ್ಟು ಪೇಳುವೆ
ಸಕಲ ಧರ್ಮವು ನೋಡಾ ಪ್ರಕಟಾಗೆ ಬಂದವೆರಡು
ಭಕುತಿ ಜ್ಞಾನವು ಪುಟ್ಟಿ ತಿಳಿಯಬೇಕು
ಸುಖತೀರ್ಥರೆ ಶಾಸ್ತ್ರದ ಉಕುತಿಯ ಅನುಸರಿಸಿ
ಕಕುಲಾತಿ ಹರಿಯಲ್ಲಿ ಮುಕುರಿ ಬಿದ್ದಿರಬೇಕು
ಲಕುಮಿ ಮೊದಲುಮಾಡಿ ಪುಷ್ಕರ ಪರಿಯಂತ
ಭಕುತರ ತಾರತಮ್ಯ ಯುಕುತಿಯಿಂದ ಅರಿಯಬೇಕು
ಭಕುತರೊಳು ತನ್ನಿಂದಧಿಕರನ್ನು ಕಂಡರಲ್ಲಿ
ಭಕುತಿಯನಿಟ್ಟು ಅವರ ಕೃಪೆಯ ಪಡೆಯಬೇಕು
ಭಕುತರೊಳು ತನ್ನಿಂದ ಸುಖಿಸುತ್ತಲಿರಬೇಕು ಅ-
ಶಕುತರ ಕಂಡರೆ ಭಕುತಿ ಪುಟ್ಟುವಂತೆ ಕರುಣ
ಮಿಗಿಲಾಗಿ ಮಾಡಬೇಕು
ಸಕಲ ಪ್ರಾಣಿಗಳೆಲ್ಲ ಸುಖದಲ್ಲಿರಲಿ ಎಂದು
ವಿಕಸಿತವಾಗಿ ಮುಖ ಪ್ರಕಾಶಿಸುತ್ತಿರಬೇಕು
ಭಕುತರೊಳಗೆ ಸಮಾನಿಕರಲ್ಯಾದರು ತನಗೆ
ಸಖಿತ್ವವಾಗಿ ಸತತ ಸಕಲ ಇಂದ್ರಿಯಗಳೆಲ್ಲ
ಪ್ರಕಟಿಸದೆ ಬಂಧಿಸಿ ಬಕನಂತೆ ಭಕುತಿಯಕ್ಕು
ಯುಕುತಿಬಿಟ್ಟು ಮುಕುತಿದಾಯಕ ಚೆಲ್ವ ಗೋಪಾಲವಿಠಲನ್ನ
ನಖಶಿಖ ಪರಿಯಂತ ನಿತ್ಯ ಧ್ಯಾನವಮಾಡು ೧

ಮಠ್ಯತಾಳ

ಕಾಮಕ್ರೋಧಲೋಭಮೋಹಮದಮತ್ಸರ
ನೇಮದಿ ಬಿಡಬೇಕು ನೇಮದಲ್ಲಿಡಬೇಕು
ಸ್ವಾಮಿಯ ಬಿಟ್ಟು ಅನ್ಯವಿಷಯ ಕೇಳುವಂಥ
ಕಾಮವನ್ನು ಹಿಡಿದು ಖಂಡ್ರಿಸಲಿಬೇಕು
ಸ್ವಾಮಿಯ ದ್ರೋಹಿಗಳ ಕಂಡರವರ ಮೇಲೆ
ಕ್ಷೇಮ ಚಿಂತಿಸದಲ್ಲಿ ಕ್ರೋಧ ಮಾಡಲಿಬೇಕು
ಸ್ವಾಮಿ ವಿಷಯದಲ್ಲಿ ತತ್ವಧರ್ಮದ ಮಾರ್ಗ
ನೇಮವು ಬಲ್ಲಾತನಾಗಿದ್ದರು ಸರಿಯೆ
ತಾಮಸ ಜೀವನು ಬಂದು ಕೇಳಿದರು
ಪಾಮರ ಗರುವದಲೊಶಮಾಡಲಿಬೇಕು
ತಾಮಸ ಜೀವನ್ನ ತಾ ಮತ್ತೆ ಕಂಡರೆ
ತಮಸಿಗೆ ಹೋಗುವಂತೆ ಮೋಹ ಪುಟ್ಟಿಸಬೇಕು
ಸ್ವಾಮಿಯ ಧ್ಯಾನಾನಂದಭರಿತನಾಗಿ
ಪಾಮರನೆದುರಿಗೆ ಮದದಿ ತಿರುಗಬೇಕು
ಸ್ವಾಮಿ ಸರ್ವೋತ್ತಮತ್ವ ಬಿಟ್ಟು ಪೇಳುವಂಥ
ತಾಮಸನ್ನ ಕಂಡು ಮತ್ಸರಿಸಲಿಬೇಕು
ಸ್ವಾಮಿಯ ಸೇವೆಯು ಬೇಕು ಎಂಬುವಂಥ
ಕಾಮವು ಸರ್ವದಾ ಕಕುಲಾತಿಯು ಬೇಕು
ಸ್ವಾಮಿಯ ದಾಸರ ಕಂಡರಾಯಿತೆ ಇನ್ನು
ಪ್ರೇಮದಿಂದಲಿ ಇನ್ನು ಮೋಹ ಮಾಡಲಿಬೇಕು
ಸಾಮಜವರದ ಶ್ರೀ ಗೋಪಾಲವಿಠಲನೆ
ಕಾಮಕ್ರೋಧಗಳಿಗೆ ನಿಯಾಮಕನೆನಬೇಕು ೨

ರೂಪಕತಾಳ

ಆಡಲಿಬೇಕಿನ್ನು ಸರ್ವ ಮಾತುಗಳು
ಆಡಿಸುವ ಬೇರೆ ಎಂದು ತಿಳಿಯಬೇಕು
ನೋಡಲಿಬೇಕು ಎಲ್ಲಜೀವರು ಮಾಡುವ ಕರ್ಮ

ಮಾಡಿಸುವ ಬೇರೆ ಎಂದು ತಿಳಿಯಲಿಬೇಕು
ಮಾಡಬೇಕು ಜಡಗಳಿಂದ ಹರಿಯಪೂಜೆ
ನೋಡಿ ಚಿಂತಿಸಬೇಕು ಅಲ್ಲಿಪ್ಪ ಮೂರ್ತಿಗಳ
ಆಡಿಸುವ ಮೂರ್ತಿ ಬೇಡಿಸುವ ಮೂರ್ತಿ
ನೋಡಿಸುವ ಮೂರ್ತಿ ಕೂಡಿ ಚಿಂತಿಸಿ ತನ್ನ
ಗೂಡಿನಲ್ಲಿ ನಿತ್ಯ ಮಾಡಬೇಕು ಧ್ಯಾನ
ರೂಢಿಗೊಡೆಯ ರಂಗ ಗೋಪಾಲವಿಠಲಂಗೆ
ಈಡಿಲ್ಲವೆಂದು ಕೂಗ್ಯಾಡಬೇಕು ನಿತ್ಯ ೩

ಝಂಪೆತಾಳ

ಆರುಪರಿಯ ಭೇದ ತಾರತಮ್ಯವಾಗಿ ತಿಳಿದಿರಲಿಬೇಕು
ಕಾರಣ ಅಕಾರಣರ ದಾರಿ ವಿಚಾರಿಸುತ್ತ
ಇರಲಿಬೇಕು ಸೋಪಾನಗಳನ್ನು ನಾರಾಯಣಗೆ
ನಾರಾಯಣನರಾಣಿಗೆ ಭೇದ ನಾರಾಯಣಗೆ ಜೀವನಕೆ ಭೇದ
ಆರಾರು ಜೀವರು ತಮ್ಮೊಳು ತಮಗೆ ಭೇದ
ಕಾರಣವಾಗಿಪ್ಪ ಜೀವ ಜಡಕೆ ಭೇದ
ಆರಿಸುವುದು ಜಡಜಡಕ್ಕೆ ಭೇದ
ನಾರಿಯರಿಗೆ ಭೇದ ಪುರುಷರಿಗೆ ಭೇದ
ನಾರಾಯಣಲಕುಮಿ ಇವರೆ ಎಂದು
ತಾರತಮ್ಯವು ನಿತ್ಯ ಮೂರೆರಡುಭೇದ ನಿತ್ಯ
ಸಾರುತ್ತಿಪ್ಪುವು ಶ್ರುತಿಸ್ಮೃತಿವಾಕ್ಯವು
ಆರು ಮೂರು ಭಕುತಿಯಿಂದ ಶ್ರೀ ಹರಿಯನ್ನು
ಆರಾಧಿಸುವಂಥ ಭಕುತರಿಗೆ
ತೋರುತಿಪ್ಪ ತನ್ನ ಮೂರ್ತಿ ಇಷ್ಟರೊಳಗೆ
ಸೂರಿಯನಂದದಿ ಪೊಳೆವುತಲಿ
ಕಾರುಣ್ಯಸಾಗರ ಗೋಪಾಲವಿಠಲ
ಈ ರೀತಿ ಅರಿದವಗೆ ಪೊರೆಯದೆ ಬಿಡನು ೪

ತ್ರಿಪುಟತಾಳ

ಭಕುತಿಯ ಮಾಡಿರಿ ಸಕಲವೆಲ್ಲವ ಬಿಟ್ಟು
ಮುಕುತಿಗೆ ಸೋಪಾನ ಇದೆ ಇದೆ ಎಂದು
ಭಕುತರೆಂಬವರಿಗೆ ಲಕುಮಿಪತಿಯೆ ಭಾಗ್ಯ
ಲಕುಮಿಪತಿಗೆ ಭಕುತರೇವೆ ಭಾಗ್ಯ
ಲಕುಮಿಯನು ಬಿಡುವೆ ಭಕುತರ ಬಿಡೆನೆಂದು
ಉಕುತಿ ಶ್ರೀಹರಿ ತಾನು ಶಪಥ ಮಾಡಿಹನು
ಸಕಲ ಸತಿಸುತರು ಮಿಗಿಲಾದ ದ್ರವ್ಯದೇಹ
ಸಕಲವೆಲ್ಲವು ನೋಡಾ ಸ್ನೇಹವು ಅಧಿಕವಾಗಿ
ಮುಕುರಾತಿ ಹರಿಯಲ್ಲೆ ಕಕುಲಾತಿ ಇರಬೇಕು
ಸಕಲ ಗುಣಪೂರ್ಣ ಗೋಪಾಲವಿಠಲ
ಮಕ್ಕಳ ತಾಯಿ ಆಲಿಸಿದಂತಾಲಿಸುವ ೫

ಅಟ್ಟತಾಳ

ನಿನಗೆ ನಿಜವಸ್ತು ನೀನು ಅರಿತು ನೋಡು
ನಿನಗೆ ಆವುದು ಎಂದು ಖೂನವು ಪಿಡಿಯಿನ್ನು
ವನಿತೆ ಸುತರು ನಿನ್ನ ಅನುವಿಗೆ ಬಾರರು
ತನು ಸಂಬಂಧಿಗರೆಲ್ಲ ತತ್ಕಾಲದವರೆಲ್ಲ
ನೆನೆಸದಿರಿವರಿಂದ ನಿನಗೆ ಆಗುವ ಸುಖ
ಕನಸಿನೊಳಾದರು ಕಾಣದಿರೆಲೊ ನೀನು
ನಿನಗೆ ಸುಖದುಃಖ ಕ್ಷಣಕ್ಷಣಕೆ ಇನ್ನು
ಅನುದಿನ ಬಿಡದಲೆ ಉಣಿಸುವ ಬೇರುಂಟು
ಘನಮಹಿಮ ನಮ್ಮ ಗೋಪಾಲವಿಠಲನ್ನ
ನೆನೆವರಿಗೆ ಈ ಸುಖ ಅನುಭವವಾಗುವುದು ೬

ಆದಿತಾಳ

ಸುಲಭವಾಹುದು ಅಗಾಧವಾಹುದು
ಗೆಲುವು ಆಹುದು ತಿಳಿಯಬಾರದು

ನಿಲಕ ಆಹುದು ನೆಲೆಯದೋರದು
ಒಲಿದ ಬಳಿಕ ಚಲಿಸನೆಂದಿಗು
ತಲೆಯ ಕೆಳಗೆಮಾಡಿ ಹಲುಬಿದರು
ಹಲವು ಕಾಲ ನೆಲೆಯು ದೋರನವಗೆ ತನ್ನ ತಳ
ತಿಳಿಯದಂಥ ಮನುಜನಿಗೆ
ಅಳಿದು ವಿಷಯಂಗಳನು ಎಲ್ಲ
ಮಲವು ತೊಳೆದು ತಿಳಿದು ತನ್ನ
ತನ್ನ ಕೆಳಗೆ ಬಿದ್ದನೆಂದ ಬಳಿಕ
ತಿಳಿಯಗೊಟ್ಟು ಪೊರೆವನಾಗ
ಕಳೆವ ನಾನಾ ದೋಷರಾಶಿ–
ಗಳನು ಎಲ್ಲನು ಕತ್ತಲೆಲ್ಲ
ಬೆಳಕು ಮಾಡುವನು ತನ್ನ
ಎಳೆಯ ಕರುಣ ನೋಟದಿಂದ
ಸುಲಭ ಭಕ್ತವತ್ಸಲ ಗೋ
ಪಾಲವಿಠಲರೇಯ ತನ್ನ
ತಿಳಿದ ಹಾಗೆಲ್ಲ ನಾವು
ತಿಳಿಸಿಕೊಡುವ ತನ್ನನು ೭

ಜತೆ

ನಂಬಿರೊ ನಂಬಿರೊ ಇಂಬು ಬೇಕೆಂಬೋರು
ಡಂಭವ ಬಿಟ್ಟು ಗೋಪಾಲವಿಠಲನ್ನ

೧೪೦

ಸುಳಾದಿ

ಧ್ರುವತಾಳ

ಮುಕ್ತರ ಸ್ಥಿತಿಯನ್ನು ವರ್ಣಿಸಿದೆ ಪೇಳುವುದಕ್ಕೆ
ಶಕ್ತರಾರಿನ್ನು ಎನ್ನ ಶಕ್ತ್ಯಾನುಸಾರ ಪೇಳ್ವೆ

ಉತ್ತಮ ಮಧ್ಯಮ ಅಧಮ ತಾರತಮ್ಯದಿಂದ ಜೀವ
ಮುಕ್ತಿಲಿ ಇಪ್ಪುವರು ಬಿಡದೆಂದೆಂದು
ಮತ್ತೆ ತ್ರಿಗುಣಾತ್ಮಕ ಲಿಂಗರಹಿತರಾಗಿ
ಚಿತ್ಸ್ವರೂಪದಿಂದಲೆ ಸಂಚರಿಸುತ್ತ
ಮತ್ತೆ ಸಾಕಾರ ಸರ್ವ ಅಂಗಾಭರಣಭೂಷಿತ
ವಸ್ತ್ರಮಾಲಿಕೆ ಗಂಧ ಪರಿಮಳದಿ
ಎತ್ತಿ ಪಿಡಿದ ಶಂಖಚಕ್ರ ಆಯುಧ ಧರಿಸಿ
ನಿತ್ಯ ಆನಂದ ಆನಂದ ಅನುಭೋಗಿಸುತ್ತ
ಅತ್ಯಂತಾಭೇದ ಎಲ್ಲ ಸ್ವರೂಪಭೂತವಿನ್ನು
ಎತ್ತಲಾದರು ನಿತ್ಯವೆಂಬುದಿಲ್ಲ
ನಿತ್ಯ ಸೇವೆಯುತ್ತಮಗಿಂದುತ್ತಮರಾದವರಿಗೆ
ಛತ್ರಚಾಮರ ನಾನಾ ಮುಂತಾದುದು
ಭೃತ್ಯ ಕೆಲಸಕಿನ್ನು ಕೈಜೋಡಿಸಿಕೊಂಡು
ಜತ್ತಾಗಿ ನಿಂತಿಪ್ಪರು ಕೆಡಕಿಲ್ಲದೆ
ಚಿತ್ತಶುದ್ಧರೆ ಎಲ್ಲ ಚಂಚಲೀರಿಷೆಗಳಿಲ್ಲ
ಮತ್ತೆ ಕವಲು ಬುದ್ಧಿ ಮಾಂದ್ಯವಿಲ್ಲ
ಪತ್ನಿ ಉಳ್ಳವರು ಕೆಲರು ಪತ್ನಿರಹಿತರು ಕೆಲರು
ಅತ್ಯಂತ ಸುಖಿಗಳನ್ಯಾಪೇಕ್ಷವಿಲ್ಲ
ಪತ್ನಿ ಉಳ್ಳವರು ತಮ್ಮ ಸತಿಯರಿಂದಲಿ ಕ್ರೀಡೆ
ನಿತ್ಯ ಮಾಳ್ಪರು ನೀತವಾಗಿ ಇನ್ನು
ಪತ್ನಿರಹಿತರಾದವರು ಅತ್ಯಂತ ಸ್ವರೂಪ
ಚಿತ್ತಿನಿಂದೇವೆ ತಜ್ಜನ್ಯ ಸುಖ
ಮತ್ತೆ ಆಗದು ರೇತೋಸ್ಖಲನ
ಮುಕ್ತರಿಗೆ ಅಭಿವ್ಯಕ್ತತಜ್ಜನ್ಯಾನಂದ
ಚಿತ್ತಿನೊಳಗೆ ನಿತ್ಯ ಒದಗಿಸುವಾನಂದ ಗೋಪಾಲವಿಠಲ
ಉತ್ತಮ ಪುರುಷ ಬಿಂಬನಾಗಿ ಇದ್ದು ೧

ಮಠ್ಯತಾಳ

ಉದರಹಸಿವೆಯಿಲ್ಲ ಮೆದುವರು ಫಲಗಳು

ಒದಗೋದು ತಜ್ಜನ್ಯ ಆನಂದವು ಒಳಗೆ
ಮಧು ಫಲಾದಿಗಳು ಮೆದುವ ಮನಸಿಲ್ಲ
ಮುದದಿ ತಾವಿದ್ದಲ್ಲಿ ಬಂದು ಸೇರುವುವು
ಉದಕ ಕುಡಿವರಿಗೆ ಒಂದೆರಡನೆ ಸಲ್ಲ
ಕ್ಷುಧೆ ಪಿಪಾಸೆ ನಿದ್ರೆ ದಶ ಇಂದ್ರಿಯಗಳಿಂದ
ಒದಗಿ ಬಾಹುವ ಸುಖ ಎಲ್ಲ ಆನಂದವು
ವಿಧಿಸೆ ಜೀವನಿಗೆ ಸ್ವರೂಪದೊಳಗೆ
ಒದಗಿ ಇಪ್ಪುವುದೆಲ್ಲ ಎಲ್ಲ ಅಭೇದವಾಗಿ
ವಿಧಿಸಿ ಹೀಗೆ ಒಂದೆ ಜೀವಕ್ಕೆ ಎನೆ ಸಲ್ಲ
ವಿಧಿ ಆದಿ ತೃಣ ಅಂತ್ಯ ಎಲ್ಲ ಜೀವನಕೆ ಹೀಗೆ
ಮದನನಯ್ಯ ಚೆಲುವ ಗೋಪಾಲವಿಠಲ
ಒದಗಿಸುವಾನಂದ ತಾರತಮ್ಯದಿಂದ ೨

ರೂಪಕತಾಳ

ಚಿತ್ತಿನಿಂದಲಿ ಹೀಗೆ ಭೋಗ ಬಡುವರು ಸತತ
ಮತ್ತೆ ಶುದ್ಧ ಸತ್ವದಿಂದ ಕ್ರೀಡೆ
ನಿತ್ಯ ತಮ್ಮಿಂದಲಿ ಭಿನ್ನವಾದುದರಿಂದ
ಅರ್ತಿಬಡುವರು ನಾನಾ ರೂಪವ ತೆಗೆದುಕೊಂಡು
ಹಸ್ತಿ ತುರಗ ನಾನಾ ವಸ್ತ್ರವಾಹನಗಳು
ಮತ್ತೆ ಆಗುವರು ಮಹಾಮಹಾ ವಿಚಿತ್ರ
ವರ್ತಮಾನವು ಕೇಳಿ ಇದರೊಳಗಿನ್ನು ವಿ-
ಚಿತ್ರವಾಗುವುದುಂಟು ಜೀವರ ಸ್ಥಿತಿಗಳು
ಉತ್ತಮ ಸಾಂಶ ಜೀವರು ಇಲ್ಲಿ
ಮತ್ತೇಕಕಾಲದಿ ತಮ್ಮ ಅಂಶಗಳಿಂದ
ಸತ್ವಪ್ರಕೃತಿಗೊಂಡು ಚಿತ್ತ ಬಂದಂತೆ ತಾವು
ಹತ್ತೆಂಟು ಇಪ್ಪತ್ತು ನೂರಾರು ಸಾಸಿರ
ಮತ್ತೆ ನಾನಾರೂಪ ಛತ್ರ ಚಾಮರ ಸರ್ವ
ವಸ್ತ್ರಾಭರಣ ಫಲಪುಷ್ಪಗಂಧಮಾಲೆ

ಹತ್ತೆಂಟು ಪರಿ ವಾಹನರಾಗಿ ತಮಗಿಂತಲು
ಉತ್ತಮರಾದವರ ಹೊತ್ತಾಡುವರು ಕ್ರೀಡಾ
ಮತ್ತೆ ಈ ಪರಿ ಹರಿಯ ಸೇವಿಸಿ ಪುನಹ
ಮತ್ತೆ ತಮ್ಮ ಸ್ವರೂಪ ಚಿತ್ತಿನೊಳು ಕೂಡುವರು
ಅತ್ಯಾಯಾಸವು ಸಲ್ಲ ಎಲ್ಲ ಸುಲಭವು ನೋಡಿ
ಬತ್ತಿಯಿಂದಲಿ ಜ್ಯೋತಿ ಬತ್ತಿಗ್ಹಚ್ಚಿದಂತೆ
ವ್ಯಕ್ತವೆಲ್ಲವು ಅವರ ಸಾಧನಗಳು
ಇತ್ತ ಕೇಳಿನ್ನು ನಿರಂಶ ಜೀವರಗತಿಯು
ಪ್ರತ್ಯೇಕ ಒಂದೊಂದು ಅಂಶದಿಂದ
ಸತ್ವಪ್ರಕೃತಿಗೊಂಡು ಒಂದೊಂದೆ ರೂಪದಿ
ಮತ್ತೆ ಸೇವಿಸುವರು ಸಿರಿಹರಿಯ
ಎತ್ತ ನೋಡಿದರು ಬಲು ರೂಪವಾಗುವ ಶಕ್ತಿ
ಮತ್ತಿಲ್ಲ ನಿರಂಶ ಜೀವರಿಗೆ
ಮುಕ್ತರೊಳಗಿರುತಿಪ್ಪ ಗೋಪಾಲವಿಠಲನ್ನ
ಭಕ್ತರಾನಂದ ಬಲ್ಲವರು ಯಾರೊ ೩

ಝಂಪೆತಾಳ

ಜ್ಞಾನ ಭಕ್ತಿ ವಿರಕ್ತಿ ಮೂರು ಮುಕುತರಿಗೆ
ನ್ಯೂನವಿಲ್ಲವು ನೋಡು ಒಂದು ಕ್ಷಣವಾದರು
ಜ್ಞಾನಕೆ ಎಲ್ಲವು ಕಾಣಿಸುವುದೆ ಫಲವು
ಏನು ಬೇಡಿದ್ದು ಒದಗುವುದೆ ಭಕ್ತಿಯ ಫಲ
ಕಾಣದೆ ಆಧಿಕ್ಯ ಇಚ್ಛೈಸದಿಪ್ಪುವುದೆ
ತಾನು ವಿರಕ್ತಿ ಎಂಬುದು ಇದುವೆ
ಆನಂದಮಯವೆಲ್ಲ ಆಡುವ ವಚನಗಳು
ಯೋನಿ ಎಂಭತ್ತು ನಾಲ್ಕು ಲಕ್ಷ ಜೀವರುಗಳು
ಗೇಣು ಮೊಳವು ಇಲ್ಲ ಎಲ್ಲ ಅಣುರೂಪವು
ತಾನು ಕಿರಿದು ಎಂಬ ಕ್ಲೇಶವಿಲ್ಲ
ನಾನಾ ಜೀವರು ಪರಸ್ಪರ ವಿರೋಧಗಳಿಲ್ಲ
ಆನೆ ಸಿಂಹಗೆ ಅಲ್ಲಿ ವೈರವಿಲ್ಲ

ಹೇನು ವೃಶ್ಚಿಕಗಳು ಮೇಲೆ ಓಡಾಡಿದರು
ಆನಂದಮಯವೆಲ್ಲ ಅವುಗಳಿನ್ನು
ಕಾಣರೆಂಬುದು ಇಲ್ಲ ಹರಿಯನ್ನ ಸರ್ವರು
ತಾನು ಸಂದಳಿ ಎಂಬ ಚಿಂತೆಯಿಲ್ಲ
ಕಾಣಿಸುವ ಹರಿ ತಾನು ಅವರ ಯೋಗ್ಯತೆ-
ಯಾನುಸಾರವಾಗಿ ತೋರುತಲಿ ಇನ್ನು
ಧ್ಯಾನವೆಂಬುದು ಇಲ್ಲ ತಮ್ಮ ಸ್ವರೂಪದಿ
ಧೇನಿಪರು ತಮಗಿಂತ ಉತ್ತಮರ ಅನೇಕವಾಗಿ
ಧ್ಯಾನವ ಮಾಳ್ಪುವರು ಹರಿಯು
ತಾನು ದಿನದಿನ ನೂತನನಾಗಿ ಇನ್ನು
ಆನಂದಮಯಮೂರ್ತಿ ಗೋಪಾಲವಿಠಲನ್ನ
ಕಾಣುವರು ಪ್ರತಿಕ್ಷಣದಿ ಕೆಡಕಿಲ್ಲದೆ ೪

ತ್ರಿಪುಟತಾಳ

ಸೃಷ್ಟ್ಯಾದಿ ಅಷ್ಟ ಕರ್ತೃತ್ವವು ಜೀವನಸ್ವರೂಪಕ್ಕೆ
ಗಟ್ಟಿಯಾಗಿಪ್ಪುವು ಎಂದೆಂದಿಗೂ ಬಿಡದೆ
ಪುಟ್ಟಿಸಿಕೊಡುವ ಪ್ರತಿಕ್ಷಣಕೆ ಆನಂದ ಹರಿ
ಸ್ಪಷ್ಟದಿ ಅಭಿವ್ಯಕ್ತಿ ಸೃಷ್ಟಿ ನೋಡು
ಬಿಟ್ಟು ಜೀವ ನಾನೆಂದು ಪೋಗದೆ ಇಪ್ಪುವುದೆ
ಗಟ್ಯಾಗಿ ಇದೆ ಪಾಲನೆಯೊ
ನಷ್ಟಮಾಡಿ ಜಗವ ಮುಕ್ತ ಅಮುಕ್ತ ಜೀವ
ಪೊಟ್ಟೆಯೊಳಗೆ ಇಪ್ಪುವುದೆ ಲಯವು ನೋಡು
ಅಷ್ಟು ಕಾರ್ಯಕೆ ಜೀವವೆ ದುಡಿವುದಿನ್ನು
ಗಟ್ಟಿಯಾಗಿದೆ ಹರಿನೇಮನ ಕಾಣೊ
ನಷ್ಟವಾಗದೆ ಜೀವ ನಿಜವಾಗಿ ಇಪ್ಪುವುದೆ
ಗಟ್ಯಾಗಿ ಜ್ಞಾನ ಹರಿಕೊಟ್ಟುದೆನ್ನಿ
ಸ್ಪಷ್ಟದಿ ತನಗಿಂತ ಉತ್ತಮರ ಗುಣಗಳು
ಗಟ್ಯಾಗಿ ತಿಳಿಯದೆ ಅಜ್ಞಾನವೊ
ಕಟ್ಟುಮಾಡಿ ಅಧಿಕ ಆನಂದ ಕೊಡದಿಟ್ಟಾ-

ವರ್ಕ ಮಾಡಿಪ್ಪುದೆ ಬಂಧ ಕಾಣೊ
ಪುಟ್ಟಲೀಸದೆ ಪುನಃ ಸಂಸಾರ ಬಿಡಿಸಿದೆ
ಗಟ್ಟಿಯಾಗಿ ಇದೆ ಮೋಕ್ಷ ಕಾಣೊ
ಅಷ್ಟ ಕರ್ತೃತ್ವವು ಸ್ವರೂಪದೊಳಗಾಗಿ
ಗಟ್ಯಾಗಿ ನಿಂತು ಮಾಡಿಸಲು
ಇಷ್ಟರಿಂದ ಜೀವ ಮುಕ್ತರುಗಳಾನಂದ
ಸ್ಪಷ್ಟದಿ ಹರಿಯು ಅಭಿವ್ಯಕ್ತಿ ಮಾಳ್ಪ
ಇಷ್ಟ ಮೂರುತಿರಂಗ ಗೋಪಾಲವಿಠಲನು
ಗಟ್ಟಿಯಾಗಿ ಮುಕ್ತರೊಡನಾಡುವ ೫

ಅಟ್ಟತಾಳ

ವರಣಾಶ್ರಮಗಳುಂಟು ವರಣ ಬಾಹ್ಯರು ಉಂಟು
ಪರಿಪರಿ ಸ್ಥಾವರ ಜೀವರುಗಳು ಉಂಟು
ಇರುವರು ಇದ್ದಲ್ಲೆ ಆನಂದ
ಹರುಷಬಡುವರಿನ್ನು ಸ್ವರೂಪದಿಂದಲೆ
ತರತಮ ಜೀವರು ಅಲ್ಲಿ ಉಂಟು
ಪರಿಪರಿ ಶುದ್ಧ ಸತ್ವಗಳನೆ ಕೊಂಡು
ಮರಗಳು ನಾನಾ ಕುಲತೆಯ ರೂಪವಾಗಿ
ಪರಿವಾರ ಸುರರಿಂದ ಬೆರೆದು ಹರಿಯು ತಾನು
ಹೊರಗೆ ಹೊರಟು ತಾನು ಸಂಚರಿಸುತ್ತ
ಸಿರಿಯಿಂದ ಸುರರುಗಳಿಂದಾಡೋ ಪರಿ ಕ್ರೀಡೆಗನುಕೂಲ
ಪರಿ ಪರಿ ಪುಷ್ಪಫಲವು ರಸಗಂಧವು
ಹರಿಯ ಕ್ರೀಡೆಗೆ ಅನುಕೂಲರಾಗಿ ನಾನಾ ಕುಸುಮ
ಸಿರಿತುಲಸಿ ಮುಂತಾದ ಮರಗಳು ಆಗಿ
ಹರಿಯ ಸೇವಿಸಿ ಪುನಃ ಇರುವರು ಇದ್ದಲ್ಲೆ
ಸಿರಿಶಂಖಚಕ್ರಧಾರಿಗಳು ಮತ್ತಿವರಲ್ಲ
ಮರಗಳು ನಿರುತ ತದಾಕಾರರು

ಎರಡು ವಿಧರು ಉಂಟು ಸಾಂಶ ನಿರಂಶ
ಇರುತಿಪ್ಪರು ಸ್ಥಾವರರು ಜೀವಿಗಳೆನ್ನು
ಹರಿಯ ಸೇವಿಸುತಲಿ ತಮ್ಮ ಶಕ್ತ್ಯಾನುಸಾರ
ಪರಿಪರಿ ಆನಂದ ಅನುಭೋಗಿಸುತಲಿ
ಸಿರಿಮಹಾರಾಜ ಗೋಪಾಲವಿಠಲರೇಯ
ಪರಿ ಪರಿ ರೂಪನಾಗ್ಯವರ ಪಾಲಿಸುವ ೬

ಆದಿತಾಳ

ಬಿಂಬನಾಗಿ ಪ್ರತಿಬಿಂಬಗಳಂತೆ ರೂಪ
ಎಂಬತ್ತುನಾಲ್ಕು ಲಕ್ಷಯೋನಿ ಜೀವರಾಶಿಗಳಿಗೆ
ಬಿಂಬನಾಗಿ ಶ್ರೀಹರಿ ಇಂಬಾಗಿ ತದಾಕಾರ
ಬಿಂಬನಾಗಿ ಒಳಗೆ ಇದ್ದು ಅವರು ಏನು
ಹಂಬಲಿಪರಾನಂದ ಸಂಭ್ರಮ ಒದಗಿಪ್ಪ
ಗಂಭೀರಗುಣ ಭಕ್ತರ ಹೊರೆವ ಕು-
ಟುಂಬಿ ಎನಿಪಾನಂದಾಂಬುಧಿಯು
ಡಂಭಜೀವರಿಗತಿ ಸಂಭ್ರಮವು
ಉಂಬೋ ಅಪಾರ ಸುಖಜ್ಞಾನ ಮುಕ್ತರಿಗುಂಟು
ಬಿಂಬನಾದ ಶ್ರೀಹರಿ ತಿಳಿಸಿಕೊಡುವ
ಕಾಂಬೋದು ಮಾತ್ರ ಭೋಗವೆಂಬನು ಭಾವರಲ್ಲ
ತುಂಬಿದಾನಂದಪೂರ್ಣರಿವರು ನೋಡು
ಹೊಂಬಣ್ಣ ವಸ್ತ್ರ ಕಂಬಳಿ ಕಟ್ಟಿದ ಕ್ಷಣ
ಕಂಬಳಿಯ ಬಣ್ಣವು ಹೊಂಬಣ್ಣ ಸೇರುವುದೆ
ಕುಂಭಿಣಿಯಲ್ಲಿ ವ್ಯಕ್ತಿ ಸುಖದುಃಖ ಅ-
ನುಭವವೆಂಬ ಜ್ಞಾನವುಂಟು ಭೋಗವು ಇಲ್ಲ
ಬಿಂಬಹರಿಗಿಲ್ಲ ಎಂಬೊದೇನಾಶ್ಚರ್ಯ
ಸಂಭ್ರಮಪದಮೂರ್ತಿ ಗೋಪಾಲವಿಠಲ
ಅಂಬುಜನಾಭನ ಪಾದಕ್ಕೆ ನಮೋ ನಮೋ ೭

ಜತೆ

ಚಿತ್ರವಿಚಿತ್ರ ಮುಕ್ತರ ಕ್ರೀಡಿಪನು ಬಲು ಕ್ರೀಡ್ಯಾವನು ಎಲ್ಲ
ಮುಕ್ತಿದಾಯಕ ಗೋಪಾಲವಿಠಲ ಬಲ್ಲ

೧೪೧

ವಿಷಯ ಸಂಗದಲಿಂದ ಕುಶಲವನು ಬಯಸಿದರೆ
ಹಸನಾಗಿ ತೋರುವುದೆ ನಿನಗೆ ಪ.

ಅಸಮಜ್ಞಾನಿಗಳ ಧೀಯು ಮಸಳಿ ಮರುಳಾಗುವುದು
ಮಶಕ ನಿನಗಾವ ನೆಲೆಯೊ ಮನುಜ ಅ.ಪ.

ಭರತರಾಯನ ನೋಡು ಹರಿಣ ಕುಣಪನು ಪೋಗೆ
ಬರಲೊರಲಿ ಪ್ರಾಣ ಬಿಡನೆ
ಮರಳಿ ಎರಳೆಯ ಜನ್ಮವನುಭವಿಸಿ ಸಂಗವನು
ತರವಲ್ಲವೆಂದು ಮೊರೆಯಿಡನೆ ಮನುಜ ೧

ಮೌನಿ ವಿಶ್ವಾಮಿತ್ರ ತಾನು ಊರ್ವಶಿ ಕೂಡಿ
ಶ್ವಾನನಾಗುತ ಪೋದನೊ
ಏನೆಂಬೆ ದೇಹದಲಿ ಹೀನತ್ವವೈದಿ ನಿ-
ತ್ರಾಣನಾದನು ನೋಡೆಲೊ ಮನುಜ ೨

ವಿಪುಳಮತಿಯಾದ ಸೌಭರಿಯು ದೃಢ ಮನಸಿನಲಿ
ತಪವ ಮಾಡುತ ಕುಳ್ಳಿರೆ
ಶಫರ ಶಫರಿಗಳ ಸಂಯೋಗವನು ಕಂಡು ಮನ
ಚಪಲವಾಯಿತು ನೋಡೆಲೊ ಮನುಜ ೩

ಲೇಸಾದ ಕುಲದಲ್ಲಿ ಸಂಜನಿಸಿದಜಮಿಳನು
ದಾಸಿ ಸಂಗವ ಮಾಡಿದ

ದಾಶರಾಯನ ಮಗಳ ಪರಮ ಋಷಿಯಾದ ಪ-
ರಾಶರನು ಕಂಡು ಮನಗೆಟ್ಟ ಮನುಜ ೪

ಅಂದಣವನೇರಿದ ನಹುಷರಾಯನ ನೋಡು
ಇಂದ್ರರಾಣಿಯನು ಬಯಸಿ
ಮಂದ ಅಜಗರನಾಗಿ ಬಂದ ಭೂಮಿಯಲಿ ಅದ-
ರಿಂದ ಗೆಲಲೊಶವಲ್ಲವೊ ಮನುಜ ೫

ವಿಷಯದಲಿ ಮನ ಸನ್ನಿಕರ್ಷವಾದರೆ ನಿನ್ನ
ವಶಕೆ ಬರಲರಿಯದಯ್ಯ
ಎಸೆವ ಶ್ರುತಿ ಸ್ಮೃತಿಯೆಂಬ ನಿಶಾಣದಲಿ ಮಸೆಮಸೆದು
ವಶಮಾಡಿಕೊ ಬಿಡದಲೆ ಮನುಜ ೬

ವಿವಿಧ ಸಾಂಸಾರಿಕ ದುಃಖ ದರುಶನವಾಗೆ
ಶ್ರವಣೀಯ ಶಾಸ್ತ್ರಂಗಳ
ಹವಣರಿತು ಜ್ಞಾನದ್ರವಿಣರಲಿ ಕೇಳಿಕೊ
ಬವಣೆ ದೂರಾಗುವುದೊ ಮನುಜ ೭

ಈಷಣತ್ರಯ ನಿನಗೆ ಮೋಸಗೊಳಿಸಿ ಕಡೆಗೆ
ನಾಶವಾಗುವುದು ಕಾಣೊ
ವಾಸುದೇವನ ಪರಮ ದಾಸರ ಕರುಣವನು
ಲೇಸಾಗಿ ಪೊಂದಿ ಸುಖಿಸೊ ಮನುಜ ೮

ಕ್ರಿಮಿ ಭಸ್ಮ ಮಲವಾಗಿ ಪೋಪದೇಹಕೆ ಬಹಳ
ಮಮತೆಯನು ಕೊಡಲಿಬೇಡ
ಕಮಲನಾಭನ ಪಾದಕಮಲವನು ಭಜಿಸಿ ಭವ
ಶಮಲಗಳ ಕಳೆಕಂಡೆಯಾ ಮನುಜ ೯

ಇಂತು ಮಹಾಂತ ದೃಷ್ಟಾಂತ ತೋರಿದೆ ನಿನಗೆ
ಭ್ರಾಂತಿ ಜ್ಞಾನವ ಕಳೆಯಲು

ಶಾಂತನಾಗಿರು ವಿಷಯಕಾಂತಾರದೊಳು ಬಿದ್ದು
ಭ್ರಾಂತನಾಗಲಿ ಬೇಡವೊ ಮನುಜ ೧೦

ದ್ರವ್ಯಕಾರಕ ಕ್ರಿಯಭ್ರಮವೆಂಬ ಭ್ರಮಣದಲಿ
ದುರ್ವಿಷಯದಲಿ ಚರಿಸದೆ
ಶರ್ವಪಿತಪ್ರಿಯ ಶ್ರೀಗೋಪಾಲವಿಠಲನ
ಗುರ್ವಧಿಷ್ಠಾನದಲಿ ಭಜಿಸೊ ಪ್ರಾಣಿ ೧೧

೧೪೨

ಸುಳಾದಿ

ಧ್ರುವತಾಳ

ವೈರಾಗ್ಯ ಮಾರ್ಗ ಕೇಳು ದಾರಿದ್ರ್ಯ ಮಾರ್ಗ ಕೀಳು
ಶ್ರೀರಮಣನ್ನ ಪಾದ ಆರಾಧಿಸುವುದಕ್ಕೆ
ನಾರಿಯ ಧಾರುಣಿಯ ಧನವ ಬಿಟ್ಟರಾಯಿತೆ
ವೈರಾಗ್ಯವಲ್ಲ ಕಂಡ್ಯ ಧೀರರಿಗೆ
ಶರೀರಕ್ಕಾಪಾದ ಭಸ್ಮ ಧರಿಸಿಕೊಂಡು
ಚೀರವಸ್ತ್ರವನುಟ್ಟು ತಿರುಗಾಡುತ್ತಿರಲಾಗ
ಆರಾದರು ಅವನ ಅವಧೂತನೆಂತೆಂದು
ಸಾರಿಸಾರಿಗೆ ಇನ್ನು ಕರೆವರಯ್ಯ
ವೈರಾಗ್ಯವೆಂಬುವಂಥ ವಾರುತಿ ಒಂದಲ್ಲದೆ
ನಾರಾಯಣಗೆ ಇದು ಪ್ರಿಯವಲ್ಲ
ನಾರಿ ಸುತರುಗಳು ಶರೀರ ಸಂಬಂಧಿ-
ಗರು ಎಂತೆಂದರಿದಿರಬೇಕು
ನೀರೊಳಗೆ ಇನ್ನು ಕಮಲವು ಇದ್ದಂತೆ
ಕಾರಣನಾಗಿ ಕಾರ್ಯವಿಲ್ಲದಲಿರಬೇಕು
ಮಾರಜನಕ ನಮ್ಮ ಗೋಪಾಲವಿಠಲನು
ತೋರಿಕೊಟ್ಟ ವೈರಾಗ್ಯವನ್ನು ತೋರುವೆ ೧

ಮಠ್ಯತಾಳ

ಸ್ವಯೋಗ್ಯತೆಯೊಳಗೆ ಆಯತವಾದದ್ದು
ನೋಯದೆ ಉಣುವುದೆ ನ್ಯಾಯದ ವೈರಾಗ್ಯ
ಸ್ನೇಹದಿ ಹರಿಕೊಟ್ಟ ಕರ್ತೃತ್ವವು ಎನಗೆ
ನೀ ಇಲ್ಲದೆ ಎನ್ನಿಂದಾಗದೆಂತಿಪ್ಪುದೆ ನ್ಯಾಯದ ವೈರಾಗ್ಯ
ಆಯಾಸಬಡದೆ ಪರರ ಶ್ರೇಯಸು ನೋಡಿ
ಶ್ರೀಯರಸನಿತ್ತನೆಂಬುದೆ ವೈರಾಗ್ಯ
ಮಾಯಾರಹಿತ ದೇವ ಗೋಪಾಲವಿಠಲನ್ನ
ಪ್ರಿಯದಿ ನೆಚ್ಚಿ ಅನ್ಯಕ್ಕೆರಗದಿಪ್ಪುದೆ ವೈರಾಗ್ಯ ೨

ತ್ರಿಪುಟತಾಳ

ಧನಪರಿತ್ಯಾಗವನು ಮಾಡಿದಡಾಯಿತೆ
ಘನವಾದ ವೈರಾಗ್ಯವಲ್ಲ ನೋಡಿ
ಧನವಬಿಟ್ಟಿರವೆ ದನಗಳು ಅನುದಿನ
ಘನವೇನೊ ಇವಗೆ ಅವಕ್ಕೆ ನೋಡೊ
ಜನ ಮನೆಯ ಬಿಟ್ಟೇಕಾಂತದಲಿ ಕುಳಿತರಾಯಿತೆ
ಘನವಾದ ವೈರಾಗ್ಯವಲ್ಲ ನೋಡಿ
ಜನರ ಮನೆಯ ಬಿಟ್ಟಿರದೆ ಅನುಗಾಲ ಗೂಗೆಯು
ಘನವೆಂದು ಕರೆವರೆ ಜ್ಞಾನಿಗಳು
ತನುಮನದಭಿಮಾನವನು ಬಿಟ್ಟರಾಯಿತೆ
ಘನವಾದ ವೈರಾಗ್ಯವಲ್ಲ ನೋಡಿ
ತನುಮನದಭಿಮಾನವನು ಬಿಟ್ಟು
ಕುನ್ನಿ ತಾ ಮನೆಮನೆ ತಿರುಗದೆ ಅನುಗಾಲವು
ಘನಮಹಿಮ ಚೆಲ್ವ ಗೋಪಾಲವಿಠಲನ್ನ
ನೆನೆದು ಏಕಾಂತದಲಿ ನಿರ್ಮಲ ಮನನಾಗೊ ೩

ಅಟ್ಟತಾಳ

ರಾಗ ಭೋಗಂಗಳು ಆಗದೆ ಇರಲ್ಯಾಕೆ

ಯಾಗಂಗಳನು ಮಾಡಿ ಹರಿಗರ್ಪಿಸಿ ಸಮ-
ಭಾಗವೆರಡು ಹರಿಯಿಂದಾದುದು ಎಂದು
ಭೋಗಿಸುತಿಪ್ಪುದೆ ವೈರಾಗ್ಯ ವೈರಾಗ್ಯ
ಕಾಗೆಯಂತೆ ಮೈಯ ಕರ್ರಗೆ ಮಾಡಿನ್ನು
ರೋಗ ಬಂದೆಮ್ಮೆಯಂತೆ ನಾಮ ಬರಕೊಂಡು
ಭೋಗದ ವಸ್ತು ಪರಿತ್ಯಾಗವ ಮಾಡಿನ್ನು
ಆಗುವ ಕಾರ್ಯಗಳಾಗುತ್ತಲಿರೆ ಅಂತೆ
ಹೇಗೆ ಜನರು ಕಾಂಬ ಹಾಗೆವೆ ಬಾಹಿರ ವೈ-
ರಾಗ್ಯವನ್ನು ಮಾಡೆ ವೈರಾಗ್ಯವಲ್ಲವೊ
ನಾಗಶಯನ ನಮ್ಮ ಗೋಪಾಲವಿಠಲ ಸಮ್ಮ-
ತಾಗಿ ಉಣಿಸಿದ್ದುಂಡು ಇಪ್ಪುದೆ ವೈರಾಗ್ಯ ೪

ಆದಿತಾಳ

ಧನವ ಕಟ್ಟಿದ ಚೀಲ ಧಾನ್ಯ ತುಂಬಿದ ಗೋಣಿ
ಪುಣುಗು ಬೆಕ್ಕಿನಂತೆ ಪುಣ್ಯಾತ್ಮರಘದಂತೆ
ಒಣಗಿದ ಗೋಡೆಗೆ ಹರಳು ಮೀಟಿದಂತೆ
ಉಣುವ ಜಿಹ್ವೆಗೆ ಕೈ ಅನುಕೂಲವಾದಂತೆ
ಮನಸಿಗೆ ಹರುಷವು ಮಾಧವ ಮಾಡಿಸಿದ್ದು
ತನುವಿಗೆ ಸುಖವೆಂದು ತಿಳಿದು ಕೆಡದಲೇವೆ
ಗುಣಿಸುತ ಅಲ್ಲಲ್ಲಿ ಗುಣಗಳ ತಿಳಿದು ಹರಿಯ
ನೆನೆದು ನೆನೆದು ದಿನಗಳೆವುದೆ ವೈರಾಗ್ಯ
ಮುನಿನುತ ಸಿರಿ ಗೋಪಾಲವಿಠಲನು
ಇನಿತೀಪರಿಯಿಂದ ಒಳಗಿದ್ದು ಪೊರೆವನು ೫

ಜತೆ

ಅರಿಯದ ವೈರಾಗ್ಯ ಹರಹಿಕೊಂಬುದಕಿಂತ
ಅರಿತು ಮೊರೆಹೋಗಿರೊ ಗೋಪಾಲವಿಠಲನ್ನ

೧೪೩

ಸುಳಾದಿ

ಧ್ರುವತಾಳ

ಸಾಕಾರ ಹರಿಗೆ ನಿರಾಕಾರನೆಂಬಿ ನೀನು
ಯಾಕೊ ಕುವಾದಿ ಗರುವಿಕೆತನವು ಏನೊ
ಏಕವಾಗಿ ಸುರರು ಅಸುರರು ಕೊಂಡಾಡಿ ಕೂಡಿಕೊಂಡು ಇನ್ನು
ಆ ಕಲಶದಮೃತ ನೀ ಕುಡಿ ತಾ ಕುಡೆಂಬೊ
ಆ ಕಾಲದಲಿನ್ನು ಸ್ತ್ರೀಯಾಕಾರವಾಗೆ ಹರಿ
ಆಕಾರಕ್ಕಸುರರು ಮೋಹಕರಾಗಲಿಲ್ಲವೆ
ಸಾಕಲ್ಯ ಗುಣನಿಗೆ ನಾಲ್ಕೆರಡು ಗುಣವೆಂಬ
ಯಾಕೆ ನಿನ್ನದು ಇಂಥ ಪೋಕತನವು ಬಿಡೆ
ಲೋಕದೋಲಿದ್ದಂಥ ನಾನಾ ಕುಪದಾರ್ಥದಿ
ಆಕಾರ ಹರಿಗುಣ ನೀ ಕೇಳೊ ಮೂರ್ಖಜೀವ
ಸಾಕಲ್ಯ ನಿರ್ದೋಷಗೆ ನೀ ಕಲ್ಪಿಸಿ ವಿದೋಷ
ನೀ ಕಲಿ ರಾವಣನ್ನ ಕೊಂದ ಈ ಕಲ್ಪಣದೋಷ ?
ತಾ ಕಳೆವೆನೆಂದು ರಾಮ ಬೇಕಾಗಿ ಲಿಂಗವನ್ನು
ಆಕಾರ ಮಾಡಿದನೆಂಬಿ ಈ ಕುಟಿಲತನಗಳ್ಯಾಕೊ ನಿನಗೆ ಇನ್ನು
ಬೇಕಾಗಿಲ್ಲೊ ನಿನಗೆ ಲೋಕಪಾಲಕನ ಕೂಡ ಈ ಕಠಿಣ ವ್ರತಗಳು
ಈ ಕಲಿಯುಗವಿಲ್ಲ ಅಪ್ರಾಕೃತದಲ್ಲಿ
ತಾ ಕಳದ್ದೆಲ್ಲರಲ್ಲಿ ಏಕಮೇವನಾಗಿಪ್ಪ
ಸಾಕಲ್ಯ ಸುಖನಿಗೆ ತಾ ಕಳಕೊಂಡು ಸೀತೆ
ಆಕಾರ ಕಾಣೆನೆಂದು ಶೋಕಿಸಿದನೆಂತೆಂಬೊ
ಈ ಕಪಟತನವು ಸಾಕುಮಾಡಲಾರೆಯ
ಸೋಕಿದ ಮಾತ್ರ ಶಿಲೆ ಆಕಾರಾದಳು ಅಹಲ್ಯಾ
ಪ್ರಾಕೃತನೆಂಬಿ ನೀ ಅಪ್ರಾಕೃತ ಹರಿಯನ್ನ

ಜೋಕೆಲಿ ನೀನು ಬದುಕಲಾರೆಯ ಹೇಗೆ
ಆ ಖಳನು ಕಂದನ ತಾ ಕೊಲ್ಲುತಿರಲಾಗಿ
ಏ ಕಾಯೊ ಹರಿ ಎನ್ನೆ ತಾ ತಿಳಿದಾಕ್ಷಣದಿ
ಹೂಕರಿಸಿ ಕಂಬದಿಂದ ತಾ ಪ್ರಕಟಿಸಿತು ನಾದ
ನೀ ಕಾಣಲಿಲ್ಲ ಚಾರ್ವಾಕ ಅಯೋಗ್ಯ ಭ್ರಷ್ಟ
ಸಾಕಲ್ಯ ಬಲಾಢ್ಯನ್ನ ಆ ಕಂಸ ಕುಬುಜೆಯನ್ನು
ಗೋಕುಲ ಪೊಕ್ಕನೆಂಬಿ ಈ ಕಪಟತನವೇನೊ
ಆಕಾರವನು ಹರಿಯ ನೀಕರಿಸಲಾಗಿನ್ನು
ತಾರಕದಿ ಶಸ್ತ್ರಿಲ್ಲದೆ ಆ ಕಿರೀಟಿಗೆವೆ ತಾನೆ ಸಾಕಾರವಾಗಿ ಹರಿ
ಆಕಳು ಗಳಿಸಿದ ಪಾಕಶಾಸನನು ಗರು-
ವಿಕೆತನದಲಿ ಆಕಳ ಕಾಯುವನೆಂದ-
ನೇಕ ವೃಷ್ಟಿಗರೆಯೆ ತಾ ಕಾಣುತಲೆ ಬೆರಳ
ನಖದಿಂದಲಿ ಗಿರಿಯ ಆಕಾಶಕ್ಕೆ ಮೀಟಿದ್ದು
ಸಾಕಿದ ಬಾಲಕರ ಸಾಕಲ್ಯಜ್ಞಾನಭರಿತ ಗೋಪಾಲವಿಠಲ ಅನ-
ನ್ಯ ಕಾಲದೈವ ಕಾಣೊ ಶೋಕರಹಿತರಂಗ ೧

ಮಠ್ಯತಾಳ

ಹರಿ ಸರ್ವೋತ್ತಮ ಸಿರಿ ಆತನ ರಾಣಿ
ಪರಮೇಷ್ಠಿ ಮಗನು ಹರ ಮೊಮ್ಮಗ ಹರಿಗೆ
ಉರಗ ಮಂಚವು ಇನ್ನು ಗರುಡ ಏರೋರಥವು
ಪುರುಹೂತ ಸುರರೆಲ್ಲ ಪರಿವಾರವು ಹರಿಗೆ
ಮರಳಿ ಮೂರುದಿನ ದೊರೆಯದಿದ್ದರೆ ನೀರು
ನರಕನಾರುವ ಮನುಜ ಹರಿ ನೀನಾಗುವಿಯಾ
ಬರ ಬಂದರೆ ನೀನು ಬರಿದೆ ಮೂರಾರು ದಿನ
ದೊರೆಯದಿದ್ದರೆ ಅನ್ನ ಒರಲಿ ಸಾಯುವಂಥ
ಮರುಳು ಮಾನವ ನೀನು ಹರಿಗೆ ಸರಿಯೆಂತೊ
ಅರಿತು ನೀನು ಬದುಕೊ ನರಕವ ಬೀಳಬೇಡ
ಹರಿದ್ರೋಹಿಗಳ ಕಂಡು ಧರಿಸನು ಯಮ ತಾನು

ದುರಿತ ಸಂಹಾರಕ ಗೋಪಾಲವಿಠಲನ್ನ
ದೊರೆಯೆಂದು ತಿಳಿದು ಧರೆಯ ಮೇಲಿರು ಇನ್ನು ೨

ತ್ರಿಪುಟತಾಳ

ಮರುಳು ಮಾನವ ಕೇಳೊ ಸರಿಯಾದರೆ ನೀ ಇನ್ನು
ಹರಿ ಚರಿತೆ ನಿನ್ನಲ್ಲಿ ಇರತೋರೆಯ ನೀನೊಂದು
ಕರಿಯು ನಕ್ರಗೆ ಸಿಲುಕಿ ಮೊರೆ ಇಡಲಾಗಿನ್ನು
ಹರಿ ವೇಗನೆ ಪೋಗಿನ್ನು ಸೆರೆಯ ಬಿಡಿಸಿದನು
ಸಠ್ರನೆ ನೀನು ಒಂದು ನೆರಮನೆ ಝಗಡವ
ಹರಿದು ಬರಲು ಭಯ ಮರುಳು ಮನುಜನೆ ನೀ
ಹರಿ ಕಾಳಿಂಗನ ಏರಿ ಭರದಿಂದ ಕುಣಿದನು
ತಿರುಗಿ ನೀನು ಒಂದು ಉರಗನ್ನ ಪಿಡಿವೆಯಾ
ಹರಿ ಪೊಕ್ಕಳಿಂದಲಿ ಹಿರಣ್ಯಗರ್ಭನ ಪೆತ್ತ
ನರನೆ ನೀನು ಒಂದು ಇರುವೆಯ ಪೆತ್ತೆಯ
ಹರಿಯ ರಾಣಿಯು ಸಿರಿ ಧರೆ ಎಲ್ಲ ಪೊರೆವಳು
ತಿರುಗಿ ತಿರುಗಿ ನೀನು ಕುರುಡನಾಗಿ ಕುಳ್ಳಿರೆ
ಮರಳಿ ನಿನ್ನರಸಿನ್ನು ತಿರುಕೆ ಬೇಡುವಳಲ್ಲೊ
ಶರಧಿ ಮಥನದಲ್ಲಿ ಗರಳ ಹೊರಡಲಾಗಿ
ಹರಿಯ ಮಗನು ವಾಯು ಭರದಿಂದ ಮೆದ್ದನು ಕಾಣೊ
ಮರುಳೆ ನಿನ್ನ ಮಗನು ಸಠ್ರನೆ ವೃಶ್ಚಿಕಕ್ಕೆ
ಹೊರಳಿ ಹೊರಳಿ ದಿಂಡುರುಳಿ ಅಳುವನಲ್ಲೊ
ಹರಿಯ ಮಂಚವು ಇನ್ನು ಧರೆಯೆಲ್ಲ ಹೊತ್ತಿತು
ಮರುಳೆ ನೀನೊಂದು ಸತ್ತ ಕರುವಿನ ಹೊತ್ತೀಯ
ಉರಿಗೆ ಅಂಜುವ ಮನುಜ ಹರಿ ನೀನಾಗಲಿ ಬಲ್ಲ್ಯ
ಮರುಳೆ ಕಣ್ಣಿಗೆ ನಿದ್ರೆ ಬರುವುದು ಅರಿ ನೀನು
ಹರಿ ನಾನೆಂಬಂಥಪರಿ ಆವುದು ತೋರೊ
ತರವಲ್ಲ ನಿನಗಿದು ಕುರಿ ಹಿಂಗಾದೆ
ಪರಮದಯಾಳು ಗೋಪಾಲವಿಠಲರೇಯ
ಸ್ವರಮಣ ಶ್ರುತಿಪಾದ್ಯ ಜರಾಮರಣರಹಿತ ೩

ಅಟ್ಟತಾಳ

ಹರಿದ್ರೋಹಿಗಳು ಜರಾಸಂಧ ಹಿರಣ್ಯಾಕ್ಷ
ದುರ್ಯೋಧನರೆಲ್ಲ ತೆರನೇನಾದರು ನೋಡು
ಹರಿಯ ಕೂಡ ಕರಿಯು ಮರಳಿ ವಕ್ಕರಿಸಲು
ಇರುವುದೊಂದು ಇನ್ನು ಧರೆಯ ಮೇಲೆ ತಾನೀಗ
ಬರಿದೆ ನೀನು ವ್ಯರ್ಥ ನಿರಯವ ಹೊಗಬೇಡ
ಹರಿಯನ್ನೆ ಭಜಿಸಿದವರ ಭಾಗ್ಯವ ನೋಡು
ಹರಿ ಸರ್ವೋತ್ತಮನೆಂದ ತರಳ ಪ್ರಹ್ಲಾದಂಗೆ
ಸರ್ರನೆ ಹಿಗ್ಗುತ ತವರು ಮನೆಯಾಗಿ ಪೊರೆದ
ಹರಿಭಕ್ತರಾದಂಥ ಕರಿರಾಜ ಧ್ರುವರಾಯ
ವರ ವಿಭೀಷಣ ಭೃಗು ಸುರಮುನಿ ನಾರದ
ಪರಿ ಪರಿಯಲ್ಲಿ ಇನ್ನು ಹರಿಯನ್ನೆ ಕೊಂಡಾಡಿ
ಸಿರಿ ಸಂಪತ್ತುಗಳುಳ್ಳ ದೊರೆ ಆದರು ನೋಡೊ
ಹರಿಗೆ ಭೃತ್ಯನೆಂದು ಸ್ಮರಿಸಿದ ಮನುಜಂಗೆ
ಪರಗತಿ ಸಾಧನ ದೊರಕೊಂಬುವುದು ಕಾಣೊ
ಹರಿಯು ನಾನು ಎಲ್ಲ ಸರಿಯೆಂದವರಿಗಿನ್ನು
ನರಕ ತಪ್ಪದು ಎಂದು ಶ್ರುತಿ ಸಾರುತಲಿದೆ
ಕರುಣಾಕರ ರಂಗ ಗೋಪಾಲವಿಠಲನ್ನ
ಸ್ಮರಣೆ ಮಾತ್ರಲಿಂದ ದುರಿತ ದೂರಹುದೊ ೪

ಆದಿತಾಳ

ಬಹಳ ಪರಿ ತಿಳಿ ಹೇಳಿದರನ್ನ ನಿನ್ನ
ಖೂಳ ಮತವ ಬಿಡೆ ಬಾಳಲಾರೆಯೊ ನೀನು
ತಾಳರು ನಿನ್ನ ಯಮನಾಳು ಕಂಡರೆ ಇನ್ನು
ಸೀಳೋರು ಜಿಹ್ವೆಯ ಕೀಳೋರು ಕಣ್ಣನು
ಹೋಳು ಮಾಡೋರು ತಲೆ ಆಳಾಗದಂತೆ ನಿನ್ನ
ಹೂಳೋರು ಕ್ರಿಮಿಕೊಂಡದೊಳು ನಿನ್ನೊಯಿದು

ಕೇಳದೆ ಎನ್ನ ಮಾತು ಏಳಿಲ ಮಾಡಿದರೆ
ಹಾಳಾಗಿ ಹೋಗು ನಿನ್ನ ಕಾಲ ಮುಂದಾಗಿ ಬೇಗ
ಸೊಳೆ ಶೃಂಗಾರ ದೇಹ ವೇಳೆ ಮೀರಿದ ಮೇಲೆ
ಕಾಲ ಅರಗಳಿಗೆ ಇಳೆಯೊಳಿರದಿನ್ನು
ಗಾಳಿಯಂತಲಿ ತಿಂದು ಆಳೋ ದೊರೆಗೆ ಸಮ-
ನಾಳು ಎಂಬೊದು ಹೀಯಾಳಿತನವು ಏನೊ
ಗೋಳು ತಪ್ಪದು ನರಕ ಬೀಳೋದು ನೀ ಸತ್ಯ
ಗಾಳಿ ದೇಹವ ನೆಚ್ಚಿ ಖೂಳ ಕೆಡಲಿಬೇಡ
ಕಾಳಿಮರ್ದನ ರಂಗ ಗೋಪಾಲವಿಠಲಂಗೆ
ಊಳಿಗನಾಗಿನ್ನು ಬಾಳೆಲೊ ಮನುಜ ೫

ಜತೆ

ಹರಿ ಸರ್ವೋತ್ತಮ ಮರೆತರೆ ಗುರುವೆನ್ನು
ಸ್ವರೂಪ ಸುಖವ ಕೊಡುವ ಗೋಪಾಲವಿಠಲ

೧೪೪

ಸಾಕು ಸಾಕು ಭವಸಂಗ ಚಿತ್ತ-
ವೈಕಲ್ಯ ಕಾರಣವದು ಮಾನಭಂಗ ಪ.

ಪ್ರಾಕೃತರೊಡನೆ ಸಂಬಂಧ ಸುವಿ-
ವೇಕಕ್ಕೆ ಹಾನಿತೋರುವ ಪ್ರತಿಬಂಧ
ಶೋಕ ಮೋಹಗಳದರಿಂದ ಮುಂದೆ ಏ-
ಕಾಕಿಯಾಗಿ ಸಂಚರಿಪೊದೆ ಚೆಂದ ೧

ಬಿಟ್ಟದ್ದು ಬಯಸೋದು ಸಲ್ಲ ತಾ
ಕೊಟ್ಟಾಭಯಕೆ ಕುಂದು ಬರಬಾರದಲ್ಲ
ಸುಟ್ಟು ಪಾಪಂಗಳನೆಲ್ಲ ಬಲು
ದಿಟ್ಟನಾಗಲಿ ಬೇಡವೆ ಹೇಸಿ ಇದೆಲ್ಲ ೨

ಕ್ರೂರ ಕಾಮನದೊಂದು ಕಾಟ ಮ-
ತ್ತಾರಯ್ಯ ಇಹಪರಕೆಲ್ಲ ಕವಾಟ
ಘೋರ ಪಾಪಂಗಳ ಕೂಟ ಪರ
ನಾರಿಯರೊಡನಾಟ ನರಕದೊಳಾಟ ೩

ಚಲಿಸದೆ ಧ್ಯಾನವ ಮಾಡು ಮನ
ಒಲಿಸದೆ ಶ್ರವಣವನ್ನು ಮಾಡು
ಸುಲಭದ ಜಪದೊಳೋಲ್ಯಾಡು ಚಿತ್ತ
ಒಳಗಾಗದಿರಲು ಕೀರ್ತನೆಗಳ ಪಾಡು ೪

ಎಲು ಮಜ್ಜಮಾಂಸದ ಪಿಂಡ ಇದು
ತಿಳಿದು ನೋಡಿದರಲ್ಲಿ ಹುರುಳಿಲ್ಲ ಕಂಡ್ಯಾ
ಮಲಮೂತ್ರ ಪೂರಿತ ಭಾಂಡ ಇದ-
ರೊಳಗಭಿಮಾನವುಳ್ಳಾತನೆ ಭಂಡ ೫

ಭಿನ್ನ ಬುದ್ಧಿಯ ನೆರೆ ಮಾಣು ಇನ್ನು
ನಿನ್ನಂತೆ ಸಕಲ ಭೂತಂಗಳ ಕಾಣು
ಸನ್ನುತನಾದಡೆ ಜಾಣು ಇದು
ಚೆನ್ನಾಗಿ ಕಾಣಲೀಸದು ಕರ್ಮರೇಣು ೬

ಕಪಟ ಕಲ್ಮಷವನೀಡಾಡು ಬಲು
ಗುಪಿತದಿ ಹರಿ ಭಕುತಿಯ ನೀ ಮಾಡು
ಚಪಲವೃತ್ತಿಯೆ ನಗೇಡು ಬಲು
ನಿಪುಣರ ನಡೆವಳಿಯನೆ ನೀ ನೋಡು ೭

ವ್ಯಾಪಾರಂಗಳ ತ್ಯಜಿಸು ಬಪ್ಪ
ಕೋಪ ತಾಪಂಗಳ ಮಿಗೆ ಕಡೆಗಣಿಸು
ಪಾಪಕರ್ಮವ ಪರಿಹರಿಸು ಚೆಲ್ವ
ಗೋಪಾಲವಿಠಲಮೂರ್ತಿಯ ಸಾರಿ ಸುಖಿಸು ೮

೧೪೫

ಸುಳಾದಿ

ಧ್ರುವತಾಳ

ಹರಿ ಮಾಡಿದಂತೆ ಎಲ್ಲ ಮಾಡುವೆನಯ್ಯ ನಾನು
ಹರಿ ನೋಡಿಸಿದುದೆಲ್ಲ ನೋಡುವೆನಯ್ಯ ನಾನು
ಹರಿ ಕೇಳಿಸಿದರಿನ್ನು ಕೇಳುವೆನಯ್ಯ ನಾನು
ಹರಿ ಉಂಡರಾಯಿತಿನ್ನು ಉಣುವೆನಯ್ಯ ನಾನು
ಹರಿ ನುಡಿಸಲಾಗಿನ್ನು ನುಡಿವೆನಯ್ಯ ನಾನು
ಹರಿ ಪಿಡಿದರೆ ನಾನು ಪಿಡಿವೆನಯ್ಯ ನಾನಾಕು ?
ಹರಿ ಕೊಡಿಸಿದಂತೆ ಆನು ಕೊಡುವೆ ಏನಾದದ್ದು
ಹರಿ ನಡೆಸಿದಡಾನು ನಡೆವೆ ನಾನಾ ಕಡೆಗೆ
ಹರಿ ನಿಂತಡಾಯಿತೆ ನಿಲ್ಲುವೆನಯ್ಯ ನಾನು
ಹರಿಯು ಮನಸ್ಸು ಮಾಡೆ ಮನಸ್ಸು ಮಾಡುವೆ ನಾನು
ಹರಿಯು ದ್ವೇಷವು ಮಾಡೆ ಆನು ದ್ವೇಷವು ಮಾಳ್ಪೆ
ಹರಿ ಮೋಹಿತನಾಗೆ ಆನು ಮೋಹಿಪೆನಯ್ಯ
ಹರಿ ಜಾಗ್ರತನಾಗೆ ಆನು ಜಾಗ್ರತನಾಹೆ
ಹರಿ ಮರೆದಡಾಯಿತೆ ಮರೆವುವೆನಯ್ಯ ನಾನು
ಹರಿ ನೆನೆಸಲ್ಕೆನಗೆ ನೆನಪು ಆಗುವುದು
ಹರಿ ಕಾಮನಮಾಡೆ ಆನು ಕಾಮನ ಮಾಳ್ಪೆ
ಹರಿ ಇಚ್ಛೆಗೊಂದಕನ ಪ್ರತಿಕೂಲನಲ್ಲ ನಾನು
ಹರಿ ಪೂರ್ಣಶಕ್ತ ಗುಣಶರಧಿ ಕಾಣಯ್ಯ ನಿರುತ
ಹರಿ ನಿರ್ದೋಷ ಜ್ಞಾನಾನಂದ ಪರಿಪೂರ್ಣದೇವ
ಹರಿ ಪೂರ್ಣಕಾಮ ಆನು ಅತ್ಯಂತ ಅಲ್ಪನೀರ
ಹರಿಯು ಹೋದಾಗೆ ಎಲ್ಲ ತೃಣವು ಹೋಗುವುದಯ್ಯ
ಹರಿಯೆ ಸ್ವತಂತ್ರ ಆನು ಅಸ್ವತಂತ್ರ
ಹರಿ ಸರ್ವವ್ಯಾಪ್ತ ಮೂರ್ತಿ ಗೋಪಾಲವಿಠಲ
ಹರಿಯೆ ಭಕುತರ ಮನದ ಸಿರಿಯೆ ಹೇ ಎನ್ನ ದೊರೆಯೆ ೧

ಮಠ್ಯತಾಳ

ಕರ್ತೃ ನಾನೆಂದರೆ ಹರಿಯ ಹೊರತಾಗಿನ್ನು
ವ್ಯರ್ಥ ನೋಡು ಏನು ಮಾಡಿದ ಕರ್ಮವು
ಮೃತ್ಯು ತನಗೆ ತಾನು ತಂದುಕೊಂಡವನಾಹ
ಅರ್ತಿ ಅವನಿಗೆ ನಾಶವಾಗದಿನ್ನು
ಕರ್ತೃ ನಾನಲ್ಲವೆನೆ ಸಾಧನಕೆ ಫಲವೇನು
ಪ್ರತ್ಯಕ್ಷಕೆ ಬಾಧೆ ಮಿಥ್ಯಾ ಜ್ಞಾನಿಯು ಆವ
ಕರ್ತೃತ್ವವೆಂಬೋದು ಜೀವನಿಷ್ಟವು ನೋಡು
ಶ್ರುತ್ಯರ್ಥಗಳಲ್ಲಿ ಸಿದ್ಧವಾಗಿದೆ ನೋಡು
ಮರ್ತು ಹರಿಯ ಮಹಿಮೆನರಿಯದೆ ಜೀವನು
ಸ್ಫೂರ್ತಿಯಿಲ್ಲದ ಅಪಕೀರ್ತಿವಂತನಾಹ
ಕರ್ತೃ ಕಾರ್ಯತಾ ವಿಷ್ಣು ಗೋಪಾಲವಿಠಲನ್ನ
ಅರ್ತವ ಧನ್ಯನೊ ಕರ್ತೃನೆಂಬುದರೊಳಗೆ ೨

ರೂಪಕತಾಳ

ಪೃಥಿವಿ ಮೇಲೆ ಒಂದು ರಥವೇರಿ ಬರಲಾಗಿ
ರಥ ಬರುತಿದೆ ನೋಡು ಎಂಬರು ಜನರೆಲ್ಲ
ರಥರಥಿಕರಿಬ್ಬರಿಗಾವಾಧಾರವು ಎಂಬ
ಮತಿ ಮನದಲ್ಲಿ ಉಳ್ಳವರಾಗಿದ್ದರು ಸರಿಯೆ
ಪೃಥಿವಿಯೆ ರಥ ಹೊತ್ತು ಬಾಹುದನ್ಯರ್‍ಯಾತಕ್ಕೆ
ಪ್ರತಿತ ತೋರಿದರ್ಥ ಯತಾರ್ಥವೆನಬೇಡಿ
ಮತಿ ಎರಡು ಪ್ರಕಾರ ಕರ್ತೃತ್ವದೊಳಗಾಗಿ
ಸ್ಥಿತಿ ಅರಿತು ನೋಳ್ಪರು ಜ್ಞಾನಿಗಳು
ಖತಿಗೊಳದಿರಿ ಇನ್ನು ಕರ್ತೃತ್ವವೆಂಬುದು
ಜಿತವಾಗಿ ಜೀವ ಜಡಗಳಿಗನಾದಿ ಸಿದ್ಧ
ಮತಿವುಳ್ಳ ಕರ್ತೃತ್ವ ಜಡದ ಸ್ಥಿತಿ
ಸತತ ಜಡಚೇತನಕೆ ಕರ್ತನೆನಿಸಿ ಹರಿಯು

ಗತಿ ಅರಿತು ಅವರವರ ಪಥದಲಿಡುವ
ಪತಿತಪಾವನ ರಂಗ ಗೋಪಾಲವಿಠಲ
ಚತುರ ಕ್ರೀಡೆಯ ಮಾಳ್ಪ ಸರ್ವರೊಳಗೆ ನಿಂತು ೩

ಝಂಪೆತಾಳ

ಆತ್ಮ ಪರಮಾತ್ಮನ ವಿವೇಕ ಜ್ಞಾನವು
ಸೋತ್ತಮರ ಕರುಣದಿಂದಾಗಬೇಕು
ಸೋತ್ತಮರ ಪ್ರಸಾದವೆಂಬುವುದು ಗತಿಗಿನ್ನು
ಮತ್ತೆ ತ್ರಿರಾವರ್ತಿ ಆಗಬೇಕು
ಉತ್ತಮ ಮಧ್ಯಮ ಅಧಮವಾಗಿ ಪ್ರಸಾದದಿಂ
ಉತ್ತಮವಾದ ಗತಿ ಹೊಂದಿಸುವುದು
ಆತ್ಮ ತನ್ನ ಸ್ವರೂಪ ಜ್ಞಾನನೀವನೊ
ಮತ್ತದೆ ಅಧಮ ಪ್ರಸಾದವೆನ್ನು
ಸತ್ವ ಕರ್ಮಗಳಲ್ಲಿ ಪ್ರವರ್ತನ ಮಾಳ್ಪ
ಮತ್ತೆ "ಏನಂ ಮೋಚಯಾಮಿ" ಎಂದು
ನಿತ್ಯ ಅನಿತ್ಯ ಜ್ಞಾನ ಆವಾಗ ಪುಟ್ಟುವುದು
ಮತ್ತೆ ಅವನೀಗ ಯಾತಕೆ ಸಲ್ಲ
ಸೋತ್ತಮ ಗುರುವುಪದೇಶವೆಂಬುವುದು ಅವನಿಗೆ
ಮತ್ತೆ ಅಶರೀರ ವಾಕ್ಯದಿ ಆಹುದು
ಪ್ರತ್ಯಕ್ಷ ಪೇಳರು ಅವನಿಗೆ ಇದು ನೋಡು ವಾಚಾ
ಪ್ರಸಾದವೆಂದು ಕರೆಸೋದು
ಸತ್ಯಸಂಕಲ್ಪ ಗೋಪಾಲವಿಠಲ ತನ್ನ ಭ-
ಕುತರ ಬಲ ಮಾಡದವರಿಗೊಲಿಯ ೪

ತ್ರಿಪುಟತಾಳ

ಒಂದು ಕರ್ಮವು ಮಾಡೆ ಅವರಿಗೆ ಅದರಲ್ಲಿ
ಇಂದಿರೆ ಅಜಭವ ಪರಿವಾರ ಸಹವಾಗಿ

ನಿಂದು ತನಗೆ ಕರ್ಮ ಮಾಡಿಸಿದರೆಂಬ
ಚೆಂದದ ಸ್ಮೃತಿಯನ್ನು ಬಂದು ಒದಗಿದರೆ
ಸಂದೇಹಸ್ಥನಾಗ ಸಂಸಾರಕೆ ದೂರ
ಬಂಧಮೋಚಕ ಅದೆ ಮಧ್ಯಮ ಪ್ರಸಾದ
ಸಂದರ್ಶನಪೂರ್ವ ಸ್ವಚ್ಛಾದಕಿಂತಲಿ
ಹಿಂದಾಗುವುವು ಸಂಚಿತಾಗಾಮಿ ಕರ್ಮವು
ಮಂದಮತಿಯು ನಾಶ ಮೊದಲಿಗಿಂತ
ಹಿಂದಾಗ ಈ ಮೇಲೆ ಹರಿಯ ದರುಶನದಲ್ಲಾ-
ನಂದಭರಿತನಾಗಿ ಸಂಚರಿಸುವ
ಮುಂದೆ ಮುಂದತಿಶಯ ಸಮಾಧಿ ಸಾಧನ
ಪೊಂದಿ ಕೂಡ್ರುವನಾಹ ಜಡನಂದದಿ
ನಿಂದಿರದೆ ಬಾಹಿರ ಸ್ಮೃತಿಭೇರಿ ತಾಡಣವಾಗೆ
ಒಂದೆ ಅವನ ವ್ಯಾಪಾರ ವೃತ್ತಿನಾಶ
ಸಂದೇಹವಿಲ್ಲದಕೆ ಸದ್ಗುರು ಪ್ರಸಾದ
ಚೆಂದವಗಾಯಿತೆಂದು ಅರಿವುದು
ವೃಂದಾರಕೇಂದ್ರ ಶ್ರೀಗೋಪಾಲವಿಠಲ
ಒಂದು ಮಾತ್ರವು ಇಟ್ಟು ಸಕಲ ಸುಖಕೊಡುವ ೫

ಅಟ್ಟತಾಳ

ಉತ್ತಮ ಪ್ರಸಾದ ಮತ್ತೆ ಲಕ್ಷಣ ಕೇಳು
ಪ್ರತ್ಯಕ್ಷವು ನೋಡು ಆವಾವ ವಿಷಯದಿ
ತತ್ವ ಸಂದೇಹವಿಲ್ಲ ಪ್ರಾರಬ್ಧಕರ್ಮವು
ಅತ್ಯಲ್ಪವಾಗಿನ್ನು ಕಡೆಗೆ ಆಗುವುದು
ಹತ್ತಿದ ಲಿಂಗವು ಅಕಾರ್ಯ ಕಾರ್ಯವು
ಎತ್ತ ನೋಡಿದರು ಹರಿಯ ರೂಪಗಳೆಂಬ
ಚಿತ್ತ ವ್ಯಾಕುಲನಾಗ ಅಖಂಡ ಧ್ಯಾನದಿ
ಸತ್ಯಲೋಕದಿ ವಾಸವಾಗಿ ಅನಂತರ
ಮುಕ್ತನಾಗುವ ತಾನು ಹಿಂದೆ ನಾನಾ ಜನ್ಮ

ಸುತ್ತಿಬಂದುದನೆಲ್ಲ ನೆನೆದು ತನ್ನ ಮನೋ-
ವೃತ್ತಿ ನಾನಾಪರಿ ವ್ಯಭಿಚರಿಸಿದುದೆಲ್ಲ
ಉತ್ತಮರ ಕೂಡ ಸುಖ ಪೇಳಿಕೊಳ್ಳುತ
ಉತ್ಕಟವಾಗಿ ತಮಗಿಂದವರಿಗೆ
ಮತ್ತೆ ತರ್ಮೊಡನೆ ಭಕ್ತಿಯ ವೆಗ್ಗಳವ ಮಾ-
ಡುತ್ತ ಆನಂದಭರಿತನಾಗುವನಾವ
ಸತ್ಯ ಸಂಕಲ್ಪ ಗೋಪಾಲವಿಠಲನ್ನ
ಭಕ್ತರಲ್ಲಿ ಭಕ್ತಿ ಮುಕ್ತಿ ಸಾಧನವೆ ೬

ಆದಿತಾಳ

ಹರಿ ಪರನೆನ್ನು ಹರಿವಾರ್ತೆಯ ಕೇಳು ಹರಿ ಮಾತುಗಳಾಡು
ಹರಿ ಮೂರ್ತಿಯ ನೋಡು ಹರಿ ಪೂಜೆಯ ಮಾಡು
ಹರಿಗಡ್ಡವ ಬೀಳು ಹರಿಪರನಾಗು
ಹರಿಭಕ್ತರ ಕೂಡು ಹರಿಯನ್ನೆ ಬೇಡು
ಹರಿಯ ಹೊರತಿನ್ನು ಹರಿಗೆ ಬೀಳದಿರು
ಹರಿಮಯದಿನ್ನು ಹರಿಗುಣವ ತಿಳಿ
ಹರಿಯ ಭಕುತರಿಂದ ಹರಿಯ ಮರೆದರಘಳಿಗೆ ಇರಸಲ್ಲ
ಹರಿಗರ್ಪಣ ಮಾಡು ಹರಿ ಮಾಡಿಸಿದ್ದೆಲ್ಲ
ಹರಿಯನ್ನು ತಿಳಿ ಗುರುಗಳಲಿನ್ನು
ಹರಿ ಧೇನಿಸಿ ಗುರುವಿನ ಗುರುತು ಮಾಡು
ಹರಿ ಸರ್ವಕರ್ತೃ ಗೋಪಾಲವಿಠಲನ್ನ
ಸ್ಮರಣೆಯು ಕ್ಲೇಶಹರ ಸುಖಕರ ೭

ಜತೆ

ನೋಡಿ ಮಾಡು ಕರ್ಮ ಫಲದಿ ವಿರಕ್ತನಾಗಿ
ಬೇಡು ಗೋಪಾಲವಿಠಲನಂಘ್ರಿಗಳ ಸೇವಾ

೧೪೬

ಉಗಾಭೋಗ

ಹರಿಯಬೇಕು ಹರಿಯನು ಐದುವುದಕ್ಕೆ
ಹರಿಯಬೇಕು ಬಹುಜನ್ಮದಘಗಳೆಲ್ಲ
ಹರಿಯಬೇಕು ಜ್ಞಾನಶ್ರುತಿಗೆ ಸಮ್ಮತವಾಗಿ
ಹರಿಯಬೇಕು ಮನ ಹರಿಯಲ್ಲೆ ಆವಾಗ
ಹರಿಯನ್ನೆ ನೆನೆದವರ ಸಂಸಾರದ ಮೂಲ
ಹರಿಯೆ ಬಲ್ಲನು ಕಾಣೊ ಹದವರಿತು ಇನ್ನು
ಹರಿಯನ್ನೆ ಕಾಣದೆ ಸಂಸಾರಾಂಬುಧಿ
ಹರಿಯೊಳಗೆ ಬಿದ್ದು ಹರಿದಾಡುತಿಪ್ಪರ
ಹರಿಯು ನೋಡವರಕಂಡು ಸಾಧನ ಮಾರ್ಗ
ಹರಿಯ ತೋರಿ ತನ್ನರಿವಂತೆ ಮಾಳ್ಪನು
ಹರಿಯವತಾರ ಗೋಪಾಲವಿಠಲನು
ಹರಿಯೆ ಹೇ ದೊರೆಯೆ ನಾನೆಂದು ಮೊರೆಯೆ

೧೪೭

ಸುಳಾದಿ

ಧ್ರುವತಾಳ

ಹರಿಯೆ ಸರ್ವೋತ್ತಮ ಹರಿಯೆ ಮೂಲದೈವ
ಹರಿ ಕ್ಷರಾಕ್ಷರದಿಂದ ವಿದೂರ ದೂರ
ಹರಿ ಜಗದ್ವ್ಯಾಪಕ ಸಕಲರಿಂದಲ್ಲಿ ಭಿನ್ನ
ಹರಿ ಮೂಲರೂಪ ಅವತಾರ ಅತ್ಯಂತ ಐಕ್ಯ
ಹರಿ ಚಿದಾನಂದ ಚಿನುಮಯ ಚಿದ್ರೂಪ
ಹರಿ ಸತ್ಯಸಂಕಲ್ಪ ಉತ್ಪತ್ತಿನಾಶ ದೂರ

ಹರಿ ನಿರ್ಜಿತ ಮಾಯಾ ಲೋಕಮೋಹಕದೇವ
ನಿರಾಶ್ರಯಾನಂದ ಗೋಪಾಲವಿಠಲ
ಸರಸಿಜಾಂಡದ ದೊರೆ ಸುರತರುವೆ ೧

ಮಠ್ಯತಾಳ

ಪಂಚಮುಖನ ಕುರಿತು ಕೃಷ್ಣ ತಪಸ್ಸು ಮಾಡಿ
ಪಂಚಬಾಣನ ಪೆತ್ತನೆಂಬಿರೆಲಲಾ ಹಾ
ವಂಚಕ ಶ್ರೀಹರಿ ಪ್ರಳಯದಿ ವಟದೆಲೆಯ
ಮಂಚದ ಮೇಲೊರಗಿ ತದನಂತರದಿ ವಿ_
ರಿಂಚಿಯನು ಪಡೆದ ವರವಾರದು ಪೇಳೊ
ಕೆಂಚೆ ಲಕುಮಿಯರಸ ಉಪನಯನವಿಲ್ಲದೆ
ಮುಂಚಿ ಮಕ್ಕಳ ಪಡೆದದು ಜಗವರಿಯದೆ ಮರುಳೆ
ಪಂಚ ಏಕದಶಕಸಹಸ್ರ ಸ್ತ್ರೀಯರ ಪತಿ
ಪಾಂಚಾಲಿಯ ವರದ ನಿತ್ಯ ಬ್ರಹ್ಮಾಚಾರ್ಯೆಂದು
ಪಂಚತ್ವವ ಐದಿದ ತರಳ ಪರೀಕ್ಷಿತಗೆ
ಪಂಚಪ್ರಾಣಗಳಿತ್ತ ಅಪ್ರಾಕೃತ ದ್ವಿ-
ಪಂಚೇಂದ್ರಿಗಳು ಶ್ರೀಹರಿಗೆ ಜನನ
ಪಂಚತ್ವವು ನಾಶ ಪ್ರಾರಬ್ಧ ಆಗಾಮಿ
ಸಂಚಿತಗಳ ದೂರ ಶುಕ್ಲಶೋಣಿತದ ಪ್ರ-
ಪಂಚ ಎಂದಿಗೆ ಇಲ್ಲ ನರಪಂಚಾನನ
ಮಿಂಚುತಲಿದೆ ಮಹಿಮೆ ಅನಂತ ವೇದಾವಳಿಗೆ
ವಂಚನೆಯನು ತೋರಿದ ಅಸುರ ಮೋಹನಾರ್ಥ
ಪಂಚಮುಖ ಹನುಮಂತನ ಪಿತ ಗೋಪಾಲವಿಠಲನ
ವಂಚನಿಲ್ಲದೆ ಸ್ಮರಿಸಲು ಸಂಚಿತಾಗಾಮಿ ತರಿವ ೨

ರೂಪಕತಾಳ

ಶ್ರೀಧವ ಹರಿಯ ಮತ್ಸ್ಯಾವತಾರಗಳು
ಮೇದಿನಿಯೊಳಗೆ ಪ್ರಾಕೃತವೆಂಬಿರಿ

ಶ್ರೀದೇವ ವದನದಿ ವಿಶ್ವ ತೋರಿಸಿದಾಗ
ಭೇದಿಸದೆ ಪ್ರಾಕೃತ ಶರೀರವಾದರೆ
ಭೇದಭೇದವ ತೋರಿದ ಅಸುರ ಮೋಹನಾರ್ಥ
ಭೇದ್ಯಭೇದ್ಯ ಆ ದೇಹ ಪ್ರಾಕೃತವಾದಡೆ ಅಜ್ಞಾನ
ಖೇದಕ್ಕೆ ಕಾರಣ ಪೂರ್ಣತ್ವಕ್ಕೆ ಹಾನಿ
ವೇದಾವಳಿಗಳು ಪೂರ್ಣನೆಂದು ಪೊಗಳಲಿವಕೊ
ಸಾಧುಜೀವರಿಗೆ ಈಪರಿ ಜ್ಞಾನ ಸಲ್ಲದು
ಮೋದತೀರ್ಥರ ಉಕ್ತಿವಿರೋಧ ಈಪರಿ ಜ್ಞಾನ
ಆದಿ ನವವಿಧ ದ್ವೇಷದೊಳು ಇದು ಒಂದನ್ನ
ಯಾದವ ಕೃಷ್ಣನು ತಪಸು ಮಾಡಿದ್ದು ಸತ್ಯ-
ವಾದರೆ ಪ್ರಾಕೃತ ಶರೀರ ಅದರಂತೆ
ವೇದಾಂತವೇದ್ಯ ಗೋಪಾಲವಿಠಲರೇಯ
ಭೇದನಲ್ಲವೊ ಮೂಲ ಅವತಾರಕ್ಕೆ ಐಕ್ಯ ೩

ಝಂಪೆತಾಳ

ಹಿರಣ್ಯಕಶ್ಯಪನ ಸಂಹಾರ ಮಾಡಿ ನರಸಿಂಹ ಇರು-
ತಿರಲು ಆಗ ಹರಿ ಶರಭರೂಪದಿ ಬಂದು
ನರಹರಿಯ ಕೂಡ ಯುದ್ಧವಮಾಡಿ ಜಯಿಸಿದ
ಹರನೆ ಸರ್ವೋತ್ತಮನೆಂದು ನುಡಿವೀ
ಶರಭಂಜೆಯ ಪೇಳುವುದು ಒಂದೇ ಪುರಾಣದಲ್ಲಿ
ದುರುಳ ತಾಮಸ ಜೀವರಿಗೋಸುಗ
ನರಸಿಂಹಜಯ ಪೇಳುವ ಪುರಾಣವು ಸಪ್ತ
ವರವೇದ ಶಾಸ್ತ್ರಸರ್ವತ್ರದಲ್ಲಿ
"ಹರಿಗಂ ಹರಂತಮನುಜಯಂತು ದೇವಾಃ"
ಅರಿಯೋ ಈ ವೇದಾರ್ಥ ಮರಳಿ ಮರಳಿ
ಹರಿಗೆ ಆ ಪರಿ ಸಮರ್ಥಿಯನುಳ್ಳರೆ ತನ್ನ
ಶರಣನ್ನ ಕೊಲ್ಲುತಿರೆ ನೋಡುತಿಹನೆ
ನರಹರಿ ಧ್ವನಿಗೆ ಸರಸಿಜಾಂಡವು ನಡುಗೆ
ಹರಿ ಮೌನ ಧರಿಸನೆ ಆ ಕಾಲದಲ್ಲಿ

ಕರಸಹಸ್ರವು ಅಷ್ಟ ಚರಣ ಆನನ ಪಂಚ
ಮೆರೆವದ್ವಯ ಪಕ್ಷ ಸಾವಿರ ಆಯುಧ
ಧರಿಸಿದ ಘೋರ ಶರಭನ್ನ ನರಹರಿಯು
ಪರಮ ಅನಾಯಾಸದಿ ಸಂಹಾರ ಮಾಡಿದ
ಧರೆಯಲ್ಲಿ ರುಧಿರವು ವ್ಯಾಪಿಸಲು
ದುರುಳಜನಮರ್ದನ ಗೋಪಾಲವಿಠಲರೇಯಗೆ
ಸರಿಯಿಲ್ಲ ಸರಿಯಿಲ್ಲ ಸರ್ವೋತ್ತಮ ೪

ತ್ರಿಪುಟತಾಳ

ರಾಮ ರಾವಣನ ಕೊಂದ ದೋಷವು ಬರಲಾಗ
ತಾ ಮಾಡಿದನು ಲಿಂಗಪೂಜೆ ತಸ್ಮಾತ್
ಉಮಾಕಾಂತನೆ ಸರ್ವೋತ್ತಮನೆಂದು ನುಡಿವೆ ನೀ
ಪ್ರೇಮದಿ ಇರಿಸಿದ ಶಿವನ ಆ ಸ್ಥಳದಲ್ಲಿ
ಭೀಮಸೇನನು ಪುರುಷಾಮೃಗ ತರಪೋಗುವಾಗ
ರೋಮಗಳು ಹನುಮಂತ ಕೊಡಲು ಒಯ್ದು
ಆ ಮೃಗವು ಅತಿ ತೀವ್ರದಿ ಬರಲಾಗಲು ಒಂದು
ರೋಮ ಬಿಸಾಟೆ ಕೋಟಿಲಿಂಗ ಕೋಟಿತೀರ್ಥ
ರೋಮ ರೋಮಕೆ ಕೋಟಿ ಲಿಂಗಗಳೆ ಮೂಡಿತು
ಶ್ರೀಮಾರುತಾತ್ಮಜನ ರೋಮಂಗಳು ಆ ಮ-
ಹಾಮಹಿಮ ಶ್ರೀರಾಮಚಂದ್ರನ ದೂತ
ರಾಮಗೆ ಲಿಂಗಪೂಜೆಯ ಮಾಳ್ಪ ಬಗೆಯೆಂತೊ
ಆ ಮಹಾಕಾಲದಲ್ಲಿ ಈ ಮೂಜಗಂಗಳೆಲ್ಲ
ಸಮಸ್ತ ಸುರಮುನಿ ಋಷಿ ಸನಕಾದಿಗಳು ಇಂದ್ರ
ಕಾಮ ಗರುಡ ರುದ್ರ ಫಣಿಪ ಆ ವಿರಿಂಚಿಯ
ತಾ ಮುದದಿ ತಿಂದು ಸರ್ಪವು ಲಯವು ಮಾಡಿ ಏ-
ಕಮೇವಾದ್ವಿತೀಯಸ್ವಾಮಿ ಮಲಗಿದ್ದಾಗ
ವ್ಯೋಮಕೇಶನು ಆವಕಡೆ ಇದ್ದನೊ
ತಾಮರಸ ಪೀಠ ಫಣಿಪ ರುದ್ರಾದ್ಯರು
ರಾಮಗೆ ಕಿಂಕರರು ಜಗತ್ತಿಗೆ ಗುರುಗಳು

ರಾಮಚಂದಿರ ಗೋಪಾಲವಿಠಲರೇಯ
ಕಾಮಾರಿ ವರದ ಕರುಣಾಸಾಗರ ೫

ಅಟ್ಟತಾಳ

ವ್ಯಾಸ ಹಯಗ್ರೀವ ಹರಿಪರರೆನ್ನುವ–
ರಾ ಶಿರ ಬಾಹು ಖಂಡಿಸಿದಲೆಂಬರಿ ವೇದ–
ವ್ಯಾಸ ಹಯಗ್ರೀವ ಇರುತಿರೆ ಅವರಂತೆ (ಲೆಂಕಾರಿ)
ವೇಷವ ಧರಿಸಿ ಖಳರು ಇಬ್ಬರು
ಮೋಸದಿ ಸಭೆಯೊಳು ನಿಂತು ಕೂಗಲವರ
ಶಿರಬಾಹು ಖಂಡಿಸಿದವು ಅವರಿಗೆ
ಈ ಶಬ್ದ ನುಡಿಯ ಯೋಗ್ಯತೆ ಇಲ್ಲದವರಿಗೆ
ಶ್ರೀಶರಂಗನೆ ಅವರನ್ನ ಭೇದಿಸಿದ
ವ್ಯಾಸ ಹಯಗ್ರೀವರಿಬ್ಬರಿವರು ಬೇರೆ
ಈಶನು ಭುಜವೆತ್ತಿ ಕುಣಿಯಲು ಉ–
ಮೇಶಗೆ ಭೃಗುಶಾಪ ಲಿಂಗವಾಗೆಂದು ರ–
ಮೇಶ ಗೋಪಾಲವಿಠಲನೆ ಪರೇಶವ್ಯಕ್ತ ಶಾಶ್ವತ ಶಾಶ್ವತನೊ ೬

ಜತೆ

ಮುಖ್ಯ ಕಾರಣ ಅಪ್ರಾಕೃತ ನಿರಂಜನ
ಮುಖ್ಯ ಪ್ರಾಣಾಂತರ್ಗತ ಗೋಪಾಲವಿಠಲ

೧೪೮

ಉಗಾಭೋಗ

ಹಲ್ಲಣವಿಲ್ಲದ ಕುದುರೆ ಹತ್ತಿ ಓಡಿಸಿದಂತೆ
ಬೆಲ್ಲ ಹಾಕದ ಪರಮಾನ್ನದಂತೆ

ಇಲ್ಲದೆ ಹುಟ್ಟು ಹರಿಗೋಲನೇರಿದಂತೆ
ಸೊಲ್ಲಿಗೆ ಬುಡದಲ್ಲಿ ಅಳೆದಂತೆ ಸಾಧನ
ಎಲ್ಲ ಒಂದೆಯೆಂಬ ಜ್ಞಾನವುಂಟಾದವ
ಎಲ್ಲ ಸಾಧನೆಗಳ ಮಾಡಲೇನು
ಬೆಲ್ಲ ಬೇವಾಗುವುದವನಿಗೆ
ಎಲ್ಲ ಕಡೆಯಲ್ಲಿ ನೋಡಿ ಮೆದ್ದರನ್ನ
ಮಲ್ಲಮರ್ದನ ಗೋಪಾಲವಿಠಲನಂಘ್ರಿ
ಪಲ್ಲವವನು ಕಾಣ ಎಲ್ಲಿ ಪೋದರನ್ನ

೧೪೯

ಉಗಾಭೋಗ

ಹಾದಿ ಹಾದಿ ಹಚ್ಚ ಹೋಗುವುದು ವೈದಿಕ
ಮೊದಲುಣಿಸದೆ ತನ್ನ ಸ್ವಾದ ಕೊಡದೆ ಯಾವುದು
ಸಾಧನವು ತಾ ಒದಗಿ ಇದ್ದರು
ಕ್ರೋಧವೆಂಬೋದೊಂದು ತಾನೊದಗಲು
ಮಾದಿಗರ ಮನೆಯ ಮದುವೆ ತೆರದಂತೆ
ಅದ ಮಾಡಿ ಸುಖ ಎಂದಿಗು ಬಾರದು
ಬೋಧಮೂರುತಿ ಚೆಲ್ವ ಗೋಪಾಲವಿಠಲನೆ
ಪಾದಸೇವೆಯ ನೀಡು ಕ್ರೋಧವನೆ ಸುಡು ಸುಡು

ಪುರಾಣ

೧೫೦

ಅಗಲಿ ಸೈರಿಸಲಾರೆವೊ ವೇಣುಗೋಪಾಲ ಪ.

ಅಗಲಿ ಸೈರಿಸಲಾರೆವೊ ನಗಧರ ಪನ್ನಗನಗಾಧೀಶ
ಮೃಗಮದ ತಿಗುರಿದ ನಗೆಮೊಗ ಚೆನ್ನಿಗ
ನಿಗಮಗಳಿಗೆ ಸಿಗದಗಣಿತ ಸುಗುಣ ಅ.ಪ.

ಗುಲಗಂಜಿ ಬರ್ಹಿಯಗರಿಯು ಎಳೆದಳಿರು ಕೇತಕಿಯ ಗರಿಯು
ಥಳಥಳಿಪ ಫಾಲದರಳೆಲೆಯು ಹೊಳೆವ ಕುಂಡಲಗಳ ಪ್ರಭೆಯು
ಹೊಳೆವ ಹಾರದಿಂದಲೊಪ್ಪುವ ರಾಮಾರಾಮದಿ
ಗೆಳೆಯರೊಡನೆ ಆಡಿ ಪಾಡುತ್ತ ರಾಜಬೀದಿಯೊಳು
ಸುಳಿದು ಕುಲುಕಿ ನಲಿನಲಿದಾಡುತ್ತ ನಿತ್ಯಗೋವತ್ಸ
ಗಳನು ಸಂರಕ್ಷಣೆ ಮಾಡುತ್ತ ಕೊಳಲನೂದುತ್ತ
ಸುಳಿವಳಿಗಿಳಿಶಿಖಿಗಳ ಕುಲಾವಳಿಗಳ ಫಲಿ ಫಲಿ ಫಲಿರೆಂದು ಕುಣಿಸುತ್ತ
ಎಳೆವಾರೆಗಣ್ಣಲಿ ನೋಡುತ್ತ ಲಲನೇರ ತನುಮನ ಸೆಳೆಯುತ್ತ
ಕಿಲಕಿಲ ನಗುತೆಮ್ಮೊಳು ರಮಿಸುತ್ತ ಕೆಂದೊಳದಯ
ಸವಿಯುವ ಚೆಲುವ ಚೆನ್ನಿಗ ೧

ದೇವ ಕೊಳಲನೂದುವುದು ನಾವು ಕೇಳಿ ಮುದದಿ ನಲಿದು
ಗೋವ್ಯಾಘ್ರ ಏಕತ್ರ ಬೆರೆದು ಕೇವಲವೈರತ್ವ ಮರೆದು
ಮೇವು ಜರಿದು ನಿನ್ನನೆ ನೋಡುತ್ತ ಖಗಮೃಗ ಏಕೋ-
ಭಾವದಿಂದ ಗಾನವ ಕೇಳುತ್ತ ಚಿತ್ರದಿ ಬರೆದ
ಭಾವದಂತೆ ಜಗಕೆ ತೋರುತ್ತ ಮನೆ ಮನೆಯೊಳು
ನಾವೀವಾರ್ತೆ ಕಿವಿಯಲ್ಲಿ ಕೇಳುತ್ತ ನಿಲ್ಲದೆ ತ್ವರಿತ
ತಾವನ ಬಾವನ ಮಾವಿನ ಮರದೊಳು ಗೋವಳ ನಿನ್ನನು ಕಾಣುತ್ತ
ಭಾವಜ ಕಲೆಗಳು ಉಕ್ಕುತ್ತ ಭಾವದಿ ಬಿಗಿಬಿಗಿದಪ್ಪುತ್ತ
ಈ ವಿಧ ಮುದ ನಮಗೀವ ಸುಖಾಂಬುಧಿ ಪೂವಿನ
ಶರಪಿತ ಮಾವನ ಬೆರೆದರೆ ೨

ಅನಘ ನಿನ್ನನುಗಾರರ ಕೂಡಿ ವನವನ ಸುಳಿಯಲು ನೋಡಿ
ಕೊನೆಗಣ್ಣಿಂದ ಸನ್ನೆಮಾಡಿ ಮನೆಯ ಕೆಲಸಗಳೀಡಾಡಿ
ವನಿತೇರೆಲ್ಲ ಮಾತನಾಡುತ್ತ ಚೆಲುವ ಮೂರ್ತಿಯ
ಮನದೊಳಗೆ ಧ್ಯಾನವ ಮಾಡುತ್ತ ಊದುವ ಕೊಳಲ
ಧ್ವನಿಯ ಕರ್ಣದಿಂದ ಕೇಳುತ್ತ ಬಂಧುಗಳ ಮಾತ
ಗಣನೆ ಮಾಡದಲೆ ಮೀರುತ್ತ ನಿನ್ನನರಸುತ್ತ
ತನುಮನಧನವನು ಗಣನೆಗೆ ತಾರದೆ ವನ ವನತಿರುಗುತ್ತ ಬಂದೆವೊ

ತನುಮನ ಒಪ್ಪಿಸಿ ನಿಂದೆವೊ ಕ್ಷಣವನು ಅಗಲದಿರೆಂದೆವೊ
ಚಿನುಮಯ ಗೋಪಾಲವಿಠಲ ಮಾ ಮನೋಹರ
ಮುನಿಜನ ಮನ ಮಂದಿರ ೩

೧೫೧

ಆಕಳ ಕಾಯ್ದ ಗೋಕುಲವಾಸನು ಪ.

ಆಕಳ ಕಾಯ್ದ ಗೋಕುಲವಾಸನನೇಕ ಗುಣನಿಧಿ ನಾಕೇಶ ವಿನುತ
ಲೋಕರ ಪಾಲಕ ಸಾಕಾರ ಮೂರುತಿ
ಏಕಮೇವಾದ್ವಿತೀಯ ಕೃಷ್ಣರಾಯ ಅ.ಪ.

ಪುರದಲ್ಲಿದ್ದಂಥ ಕೇರಿಯ ಮಕ್ಕಳ ನೆರಹಿ ಯಾದವ ಪರಿವಾರವೆಲ್ಲ
ತುರುವ ಕಾಯಲು ಹೊರಹೊರಡೆಂದು ಕರೆದು ಸೂಚಿಸಿ ಹರುಷದಿ
ಕರಣಕುಂಡಲ ಶಿರದಿ ಕಿರೀಟ ಸಿರಿಮುಖಕ್ಕೆ ಕಸ್ತೂರಿ ನಾಮವು
ಬರೆದು ಪೂಸರ ಕೊರಳಲೊಪ್ಪುವ ಸರಸ ಪೀತಾಂಬರಧರ ೧

ನಳಿನ ಕೇತಕಿ ಎಳೆಯ ಮಾವಿನ ತಳಿಲ ವನದ ಒಳಗೆ ರಂಗನು
ಕಾಳಿಂದಿ ತೀರದಿ ಗೆಳೆಯರ ಕೂಡಿ ಮಳೆಯ ಮಿಂಚಿನಂತ್ಹೊಳೆಯುತ್ತ
ಕೊಳಲನೂದುತ್ತ ಕಿಲಿಕಿಲಿನಗುತ ಗಿಳಿ ಚಕೋರವು ಅಳಿಮಯೂರಾ-
ವಳಿ ಬಳಿಯಲ್ಲಿ ಸುಳಿಯಲು ಕೃಷ್ಣ ನಲಿವ ನಂದವ ಪೇಳಲಳವಲ್ಲ ೨

ತೊಂಡರೊಡಗೂಡಿ ಪುಂಡರೀಕಾಕ್ಷ ಗೋವಿಂದ ಕಾಳಿಯ ದಂಡೆಯಲ್ಲಿರಿಸಿ
ಕೊಂಡು ಬಂದ ಬುತ್ತಿ ಹಿಂಡು ಮಕ್ಕಳಿಗೆಲ್ಲ ಉಂಡು ಉಣಿಸುತ ಪುಂಡಾಟದಿ
ಚೆಂಡು ಚಿಣ್ಣಿಕೋಲು ತಂಡ ತಂಡದುದ್ದಂಡ ಲೀಲೆಯ ಕಂಡು ಖೇಚರದಿ
ಅಂಡಜ ಉಮೇಶ ಪುಂಡರೀಕೋದ್ಭವ ಮಂಡೆಯನು ಬಾಗಿ ಕೊಂಡಾಡಲು೩

ಕಡು ತೃಷದಿ ಆ ಮಡುವಿನುದಕ ಕುಡಿದು ಗೋವುಗಳೆಲ್ಲ ನಡುಗಿ ಬೀಳಲು
ಆಡಲೋಡಿದ ಆ ಹುಡುಗರೆಲ್ಲ ಕೂಗ್ಯಾಡುತಲಿ ಮೊರೆಯಿಡಲಾಗ
ಮೃಡ ವಿನುತ ತಾ ನುಡಿಯನಾಲಿಸಿ ಕಡಹದ ಮರನಡರಿ ಮೇಲೇರಿ
ನಡು ನೀರೊಳು ತಾ ಸಿಡಿದು ಧುಮುಕೆ ಗಡಬಡಿಸಿತ್ತು ಮೊಡವಿಯೆಲ್ಲ ೪

ಹೊಕ್ಕ ಭರದಿ ದೇವಕಿ ಸುತನ ಸಿಕ್ಕಿಸಿಕೊಂಡು ಬಾಲಕೆ ಬಿಗಿಯಲು
ಲೆಕ್ಕಿಸದಲೆ ಕಾಲಿಕ್ಕಿ ಹಣೆಯಲ್ಲಿ ಛಕ್ಕನೆ ತುಳಿದನಕ್ಕರದಿ
ತಕ್ಕತಥೈಯ ಧಿಮಿಧಿಮಿಕೆಂದು ಕುಣಿಯೆ ಸೊಕ್ಕು ಉಡುಗಲು ಛಕ್ಕನೆ ಕಾಳಿಂಗ
ದಿಕ್ಕುಗಾಣದೆ ಪ್ರಾಣಕ್ಕೆ ಬಂದಿತೆಂದು ಕಕ್ಕಸದಿಂದುಸುರಿಕ್ಕುತಿರೆ ೫

ಇಂದಿರಾಪತಿ ಆನಂದದಿಂದಾಡಲು ಬಂದು ಬೊಮ್ಮ ವಾಯು
ನಂದಿವಾಹನಮ-
ರೇಂದಿರ ಸನಕ ಸನಂದನ ಸಕಲ ವೃಂದಾರಕರೆಲ್ಲ ನಿಂದಂಬರದಿಂದ ಚೆಂದದಿ
ಪೂಮಳೆ ಸುರಿಯೆ ದುಂದುಭಿಗಳು ತಮ್ಮಿಂದ ತಾವೆ ಮೊರೆಯೆ ಗಂಧರ್ವರು
ಮನ ಬಂದಂತೆ ಪಾಡಲು ಸುಂದರ ನಾರೇರು ವಂದಿಸಲು ೬

ಉರಗಾಂಗನೆಯರ ಮೊರೆಯ ಲಾಲಿಸಿ ಕರುಣಿ ಅವರಿಗೆ ಗರುಡನ ಭಯ
ಪರಿಹಾರ ಮಾಡಿ ಸರ್ಪನೆ ನೀನಿದ್ದ ಪುರಕ್ಕೆ ಪೋಗು ಎಂದರುಪಿದ
ಹೊರಗೆ ನೆರೆದ ಪರಿವಾರವೆಲ್ಲ ಕರೆಯುತ್ತಿರಲು ಭರದಿ ಅವರ
ಬೆರೆದು ಸರ್ವರ ಹೊರೆದು ಲೋಕದಿ ಮೆರೆದ ಸುಖದಿ ಗಿರಿಧರ ೭

ಗರಳ ಭಯದಿ ಧರೆಗೆ ಬಿದ್ದಂಥ ತುರುಗಳಿಗೆಲ್ಲ ಸ್ಮರಣೆ ಬಪ್ಪಂತೆ
ಹರಿಯು ಕೊಳಲಸ್ವರಪೂರ್ಣ ಮಾಡಿ ಕರೆಯಲಾಗ ಎಚ್ಚರವಾಗೆ
ಕರುಣವಾರಿಧಿ ಕರಸ್ಪರುಷದಿ ಪರಮ ಉಲ್ಲಾಸಭರಿತರಾಗಿನ್ನು
ತರಳರೆಲ್ಲ ತುತ್ತೂರಿಯನೂದುತ್ತ ಪುರದ ದಾರಿಯ ಪಿಡಿಯಲು ೮

ಮಂಗಳ ಮೂರುತಿ ಪೊಂಗೊಳಲೂದುತ್ತ ತಿಂಗಳಿನಂದದಿ
ಕಂಗಳುಪೊಳೆಯೆ
ಅಂಗನೆರೆಲ್ಲರು ಶೃಂಗಾರವಾಗಿನ್ನು ರಂಗವಲ್ಲಿನಿಟ್ಟ ರಂಗಣದಿ
ಬಂಗಾರದಾಭರಣಗಳ ಧರಿಸಿ ಮುಂಗಟ್ಟಿ ನಿಂತರು ಸಂಗೀತ ಪಾಡುತ್ತ
ತುಂಗ ವಿಕ್ರಮ ಗೋಪಾಲವಿಠಲಗೆ ಮಂಗಳಾರತಿ ಎತ್ತಿ ಶೃಂಗಾರದಿ ೯

೧೫೨

ಸುಳಾದಿ

ಧ್ರುವತಾಳ

ಆವ ಲೀಲೆಯೊ ನಿನ್ನನಾವಾವ ವರ್ಣಿಪ
ದೇವ ನಿನ್ನ ನಿಜ ಸ್ವಭಾವ ಗುಣ
ಆವ ಜನುಮರಹಿತವಾದ ನೀನು ಇನ್ನು
ದೇವಕಿ ಜಠರದಿ ಜನನವೇನೊ
ಆವ ಜಗವೆಲ್ಲ ಬಂಧಕವ ಮಾಡಿಪ್ಪ ಶಕ್ತ
ಗೋವತ್ಸ ಹಗ್ಗದಿಂದ ನೀವೇಗ ಸಿಕ್ಕೋದೇನೊ
ಆವ ನಿತ್ಯತೃಪ್ತನಾದವ ನೀ ಇನ್ನು ಪೋಗಿ
ಆವಾವ ಮನೆ ಬೆಣ್ಣೆ ಕದ್ದು ಮೆದ್ದದೇನು
ದೇವ ಸ್ವರಮಣನಾದ ಇನ್ನು ಪೋಗಿ
ಆವ ಗೋಪಿಕೆರೊಡನಾಟವು ಕ್ರೀಡೆಗಳೇನೊ
ಶ್ರೀ ವೈಕುಂಠವಾಸವಾಗಿಹ ಅಪ್ರಾಕೃತನೆ
ಈ ಉಡುಪಿನಲ್ಲಿ ನೀ ಇಪ್ಪ ಬಗೆಯು ಏನೊ
ಗೋವಳರೊಡೆಯ ಗೋಪಾಲವಿಠಲರೇಯ
ನಿವಾಸ ಮಧ್ವಮುನಿ ಮಂದಿರ ಸರ್ವೇಶ ೧

ಮಠ್ಯತಾಳ

ಮುಕ್ತ ಬೊಮ್ಮಾದಿಗಳು ತುತಿಸೆ ಕಾಣದೆ ಸರ್ವ-
ಶಕ್ತರಲ್ಲವೆಂದು ಸುಮ್ಮನಿರುವುದೇನು
ಸೊಕ್ಕಿನಿಂದಲಿ ಗೋಮಕ್ಕಳ ಕೈಯಿಂದ
ಭಕ್ತವತ್ಸಲನೆ ಬಯಸಿ (ಬೈಸಿ)ಕೊಂಡದದೇನು
ಮುಕ್ತಿಪ್ರದಾತನೆ ನಿನಗೆ ಯಮುನಾದೇವಿ
ಗಕ್ಕನೆ ಮಾರ್ಗವನಿತ್ತಳೆಂಬೋದೇನೊ

ಮುಕ್ತ ನಿಯಾಮಕನೆ ನೀ ಕೌರವ ಸಭೆಗೆ
ಚಕ್ಕನೆ ಸಂಧಾನಕ್ಕಿನ್ನು ಪೋದುದು ಏನೊ
ಭಕ್ತವತ್ಸಲ ಕೃಷ್ಣ ಗೋಪಾಲವಿಠಲ
ಮಕ್ಕಳಾಟಕೆ ನಿನ್ನ ಮಹಿಮೆಗೆ ನಮೋ ನಮೋ ೨

ತ್ರಿಪುಟತಾಳ

ಅಂಗನೆ ದ್ರೌಪದಿಗಕ್ಷಯ ವಸನವು
ಹಿಂಗದೆ ಇತ್ತಂಥ ಹಿತದೈವವೆ
ಶೃಂಗಾರದೀಪುರದ ರಜಕನ್ನ ಬಿಡದಲೆ
ಭಂಗಬಡಿಸಿ ವಸ್ತ್ರನುಟ್ಟುಕೊಂಡದ್ದು ಏನೊ
ಹಿಂಗದೆ ಅಜಭವರಿನ್ನು ಅರ್ಚಿಸಲಾಗಿ
ಕುಂಗಿದ್ದ ಕುಬುಜೆ ಅರ್ಚನೆಗೆ ಮೆಚ್ಚಿದ್ದೇನೊ
ಅಂಗನೆ ಲಕುಮಿ ಅಲಂಕರಿಸುತಲಿರೆ
ರಂಗ ಪೂಗಾರನ ಮಾಲೆಕೊಂಡದ್ದು ಏನೊ
ತುಂಗಮಹಿಮ ಗೋಪಾಲವಿಠಲ ಕೃಷ್ಣ
ಡಿಂಗರಿಗರ ಪ್ರಿಯ ದೀನಜನರ ಬಂಧು ೩

ಅಟ್ಟತಾಳ

ದುಃಖ ಸಾಗರದ ಸಿಕ್ಕು ಬಿಡಿಪನೆ ದೇ-
ವಕಿಯ ಸೆರೆಯ ಬಿಡಿಸಿದವನೆಂಬುವುದೇನೊ
ಅಕ್ಕರದಲಿ ವದನ ತೆರೆದು ಇನ್ನು
ಗಕ್ಕನೆ ಹದಿನಾಲ್ಕು ಲೋಕ ತೋರಿದನೆ ಗೋ-
ಮಕ್ಕಳ ಕೂಡಾಡಿ ಅಡಗಿಕೊಂಬುವುದೇನೊ
ಮುಖ್ಯ ಮುಕುತರು ನಿನ್ನನ್ನು ಕೊಂಡಾಡುತ್ತಲಿರೆ
ಉಖ್ಖಾ ಅಮ್ಮ ಎಂದು ಅಕ್ಕೆ ಮಾಡಿದುದೇನೊ
ಭಕ್ತವತ್ಸಲದೇವ ಗೋಪಾಲವಿಠಲ ವಿ-
ರಕ್ತರ ಮನದಲ್ಲಿ ಬಿಡದೆ ಇಪ್ಪುವ ಸ್ವಾಮಿ ೪

ಆದಿತಾಳ

ಜಾರ ಚೋರ ದೋಷಗಳು ಆರು ಆರು ಮಾಡಿ ನಿನ್ನ
ಸಾರಿ ತುತಿಸಿ ಸಾರೆ ಅವರಾಪಾರ ಓಡವು ?
ಜಾರ ಚೋರ ಗುಣಗಳೆಲ್ಲ ನಿನಗೆ ಒಪ್ಪಿತಯ್ಯಾ ಸರ್ವ
ಕಾರಣಕ್ಕೆ ನೀನೆ ಮುಖ್ಯ ಕಾರಣಾದ ಕಾರಣವು
ಮಾರುತೀಶ ಚೆಲುವ ಗೋಪಾಲವಿಠಲರೇಯ
ಆರು ಬಲ್ಲರಯ್ಯ ನಿನ್ನಪಾರ ಮಹಿಮೆ ಪೂರಣವು ೫

ಜತೆ

ಉಡುಪಿವಾಸ ಶ್ರೀಕೃಷ್ಣ ಗೋಪಾಲ
ಬಿಡದೆ ನಂಬಿಸೊ ನಿನ್ನ ಚರಣಕಮಲವ

೧೫೩

ಇಂದಿರೇಶ ನಿನ್ನದೊಂದೆ ಕ್ರಿಯಾ ದ್ವಂದ್ವವಾಯಿತೋ
ಕುಂದು ತೋರಿತು ಖಳರಿಗೆ ಪರಮಾನಂದವಾಯಿತು ವೃಂದಾರಕರಿಗೆ ಪ.

ಜನನ ಕ್ರಿಯವೆ ದೇವಕಿ ಮನೋಜಯವಾಯಿತೊ
ಜನನ ಕ್ರಿಯವೆ ಜೈನನ ಮನೆತನವಳಿಯಿತೊ
ಸ್ತನ್ಯಪಾನದಿಂದ ಗೋಪಿಗೆ ಘನ ಮೋದವಾಯಿತೊ
ಸ್ತನ್ಯಪಾನದಿಂದ ಪೂತನಿ ಪ್ರಾಣ ನಾಶವಾಯಿತೊ ೧

ಬಾಲಕ್ರೀಡೆ ಯಮಳಾರ್ಜುನರ ಪಾಲಿಸಿತೊ ಕರುಣದಿ
ಬಾಲಕ್ರೀಡೆ ಶಕಟಾದ್ಯರನು ಮೂಲನಾಶನ ಮಾಡಿತೊ
ಪಲಾಯನವೆ ಮುಚುಕುಂದನಿಗೆ ಪರಮಗತಿಗೈದಿಸಿತೊ
ಪಲಾಯನವೆ ಕಾಲಯವನನ ಪ್ರಾಣವಪಹರಿಸಿತೊ ೨

ಒಂದೆ ವಚನವೆ ಇಂದ್ರಾದ್ಯರಿಗಾನಂದಕರವಾಯಿತೊ
ಒಂದೆ ವಚನವೆ ವಿರೋಚನನಗೆ ಬಂಧವ ತಂದಿಟ್ಟಿತೊ
ಬಂಧುತನವೆ ಧರ್ಮಾದ್ಯರನು ವೃಂದದೊಳು ಸಲಹಿತೊ
ಬಂಧುತನವೆ ಪೌಂಡ್ರಕರಸನ ಮಂದಭಾಗ್ಯನ ಮಾಡಿತೊ ೩

ನರ ವಿಶ್ವರೂಪ ನೋಡೆ ಹರುಷೋದ್ರೇಕವಾಯಿತೊ
ದುರ್ಯೋಧನ ನೋಡಲವಗೆ ದುಃಖವೆ ಬಂದೊದಗಿತೊ
ಕರಸ್ಪರ್ಶವಾಗೆ ತುರುಗಳ ಮರಣ ಪರಿಹರಿಸಿತೊ
ಕರಸ್ಪರ್ಶವಾಗೆ ಕೇಶಿಗೆ ಮರಣವೆ ಒದಗಿತೊ ೪

ನಿನ್ನ ಗುಣರೂಪಕ್ರಿಯಾ ಬಲದ ಕೊನೆಯಾವನು ಬಲ್ಲನೊ
ನಿನಗೆ ವೈಷಮ್ಯಲೇಶವನು ಕಾಣೆ ಶ್ರೀಶನೆ
ದನುಜ ದಿವಿಜರ ಮನದನುಸಾರದಾತನೆ
ಮಣಿದು ನಮಿಸುವೆ ಕಾಯೋ ಗೋಪಾಲವಿಠಲ ೫

೧೫೪

ಸುಳಾದಿ

ಧ್ರುವತಾಳ

ಎತ್ತಣ ಶಬ್ದವಿದು ಎನ್ನ ಕರ್ಣಕಿದು ಯವ್ವ
ಎತ್ತಣ ಸ್ಪರ್ಶವಿದು ಎನ್ನ ಅಂಗಕಿದು ಯವ್ವ
ಎತ್ತಣ ರೂಪವಿದು ಎನ್ನ ಜಿಹ್ವೆಗೆ ಇದು ಯವ್ವ
ಎತ್ತಣ ರಸವಿದು ಎನ್ನ ನಯನಕಿದು ಯವ್ವ
ಸುತ್ತಿಹ ಶಿರದಿ ನಾನಾ ಲತೆಯು ಎಳೆದಳಿರು
ರತುನ ಮಕುಟ ಫಣೆಯ ಕಸ್ತೂರಿ ಕಮಲನಯನ
ವ್ಯಕ್ತವದನವು ಮಂದಸ್ಮಿತ ಚೆಲ್ವ ಕಿರಿದಂತ
ತತ್ಥಳಿಪ ಕಪೋಲ ಚಲತ್ತು ಮಕರ ಕುಂಡಲ

ಉತ್ತಮದ ಕಂಬುಕಂಠ ಉರದಲ್ಲಿ ಶ್ರೀವತ್ಸ
ಶ್ರೀತುಲಸಿಮಾಲೆ ಶೃಂಗಾರಿಕವಾದ ಭುಜಕೀರ್ತಿ
ತಿತ್ತಿರಿ ಮಾವೂರಿ ಕೊಳಲೂದುತ್ತ ಸ್ವರವೆತ್ತಿ ಗಾನ
ಕುತ್ತಿಗೆಯ ಬಾಗಿ ತಾಳಕಿಕ್ಕಿತೋಳ ಕರವನ್ನು
ಗುತ್ತಿ ಗುಲಗಂಜಿ ದಂಡೆ ಚಿತ್ರೆ ಹೊನ್ನುಂಗುರ ಬೆರಳ-
ಲೊತ್ತಿ ವೇಣು ಮೀಟುತ್ತ ಮತ್ತೆ ಸರಿಗಮದಿಂದ
ಚಿತ್ತಜನಯ್ಯ ಜಗದ್ಧರಿತ ಉದರ ತ್ರಿವಳಿಯ
ಸುತ್ತಿದ ಕಟಿಯ ಕಾಂಚಿದಾಮ ಕಲ್ಲಿಯಚೀಲ
ಭುಕ್ತಿಯ ಚಿಕ್ಕವು ಬಚ್ಚಣಿಯ (ಚಿಣ್ಣಿಯ ?) ಕೋಲು ಬಲಸೆಕ್ಕಿ
ಎತ್ತಿ ಎತ್ತಿ ಮೆಲ್ಲನೆ ಪಾದೆತ್ತಿ ಹೆಜ್ಜೆನಿಡುತ್ತ
ಮತ್ತೆ ಮಹಅರ್ಥಿಗಿನ್ನು ಪೃಥ್ವಿ ಆತುರಳಾಗಿ
ಇತ್ತ ವಿಭವು ಮುಂದತ್ತ ಚಿಂತಿಸುತಿಪ್ಪಳೊ
ಸತ್ಯ ಸಾಕಾರ ಸರ್ವಜ್ಞ ಗೋಪಾಲವಿಠಲ
ಮತ್ತೆ ಈ ಉಡುಪಿನ ಕೃಷ್ಣ ಸುತ್ತು ಸುಳಿದು ಸಲಹೆನ್ನ ೧

ಮಠ್ಯತಾಳ

ಸುಖ ಪೂರ್ಣ ಜ್ಞಾನಪೂರ್ಣ ಸುಖತೀರ್ಥರ ಪ್ರಿಯ
ಭಕುತವತ್ಸಲದೇವ ಬಂಧಕ ಮೋಚಕ
ಶಕುತ ಲಕುಮಿ ಮನೋಹರ ರಾಜರಾಜೇಶ್ವರ
ಮುಕುತಿದಾಯಕ ಮೂಲ ಅವತಾರ ಅಭೇದ
ನಖಶಿಖಪರಿಪೂರ್ಣ ನರಸಖ ನಿರ್ದೋಷ
ಸಕಲರಲ್ಲಿ ವ್ಯಾಪ್ತ ಸಕಲ ಸಾರಭೋಕ್ತ
ಭಕುತಿಯಿಂದ ಲಭ್ಯ ಬಡವ ಬಲ್ಲಿದನೆನ್ನ
ಮಕ್ಕಳಮಾಣಿಕ್ಯ ದೇವಕಿ ಪುಣ್ಯೋದಯ
ರಕ್ಕಸಾಂತಕ ರಾಮ ಪ್ರಾಕೃತರಹಿತ
ಸಕಲಗುಣಪೂರ್ಣ ಗೋಪಾಲವಿಠಲ
ಶ್ರೀಕೃಷ್ಣ ಉಡುಪಿ ನಿವಾಸ ಸಲಹೊ ನಮ್ಮ ೨

ರೂಪಕತಾಳ

ದ್ವಾಪರದಲಿ ಅಂದು ಅವತರಿಸಿದ ಹರಿಯೆ
ಗೋಪಾಲರೊಡನಿನ್ನು ಆಡಿ ಆಕಳ ಕಾಯ್ದು
ಅಪ್ರಮೇಯ ಪೂರ್ಣ ಪೂರ್ಣ ಮಾಡಲಿಬೇಕು ಎಂತೆಂದು
ಈ ಪೃಥ್ವಿಯಲ್ಲಿ ಈ ಸ್ಥಳದಲ್ಲಿ ನಿಂತಿನ್ನು
ಗೋಪಾಲಕರೆ ಗೋವುಗಳ ಅಂದಾದವರ
ಸುಪರಮ ಸನ್ಯಾಸಿಗಳ ಮಾಡಿ ಸೃಷ್ಟಿಸಿ
ತಾ ಪೂಜೆ ಇವರಿಂದ ನಿರುತ ತೆಗೆದುಕೊಂಡು
ಶ್ರೀಪತಿ ಇವರಿಂದ ಸರ್ವಸಾಧನಗಳನ
ತಾ ಪಾಲಿಸುವ ಸಂಭಾಷ ಸಂದರುಶನದಿ
ನಾ ಪ್ರತಿಕಾಣೆ ಈ ಕ್ಷೇತ್ರಕ್ಕೆ ಮಿಗಿಲೊಂದು
ಶ್ರೀ ಪುರುಷೋತ್ತಮ ಉಡುಪಿನ ಸಿರಿಕೃಷ್ಣ
ಅಪಾರ ಮಹಿಮ ಗೋಪಾಲವಿಠಲ
ಈ ಪರಿ ಇರುತಿಪ್ಪ ಇಲ್ಲಿ ಪಾಲಿಸುತ್ತ ೩

ಝಂಪೆತಾಳ

ಅಣುಮೂರುತಿ ಇದೆ ಘನಮೂರುತಿ ಇದೆ
ಅಣುಘನಪರಿಪೂರ್ಣ ಮೂರುತಿ ಇದೆ
ವನಜಭವಾದಿಗಳ ಮನಕೆ ಧ್ಯೇಯವು ಇದೆ
ಸನಕಾದಿಗಳ ಮನಕೆ ಒಪ್ಪುವುದಿದೆ
ಅಣಿಮಾದಿ ಅಷ್ಟಾಂಗ ಯೋಗ ಸಾಧನವುಳ್ಳ
ಮುನಿಗಳ ಮನಕೆ ಪೊಳೆಯುತಲಿಹುದಿದೆ
ಕನಸು ಜಾಗ್ರತೆ ಸ್ವಪ್ನ ಸುಷುಪ್ತಿವ್ಯಾಪಾರ
ದಿನಗಳನು ನಡೆಸುವ ಮೂರ್ತಿ ಇದೆ
ಫಣಿ ಫಣದಲ್ಲಿ ನಾಟ್ಯವಾಡಿ ಭಕ್ತರ ಕಾಯ್ದ
ಮನುಜ ರೂಪವ ತಾಳ್ದ ಮೂರ್ತಿ ಇದೆ
ಜನನಿಗಾಟವ ತೋರಿ ಜನರ ತೋಷ ಬಡಿಸಿದ

ಘನ ಕರುಣಾಕರಮೂರ್ತಿ ಇದೆ
ವನಧಿತೀರವಾಸ ಗೋಪಾಲವಿಠಲ
ಚಿನುಮಯಮೂರ್ತಿ ಸುಖ ಮುನಿಮನಮಂದಿರ ನಿವಾಸ ೪

ತ್ರಿಪುಟತಾಳ

ಚಿತ್ತಜನಯ್ಯ ಕಾಣೊ ಚಿಂತನೆಗೆ
ಭಕ್ತವತ್ಸಲ ಕಾಣೊ ಅಭಿಮುಖಿಕೆ
ನಿತ್ಯ ವ್ಯಕ್ತನು ಕಾಣೊ ನಿರುಪಾಧಿಕರಿಗೆಲ್ಲ
ಸತ್ಯ ಅವ್ಯಕ್ತ ವಿಷಯಾಸಕ್ತರಿಗೆ
ಸತ್ಯ ರೂಪನು ಕಾಣೊ ಭೃತ್ಯಜನರಿಗಿನ್ನು
ಮೃತ್ಯುರೂಪನು ಕಾಣೊ ದೈತ್ಯಜನಕೆ
ಮತ್ತೆ ಮಧ್ಯಮರಿಗೆ ಮನುಜರೂಪದಿ ತೋರ್ಪ
ಮತ್ತಾ ಜಾರಸ್ತ್ರೀಯರಿಗೆ ಜಾರ
ಸುತ್ತ ಆಡಿದ ಗೋಪಾಲಕರಿಗೆ ಗೋವಳ
ತತ್ತದಾಕಾರವು ಒಂದರಲ್ಲೆ
ಪ್ರತ್ಯೇಕ ಅವರವರಿಷ್ಟ ರೂಪಕನಾಗಿ
ನಿತ್ಯ ತೋರುವ ನಿಲುಕೆ ಜೀವರಿಗೆ
ಮುಕ್ತಿದಾಯಕ ಕೃಷ್ಣ ಗೋಪಾಲವಿಠಲ
ಪ್ರತ್ಯಕ್ಷ ನೋಡಿಲ್ಲಿ ಬಲ್ಲವರಿಗೆ ೫

ಅಟ್ಟತಾಳ

ಇದೇ ಶ್ವೇತದ್ವೀಪ ಇದೇ ಅನಂತಾಸನ
ಇದೇ ಶ್ರೀವೈಕುಂಠ ಇದೇ ಮುಕ್ತ ಭಾಗ
ಇದೇ ಮಧ್ವಸರೋವರ ವಿಧಿಯಿಂದ ಮಾಡಿದ್ದು
ವಿಧಿಕಾಣೊ ವಿರಜಾನದಿಯ ಸ್ನಾನಕೆ ಮುಂದೆ
ಪದುಮೆಯಿಂದರ್ಥಿಲಿ ಪೂಜಿತ ಮೂರ್ತಿದು
ವಿಧಿಯಿಂದ ನಿರ್ಮಿತವಾದ ಮೂರ್ತಿಯು ನೋಡಾ

ಅಧಿಕಧಿಕವಾಹ ಮೂರ್ತಿ ಅಪ್ರತಿ ಈ ಕ್ಷೇತ್ರ
ಬುಧರೇವೆ ಬಲ್ಲರು ವಿಧಿಸಿ ನೋಡಲು ಇನ್ನು
ಮದನನಯ್ಯ ಚೆಲ್ವ ಗೋಪಾಲವಿಠಲ
ಸದಾ ನಮ್ಮ ಸಲಹೊ ಶ್ರೀ ಉಡುಪಿನ ಕೃಷ್ಣ ೬

ಆದಿತಾಳ

ನಮೋ ನಮೋ ಪಾಂಡವಪಕ್ಷಪಾತಿಯೆ
ನಮೋ ನಮೋ ಅಗಣಿತ ಗುಣಗಣಾಂಬುಧೆ
ನಮೋ ನಮೋ ನಿರ್ದೋಷ ನಿಜ ಆನಂದ
ನಮೋ ನಮೋ ಪ್ರಾಕೃತಗಂಧ ವಿದೂರನೆ
ನಮೋ ನಮೋ ನಿತ್ಯನಿರಂಜನ ಪೂರ್ಣ
ನಮೋ ನಮೋ ಸ್ವಗತಭೇದವಿವರ್ಜಿತ
ನಮೋ ನಮೋ ನಿರ್ಜಿತ ಮಾಯಾ ಸುವರ್ಗ
ನಮೋ ನಮೋ ಕಾರುಣ್ಯ ಕಾಪಟ್ಯರಹಿತ
ನಮೋ ನಮೋ ವಿಷ್ಣು ಸಾಕಾರ ಚೆಲುವ
ನಮೋ ನಮೋ ನಿತ್ಯ ತೃಪ್ತ ನಿರಾಶ್ರಯ
ನಮೋ ನಮೋ ಸಿರಿ ಅಬುಜಭವವಂದಿತ
ನಮೋ ನಮೋ ಸರ್ವಜೀವ ಜಡವ್ಯಾಪ್ತ
ನಮೋ ನಮೋ ಸೃಷ್ಟ್ಯಾದಿ ಅಷ್ಟಕರ್ತರಾಜ
ನಮೋ ನಮೋ ಸುರನದಿಜನಕ ಹೇ ತಾತ
ನಮೋ ನಮೋ ಗೋಪಾಲವಿಠಲ ಮೂರುತಿ
ನಮೋ ನಮೋ ಜಯಜಯ ಉಡುಪಿನ ಸಿರಿಕೃಷ್ಣ ೭

ಜತೆ

ನೋಡಿದವನಲ್ಲ ನಾ ನಿನ್ನ ನಿಜರೂಪ
ನೋಡಿಸೊ ಕರುಣದಿ ಗೋಪಾಲವಿಠಲ

೧೫೫

ಸುಳಾದಿ

ಧ್ರುವತಾಳ

ಎಲ್ಲಿ ನೋಡಲು ನೀನಿಲ್ಲದ ಸ್ಥಳವಿಲ್ಲ
ಎಲ್ಲರಂತರ್ಯಾಮಿ ಎಲ್ಲಿಯು ನೀನೆ
ಹುಲ್ಲುಕಾಷ್ಠ ಜಡ ಚೇತನಗಳಲ್ಲಿ ನೀ–
ನಿಲ್ಲದಿಲ್ಲವೆಂದು ಎಲ್ಲ ಸ್ತುತಿಸುತಿದೆ
ಸಲ್ಲದ ಮನುಜನು ನಿನಗೆ ತನಗೆ ಭೇದ–
ವಿಲ್ಲವೆಂಬುವನಿಗೆ ಏನೆಂಬೆ ಹರಿಯೆ
ಜಲಜ ನೀರೊಳಗಿದ್ದು ಲೇಪನವಿಲ್ಲದಂತೆ
ಎಲ್ಲ ಪ್ರೇರಕನು ಎಲ್ಲರಲ್ಲಿಯು ನೀನೆ
ಚಿಲ್ಲರೆ ದೈವರ ಗಂಡ ಗೋಪಾಲವಿಠಲ ನಿನ್ನ
ಬಲ್ಲವರೆ ಬಲ್ಲರು ಎಲ್ಲವರರಿಯರು ೧

ಮಠ್ಯತಾಳ

ವಿಶ್ವತೋಮುಖ ನೀನೆ ವಿಶ್ವತೋ ಚಕ್ಷು ನೀನೆ
ವಿಶ್ವತೋ ಬಾಹು ನೀನೆ ವಿಶ್ವತೋ ಹಸ್ತ ನೀನೆ
ವಿಶ್ವತೋ ಶ್ರವಣನೆ ವಿಶ್ವಾಧಾರಕ ನೀನೆ
ವಿಶ್ವವ್ಯಾಪಕ ಸರ್ವ ವಿಶ್ವಮಯನು ನೀನೆ
ವಿಶ್ವನಾಮಕ ಹರಿ ಗೋಪಾಲವಿಠಲ
ವಿಶ್ವಾಸ ಕೊಡು ನಿನ್ನ ವಿಶ್ವ ಚರಣದಲ್ಲಿ ೨

ತ್ರಿಪುಟತಾಳ

ಅಂಗುಷ್ಠಾಗ್ರ ಮಾತ್ರ ಪರಿಮಾಣ ಮೂರುತಿ ನೀನೆ
ರಂಗ ಆತ್ಮ ಅಂತರಾತ್ಮ ಮೂರುತಿ ನೀನೆ

ಲಿಂಗದೇಹ ಭಂಗವಾಗುವುದಕ್ಕೆ ಸಾಧು
ಸಂಗದಲ್ಲಿ ಇಡುವ ಉತ್ತುಂಗ ಮಹಿಮ ನೀನೆ
ಗಂಗಾತೀರದಲ್ಲಿದ್ದು ಸುಜನರ ದೋಷಂಗಳ ಕಳೆವುದಕೆ
ಮಂಗಳಾತ್ಮ ಮೂರುತಿ ನೀನೆ
ಸ್ವಾಂಗಾಯ ನಮ್ಮ ಗೋಪಾಲವಿಠಲ
ಸಂಗದಲ್ಲಿರಿಸೊ ನಿನ್ನ ಡಿಂಗರಿಗರೊಡನೆ ೩

ಅಟ್ಟತಾಳ

ಸಿರಿಯಲ್ಲಿಯು ನೀನೆ ಪರಮೇಷ್ಠಿಯಲ್ಲಿಯು ನೀನೆ
ಮರುತವಾಣಿ ಭಾರತಿ ಎಲ್ಲರಲ್ಲಿಯು ನೀನೆ
ಉರಗನಲ್ಲಿಯು ನೀನೆ ಗರುಡನಲ್ಲಿಯು ನೀನೆ
ಗಿರಿಜಾಪತಿಯಲ್ಲಿಯು ಸುರಪತಿಯಲ್ಲಿಯು ನೀನೆ
ವರ ಸಿದ್ಧಸಾಧ್ಯ ಕಿನ್ನರರಲ್ಲಿಯು ನೀನೆ
ಗಿರಿ ಗುಹೆಗಳಲ್ಲಿ ಒಳಗೆ ಹೊರಗೆ ಎಲ್ಲ
ಕರೆದರೆ ಓ ಎಂಬ ಪ್ರತಿ ಶಬ್ದವು ನೀನೆ
ಪರಶುರಾಮನಾಗಿ ಪಾವಕನಲ್ಲಿ ನೀನೆ ಬ-
ಹಿರಂತರ್ದಶದಿಕ್ಕುಗಳಲ್ಲಿ ನೀನೆ ನೋಡಲು
ಕರಿಸಿಂಹ ಶಾರ್ದೂಲ ಮೊದಲಾದ
ಸರುವ ಜೀವರಲ್ಲಿ ಪರಿಪೂರ್ಣ ನೀನೆ
ಮರ ಮೃಗ ಮೊದಲಾದ ಅಖಿಳರಲ್ಲಿಯು ನೀನೆ
ಕರ್ಮಾನುಸಾರವಾದ ದುಷ್ಟರಂತಕ ನೀನೆ
ಧುರವಿಕ್ರಮ ನಮ್ಮ ಗೋಪಾಲವಿಠಲ
ದೂರದೂರನೆ ಅತಿ ದೂರತರನು ನೀನೆ ೪

ಆದಿತಾಳ

ನಿಗಮವ ತಂದಂಥ ನಗಧರನು ನೀನೆ
ಜಗವನು ತಂದಂಥ ಅಸುರಾಂತಕ ನೀನೆ

ಮಿಗೆ ಕಂಬದಿ ಬಂದ ನರಸಿಂಹನು ನೀನೆ
ಜಗವನೋರಡಿಯಾಗಿ ಅಳೆದ ವಾಮನ ನೀನೆ
ಮಗನಾಗಿ ಮಾತೆಯ ಘಾತಿಸಿದ ಭಾರ್ಗವ ನೀನೆ
ಜಗವರಿಯೆ ರಾವಣಾಂತಕನು ನೀನೆ
ನಗುತ ಪೂತಣಿ ಅಸುವ ಹೀರಿ ಶಕಟನ ಒದ್ದು
ಹಗೆ ಕಂಸನ ಕೊಂದ ಶ್ರೀಕೃಷ್ಣನು ನೀನೆ
ಮೃಗಧರಧರಗೊಲಿದು ಬತ್ತಲೆ ನಿಂದು ತ್ರಿಪುರವ
ಒಗೆದು ಮೆರೆದ ಬೌದ್ಧಾವತಾರನು ನೀನೆ
ಸೊಗಸಾಗಿ ಹಯವೇರಿದ ಕಲ್ಕಿಯು ನೀನಾದೆ
ಮಿಗೆ ಅನಂತಾವತಾರನು ನೀನಾದೆ
ಜಗಜನ್ಮಾದಿ ಕಾರಣ ಗೋಪಾಲವಿಠಲ
ನಿಗಮಗೋಚರ ಅಘಶೂನ್ಯ ಪಾವನನೆ ೫

ಜತೆ

ಸರ್ವಾಧಾರನೆ ಸರ್ವ ನಿರ್ಲೇಪನೆ
ಸರ್ವದರ್ಶನನಾಮ ಗೋಪಾಲವಿಠಲ

೧೫೬

ಎಲ್ಲಿ ಪೋಯಿತೊ ಅವಿದ್ಯಾಪಟಲ ಕಾಣೆ ನಾನು
ಮಲ್ಲಮರ್ದನನೆ ಸಿರಿವಲ್ಲಭ ಗೋಪಾಲಕೃಷ್ಣ ಪ.

ಶರಣರ ಪಾದರಜಸ್ಪರುಶ ಸಂಭೂತವಾದ
ಮಾರುತ ಸೋಕೆ ಈ (ಗ) ಹರಿಹರಿದು ಪೋಯಿತೊ ಹ್ಯಾಗೊ ೧

ಅನಘ ಒಡನೆ ಮಧ್ವಮುನಿ ಸರೋವರದಿ
ಸ್ನಾನವನು ಮಾಡೆ ತೊಯಿದು ಭರದಿ
ಮುಣುಗಿಪೋಯಿತೊ ಹ್ಯಾಗೊ ೨

ತೇರಿನೊಳಗೆ ನಿನ್ನ ವಿಹಾರ ಮೈ-
ಮರೆದು ನೋಡಿ ಚೋರರಿಂದಲ್ಲೆ
ಅಪಹಾರವಾಯಿತೊ ಹ್ಯಾಗೊ ೩

ಅನಾದಿಯಿಂದ ಬಂದದ್ದು
ನೀನೀಕ್ಷಣದಿ ಕಳೆದೆ ಭಾನು-
ಜನಾಳುಗಳಿಗಿನ್ನೇನು ತೊರಲೀ ಮೋರೆ ೪

ಅದರ ಸಂಬಂಧಿಗಳು ಕದನ ಗ-
ಯ್ಯದ ಮುನ್ನ ಒದಗಿ ರಕ್ಷಿಸೊ ತೀರ್ಥ-
ಪಾದ ಶ್ರೀಗೋಪಾಲವಿಠಲ ೫

೧೫೭

ಏನು ಬೇಡಲಿ ನಿನ್ನ ಬಳಿಗೆ ಬಂದು
ನೀನಿತ್ತ ಸೌಭಾಗ್ಯ ನಿಬಿಡವಾಗಿದೆ ಎನಗೆ ಪ.

ಜನನಿಯ ಕೊಡು ಎಂದು ಜಯವಂತ ಬೇಡುವೆನೆ
ಜನನಿ ಏನಿತ್ತಳಾ ಧ್ರುವರಾಯಗೆ
ಜನಕನ ಕೊಡು ಎಂದು ಜಗದೀಶ ಬೇಡುವೆನೆ
ಜನಕನೇನಿತ್ತನಾ ಪ್ರಹ್ಲಾದಗೆ ೧

ಅನುಜನ ಕೊಡು ಎಂದು ಅತಿಶಯದಿ ಬೇಡುವೆನೆ
ಅನುಜನೇನಿತ್ತನೈ ಆ ವಾಲಿಗೆ
ಧನವನ್ನೆ ಕೊಡು ಎಂದು ದೈನ್ಯದಲಿ ಬೇಡುವೆನೆ
ಧನವ ಗಳಿಸಿದ ಸುಯೋಧನನೇನಾದನು ೨

ಸತಿಯಳ ಕೊಡು ಎಂದು ಮತಿವಂತ ಬೇಡುವೆನೆ
ಸತಿಯಿಂದ ದ್ಯುನಾಮಕನೇನಾದನಯ್ಯ
ಸುತರುಗಳ ಕೊಡು ಎಂದು ಸತತದಲಿ ಬೇಡುವೆನೆ
ಸುತರಿಂದ ಧೃತರಾಷ್ಟ್ರ ಗತಿಯೆಷ್ಟು ಪಡೆದ ೩

ಬಂಧುಗಳ ಕೊಡು ಎಂದು ಚೆಂದದಲಿ ಬೇಡುವೆನೆ
ಬಂಧುಗಳು ಸಲಹಿದರೆ ಗಜರಾಜನ
ಅಂದಣವ ಕೊಡು ಎಂದು ಅಂದದಲಿ ಬೇಡುವೆನೆ
ಅಂದಣೇರಿದ ನಹುಷನೇನಾದನಯ್ಯ ೪

ಬೇಡುವೆನು ನಾ ನಿನ್ನ ಬೇಡತಕ್ಕುದ ದೇವ
ನೀಡೇನೆಂಬುದು ನಿನ್ನ ಮನದೊಳಿತ್ತೆ
ಮೂಡಲಗಿರಿವಾಸ ಗೋಪಾಲವಿಠಲ ಪರರ
ಬೇಡದಂತೆ ಎನ್ನ ಮಾಡಯ್ಯ ಹರಿಯೆ ೫

೧೫೮

ಒಂದು ದಿನ ರುಕ್ಮಿಣಿಯ ಮಂದಿರಕೆ ಶ್ರೀಕೃಷ್ಣ
ಚೆಂದದಿಂದಲಿ ಬಂದ ಹರುಷದಿಂದ
ಹರಿ ಬರಲು ಕಾಣುತ ಸಿರಿಯು ತಾ ಹರುಷದಲಿ
ಕರಪಿಡಿದು ಮಂಚದಲಿ ಕುಳಿತುಕೊಂಡು
ಮಡುದೆಲೆಯ ನೀಡುತಿರೆ ಮಡದಿಯ ಮುಖ ನೋಡಿ
ಕಡು ಹರುಷದಲಿ ಹಾಸ್ಯ ಮಾಡುತಿರಲು
ಬಡಗೊಲ್ಲನು ನಾನು ದೊರೆಯ ಮಗಳು ನೀನು
ಮದುವೆಯಾಗಲುಬಹುದೆ ಚದುರೆ ಪೇಳು
ಒಡಹುಟ್ಟಿದಣ್ಣನು ದೊರೆ ಮಗನ ಕರೆತಂದು
ವರ ಪೂಜೆಯನು ಮಾಡೆ ಬಲ್ಲದ್ಹೋದೆ
ಪರಪುರುಷನ ಕರೆದು ಬರೆದೆ ಎನಗೆ ಓಲೆ
ಭರದಿ ನೋಡಲು ಬಂದ ಭಂಡ ನಾನು
ಪರಮಮೂರ್ಖಳು ಎಂದು ತಿಳಿಯಲಿಲ್ಲ
ಬಡವರನು ಕಣ್ಣೆತ್ತಿ ನೋಡಲಿಲ್ಲ
ಗರುವಿ ಎಂದೆನುತ ಜನ ಪೇಳ್ವರಲ್ಲ
ವರದ ಗೋಪಾಲವಿಠಲ ಪೇಳಿದನೆ ಸೊಲ್ಲ ೧

ಅಂದ ಮಾತನು ಕೇಳಿ ನೊಂದು ರುಕ್ಮಿಣಿ ತಾನು
ಒಂದು ಮಾತಾಡಿದಳು ಸುಂದರಾಂಗಿ

ಕಂದರ್ಪ ಜನಕನೆ ಹಿಂದೆ ಆಡಿದ ಮಾತು
ಇಂದು ಮರೆತೆನ್ನನೆ ನಿಂದಿಸುವುದೆ
ಕ್ಷೀರಸಾಗರದಲ್ಲಿ ಆಲದೆಲೆಯ ಮೇಲೆ
ಬಾಲರೂಪದಿ ನೀನು ಮಲಗಿ ಇರಲು
ಬೇರೊಂದು ರೂಪದಲಿ ಬದಿಯಲ್ಲಿ ನಾ ಕುಳಿತು
ಬಹಳ ಮೃದುವಚನದಲಿ ಮಾತನಾಡಿ
ಭಕ್ತ ಭೀಷ್ಮಕನಿಗೆ ಪುತ್ರಿಯಾಗೆಂದೆನುತ
ಅಪ್ಪಣೆ ಕೊಡಲು ನಾ ಅಲ್ಲಿ ಜನಿಸಿ
ರುಕ್ಮಿಣಿ ಎನುತಲಿ ನಾಮಾಂಕಿತವ ಪಡೆದೆ
ಕೃಷ್ಣನೆ ಪತಿಯು ಆಗುವನು ಎಂದು
ಮಿಕ್ಕ ರಾಜರಿಗೆ ನಾ ತಕ್ಕವಳೆ ಪೇಳು
ಭಕ್ತವತ್ಸಲನೆ ನೀ ಕರುಣಿಸೆಂದು
ಸೃಷ್ಟಿಸ್ಥಿತಿಗಳಿಗೆ ನೀ ಕಾರಣನೆಂದು
ರಕ್ಷಿಸೊ ಗೋಪಾಲವಿಠಲನೆ ಬಂದು ೨

ಅಷ್ಟ ಲಕ್ಷ್ಮಿಯರೊಳು ಅಧಿಕಳು ನೀನೆಂದು
ವಕ್ಷಸ್ಥಳದೊಳಿಟ್ಟು ರಕ್ಷಿಸಿದೆನೆ
ಅಟ್ಟಿ ನಿನ್ನನುಜ ಬರೆ ಅವನ ಬಲವನು ಮುರಿದೆ
ಪಟ್ಟದರಸಿ ಎಂದು ನಿನ್ನ ತಂದೆ
ಕೊಟ್ಟಳು ದಾನವನು ಸುರಮುನಿಗೆ ಆ ಭಾಮೆ
ಶ್ರೇಷ್ಠಳನು ಮಾಡಿ ನಾ ಬಿಡಿಸಿಕೊಂಡೆ
ರೂಪು ಯೌವನದಿ ಮೆರೆವ ಭಾಮೆಗರ್ವವ ಮುರಿದೆ
ಸೀತೆ ರೂಪವ ಧರಿಸಿ ಕೀರ್ತಿ ತಂದೆ
ಗೋಕುಲದ ಸ್ತ್ರೀಯರಿಂದಧಿಕಳೆಂದು
ಕೋಪ ಬಿಡೆ ಹಾಸ್ಯವನು ನುಡಿದೆನೆಂದು
ಲೋಕಸೃಷ್ಟಿಸಲು ನೀ ಮಾಯೆ ಎಂದು
ಗೋಪಾಲವಿಠಲನು ಕೈಪಿಡಿದನೆ ಬಂದು ೩

ಎಷ್ಟು ಜನ್ಮದಿ ತಪವಗೈದೆನೊ ನಾ ಕಾಣೆ
ಅಚ್ಯುತಾನಂತಗೆ ಅರಸನಾದಿ ಸಪ್ತೆರಡು ಲೋಕಗಳ

ಕುಕ್ಷಿಯಲಿಟ್ಟು ಕಪಟ ಸೂತ್ರಧಾರಿಯಂತೆ ನಟಿಸುತಿರುವಿ
ಜಗದೀಶ ಅರೆಕ್ಷಣವು ಅಗಲದೆ ನಾ ನಿನ್ನ
ಉಗುರುಕೊನೆ ಮಹಿಮೆಯ ತಿಳಿಯದ್ಹೋದೆ
ನಿಮ್ಮ ನಾಭಿಲಿ ಪಡೆದ ಬ್ರಹ್ಮಬಲ್ಲನು ಮಹಿಮೆ
ನಿಮ್ಮ ಭಕ್ತನು ವಾಯು ಬಲ್ಲನಿದನು
ಸರಸ್ವತಿ ಭಾರತಿ ಗರುಡ ಶೇಷ ರುದ್ರ
ಸುರಪತಿಯು ಮುಖ್ಯ ದೇವತೆಗಳೆಲ್ಲ
ತೃಣ ಜೀವ ಮೊದಲು ಕಮಲಜನವರೆಗೂ
ಎಣಿಸಲಾರರು ಈಗ ನಿಮ್ಮ ಗುಣವ
ಘನಮಹಿಮ ಗೋಪಾಲವಿಠಲ ವಂದಿಸುವೆ ೪

೧೫೯

ಸುಳಾದಿ

ಧ್ರುವತಾಳ

ಒಬ್ಬನೆ ಪೋಪನೆಂದು ಆಡಲ್ಯಾತಕೆ ಮನುಜ
ಒಬ್ಬ ನಾನಹುದೆ ನೋಡಿ ಎಲ್ಲ್ಯಾದರು
ಒಬ್ಬೊಬ್ಬರೊಳಗೆ ಅನಂತ ಜನರಿಪ್ಪರು
ಹಬ್ಬಿಕೊಂಡಿಪ್ಪರು ಪರಸ್ಪರ ಭೇದವಾಗಿ
ತಬ್ಬಿಬ್ಬುಗೊಂಬರಲ್ಲ ಬಹು ಕುಶಲರು
ಒಬ್ಬನ ಕರ್ಮವಿನ್ನು ಅನಂತ ಜನರ ಕರ್ಮ
ಒಬ್ಬನ ಕರ್ಮಕನಂತ ಜನರ ಸಹಾಯ
ತುಂಬಿದ್ದ ಪಟ್ಟಣದೊಳುಳ್ಳಿಯ ಮಾರುವಂತೆ
ಒಬ್ಬ ನಾ ಯಃಕಶ್ಚಿತ ಬಿದ್ದಿಹೆನೊ
ಒಬ್ಬನೆ ಈ ದೇಹಕ್ಕೆ ಕರ್ತನೆಂದರೆ ಸೌಖ್ಯ
ಗುಬ್ಬಿ ಕೊರಳಿನಲ್ಲಿ ಗೋದಿಕಲ್ಲು ಕಟ್ಟಿದಂತೆ
ಉಬ್ಬಸವಲ್ಲದೆ ಉರುಳುವ ನಿರಯದಿ
ಗರ್ಭಧಾರಣ ಮರಣ ಬಿಡಲರಿಯವು

ಕಬ್ಬುಬಿಲ್ಲನಜನಕ ಗೋಪಾಲವಿಠಲನಂಘ್ರಿ
ಅಬ್ಜ ಎಂಬೋದು ಕಾಣ ಅವನೆಂದೆಂದು ೧

ಮಠ್ಯತಾಳ

ಜನಕನಲ್ಲಿಗೆ ಬಾಹನಾಗ ಒಬ್ಬನಲ್ಲ
ಜನನಿಯ ಜಠರದಿಂದ ಜನಿಸಲೊಬ್ಬನಲ್ಲ
ಜನನಾನಂತರದಿ ಒಬ್ಬ ನಂಬುವದಲ್ಲ
ತನು ನಾಶವಾಗೆ ಒಬ್ಬ ನಂಬುವದಲ್ಲ
ತನು ಸಂಬಂಧಿಗಳು ತೊಲಗೆ ಒಬ್ಬನಲ್ಲ
ತನುವು ತನ್ನದಲ್ಲ ತನುವಿಗೆ ತಾನಲ್ಲ
ಅನುವಾಗಿ ಇದ್ದರೆ ಆಪ್ತರು ಸರ್ವರು
ಕನಸಿನಂದದಿ ಕಾಣೊ ಕಂಡದ್ದು ಎಲ್ಲವು
ಮನಸು ಮಾಡಬೇಡ ಮಮತೆ ಇವುಗಳಲ್ಲಿ
ನಸುಜಾಗರ ಸುಪ್ತಿ ಘನ ಪಾತಾಳ ಸ್ವರ್ಗ
ಜನರಹಿತ ಸ್ಥಾನ ವನ ಕಾನನಗಳಲ್ಲಿ
ನಿನಗೆ ಗೆಳೆಯನಾಗಿ ಗೋಪಾಲವಿಠಲ
ಅನಿಮಿತ್ತ ಬಾಂಧವನಾಗಿ ಕ್ಷಣ ಬಿಡದಲೆ ೨

ರೂಪಕತಾಳ

ಇಷ್ಟು ಮಂದ್ಯಾಡಿಸಲು ಆಡುವಿ ವಚನಗಳು
ಸ್ಪಷ್ಟವಾಗಿ ನೋಡು ನಿನ್ನೊಳಗೆ
ಎಷ್ಟು ಮಂದಿ ಆಡಿ ಇಟ್ಟರೆ ನೀ ಇಡುವಿ
ಗಟ್ಯಾಗಿ ನೋಡು ಚಲನಿಲ್ಲದೆ
ಎಷ್ಟು ಮಂದಿ ಯೋಚಿಸಲು ನೀ ಯೋಚಿಸುವಿ
ನಿಷ್ಠೆಯಿಂದಲಿ ತಿಳಿಯೊ ನಿನ್ನೊಳಗೆ
ಕಟ್ಟಿಗೆ ಸಾದೃಶ್ಯ ಕಾಣೊ ನೀ ಇವರೆಲ್ಲ
ಚೇಷ್ಟ ಮಾಡಿಸದೆ ಸುಮ್ಮನಿರಲು
ಇಷ್ಟರು ಬಹುಮಂದಿ ಉಂಟು ನಿನ್ನೊಳಗೆ
ಇಷ್ಟಾನಿಷ್ಟ ಕ್ರಿಯ ಇವರಿಗೆ ಪ್ರೇರಕನಾಗಿ
ಇಷ್ಟನಾಗಿ ಗೋಪಾಲವಿಠಲನೆ ಮಾಡಿಪ ೩

ಝಂಪೆತಾಳ

ವಾಸುದೇವನಾಗಿ ಒಳಗಿದ್ದು ತಾ ಹೃಷಿ-
ಕೇಶನಾಗಿ ಇಂದ್ರಿಯಂಗಳಿಗೆ ಪ್ರೇರಕನು ಹ-
ಯಾಸ್ಯನಾಗಿ ಒಳಗೆ ಜ್ಞಾನಪುಟ್ಟಿಸುವ ಮಹಿ-
ದಾಸನಾಗಿ ವಿಷಯವಿರಕುತಿನೀವ
ವ್ಯಾಸನಾಗಿ ಉಪದೇಶಗಳ ಮಾಳ್ಪ
ಪೋಷಕನಾಗಿಹ ಪ್ರದ್ಯುಮ್ನನಾಗಿನ್ನು
ಬೇಸರದೆ ಸೃಜಿಸುವ ಸಂಕರುಷಣನಾಗಿ
ಮೋಸಗೊಡ ಜ್ಞಾನಮತ್ಸ್ಯನಾಗಿ ಒಳಗಿದ್ದು
ಬೇಸರದೆ ಹೊರುವ ಕೂರ್ಮನಾಗಿ
ಕ್ಲೇಶಗಳ ಪರಿಹರಿಪ ಒಳಗೆ ವರಾಹನಾಗಿ
ದ್ವೇಷಪುಟ್ಟಿಸುವ ದೈತ್ಯರ ಮೇಲೆ ನರಸಿಂಹ
ಕಾಸುಕಾಸಿಗೆ ಕೂಡಿಹಾಕಿಸುವ ವಾಮನ
ಭೂಸುರರಿಗೆ ತ್ಯಾಗ ಮಾಡಿಸುವ ಭಾರ್ಗವ
ವಾಸ ಮಾಡುವ ಬುದ್ಧಿನೀವ ಒಳಗೆ ರಾಮ
ಮೀಸಲಭೋಗಗಳು ಕೊಂಬ ಮನಸಿಗೆ ಕೃಷ್ಣ
ನಾಶಮಾಡುವ ಪರರ ಮೋಹಿಸುವ ಬೌದ್ಧ
ದೇಶಗಳು ತಿರುಗುವಾಗ ಮನಕೊಡುವ ಒಳಗೆ ಕಲ್ಕಿ
ಬೇಸರದೆ ಬಹುರೂಪನಾಗಿ ಗೋಪಾಲವಿಠಲ
ಪೋಷಿಸುವ ನಿರ್ವ್ಯಾಜದಿಂದ ನಿತ್ಯ ೪

ತ್ರಿಪುಟತಾಳ

ವರುಣ ಪ್ರತಿಪಾದ್ಯ ಐವತ್ತೊಂದು
ಇರುವು ನಿಯಾಮಕ ಕೇಶವಾದಿಗಳು
ಎರಡೊಂದು ಅವಸ್ಥಾಪ್ರದ ಮೂರ್ತಿಗಳು
ಎರಡೊಂದು ವರ್ಣ ಮೂರ್ತಿಗಳು ಇನ್ನು
ಪರಿಪರಿ ಕೃದ್ಧೋಲ್ಕ ಆತ್ಮಾದಿ ಮೂರ್ತಿಗಳು
ಎರಗಿ ರೋಮ ರೋಮ ತುಂಬಿಹ ಮೂರ್ತಿಗಳು

ಹೊರಗೆ ಒಳಗೆ ವ್ಯಾಪ್ತ ಗೋಪಾಲವಿಠಲ
ತಿರುಗುವ ಎಮ್ಮೊಡನೆ ಪರಿ ಪರಿ ರೂಪನಾಗಿ ೫

ಅಟ್ಟತಾಳ

ಏಕ ಮೂರುತಿ ಚತುರ ಮೂರುತಿ
ಏಕ ಸಪುತ ಮೂರುತಿ ಏಕದಶ ಮೂರುತಿ
ಏಕ ಶತ ಮೂರುತಿ ಏಕಷ್ಟ ಮೂರುತಿ
ಏಕ ಸಾಸಿರ ಮೂರುತಿ
ಏಕಾಧಿಕ ಎಪ್ಪತ್ತೊಂದು ಸಾವಿರ ಮೂರುತಿ
ಏಕ ಅಷ್ಟಕೋಟಿ ರೂಪನಾಗಿಪ್ಪ ಮೂರುತಿ
ಏಕಾರ್ಣವದಲ್ಲಿ ಏಕಮೇವನದ್ವಿತೀಯ ಮೂರುತಿ
ಈಕಡ್ಯಾಕಡೆ ಸವ್ಯಾಪಸವ್ಯ ಮೂರುತಿ
ಸಾಕಾರ ಮೂರುತಿಗಳು ಸರ್ವಜ್ಞ ಪರಿಪೂರ್ಣ
ಸಾಕುವ ಸರ್ವತ್ರ ಗೋಪಾಲವಿಠಲನಿರೆ
ನಾ ಕಾಣೆ ಎನಗಿನ್ನು ಏಕಾಂತವೆಂಬುದು ೬

ಜತೆ*

೧೬೦

ಕಾಯೋ ಶ್ರೀ ನಾರಸಿಂಹ ಕಾಯೋ ಪ.

ಕಾಯೋ ಶ್ರೀನಾರಸಿಂಹ ತ್ರಿಯಂಬಕಾದ್ಯಮರೇಶ
ಭಯ ಅಂಧಂತಿಮಿರ ಮಾರ್ತಾಂಡ ಶ್ರೀನಾರಸಿಂಹ ಅ.ಪ.

ಘೋರ ಅಕಾಲಮೃತ್ಯು ಮೀರಿಬರಲು ಕಂಡು
ಧೀರ ನೀ ಬಿಡಿಸದಿನ್ಯಾರೊ ಶ್ರೀನಾರಸಿಂಹ ೧

* ಜತೆ ಸಿಕ್ಕಿಲ್ಲ

ಭೀಷಣನೆ ಸುಭದ್ರ ದೋಷ ಮೃತ್ಯುಗೆ ಮೃತ್ಯು
ಸುಷುಮ್ನಾನಾಡಿಸ್ಥಿತವಿಭುವೆ ಶ್ರೀನಾರಸಿಂಹ ೨

ಜ್ಞಾನರಹಿತನಾಗಿ ನಾ ನಿನ್ನ ಮರೆತರೆ
ನೀನೂ ಮರೆತದ್ಯಾಕೆ ಪೇಳೊ ಶ್ರೀನಾರಸಿಂಹ ೩

ಪ್ರಬಲೋತ್ತಮನೆನಿಸಿ ಅಬಲರ ಕಾಯದಿರೆ
ಸುಬಲರು ಕಂಡು ಮೆಚ್ಚುವರೆ ಶ್ರೀನಾರಸಿಂಹ ೪

ಪಾಲಮುನ್ನೀರಾಗರ ಪದುಮೆ ಮನೋಹರ ಗೋ-
ಪಾಲವಿಠಲ ಜಗತ್ಪಾಲ ಶ್ರೀನಾರಸಿಂಹ ೫

೧೬೧

ಉಗಾಭೋಗ

ಕ್ಷೀರಸಾಗರ ಬಿಟ್ಟು ಲವಣ ಸಾಗರದಲ್ಲಿ
ಮನೆಯ ಕಟ್ಟುವರೇನೊ
ಉತ್ತಮ ತ್ರಿಧಾಮವ ಬಿಟ್ಟು ಮರ್ತ್ಯಲೋಕದಲ್ಲಿ
ಬಂದು ಪುಟ್ಟುವರೇನೊ
ನಿತ್ಯ ಸರ್ವಜ್ಞ ಪ್ರಕಾಶ ಮತ್ತೆ ಯಾದವರ ಕೂಡಿ ಆಡುವುದೇನೊ
ನಿತ್ಯತೃಪ್ತನು ನೀನು ಮುಕ್ತರೊಡೆಯ ರಂಗ
ಮತ್ತೆ ವಿದುರನ ಮನೆಯ ಪಾಲ್ಕುಡಿವರೇನೊ
ಸತ್ಯಸಂಕಲ್ಪ ಗೋಪಾಲವಿಠಲ ನಿನ್ನ
ಕೃತ್ಯಕೊಂದನಂತಾನಂತ ನಮೋ ನಮೋ ಎಂಬೆ

೧೬೨

ಜಯತು ಜಗದಾಧಾರ ಜಯತು ದೋಷ ವಿದೂರ
ಜಯತು ಸಿರಿರಂಗ ಎನ್ನಂತರಂಗ

ಸುಂದರಮಕುಟ ಮುತ್ತಿನ ಚೆಲ್ಲೆದುರುಬು
ಅರವಿಂದ ಮುಖನಯನ ಕಸ್ತೂರಿ ತಿಲಕ ೧

ಕುಂದಕುಟ್ಮಲದಂತೆ ವದನ ಮಂದಹಾಸ
ಚೆಂದದ ಕರ್ಣಕುಂಡಲದ ಪ್ರಭೆಯ
ಕಂದರದಿ ಕಂಬುಗ್ರೀವ ಭುಜಕೀರ್ತಿ ತೋಳ
ಬಂದಿ ಹಸ್ತದಿ ಕಡೆ ಕಂಕಣ ೨

ಇಂದಿರಾಲಯವಕ್ಷ ತುಲಸಿಮಾಲೆ ಸಿರಿ
ಗಂಧಕೌಂಸ್ತುಭಾಭರಣ ಭೂಷಿತ
ಗುಂಭ ಸುಳಿಪೊಕ್ಕುಳ ಉದರ ತ್ರಿವಳಿಯು ಪೀ–
ತಾಂಬರ ಕಟಿಯ ಒಡ್ಯಾಣ ಚೆಲುವ ೩

ಸ್ತಂಭ ಉರುಟು ಕದಳಿ ಊರು ಜಾನುಜಂಘೆ
ಗಂಭೀರ ಚರಣದಂದಿಗೆಯ ನಾದ
ಗೋಪಿಯರ ಪೂರ್ವದ ನೋಂಪಿ ಪುಣ್ಯದ ಫಲವು
ತಾ ಪ್ರೇಮದಿಂದ ಪೂರೈಪೆನೆಂದು ೪

ಶ್ರೀಪತಿ ಅನೇಕರೂಪನಾಗಿ ನಿಂದು
ಗೋಪತಿ ರಾಸಕ್ರೀಡೆಗೆ ತೊಡಗಿದ
ಮಧುಕುಂಜವನದಲ್ಲಿ ಚದುರೆಯರ
ಬೆರೆದಿನ್ನು ಮದನನಯ್ಯನು ನಿಂದ ಮಂಡಲಾಕಾರ ೫

ಇಂದೀವರಾಕ್ಷಿಯರ ಮನದ ಹದನವನರಿತುಕೊಳ್ಳಲು
ವಿಧಿಸಿ ಊದಿದನಾಗ ವಿಧಿಯ ಜನಕ
ಕೆಳದಿಯರ ಮುಖ ವಿಕಸಿಸಿ ಕಳೆಯುಕ್ಕಿ ಕೃಷ್ಣ
ತಮ್ಮೊಳಗಾದನೆಂದು ತಿಳಿದರು ಹರುಷದಿ ೬

ಬಳಿಯಲೊಬ್ಬಳನೆ ನಿಲಿಸಿ ಹೆಗಲಲ್ಲಿ ಕರವ ಹಾಕಿ
ಕುಣಿಯ ಕುಳಿತ ಕೃಷ್ಣನು

ಲಲನೆಯರ ಕರತಳದಲ್ಲಿ ಕರವನು ಇಟ್ಟು
ನಿಲಿಸಿ ಪಾಡುತ ಸರಿಗಮದಿಂದಲಿ ೭

ಕುಳದಲ್ಲಿ (?) ಕೃಷ್ಣನ ಸ್ಥಳದಲ್ಲಿ ಹೆಜ್ಜೆಯೊಳು
ನಿಲಿಸಿ ನಿಲಿಸಿ ಕೃಷ್ಣನಲಿ ಆಡೋರು
ಮಲಕು ಬಿಡಿಸುವ ಹಾರ ತುಡುಕುವನು
ಕುಚಗಳ ಸಲಿಸುವನು ಅವರವರ ಚೆಂದುಟಿಗಳ ೮

ಘಲಕು ಘಲಕು ತಾಳಗತಿಗಳಿಂದಲಿ ಸುತ್ತಿ
ತಳಕ್ಹಾಕಿ ಅಂಗನಾಮಾಂಗನೆಂದು
ನಿಲಿಸದೆ ಆಡುವ ಕಳೆಯುಕ್ಕಿ ಅಂಬರದಿ
ನಿಲಿಸಿ ಅಜಭವಸುರರು ನೋಳ್ಪರು ೯

ದುಂದುಭಿವಾದ್ಯ ತಮ್ಮಿಂದ ತಾಂ ಬಾರಿಪವು
ಗಂಧರ್ವರು ಗಾಯನ ಮಾಡೆ
ಮಂದಾರ ಮಲ್ಲಿಗೆಯ ತಂದು ಪುಷ್ಪವ ಸುರರು
ಚೆಂದದಿಂದಲಿ ವೃಷ್ಟಿಯಗರೆದರು ೧೦

ಒಂದೊಂದು ದೋಷದಿಂದಿನ್ನು ಅಜಭವಸುರರು
ತಂದು ಇಡುವರು ಉಡುಗೊರೆಗಳೆಲ್ಲ
ಇಂದುಮುಖಿಯರ ಮನದ ಆನಂದ ಪೂರ್ತಿಸಿದ
ಚೆಂದ ಚೆಂದದಲಿನ್ನು ಇಂದಿರೇಶ ೧೧

ಶರಣು ಕರುಣಾನಿಧಿಯೆ ಶರಣು ಗುಣವಾರಿಧಿಯೆ
ಶರಣು ಭಕ್ತಜನರ ಶಿರೋಮಣಿಯೆ
ಶರಣು ನಾ ನಿನ್ನ ನಿಜ ಚರಣ ಸೇವಕನು
ಶರಣು ಗೋವಳ ಗೋಪಿಯರ ಪಾಲಕ ೧೨

ರಾಸಕ್ರೀಡೆಯಲಿ ತೋರಿಸಿದ ಗೋಪಿಯರ ಅಭಿ-
ಲಾಷೆ ಪೂರ್ತಿಸಿದ ಭಾಸುರಮೂರುತಿ

ಪೋಷಿಸು ಎನ್ನ ಗೋಪಾಲವಿಠಲ ವಿಜಯ
ದಾಸರಾಸರದಲ್ಲಿ ಇಟ್ಟು ಎನ್ನ ೧೩

೧೬೩

ಸುಳಾದಿ

ಧ್ರುವತಾಳ

ತರಣಿ ಕುಲೋತ್ಪನ್ನ ತಪುತ ಕಾಂಚನವರ್ಣ
ಪರಮ ಮಂಗಳಮೂರ್ತಿ ಪಾವನ್ನ ಸುಕೀರ್ತಿ
ಕ್ಷರ ಅಕ್ಷರದಿಂದ ವಂದಿತ ವ್ಯಾಪುತ
ಶರಣ ಜನರ ಪಾಲ ಶತ ಆನಂದ ಜನಕ
ಪರಿಪೂರ್ಣ ಗುಣಭರಿತ ವರಜ್ಞಾನ ಪ್ರದಾತ
ಅರಿತು ಫಲವ ತ್ರಿವಿಧರಿಗೆ ಇಪ್ಪುವ ದಾತ
ಧರೆ ಈರೇಳು ರಕ್ಷಕ ಧರ್ಮ ಪ್ರತಿಪಾಲಕ
ಸರಿಯಿಲ್ಲದ ದೇವ ಸರ್ವೋತ್ತಮ
ದುರುಳ ಜನಮರ್ದನ ದುಃಖಾದಿಗಳ ದೂರ
ತರುಣಿಯಿಂದ ಬೆರೆದು ವರಗಳನೀವುತ
ನಿರುತದಿ ನಮ್ಮ ವಸುಧೇಂದ್ರ ಮುನಿಯ ಚೆಲ್ವ
ಕರಕಮಲದಲಿ ನಿಂದು ಮೆರೆವ ದಾತ
ಪರಮದಯಾಳು ರಾಮ ಗೋಪಾಲವಿಠಲ ನಿನ್ನ
ದರುಶನವೆ ಇಂದಿನ ದಿನವೆ ಸುದಿನವು ೧

ಮಠ್ಯತಾಳ

ಆದಿಯಲ್ಲಿ ಆದರದಲ್ಲಿ ನಿನ್ನ ಮೋದದಿ ಅರ್ಚಿಸಿ
ಸಾಧಿಸಿ ಪದವಿಯ ಐದುವ ಧರೆಗೆ
ಸಾಧು ಜೀವರ ಪೊರೆಯೆ ಕ್ರೋಧರಹಿತ ನಿನ್ನ

ಮೇದಿನಿಯೊಳಗಿಟ್ಟು ಹಾದಿಯ ತೋರಿದ ಅಜನು ನಿನ್ನ
ಪಾದಸೇವೆಯ ಶೋಧಿಸಿ ಮಾಳ್ಪರಿಗೆ
ಬಾಧೆ ಗೆಲಿಸುವುದು ಜನನ ಮರಣಗಳ
ಪಾದ ಸೋಕಿದ ಶಿಲೆಯ ಪಾವನ್ನ ಮಾಡಿದ
ಶ್ರೀಧರ ರಾಮ ಗೋಪಾಲವಿಠಲ
ವಾದೇಂದ್ರಸುತರಿಗೊಲಿದು ಮೆರೆವ ಪ್ರೀತ ೨

ರೂಪಕತಾಳ

ಚೆಂದದಿ ಬೊಮ್ಮ ರುದ್ರ ಇಂದ್ರಾದಿಗಳು
ಕುಂದದೆ ಸುರಋಷಿ ಗಂಧರ್ವಾದಿಗಳು
ಒಂದೊಂದಂಶದಿಂದ ಬಂದು ನಿನ್ನರ್ಚಿಸಿ
ಮಂದ ಬುದ್ಧಿಗಳುಳ್ಳ ಜಗವ ಪಾಲಿಸುವರು
ಮಂದಮತಿಗಳು ಇವರ ಮನುಜರೆಂದರಿದರೆ
ಪೊಂದುವರು ಮಹದಾದಿ ನಿರಯದಲ್ಲಿ
ಸಂದರುಶನದಿಂದೆ ಸಕಲ ದೋಷ ದೂರ
ಇಂದಿರೆ ಅರಸನು ಇಪ್ಪುವ ಇವರಲ್ಲಿ
ಬಂದ ಬಂದವರ ಅಭೀಷ್ಟವ ಪೂರೈಸಿ
ನಿಂದು ಮೆರೆವ ವಸುಧೇಂದ್ರಮುನಿಯ ಮನ-
ಮಂದಿರದೊಳೊಪ್ಪುವ ರಾಮ ಗೋಪಾಲವಿಠಲ
ಬಂಧಕ ಮೋಚಕ ಮಾಳ್ಪ ಶಕ್ತ ೩

ಝಂಪೆತಾಳ

ನಿನ್ನ ನಾಮ ಒಮ್ಮೆ ಸ್ಮರಿಸಿದಡಾಯಿತೆ
ಘನ್ನ ದುರಿತಗಳೆಲ್ಲ ದೂರಾಗಿ ಪೋಗುವುವು
ನಿನ್ನ ಮೂರುತಿ ಒಮ್ಮೆ ನೋಡಿದಡಾಯಿತೆ
ಜನುಮಾದಿಗಳು ಜಡಕ್ಲೇಶಗಳು ತರಿವುವು
ನಿನ್ನ ಅವಯವಂಗಳು ಎಲ್ಲಿ ನೋಡಲು ಪೂರ್ಣ
ನಿನ್ನ ಬಳಿಯಲ್ಲಿ ಸಕಲಾದಿ ತೀರ್ಥಂಗಳುಂಟು

ನಿನ್ನ ಓಲೈಸುತ್ತ ಸುರರಿಪ್ಪುವರು
ಘನ್ನ ಮಹಾಮಹಿಮ ಮೂಲರಾಮ
ನಿನ್ನ ಪರಿವಾರಸಹಿತ ಎನ್ನ ಗುರು ವಸುಧೇಂದ್ರ
ಮುನ್ನೆ ನಿನ್ನರ್ಚಿಸುವ ಭಾಗ್ಯವೆಂತೊ
ಚಿನುಮಯಮೂರುತಿ ಗೋಪಾಲವಿಠಲ
ನಿನ್ನ ಭಕುತರು ನಿನ್ನ ಮಹಿಮೆಗೆ ನಮೋ ೪

ತ್ರಿಪುಟತಾಳ

ಶರಣರ ಪಾಲಕ ದುರುಳರ ಶಿಕ್ಷಕ
ಶರಣು ಶರಣು ನಿನ್ನ ಚರಣ ಕಮಲಕೆ
ಪರಮಪಾವನನಾಮ ಪರಿಪೂರ್ಣಗುಣಕಾಮ
ಸ್ಥಿರಯೋಗಿಗಳರಸ ಸ್ಥಿರಜೀವಿಯೊ
ದುರಿತಗಿರಿಗೆ ಕುಲಿಶ ದೂರ ಅತಿದೂರ
ಚರಣದಂದುಗೆ ಗೆಜ್ಜೆ ವರ ಜಾನು ಜಂಘೆ ಕಟಿ-
ಕರ ಮೇಲೆ ಒಲಿವ ಕಿಂಕಿಣಿಯ ಗಂಟೆ
ಪರಮಶೋಭಿತದ ಉದರ ವಕ್ಷಕೌಂಸ್ತುಭ
ಕೊರಳಪದಕ ನಾನಾ ಸರಗಳಿಂದೊಪ್ಪುತ
ಸಿರಿಗಂಧ ಕಸ್ತೂರಿ ಪರಿಮಳಭೂಷಿತ
ವರ ಸಾರಂಗಪಾಣಿ ಕರ್ನಕುಂಡಲಧರ
ಸರಸಿಜನಯನ ಸಿರಿಕಿರೀಟಧರ
ಸ್ವರೂಪಾಲಂಕಾರದಿಂದೊಪ್ಪುವ ಶ್ರೀರಾಮ
ಪರಮಶೋಭಿತನಾಮ ಗೋಪಾಲವಿಠಲ
ನಿರುತ ವಸುಧೇಂದ್ರ ಮುನಿಯ ಮನದಿ ವಾಸ ೫

ಅಟ್ಟತಾಳ

ನಿತ್ಯ ಅನಿತ್ಯ ಜಡದಲಿಪ್ಪುವನು ನೀನೆ
ವ್ಯಕ್ತ ಅವ್ಯಕ್ತನಾಗಿದ್ದು ಈ ಧರೆಯ
ಭಕ್ತರುಗಳಿಗೆ ನೀ ಬಲ್ಲಂತೆ ತೋರುತ್ತ

ಮರ್ತ್ಯಲೋಕದಿ ಬಂದು ಈ ಪ್ರತಿಮೆ
ಅಂತರ್ಗತನಾಗಿ ಇದ್ದು ನಿತ್ಯ ಉತ್ಸವಗಳು
ಭಕ್ತರಿಂದಲಿ ಕೊಂಡು ಬಹು ಧರ್ಮದಿಂದಲಿ
ನಿತ್ಯ ವಸುಧೇಂದ್ರ ಹೃತ್ಕಮಲದಿ
ತತ್ತಳಿಸುತ್ತ ಮೆರೆವ ಸಿರಿರಾಮ
ಮುಕ್ತಿಪ್ರದಾಯಕ ಗೋಪಾಲವಿಠಲ
ಚಿತ್ತಶುದ್ಧನ ಮಾಡು ಭಕ್ತಿಜ್ಞಾನವ ನೀಡು ೬

ಆದಿತಾಳ

ದುರಿತದೂರ ದುಃಖನಾಶ
ಕರುಣಾಕರ ಕಪಟರಹಿತ
ಶರಣಪಾಲ ಸಿರಿಯರಸ
ಗರುಡಗಮನ ಗರ್ವರಹಿತ
ಸರಸಿಜಾಕ್ಷ ಸರ್ವೋತ್ತಮ
ಸಾರಭೋಕ್ತ ಸರ್ವವ್ಯಾಪ್ತ
ಕಾರಣನೆ ಕರ್ಮರಹಿತ
ಭಾರಕರ್ತ ಭಯ ನಿವಾರಣ
ತಾರಕನೆ ತ್ರಿಗುಣದೂರ
ಮಾರನಯ್ಯ ಮಧುಸೂದನ
ಮಾರುತೀಶ ಮಾಯಾರಹಿತ
ಜಾರಚೋರ ಜನ್ಮರಹಿತ
ಧೀರ ಶೂರ ದಿವ್ಯವಿಗ್ರಹ
ಪರಮಪುಣ್ಯ ಪರಿಪೂರ್ಣ
ಸುರಾದಿ ವಿನುತ ಗೋಪಾಲವಿಠಲ
ಗುರು ವಸುಧೇಂದ್ರ ಮುನಿಯ ಈಶ ೭

ಜತೆ

ಗುರು ವಸುಧೇಂದ್ರರದ ಕರಕಮಲದೊಳು ತೋರ್ಪ
ಸಿರಿರಾಮ ಗೋಪಾಲವಿಠಲ ಶರಣು ಶರಣು

೧೬೪

ನಿನ್ನ ಇರುಳಿನಲಿ ಚೆನ್ನಿಗ ಪುರುಷನು
ಎನ್ನ ಮಂದಿರಕೆ ಬಂದಿರುವ ಇವನ್ಯಾರೆ ಅವ್ವ ಪ.

ಕಣ್ಣು ಬಿಡುತಲೆ ಬೆನ್ನೊಳಗಡಗಿಸಿ
ತನ್ನ ಮೋರೆತ್ತಿ ನೋಡನೆ ಬಾಯಾರಿಹನೆ
ಮಣ್ಣು ನಲುವುತಾನೆ ತನ್ನೊಳು ಕಾದಿ ಉಣದೆ
ಹೆಣ್ಣುಗಳನೆ ಮೋಹಿಸುವ ಹಯನೇರಿ ಮೆರೆವ ೧

ಜಲವ ಬಿಟ್ಟರೆ ಸತತ ನೆಲನೆ ಕೆದರುತಲಿಪ್ಪ
ಪಲ್ಗಿರಿದು ದಾನವ ಬೇಡುವ ಪೆತ್ತವಳನೆ ಜರಿವ
ಶಿಲೆಯ ಮಾತಾಡಿಸುವ ಕೊಳಲೂದಿ ಕೃತ್ಯವೇದ
ಹಳಿವ ಹಗೆಗಳನೆ ಸದೆಬಡಿವ ಹಯನೇರಿ ಮೆರೆವ ೨

ಚರಣ ರೋಮಗಳಿಲ್ಲ ಮಗನ ಮೂಗಿಲೆ ಬಂದ
ಎರಡು ರೂಪದಿ ಬಾಲಕ ಬಾಹುಜಕುಲಗೊಯ್ಕ
ಅರಸಾಗಿ ಗೋಪಾಲವಿಠಲ ಮೋಹಖಳರ ತರಿವ
ತನ್ನಾಳಾಗನೆ ಪಾರವ ಹಯನೇರಿ ಮೆರೆವ ೩

೧೬೫

ಸುಳಾದಿ

ಧ್ರುವತಾಳ

ನೀನೆ ಏನೋ ವಿಠಲ ನಿಗಮವ ತಂದವನು
ನೀನೆ ಏನೋ ವಿಠಲ ನಗವನ್ನು ಪೊತ್ತವನು
ನೀನೆ ಏನೋ ವಿಠಲ ವರಾಹ ರೂಪನಾದವ

ನೀನೆ ಏನೋ ವಿಠಲ ನರಮೃಗ ರೂಪಾದದ್ದು
ನೀನೆ ಏನೋ ವಿಠಲ ವಟುರೂಪ ತಾಳಿದವ
ನೀನೆ ಏನೋ ವಿಠಲ ಪರಶುವ ಪಿಡಿದವ
ನೀನೆ ಏನೋ ವಿಠಲ ಶಿಲೆಯನ್ನುದ್ಧರಿಸಿದವ
ನೀನೆ ಏನೋ ವಿಠಲ ಪಾಂಡವರ ಕಾಯ್ದವ
ನೀನೆ ಏನೋ ವಿಠಲ ಬೌದ್ಧರೂಪನಾದದ್ದು
ನೀನೆ ಏನೋ ವಿಠಲ ತುರಗವನೇರಿದವ
ನೀನೆ ಏನೋ ವಿಠಲ ಚತುರಮೂರ್ತಿ ಆದವ
ನೀನೆ ಏನೋ ವಿಠಲ ಅಷ್ಟಮೂರ್ತಿ ಆದವ
ನೀನೆ ಏನೋ ವಿಠಲ ಕೇಶವಾದಿ ಆದವ
ನೀನೆ ಏನೋ ವಿಠಲ ಅಜಾದಿ ಮೂರ್ತ್ಯಾದವ
ನೀನೆ ಏನೋ ವಿಠಲ ವಿಶ್ವಮೂರ್ತಿ ಆದವ
ನೀನೆ ಏನೋ ವಿಠಲ ಅನಂತಾನಂತರೂಪ
ನೀನೆ ಏನೋ ವಿಠಲ ಸಿರಿ ಅಜಭವರಿಂದ
ನಾನಾಕು ಪರಿಯಲ್ಲಿ ಸೇವೆಯ ಕೊಂಬುವನೆ
ನೀನೆ ಏನೋ ವಿಠಲ ಆತ್ಮ ಅಂತರಾತ್ಮ
ಕಾಣಿಸುವೆ ಎನ್ನಲ್ಲಿ ಅನಂತ ಒಂದೆ ಆಗಿ
ಖೂನ ಪಿಡಿದು ಬಿಡೆ ಎಂದಿನವನೆ ನಾನು
ಏನೋ ಈಗ ನೋಡಲು ಆರೊ ಅಂಬಂಥ ವಿಧಿ
ಜಾಣ ಚೆನ್ನಿಗರಾಯ ಗೋಪಾಲವಿಠಲ
ಪ್ರಾಣದೊಲ್ಲಭ ನಿನ್ನ ಕಾಣದೆ ನಿಲ್ಲಲಾರೆ ೧

ಮಠ್ಯತಾಳ

ಆವ ನಿನ್ನ ಶಿರವು ಅಂತಿಯ ತೋರದು
ಆವ ನಿನ್ನ ನಯನ ಅಂತಿಯ ತೋರದು
ಆವ ನಿನ್ನ ಮುಖ ಅಂತಿಯ ತೋರದು
ಆವ ನಿನ್ನ ಕರಗಳಂತಿಯ ತೋರದು
ಆವ ನಿನ್ನ ಅವಯವಂಗಳಿಗೆ ಅಂತ್ಯವಿಲ್ಲ
ಆವ ನಿನ್ನ ಪಾದಂಗಳಿಗೆ ಅಂತಿಯಿಲ್ಲ

ದೇವ ನಿನ್ನ ಆವ ಅವಯವಕೆಲ್ಲ ಪೂರ್ಣ
ಆವ ದಿಕ್ಕು ನೋಡಲಿ ನಿನ್ನ ನೋಟವ್ಯಾಪ್ತಿ
ಧಾವತಿಯು ಇಲ್ಲ ಆವಲ್ಲಿ ನಿನಗೆ
ಕಾವು ಬಹಳ ಭಕುತರನ್ನ ಪಾಲಿಪಲ್ಲಿ
ದೇವ ಬಾರೊ ಗೋವಳರಾಯ ನಿನಗೆ
ಆವ ತಂದೆ ಕಾಣೊ ಆವ ತಾಯಿ ನಿನಗೆ
ಜೀವ ಜಡಭಿನ್ನ ಗೋಪಾಲವಿಠಲ
ದೇವ ನಿನ್ನ ಚರಿಯ ಕೋವಿದರಿಗೆ ಪ್ರಿಯ ೨

ರೂಪಕತಾಳ

ನಿನ್ನ ಕರುಣದಿಂದೆ ಎನ್ನ ಸೃಷ್ಟಿಸಿದ್ದು
ನಿನ್ನ ಕರುಣದಿಂದೆ ಎನ್ನ ಪಾಲಿಸುವುದು
ನಿನ್ನ ಕರುಣದಿಂದೇ ದೇಹ ವಿಯೋಗವು
ನಿನ್ನ ಕರುಣದಿಂದೆ ಎನ್ನ ಬಾಳುವೆ ಬದುಕು
ನಿನ್ನ ಕರುಣದಿಂದೆ ಮಾನಾಪಮಾನವು
ನಿನ್ನ ಕರುಣದಿಂದೆ ಲಾಭಾಪಜಯಗಳು
ನಿನ್ನ ಕರುಣದಿಂದೆ ಸಾಧನಸಂಪತ್ತು
ನಿನ್ನ ಕರುಣದಿಂದೆ ಬಂಧನ ನಿವೃತ್ತಿ
ನಿನ್ನ ಕರುಣದಿಂದೆ ಆಗುವುದೊ ರಂಗ
ಎನ್ನಿಂದ ನಿನಗಿನ್ನು ಲೇಶಾಪೇಕ್ಷೆಯು ಇಲ್ಲ
ನಿನ್ನ ಹಂಗಿನೊಳು ಮುಳುಗಿ ಆಡುವೆನಯ್ಯ
ಇನ್ನು ಮುನ್ನೆ ಇದೆ ಆಗಲಿ ಆಗಲಿ
ಚಿನ್ಮಯಮೂರ್ತಿ ಗೋಪಾಲವಿಠಲ
ಜನುಮ ಜನುಮಕ್ಕೆ ನೀನೆ ಎನಗೆ ದಾತ ೩

ಝಂಪೆತಾಳ

ಎನಗೆ ಪಶುಜನ್ಮವು ಬಂದಾಗ ನೀನಿದ್ದು
ಎನಗೆ ಸ್ಥಾವರಜನ್ಮವು ಬಂದಾಗ ನೀನಿದ್ದು

ಎನಗೆ ಶ್ವಾನಸೂಕರಜನ್ಮ ಬಂದಾಗ ನೀನಿದ್ದು
ಎನಗೆ ಜಲಚರಜೀವಜನುಮ ಬಂದಾಗಿದ್ದು
ಎನಗೀಗ ಆವಾವ ದೇಹದಲ್ಲನುಭೋಗ
ಅನುವಾಗಿ ನೀನಿದ್ದು ಅಲ್ಲಿ ಉಣಿಸಿ
ಎನಗೆ ಅನುಭೋಗಕ್ಕೆ ಆಗ ತಂದುಕೊಡದೆ
ದಣಿಸಿ ನೋಡಿದಿ ಅಲ್ಲವೇನೊ ಕೃಪಾಳು
ಎನಗೆ ನಿನ್ನ ಮಹಿಮೆ ಎಣಿಸಲಾಗೋದರಿವು
ದಣಿದೆ ದಣಿದೆ ನಾನಾ ಜನುಮಗಳಲ್ಲಿ ಬಂದು
ಎನಗೀಗ ಮಾನಿಸಜನುಮ ಲಾಭವಿನ್ನು
ಅನುವಾಗಿ ಇತ್ತದಕ್ಕನುಕೂಲವಾಗಿನ್ನು
ಘನವಾದ ಸಾಧನವನ್ನು ಎನ್ನಿಂದಲಿ
ದಿನದಿನದಿ ಮಾಡಿಸಿ ನೂತನವಾಗಿನ್ನು
ಕ್ಷಣ ಕ್ಷಣಕೆ ನಿನ್ನ ಸ್ಮರಣೆ ಎನಗೆ ಇತ್ತು
ಜನನಿಯ ಜಠರದಿ ಜನಿಸದಂದದಿ ಮಾಡು
ಘನದೇವ ಕೇಳು ಗೋಪಾಲವಿಠಲರೇಯ
ಎನಗೆ ನಿನ್ನರ್ಚಿಸೋ ಗುಣ ಉಪಾಸನೆ ಈಯೊ ೪

ತ್ರಿಪುಟತಾಳ

ಪ್ರಾಕೃತ ರಹಿತನೆ ಎಲೊ ದೇವ ನಿನಗೆ ಈ
ಪ್ರಾಕೃತ ಉದಕದಿ ಮಜ್ಜನವೆ
ಪ್ರಾಕೃತರಹಿತನೆ ಎಲೊ ದೇವ ನಿನಗೆ ಈ
ಪ್ರಾಕೃತ ಉಡುಗೆಯ ವಸನಂಗಳೆ
ಪ್ರಾಕೃತರಹಿತನೆ ಎಲೊ ದೇವ ನಿನಗೆ ಈ
ಪ್ರಾಕೃತ ಜಡಗಳು ಆಭರಣವೆ
ಪ್ರಾಕೃತರಹಿತನೆ ಎಲೊ ದೇವ ನಿನಗೆ ಈ
ಪ್ರಾಕೃತ ಗಂಧ ತುಲಸಿ ಪುಷ್ಪವೆ
ಪ್ರಾಕೃತರಹಿತನೆ ಎಲೊ ದೇವ ನಿನಗೆ ಈ
ಪ್ರಾಕೃತ ಧೂಪಾದೀಪದಾರ್ತಿಯೆ

ಪ್ರಾಕೃತರಹಿತನೆ ಎಲೊ ದೇವ ನಿನಗೆ ಈ
ಪ್ರಾಕೃತದನ್ನವು ನೈವೇದ್ಯವೆ
ಪ್ರಾಕೃತಬದ್ಧನ ಮಾಡಿ ಎನ್ನಿಂದಲಿ
ಪ್ರಾಕೃತ ಪೂಜೆಯ ಕೈಕೊಂಬೆ
ಪ್ರಾಕೃತದೊಳು ನೀನಪ್ರಾಕೃತನಾಗಿದ್ದು
ಈ ಪರಿಯಲಿ ನಿತ್ಯ ಪೂಜೆಗೊಂಬೆ
ಪ್ರಾಕೃರತರಹಿತನಾಗಿ ನಿನ್ನ ದಾಸರು
ಪ್ರಾಕೃತದೊಳಗಿನ್ನು ಇಪ್ಪುವರು
ಪ್ರಾಕೃತರಹಿತನೆಂದೀಪರಿ ಚಿಂತಿಪರ
ಪ್ರಾಕೃತಬದ್ಧದಿರಹಿತರ ಮಾಡುವೆ
ಅಪಾರ ಮಹಿಮನೆ ಗೋಪಾಲವಿಠಲ
ಈ ಪರಿಯಲಿ ನಿನ್ನ ಚಿಂತಿಪರೊಡನಿಡಿಸೊ ೫

ಅಟ್ಟತಾಳ

ಧನದ ಅಪೇಕ್ಷಕ್ಕೆ ನಿನ್ನ ಪೂಜೆಯು ಬೇಡ
ವನಿತೆ ಅಪೇಕ್ಷಿಸಿ ನಿನ್ನ ಪೂಜೆಯು ಬೇಡ
ಮನೆಯು ಅಪೇಕ್ಷಿಸಿ ನಿನ್ನ ಪೂಜೆಯು ಬೇಡ
ತನುವು ಅಪೇಕ್ಷಿಸಿ ನಿನ್ನ ಪೂಜೆಯು ಬೇಡ
ಘನಸುತರಿಗಾಗಿ ನಿನ್ನ ಪೂಜೆಯು ಬೇಡ
ಕನಸಿನೊಳಾದರು ಕಾಮ್ಯ ಫಲಕೆ ನಿನ್ನ
ನೆನಸದಂತೆ ಮಾಡು ನ್ಯಾಯದಲೆ ಇನ್ನು
ಎನಗೆ ಈ ದೇಹದಲ್ಲೇನೇನು ಅನುಭೋಗ
ಅನುವಾಗಿ ಇದ್ದದ್ದು ಉಣಿಸದೆಬಿಡೆ ಇನ್ನು
ಎನಗೇನು ಈ ದೇಹ ಹೇಗೆ ಬಂದಿತೆಂದು
ಕ್ಷಣವು ಆದರು ನಿನ್ನ ಚಿಂತಿಸಿ ಇದ್ದೆನೆ
ತನುವು ಕೊಟ್ಟವಗೆ ತಾಪತ್ರಯದ ಚಿಂತೆ
ಎನಗೆ ಎನಗೇನು ಯೋಚನಿಲ್ಲ
ತನುಮನದೊಡೆಯನೆ ಗೋಪಾಲವಿಠಲ
ಎನಗೆ ನಿಷ್ಕಾಮಕ ನಿನ್ನಾರಾಧನೆ ಈಯೊ ೬

ಆದಿತಾಳ

ಶುಭವೆಂದು ಪಿಡಿಯೆ ಶುಭದೊಳಶುಭವುಂಟ-
ಶುಭವೆಂದು ಬಿಡಲು ಅಶುಭದೊಳು ಶುಭವುಂಟು
ಶುಭವು ಅಶುಭವು ಎರಡೆಂದು ಎನಗೆ
ವಿಭಾಗ ತಿಳಿಯದು ವಿವರಿಸಿ ನೋಡಲು
ಶುಭಕೆ ಕಾರಣ ನೀನೆ ಅಶುಭಕೆ ಕಾರಣನೆಂದು
ದ್ವಿಭಾಗವು ವಿವರಣೆ ನಭದವರೆ ಮಾಡಿಹರು
ಇಭರಾಜಪಾಲಕ ಗೋಪಾಲವಿಠಲ
ಶುಭ ಅಶುಭವು ನಿನ್ನಾಧೀನ ಇಪ್ಪವು ೭

ಜತೆ

ಎನಗೆ ನೀ ಬೇಕೆಂಬೊ ಆಸೆಯು ಘನವಯ್ಯ
ನಿನಗೆ ಬೇಕಿತ್ತೆ ಮೊರೆ ಗೋಪಾಲವಿಠಲ

೧೬೬*

ಬಂದ್ಯಾ ವಿಠಲ ಇಂದು ಬಡವನಲ್ಲಿ ಪ.

ವೃಂದಾವನದಲ್ಲಿ ಗೋವೃಂದಗಳ ಕಾಯಿದವನೆ ಅ.ಪ.

ಸುಳಿಗುರುಳು ಮೇಲೆ ಅರಳೆಲೆಯು ಸಿರಿಕಿರೀಟ
ಎಳೆದಳಿಲು ಚೂತ ಮಲ್ಲಿಗೆಯ ದೂರ್ವೆ
ಥಳಥಳಿಪ ಮುಖ ನಾಸ ನಯನ ಫಣೆಯಲಿ ತಿಲಕ
ಚಲಿಸುವ ಕರ್ಣಕುಂಡಲ ಪ್ರಭೆಯು ಶೋಭಿಸುತ್ತ ೧

---

* ಈ ಕೀರ್ತನೆ ಪುರಂದರದಾಸರ ಅಂಕಿತದಲ್ಲಿಯೂ ಒಂದೇ ಒಂದು ಪ್ರತಿಯಲ್ಲಿ ದೊರೆಯುತ್ತದೆ (ನೋಡಿ – ಶ್ರೀ ಪುರಂದರದಾಸರ ಸಾಹಿತ್ಯ, ಆರ್ತಭಾವ)

ಕೊರಳಲ್ಲಿ ಸರಿಗೆ ಸರಪಳಿ ಪಚ್ಚೆಪದಕವು
ಪರಿಪರಿಯ ಹಾರ ಶ್ರೀತುಲಸಿಮಾಲೆ
ಸಿರಿಗಂಧಲೇಪ ಸಿರಿವತ್ಸಉರ ಕಿರುಡೊಳ್ಳು
ವರಕಟಿಗೆ ಕಿರುಗಂಟೆ ಪರಿಪರಿಯ ಧಾಮವ ಸುತ್ತಿ ೨

ಮುಂಗಯ್ಯ ಕಡಗ ಸರಪಳಿ ತೋಳಭಾಪುರಿ
ಶೃಂಗಾರವಾದ ಗದೆ ಶಂಖ ಚಕ್ರ
ಅಂಗಯ್ಯ ಪದುಮ ಅಂಗುಲಿ ವೇಣು ಮೀಟುತ
ಹಿಂಗದೆ ಎನ್ನಂತರಂಗದ ಮನೆಗಿನ್ನು ೩

ಮಾಳಿಗೆ ಶ್ರೀನಿವಾಸಾರ್ಯರ ಮನೆಯಿಂದ
ಶೀಲಗುರು ವಿಜಯರಾಯರಿಗೆ ಒಲಿದು
ಮೇಲಾಗಿ ಬಹುಪರಿಗಳಿಂದ ಪೂಜೆಯಗೊಂಡು
ಕೀಳುಮನುಜನ ಎನ್ನ ಪಾಲಿಸಲುಬೇಕೆಂದು ೪

ಈಸು ಬಗೆ ಪೂಜೆಯು ಎನ್ನಿಂದಲಾಗದು
ಲೇಶವಾದರು ಇಲ್ಲ ಎನಗೆ ಜ್ಞಾನ
ಶ್ರೀಶನೆ ನೀ ನಿಂತಲ್ಲಿ ಸಕಲುಂಟು
ಶ್ರೀ ಶ್ರೀನಿವಾಸ ಗೋಪಾಲವಿಠಲ ವಿಜಯ ೫

೧೬೭

ಉಗಾಭೋಗ

ಬಾಡದೊನಮಾಲೆ ಧರಿಸಿ ಕೊರಳಲ್ಲಿ
ನೀಡಿ ನೋಡದ ಹಾಗೆ ಪೋದನವ್ವ
ಆಡುವ ಧ್ವನಿ ಕೇಳಿ ಪಾಡುವ ಪೊಗಳುವ
ನಾಡೊಳಗಪ್ರತಿಪುರುಷನವ್ವ
ನೋಡಿದಮ್ಯಾಲಿವನ ಮನಸು ಅನ್ಯತ್ತರವು

ಅನುಬಂಧಗಳು

೧. ಕಠಿಣ ಶಬ್ದಗಳ ಅರ್ಥ

೨. ಪೂರ್ವಕಥೆಗಳು ಮತ್ತು ಟಿಪ್ಪಣಿಗಳು

೩. ಅಸಮಗ್ರ ಕೀರ್ತನೆ

೪. ಸಂಕೇತಾಕ್ಷರಗಳ ವಿವರ

೫. ಕೀರ್ತನೆಗಳ ಅಕಾರಾದಿ

೬. ಸಹಾಯಕ ಗ್ರಂಥಗಳು

ನೋಡದೆ ಎಚ್ಚರಿಕೆ ಏಕವವ್ವಾ
ಮಾಡವಲ್ಲವು ಒಂದು ಕರ್ಮವು ಕರಣಂಗಳು ಅಡಗವಲ್ಲವು
ಆಡುವ ವಚನಗಳ ಕೇಳಲೊಲ್ಲವು ಕರ್ಣ
ನೋಡಿ ಬೆರಗಾಗುತಿವೆ ಏನವ್ವ
ರೂಢಿಯೊಳಗತಿ ಚೆಲುವನೀತನವ್ವ
ನೋಡಿದರೆ ಮನದ ಅಘವಡಗಿತವ್ವ
ಗಾಡಿಕಾರ ಚೆಲುವ ಗೋಪಾಲವಿಠಲ
ಆಡ ಬಂದಿದ್ದೆನ್ನ ಅಂಗಳದೊಳಗೆ

೧೬೮

ಬಾರಯ್ಯ ಬಾ ಬಾ ಭಕುತರಪ್ರೀಯ ಶ್ರೀನಿವಾಸರಾಯ
ಮಾರಜನಕ ಮುಕ್ತರೊಡೆಯ ದೇವಯ್ಯ ಜೀಯ ಪ.

ವಾರಿಜಾಲಯಪತೆ ವಾರಿಜನಾಭನೆ ವಾರಿಜಭವಪಿತ
ವಾರಿಜನೇತ್ರನೆ ವಾರಿಜಮಿತ್ರ ಅಪಾರ ಪ್ರಭಾವನೆ
ವಾರಿಜಜಾಂಡದ ಕಾರಣ ದೊರೆಯೆ ಅ.ಪ.

ಸ್ಯಂದನವೇರಿ ಬಾಪ್ಪಾ ರಂಗ ದೇವೋತ್ತುಂಗ
ನಂದನನಂದನ ಅರಿಮದಭಂಗ ಕಾರುಣ್ಯಾಪಾಂಗ
ಸುಂದರ ವಿಗ್ರಹ ಶುಭಾಂಗ ವಿಹಂಗ ತುರಂಗ
ಕಂದವಿರಿಂಚಿಯು ನಂದಿವಾಹನ ಅಮ-
ರೇಂದ್ರ ಸನಕ ಸನಂದನಾದಿಮುನಿವೃಂದ ಬಂದು ನಿಂದು
ಧಿಂ ಧಿಂ ಧಿಂ ಧಿಮಿಕೆಂದು ನಿಂದಾಡಲು ಆನಂದದಿ ಮನಕೆ ೧

ಜಗಜನ್ಮಾದಿಕರ್ತೃ ಗೋವಿಂದ ಉದರದಿ ಲೋಕವ
ಲಘುವಾಗಿ ಧರಿಸಿ ಮುಕುಂದ ಭಕ್ತರ ಮನಕೆ
ಝುಗಝುಗಿಸುತ್ತ ಪೊಳೆವಾನಂದ ನಿಗಮಾವಳಿಯಿಂದ
ಅಗಣಿತ ಮುನಿಗಣ ನಗಖಗಮೃಗಶಶಿಗಗನಮಣ್ಯಾದ್ಯರು
ಸೊಗಸಾಗಿ ಬಗೆ ಬಗೆ ಪೊಗಳುತಲಿ ಬೇಗ ಚಿಗಿ-
ಚಿಗಿದಾಡಲು ಮುಗುಳುನಗೆಯ ಮಹೋರಗಗಿರಿವಾಸ ೨

ತಡಮಾಡಬೇಡಯ್ಯ ಹೇ ನಲ್ಲ ವಾಕು ಲಾಲಿಸು ಎ-
ನ್ನೊಡೆಯ ಶ್ರೀಗೋಪಾಲವಿಠಲ ದೇವ ಪರಾಕು
ಅಡಿಯಿಡು ಭಕ್ತವತ್ಸಲ ಶ್ರೀಲಕುಮಿನಲ್ಲ
ಮಡುವಿನೊಳಗೆ ಗಜ ಮೊರೆಯಿಡಲಾಕ್ಷಣ ಮಡದಿಗೆ ಹೇಳದೆ
ದುಡುದುಡನೆ ಬಂದು ಹಿಡಿದು ನಕ್ರನಬಾಯಿ
ಕಡಿದು ಬಿಡಿಸಿದನೆ ಸಡಗರದಲಿ ರಮೆ ಪೊಡವಿಯೊಡನೆ ಬೇಗ ೩

೧೬೯

ಬುದ್ಧಿ ಪೇಳಬಾರದೇನೆ ಗೋಪ್ಯಮ್ಮ ಕೃಷ್ಣಗೆ
ಮುದ್ದು ಮಾಡುವುದ್ಯಾಕೆ ಜಾಣೆ ಪ.

ಬುದ್ಧಿ ಪೇಳದಿದ್ದ ಕಾರಣ ಸದ್ದುಮಾಡದೆ ಮುದ್ದುಕೃಷ್ಣನು
ಕದ್ದು ಬೆಣ್ಣೆಯ ಮೆದ್ದು ಮನೆಯೊಳಗಿದ್ದ ಬಾಂಡಗಳೊಡ್ಡು ಕೆಡಹಿದ ಅ.ಪ.

ಮಿಕ್ಕ ಮಕ್ಕಳಂದದಿ ಕೃಷ್ಣನು ಚಿಕ್ಕವನೇನೆ
ಅಕ್ಕರದಿ ಕುಚಗಳ ಪಿಡಿದು ಸಿಕ್ಕದೋಡುವನೆ
ದಕ್ಕದಿರುವ ರಕ್ಕಸರುಗಳ ಸೊಕ್ಕು ಮುರಿದ ಸಿಕ್ಕುಗಾರ ಕೇ-
ಳಕ್ಕ ಕೃಷ್ಣಗೆ ತಕ್ಕ ನೀತಿಯ ಫಕ್ಕನೆ ಪೇಳ್ ಧಿಕ್ಕರಿಸಿ ನೀ ೧

ಸೀರೆ ದಡದಮ್ಯಾಲಿಟ್ಟು ನೀರಿನಾಟಗಳ ಮಾಡೆ ನಾವೆಲ್ಲರು ಪೋಗಿ
ವಾರಿಯೊಳಿರಲು ಚೋರ ನಿನ್ನ ಕಿಶೋರ ಅಲ್ಲಿದ್ದ
ಸೀರೆಗಳನಪಹಾರಮಾಡಿದ ಜಾರ ಇವನ ಅ-
ಪಾರ ಲೂಟಿಗಳ ಪೇಳಲಳವೆ ನೀರಜಾಕ್ಷಿ ೨

ಕೇಳು ಕೃಷ್ಣನ ದುಡುಕುಗಳನು ವಿಶಾಲ ನೇತ್ರೆಯೋಳೆ
ಜಾಲ ಮಾಡುವದ್ಯಾತಕೆ ಈ ಪರಿ ಲೋಲಹಾರಳೆ
ಬಾಲಕನ ಘನದಾಳಿಗಳೀಗ ತಾಳಲಾರದೆ ಕಾಲಿಗೆರಗುವೆ
ಪೇಳಿದ ನುಡಿಯ ಲಾಲಿಸಿ ಈ ಚಾಳಿ ಬಿಡಿಸೆ ಗೋಪಾಲವಿಠಲಗೆ ೩

೧೭೦

ಸುಳಾದಿ

ಧ್ರುವತಾಳ

ಭಾವಾಷ್ಟ ಪುಷ್ಪಂಗಳು ದೇವಗೆ ಅರ್ಪಿಸುವ
ಭಾವನೆಯನು ಕೇಳಿ ಭಕ್ತಜನರು
ಜೀವರಿಂದ ಈ ಧರ್ಮ ಎಂದಿಗೆ ಆದದ್ದಲ್ಲ
ದೇವನಲ್ಲೇವೆ ಇಂಥಾ ಗುಣಗಳುಂಟು
ಭಾವಾಷ್ಟಪುಷ್ಪಗುಣವಾ ದೇವನಲ್ಲಿಪ್ಪುವೆಂದು
ಜೀವ ತಿಳಿದರೆ ಉದ್ಧಾರ ಉಂಟು
ಜೀವರೆಂಬುವರು ಕರ್ಮಬದ್ಧರು ಇನ್ನು
ದೇವನು ಕರ್ಮತ್ರಿಗುಣರಹಿತ
ಜೀವರಿಂದಲಿ ಅತ್ಯಂತ ಭೇದ ಸಾಕಾರ ಹರಿ
ಯಾವತ್ತರಾದಿ ವ್ಯಾಪ್ತ ಎಣೆಯಿಲ್ಲದ ಮೂರ್ತಿ
ಪಾವನಾಂಗ ಪಾಪನಾಶ ನಿತ್ಯತೃಪ್ತ
ಜೀವಜಡದಿ ಎಂದಿಗೆ ಅಗಲದೆ ಇಪ್ಪ
ಈ ವಿಧ ಶಕುತಿಯು ಈಶ ಗೋಪಾಲವಿಠಲ
ದೇವರಿಗುಂಟೆಂದು ಅರಿವ ಜೀವನೆ ಬಲು ಧನ್ಯ ೧

ಮಠ್ಯತಾಳ

ಬೊಮ್ಮಾಂಡವ ಸೃಜಿಸಿ ಬೊಮ್ಮನೊಳಗೆ ನಿಂತು
ಸುಮ್ಮನಸರನೆಲ್ಲ ನಿರ್ಮಿಸಿ ಪಾಲಿಸಿ
ಬೊಮ್ಮಾಂಡ ಆಳಿಸಿ ಬೊಮ್ಮನ ಕೊಲ್ಲುವ
ಬೊಮ್ಮಹತಿ ದೋಷವು ಎಮ್ಮಯ್ಯಗಿಲ್ಲ
ಹಮ್ಮಿನ ಹಂಸ ಡಿಬಿಕರ
ನಿರ್ಮಲದಿ ಕೊಂದ ನಿರ್ಮತ್ಸರದಿಂದ

ಧರ್ಮಾದಿ ಪುಷ್ಪ ನಮ್ಮಯ್ಯಗೆಂದು
ಘಮ್ಮನೆ ಅರ್ಪಿಸು ಘನ ಭಕುತಿಯಲಿ
ರಮ್ಮೆರಮಣನೆ ಗೋಪಾಲವಿಠಲ ಪರ–
ಬೊಮ್ಮ ಒಲಿವ ಧರ್ಮ ಅರಿದವರಿಗೆ

ರೂಪಕತಾಳ

ಎರಡೆಂಟುಸಾಸಿರ ಅರಸಿಯರ ಕೂಡ
ಪರಿಪರಿ ಕ್ರೀಡೆಯ ಮಾಡಿನೋಡಿ ಚೆಲ್ವ
ತರಳತನದಿ ಹನ್ನೆರಡು ಸಾಸಿರ ಮಂದಿ
ತರಳೇರ ಪಡೆದು ತಾ ಪರೀಕ್ಷಿತನಿಗೆ ಇನ್ನು
ಪರಿಣಾಮ ಮಾಡಿದ ವರಬ್ರಹ್ಮಚಾರಿ ಎಂದು
ಸರಿಹೋಗುವುದೆ ಇಂಥ ಚರಿಯ ಮನುಜರಿಂದ
ಹರಿಗೆ ಇಂದ್ರಿಯನಿಗ್ರಹ ಸ್ಥಿರ ಪುಷ್ಪವೆಂತೆಂದು
ಅರಿದು ಅರ್ಪಿಸುವ ಜೀವರಿಗೆ ಲೇಪಿಸದು
ಪರಮ ದಯಾಳು ಗೋಪಾಲವಿಠಲ ತನ್ನ
ಅರಿದಂತೆ ಫಲವೀವ ಶರಣ ಜನಕೆ ೩

ಝಂಪೆತಾಳ

ಭೂತದಯಾಪುಷ್ಪ ಭೂತೇಶಗಲ್ಲದೆ
ಭೂತಾಧಾರದಿ ಇಪ್ಪ ಭೂತರಿಗೆ ತರವೆ
ನೀತಿಲಿ ತ್ರಿವಿಧ ಜೀವರಿಗೆ ತಾ ತಪ್ಪದೆ
ಪ್ರೀತಿಲಿ ಉಣಿಸಿ ಅಜಾತನಾಗಿಪ್ಪ
ಮಾತು ಮಾತಿಗೆ ಅನಂತ ಕರ್ಮಂಗಳ
ಜ್ಞಾತವಿಲ್ಲದೆ ಮಾಳ್ಪ ಜೀವರಿಗಿದು ಸಲ್ಲ
ಭೂತರುಗಳ ಗತಿ ತಾ ತಿಳಿದು ತ್ರಿವಿಧರಿಗೆ
ನೋತ ಫಲವಿತ್ತು ಸಮನಾಗಿ ಇಪ್ಪವನೆಂದು
ಈ ತೆರದಿ ತಿಳಿದು ನೀ ಭೂತದಯಾಪುಷ್ಪ
ಪ್ರೀತಿಯಲಿ ಅರ್ಪಿಸನ್ಯಥಾ ಚಿಂತಿಸದೆ

ದಾತ ನಮ್ಮ ಸ್ವಾಮಿ ಗೋಪಾಲವಿಠಲ
ಸೋತೆನೆಂದ ಬಳಿಕ ಸಲಹದೆ ಬಿಡನು ೪

ತ್ರಿಪುಟತಾಳ

ಸರ್ವದಾ ಕ್ಷಮೆಪುಷ್ಪ ಸರ್ವೇಶಗಲ್ಲದೆ
ಗರ್ವತತ್ವದಿ ಬದ್ಧ ಜೀವರಿಗೆ ಸಲ್ಲ
ಶರ್ವನಲ್ಯಾದರು ಸಹಿಸಿಲ್ಲ ಈ ಕರ್ಮ
ಪೂರ್ವದ ಆಖ್ಯಾನ ಇದಕೆ ಉಂಟು
ಸರ್ವ ಉತ್ತಮ ದೇವನಾರೆಂದು ಭೃಗುಮುನಿ
ಸರ್ವಪೂರ್ಣ ಹರಿಯ ಎದೆಯ ಒದ್ದ
ಪರ್ವತದೋಪಾದಿ ಇದ್ದ ಕಾರಣವಾಗಿ
ಸರ್ವೋತ್ತಮನೆಂದು ತುತಿಸಿ ನಲಿದ
ನಿರ್ವ್ಯಾಜದಿಂದಲಿ ನಿತ್ಯ ಕೋಪದಿ ಖೇದ
ಗರ್ವತತ್ವದಿ ಬದ್ಧಜನರಿಗೆ ಕೂಡದು
ಸರ್ವಾನಂದ ಪೂರ್ಣ ಗೋಪಾಲವಿಠಲ
ಸರ್ವೇಶಗೀಪುಷ್ಪ ಅರಿವ ಜೀವನೆ ಧನ್ಯ ೫

ಅಟ್ಟತಾಳ

ದಮಜ್ಞಾನ ಧ್ಯಾನವು ಸಮೀಚೀನಪುಷ್ಪವು
ರಮೇಶಗಲ್ಲದೆ ಶ್ರಮಿಸೋ ಜೀವರಿಗಿಲ್ಲ
ವಮನಕಂಡರೆ ಅಂಜೋ ಭ್ರಮಣ ಜೀವರಿಗೆ
ದಮ ಎಂಬ ಪುಷ್ಪವು ಎಂತು ದೊರೆವುದಯ್ಯ
ಮಮತೆ ಜಡದಲ್ಲಿ ನಿಮಿಷ ಬಿಡದೆ ಇದ್ದು
ಹಮ್ಮತಿ ಜೀವನಿಗೆ ಜ್ಞಾನಪುಷ್ಪವು ಎಂತೊ
ಕ್ಷಮಿಸಿ ನೋಡಲು ಧಾನ್ಯ ಪುಷ್ಪವೆಂಬೋದು ಅಂತು
ನಿಮಿತ್ತ ಮಾತ್ರವು ಇದು ನೀಚ ಜೀವರಿಗಿಲ್ಲ
ಸಮ್ಮತಿಸಿ ನೋಡಿವು ಸರ್ವೋತ್ತಮನಲ್ಲೆವೆ
ನಿಮಿಷ ಬಿಡದೆ ಇಪ್ಪವೆಂದು ಚಿಂತನೆ ಮಾಡಿ

ದಮ ಜ್ಞಾನ ಧ್ಯಾನವುಳ್ಳವನಾಗುವನಾಜೀವ
ಸುಮನಸರೊಡೆಯ ಗೋಪಾಲವಿಠಲನು
ನಮಿಸಿ ನೆಚ್ಚಿದಂಗೆ ಅರಿಪುವನಿದನು ೬

ಆದಿತಾಳ

ಸತ್ಯವೆಂಬುವ ಪುಷ್ಪ ಸತ್ವೇಶಗೆ ಇದು
ನಿತ್ಯ ಅನೃತ ನುಡಿವ ಜೀವರಿಗೆ ಸಲ್ಲ
ಕತ್ತಲೆ ಒಳಗಿದ್ದ ಮತ್ತೆ ಉದಯವೆಂಬೊ
ಮಿಥ್ಯ ವಚನವಾಡಿ ಸುತ್ತುವ ಸಂಸಾರ
ಮತ್ತೆ ಇವಗೀಪುಷ್ಪ ಎಂತು ದೊರೆಯುವುದಯ್ಯ
ಸತ್ಯಸಂಕಲ್ಪ ನಮ್ಮ ಗೋಪಾಲವಿಠಲಗೆ
ಮತ್ತೆ ನೀ ಉಂಟೆಂದು ಮನಮುಟ್ಟಿ ತಿಳಿಯೊ ೭

ಜತೆ

ಭೇದವಿಲ್ಲದೀ ಪುಷ್ಪ ಇಪ್ಪವು ಹರಿಯಲ್ಲಿ
ಸಾಧಿಸರ್ಚಿಸು ಗೋಪಾಲವಿಠಲ ಒಲಿವ

೧೭೧

ಸುಳಾದಿ

ಧ್ರುವತಾಳ

ಮಗುವಾಗಿ ಮಗನಾಗಿ ಮಮತೆ ಪುಟ್ಟಿಸಿ ನಿನ್ನ
ಮಗುವ ರೂಪವು ತೋರಿ ಮರಳಿ ಎನ್ನ ಕಣ್ಣಿಗೆ
ಸಿಗದಂತೆ ನೀನು ಎನ್ನ ಮಗನೆಂದು ಪೇಳಿಕೊಂಡ
ಬಗೆ ಆವಲೀಲೆಯೊ ಚೆನ್ನಿಗನೆ ಗೋವಳರಾಯ ಬಪ್ಪ

ಬಗೆಯೇನೊ ಎನ್ನೊಡನೆ ಚುನ್ನಾಟವಾಡಲಿಕ್ಕೆ
ಅಗಣಿತಗುಣಗಣ ಅಂಬುಧಿಯೊ
ಸೊಗಸಾಗಿ ಎನಗೆ ಮೊದಲಿಗೆ ನಿಜವ ತೋರಿದರೆ
ಮಿಗಿಲಾಗಿ ನಿನ್ನ ಸ್ತೋತ್ರಗಳನಾದರು ಮಾಳ್ಪೆ
ಯುಗ ಮಹಾಪ್ರಳಯಕ್ಕೆ ಚಲಿಸದ ಸರ್ವೇಶ
ಮಗುವಾಗಿ ತೋರಿ ಮೋಸಗೊಳಿಸುವುದರಿಯದಾದೆ
ನಗು ಪಾಟಲವ ಮಾಡಿ ಕಡೆಗೆ ಹಿಂದೆ ನೋಳ್ಪುವಿಯೊ
ಧಿಕು ಧಿಕು ಎನ್ನ ಜನುಮ ಸಾರ್ಥಕೇನೊ
ನಗಧರ ಚೆಲುವ ಗೋಪಾಲವಿಠಲ ಕೃಷ್ಣ
ನಗೆ ಆಟ ತೋರೆನ್ನೊಡನೆ ಸಿಗದೆ ಮರೆಯಾಗಬಹುದೆ ೧

ಮಠ್ಯತಾಳ

ತಿಳಿಯದೆ ಸ್ವಪ್ನದಿ ಕಳವಳಿಕೆಯಿಂದ
ಸೆಳೆದು ನೂಕಿದೆನಲ್ಲ ಬಳಿಯ ನಿಲ್ಲಗೊಡದೆ
ಕಿಲಕಿಲನೆ ನಗುತ ಚಿನ್ನ ಬಾಲಕನಾಗಿ
ಸುಳಿದು ಆಡಿದರು ತಿಳಿಯದೆ ನಾ ಪೋದೆ
ತಳಕು ಹಾಕಿ ಕಾಲು ತೊಡರಿಸಿಕೊಂಡರು
ಎಳೆದು ಎಳೆದು ನಿನ್ನ ಎಬ್ಬಟ್ಟಿದೆನಲ್ಲ
ಭಳಿರೆ ನಿನ್ನ ಮಾಯ ಬಡವರಿಗೆ ಇನ್ನು
ತಿಳಿಯಲೊಶವೆ ಕರುಣಾ ಚಿತ್ರವಿಚಿತ್ರನೆ
ಮಲತಮಲ್ಲರಗಂಡ ಗೋಪಾಲವಿಠಲ
ಅಲೌಕಿಕ ಚರಿಯ ಅಘಟಿತ ಮಹಾಘಟಿತ ೨

ತ್ರಿಪುಟತಾಳ

ಪುಟ್ಟಿದ ಶಿಶುವೆಲ್ಲಿ ಎಷ್ಟು ದಿವಸಾಯಿತು
ದೃಷ್ಟಿಲಿ ನಾನತ್ತ ನೋಡಿದವನೆ ಅಲ್ಲ
ಕೊಟ್ಟವನೆ ಕೊಂಡೊಯ್ದನೆಂದು ಮನಸು ಎಲ್ಲ
ಗಟ್ಯಾಗಿ ಅದರ ಚಿಂತನಿಯ ಗಂಧವೆ ಎಲ್ಲ

ಬಿಟ್ಟವನಿಗೆ ಸ್ವಪ್ನದಲ್ಲಿ ಆ ರೂಪದಿ
ಚೇಷ್ಟೆಯ ತೋರಿಸಿ ಚತುರ ಕ್ರೀಡೆಯನಾಡಿ
ಬಿಟ್ಟು ಕೊನೆಗೆ ಎನಗೆ ದೃಷ್ಟಿಗೆ ತೋರದ
ಶ್ರೇಷ್ಠ ಬಾಲಕರೂಪ ನೀನೊ ಅಜೀವನೊ
ಇಷ್ಟು ಮಾತ್ರವು ಎನ್ನ ಮನದಲ್ಲಿ ನೆಲೆಗೊಂಡು
ಸ್ಪಷ್ಟಾಗಿ ತಿಳಿಪೋದು ಸರ್ವೇಶ್ವರ
ಅಷ್ಟಿಲ್ಲವೆಂದರೆ ಎನ್ನ ಮನದ ವ್ಯಥೆ
ಬಿಟ್ಟು ಪೋಗದು ಕಾಣೊ ಬಿನ್ನೈಸುವೆ
ಇಷ್ಟು ಮಾತ್ರವು ಅಲ್ಲ ನಿನ್ನ ರೂಪ ಬಾಲ-
ಕೃಷ್ಣನೆಂದು ಪೆಸರು ಪೇಳಿದ್ಯಾಗ
ಎಷ್ಟು ಜನ್ಮದ ನೋಂಪಿ ನಾ ತಿಳಿದವನಲ್ಲ
ಗಟ್ಯಾಗಿ ಎನ್ನ ಗುರುಗಳೆ ಬಲ್ಲರೊ
ಪುಟ್ಟ ಬಾಲಕ ಉಡುಪಿಕೃಷ್ಣ ಗೋಪಾಲವಿಠಲ
ಇಷ್ಟೇವೊ ಎನ್ನ ಪ್ರಾಪ್ತಿ ಮುಂದೆ ಉಂಟೊ ೩

ಅಟ್ಟತಾಳ

ತೃಷೆಯಿಂದ ನೀರ ರಭಸದಿ ಕುಡಿವಂಗೆ
ಕಸುಕೊಂಡ ತೆರನಂತೆ ಕೈಯೊಳ ಪಾತ್ರೆಯ
ಹಸಿದನ್ನವಕೊಂಬಾಗ ಹಾರಹೊಡದು ತುತ್ತು
ಕೊಸರಿ ಬಿಟ್ಟಂತಿನ್ನು ಎನ್ನ ಆಸೆಯು ನೋಡು
ಉಸುರಲಾರೆನೊ ನೀ ಪೋಷಿಸಿ ಸುಖಿಸಿ ಎನ್ನ
ಕೊಸರಿಬಿಟ್ಟು ಕ್ಲೇಶಕೊಂದೆನಲಲ್ಲ ಈಡಿಲ್ಲ
ಕಸುಕೊಂಡು ಗಂಟ ಗಲ್ಲದಿ ಬಡಿದಿನ್ನು
ಉಸುರದೆ ಮೆಲ್ಲಗೆ ಪೋದವನಂತೆ ರಾ-
ಜಸ ಮತಿಯವನಿಗೆ ನಿನ್ನ ಒಲುಮೆ ಎಂತು
ಅಸಮದೈವ ಕೃಷ್ಣ ಗೋಪಾಲವಿಠಲ ಕ-
ನಸಿನ ರೂಪವು ಮನಸಿಗೆ ನೆಲೆಯಾಗೊ ೪

ಆದಿತಾಳ

ಏನನರಿಯೆ ನಿನ್ನ ಮಹಿಮೆ ಏನನರಿಯೆ ನಿನ್ನ ಸೇವೆ
ಏನನರಿಯೆ ಪ್ರೀತಿ ಕರ್ಮ ಏನನರಿಯೆ ಜ್ಞಾನಮಾರ್ಗ
ಏನನರಿಯೆ ಭಕುತಿ ಸ್ಥಿತಿಯು ಏನನರಿಯೆ ವಿರಕುತಿಯು
ಏನೊ ನಿನ್ನ ಕರುಣಾಪೂರ್ಣನು ನೀನು ಎಂದು ನಾನು ಬಲ್ಲೆ
ದೀನನಾಥ ಎನ್ನ ಅವಗುಣ ಗುಣ ನಿನಗೇನೊ
ಜೇನು ಕ್ರಿಮಿಗಳ ವಮನವನು ಮಜ್ಜನವು ಎಂದು
ಜ್ಞಾನಿಗಳ ತಂದು ಸ್ನಾನಮಾಡಿಪರೊ ನಿನಗೆ
ಜ್ಞಾನಿಗಳ ಪದದಡಿಯಲ್ಲಿ ನಾನು ಬಿದ್ದವನು ಎಂದು
ನೀನೆ ನೋಡಿ ಸಾಕಬೇಕು ಶ್ರೀನಿವಾಸ ದಯಾಂಬುಧಿ
ಮಾನಿಸರೂಪಾಗಿ ಪೊಳೆದ ಜಾಣ ಗೋಪಾಲವಿಠಲ
ಪ್ರಾಣಾಧಾರ ನಿನ್ನ ಇರವ ಧ್ಯಾನದೊಳಗೆ ನಿಲಿಸಿ ಕಾಯೊ ೫

ಜತೆ

ಸ್ವಪ್ನದಲ್ಲಿ ಸುಳಿದ ಅಪರಿಮಿತ ಮಹಿಮ
ತಪಸಿಗೆ ಒದಗೊ ಗೋಪಾಲವಿಠಲ ಕೃಷ್ಣ

೧೭೨

ಶ್ರೀ ಯದುವರಕುಲ ತೋಯದಿ ಹಿಮಕರಾಶ್ರಿತ ಜನಮಂದಾರ
ಮಾಯಾಪೂತನಿಹಾರ ವೇದೋದ್ಧಾರ ಮಂದಾರ ಶೈಲಧರ ಪ.

ಗಂಗೋದ್ಭವ ಬಲಿ ವ್ಯಾಸ ಪರಾಶರ ಪುಂಗವನುತ ಚರಣ
ಮಂಗಳಾಂಗ ಕುಂತಿಸುತಪಾಲನ ಮೌನಿ ಹೃದಯ ಸದನ
ತುಂಗ ಚತುರ್ಭುಜ ಶಂಖಚಕ್ರಧರ ದನುಜವಂಶ ದಹನ
ಅಂಗಜ ಜನಕ ಕಾಳಿಂಗ ಗರ್ವಹರ ಅಂಬರೀಶ ಕರುಣ ೧

ಭೂಸುರ ಪತ್ನಿ ವಿಭೂಷಣಧರ ಕಂಸಾಸುರ ಮುರ ಮಥನ
ವಾಸವಾದಿ ಕಮಲಾಸನ ಪೂಜಿತ ವೈನತೇಯಗಮನ

ಶ್ರೀಶುಕಶೌನಕಸನಕಸನಂದನ ಸೇವಿತ ಹಯವದನ
ದಾಸಕಲುಷ ವಿನಾಶ ತ್ರಿಭುವನಾಧೀಶ ಶೇಷಶಯನ ೨

ಶರಣಾಗತ ಪೋಷಣ ಮೃದು ಭಾಷಣ ಶಕಟಾಸುರ ಹರಣ
ಕರಿವರರಿಪುಹರ ಕನಕಾಂಬರಧರ ಶರನಿಧಿಮದ ಹರಣ
ನರಹರಿ ವೇಲಾಪುರಿಕೇಶವ ಶ್ರೀಧರ ಕೌಂಸ್ತುಭಾಭರಣ
ಕರುಣಾಸಾಗರ ಶ್ರೀಗೋಪಾಲವಿಠಲ ಕಮಲಾಚಲರಮಣ ೩

೧೭೩

ಹರಿಯೆ ಅಚ್ಯುತಾನಂತ ಗೋವಿಂದ
ಅಚ್ಯುತಾನಂತ ಗೋವಿಂದ ಮುಕುಂದ ಶ್ರೀ-
ಮಚ್ಚಕೂರುಮವರಾಹನಾರಸಿಂಹ ಭಕ್ತ-
ವತ್ಸಲ ಕಾಯೋ ಕರುಣಾಕರ ಶ್ರೀರಮಣ ನೆಚ್ಚಿದನಾಥ ಬಂಧು ಪ.

ದುರುಳ ಹಿರಣ್ಯಕ ಅಸುರ ಅವತರಿಸಿದರೆ ಎಲ್ಲಿ
ಪರಮ ಉಗ್ರತಪಸು ಪರಮೇಷ್ಠಿಯ ಕುರಿತು
ನರ ಸುರರಿಂದಲಿ ಮರಣರಹಿತವಾದ
ವರಬೇಡಿ ತಪವು ಮಾಡಿ ಹರಿಯೆ ನಿನ್ನಾಜ್ಞದಿಂ
ವರವೀಯೆ ಆ ಅಜನು ಪರಮ ಅಸುರನು ತನಗೆ
ಪರಿಣಾಮ ನಿಶ್ಚೈಸಿ ಸರಿಯು ತನಗಿನ್ನಾರು ಇಲ್ಲ ಈ
ಧರೆಯೊಳೆಂದು ದುರುಳಾಚರಣೆ ತೊಡಗಿದ ಹರಿಯೆ ೧

ಪರಿಪರಿಯ ಲೋಕ ಪಾತಾಳ ಸ್ವರ್ಗವ ಗೆದ್ದು
ಸುರಋಷಿ ಪಿತೃಗಳ ಸ್ವಹಸ್ವಧಾಕಾರಗಳು ?
ಪರದೇವತೆ ತಾನೆಯೆಂದು ಎಲ್ಲವು ಕೊಂಡು
ನರರಿಗೊರಗಳನೆ ಇತ್ತು ಧರೆಯ ಮ್ಯಾಲೆ ತನ್ನ
ಬರಿದು ಬಹು ಪೊಗಾನಿಶೇ ? ಸುರರ ಕಂಟಕನಾಗಿ
ಇರುತಿರಲು ಒಂದು ದಿನ ಸುರಪತಿ ಹೋಗ್ಯವನ
ಪುರವ ಮುತ್ತಿಕೊಂಡು ಸೆರೆಪಿಡಿದನವನ ಸತಿಯ ೨

ಪಡೆದು ಅವನ ಸತಿಯು ಸುರಪತಿಯು ಎಳೆತರಲು
ಅಡವಿಯೊಳು ನಾರದನು ಕಂಡು ಎಲೊ ಎಲೊ ಅಪ್ಪ
ಬಿಡು ಬಿಡು ಆ ಸ್ತ್ರೀಯ ಆಕೆ ಗರ್ಭದಲಿ ಎ-
ನ್ನೊಡೆಯನ ಭಕುತನಿಹ್ಯ ಕಡುದಾನವನ ಸತಿಯು
ಪಡೆದರೆ ಮತ್ತಲ್ಲಿ ಕೊಡಲಿಯಂತೆ ನಮ್ಮ ಕುಲಕೆ
ವೈರಿ ಎನಲು ತಡೆಯ ಗಟ್ಟಿಸಿ ಋಷಿಯು
ಬಿಡಿಸಿ ಆಕೆಯ ತನ್ನ ಬಿಡಾರಕ್ಕೆ ಕರೆದೊಯಿದನು ೩

ಅಲ್ಲಿ ಗರ್ಭದಲಿ ಪ್ರಹ್ಲಾದನಿಹನೆಂದು
ಬಲ್ಲಿದ ಮುನಿ ತಾನು ಮೆಲ್ಲನಾಕೆಯ ಕುರಿತು
ಎಲ್ಲ ಪರಿತತ್ವಗಳ ಬೋಧಿಸಿ ರಕ್ಷಿಸಿ
ಖುಲ್ಲ ತತ್ವಗಳ ಕಡಿದು ಮಲ್ಲ ದುಷ್ಟನ ಸತಿಯಿ-
ದ್ದಲ್ಲಿಗೆ ಕಳುಹಿನ್ನು ಅಲ್ಲಿಂದ ನಾರದನು
ಉಲ್ಲಾಸದಿ ಬಂದು ಎಲ್ಲ ಸುರಋಷಿಗಳಿಗೆ
ಇಲ್ಲಿರಬ್ಯಾಡಿ ಶ್ರೀವಲ್ಲಭನ ಸಾರಿರೆಂದ ೪

ಹರಿಯೆ ಚಂಡಹಿರಣ್ಯಕ ಅಸುರ ದಂಡಿಸುವ
ಬಾಧೆ ಭೂಮಂಡಲದೊಳಗಿನ್ನು ಕಂಡು
ಸುರಮುನಿಗಳು ಕೆಂಡ ಸದೃಶ ಇವನ ಕೊಲ್ಲು
ವರ್‍ಯಾರೆಂದು ಹಿಂಡುಗಟ್ಟಿ ನಡೆದರೊ
ತಂಡ ತಂಡದಲಿನ್ನು ಪೋಗಿ ಸುರರೆಲ್ಲರು
ದಂಡ ಪ್ರಣಾಮವನ್ನೆ ಮಾಡಿ ಈ ಜಗಕೆ ಕೋದಂಡಪಾಣಿ ನೀನು
ಅಲ್ಲದಿಲ್ಲವೆಂದು ಮಂಡೆಬಾಗಿ ಸರ್ವರು ೫

ದುಷ್ಟಮರ್ದನ ದೂರಾತಿದೂರ ಜಗ-
ತ್ಸೃಷ್ಟಿ ಅಧಿಕಕರ್ತ ಶಿಷ್ಟರ ಪಾಲಕ
ವಿಷ್ಣು ನೀನೆ ನಮ್ಮ ವಿಚಾರಿಸಲಿಬೇಕು ಕಷ್ಟ ನಮ್ಮೊರೆಯ ಕೇಳೊ
ದುಷ್ಟ ಹಿರಣ್ಯಾಸುರ ಸಮಸ್ತನೆಲ್ಲವ ಸೆಳೆದು
ಅಟ್ಟಹಾಸದಿ ಎಲ್ಲ ಆಕ್ರಮಿಸಿ ನಮಗೆ ಅಡಿ-
ಯಿಟ್ಟೇನೆಂದರೆ ಸ್ಥಳಯಿಲ್ಲದಂದದಿ ಮಾಡಿ
ಸೃಷ್ಟಿಯ ವ್ಯಾಪ್ತಿಸಿಪ್ಪ ೬

ಪರಿಪರಿಯಿಂದ ತುತಿಸುತ್ತ ಕರಗಳ ಮುಗಿಯೆ
ನರಹರಿ ಆಗ ಅಶರೀರ ವಾಕ್ಯವ ನುಡಿದ
ಶರಣ ಜನರೆ ಕೇಳಿ ಧರಿಸಿವೆರಡೂ ದಿನವು
ದುರುಳನ ಸಂಹರಿಸುವೆ ಪರಿಪರಿ ದೋಷ
ಪೂರ್ತಿ ಆಗ್ಯದೆ ಅವಗೆ ತರು ? ತನ್ನ ದ್ರೋಹಕ್ಕೆ
ಎರಗುವನೊ ಆವಾಗ ಮರಳಿ ನೋಡದೆ
ಮತ್ತೆ ನಾನೆ ಅವತರಿಸಿ ಆ ಹಿರಣ್ಯಕನ ಸಂಹರಿಸುವೆ ೭

ಇತ್ತ ಸುರರೆಲ್ಲ ತಮ್ಮ ತತ್ತಸ್ಥಾನಕೆ ಪೋಗೆ
ಇತ್ತ ಹಿರಣ್ಯಕಾಸುರ ಪೆತ್ತ ಪ್ರಹ್ಲಾದನ್ನ
ಮತ್ತೆ ತಮ್ಮ ಗುರು ಪುತ್ರ ಚಂಡಮಾರ್ಕರ
ಕರೆಸಿ ತದ್ವಿದ್ಯ ಕಲಿಸಿರೆಂದ
ನಿತ್ಯದಲಿ ಅವರಿನ್ನು ಕರೆದೊಯಿದು ಬಾಲಕಗೆ
ಮತ್ತೆ ಧರ್ಮಾರ್ಥ ಕಾಮ ವಿದ್ಯಗಳು ಪೇಳಿ
ಸತ್ಯಶಿವ ಸರ್ವೋತ್ಮನೆಂದು ತಿಳಿಸಲಾಗಿ ಪ್ರತ್ಯೇಕ ಮಾಡಿಕೊಂಬ ೮

ಒರೆದೊರೆದು ಪೇಳಿ ಬಹು ಬಗೆ ಬಗೆಯಿಂದಲಿ
ತರಳ ಪ್ರಹ್ಲಾದ ನೀ ಉಚ್ಚರಿಸು ಎಂದೆನಲು
ವರಮೋಕ್ಷಶಾಸ್ತ್ರ ಪ್ರತಿಪಾದಿಸುತ ಧರೆಗಿನ್ನು
ಹರಿಯೆ ಸರ್ವೋತ್ಮನೆಂದಾಗುರುಪುತ್ರರನ್ನು
ಪರಮತದ ಉಕ್ತಿಗಳು ಮರಳಿ ಆಡದಂತೆ
ನಿರಪುತ್ರನ ಮಾಡೆ ತರಳನೆ ಈ ಶಾಸ್ತ್ರ
ಅರುಹಿದರ್‍ಯಾರೆನಲು ಹರಿಯಲ್ಲದಿಲ್ಲವೆಂದ ೯

ನಮ್ಮ ಅಂತರ ತತ್ವ ನಿಶ್ಚಯವೆ ಇದು ಸರಿ
ನಿಮ್ಮ ಮನೆತನಕಿನ್ನು ಅಲ್ಲೆನಲು ಸಿದ್ಧಾಂತ
ಸುಮ್ಮನೆ ಈ ತತ್ವಯಾಕೆ ಉಚ್ಚರಿಪೆ ನೀ ನಿಮ್ಮಯ್ಯ ಸಹಿಸನಿನ್ನು
ಬೊಮ್ಮನೆ ಜಗಕೆ ತಾನೆಂದೆನಿಸಿ ಮಹಾ ದುರುಳ
ಸುಮ್ಮನಸರುಗಳನ್ನು ಸೋಲಿಸಿ ಹರಿದ್ರೋಹಿ ಹರಿಯೆಲ್ಲಿ
ಹತಬಡಿದು ಹರಿಯೆಂದು ಅನಲೀಸ ಕರ್ಮ ಶಾಸ್ತ್ರವೆ ಕಲಿಯೊ ನೀ ೧೦

ಅನ್ಯರಲ್ಲವು ನಾವು ಹಿತವರೆ ನಿನಗಿನ್ನು
ನಿನ್ನ ಪಿತ ಕೇಳಿದರೆ ಸಹಿಸ ತಾ ಮುನ್ನದಕೆ
ಅನ್ನವುದಕಗಳಿತ್ತು ಪಾಲಿಪ ನಮ್ಮನ್ನು ಇನ್ನಾತಗಂಜುವೆವೊ
ನಿನ್ನ ಕ್ಷೇಮವು ನೀನೆ ತಿಳಿದುಕೊ ಈ ಮೇಲೆ
ಇನ್ನೊಬ್ಬರು ಪೇಳುವರು ಬಂದು ಅವಗೆಲ್ಲ
ಅನ್ಯಾಯವೆ ನ್ಯಾಯವೆಂದು ಸ್ಥಾಪಿಸಿಬಿಡುವ ನಿನ್ನಿಚ್ಛೆಯನ್ನು ಮುಂದೆ ೧೧

ಭಿನ್ನ ದೇಹ್ಯವು ನೋಡು ಮುನ್ನಿಂದಲಿ ಇನ್ನು
ಇನ್ನು ಜೀವಕೆ ಅಂತು ಭೇದ್ಯಭೇದಗಳಲ್ಲಿ
ಬನ್ನ ಬಡಿಸುವುದು ನಾಲ್ಕು ಪರಿಭೋಗವು ಬಿಡದೆ
ಸನ್ಮತಿಯಿದ ನೋಡೆ ಅನಂತ ಜನ್ಮಗಳು
ಹೀಗಾಗಿ ಪೋಗಿ ಅವೆ ಇನ್ನಾರು ತಂದಿತ್ತರೀ-
ದೇಹ್ಯಗಳು ಎನಗೆ ಮುನ್ನೆ ಆ ದೇಹವನು
ಮುರವೈರಿ ಇರಲಾಗಿ ಇನ್ನೊಬ್ಬಗಂಜೆನೆಂದ ೧೨

ಬಾಧ್ಯ ಬಾಧಕ ಹರಿಯೆ ಸಾಧ್ಯ ಸಾಧನಕೆ ಹರಿ
ಆದ್ಯಂತಗಳು ಇಲ್ಲಿ ಹರಿಯ ಹೊರತಾಗಿನ್ನು
ವೈದ್ಯನಹುದು ನಮಗೆ ವೇದ ಪ್ರತಿಪಾದ್ಯ ಅಭೇದ್ಯ ಭೇದ್ಯ ಗಣ್ಯಾಗಣ್ಯ
ಬೈರಾಗಿಗಳಿಗೆಲ್ಲ ವರವಿತ್ತ ಸುದಾತ
ಸದೃಶವಿಲ್ಲದ ಸ್ವಾಮಿ ಸರ್ವೋತ್ತಮ ತಾನೆ
ಅದೃಶ್ಯವಾಗೀಜಗಕೆ ತೋರದಂತಿಪ್ಪನು
ರುದ್ರಾದಿಗಳಿಗೀಶನು ೧೩

ಚಂಡಮಾರ್ಕರು ತಾವು ಚೆಲುವ ಬಾಲಕಿ ಕೇಳು
ಖಂಡಿಸಿ ನೀ ನಮ್ಮ ವಿದ್ಯ ಓದು ಒಲ್ಲೆಂದು
ಚಂಡಶಾಸನನಾದ ಪಿತಗೆ ಪೋಗಿ ಪೇಳಿಕೊಂಡು
ಇದು ಒಪ್ಪಿಸಿದರು
ಕಂಡು ಹಿರಣ್ಯಕ ಅಸುರ ಕರೆದು ಮುಂದಕೆ ಮಗನ
ಮಂಡೆ ನ್ಯಾವರಿಸಿ ಮಮತಿಂದ ಮಾತಾಡಿಸಿದ
ಮಂಡಲಕೆ ಈಶ ಆವವನೆಂದು ಕೇಳೆ ಅ-
ಖಂಡೇಶ ಹರಿಯೆ ಎಂದ ೧೪

ಆವ ವಿಪರೀತವನೆ ಅಲ್ಲದ್ದು ನುಡಿದನು
ನಾವು ಹರಿ ದ್ರೋಹಿಗಳು ನಮ್ಮ ವೈರಿಯ ನೆನದ
ಸುವಿವೇಕವು ಎನ್ನ ಸುಖಭಾಗ್ಯ ಉಣಲಿ ಈ
ಜೀವಗೆ ಇಲ್ಲವೆಂದ
ಬೇವು ಕುಡಿದಂತೆ ಮನವಾಗಿ ಮಹಾ ಅಸುರನು
ನೀವೆಲ್ಲ ಸುತ್ತ ಇದ್ದವರು ಪೇಳೆಂದೆನಲು
ಆವ ಪರಿಯಲವನ್ನ ತಿದ್ದಬೇಕೆಂದೆನಲು
ಕಾವವ ನೀನಲ್ಲವೆಂದ ೧೫

ಏಸು ಬಗೆಯಿಂದ ಉಪಾಯದಲಿ ಕೇಳಿದರು
ಈ ಶಿಶುವು ನಮ್ಮ ಮಾರ್ಗವ ಪಡೆಯನೆಂತೆಂದು
ರೋಷದಲಿ ನೂಕಿ ಅಪ್ಪಳಿಸಿ ಇವನಿಗೆ ಉಪ–
ವಾಸಲಿ ಇಡಿರಿಯೆಂದ
ಘಾಸಿಗೊಳಿಸಿ ಬಹಳ ಗರ್ಜಿಸಿ ನುಡಿದರು
ಸಾಸಿವೆಯನಿತನ್ನ ಕಳೆಯಗುಂದದ ಕಂಡು
ಹೇಸನಿವ ಇದಕೆ ಎಂತೆಂದು ಮನದಲಿ
ನಿಶ್ಚೈಸಿದನು ಶತ್ರುವೆಂದು ೧೬

ಈಸು ದಿನ ಇವ ಎನ್ನ ಸುತನು ಎಂದರಿದಿದ್ದೆ
ಮೋಸಗೊಳಿಸಿ ನಮ್ಮ ಮನೆಗೆವೆ ಶ್ರೀ
ಕೇಶವನ ಭಕುತ ಬಂದು ಜನಿಸಿದ ನಮಗೆ
ಶಾಶ್ವತದ ವೈರಿಯಂತೆ
ನಾಶಗೈಸಲು ಬೇಕು ಎಂದು ನಿಶ್ಚಯ ಮಾಡಿ
ಬೀಸಿ ಬೀಸಿ ನೆಲಕೆಹೊಡೆದು ಅಪ್ಪಳಿಸಿನ್ನು
ಕೇಶಗಳು ಕಿತ್ತಿನ್ನು ಕೆಡಹಿ ಧರಣಿಯ ಮೇಲೆ
ರಾಶಿಪರಿಶಸ್ತ್ರದಿಂದ ೧೭

ನಾನಾ ಬಗೆಯಿಂದ ವಧೆಗೇನೇನು ಉಪಾಯ
ಗಳು ಉಂಟೋ ಅವೆಲ್ಲ ತೀರಿ ಪೋಗೆ
ಕಾಣದೆ ತಾ ಮುಂದೆ ಕಾಪಡವಿ ಬಿದ್ದಂತೆ

ಏನಿದಕೆ ಎಂದನೆಂದ
ತ್ರಾಣ ದೊಡ್ಡದು ಇವಗೆ ಕಾಣೆನಾಸರಿಯೆಲ್ಲಿ
ಜಾಣನೆ ನಿನಗಿಷ್ಟು ಬಲವೆಲ್ಲೆದೆಂದೆನಲು
ಕಾಣ ನೀ ಮಾತ್ರ ನಿನ್ನೊಳಗಿದ್ದ ಹರಿ ನಮ್ಮ
ಪ್ರಾಣ ಆಧಾರನೆಂದ ೧೮

ಎಲ್ಲಿ ಪ್ರಹ್ಲಾದ ನಿನ್ನೊಡೆಯನು ಇನ್ನು
ಬಲ್ಲಿ ಬಹು ಪಡೆದಿದ್ದೀಯೆಂದು ರೋಷದಿ ಬಂದು
ಹಲ್ಲುಗಳ ನಡುಗಿಸುತ್ತ ಹಾಹಾಕಾರದಿ ಕಂಬ–
ದಲ್ಲಿ ಝಾಡಿಸಿ ಒದ್ದನು
ಇಲ್ಲಿರ ತೋರಿನ್ನು ಎಂದೆನೆ ಪ್ರಹ್ಲಾದ
ಅಲ್ಲುಂಟು ಇಲ್ಲಿಲ್ಲ ಎಂಬ ಸಂಶಯ ಸಲ್ಲ
ಬಲ್ಲ ಭಕ್ತರ ಹೃದಯವಾಸ ಶ್ರೀ–
ವಲ್ಲಭನ ಇಲ್ಲೆ ತೋರಿಸುವೆನೆಂದ ೧೯

ಭುಂಗಿ ಭುಂಗಿಗೆ ಬ್ರಹ್ಮಾಂಡವೆಲ್ಲ ಗದ್ದರಿಸಿನ್ನು
ಧಗಧಗಾಯಮಾನವಾಗಿ ಜಗಕೆಲ್ಲ ಇದೆ
ಯುಗ ಮಹಾ ಪ್ರಳಯವೋ ಎಂದು ತೋರುತಿರಲು
ಧಿಗಿಧಿಗಿನೆ ಕಂಬದಿಂದ
ಝುಗ ಝುಗಾ ಎಂದು ಜನಸಿ ಮೃಗನರರೂಪ
ಸೊಗಸಾಗಿ ಧರಿಸಿ ಶ್ರೀವತ್ಸ ಶಂಖ ಚಕ್ರ
ಯುಗ ಭುಜಗಳಲ್ಲಿ ಒಪ್ಪೆ ಈಶ ಸರ್ವೇಶ
ಮಗುವಿನ ಮೊರೆಯ ಕೇಳೆ ೨೦

ಬಿರಬಿರನೆ ಕಣ್ಣುಗಳ ಬಿಡುವುತ್ತ ಹೂಂಕರಿಸಿ
ಪಲ್ಕಿರಿಕಿರಿದು ಜಿಹ್ವೆ ಚಾಚುತ್ತ ರೋಷದಲಿ
ಬಹು ತರಣಿ ಅಸ್ತಂಗತ ಸಮಯವನು
ನೋಡಿ ಆದರು ನನ್ನ ಸಂಹರಿಸಲಿ
ಮರಳಿ ಮರಳಿ ಮತ್ತೆ ಪಡೆದವನ ಬಿಡುವುತ್ತ
ಸರಸಲಿಯೋ ಎಂಬ ತ್ವರನಂತೆ ತೋರಿ

ಮುದುರಿಸಿ ತೊಡೆಯ ಮ್ಯಾಲೆ ಇರಿಸಿ ಆ ಖಳನ
ಸಂಹರಿಸಿದನಾಕ್ಷಣದಲಿ ೨೧

ಕೆಡಿಸದೆ ತಾನಿತ್ತ ವರ ಸತ್ಯವೆಂದೆನಿಸಿ
ಒಡಲ ಸೀಳ್ಯವನ ತನ್ನ ನಖಶಸ್ತ್ರಗಳಿಂದ
ಜಡಿದು ಕರುಳನ್ನು ತ್ಯಗದು ಕೊರಳೊಳು ಧರಿಸಿ
ಕುಡಿದಂತೆ ರಕ್ತವೆಲ್ಲ
ಸಡಗರದಿ ಮೊಗವೆಲ್ಲ ಪೂಸಿಕೊಂಡು ಜನಕೆ
ಕಡೆ ಮೊದಲು ಇಲ್ಲದಂತೆ ಆರ್ಭಟ ತೋರೆ
ಹಿಡಿಯಲೊಬ್ಬರಿಗೆ ಅರಸ ಅಶಕ್ಯಾಗೆ
ಮೃಡ ಮುಖ್ಯ ಸುರರು ಎಲ್ಲ ಹರಿಯ ೨೨

ಪರಿಪರಿಯಿಂದ ಸಿರಿದೇವಿಗೆ
ಮೊರೆಯಿಡಲವರ ನುಡಿಗಳ ಕೇಳಿ
ಪರಿವಾರವೆ ಕೇಳಿ ಕರುಣಾಕರನು ಆತ
ಆರಿಗೋಸುಗ ಹೀಗೆ ಅವತರಿಸಿಯಿಪ್ಪ ನೋಡಿ
ಹರುಷದಿಂದಲಿ ಆ ತರಳನ ಕರೆದೊಯಿದು
ಎರಗಿಸಿ ಸಾಷ್ಟಾಂಗ ನಮೋ ನಮೋ ಎಂದೆನಲು
ಕರುವಿಗೆ ಆವು ಮೆಚ್ಚಿಕೆ ಮಟ್ಟಿದಂತೆ ನ್ಯಾ-
ವರಿಸಿದ ಪ್ರಹ್ಲಾದನ ೧೩

ಇದೆ ಸಮಯವೆಂದು ಸಿರಿ ಅಜಭವಾದಿಗಳೆಲ್ಲ
ಹದನವರಿತು ಹರಿಯ ತುತಿಗೆ ರಕ್ಷಿತರಾಗಿ
ಅದುಭುತಮಹಿಮ ಅಗಮ್ಯ ಅಗಣಿತಗುಣ
ಅಘಟಿತಘಟಿತನೆಂದು
ಮಧುಸೂದನ ಮಹದಾದಿ ಹೆದ್ದೈವ ಬಲು
ಕದನ ಕರ್ಕಶ ಅಸುರನ್ನ ಮಡುಹಿದೋ ರಾಯ
ಇದೆ ನಿನ್ನ ಅವತಾರ ಪದೋಪದಿಗೆ ನಮಗೆ ಬಿಡ-
ದೊದಗಿ ಕಾಯಲಿ ಎಂದರು ೨೪

ಪರಿಪರಿಯಿಂದ ಸುರ ಋಷಿ ಪಿತೃ ಗಂಧರ್ವ
ಶರಣ ಕುಲವೆಲ್ಲ ಬಂದು ಹರಿಗೆದುರಾಗಿ
ನರಹರಿ ನಮ್ಮನ್ನ ನೆರೆ ಬಳಲಿಸುತಲಿ ದುರುಳನ ತರಿದೆ ಎಂದು
ಕರಕಮಲ ಮುಗಿದು ಸಾಷ್ಟಾಂಗಗಳನೆ ಮಾಡಿ
ತರಳ ಪ್ರಹ್ಲಾದವರದ ನಮ್ಮ ಪೊರೆಯೆಂದು
ಹರುಷದಿಂದಲಿ ಪೂಮಳೆಗರೆದು ಹರಿಯ ಮೇಲೆ
ವರತುತಿಯ ಮಾಡಿದರು ೨೫

ಕಂದ ಪ್ರಹ್ಲಾದನ್ನ ಮುಂದಕ್ಕೆ ಕರೆದು ನಿಮ್ಮ
ತಂದೆಯನು ತರಿದದ್ದು ಸಹ್ಯವೆ ಎಂದೆನಲು
ಮಂದರಧರ ಗುಣಸಾಂದ್ರ ನೀನಲ್ಲದೆ
ಬಂಧು ಎನಗಿಲ್ಲವೆಂದ
ತಂದೆ ತಾಯಿ ಸಕಲ ಇಷ್ಟ ದೈವವು ನೀನೆ
ಬಂಧಕ ಮೋಚಕ ಭಕ್ತವತ್ಸಲ ದಯಾ-
ಸಿಂಧುವೆ ನೀ ಸರ್ವ ಅಂತರಿಯಾಮಿ ಗೋ-
ವಿಂದ ನಮೋ ನಮೋ ಎಂದನು ೨೬

ಮೆಚ್ಚಿದೆನು ಪ್ರಹ್ಲಾದ ವರವ ಬೇಡೆಂದೆನಲು
ಅಚ್ಚ ಭಕುತನು ನುಡಿದ ಆ ಸಮಯದಲಿ ಇನ್ನು
ಮೆಚ್ಚಿಕೆ ನಿನ್ನ ಪಾದತಾಮರಸ ಒಂದಲ್ಲದೆ
ಇಚ್ಛೆ ಮತ್ತಿಲ್ಲವೆಂದ
ಸಚ್ಚಿದಾನಂದ ಸರುವೋತ್ತಮನೆ ನೀ ಜಗದಿ
ನಿಚ್ಚ ಭಕುತರಿಗೆ ಬಂದ ಭಯಗಳ ತರಿದು
ಉತ್ಸಾಹವನೆ ಕೊಡು ಉದಯಾಸ್ತಮಾನದಲಿ
ಎಚ್ಚರಿಕೆಯನ್ನೆ ಇತ್ತು ೨೭

ಆಗ ಪ್ರಹಲ್ಲಾದಗೆ ಕರಕಮಲಗಳಿಂದ
ಸಾಗಿಸಿ ನ್ಯಾವರಿಸಿ ಸರ್ವ ಇಹ್ಯಪರ ಸುಖವು
ಆಗಲಿ ನಿನಗೆಂದು ಆಶೀರ್ವಾದವನಿತ್ತ
ಯೋಗಿಗಳರಸ ಶ್ರೀಶ
ತೂಗಿ ಪ್ರಹಲ್ಲಾದ ತಲೆ ಬಾಗಿ ಆಗಲಿ ಇನ್ನು

ಭೋಗ ಉಣದನಕ ಬಿಡದೆಂದು ಇಹಲೋಕ ಸುಖ
ನಾಗಶಯನನ ಕರುಣ ಸಕಲ ಸಜ್ಜನ ಸಮ್ಮತ
ಆಗಲಾಗಲಿ ಎಂದರು ೨೮

ಹರಿಯೆ ಜಗಕಿನ್ನು ಇರತೋರಿನ್ನು ಪ್ರಹಲ್ಲಾದ
ಶರಣಜನಕೆಲ್ಲ ಮಂಗಳವಿತ್ತ ಪುರುಷನ್ನ
ಸ್ಮರಣೆ ಮಾತ್ರವು ಮಾಡೆ ಸಕಲ ಅರಿಷ್ಟಗಳು
ಹರಿಹರಿದು ಪೋಪುವು
ಹರಿಯ ಚರಣವ ನಂಬಿದವರಿಗೆ ಭಯವಿಲ್ಲ
ಸ್ಥಿರಪದವಿ ಉಂಟೆಂಬುವುದಕೆ ಸಾಕ್ಷಿಯಿನ್ನು
ಮೊರೆಯಿಟ್ಟರೆ ಕಾವನೆಂಬಲ್ಲಿಗೆ ನಮ್ಮ
ವರಪ್ರಹಲ್ಲಾದ ನೋಡು ೨೯

ಜಯ ಜಯತು ಪ್ರಹ್ಲಾದವರದ ಜಗದಾಧಾರ
ಜಯತು ಅನಂತಾವತಾರ ಮೂಲಕೆ ಐಕ್ಯ
ಜಯತು ನಿರ್ದೋಷ ಜ್ಞಾನಾನಂದ ಗುಣಪೂರ್ಣ
ಜಯ ಜಯ ಶ್ರೀ ಅಜಜನಕ
ಜಯತು ಸೃಷ್ಟ್ಯಾದಿ ಕರ್ತ ನೀನೆವಲ ಮಾತ್ರ
ಜಯತು ದುಷ್ಟಮರ್ದನನೆ ಶಿಷ್ಟ ಪರಿಪಾಲ
ಜಯ ಜಯತು ಗೋಪಾಲವಿಠಲ ಭಕ್ತರ ಪ್ರಿಯ
ಜಯವೀವ ಭಜಿಸುವರಿಗೆ ಹರಿಯೆ ೩೦

ವಿಶೇಷ

೧೭೪

ಸುಳಾದಿ

ಧ್ರುವತಾಳ

ಅನಂತನ್ನ ನೋಡಿ ಅಗಣಿತ ಗುಣಗಣನ
ಅನಂತನ್ನ ಪಾಡಿ ಆಗಮಾದಿ ವಿನುತನ

ಅನಂತನ್ನ ಬೇಡಿ ಅನಿಮಿತ್ತ ಬಾಂಧವನ
ಅನಂತನ್ನ ತಿಳಿರಿ ಅಧಿಕಾರಾನುಸಾರ
ಅನಂತ ಜನರ ಪೊರೆವ ಅನಂತರೂಪನಾಗಿ
ಅನಂತನೇವೆ ಅಹೋಬಲ ನಾರಸಿಂಹನಾಗಿ
ಅನಂತಪರಿಯ ತುತಿಪೊ ಆ ಮಾರ್ಕಂಡೇಯಗೊಲಿದು
ಅನಂತಮೂರ್ತಿ ತೋರಿ ಆತನ ವ್ರತವ ಗೆಲಿಸಿ
ಅನಂತ ಸಿರಿ ಅಜಭವಾದ್ಯರಿಂದಲಿನ್ನು
ಅನಂತಪರಿಯಲ್ಲಿ ಸ್ಮರಿಸಿಕೊಳುತಲಿಪ್ಪ
ಅನಂತಗಿರಿವಾಸ ಗೋಪಾಲವಿಠಲ
ಅನಂತನಿಂದಲಿ ಅನಂತತೀರ್ಥ ಉಂಟು ೧

ಮಠ್ಯತಾಳ

ಭವನಾಶನ ಮಾಳ್ಪ ಭಾಗೀರಥಿ ಜನಕ
ಭವನಾಶಿನಿ ತೀರ್ಥದಲ್ಲಿ ತಾನೆ ನಿಂದು
ಅವನಿಯೊಳಗೆ ಒಬ್ಬ ಚಂಡಶಾಸನನು ಎಂ-
ಬುವನು ತಾನು ಬಲು ಕವಿಗಳ ದೂಷಿಸುತ
ಭವಪೀಡಿತನಾಗಿ ಬಹು ವಿಪ್ರರ ದ್ರೋ
ಹವನು ತಾಕಿ ಶವನು ಆಗಿ ಬೀಳೆ
ಜವನದೂತರು ಬಂದು ಜಬರಿಸಿ ಒಯ್ಯುವ ಸಮಯ-
ಕ್ಕವನ ಅಂಗುಟ ಬೆರಳು ಬನವಾಸಿಲಿ ಬೀಳೆ
ಭವ ತರಿದು ಅನುಭವಕೆ ತಂದು ಇತ್ತು
ಭುವನದೊಳಗೆ ದಶರಥರಾಯನೆ ಆದ
ಭವರೋಗದ ವೈದ್ಯ ಗೋಪಾಲವಿಠಲನು
ಪವನ ನಂತರ ನಿಂತು ಪಂಡಿತರನು ಪೊರೆವ ೨

ರೂಪಕತಾಳ

ಸಿರಿದೇವಿ ಪೆಸರಿನ ತೀರ್ಥ ಇಲ್ಲುಂಟು
ಗರುಡತೀರ್ಥ ಉಂಟು ಉರಗತೀರ್ಥ ಉಂಟು

ನರರ ಉದ್ಧರಿಸಲು ವಾಯುತೀರ್ಥ ಉಂಟು
ಪರಿ ಪರಿ ಪೆಸರಿನ ತೀರ್ಥಗಳಿಲ್ಲುಂಟು
ನರಹರಿ ತಾನೆ ಒಂದೊಂದು ತೀರ್ಥದಿ ಇದ್ದು
ಧರೆ ಮೇಲಿದ್ದ ಜನರ ಪೊರೆವ ತಿಳಿದವರಿಗೆ
ಕರುಣಾಕರ ದೇವ ಗೋಪಾಲವಿಠಲ ತನ್ನ
ಶರಣರ ಪೊರೆಯಲು ಇರುತಿಪ್ಪುವನಿಲ್ಲಿ ೩

ಝಂಪೆತಾಳ

ಸಿರಿವತ್ಸಕೌಸ್ತುಭ ಸಿರಿಗಂಧ ಕೊರಳ
ಅರಳಿದ ಪೂಮಾಲೆ ಆ ಉರದ ಮೇಲೊಲೆಯೆ
ಕರಣಕುಂಡಲ ಕಸ್ತುರಿ ನೊಸಲು ಥಳಥಳಿಸೆ
ಕಿರಿದಂತ ಕಪ್ಪುರದಕರಡಿಗೊದನ
ಸಿರಿ ಕಿರೀಟವು ಸಿರಿನಾಮ ಕಸ್ತುರಿತಿಲಕ
ಕರ ಚತುರ್ಭುಜ ಶಂಖಚಕ್ರಾಯುಧ
ವರನಾಭಿಯಿಂದ ಒಪ್ಪೊ ಒಡ್ಯಾಣ ಕಟಿ-
ತರ ಮೇಲೆ ಉಡುಗೆ ಕಿಂಕಿಣಿಯ ಗಂಟೆ
ಊರು ಜಾನು ಜಂಘೆ ಜಘನ
ಶರಣರ ಮೋಹಿಪ ರೂಪ ಸಿರಿನಾರೇಯಣ ಶೃಂ-
ಗಾರಮೂರ್ತಿ ಗರುಡವಾಹನ ಗೋಪಾಲವಿಠಲ
ಪರಿವಾರದೊಡೆಯ ಪರಬೊಮ್ಮ ಕಾಣೊ ೪

ತ್ರಿಪುಟತಾಳ

ಇಲ್ಲಿ ಉಂಟು ಅಲ್ಲಿ ಇಲ್ಲ ಅಲ್ಲಿ ಉಂಟು ಇಲ್ಲೆ ಇಲ್ಲ
ಸೊಲ್ಲನಾಡಸಲ್ಲದಿನ್ನು ಬಲ್ಲವರಿಗಲ್ಲೆ ಕೈವಲ್ಯ
ಬೆಲ್ಲದಚ್ಚು ಆವ ಕಡೆಯಿಂದಾದರೂ ತಿನ್ನಲು
ಬೆಲ್ಲ ಒಂದು ಕಡೆಯಾಗಿ ಕಲ್ಲು ಒಂದು ಕಡ್ಯಾಗೋದೆ
ಎಲ್ಲಿ ನೋಡಾ ಹರಿ ಇರಲು ಇಲ್ಲಿಗೆ ಬಂದದ್ಯಾಕೆನಲು
ಸುಲಭದಿ ತಿಳಿವ ಸ್ಥಳದಲ್ಲಿ ಮಹಾತ್ಮೆ ಉಂಟು

ಕುಂಭಸಂಭವ – ಅಗಸ್ತ್ಯ

ಕುಂಭಿಣಿ – ಭೂಮಿ

ಕುಕ್ಷಿ – ಹೊಟ್ಟೆ

ಕುಬ್ಜಿತ < ಕುಬ್ಜಿತ – ಕೀಳಾದದ್ದು, ಅಲ್ಪ, ನೀಚ

ಕುಜೀವ – ಕೆಟ್ಟಜೀವ

ಕುಟ್ಮಲ – ಮೊಗ್ಗು

ಕುಣಪ – ಶವ, ಹೆಣ

ಕುತ್ಸಿತ – ನಿಂದ್ಯವಾದ

ಕುನ್ನಿ – ನಾಯಿಮರಿ

ಕುರುಹು – ಗುರುತು

ಕುಲಾಲ – ಕುಂಬಾರ

ಕುಸುಮಸಂಭವ – ಬ್ರಹ್ಮ

ಕೂಪ – ಬಾವಿ

ಕೇಯೂರ – ಕೈಗೆ ಧರಿಸುವ ಆಭರಣ

ಕೈವಲ್ಯ – ಮೋಕ್ಷ

ಕೊಣ < ಕೊಳ

ಕೋಡಗ – ಕೋತಿ

ಕೋರಕ – ಮೊಗ್ಗು

ಕೋರಿ – ಬೇಡಿ

ಕೋವಿದ – ಪಂಡಿತ

ಕೋಶಗಳು – ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಕೋಶಗಳು

ಕ್ರತು – ಯಜ್ಞ

ಕ್ಲಿಪುತ < ಕ್ಲುಪ್ತ – ನಿಗದಿಯಾದ, ಗೊತ್ತುಪಡಿಸಿದ

ಕ್ಲುಪ್ತ – ನಿಗದಿಯಾದ, ಗೊತ್ತುಪಡಿಸಿದ

ಕ್ಲೇಶ – ದುಃಖ, ತೊಂದರೆ

ಕ್ಷಿತಿ – ಭೂಮಿ

ಕ್ಷುಧೆ – ಹಸಿವು

ಕ್ಷುಲ್ಲಕ – ಕೀಳುಮನುಷ್ಯ, ಅಲ್ಪ

ಕ್ಷೋಣಿ – ಭೂಮಿ

ಖಗ – ಪಕ್ಷಿ

ಖಗವಾಹನ – ಪಕ್ಷಿವಾಹನ, ವಿಷ್ಣು

ಖಡಿಯ < ಕಡೆಯ – ಕಡಗ

ಖಳ – ದುಷ್ಟ

ಖುಲ್ಲ – ನೀಚ

ಖೂನ – ಗುರುತು

ಖೇಚರ – ಆಕಾಶದಲ್ಲಿ ಸಂಚರಿಸುವವನು

ಖೋಡಿವಿಷಯ – ಕೆಟ್ಟವಿಷಯ

ಗಗನಮಣಿ – ಸೂರ್ಯ

ಗಜಹಾನ < ಗಜಹನನ – ಸಿಂಹ

ಗದ್ದು(ದ್ದಿ)ಗೆ – ಸಿಂಹಾಸನ, ಪೀಠ

ಗರಳ – ವಿಷ

ಗುಂಭ – ಆಳ

ಗುಣಗಳೇವೆ – ಗುಣಗಳನ್ನೇ
ಗುಪಿತ < ಗುಪ್ತ – ಗುಟ್ಟು, ರಹಸ್ಯ
ಗೇಹ – ಮನೆ, ಗೃಹ
ಗೋಣು – ಕುತ್ತಿಗೆ
ಗೋವಳ – ದನಗಾಹಿ
ಗೋಷ್ಪಾದ – ಹಸುವಿನ ಹೆಜ್ಜೆ
ಗೋಳಕತ್ರಯ – ಸ್ವರ್ಗ, ಮರ್ತ್ಯ, ಪಾತಾಳ
ಘಕ್ಕನೆ – ಕೂಡಲೆ
ಘೋರಿಸು – ಹೆದರಿಕೆಯನ್ನುಂಟು ಮಾಡು
ಘ್ರಾಣ – ಮೂಗು
ಚಕ್ರಧರ – ಕೃಷ್ಣ
ಚಕ್ಷು – ಕಣ್ಣು
ಚರಿಯ < ಚರ್ಯ – ಚಲನೆ, ನಡತೆ
ಚರಿಸಿ – ಸಂಚರಿಸಿ
ಚಾರು – ಮನೋಹರ
ಚಿತ್ತಜ – ಮನ್ಮಥ
ಚಿನುಮಯ < ಚಿನ್ಮಯ – ಪರಬ್ರಹ್ಮ
ಚಿನ್ನಾಟ – ಹುಡುಗಾಟ
ಚುನ್ನಾಟ – ಅಪಹಾಸ್ಯ
ಚುಬುಕ – ಗಲ್ಲ
ಚೂತ – ಮಾವು
ಚೂಲಿ – ತುದಿ, ಶಿಖರ
ಚೋರ – ಕಳ್ಳ
ಚೌಕಳಿ – ಕಿವಿಯ ಆಭರಣ
ಚ್ಯುತ – ನಾಶವಾಗುವ
ಚ್ಯುತರಹಿತ – ನಾಶವಿಲ್ಲದ
ಛಿಂದೆ ಇಲ್ಲದ – ಕುಂದಿಲ್ಲದ ?
ಜಂಘೆ – ಕೆಳದೊಡೆ
ಜಂಬುಕ – ನರಿ
ಜತ್ತಾಗಿ – ಜೋಪಾನವಾಗಿ
ಜನುಮ < ಜನ್ಮ – ಹುಟ್ಟು
ಜರಿದು – ಬಿಟ್ಟು
ಜವ – ಯಮ
ಜಾಗರ – ಎಚ್ಚರ, ಜಾಗ್ರತಾವಸ್ಥೆ
ಜಾನು – ಮಂಡಿ, ಮೊಳಕಾಲು
ಜಿಷ್ಣು – ಜಯಿಸುವವ, ಅರ್ಜುನ
ಜಿಹ್ವೆ – ನಾಲಗೆ
ಜ್ವಲ್ಲಿಸು < ಜ್ವಲಿಸು – ಹೊಳೆ, ಪ್ರಕಾಶಿಸು
ಝಷ – ಮೀನು
ಠಕ್ಕಿಸಿ – ಮೋಸಗೊಳಿಸಿ
ಠಾವು – ನೆಲೆ
ಡಿಂಗರಿಗೆ – ಭಕ್ತರಿಗೆ
ತಂಡುಲ – ಅಕ್ಕಿ
ತಟಾಕ – ಕೆರೆ
ತಡಹು – ಹುಡುಕು
ತಡಿ – ದಡ
ತತ್ಥಳಿಪ – ಥಳಥಳಿಪ
ತಪುತ < ತಪ್ತ – ಕಾಯಿಸಿದ

ಅಲ್ಲಿಂದ ಬಂದದ್ದು ಏನು
ಇಲ್ಲಿಂದ ಕೊಂಡೊಯಿದುದೇನು
ಬಲ್ಲ ಜ್ಞಾನಿಗಳು ಮನದಲ್ಲಿದ್ದು ಗುಣಿಸಿ ನೋಡಿ
ಮಲ್ಲಮರ್ದನ ರಂಗ ಗೋಪಾಲವಿಠಲ
ಎಲ್ಲಿ ನೋಡಲು ವಿಶ್ವಮೂರ್ತಿ ತಾ ಪೊಳೆವ ೫

ಅಟ್ಟತಾಳ

ನೋಡುವ ತನ್ನ ತಾ ಒಬ್ಬರಲ್ಲಿ ನಿಂತು
ಬೇಡುವ ತನ್ನ ತಾ ಒಬ್ಬರಲ್ಲಿ ನಿಂತು
ಮಾಡುವ ತನ್ನ ತಾ ಒಬ್ಬರಲ್ಲಿ ನಿಂತು
ನೀಡುವ ತನಗೆ ತಾ ಒಬ್ಬರಲ್ಲಿ ನಿಂತು
ಕೆಡುವಲಾಭಂಗಳ ಕೂಡಿ ಉಣಿಸುವನ
ಗೂಡು ಮಾಡಿಟ್ಟಂಥ ಜಡ ಜೀವರಿಗೆ
ಗಾಡಿಕಾರ ದೇವ ಗೋಪಾಲವಿಠಲ
ಕೂಡಿ ಆಡುತ ನಮ್ಮೊಡನೆ ಸುತ್ತುತಲಿಪ್ಪ ೬

ಆದಿತಾಳ

ಇಲ್ಲೆ ಅನಂತಾನಂತವಾಗಿ ಮೆಲ್ಲನೆ ತಾ ತೋರುತಿಪ್ಪ
ಇಲ್ಲೆ ಅನಂತಾಯುಧಗಳು ಬಲ್ಲವರಿಗೆ ತೋರುತಿಪ್ಪ
ಇಲ್ಲೆ ಅನಂತರೂಪಗಳು ಬಲ್ಲವರಿಗೆ ತೋರುತಿಪ್ಪ
ಇಲ್ಲಿ ಒಂದು ಕರ್ಮವು ಮಾಡೆ ಅನಂತಮಡಿ ಅವರಿಗೀವ
ಎಲ್ಲಿ ನೋಡಾ ತೀರ್ಥಗಳು ಎಲ್ಲಿ ನೋಡಾ ದೇವತೆಗಳು
ಎಲ್ಲಿ ನೋಡಾ ಮುನಿಗಳು ಎಲ್ಲಿ ನೋಡಾ ತಾಪಸಿಗಳು
ನಿಲ್ಲಿಸಿಪ್ಪರೊಂದು ಒಂದು ಬಳ್ಳಿ ವೃಕ್ಷರೂಪದಿಂದ
ಪಲ್ಲವಿಸುತ ನಾನಾ ಪಕ್ಷಿಜಾತಿ ರೂಪದಿಂದ
ಹುಲ್ಲುಕಾಷ್ಠಗಳನ್ನು ಇಲ್ಲಿ ಛೇದಿಸುವುದಕ್ಕೆ
ಮೆಲ್ಲನೆ ತಿಳಿದು ಹರಿಗಲ್ಲಿ ಇನ್ನರ್ಪಿಸಬೇಕು

ಎಲ್ಲ ಪುಷ್ಪಫಲವು ಶ್ರೀವಲ್ಲಭನ್ನ ಸೇವಿಸುತ್ತ
ಇಲ್ಲಿ ಇರುತಿಪ್ಪುವು ಬಲ್ಲವರು ತಿಳಿದು ನೋಡಾ
ಎಲ್ಲರಂತರ್ಯಾಮಿಯಾದ ಬಲ್ಲಿದ ಗೋಪಾಲವಿಠಲ
ಅಲ್ಲಿ ಪ್ರಹ್ಲಾದಗೊಲಿದು ಇಲ್ಲಿ ಬಂದ ದೈವ ನೋಡಿ ೭

ಜತೆ

ಅನಂತನ ನೋಡಿ ಅನಂತನ ಬೇಡಿ
ಅನಂತ ಒಂದೆದೈವ ಗೋಪಾಲವಿಠಲನೆನ್ನಿ

೧೭೫

ಈ ಪರಿಯ ಅಧಿಕಾರ ಒಲ್ಲೆ ನಾನು* ಪ.

ಶ್ರೀಪತಿಯೆ ನೀನೊಲಿದು ಏನು ಕೊಟ್ಟುದೆ ಸಾಕು ಅ.ಪ.

ಚಿರಕಾಲ ನಿನ್ನ ಕಾದು ತಿರುಗಿದುದಕೆ ನೀನು
ಕರುಣದಿಂದಲಿ ರಚಿಸಿ ಈ ದುರ್ಗದಿ
ಇರ ಪೇಳಿದುದಕೆ ನಾ ಹೊಕ್ಕು ನೋಡಿದೆ ಒಳಗೆ
ಹುರುಳು ಲೇಶವು ಕಾಣೆ ಕರೆ ಕರೆಯು ಮೇಲೆ ೧

ದಾರಿಯಲ್ಲಿ ಹೋಗಿ ಬರುವುದಕ್ಕೆ ಉಪಟಳ ಘನ್ನ
ಚೋರರಟ್ಟುಳಿಗಂತು ನೆಲೆಯಿಲ್ಲವೋ
ವೈರಿ ವರ್ಗದ ಜನರು ಒಳಗೆ ಬಲು ತುಂಬಿಹರು
ಮೀರಿ ನಿನ್ನವರಲ್ಲಿ ಊರಿ ನಿಲ್ಲಲಿಗೊಡರು ೨

ನಾಮಾಂಕಿತಕೆ ಮಾತ್ರ ಅಧಿಕಾರವೆನಗಿತ್ತೆ
ಸ್ವಾಮಿತ್ವವನು ನೋಡೆ ಮನೆಮನೆಯಲಿ

* ಈ ಕೀರ್ತನೆ ಪುರಂದರವಿಠಲ ಅಂಕಿತದಲ್ಲೂ ದೊರೆಯುತ್ತದೆ.

ಭೀಮ ವಿಕ್ರಮರವರು ದುರ್ಬಲಾಗ್ರಣಿ ನಾನು
ಗ್ರಾಮ ಒಪ್ಪಿಸಿ ನಮಿಪೆ ಸರಿ ಬಂದುದನೆ ಮಾಡೊ ೩

ಸರಿಬಂದ ವ್ಯಾಪಾರ ತಾವು ಮಾಡಿ ಎನ್ನ
ಬರಿದೆ ಲೆಕ್ಕಕ್ಕೆ ಮಾತ್ರ ಗುರಿಯ ಮಾಡಿ
ಕರೆಕರೆಯ ಪಡಿಸಬೇಕೆಂದು ಯೋಚಿಸುತಿಹರು
ಕರೆದು ವಿಚಾರಿಸಿ ನ್ಯಾಯ ಮಾಡಿಸು ದೊರೆಯೆ ೪

ಕಾಲಕ್ಕೆ ಕರೆಯ ಬಂದವರಿಗೆ ಒಳಗಾಗಿ
ಪಾಳತಿಯೊಳೊಪ್ಪಿಸಿಕೊಡುವೆವೆಂದು
ಆಲೋಚಿಸಿಹರು ಈಗ ನಿನ್ನ ನಿಜ-
ಆಳುಗಳ ಬಲ ಮಾಡಿ ಎನ್ನ ರಕ್ಷಿಸೊ ದೊರೆಯೆ ೫

ಕ್ಷಣಕೆ ನೂರುಪಟಳ ಈ ಕೋಟೆಗೆಲೊ ರಾಯ
ಅನುವಾದ ದಿವಸ ಒಂದಾದರಿಲ್ಲ
ಮೊನೆಗಾರ ಬಲವಿಲ್ಲ ಇದ್ದವರು ವಶವಿಲ್ಲ
ಕೊನೆಗೊಂಡು ಗ್ರಾಮ ಕಾಪಾಡುವ ಬಗೆ ಎಂತೊ ೬

ಇನಿತನಾಯಕದ ಕೊಂಪೆ ಒಳಗಿನವಾಸ-
ವನು ಬಿಡಿಸಿ ನಿನ್ನ ನಿಜ ಪಟ್ಟಣದೊಳು
ಮನೆಮಾಡಿಕೊಡಲು ನಿನ್ನ ಹೊಂದಿಕೊಂಡು
ಅನುಗಾಲ ಬದುಕುವೆನೊ ಗೋಪಾಲವಿಠಲ ೭

೧೭೬

ಎನ್ನ ಬಿನ್ನಪ ಕೇಳು ಧನ್ವಂತ್ರಿ ದಯಮಾಡು ಸಣ್ಣವನು ಇವ ಕೇವಲ
ಬನ್ನಬಡಿಸುವ ರೋಗವನ್ನು ಮೋಚನೆ ಮಾಡಿ
ಚೆನ್ನಾಗಿ ಪಾಲಿಸುವುದು ಕರುಣಿ ಪ.

ಆರೋಗ್ಯ ಆಯುಷ್ಯ ಐಶ್ವರ್ಯವೆಂಬೊ ಈ ಮೂರುವಿಧ ವಸ್ತುಗಳು
ನಾರಾಯಣನ ಭಜಕರಾದವರ ಸಾಧನಕೆ ಪೂರ್ಣವಾಗಿಪ್ಪುವು
ಘೋರ ವ್ಯಭಿಚಾರ ಪರನಿಂದೆ ಪರ ವಿತ್ತಾಪಹಾರ ಮಾಡಿದ ದೋಷದಿ
ದರಿದ್ರರಾಗುವರು ಮೂರು ವಿಧದಿಂದಲಿ
ಕಾರಣನು ನೀನೆ ದುಷ್ಕರ್ಮ ಪರಿಹರಿಸುವುದು ಹರಿಯೆ ೧

ವಸುಮತಿಯ ಮೇಲಿನ್ನು ಅಸುರ ಜನರೆ ಬಹಳ ವಶವಲ್ಲ ಕಲಿಯ ಬಾಧೆ
ಬಿಸಿಲಿಂದ ಪೀಡಿತವಾದ ಸಸಿಗಳಂತೆ ಶಿಶುಗಳು ನಾವಿಪ್ಪೆವು
ಅಸುರಾರಿ ನಿನ್ನ ಕರುಣಾಮೃತದ ಮಳೆಗರೆದು ಕುಶಲದಿ ಪಾಲಿಸುವುದು
ಕೆಸರಿಂದ ಕೆಸರು ತೊಳೆದಂತೆ ಕರ್ಮದ ಪಥವು ಅಸುನಾಥ
ಹರಿಯೆ ಪೊರೆಯೊ ಸ್ವಾಮಿ ೨

ಆದಿವ್ಯಾಧಿಗಳು ಉನ್ಮಾದ ವಿಭ್ರಮ ನಾನಾ ಬಾಧೆಗೌಷಧವು ನೀನೆ
ಹೇ ದೇವ ನಿನ್ನ ಕರಕುಶಲ ಸುಧೆವೆರೆದು ಸಾಧುಗಳ ಸಂತೈಸುವಿ
ಮೋದ ಬಡಿಸುವಿ ನಿನ್ನ ಸಾಧಿಸುವರಿಗೆ ಶುಭೋದಯಂಗಳನೀವಿ
ಆದರಿಸಿ ಇವಗೆ ತವ ಪಾದ ಧ್ಯಾನವನಿತ್ತು ಸಾಧುಗಳೊಳಗಿಟ್ಟು
ಮೋದಕೊಡು ಸರ್ವದಾ ೩

ಅನ್ಯರನು ಭಜಿಸದಲೆ ನಿನ್ನನೆ ಸ್ತುತಿಸುತ ನಿನ್ನ ಚಿಹ್ನೆಗಳ ಧರಿಸಿ
ನಿನ್ನವರವನೆನಿಸಿ ನಿನ್ನ ನಾಮೋಚ್ಚರಿಸಿ ನಿನ್ನಿಂದ ಉಪಜೀವಿಸಿ
ಅನ್ನ ಆರೋಗ್ಯಕ್ಕೆ ಅಲ್ಪಜೀವಿಗಳಿಗೆ ಇನ್ನು ಆಲ್ಪರಿಯಬೇಕೆ
ನಿನ್ನ ಸಂಕಲ್ಪ ಭಕ್ತರ ಪೋಷಕನೆಂಬ ಘನ್ನ ಬಿರು
ದಿನ್ನು ಉಳುಹೊ ಸಲಹೊ ೪

ನಿನ್ನವರಲಿ ಇವಗೆ ಇನ್ನು ರತಿಯನ್ನು ಕೊಟ್ಟು ನಿನ್ನವನೆಂದು ಅರಿದು
ನಿನ್ನ ನಾ ಪ್ರಾರ್ಥಿಸಿದೆ ಅನ್ಯರಿಗೆ ಆಲ್ಪರಿಯೆ ಎನ್ನ ಪಾಲಿಸುವ ದೊರೆಯೆ
ಎನ್ನ ಮಾತಲ್ಲವಿದು ಎನ್ನ ಹಿರಿಯರ ಮಾತು ಮನ್ನಿಸಬೇಕು ಕರುಣಿ
ಅನಂತ ಗುಣಪೂರ್ಣ ಗೋಪಾಲವಿಠಲ
ಇನ್ನಿದನೆ ಪಾಲಿಸುವುದೊ ಸ್ವಾಮಿ ೫

೧೭೭

ಏಳು ಆರೋಗಣೆಗೆ ಏಕೆ ತಡವೊ ಪ.

ಆಲಸ್ಯಮಾಡದಲೆ ಮೂಲರಾಮಚಂದ್ರ ಅ.ಪ.

ಕುಡಿಬಾಳಿದೆಲೆ ಹಾಕಿ ಸಡಗರದಿಂದ ಎಡೆಮಾಡಿ
ಮಣೆ ಹಾಕಿ ಮುತ್ತಿನ ಶೆಮ್ಯ?ಗಳಿಟ್ಟು
ಮುಡಿಸಿ ದೀಪಗಳು ಹಚ್ಚಿ ಉದಕ ರಂಗೋಲಿ ಹಾಕಿ
ಬಡಿಸಲು ಶ್ರೀದೇವಿ ಬಂದು ನಿಂದಿಹಳು ೧

ಪುಡಿ ಉಪ್ಪು ಚಟ್ನಿ ಕೋಸಂಬರಿ ಉಪ್ಪಿನಕಾಯಿ
ಪಡವಲಕಾಯಿ ಜೆವಳೀಕಾಯಿಯು
ಅಡವಿಗುಳ್ಳದ ಪಳಿದ್ಯ ಆಂಬೊಡೆ ಫೇಣಿಯು
ಬಡಿಸಲು ಶ್ರೀದೇವಿ ಬಂದು ನಿಂದಿಹಳು ೨

ಎಣ್ಣೂರಿಗತಿರಸವು ಸಣ್ಣ ಶ್ಯಾವಿಗೆ ಫೇಣಿ
ಬೆಣ್ಣೆದೋಸೆ ಹುಗ್ಗಿ ಅನ್ನ ದಧ್ಯಾನ್ನ ತೀರ್ಥಾನ್ನಗಳನು
ಕಾಯಿಹಾಲು ಬಡಿಸಲು
ಬಣ್ಣಿಸಿ ಶ್ರೀದೇವಿ ಬಂದು ನಿಂತಿಹಳು ೩

ಗಂಧ ಕಸ್ತೂರಿ ಪುನಗು ಕರ್ಪೂರದ ವೀಳ್ಯ
ಚೆಂದಾಗಿ ಮಡಿಸಿ ಕೈಲಿ ಹಿಡಿದುಕೊಂಡು
ದುಂಡುಮಲ್ಲಿಗೆ ಹೂವ ಅಂದವಾಗಿ ಕಟ್ಟಿ
ರಂಭೆ ಜಾನಕಿದೇವಿ ಹಿಡಿದು ನಿಂತಿಹಳು ೪

ನಿತ್ಯ ತೃಪ್ತನೆ ನಿನ್ನ ಉದರದೊಳಿಹ
ಉತ್ತಮ ಪುರುಷನೆ ಉಣಲು ಏಳು
ಮುಕ್ತಿದಾಯಕ ನಮ್ಮ ಗೋಪಾಲವಿಠಲ
ಭಕ್ತರ ಬಿನ್ನಪವ ನೀ ಕೇಳಿ ಬಾರೊ ೫

೧೭೮

ದೇವಿ ಅಂಬುಜವಲ್ಲಿ ರಮಣನೆ ಭೂವರಾಹ ದಯಾನಿಧೆ ಪ.

ಪವಮಾನನ ದಿವ್ಯ ಕರದಲಿ ಸೇವೆ ಸಂತತಗೊಳ್ಳುವಿ ಅ.ಪ.

ಅವನಿಯೊಳು ಶ್ರೀಮುಷ್ಣಕ್ಷೇತ್ರದಿ ನೀ ವಿಹಾರವ ಮಾಡುವಿ
ಭವವಿಮೋಚನ ಭಕ್ತವತ್ಸಲ ಕವಿಗಳಿಗೆ ಕರುಣಾಕರ ೧

ಅತ್ಯಗಾಧ ಸುಶೀಲ ಜಾಹ್ನವಿ ಸುತ್ತು ಷೋಡಶತೀರ್ಥದಿ
ನಿತ್ಯ ಪುಷ್ಕರಿಣಿಯ ಗರ್ಭದಿ ನಿತ್ಯ ಇರುವುದು ಕಂಡೆ ನಾ ೨

ಮತ್ತು ವರ್ಣಿಪೆ ತೀರ್ಥ ತಟದಲಿ ಉತ್ತಮಾಗ್ನೇಯಭಾಗದಿ
ಚಿತ್ತವೇದ್ಯದಿ ಕಲ್ಪತರು ಅಶ್ವತ್ಥರೂಪದಿ ಇರುವನ ೩

ಕರಗಳೆರಡು ಕಟಿಯಲಿಟ್ಟು ಕೋರೆಹಲ್ಲನೆ ತೋರುತ
ಧರಿಸಿ ಚಿನ್ಮಯ ಸಾಲಿಗ್ರಾಮದ ಸರವು ಈ ಪರಿ ಬೆಳಗುತ ೪

ಘನ್ನಶ್ವೇತವರಾಹಮೂರುತಿ ಎನ್ನ ಪೂರ್ವದ ಪುಣ್ಯದಿ
ನಿನ್ನ ಶುಭಕರ ಪಾದಪಂಕಜವನ್ನು ಕಂಡೆನು ಇಂದು ನಾ ೫

ಸುಂದರಾನನ ಕಂಜಮಧುಪನ ಇಂದು ನೋಡಿದ ಕಾರಣ
ಬಂದ ದುರಿತಗಳೆಲ್ಲ ಹೋದವು ಚೆಂದ ಶುಭಕರವಾದವು ೬

ಮಲ್ಲಮರ್ದನ ವೈಕುಂಠದಿಂದ ಮೆಲ್ಲಮೆಲ್ಲನೆ ಬಂದೆಯ
ಝುಲ್ಲಿಕಾವನದಲ್ಲಿ ಕುಳಿತು ಎಲ್ಲ ಭಕ್ತರ ಸಲಹುವಿ ೭

ಸೂಕರಾಸ್ಯನೆ ನಿನ್ನ ಪಾದಕನೇಕ ವಂದನೆ ಮಾಡುವೆ
ಶೋಕಹರ ಗೋಪಾಲವಿಠಲ ನೀ ಕರುಣಿಸಿ ರಕ್ಷಿಸೊ ೮

೧೭೯

ನಡೆದು ಬಾರಯ್ಯ ನೀನು ವೆಂಕಟರಾಯ ಪ.

ನಡೆದು ಬಾರಯ್ಯ ಭವಕಡಲಿಗೆ ಕುಂಭಸಂಭವ
ಸಡಗರದಿಂದ ನೀ ಮೆಲ್ಲಡಿಯನಿಡುತ ಬೇಗ
ಎಡಬಲದಲಿ ನಿನ್ನ ಮಡದೇರಿಂದೊಪ್ಪುತ
ತಡಮಾಡದೆ ಬಾ ಮೃಡಸಖ ವೆಂಕಟ ಅ.ಪ.

ವಿಜಯದಶಮಿ ಆಶ್ವೀಜಮಾಸ ಶುದ್ಧದಲ್ಲಿ
ನಿಜರಥಾರೂಢನಾಗಿ ಸುಜನರಿಂದೊಡಗೂಡಿ
ಗಜಹಂಸ ಮಯೂರ ದ್ವಿಜ ಸಿಂಗ ಸಾರಂಗ
ಮಜ ಭಾಪುರೆ ಎನಲು ತ್ರಿಜಗವು ತಲೆದೂಗೆ
ಅಜನು ಸ್ತುತಿಯ ಮಾಡೆ ಖಜಗಣಾಧಿಪ ಪಾಡೆ
ಗಜಮುಖನಯ್ಯನು ನಿಜಾನಂದದಲಾಡೆ
ಭುಜಗಶ್ರೇಷ್ಠನು ದ್ವಿಜರಾಜ ಜಯವೆನ್ನೆ
ಕುಜನರೆದೆಯ ಮೆಟ್ಟಿ ರಜತಮ ಕಳೆಯುತ ೧

ದಕ್ಷಿಣ ದಿಕ್ಕಿನಲ್ಲಿ ರಾಕ್ಷಸ ಸಮೂಹ ಒಂ-
ದಕ್ಷೋಹಿಣಿ ಬಲ ನಿನ್ನುಪೇಕ್ಷೆ ಮಾಡುತಲಿರೆ
ಪಕ್ಷಿವಾಹನದೇವ ನೀನಾಕ್ಷಣದಿ ಖಳರ
ಶಿಕ್ಷಿಸಿ ಸುಜನರ ರಕ್ಷಿಸಿ ಮೆರೆದೆ
ತಕ್ಷಕ ನರನ ಭಕ್ಷಿಸ ಬರುತಿರೆ ಈಕ್ಷಿಸಿ ರಥವ
ತಕ್ಷಣ ನೆಲಕೊತ್ತಿದೆ ಲಕ್ಷ್ಮೀಶನೆ ಅಕ್ಷಯ ಫಲದಾಯಕ
ಕುಕ್ಷಿಯೊಳಗೆ ಜಗರಕ್ಷಿಪ ವಿಶ್ವನೆ ೨

ಅಂಬುಜಾಕ್ಷನೆ ಬಾರೊ ಅಂಬುಜವದನನೆ
ಅಂಬುಜಾಲಯಪತಿ ಅಂಬುಜನಾಭನೆ
ಅಂಬುಜಜನಕ ಅಂಬುಜಾರಿಧರಹೃದ-
ಯಾಂಬುಜನಿವಾಸ ಅಂಬುಜಮಿತ್ರ ಅನಂತಾನಂತತೇಜ

ಕೊಂಬು ಕಹಳೆಗಳು ಭೋಂಭೋರಿಡುತಿರೆ
ತುಂಬುರನಾರದರಿಂಬಾಗಿ ಪಾಡಲು
ಅಂಬರದಲಿ ವಾದ್ಯ ಧಂಧಣರೆನೆ
ಸಂಭ್ರಮದಲಿರೊ ಶಂಭು ವಂದಿತನೆ ೩

ಮನಕೆ ಬಾರಯ್ಯ ಸುಧಾಮನ ಸಖ ಹರಿಯೆ ಸೋ-
ಮನ ಧರಿಸಿದವನ ಮನ ಕುಮುದಕೆ ಚಂದ್ರ-
ಮನೆ ಕೇಳೊ ಎನ್ನ ದುಮ್ಮಾನ ಪರಿಹರಿಸೊ ಒ-
ಮ್ಮನ ಕೊಡು ಅಹಿಗಿರಿ ತಿಮ್ಮನೆ ಕೇಳೆನ್ನ ಬಿನ್ನಪವ
ಮನ ನಿನ್ನದು ಹೇ ಮನಸಿಜಪಿತ ಸುಮನಸರೊಡೆಯ ಬೊ-
ಮ್ಮನ ಪೆತ್ತವನೆ ಸುಮ್ಮನೆ ತಡವ್ಯಾಕೊ ನಿ-
ಮ್ಮನೆಯವರೊಡನೆ ಇಮ್ಮನ ಮಾಡದೆ ಗಮ್ಮನೆ ಬಾ ವೆಂಕಟ ೪

ಪರಿಪರಿಯಿಂದಲಿ ಕರವ ಮುಗಿದು ಸ್ತುತಿಸಿ
ಕರೆದರೆ ಬಾರದ ಗರ್ವತನವು ಯಾಕೊ
ಕರಿಯ ಮೊರೆಯ ಕೇಳಿ ಸಿರಿಗೆ ಹೇಳದೆ ಬಂದೆ
ಕರಿರಾಜ ಅವನಿನ್ನ ಕಿರಿಯಪ್ಪನ ಮಗನೇನೊ
ಶರಣಾಗತರಕ್ಷ ವರಮಣಿ ಎಂಬೊ
ಬಿರುದು ಬೇಕಾದರೆ ಸರ್‍ರನೆ ಬಾರಯ್ಯ
ಗರುಡಗಮನ ಗೋಪಾಲವಿಠಲರೇಯ
ಕರುವಿನ ಮೊರೆಗಾವು ನೆರೆದಂತೆ ಮೊರೆಯುತ ೫

೧೮೦

ಸುಳಾದಿ

ಧ್ರುವತಾಳ

ನೀಲಗುದುರೆಯನ್ನೇರಿ ಶಾಲು ಸೊಂಟಕ್ಕೆ ಸುತ್ತಿ
ಕಾಲುಕುಪ್ಪಸ ತೊಟ್ಟು ಮೇಲೆ ಮೋಹನ್ನ ಹಾಕಿ

ಓಲ್ಯಾಡಿಸುತ್ತ ಒಂಟಿ ಢಾಳಾಗಿ ಶೋಭಿಸಲು
ಸಾಲು ಬೆರಳುಂಗುರ ಕೈಲಿ ಖಡ್ಗವ ಪಿಡಿದು
ತೋಳು ತಾಯಿತ ಶಿರಕೆ ಮೇಲಾದ ವಸ್ತ್ರ ಸುತ್ತಿ
ಫಾಲ ಕಸ್ತೂರಿನಿಟ್ಟು ಮೈಲಿ ಗಂಧವ ಪೂಸಿ
ಪಾಲಾಯನದಿ ಅಶ್ವವೇರಿ ಓಲ್ಯಾಡಿಸುತ್ತ
'ಆಲೆನಾಹಿ' ಎಂದು ಕೇಳಿದವನಾರವ್ವ
ವೇಳೆ ಸಾಲದ್ಹೋಯಿತು ಕೇಳುವುದಕ್ಕೆನಗೆ
ಹೇಳುವುದಕ್ಕೆ ವಚನಗದ್ಗದದಿ
ಏಳದು ವಚನ ಉಚ್ಚರಿಸುವೆನೆನಲು
ಆಲೋಚನೆಗೆ ಅತಿವಿಚಿತ್ರವು
ಕೇಳಿಲ್ಲ ಕಂಡಿಲ್ಲ ಇಂಥ ಪುರುಷನ್ನ ಎಂದೂ
ಕಾಳಗತ್ತಲು ಅಲ್ಲ ಅತ್ತ ನೋಡು ಹಗಲು
ಕೇಳು ತಗ್ಗು ಮಿಟ್ಟೆ ಮೇಲೆ ಮಂಜುರವಲ್ಲ
ಹೇಳಲೇನಿದು ಒಂದು ಸೋಜಿಗವು ಕಾಲು
ಏಳವು ಮುಂದೆ ನಡೆಯಲು ಎನಗಿನ್ನು
ಆಲೋಚನೆಯೆಲ್ಲ ಅತ್ತಲಾಗಿ ಎನ್ನ
ಕೇಳಿದನಲ್ಲೆ ಅರೆ ಮಾತಿನಿಂದಲಿ ಎನ್ನ
ಹೇಳುವ ಪುರುಷನು ಆವನಾಗುವನು
ಆಲೋಚನೆಗೆ ಎನಗೆ ತೋರುತಲಿದೆ ತುಲಸಿ-
ಮಾಲೆ ಪರಿಮಳಗಂಧ ಕುರುಹದಿಂದ
ಶೀಲಮೂರುತಿ ಪಂಡರಿರಾಯ ಗೋಪಾಲವಿಠಲ
ಓಲ್ಯಾಡಿ ಕುದುರೆ ಓಲ್ಯಾಡಿಸುತ್ತ ಪೋದನಲ್ಲೆ ೧

ಮಠ್ಯತಾಳ

ಕಂಡಿರ್‍ಯಾ ಕಂಡಿರ್‍ಯಾ ಖಂಡವ್ಯಾಪುತನಿವ
ಕಂಡಿರ್‍ಯಾ ಕಂಡಿರ್‍ಯಾ ಬೊಮ್ಮಾಂಡದೊಡೆಯನ
ಕಂಡಿರ್‍ಯಾ ಕಂಡಿರ್‍ಯಾ ಅಜಭವಾದಿಗಳ
ತೊಂಡರ ಮಾಡಿ ಬಿಡದಖಂಡ ಪೊರೆವವನ

ಕಂಡಿರ್‍ಯಾ ಕಂಡಿರ್‍ಯಾ ಸರ್ವಜೀವರ ಪಶು-
ಹಿಂಡು ಮಾಡಿ ಬಿಡದೆ ಕಾಯುವ ಗೋಪಾಲನ
ಕಂಡಿರ್‍ಯಾ ಕಂಡಿರ್‍ಯಾ ಮಣಿಮೌಳಿ ಮಲ್ಲಿಗೆ ದಂಡೆಯ
ಮಂಡೆಯು ಶೋಭಿಸೆ ಮುದ್ದುಮೊಗದ ಚೆಲುವ
ಪುಂಡರೀಕದಳನಯನ ಕಸ್ತೂರಿತಿಲಕ
ಕುಂಡಲಕರ್ಣ ಕಪೋಲ ತತ್ತಳಿಸುತ್ತ
ಪುಂಡರೀಕ ತುಲಸೀದಂಡೆಯ ಕೊರಳೊಲಿಯೆ
ಚೆಂಡು ಬುಗುರಿ ಚಿಣ್ಣಿಗೋಲುಗಳಾಡುತ್ತ
ಪುಂಡರೀಕನ ಭಕುತಿಗೊಲಿದು ಬಂದುನಿಂದ
ಪಂಡರಪುರಿರೇಯ ಗೋಪಾಲವಿಠಲನ್ನ
ಕಂಡಿರ್‍ಯಾ ಕಂಡಿರ್‍ಯಾ ಕಪಟನಾಟಕಹರಿಯ ೨

ರೂಪಕತಾಳ

ಆವ ರೂಪದಲ್ಲೇ ಗೋವು ಕಾಯಿದ ರೂಪ
ಆವ ಈ ರೂಪವೇ ಮತ್ಸ್ಯಾದಿ ರೂಪವು
ಆವ ಈ ರೂಪವೇ ಅಜಾದಿರೂಪವು
ಆವ ಈ ರೂಪವೇ ಆತ್ಮಾದಿರೂಪವು
ಆವ ಈ ರೂಪವೇ ಅನಂತಾತ್ಮಕ
ಶ್ರೀವಿಷ್ಣು ರೂಪವು ಮತ್ತಿವನೆ ಸಾಕ್ಷಾತು ನೋಡಾ
ಈ ವಿಧ ರೂಪವು ಅನಂತಾನಂತವಿರಲು
ಆವ ರಾಹುತನಂತೆ ಅಶ್ವವೇರಿ ಎನ್ನ
ಈ ವಿಧದಲಿ ಎನ್ನ ಕಾವಳಗೊಳಿಸಿದುದು ಏನೊ
ನಾವೊಂದರಿತವನಲ್ಲ ನಿನ್ನ ಲೀಲೆ
ಆವ ಬಗೆಯೊ ನಾನರಿಯೆ ಈ ವಿಧ ತೋರಿದ್ದು
ಸೇವಕಜನಸ್ಥಿತಿ ನೀನೆ ಬಲ್ಲೆ
ಗೋವರ್ಧನೋದ್ಧಾರ ಗೋಪಾಲವಿಠಲ
ದೇವ ಪಂಡರಿರಾಯ ಶ್ರೀ ವಿಜಯದಾಸರ ಪ್ರೀಯ ೩

ಝಂಪೆತಾಳ

ನೋಡಿದಂತೆನ್ನನು ನೋಡುತಿದ್ದರೆ ಕೊನೆಗೆ
ಮಾಡಿಕೊಂಬೆ ಮನಕೆ ಅವ ನಾಥನೆಂದು
ನೋಡಿದಾಕ್ಷಣದಲಿ ಕಾಣದ್ದೋದುದರಿಂದ
ನೋಡಬೇಕಾಯಿತು ಆವವನೊ ಎಂದು
ನೋಡನೋಡಾ ಅದೃಶ್ಯನಾದ ಕಾರಣ ಮನಕೆ
ನೋಡು ಎಂತಿಪ್ಪುದು ನೋಡುವರಿಗೆ
ಆಡುವ ಮಾತಲ್ಲ ಕಂಡು ಕಂಡಂತಿನ್ನು
ನೋಡಬಾರದೆ ಒಂದು ಘಳಿಗೆ ನಿಂತು
ನೋಡಿದಾಕ್ಷಣ ನಿಂದು ಬೇಡುವುದಿನ್ನೇನು
ನೋಡೊ ಯೋಗ್ಯತೆಯರಿತು ನೋಡು ದೊರೆಯೆ
ಆಡಿದ್ದೆಲ್ಲ ಬರಲಿ ಇಲ್ಲವೆಂದು ಎನ್ನ
ನೋಡು ಆವಸ್ಥಳಕೆ ಬರಲಿ ನಾನು
ನೋಡು ತಿಳಿಯದು ಸ್ವಾಮಿ ಗೋಪಾಲವಿಠಲ
ನೋಡು ಪಂಡರಿರಾಯ ಮಾಡು ದಯವ ೪

ತ್ರಿಪುಟತಾಳ

ಆವ ದೇಶಕೆ ಬರಲಿ ಆವ ಕ್ಷೇತ್ರವ ನೋಡಲಿ
ಆವ ಸಂಗವ ಬಿಡಲಿ ಆವ ಸಂಗವ ಪಿಡಿಯಲಿ
ಆವ ವ್ರತಗಳ ಮಾಡಲಿ ಆವ ಶ್ರವಣವ ಕೇಳಲಿ
ಆವ ಧೈರ್ಯವು ಇರಲಿ ಆವುದಾವುದು ತಿಳಿಯಲಿ
ಆವ ಸಾಧನ ಮಾಡಲಿ ಆವುದಾವುದು ಕೊಡಲಿ
ಆವುದಾವುದು ಉಣಲಿ ಆವುದಾವುದು ಹೊದೆಯಲಿ
ಆವುದಾವುದು ನೋಡಲಿ ಆವುದಾವುದು ಬಿಡಲಿ
ಆವುದಾವುದು ತಡೆಯಲಿ ಆವುದಾವುದು ಜಡಿಯಲಿ
ಆವುದಾವುದರ್ಚಿಸಲಿ ಆವುದಾವುದು ಕೇಳಲಿ
ಆವುದಾವುದು ನುಡಿಯಲಿ ಆವುದಾವುದು ಜಪಿಸಲಿ

ದೇವ ನೀನಲ್ಲದಿಲ್ಲ ಇದರೊಳಗೊಂದು
ಆವಲ್ಲಿಗೊ ನಾನರಿಯೆ ಬರಹೇಳಿದ್ದು ಎನ್ನ
ಪಾವನ್ನ ಮಾಳ್ಪ ಶಕ್ತ ನೀನೆ ಎನ್ನ
ಆವಲ್ಲಿದ್ದರು ಎನಗೆ ಅನುಭೋಗ ಈಗಲೆ
ಕಾವಲಿ ಬಹು ಇರಲಿ
ಕಾಕು ಜನರಿಂದ ಬಂದ ಸೊಲ್ಲಿಗೆ ಮನ ಒ-
ಯ್ದು ವಶವು ಮಾಡಲಿಬ್ಯಾಡ
ನಾವೊಬ್ಬನೆ ನಿನ್ನ ಪೊಂದಿನಡೆವ ಸಿ-
ರಿ ವಿಜಯದಾಸರ ಸಹವಾಸದಲ್ಲಿಪ್ಪ
ಜೀವರುಗಳಿಗೆಲ್ಲ ನೋವು ಎಂಬುದು ಬ್ಯಾಡ
ದೇವ ಪಂಡರಿರಾಯ ಗೋಪಾಲವಿಠಲ
ನೀ ಒಲಿದುದಕ್ಕಿಂದು ಈ ವರವ ನೀಡು ೫

ಅಟ್ಟತಾಳ

ಶರಣು ಗೋವಳರಾಯ ಶರಣು ನಿರ್ಜಿತ ಮಾಯ
ಶರಣು ಮುಕ್ತಾಶ್ರಯ ಶರಣಾನಂದಮಯ
ಶರಣು ದೋಷವಿದೂರ ಶರಣು ನಿರ್ವಿಕಾರ
ಶರಣು ಭಕ್ತರಪಾಲ ಶರಣು ಲೀಲಾವತಾರ
ಶರಣು ಅವ್ಯಕ್ತಕಾಯ ಶರಣು ಪ್ರಾಕೃತಕಾಯ
ಶರಣು ಜ್ಞಾನಪೂರ್ಣ ಶರಣು ಮೂಲಕಾರಣ
ಶರಣು ಅಖಂಡೇಶ ಶರಣು ಅನಾದಿದೇವ
ಶರಣು ನಿತ್ಯತೃಪ್ತ ಶರಣು ನಿರಂಜನ
ಶರಣು ಅಘಟಿತಘಟಿತಾನಂತ ಐಶ್ವರ್ಯ
ಶರಣು ಅಗಮ್ಯ ಅಲೌಕಿಕ ಐಶ್ವರ್ಯ
ಶರಣು ಮಹಾಪ್ರಭೊ ಹೇ ರಾಜಾಧಿರಾಜ
ಶರಣು ಅಯ್ಯ ಅಯ್ಯ ಪೊತುರೆ ಪೊತುರೆ
ಶರಣು ಪಂಡರಿರಾಯ ಗೋಪಾಲವಿಠಲ
ಶರಣು ಶರಣು ನಿನ್ನ ಪರಿವಾರಸಹ ನಿತ್ಯ ೬

ಆದಿತಾಳ

ಮಾನಿಸರೂಪದಿ ಮಹಿಮೆಯ ತೋರ್ಪನೆ
ಮಾನಿಸರೂಪದಿ ಮನೆಮನೆ ಪೊಕ್ಕನೆ
ಮಾನಿಸರೂಪದಿ ಮಣ್ಣನೆ ಮೆದ್ದನೆ
ಮಾನಿಸರೂಪದಿ ಮುನಿಮನ ಸೆಳೆದನೆ
ಮಾನಿಸರೂಪಾಗಿ ಮಾನಿನಿಗೊಲಿದನೆ
ಮಾನಿಸರೂಪಾಗಿ ದನುಜರ ಕೊಂದನೆ
ಮಾನಿಸರೂಪಾಗಿ ಧನುವನ್ನು ಮುರಿದನೆ
ಮಾನಿಸದೃಷ್ಟಿಗೆ ಮನುಷ್ಯನಂತೆ ಅ-
ಮಾನುಷ್ಯ ಮಹಿಮನೆ ಮರೆಮೋಸ ಮಾಡೋದು
ಮಾನಿತವೇನಯ್ಯ ಮಾನವಂತನೆ ಹೀಗೆ
ಮಾನಿಸಾನ್ನವನುಂಬ ಮನುಜನಾದುದರಿಂದ
ಮನುಷ್ಯನಂತೆ ನಿನ್ನ ಮನದಿ ನಿಶ್ಚೈಸಿದೆ
ಮಾನಗುಣಾಂಬುಧಿ ಗೋಪಾಲವಿಠಲ
ಮನಸಾವಾಚಾಕಾಯಾ ಮರೆಹೊಕ್ಕೆ ಮನ ನೀಡೊ ೭

ಜತೆ

ಎಲ್ಲಿ ನೋಡಲು ಮತ್ತಲ್ಲಿ ನೀನಿರೆ ಬರ
ಲಿಲ್ಲವೆಂಬುದೇನೋ ಗೋಪಾಲವಿಠಲ

೧೮೧

ಪೂಜೆಯನು ಮಾಡಿರೊ ಪಾಪಿಪುರುಷನಿಗೆ
ಪೂಜಾವಿಧಿಗಳೆಲ್ಲ ಕಾಲಕಾಲದಿ ತಿಳಿದು ಪ.

ಕಾಯಮಲತೋಯದ ಸ್ನಾನವನೆ ಮಾಡಿಸಿ
ಬಾಯಮುಕುಳಿಸಿದಾಚಮನ ಎನಿಸಿ

ಹೇಯಮ್ಮೈಲಿಗೆವಸನ ವಸ್ತ್ರಗಳನೆ ಕೊಟ್ಟು
ಕಾಯಕಳಚಿದ ರೋಮ ನಖಗಳ ಅಲಂಕರಿಸಿ ೧

ನಯನ ನಾಸಿಕದ ಮಲ ಗಂಧಲೇಪನ ಮಾಡಿ
ಪ್ರಿಯವಾದಪಾನವಾಯು ಧೂಪಮಾಡಿ
ಬೈವ ನುಡಿಗಳೆಂಬ ಪುಷ್ಪ ಸಮರ್ಪಣೆಮಾಡಿ
ನೈವೇದ್ಯಸ್ಥಳ ಮೆಟ್ಟುಮಣೆಯಲಿ ಕುಳ್ಳಿರಿಸಿ ೨

ಗುಪಿತದಲಿ ಗುದಮಲ ಹಸ್ತೋದಕವ ಕೊಟ್ಟು
ತಪ್ಪದಲೆ ಮೂತ್ರ ಪಾನೋದಕವ ಕೊಟ್ಟು
ತೃಪ್ತನಾಗು ಎಂದು ತಪ್ಪದಲೆ ಸ್ಮರಿಸುತ್ತ
ಕಪ್ಪುವರ್ಣನೆ ಚೆಲ್ವ ಕಾಡಿಗೀನಯನನೆಂದು ೩

ಅಷ್ಟಮದ ದರಿದ್ರ ಅಲ್ಪಬಲನೆ ಕ್ರೂರ
ದುಷ್ಟ ದುರಾಗ್ರಹ ಬ್ರಹ್ಮಹತ್ಯಕಾರಿ
ಶಿಷ್ಟಜನಮಲಹಾರಿ ನಷ್ಟ ಪ್ರತಿಷ್ಠನೆ ಎಂದು
ತುಷ್ಟಿಬಡಿಸುತ ಹೀಗೆ ಸ್ತೋತ್ರವನೆ ಮಾಡುತ್ತ ೪

ನವವಿಧ ದ್ವೇಷಕೆ ನೀನೆ ಅಧಿಕಾರಿಯು
ನವವಿಧೇಂದ್ರಿಯದಿಂದ ಪೂಜೆಮಾಡಿ
ಪವನನಂತರ್ಯಾಮಿ ಗೋಪಾಲವಿಠಲನು
ಭವತಂದು ತನ್ನನುಭವವನ್ನು ನಿಮಗೀವ ೫

೧೮೨

ಬರಗಾಲವಲ್ಲವಿದು ಬಳಲದಿರಿ
ಪರಿಪಾಲಿಸುವ ಹರಿಯು ಪರಿಪರಿಯಲ್ಲಿ ಪ.

ಧ್ಯಾನಪ್ರಿಯವು ಆಗೆ ಧನ ಬ್ಯಾರೆ ಪ್ರಿಯನಲ್ಲ
ನಿನಗೆಷ್ಟು ಮಾರಬೇಕೆನೆ ಪೇಳು
ದಿನಕೆ ಅಂದಿನ ಗ್ರಾಸ ನಿನಗೆ ಕ್ಲುಪ್ತಾಗಿ ಅದೆ
ಧಾನ್ಯಧಾರಣೆ ಅರಿತು ಧನವೀವ ಹರಿಯು ೧

ಅಗ್ಗವಾದಾಗಲಿ ಮುಗ್ಗಿ ಬೆಳುವರೆ
ದುಗ್ಗಾಣಿಗೊಮ್ಮಾನ ಮಾರಿದರು
ಹಿಗ್ಗದು ನಿನ್ನ ಉರದ ಸುಗ್ಗಿಲಿ ಒಮ್ಮನ ಉಣುವ್ಯಾ
ಕುಗ್ಗದಿರು ಕುತ್ಸಿತ್ಚಿಂತನೆಯ ನೀಗು ೨

ಮಾರುವಧಾರಣೆಯು ಏರಿ ಇಳುವುದಕೆ
ಬ್ಯಾರೆ ಮಳೆಯೆ ತಾನು ಕಾರಣವಲ್ಲ ನಾರಾಯಣನ
ಮರೆತು ಬರಿದೆ ಮಳೆ ಗೋರಿದರೆ
ಆರಿತವು ತೀರುವುದೆ ಅಲ್ಪಮನವೆ ೩

ವರಣ ಆಶ್ರಮಗಳ ಮರಿಯಾದಿಗಳು ತಪ್ಪಿ
ಗುರು ಹಿರಿಯರ ಮನ್ನಣೆಗಳ ಮರೆದು
ಹಿರಿದರಲ್ಲಿ ಕಿರಿದಿನ್ನು ಮರ್ಯಾದೆ ತಪ್ಪಿ ಪೂಜೆ
ಎರಡು ವಿಧ ಪಾಪದಿಂದೆ ಬರಗಾಲವೆನಿಪುದು ೪

ಜ್ಞಾನ ಬರಗಾಲವು ಬಿದ್ದದೆ ಜನಕೆಲ್ಲ
ನಾನಾ ಭೌತಿಕದ ಬಾಧೆಯು ತೋರೋದು
ಧೇನಿಸಿ ನೋಡಿದರೆ ಎಲ್ಲ ಆನಂದಮಯ
ಕಾಣಿಗೆ ಒಳಗಾಗಿ ಕಾಣಿಸುತಿಹನೊ ೫

ಪಾಲನೆಯ ಕಾಲವಿದು ಸಂಹಾರ ಕಾಲಲ್ಲಿ
ಪಾಲಿಸುವ ಕಲಿಯು ಪ್ರಭುಧರ್ಮವಿದು
ಆಲೋಚಿಸಿ ನೋಡಿ ಅನುಭವದಿ ನಿಮ್ಮನ
ಆಳುವ ಹರಿಗಿನ್ನು ಮೇಲಾಗಿ ಕೂಗಿ ೬

ಹರಿಯ ಮರದಿಪ್ಪುದೆ ಬರಗಾಲ ಬರಗಾಲ
ಹರಿಸ್ಮೃತಿ ಮಾಡುವುದೆ ಶೋಭನ ಕಾಲ
ಸಿರಿಮಹಾರಾಜ ಗೋಪಾಲವಿಠಲ ಕರುಣ-
ವೆರೆಸಿ ವೃಷ್ಟಿಯಗರೆದು ಪರಿಪಾಲಿಸುವನು ೭

೧೮೩

ವೇಣುಗೋಪಾಲವಿಠಲ ದಾತ ಮಹಾಪ್ರಭುವೆ
ನಾನು ಬೇಡುವೆನು ವರವ
ಪ್ರಾಣಿ ಈತಗೆ ಬಂದಹಾನಿ ಹಿಂದಕೆ ಮಾಡಿ
ಕ್ಷೋಣಿಯಲಿ ನಿಲಿಸಿ ಸಲಹೊ ಸ್ವಾಮಿ ಪ.

ಸಾಧು ಜೀವರ ಸೃಜಿಸಿದುದಕೆ ಫಲವೇನಿಲ್ಲ ಬಾಧೆ ತಂದಿತ್ತ ಬಳಿಕ
ಯಾದವ ಶತವತ್ಸರಾಯ ಮನುಷ್ಯರಿಗೆ ಮರೆಯದೆ ಇಲ್ಲದೆ ಹೋಯಿತು (?)
ಬಾಧಕವೆನೆ ತನ್ನಿಂದ ಅಪರಾಧ ಆಯತ ಆದದ್ದು ಕೊರತೆ ಇನ್ನು
ಸಾಧುಗಳ ಸಮ್ಮತ ಸನ್ಮಾರ್ಗಪ್ರವೃತ್ತವಾದ ಜೀವಕೆ
ಬರಿದೆ ಬಾಧೆಬಡಿಸುವರಿಗೆ ೧

ಚಿಂತ್ರಣಿಯ ವೃಕ್ಷ ವಿಷಾದಕಾರಣ ಎಲ್ಲಿ ಚಿಂತಿಪರು ಸಂತರುಗಳು
ಪಿಂತಿನ ಜನುಮದಲಿ ಅಪಮೃತ್ಯು ಪರಿಹರ ಚಿಂತಾಯಕ ಕಳೆದಿಲ್ಲವೆ
ಚಿಂತೆ ತಾನಾಗಿಪ್ಪ ನಮ್ಮ ಹಿರಿಯರಿಂದ ಸಂತೋಷ ಬಡಿಸಿ ನಿನ್ನ
ಎಂತು ಪರಿ ಆದರು ಬಂದದುರಿತವ ಕಳೆದು ಸಂತೋಷ
ಮಾಡು ಮನಕೆ ಕರುಣಿ ೨

ಬಿತ್ತಿ ಬೀಜವ ಬೆಳೆಸಿ ಕೊಯ್ಯುಕುಳಿತವಗೆ ಮಾರುತ್ತರವು ಭಿರಿಯಲ (?)
ಕಿತ್ತು ತಾ ದಂಟುಗಳ ಬಾಹೊ ಅದರೊಳಗಾಗಿ ಪ್ರತ್ಯೇಕ ಬೆಳೆಯಿಂದ
ಸುತ್ತಿ ತಾ ದಂಟನು ಬಿಟ್ಟುಕೊಡುವರು ಸ್ನೇಹ ಮತ್ತೆ ಬೆಳೆಯ ಮ್ಯಾಲಿಟ್ಟು
ಸುತ್ತ ಜನರು ಬೆಳೆಯಂತೆ ಇವನಿಂದ ಪವಿತ್ರರಾಗಿಹರು
ಉಳುಹೊ ಸಲಹೊ (?) ೩

ಆವ ಜನುಮದಲಿಂದ ಸಾವವೊ ಅರಿಯೆ ನೋವು ಮೊಳಕಿನ್ನು ಬಹಳ
ಜೀವರಾಶಿಗಳು ನೀನೆ ಬಲ್ಲೆಯೊ ಸ್ವಾಮಿ ಸೇವ್ಯ ಸೇವಕರ ಸ್ಥಿತಿಯ
ಈ ವಸುಧೆಯಲ್ಲಿ ನಿನ್ನ ಶರಣರೆ ಸ್ವಲ್ಪವು ಆವ ಅಸುರರೆ ಬಹಳ
ಸೇವಾನುಸೇವಕನ ಬಿನ್ನಪವ ನೀ ಒದಗಿ ಕೇಳಿ ಸಾಕು ಹರಿಯೆ ೪

ಪ್ರಾರ್ಥಿಸಿದೆ ನಿನ್ನ ಭಕುತನ ಅರ್ತಿಯನ್ನು ಮನದಲಿ ಸ್ಫೂರ್ತಿ ಆರದರಿಂದಲಿ
ಕೀರ್ತಿ ನಿನ್ನದು ಭಕುತ ಸ್ವಾರ್ಥನೆಂಬ ಬಿರುದು ವ್ಯರ್ಥ ಅನ್ಯರಿಗೆ ಸ್ತುತಿಸಿ
ಕರ್ತೃ ನೀನಾಗಿ ತಾ ನಿಂದು ಮಾಡಿಸುವಂಥ ಸತ್ಕರ್ಮಗಳು ಉಂಟು
ಪಾರ್ಥಸಖ ಚೆಲುವ ಗೋಪಾಲವಿಠಲ ಅಪಮೃತ್ಯು
ಪರಿಹರಿಸಿ ನಿನ್ನ ಭಕ್ತನ ಸಲಹೊ ೫

ಅನುಬಂಧ ೧

ಕಠಿಣ ಶಬ್ದಗಳ ಅರ್ಥ

ಅಂಡಜ – ಗರುಡ

ಅಂತಿಯ < ಅಂತ್ಯ – ಕೊನೆ

ಅಂದಣ – ಪಲ್ಲಕ್ಕಿ

ಅಂದು – ನಿಲುಕು, ಎಟುಕು

ಅಂಧಕ – ಕುರುಡ

ಅಂಬಕ – ಕಣ್ಣು

ಅಂಬರ – ಆಕಾಶ

ಅಂಬು – ನೀರು (ಕಣ್ಣೀರು)

ಅಂಬುಧಿ – ಸಮುದ್ರ

ಅಂಬುಜವಲ್ಲಿ – ಲಕ್ಷ್ಮಿ

ಅಂಬುಜಾರಿಧರ – ಈಶ್ವರ

ಅಗರು – ಸುಗಂಧದ್ರವ್ಯ

ಅಚ್ಛಿನ್ನ – ನಾಶವಾಗದ, ತುಂಡುಮಾಡದ (ನಿಜವಾದ ಭಕ್ತಿಯುಳ್ಳವರೆಂದು ಭಾವ)

ಅಘ – ಪಾಪ

ಅಜಗರ – ಹೆಬ್ಬಾವು

ಅಟ್ಟುಳಿ – ಹಿಂಸೆ

ಅದಿರ್ಪು – ಬೆದರಿಸು

ಅಧಮ್ಮ < ಅಧಮ – ಕೀಳಾದವ

ಅಧಿಷ್ಠಾನ – ನೆಲೆಸಿರುವುದು

ಅನಘ – ಪಾಪರಹಿತ

ಅನಾದಿ – ಆದಿಯಿಲ್ಲದ, ನಿರಂತರ

ಅನಿಮಿಷರು – ದೇವತೆಗಳು

ಅನುಜ – ತಮ್ಮ

ಅನ್ನಂತ < ಅನಂತ – ಅಸಂಖ್ಯ, ಕೊನೆಯಿಲ್ಲದ

ಅಪರೋಕ್ಷ – ಭಗವಂತನನ್ನು ಪ್ರತ್ಯಕ್ಷ ಕಾಣುವುದು

ಅಪವರ್ಗ – ಮೋಕ್ಷ

ಅಪಾನವಾಯು – ಗುದಸ್ಥಾನದ ವಾಯು

ಅಪ್ಪು – ನೀರು

ಅಬುಜಭವ – ಬ್ರಹ್ಮ

ಅಬ್ಜ – ತಾವರೆ

ಅಬ್ಜಸಂಭವಪಿತ – ವಿಷ್ಣು

ಅಬ್ಧಿ – ಸಮುದ್ರ

ಅಭೀಷ್ಟ – ಬಯಸಿದುದು

ಅರಿ – ಶತ್ರು

ಅರಿಪಾಣಿ – ಚಕ್ರಪಾಣಿ

ಅರಿಷ್ಟ – ಅಶುಭ, ಕೆಡಕನ್ನುಂಟು ಮಾಡುವ

ಅರುವಾಯಿತು < ಅರಿವಾಯಿತು, ತಿಳಿಯಿತು

ಅರೆಲವ – ಕಿಂಚಿತ್ತಾದರು

ಅರ್ತಿ – ಪ್ರೀತಿ

ಅರ್ಭಕ – ಮಗು

ಅಲ್ಪ – ಸಣ್ಣವನು

ಅವಜ್ಞತೆ – ಅಲಕ್ಷ್ಯ, ಕಡೆಗಣಿಸುವಿಕೆ

ಅವನಿ – ಭೂಮಿ

ಅಶಕ್ಯಾಗೆ – ಸಾಧ್ಯವಾಗದಿರಲು

ಅಷ್ಟಸೌಭಾಗ್ಯ – ಅನ್ನ, ಅರ್ಥ, ಅಹಂಕಾರ, ಪ್ರಭುತ್ವ, ಯೌವನ, ರೂಪ, ವೈಭವ, ಸಾಹಸ.

ಅಸು – ಪ್ರಾಣ

ಅಹಿ – ಹಾವು

ಅಹಿಗಿರಿ – ಶೇಷಪರ್ವತ

ಅಳಿ – ತುಂಬಿ

ಆಕಳು – ಹಸು

ಆಖಂಡೇಶ – ಸಮಸ್ತಕ್ಕೂ ಒಡೆಯ, ಇಂದ್ರ

ಆಘ್ರಾಣಿಸು – ಮೂಸು, ವಾಸನೆ ನೋಡು

ಆಚ್ಛಾದ(ನ) – ಮುಚ್ಚುವುದು, ಮರೆಮಾಡುವುದು

ಆಯ – ಒಳಗು, ಮರ್ಮ

ಆಯತ – ಉಚಿತಕ್ರಮ, ವಾಸಸ್ಥಾನ

ಆರತ, ಆರ್ತ – ಕಷ್ಟಕ್ಕೆ ಸಿಕ್ಕಿದವ

ಆರಭ್ಧಾರಿತಗಾಮಿನಿ – ಆದಿಯಿಂದ ಅಂತ್ಯದವರೆಗೆ ಪ್ರವಹಿಸುವುದು (ಸೃಷ್ಟಿ, ಸ್ಥಿತಿ, ಲಯ, ಕಾರಣ)

ಆರಾದ – ಸಮರ್ಥವಾದ, ಶಕ್ತಿಯುತವಾದ

ಆರೋಗಣೆ – ಊಟ

ಆಲ್ಪರಿ – ಅಂಗಲಾಚಿ ಬೇಡು

ಆವರ್ಕ – ಆವರಿಸಿದ

ಆವಳಿ – ಗುಂಪು, ಸಮೂಹ

ಆವು – ಹಸು

ಆಸಕುತಿ < ಆಸಕ್ತಿ

ಆಸುಪಾಸು – ಆಗುಹೋಗುಗಳು

ಆಹ್ಲಾದ – ಸಂತೋಷ

ಇಂದುನಿಭ – ಚಂದ್ರನಿಗೆ ಸಮಾನ

ಇಂಧನ – ಸೌದೆ

ಇಮ್ಮನ – ಎರಡು ಮನಸ್ಸು

ಈಪ್ಸಿತ – ಇಷ್ಟಾರ್ಥ

ಈರೇಳು – ಹದಿನಾಲ್ಕು

ಈಷಣತ್ರಯ – ಅರ್ಥೇಷಣ, ದಾರೇಷಣ, ಪುತ್ರೇಷಣ

ಉಜ್ಜ – ಶ್ರೇಷ್ಠ

ಉಚ್ಛಿಷ್ಟ – ಎಂಜಲು

ಉಡು – ನಕ್ಷತ್ರ

ಉಡುಪ – ಚಂದ್ರ

ಉತ್ತರಕ್ರಿಯೆ – ಸತ್ತವರಿಗೆ ಮಾಡುವ ಕ್ರಿಯೆ, ಅಪರಕರ್ಮ, ತಿಥಿ

ಉದಕ – ನೀರು

ಉದಿತತರಣೀನಭ –ಉದಯಿಸುತ್ತಿರುವ ಸೂರ್ಯನಿರುವ ಆಕಾಶ

ಉದ್ದುಸ < ಉದ್ದೇಶ

ಉಪಾಧಿ – ಅಡ್ಡಿ

ಉಭಯ – ಎರಡು

ಉಮೇಶ – ಈಶ್ವರ

ಉರಗ – ಹಾವು

ಉರುಟು – ದುಂಡು

ಉರ್ವಿ – ಭೂಮಿ

ಊರು – ತೊಡೆ

ಊಷ್ಟ – ಒಂಟೆ

ಊಳಿಗ – ಸೇವೆ

ಋಜುಗಣಾಧಿಪ – ಗಣಪತಿ

ಋಣ – ಸಾಲ

ಎತನ < ಯತ್ನ

ಎರಡುವಿಂಶತಿವತ್ಸರ – ನಲವತ್ತು ವರ್ಷಗಳು

ಎರಡೆಂಟು – ಹದಿನಾರು

ಏಸೇಸು – ಎಷ್ಟೆಷ್ಟು

ಏಳಧಿಕ ತ್ರಿದಶ – ಮೂವತ್ತೇಳು

ಏಳಿಲ – ತಿರಸ್ಕಾರ

ಐದು – ಹೊಂದು

ಒಂಟಿ – ಕಿವಿಯ ಆಭರಣ

ಒಂಟೆಡುಬ್ಬದಂಥ ಲೌಕಿಕರು – ನಿಷ್ಪ್ರಯೋಜಕರು, ಡಾಂಭಿಕರು

ಒಗತನ – ಸಂಸಾರ

ಒಡಲು – ಶರೀರ

ಒಡ್ಯಾಣ – ಡಾಬು

ಒರಲು – ಕೂಗು

ಒರಲೆ – ಗೆದ್ದಲು

ಒರೆದು – ಹೇಳಿ

ಒಲಪು – ಒಯ್ಯಾರ, ಬೆಡಗು

ಓಗರ – ಅನ್ನ

ಓದನ – ಅನ್ನ

ಓರಗೆಯವ – ಜೊತೆಯವನು, ಸಮಾನ

ಓರಡಿ – ಒಂದು ಅಡಿ
ಓವನ್ನ – ಪ್ರೀತಿಸುವವನ
ಕಂಕಣ – ಕೈಗೆ ಧರಿಸುವ ಆಭರಣ
ಕಂಚುಕ – ಕುಪ್ಪಸ
ಕಂಟಕ – ತೊಂದರೆ
ಕಂದರ – ಕುತ್ತಿಗೆ
ಕಂದುಗೊರಳ – ಈಶ್ವರ
ಕಂಬು – ಶಂಖ
ಕಂಸಾರಿ – ಕಂಸನಶತ್ರು, ಕೃಷ್ಣ
ಕಕುಲಾತಿ < ಕಕ್ಕುಲತೆ – ಚಿಂತೆ, ಕಳವಳ, ಪ್ರೀತಿ, ವಿಶ್ವಾಸ, ಹಂಬಲ, ಜಿಪುಣತನ
ಕಕ್ಕಸ – ಕಷ್ಟ, ಪ್ರಯಾಸ
ಕಚ್ಚುಟ – ಲಂಗೋಟಿ
ಕಟ್ಟಳೆ – ನಿಯಮ
ಕಡು – ವಿಶೇಷ
ಕಡೆಯ – ಕಾಲು ಅಥವಾ ಕೈಗೆ ಹಾಕಿಕೊಳ್ಳುವ ಆಭರಣ, ಕಡಗ
ಕದಪು – ಕೆನ್ನೆ
ಕನ್ನಗಾರ – ಕಳ್ಳ
ಕಪರ್ದಕ – ಕವಡೆ
ಕಪರ್ದಿ – ಶಿವ
ಕಪೋಲ – ಕೆನ್ನೆ
ಕಬರಿ – ಹೆರಳು, ಜಡೆ
ಕಬ್ಬಲಿಗ – ಒಂದು ಜಾತಿ, ಬೇಡ, ಮೀನುಗಾರ
ಕಮಲಾರಿ – ಚಂದ್ರ
ಕರ – ಕೈ
ಕರಿ – ಆನೆ
ಕರ್ಮದ್ವಯ – ಪಾಪ, ಪುಣ್ಯ
ಕವಾಟ – ಬಾಗಿಲು
ಕಾಂಚನ – ಚಿನ್ನ
ಕಾಂತಾರ – ಕಾಡು, ಅಡವಿ
ಕಾಕು – ನೀಚ, ಕೆಟ್ಟವ
ಕಾಣಿ – ಒಂದು ಚಿಕ್ಕ ನಾಣ್ಯ
ಕಾಮ್ಯ – ಬಯಕೆ, ಇಷ್ಟಪಡುವಿಕೆ
ಕಾಯ – ಶರೀರ
ಕಾಲಪುರುಷ – ಕಲಿಪುರುಷ
ಕಾವ – ಕಾಯುವ
ಕಾವಳ – ಅಂಧಕಾರ, ಕತ್ತಲೆ
ಕಾಷ್ಠ – ಕಟ್ಟಿಗೆ
ಕಾಳಕೂಟ – ಘೋರವಾದ ವಿಷ
ಕೀಚಕಾರಿಗೀಶ – ಭೀಮನ ಒಡೆಯ, ಕೃಷ್ಣ
ಕೀರುತಿ < ಕೀರ್ತಿ
ಕೀಲಾಲ – ನೀರು
ಕುಂಜರ – ಆನೆ
ಕುಂದಕುಟ್ಮಲ – ಮಲ್ಲಿಗೆ ಮೊಗ್ಗು

ತಮ – ಅಜ್ಞಾನ, ಕತ್ತಲು

ತರಣಿ – ಸೂರ್ಯ

ತಾಪತ್ರಯ – ಆಧಿದೈವಿಕ, ಆಧಿಭೌತಿಕ, ಆಧ್ಯಾತ್ಮಿಕ

ತಾಮರಸಬಂಧು – ಸೂರ್ಯ

ತಾಮರಸಸಖ – ಸೂರ್ಯ

ತಾಮರಸಾಸನ – ಬ್ರಹ್ಮ

ತಾರಕ – ದಾಟಿಸುವ, ಕಡೆಹಾಯಿಸುವ

ತಾಳಿಮಿಕೆ < ತಾಳುವಿಕೆ – ತಾಳ್ಮೆ, ಸಹನೆ

ತಿಂಗಳಿನಂದದಿ – ಬೆಳದಿಂಗಳಿನಂತೆ

ತಿಗುರಿದ – ಲೇಪಿಸಿದ, ಪೂಸಿದ

ತಿತ್ತಿರಿ – ಒಂದು ವಾದ್ಯ ವಿಶೇಷ

ತಿಮಿರಿ – ಕತ್ತಲು

ತಿಲ – ಎಳ್ಳು

ತುಕ್ಕಿ – ಹೊಕ್ಕು

ತುಕ್ಕುತ – ತಿರುಗುತ್ತ

ತುಡುಗುತನ – ಕಳ್ಳತನ

ತುತಿ < ಸ್ತುತಿ – ಪ್ರಶಂಸೆ, ಹೊಗಳಿಕೆ

ತುರಗ – ಕುದುರೆ

ತುಲ್ಯ – ಸಮಾನವಾದ

ತುಷ್ಟನಾಗಿ – ಸಂತೋಷ ಗೊಂಡವನಾಗಿ

ತೃಣ – ಹುಲ್ಲು

ತೃಷ < ತೃಷೆ – ಬಾಯಾರಿಕೆ

ತೆತ್ತೀಸಕೋಟಿ – ಮೂವತ್ತು ಮೂರು ಕೋಟಿ

ತೈಜಸ – ವಿಷ್ಣುವಿನ ಮತ್ತೊಂದು ಹೆಸರು, ಪ್ರಕಾಶಮಾನ

ತೊಂಡ – ಸೇವಕ

ತೋಯಜಭವ – ಬ್ರಹ್ಮ

ತೋಷ – ಸಂತೋಷ

ತೋಳ್ಬಂದಿ – ತೋಳಿಗೆ ಧರಿಸುವ ಆಭರಣ

ತ್ಯರ – ರೀತಿ

ತ್ರಿಗುಣ – ಸತ್ವ, ರಜಸ್ಸು, ತಮಸ್ಸು

ತ್ರಿಜಗ – ಸ್ವರ್ಗ, ಮರ್ತ್ಯ, ಪಾತಾಳ

ತ್ರಿದಶರು – ದೇವತೆಗಳು

ತ್ರಿಮೂರ್ತಿ – ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ(?)

ತ್ರಿರಾವರ್ತಿ – ಮೂರು ಸಲ

ತ್ರಿವಳಿರೇಖೆ – ಹೊಟ್ಟೆಯ ಮೇಲಿನ ಮೂರು ಗೆರೆಗಳು

ತ್ರಿವಿಷ್ಟಪ – ಸಿಂಹಾಸನ

ತ್ರುಟಿ – ಕ್ಷಣದ ಕಾಲುಭಾಗ, ೨ತ್ರುಟಿ = ೧ಲವ

ತ್ವರಿತ – ವೇಗವಾಗಿ

ದಂತಿ – ಆನೆ
ದಣಿಪೊ – ದಣಿಸುವ
ದಮೆ – ಇಂದ್ರಿಯ ನಿಗ್ರಹ
ದರುಶನ – ದರ್ಶನ
ದರ್ವಿ – ದರ್ಭೆ
ದಷ್ಟರು – ಕಚ್ಚಲ್ಪಟ್ಟವರು (ಇಲ್ಲಿ ಕಡುಬಡವರೆಂದು ಭಾವ)
ದಾಯಿಗ – ದಾಯಾದಿ
ದಾರಿಕಟ್ಟು – ಅಡ್ಡಿಮಾಡು, ನಿರ್ಬಂಧಿಸು
ದಾವ – ಯಾವ
ದಿಗಂತ – ದಿಕ್ಕಿನ ಕೊನೆ, ದಿಕ್ತಟ
ದಿತಿಜ – ರಾಕ್ಷಸ
ದಿನಕರ – ಸೂರ್ಯ
ದಿನಸಪ್ತಶತವರುಷ – ಏಳು ನೂರು ವರ್ಷ
ದೀಪ್ತಿಸು – ಪ್ರಕಾಶಿಸು
ದುಕೂಲಚೋರ – ಕೃಷ್ಣ
ದೇಹಿ – ಕೊಡು
ದ್ಯುಮಣಿ – ಸೂರ್ಯ
ದ್ವಾದಶ – ಹನ್ನೆರಡು
ದ್ವಿ – ಎರಡು
ದ್ವಿಜರಾಜ – ಗರುಡ
ದ್ವಿಪಂಚೇಂದ್ರಿಯಗಳು – ದಶೇಂದ್ರಿಯಗಳು, ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವೆ, ನಾಸಿಕ, ವಾಕ್, ಪಾಣಿ, ಪಾದ, ಪಾಯು, ಉಪಸ್ಥಾ
ಧರಣಿ – ಭೂಮಿ
ಧಾರುಣಿ – ಭೂಮಿ
ಧಾವತಿ – ಆತಂಕ, ಶ್ರಮ
ಧುರ – ಕಾಳಗ, ಕದನ
ಧೂಮ – ಹೊಗೆ
ನಂದವ – ಆನಂದವನ್ನು
ನಕ್ರ – ಮೊಸಳೆ
ನಕ್ಷತ್ರದರಸಿನಂದದಿ – ಚಂದ್ರನಂತೆ
ನಖ – ಉಗುರು
ನಗ – ಬೆಟ್ಟ
ನರ – ಅರ್ಜುನ
ನರಸಖ – ಅರ್ಜುನನ ಸ್ನೇಹಿತ, ಕೃಷ್ಣ
ನಲುಮು – ಇನ್ನೂ ಹಲ್ಲುಬಾರದ ಮಗು ವಸಡಿನಿಂದ ತಿನ್ನುವ ಕ್ರಿಯೆ
ನವವಿಧಭಕುತಿ – ಶ್ರವಣ, ಕೀರ್ತನ, ಸ್ಮರಣ,ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಹಾಗೂ ಆತ್ಮನಿವೇದನ
ನಳಿನಜಾಂಡ – ಬ್ರಹ್ಮಾಂಡ

ನಾಕೇಶ - ದೇವೇಂದ್ರ

ನಾಗಾರಿ - ಗರುಡ

ನಾತ - ದುರ್ವಾಸನೆ

ನಿಗಮ - ವೇದ

ನಿಧಾನ - ನಿಧಿ

ನಿನ್ನಣುಗರೊಳು - ನಿನ್ನ ಭಕ್ತರಲ್ಲಿ

ನಿಬಿಡ - ದಟ್ಟ, ಸಾಂದ್ರ

ನಿರಯ - ನರಕ

ನಿರ್ಮಾಲ್ಯ - ದೇವರಿಗೆ ಅರ್ಪಿಸಿದ ಅನಂತರ ತೆಗೆದ ಬಾಡಿದ ಹೂವು

ನಿರ್ಲಿಪ್ತ - ಅಂಟಿಕೊಳ್ಳದ

ನಿಶಾಣ < ಶಾಣ - ಒರೆಗಲ್ಲು

ನೀತ - ಉಚಿತ, ಕ್ರಮವಾದ

ನೀತವರಿಯದೆ - ಮಾರ್ಗ ತಿಳಿಯದೆ

ನುತಿಸುತ - ಸ್ತುತಿಸುತ್ತ, ಹೊಗಳುತ್ತ

ನೂಪುರ - ಕಾಲಂದುಗೆ

ನೆಗಳು - ಮೊಸಳೆ

ನೆಣ - ಕೊಬ್ಬು

ನೆರಹಿ - ಗುಂಪುಗೂಡಿ

ನೋಂಪಿ - ವ್ರತ

ನ್ಯೂನ - ಕುಂದುಳ್ಳ, ಕೊರತೆ

ಪಂಚತ್ವ - ಸಾವು

ಪಂಚಬಾಣ - ಮನ್ಮಥ

ಪಂಚಮಹಾಭೂತ - ಪೃಥ್ವಿ, ಅಪ್, (ಅಗ್ನಿ) ತೇಜಸ್ಸು, ವಾಯು, ಆಕಾಶ

ಪಂಚಮುಖ - ಈಶ್ವರ

ಪಂಚವದನ - ಸಿಂಹ

ಪಂಚಾನನ - ಶಿವ

ಪಟಲ - ತೆರೆ, ಪರದೆ

ಪಟ್ಟು - ಪಟ್ಟೆ, ಬೆಲೆಬಾಳುವ ವಸ್ತ್ರ, ರೇಷ್ಮೆಬಟ್ಟೆ

ಪಣ - ಶಪಥ

ಪದುಮಸಂಭವಪಿತ- ವಿಷ್ಣು

ಪನ್ನಗವೇಣಿ - ಹಾವಿನಂತೆ ಜಡೆಯುಳ್ಳವಳು, ಉದ್ದಜಡೆಯವಳು

ಪಯೋನಿಧಿ - ಸಮುದ್ರ

ಪರಮಾನ್ನ - ಪಾಯಸ

ಪರಶು - ಕೊಡಲಿ

ಪರಿದೆ - ಪರಿಹರಿಸಿದೆ

ಪರ್ವಣಿ - ಹಬ್ಬ

ಪಲ್ಲವಪಾಣಿ - ಚಿಗುರಿನಂತೆ ಕೆಂಪಾದ ಕೈಗಳನ್ನುಳ್ಳವಳು

ಪವಿಧರ - ವಜ್ರಾಯುಧಧರ, ಇಂದ್ರ

ಪಾಂಚಾಲಿ - ದ್ರೌಪದಿ

ಪಾಕಶಾಸನ - ಇಂದ್ರ

ಪಾಣಿ – ಕೈ
ಪಾತಕ – ಪಾಪ
ಪಾಮರ – ತಿಳಿವಳಿಕೆಯಿಲ್ಲದವ
ಪಾರ್ವ < ಹಾರುವ – ಬ್ರಾಹ್ಮಣ
ಪಾವಕ – ಬೆಂಕಿ, ಅಗ್ನಿ
ಪಾಳತಿ – ಸರದಿಪ್ರಕಾರ ಕಾಯುವುದು
ಪಿಕ – ಕೋಗಿಲೆ
ಪಿಪಾಸೆ – ನೀರಡಿಕೆ
ಪಿಲ್ಯ – ಕಾಲಿಗೆ ಧರಿಸುವ ಆಭರಣ
ಪೀಯೂಷ – ಅಮೃತ
ಪುಂಗವ – ಶ್ರೇಷ್ಠ
ಪುಂಡರೀಕೋದ್ಭವ – ಬ್ರಹ್ಮ
ಪೂವಿನಶರಪಿತ – ಕೃಷ್ಣ, ವಿಷ್ಣು (ಮನ್ಮಥನ ತಂದೆ)
ಪೂಸಿಕೊಂಡು – ಬಳಿದುಕೊಂಡು
ಪೃಥಿವಿಪತಿ – ರಾಜ
ಪೆಂಡೆ – ಕಾಲಿಗೆ ಧರಿಸುವ ಆಭರಣ
ಪೆತ್ತವಳು – ತಾಯಿ
ಪೈಣ – ಪ್ರಯಾಣ
ಪೊಡವಿ – ಭೂಮಿ
ಪೋಕ – ಅಲೆಯುವವ
ಪೋರ – ತುಂಟಹುಡುಗ
ಪ್ರಾಕೃತ – ಪ್ರಕೃತಿ ಸಹಜವಾದ
ಫಣ – ಹೆಡೆ
ಫಣಕೇತನ – ದುರ್ಯೋಧನ
ಫಣಿಶಾಯಿ – ವಿಷ್ಣು
ಫಾಲಾಕ್ಷ – ಈಶ್ವರ
ಬಡಿವಾರತನ – ಒಣ ಹೆಮ್ಮೆ, ಜಂಭ
ಬದ್ಧಾಗಿ – ಗಾಢವಾಗಿ, ದೃಢವಾಗಿ, ಬದ್ಧವಾಗಿ
ಬನ್ನ – ತೊಂದರೆ, ಕಷ್ಟ
ಬನ್ನದಾಸ – ತೊಂದರೆಗೊಳಗಾದವ(ಯಃಕಶ್ಚಿತ್)
ಬರ್ಹಿ – ನವಿಲು
ಬಲ್ಲಿದ – ತಿಳಿದವ
ಬವಣೆ – ಕಷ್ಟ, ತೊಂದರೆ
ಬಾತೀಗೆ – ಜೀವನಕ್ಕೆ
ಬಾಹು – ತೋಳು, ಭುಜ
ಬಾಹುಜ – ಕ್ಷತ್ರಿಯ
ಬಿನ್ನಪ – ಮನವಿ, ವಿನಂತಿ
ಬಿಸಜನಾಭ – ವಿಷ್ಣು
ಬುಧನುತ – ಪಂಡಿತರಿಂದ ಹೊಗಳಿಸಿಕೊಳ್ಳುವ
ಬೆರಿಲಿ – ಸೇರಲಿ, ಕೂಡಲಿ
ಬೊಮ್ಮ – ಬ್ರಹ್ಮ
ಬೊಮ್ಮ್ಯತಿದೋಷ – ಬ್ರಹ್ಮಹತ್ಯಾದೋಷ
ಬೋವ – ಸಾರಥಿ

ಭಂಜಿಸಿ – ಸೋಲಿಸಿ

ಭದ್ರ – ಮಂಗಳಕರವಾದ

ಭಾನುಜ – ಯಮ

ಭಾಪುರಿ – ಕೈಗೆ ಧರಿಸುವ ಒಂದು ಆಭರಣ

ಭಿಡೆ – ದಾಕ್ಷಿಣ್ಯ, ಸಂಕೋಚ

ಭುಂಜಿಸು – ಉಣ್ಣು

ಭುಜಗಶ್ರೇಷ್ಠ – ಆದಿಶೇಷ

ಭುವನೆರಡೇಳಕ್ಕೆ– ಹದಿನಾಲ್ಕು ಲೋಕಗಳಿಗೆ (ಅತಲ, ವಿತಲ, ಸುತಲ, ಮಹಾತಲ, ತಲಾತಲ, ರಸಾತಲ, ಪಾತಾಲ, ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜಲಲೋಕ, ತಪೋಲೋಕ, ಸತ್ಯಲೋಕ)

ಭೂಸುರ – ಬ್ರಾಹ್ಮಣ

ಭ್ರಮಣತ್ವ – ಸುತ್ತುವಿಕೆ, ತೊಳಲಾಟ

ಭ್ರಮರ – ದುಂಬಿ

ಮಂಡೆ – ತಲೆ

ಮಂದಸೊಶನ – ಮಂದಾನಿಲ

ಮಂದಾಕಿನಿ – ದೇವಗಂಗೆ

ಮಕರ – ಮೊಸಳೆ

ಮಜ್ಜನ – ಸ್ನಾನ

ಮಡುದೆಲೆ – ಮಡಿಚಿದ ಎಲೆ (ವೀಳ್ಯ)

ಮಣೆಗಾರತನ – ಮೇಲ್ವಿಚಾರಿಕೆ, ದೌತ್ಯ

ಮತಿ – ಬುದ್ಧಿ

ಮದಡ – ದಡ್ಡ, ಮೂರ್ಖ, ಪೆದ್ದ

ಮದಡೆ – ಪೆದ್ದಿ, ತಿಳಿಗೇಡಿ

ಮಧುಕರದವ – ಭಿಕ್ಷುಕ, ವಿದ್ಯಾರ್ಜನೆಗಾಗಿ ಅನ್ನ ಬೇಡುವವನು

ಮಧುಪ – ತುಂಬಿ

ಮಧುಪೆ – ಹೆಣ್ಣುದುಂಬಿ

ಮಧುವೈರಿ – ವಿಷ್ಣು

ಮನಸಿಜ – ಮನ್ಮಥ

ಮನ್ನಣೆ – ಮರ್ಯಾದೆ

ಮರೆಯದೆ – ಮರ್ಯಾದೆ(?)

ಮಲ್ಲಮರ್ದನ – ಕೃಷ್ಣ

ಮಶಕ – ಸೊಳ್ಳೆ

ಮಹಿ – ಭೂಮಿ

ಮಾಣು – ಬಿಡು, ನಿಲ್ಲಿಸು

ಮಾತರಿಶ್ವ – ಗಾಳಿ

ಮಾತುರ < ಮಾತ್ರ

ಮಾಪು – ಅಳತೆಯ ಒಂದು ಮಾನ

ಮಾರಜನಕ – ವಿಷ್ಣು

ಮಾರ್ಗಣಗಣ – ಶತ್ರುಗಣ, ಸೈನ್ಯ

ಮಾರ್ಜಾಲ – ಬೆಕ್ಕು

ಮಾರ್ತಾಂಡ – ಸೂರ್ಯ

ಮಾವೂರಿ – ಒಂದು ವಾದ್ಯ(?)

ಮಿರುವುತಲಿಪ್ಪ – ಹೊಳೆಯುವ

ಮೀಸಲಮನ – ಪ್ರತ್ಯೇಕವಾಗಿರಿಸಿದ ಮನಸ್ಸು

ಮುದ್ರೆ – ಚಿಹ್ನೆ

ಮೂರು ಅವಸ್ಥೆ– ಜಾಗ್ರತೆ, ಸ್ವಪ್ನ, ಸುಷುಪ್ತಿ

ಮೂರುತಿ < ಮೂರ್ತಿ

ಮೂರೇಳುದಿಕ್ಕು– ದಶದಿಕ್ಕುಗಳು (ಪೂರ್ವ, ಆಗ್ನೇಯ, ದಕ್ಷಿಣ, ನೈರುತ್ಯ, ಪಶ್ಚಿಮ, ವಾಯವ್ಯ, ಉತ್ತರ, ಈಶಾನ್ಯ, ಊರ್ಧ್ವದಿಶೆ, ಅಧೋದಿಶೆ)

ಮೂಷಕ – ಇಲಿ

ಮೃಗ – ಸಿಂಹ

ಮೃಡ – ಈಶ್ವರ

ಮೃಣ್ಮಯ – ಮಣ್ಣಿನಿಂದಾದ

ಮೃಷ – ಸುಳ್ಳು

ಮೆಂಟಕೆ – ಕಾಲಿಗೆ ಧರಿಸುವ ಆಭರಣ

ಮೆದುವ – ತಿನ್ನುವ

ಮೇಘ – ಮೋಡ

ಮೊನೆಗಾರ – ಭಟ, ಸೈನಿಕ

ಮೋಚ – ಬಿಡುಗಡೆ ಮಾಡುವವನು

ಮೋಚಕ – ಬಿಡುಗಡೆಮಾಡುವ

ಮೋಚನೆ – ಬಿಡುಗಡೆ

ಮೋದದಿ – ಆನಂದದಿಂದ

ಮೋಹರಶಾಸ್ತ್ರ – ಅದ್ವೈತ ಶಾಸ್ತ್ರ

ಮೌಂಜಿ – ಮುಂಜ ಹುಲ್ಲಿನಿಂದ ಮಾಡಿದ ದಾರ

ಯಃಕಶ್ಚಿತ – ಕೆಲಸಕ್ಕೆ ಬಾರದವನು

ಯಾಚಕ – ಭಿಕ್ಷುಕ, ಬೇಡುವವನು

ಯುಗಳ – ಜೊತೆ

ಯೂಥ – ಗುಂಪು, ಸೈನ್ಯ

ಯೂಷ – ಹಾಲು

ರಜ – ಧೂಳು

ರತ – ಆಸಕ್ತ

ರತಿ – ಪ್ರೀತಿ

ರಥಾಂಗಪಾಣಿ – ಸಾರಥಿ

ರಾಪು – ರಂಪ, ಸೊಕು

ರಿಕತ < ರಿಕ್ತ – ಬಡವ, ದರಿದ್ರ

ರುಗ್ಣ – ರೋಗಪೀಡಿತ

ರೂಢಿ – ಭೂಮಿ

ರೇಣು – ಧೂಳಿನಕಣ

ರೋಮ – ಕೂದಲು

ಲಲಾಟ – ಹಣೆ

ಲವ – ೨ತುಟಿ, ೨ಲವ=೧ಕ್ಷಣ

ಲಾಕ್ಷಾಗೃಹ – ಅರಗಿನ ಮನೆ

ಲಿಂಗದೇಹ–

ದಹಿಸುವುದು – ಮರಣ ಸಂಭವಿಸುವುದು

ಲೇಶ – ಸ್ವಲ್ಪ

ಲೋಷ್ಠ – ಮಣ್ಣು ಹೆಂಟೆ

ವಂಕಿ – ಕೈಗೆ ಧರಿಸುವ ಆಭರಣ

ವಟಮರ – ಆಲದಮರ

ವಟು – ಬ್ರಹ್ಮಚಾರಿ (ವಾಮನ ರೂಪಿ ವಿಷ್ಣು)

ವತನ – ಜಹಗೀರು, ವಂಶ ಪಾರಂಪರ್ಯವಾಗಿ ಬಂದ ಆಸ್ತಿ

ವತ್ಸ – ಮರಿ

ವಪು – ಶರೀರ

ವಮನ – ವಾಂತಿ

ವಸನ – ಬಟ್ಟೆ

ವಸುಧೆ – ಭೂಮಿ

ವಸುಮತಿ – ಭೂಮಿ

ವಹ್ನಿ – ಬೆಂಕಿ

ವಳ್ವ – ಒಂದು ಸಾಮಾನ್ಯ ಸಸ್ಯ

ವಾಂಛ್ಯ < ವಾಂಛಲ್ಯ – ಪ್ರೀತಿ, ವಾತ್ಸಲ್ಯ

ವಾಜಿ – ಕುದುರೆ

ವಾಮಾಂಕ – ಎಡತೊಡೆ

ವಾಯಸ – ಕಾಗೆ

ವಾರಿಜಜಾಂಡ – ಬ್ರಹ್ಮಾಂಡ

ವಾರಿಜಾಲಯಪತೆ – ವಿಷ್ಣು

ವಾರಿಧಿ – ಸಮುದ್ರ

ವಾರುತಿ < ವಾರುತೆ – ವಾರ್ತೆ

ವಾಲುಕ – ಮರಳು

ವಾಸೆ < ವಾಸಿ – ಉತ್ತಮ

ವಿಖನಸಪತಿ – ವೈಖಾನಸರಿಂದ (ಋಷಿಗಳಿಂದ) ಪೂಜೆಯನ್ನು ಕೊಳ್ಳುವವನು

ವಿದಾರಿ – ಕೊಂದವನು

ವಿಬುಧ – ದೇವತೆ, ವಿದ್ವಾಂಸ

ವಿಯೋಗ – ಅಗಲುವಿಕೆ(ಸಾವು)

ವಿರಕುತಿ – ವಿರಕ್ತಿ, ವೈರಾಗ್ಯ

ವಿರಿಂಚಿ – ಬ್ರಹ್ಮ

ವಿಲಾಸ – ಕ್ರೀಡೆ, ಚೆಲುವು

ವಿಶ್ವ – ವಿಷ್ಣು (ವಿಷ್ಣು ಸಹಸ್ರ ಸ್ತೋತ್ರ)

ವಿಸ್ಮರಣೆ – ಮರೆವು

ವಿಸ್ಮೃತಿ – ಮರೆವು

ವೃಂದಾರಕ – ಆನೆ

ವೃಂದಾರಕಪಾಲ – ವಿಷ್ಣು

ವೃಂದಾರಕೇಂದ್ರ – ದೇವತೆಗಳ ಒಡೆಯ

ವೃಕೋದರ – ಭೀಮ

ವೃಷ್ಟಿ – ಮಳೆ

ವೆಗ್ಗಳ – ಹೆಚ್ಚಳ, ಅಧಿಕ, ಶ್ರೇಷ್ಠ

ವೈನತೇಯ – ಗರುಡ

ವ್ಯಾಘ್ರ – ಹುಲಿ

ವ್ಯಾಪುತ < ವ್ಯಾಪ್ತ – ವ್ಯಾಪಿಸಿರುವ

ಶಂಭು – ಈಶ್ವರ

ಶಕುತಿ – ಶಕ್ತಿ

ಶಫರ – ಒಂದು ಜಾತಿಯ ಮೀನು

ಶಫರಿ – ಹೆಣ್ಣು ಮೀನು

ಶಮಲ – ಪಾಪ, ದೋಷ

ಶಮೆ – ಮನೋನಿಗ್ರಹ

ಶರನಿಧಿ – ಸಮುದ್ರ

ಶರ್ವ – ಶಿವ

ಶಾರ್ದೂಲ – ಒಂದು ಕಾಲ್ಪನಿಕ ಪ್ರಾಣಿ

ಶಿಖಿ – ನವಿಲು

ಶುಕ – ಗಿಳಿ

ಶ್ರೀವಾಯುಮತ – ಮಧ್ವಮತ

ಶ್ರೋಣಿ – ಜಘನ, ನಿತಂಬ

ಶ್ರೋತ್ರ – ಕಿವಿ

ಷಡುರಿಪುಗಳು – ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ

ಷೋಡಶ – ಹದಿನಾರು

ಸಂಜೆಯಚರ – ರಾಕ್ಷಸ (ರಾವಣ)

ಸಂಸರ್ಗ – ಸಹವಾಸ

ಸತುವ < ಸತ್ವ – ಸಾರ, ತಿರುಳು

ಸಥೆ – ಸಲಿಗೆ

ಸದನಿ – ಮನೆಯುಳ್ಳವಳು

ಸದೃಶ – ಸಮಾನ

ಸದೆದು – ಹೊಡೆದು, ಬಡಿದು

ಸನ್ನುತ – ಚೆನ್ನಾಗಿ ಹೊಗಳಲ್ಪಟ್ಟ

ಸಮುತಧಾತು < ಸಪ್ತಧಾತು – ಚರ್ಮ, ರುಧಿರ, ಮಾಂಸ, ಮೇದಸ್ಸು, ಮಜ್ಜೆ, ಅಸ್ಥಿ, ಶುಕ್ಲ, ಅನ್ನಮಯಾದಿ

ಸಮೀರ – ವಾಯು

ಸಮೂಹ – ಗುಂಪು

ಸಯವಾಗಿ – ಸರಿಯಾಗಿ

ಸರಸಲಿಯೋ – ಸರಸದಿಂದಲೋ

ಸರಸಿಜಾದ್ಯಮರೇಶ – ಬ್ರಹ್ಮನೇ ಮೊದಲಾದ ದೇವತೆಗಳ ಒಡೆಯ

ಸರಿತೆ < ಸರಿತ್ತು – ನದಿ

ಸಲಿಲ – ನೀರು

ಸಾಕಲ್ಯ – ಪರಿಪೂರ್ಣತೆ

ಸಾದ್ರಿಸ್ಯ < ಸಾದೃಶ್ಯ – ಹೋಲಿಕೆ

ಸಾಪಾಟಿ – ಸಹಪಾಠಿ ?

ಸಾಯುಜ್ಯ – ಮುಕ್ತಿಯಲ್ಲಿ ಒಂದು ವಿಧ, ಪರಮಾತ್ಮನ ಬಳಿಯಲ್ಲಿದ್ದು ಅವನನ್ನು ಸೇವಿಸುವ ಅವಕಾಶ

ಸಾರು – ಪತ್ತಿರಕ್ಕೆ ಬರು, ಸಮೀಪಿಸು

ಸಿಂಧುಶಾಯಿ – ವಿಷ್ಣು

ಸುಕೃತ – ಪುಣ್ಯ

ಸುತ್ರಾಮ – ಇಂದ್ರ

ಸುಮನಸವೃಂದ – ದೇವತೆಗಳ ಸಮೂಹ

ಸುಮ್ಮನಸರು – ದೇವತೆಗಳು

ಸುರಪತಿ – ಇಂದ್ರ

ಸುರಪತಿ ವಜ್ರ – ದೇವೇಂದ್ರನ ವಜ್ರಾಯುಧ

ಸುರಭಿ – ಪರಿಮಳ

ಸೂಕರ – ಹಂದಿ

ಸೂಕರಾಸ್ಯ – ಹಂದಿಮುಖವನು, ವಿಷ್ಣುವಿನ ವರಾಹಾವತಾರ

ಸೂರಿಯ < ಸೂರ್ಯ

ಸೂಸುವ – ತುಳುಕುವ

ಸೃಜಿಸಿ – ಸೃಷ್ಟಿಸಿ

ಸೃಜ್ಜನ – ಸೃಷ್ಟಿ

ಸೊಲ್ಲಿಗೆ – ಅಳತೆಯ ಒಂದು ಪ್ರಮಾಣ

ಸೊಲ್ಲು – ಮಾತು

ಸೋತ್ತಮರು – ಉತ್ತಮರು

ಸೋನೆ – ಮಳೆ

ಸೋಮ – ಚಂದ್ರ

ಸ್ಕಂಧ – ಗರುಡ, ನಿಗಮಾವಳಿ, ವೇದಗಳ ಸಮೂಹ

ಸ್ಪರುಶ < ಸ್ಪರ್ಶ

ಸ್ವಪನ < ಸ್ವಪ್ನ

ಸ್ವರೂಪಸುಖ – ಮೋಕ್ಷ

ಸ್ಫೂರುತಿ < ಸ್ಫೂರ್ತಿ – ಪ್ರೇರಣೆ

ಸ್ವಾಂಗಾಯ – ಸ್ವರಮಣ ?

ಸ್ವಾದ – ರುಚಿ

ಹಂಚು – ಹೆಂಚು (ಮನೆಯ ಮೇಲ್ಛಾವಣಿಗೆ ಹೊದಿಸುವ ಮಣ್ಣಿನಿಂದ ಮಾಡಿದ ವಸ್ತು)

ಹಂಸ – ವಿಷ್ಣುವಿನ ಅವತಾರ

ಹಗರಣ – ಕೆಲಸಕ್ಕೆ ಬಾರದ ಮಾತು

ಹಗೆ – ಶತ್ರು

ಹತನಬಡಿ – ನಾಶಮಾಡು

ಹದನ – ಔಚಿತ್ಯ, ರೀತಿ
ಹಮ್ಮಿನ – ಅಹಂಕಾರದಿಂದ ಕೂಡಿದ
ಹರಗೈಸು – ನಾಶಮಾಡು
ಹರಣ – ಪ್ರಾಣ
ಹರವಿ – ಪಾತ್ರೆ (ಮಣ್ಣಿನ)
ಹರಿಗೆ ಬೀಳದಿರು – ಹಳ್ಳಕ್ಕೆ ಬೀಳಬೇಡ (ವಿಷಯಾಸಕ್ತಿಯಲ್ಲಿ ಮುಳುಗಿ ಕೆಡಬೇಡ ಎಂಬ ಭಾವ)
ಹರಿನಡು – ಸಿಂಹದನಡು, ಸಣ್ಣದಾಗಿರುವ ನಡು
ಹಲ್ಲಣ – ಜೀನು
ಹವಣು – ಶಕ್ತಿ, ಸಾಮರ್ಥ್ಯ
ಹಸ್ತಿ – ಆನೆ
ಹಾಟಕ – ಚಿನ್ನ
ಹಿಮಗು – ಚಂದ್ರ
ಹಿಯ್ಯಾಳಿ – ಹೀಯಾಳಿಕೆ
ಹುಣ್ಣುಹುಣ್ಣಾದೆನು – ಹಣ್ಣು ಹಣ್ಣಾದೆನು ?
ಹುಯ್ಯಲು – ಹುಯಿಲಿಡು, ಗದ್ದಲ, ಗಲಾಟೆ ಮಾಡು (ವಿಷಯ ದ್ವುಯ್ಯಿಲು)
ಹುರುಳು – ತಿರುಳು
ಹೃದ್ವನಜ – ಹೃದಯವೆಂಬ ತಾವರೆ
ಹೆದ್ದಯ್ಯ – ಹಿರಿಯಯ್ಯ, ದೇವರು
ಹೆದ್ದೈವ – ಹಿರಿಯದೈವ
ಹೇಮ – ಚಿನ್ನ
ಹೊಲಬು – ದಾರಿ
ಹ್ರಾಸ – ನಾಶ

ಅನುಬಂಧ ೨

ಪೂರ್ವಕಥೆಗಳು ಮತ್ತು ಟಿಪ್ಪಣಿಗಳು

೧

ಗಣಪತಿಯ ಸ್ತುತಿ.

೨

ಎಲ್ಲಕ್ಕೂ ಪ್ರೇರಕನಾದ ಶ್ರೀಹರಿ ಜೀವರ ಯೋಗ್ಯತೆಗನುಸಾರವಾಗಿ ಫಲವನ್ನು ಕೊಡುತ್ತಾನೆ ; ಸರ್ವವ್ಯಾಪಕನಾಗಿ ಜೀವರ ಕೈಯಲ್ಲಿ ವ್ಯಾಪಾರ ಮಾಡಿಸುತ್ತಾನೆ. ಅಂತಹ ಶ್ರೀಹರಿಯ ಸ್ಮರಣೆಯನ್ನು ಪಾಲಿಸಬೇಕೆಂಬುದಾಗಿ ಗೋಪಾಲದಾಸರು ಬೇಡಿಕೊಳ್ಳುತ್ತಾರೆ.

ನು. ೨ : **ಹೇಸಿಜಂಬುಕ ತಾನು... ತೆರದಿ** – ದಾಸರ ಕಾಲದಲ್ಲಿ ಪ್ರಚಲಿತವಾಗಿದ್ದ ಅಥವಾ ಅವರು ಕೇಳಿದ್ದ ಒಂದು ಕತೆ – ಮೀಸಲಾಗಿದ್ದ ಆಹಾರವನ್ನು ಬಿಟ್ಟು ಅದಕ್ಕಿಂತ ಅಕ್ಕಿಯೇ ವಾಸಿ ಎಂದು ದುರಾಸೆಯಿಂದ ಗ್ರಹಿಸಲು ಹೋಗಿ ತೊಂದರೆಗೊಳಗಾದ ನರಿಯಂತೆ ತಮ್ಮ ಪಾಡಾಗಿದೆ ಎಂಬುದು ಇಲ್ಲಿಯ ಭಾವ.

೩

ಜಗತ್ತಿನಲ್ಲಿ ನಡೆಯುವ ಎಲ್ಲ ಕಾರ್ಯಗಳಿಗೂ ಹರಿ ಮೂಲ ಎಂಬ ಅಭಿಪ್ರಾಯ ವನ್ನು ಈ ಉಗಾಭೋಗದಲ್ಲಿ ವ್ಯಕ್ತಪಡಿಸಿದ್ದಾರೆ. ಇತರರಿಂದಾಗುವ ಸುಖಕ್ಕಿಂತಲೂ ಶ್ರೀಹರಿಯಿಂದಾಗುವ ದುಃಖ ಗೋಪಾಲದಾಸರಿಗೆ ಆಪ್ಯಾಯಮಾನವಾಗಿದೆ.

೪

ಶ್ರೀಹರಿ ಬಿಂಬ, ಜೀವರು ಪ್ರತಿಬಿಂಬಗಳಾದುದರಿಂದ, ಪ್ರತಿಬಿಂಬಗಳಿಗೂ ತಾಪಗಳು ಇರಬಾರದೆನ್ನುತ್ತಾರೆ ಗೋಪಾಲದಾಸರು. ತಮ್ಮ ಅಂಗಾಂಗಗಳಲ್ಲಿ ವ್ಯಾಪಿಸಿರುವ ಹರಿಯನ್ನು ಕುರಿತು, ವೈಕುಂಠದಲ್ಲಿ ದೊರೆಯುವ ಸುಖವನ್ನು ಇಲ್ಲೇ ಕೊಡುವ ಸ್ವಾತಂತ್ರ್ಯ

ಅವನಿಗುಂಟೆಂದೂ ಹಾಗೆಯೇ ಮಾಡಿ ಹೃದಯದೊಳಗೆ ಸದಾಕಾಲ ದರ್ಶನವನ್ನು ದಯಪಾಲಿಸಬೇಕೆಂದೂ ಕೇಳಿಕೊಳ್ಳುತ್ತಾರೆ.

ನು. ೬ : **ಅಕ್ರೂರಪಾಲ** (ನೋಡಿ ಕೀ. ೧೦೦ರ ಟಿಪ್ಪಣಿ)

ಅಹಲ್ಯಾರಕ್ಷಕ (ನೋಡಿ : ಕೀ. ೧೬೩ರ ಟಿಪ್ಪಣಿ)

ಅಂಬರೀಷ ಪಾಲ : ನಭಗಮನನಾದ ಅಂಬರೀಷ ಭಗವದ್ಭಕ್ತ. ವಿಷ್ಣುವಿನ ವರದಿಂದ ಚಕ್ರಾಯುಧವನ್ನು ಸ್ವಾಧೀನಪಡಿಸಿಕೊಂಡಿದ್ದ (ಪು. ನಾ. ಚೂ. ಪು. ೧೯).

ಅಜಮಿಳವರದ : (ನೋಡಿ : ಕೀ. ೭೯ರ ಟಿಪ್ಪಣಿ)

ಗಜರಾಜವರದ : (ನೋಡಿ : ಕೀ. ೧೫೭ರ ಟಿಪ್ಪಣಿ)

೫

ಈ ಸುಳಾದಿಯಲ್ಲಿ ಶ್ರೀಹರಿಯ ಅಲಂಕಾರವನ್ನು ಆಪಾದ ಮಸ್ತಕವಾಗಿ ವರ್ಣಿಸಿ, ತಮ್ಮ ಮನೋಮಂದಿರದಲ್ಲಿ ಬಂದು ನಿಂತು ಪೊರೆಯ ಬೇಕೆಂಬುದಾಗಿ ಅವನನ್ನು ಪ್ರಾರ್ಥಿಸಿದ್ದಾರೆ.

ನು. ೨ : **ಬಲಿಯದಾನವ... ಶಿರದಲಿಟ್ಟೆ** (ನೋಡಿ : ಕೀ. ೧೫೫ರ ಟಿಪ್ಪಣಿ)

ನು. ૩ : **ನೀನು ಪಿಡಿಯೆ ಕುಬುಜೆ ಯೌವನಳಾದಳು** : (ನೋಡಿ : ಕೀ. ೨೫ರ ಟಿಪ್ಪಣಿ)

ನೀನು ಸೋಕಲು ಶಿಲೆ ತಾನೆ ಸ್ತ್ರೀಯಾದಳು : ಅಹಲ್ಯಾ ಶಾಪವಿಮೋಚನೆ (ನೋಡಿ : ಕೀ. ೧೬೩ರ ಟಿಪ್ಪಣಿ)

ನಿನಗೆ... ಧ್ರುವರಾಯಗೊಲಿದಯ್ಯ : (ನೋಡಿ : ಕೀ. ೧೫೭ರ ಟಿಪ್ಪಣಿ)

ಏನುಸುಖ ಶಬರಿ ಫಲವನುಣ್ಣಿಸಿದಳು : ಶಬರಿ ಒಬ್ಬ ಬೇಡಿತಿ, ರಾಮನ ಭಕ್ತೆ. ಸೀತಾಪಹರಣದ ಬಳಿಕ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತಾ ಪಂಪಾತೀರದ ಬಳಿ ಹೋಗುತ್ತಿದ್ದಾಗ, ತನ್ನ ಆಶ್ರಮಕ್ಕೆ ಬಂದ ರಾಮಲಕ್ಷ್ಮಣರನ್ನು ಪೂಜಿಸಿ, ಅವರ ಎದುರಿನಲ್ಲೇ ಅಗ್ನಿಪ್ರವೇಶ ಮಾಡಿ, ಪುಣ್ಯಲೋಕಕ್ಕೆ ಹೋದಳು (ರಾಮಾಯಣ, ಅರಣ್ಯಕಾಂಡ).

೬

ಪಾತಕಗಳನ್ನು ಪರಿಹರಿಸುವ, ಆಪದ್ಬಾಂಧವನಾದ ಶ್ರೀಹರಿ ತನ್ನ ಭಕ್ತರನ್ನು ಕಾಪಾಡಿದ ಪರಿಯನ್ನು ಈ ಕೀರ್ತನೆಯಲ್ಲಿ ಹೇಳಿದ್ದಾರೆ.

ನು. ೧ : **ಅಕ್ರೂರ** – ನೋಡಿ : ಕೀ. ೧೦೦ರ ಟಿಪ್ಪಣಿ)

ನಕ್ರಬಾಧೆಯು...ಕಾಯಿದಾತ : ಗಜೇಂದ್ರಮೋಕ್ಷ (ನೋಡಿ : ಕೀ.೧೫೭ರ ಟಿಪ್ಪಣಿ)

ನು. ೪ : **ಅನಾದಿ.... ಒದಗಿದಾತ** : ಹರಿಯ ಮತ್ಸ್ಯಾವತಾರ (ನೋಡಿ : ಕೀ. ೧೫೫ರ ಟಿಪ್ಪಣಿ)

೭

ಜೀವರ ಸಮಸ್ತ ಕಾರ್ಯಗಳೂ ಶ್ರೀಹರಿಯ ಅಧೀನ. ಸಿರಿ ಅಜಭವಾದಿಗಳೇ ಮೊದಲಾದ ದೇವತೆಗಳೂ ಕೇವಲ ದತ್ತ ಸ್ವಾತಂತ್ರ್ಯಬದ್ಧರು. ಹೀಗೆ ಸರ್ವ ಪ್ರೇರಕನೂ ಸರ್ವಕರ್ತನೂ ಸರ್ವವ್ಯಾಪ್ತನೂ ಆದ ಶ್ರೀಹರಿಯನ್ನು ಅರಿಯುವಂತೆ ಮಾಡಬೇಕೆಂದು ಪ್ರಾರ್ಥಿಸಿದ್ದಾರೆ ದಾಸರು.

೮

ಹರಿಯ ಸರ್ವೋತ್ತಮತ್ವವನ್ನೂ ಉನ್ನತ ಗುಣಾತಿಶಯಗಳನ್ನೂ ಸಾರುವ ಸುಳಾದಿ. ದೋಷ, ದುರಿತ, ದುಃಖಾದಿಗಳಿಗೆಲ್ಲ ತಾವು ಸರ್ವಗುಣ ಪರಿಪೂರ್ಣನ ಆಳೆಂದು ಘೋಷಿಸಿಕೊಳ್ಳುವ ಮೂಲಕ ತಮ್ಮ ಹತ್ತಿರ ಸುಳಿಯಬಾರದೆಂದು ಎಚ್ಚರಿಸಿದ್ದಾರೆ.

ನು. ೩ : ತ್ರಿವಿಧ ಜೀವರಿಗೆ (ಮುಕ್ತಿಯೋಗ್ಯರು, ನಿತ್ಯ ಸಂಸಾರಿಗಳು, ತಮೋಯೋಗ್ಯರು) ಫಲಾಫಲಗಳು ಹೇಗಿರುತ್ತವೆಂಬುದನ್ನು ಹೇಳುತ್ತಾರೆ.

ನು. ೪ : ಜೀವರು ಹೇಗೆ ಭಾವಿಸಿ ಉಪಾಸಿಸುತ್ತಾರೋ ಶ್ರೀಹರಿ ಹಾಗೆಯೇ ಅವರನ್ನು ನೋಡುವನು.

೯

ಶ್ರೀಹರಿಯ ಸೃಷ್ಟಿಸ್ಥಿತಿಲಯಾದಿ ಕಾರ್ಯಗಳನ್ನು ವರ್ಣಿಸಿ, ತಮ್ಮ ಅನಂತದೋಷಗಳನ್ನು ಕಡೆಗೆ ಹಾಕುವಂತಹ ಹರಿಯ ನಾಮಸ್ಮರಣೆಯನ್ನು ತಮಗೆ ದಯಪಾಲಿಸಬೇಕೆಂದು ಬೇಡಿದ್ದಾರೆ. ತಮ್ಮ ಎಲ್ಲ ಕಾರ್ಯಗಳಲ್ಲೂ ಹರಿಯ ಆವಿರ್ಭಾವವನ್ನು ಬಯಸಿದ್ದಾರೆ.

ನು. ೧ : **ಲಲನೆಲಕುಮಿ ತಾನೆ ಮೂರು ಬಗೆಯು ಆಗಿ** : ಶ್ರೀಭೂದುರ್ಗಾ – ರೂಪತ್ರಯದಿಂದ ಲಕ್ಷ್ಮೀದೇವಿ ಸೃಷ್ಟಿ, ಸ್ಥಿತಿ, ಲಯಗಳಲ್ಲಿ ಶ್ರೀಹರಿಯ ಇಚ್ಛೆಯಂತೆ ವ್ಯಾಪಾರ ಮಾಡುವಳು.

ನು. ೭ : ವಿಷಯಗಳಿಗೂ ವಿಷಯನಾಗಿರೆಂದು ಶ್ರೀಹರಿಯಲ್ಲಿ ದಾಸರ ಪ್ರಾರ್ಥನೆ.

೧೦

ವಿಷಯಲಾಲಸೆಗಳಲ್ಲಿ ಮುಳುಗಿಹೋಗಿರುವ ತಮ್ಮ ಇಂದ್ರಿಯಗಳನ್ನು

ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗದೆ, ಶ್ರೀಹರಿಯನ್ನೇ ಮೊರೆಹೊಕ್ಕು, ತಮ್ಮನ್ನು ಉದ್ಧರಿಸಬೇಕೆಂದು ಕೇಳಿಕೊಂಡಿದ್ದಾರೆ.

೧೧

ನಿಂದಾಸ್ತುತಿಯಾದ ಈ ಕೀರ್ತನೆಯ ಮೂಲಕ ಶ್ರೀಹರಿಯ ದಶಾವತಾರಗಳನ್ನು ವರ್ಣಿಸಿದ್ದಾರೆ (ವಿವರಗಳಿಗೆ ನೋಡಿ : ಕೀ. ೧೫೫ ರ ಟಿಪ್ಪಣಿ)

ತಮನೊಡನೆ	....	ಬೆವರಿತೊ	–	ಮತ್ಸ್ಯಾವತಾರ
ಅಮೃತಮಥನದಿ	....	ಭಾರವಾಯ್ತು	–	ಕೂರ್ಮ
ರಮಣಿಯನು	....	ಬಹಳಾಯ್ತೊ	–	ವರಾಹ
ಅಮರರಿಪು	....	ಆಯಾಸವಾಯ್ತೊ	–	ನರಸಿಂಹ
ಆಕಾಶ	....	ಉಳುಕಿತೊ	–	ವಾಮನ
ಕಾಕು	....	ಸೋತಿತೊ	–	ಭಾರ್ಗವ
ಭೂದೇವಿ	....	ಬಹಳಾಯ್ತೊ	–	ರಾಮ
ಲೋಕ	....	ಸಾಕಾಯ್ತೊ	–	ಕೃಷ್ಣ
ಚಪಲೆಯರ	....	ಬಹಳಾಯ್ತೊ	–	ಬುದ್ಧ
ಅಪವಿತ್ರ	....	ಶ್ರಮವಾಯ್ತೊ	–	ಕಲ್ಕಿ

೧೨

ತಮಗೆ ಹಲವಾರು ಜನ್ಮಗಳು ಬಂದುಹೋದರೂ ವಿಷಯದಾಸಕ್ತಿ ಹೋಗಲಿಲ್ಲವೆಂದು ದಾಸರು ಹಲುಬಿದ್ದಾರೆ. ವಿಷಯಗಳಲ್ಲಿ ಸುತ್ತುತ್ತಿರುವ ತಮ್ಮ ಮನಸ್ಸನ್ನು ಗೋಪಾಲವಿಠಲನತ್ತ ತಿರುಗಿಸಲು ಸಾಧ್ಯವಾಗದೆ ಪರಿತಪಿಸಿದ್ದಾರೆ. ಕೊನೆಗೆ ಶ್ರೀಹರಿಯನ್ನೇ ಮೊರೆಹೊಕ್ಕು 'ವಿಷಯದಾಸಕುತಿಯ ಬಿಡಿಸೋ' ಎಂದು ಪ್ರಾರ್ಥಿಸಿದ್ದಾರೆ.

ನು. ೫ : ಇಲ್ಲಿ ಭಗವಂತನ ಕೃಪೆ, ಅನುಗ್ರಹಗಳನ್ನು ಚಿಂತಾಮಣಿಗೂ ಜೀವರನ್ನು ಕಂತೆಗೂ ಹೋಲಿಸಿರುವುದು ಸ್ವಾರಸ್ಯಕರವಾಗಿದೆ. ಹೇಗೆ ಚಿಂತಾಮಣಿಯಿಲ್ಲದ ಕಂತೆ ವರ್ಜ್ಯವೋ ಹಾಗೆಯೇ ಶ್ರೀಹರಿಯ ಕೃಪಾಕಟಾಕ್ಷವಿಲ್ಲದ ಜೀವ, ಜೀವನ ವ್ಯರ್ಥ.

ನು. ೭ : **ತರಳನ ಅಪರಾಧ ತಾಳಿದೆ** : ಭಗವಂತನ ಎದುರಿನಲ್ಲಿ ತಾನು ಕೇವಲ ಬಾಲಕನೆಂಬ ದಾಸರ ಭಾವನೆ ಇಲ್ಲಿ ವ್ಯಕ್ತವಾಗಿದೆ.

೧೩

ಅನಂತ ಅಪರಾಧಗಳನ್ನು ಮಾಡಿ ಮೊರೆಹೊಕ್ಕಿರುವ ತಮ್ಮನ್ನು ಈ ಭವ ರೋಗ ದಿಂದ, ಹರಿಸ್ಮರಣೆಯೆಂಬ ಸಿದ್ಧೌಷಧವನಿತ್ತು ಕಾಪಾಡಬೇಕೆಂಬುದಾಗಿ ಶ್ರೀಹರಿಯನ್ನೇ

ಪ್ರಾರ್ಥಿಸಿದ್ದಾರೆ. ಜೀವನದ ಜಂಜಾಟದಲ್ಲಿ ದಾರಿಗಾಣದೆ ಪರಿತಪಿಸಿದ್ದಾರೆ. ಸಕಲ ಸನ್ಮಂಗಳವೂ ಶ್ರೀಹರಿಯ ಸ್ಮರಣೆ ಮಾತ್ರದಿಂದ ಸಾಧ್ಯ ಎಂಬ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸುವ ಮೂಲಕ 'ಸ್ಮರಣಭಕ್ತಿಯ' ಪ್ರಾಮುಖ್ಯವನ್ನು ಸಾರಿದ್ದಾರೆ.

೧೪

ಶ್ರೀಹರಿಯ ಗುಣರೂಪ ಕ್ರಿಯಾದಿಗಳ ವರ್ಣನೆ. ವಿವಿಧ ರೂಪಗಳಿಂದ ಭಕ್ತರೆಲ್ಲರಲ್ಲಿಯೂ ಇದ್ದು, ಭಕ್ತರಿಗಾಗಿ ಘನ ಕಾರ್ಯಗಳನ್ನು ಮಾಡುತ್ತಾ, ಸೃಷ್ಟಿಸ್ಥಿತಿಲಯಗಳ ನಿರ್ವಾಹಕನಾಗಿರುವ ಶ್ರೀಹರಿಯ ಮಹಿಮೆಗೆ ನಮೋ ಎಂದಿದ್ದಾರೆ.

೧೫

ಈ ಉಗಾಭೋಗದಲ್ಲಿ ದಾಸರು ಶ್ರೀಹರಿಗೂ ತಮಗೂ ತಾಯಿ ಮಗುವಿನ ಸಂಬಂಧ ಕಲ್ಪಿಸಿ, ತಮ್ಮನ್ನು ಪ್ರೀತಿಸುವ ಪೋಷಿಸುವ ಶ್ರೀಹರಿ ತಮ್ಮ ಶರೀರದಲ್ಲೇ ಇದ್ದರೂ ಕಾಣಿಸಿಕೊಳ್ಳದೆ ಮೋಸಗೊಳಿಸಿದನೆಂದು ಆರೋಪಿಸುತ್ತಾರೆ.

೧೬

ಕುತ್ಸಿತ ಭೋಗದಲ್ಲಿ ಮುಳುಗಿರುವ ದಾಸರು, ಕಚ್ಚಿ ಪೀಡಿಸುತ್ತಿರುವ ವಿಷಯಗಳಿಂದ ತಮ್ಮನ್ನು ಬಿಡಿಸಬೇಕೆಂದು ಶ್ರೀಹರಿಯನ್ನು ಮೊರೆಹೊಕ್ಕಿದ್ದಾರೆ. ಶ್ರೀ ಹರಿಯೊಬ್ಬನೇ ತಮ್ಮನ್ನು ಪಾರುಮಾಡಬಲ್ಲವನೆಂಬ ಅಚಲ ನಂಬಿಕೆ ಅವರದು. ಕಚ್ಚಿನಗಡಿಗೆಮ್ಮ, ಹುಚ್ಚ ಮೋರೆಯ ಮರಿಗಿ, ಗಚ್ಚಿನ ಪೋತರಾಜ, ರಚ್ಚಕಟ್ಟೆಯ ಎಲ್ಲಿ, ಬಿಚ್ಚಾಳೆ ಪಲ್ಲಿ, ಶಡವಿ, ಬನಶಂಕರಿ ಮುಂತಾದ ಸ್ಥಳೀಯ ಗ್ರಾಮದೇವತೆಗಳಲ್ಲಿ ದಾಸರಿಗೆ ನಂಬಿಕೆಯಿಲ್ಲ.

ಮಚ್ಛಕೂರ್ಮ.... ಕಲ್ಕಿಯೆ : ಹರಿಯ ದಶಾವತಾರಗಳ ಪ್ರಸ್ತಾವ (ವಿವರಗಳಿಗೆ ನೋಡಿ : ಕೀ. ೧೫೫ರ ಟಿಪ್ಪಣಿ).

ನು. ೨, ೩, ೪ರಲ್ಲಿ ತಮ್ಮ ಅಸಹಾಯಕತೆಯನ್ನೂ ಹರಿಯಲ್ಲಿ ತಮಗಿರುವ ನಂಬಿಕೆ, ಭರವಸೆಗಳನ್ನೂ ಮತ್ತೆ ಮತ್ತೆ ತೋಡಿಕೊಂಡಿದ್ದಾರೆ.

೧೭

ಈ ಸುಳಾದಿ ಒಂದು ನಿಂದಾಸ್ತುತಿ. ದಾಸರು ಸಲಿಗೆಯಿಂದ ಶ್ರೀಹರಿಯ ಗುಣಾತಿಶಯಗಳನ್ನು ವಿಡಂಬಿಸಿ, ಅವನ ಸ್ವಾಮಿತ್ವವನ್ನು ಪ್ರಶ್ನಿಸಿ ತಮ್ಮ ಸೇವಕತನದ ಶ್ರೇಷ್ಠತೆಯನ್ನು ಎತ್ತಿಹಿಡಿಯುತ್ತಾರೆ.

ನು. ೩ : ಆ ಕಾಲದಲ್ಲಿ ಬಳಕೆಯಲ್ಲಿದ್ದಂಥ ವೃತ್ತಿಸೂಚಕ ಪದಗಳಾದ ಮಡಿವಾಳ, ಬಡಗಿ, ಕುಲಾಲ, ಅಕ್ಕಸಾಲಿ ಮೊದಲಾದವನ್ನು ಇಲ್ಲಿ ಕಾಣಬಹುದು.

೧೮

ಜೀವರ ಎಲ್ಲ ಬಗೆಯ ಸಾಧನಗಳೂ ಶ್ರೀಹರಿಯ ಅಧೀನ. ಅವನೇ ಸರ್ವಪ್ರೇರಕ, ಸರ್ವನಿಯಾಮಕ. ಆದ್ದರಿಂದ ಅವನ ಚಿತ್ತಕ್ಕೆ ಬಂದಂತೆ ತಮಗೆ ಮಾಡಲಿ ಎನ್ನುತ್ತಾರೆ ಗೋಪಾಲದಾಸರು.

ನು. ೧ : ಕಂಡವರನ್ನು ಆಶ್ರೈಸಿ ಎಷ್ಟು ಸಾಧನೆಗಳನ್ನು ಮಾಡಿದರೂ ಮಾಡಿಸುವವ ಶ್ರೀಹರಿ ಎಂಬ ಅರಿವಿಲ್ಲದಿದ್ದರೆ ಅವೆಲ್ಲ ವ್ಯರ್ಥ.

ನು. ೨-೩ : ತಮ್ಮ ಅಸಾಮರ್ಥ್ಯವನ್ನು ತೋಡಿಕೊಂಡು ಹರಿಯ ಕರುಣೆಯನ್ನು ಯಾಚಿಸಿದ್ದಾರೆ.

ನು. ೪ : ಮನುಷ್ಯ ಜನ್ಮದ ಶ್ರೇಷ್ಠತೆಯನ್ನೂ ಭಕ್ತರ ಸಂಗದ ಮಹತ್ತ್ವವನ್ನೂ ತಿಳಿಸಿದ್ದಾರೆ. ಹರಿಯನ್ನು ತಿಳಿಯುವ ಜ್ಞಾನವನ್ನು ಕೊಡೆಂದು ಅವನನ್ನೇ ಪ್ರಾರ್ಥಿಸಿದ್ದಾರೆ.

ನು. ೫-೬ : ತಮಗೂ ಶ್ರೀಹರಿಗೂ ಇರುವ ಅಂತರವನ್ನು ಬಿಡಿಸಿ ಹೇಳುತ್ತಾ ತಮ್ಮಿಬ್ಬರ ಬಾಂಧವ್ಯ ಅನಾದಿಯಾದದ್ದೆಂದೂ ಅದರಿಂದ ಇಬ್ಬರಿಗೂ ಬಿಡುಗಡೆಯಿಲ್ಲವೆಂದೂ ಸ್ಪಷ್ಟಪಡಿಸುತ್ತಾರೆ. ಘಂಟೆಗೂ ಅದರೊಳಗಿನ ನಾಲಗೆಗೂ ಇರುವ ನಂಟುತನವೇ ಶ್ರೀಹರಿಗೂ ತಮಗೂ ಇದೆಯೆಂದು ದಾಸರ ಭಾವನೆ.

ನು. ೭ : ಭಗವಂತನಿಗಿಂತಲೂ ಭಕ್ತನೇ ಹೆಚ್ಚು. ಏಕೆಂದರೆ ಭಗವಂತನ ಇರುವಿಕೆಯನ್ನು ಪ್ರಕಟಪಡಿಸುವವರು ಅವನ ಭಕ್ತರೇ. ಹಾಗೆಂದು ಸುದಾಮ (ನೋಡಿ : ಕೀ. ೨೭ರ ಟಿಪ್ಪಣಿ), ಅಜಾಮಿಳ (ನೋಡಿ : ಕೀ. ೭೯ರ ಟಿಪ್ಪಣಿ), ಪ್ರಹ್ಲಾದ (ನೋಡಿ : ಕೀ. ೧೫೫ರ ಟಿಪ್ಪಣಿ), ಪಾಂಡವರು, ಯಶೋದೆ (ಗೋಕುಲದ ಅರಸನಾದ ನಂದನ ಹೆಂಡತಿ. ಕೃಷ್ಣನ ಸಾಕುತಾಯಿ. ಭಾಗವತ. ೧-೩) ಮೊದಲಾದ ಭಕ್ತರನ್ನು ಉದಾಹರಿಸಿದ್ದಾರೆ.

೧೯

ಜನ್ಮಾಂತರಗಳಲ್ಲಿ ತೊಳಲಾಡಿ, ಜನನ ಮರಣಗಳಿಂದ ಹಣ್ಣಾದ ತಮ್ಮನ್ನು ಶ್ರೀಹರಿ ತನ್ನ ಸತತಭೃತ್ಯನೆಂದೆನಿಸಿ ಕಾಪಾಡಬೇಕೆಂದು ಪ್ರಾರ್ಥಿಸಿದ್ದಾರೆ.

ನು. ೨ : ನಾನಾ ಜನ್ಮಗಳಲ್ಲಿ ತಾವು ಕುಡಿದ ತಾಯಿಯ ಮೊಲೆಹಾಲನ್ನು ಅಳೆದಲ್ಲಿ ಕ್ಷೀರಸಾಗರಕ್ಕೆ ಎರಡರಷ್ಟೂ ತಾವು ಪಡೆದ ದೇಹಗಳ ಮೂಳೆ, ಚರ್ಮ, ರಕ್ತಮಾಂಸಗಳನ್ನು

ರಾಸಿ ಹಾಕಿದರೆ ಮೇರುಪರ್ವತಕ್ಕೆ ನಾಲ್ಕರಷ್ಟೂ ಚರ್ಮವನ್ನು ಹಾಸಿ ನೋಡಿದಲ್ಲಿ ಭೂಮಿಯ ಐದರಷ್ಟೂ ಆಗುತ್ತದೆಂಬುದು ದಾಸರ ಅನಿಸಿಕೆ.

೨೦

ದೋಷಿಯೆಂದು ತಮ್ಮನ್ನು ಉದಾಸೀನ ಮಾಡದೆ ಅನುಗ್ರಹಿಸಬೇಕೆಂದು ಗೋಪಾಲವಿಠಲನಲ್ಲಿ ಮೊರೆಯಿಟ್ಟಿದ್ದಾರೆ.

೨೧

ಜೀವಿಗಳನ್ನು ನೀನಾಗಿ ಕಾಪಾಡು ಎಂಬುದು ಶ್ರೀಹರಿಗೆ ದಾಸರ ಬಿನ್ನಪ. ಅಸುರರೇ ಹೆಚ್ಚಿರುವ ಈ ಕಲಿಯುಗದಲ್ಲಿ ಹರಿಯ ಭಕ್ತರು ಕಡಿಮೆಯಿದ್ದರೂ ಹರಿಯನ್ನು ಅರಸುತ್ತಿರುವ ಅವರ ಮೊರೆ ಕೇಳಿ, ಹರಿಯ ಪ್ರೇರಣೆಯ ಮೇರೆಗೆ ತಾವು ಆ ರೀತಿ ಬಿನ್ನೈಸಿಕೊಳ್ಳುತ್ತಿರುವುದಾಗಿ ಹೇಳಿದ್ದಾರೆ.

೨೨

ಸರ್ವೋತ್ತಮನಾದ ಹರಿಯ ಗುಣಗಳನ್ನು ಬಣ್ಣಿಸಿ, ತಾವು ವಿಷಯಗಳಲ್ಲಿ ಮುಳುಗಿ ಯಾತನೆಗೊಳಗಾಗಿರುವುದಾಗಿಯೂ ಮನಸ್ಸು ತಮ್ಮ ಮಾತನ್ನು ಕೇಳುವುದಿಲ್ಲವೆಂದೂ ತಿಳಿಸಿ, ಅವನಲ್ಲಿ ಭಕ್ತಿಯನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿದ್ದಾರೆ. ಹರಿಯ ಭಕ್ತಿಯೊಂದು ದಾಸರಲ್ಲಿ ಸ್ಥಿರವಾದರೆ, ಅವರು ಅರಣ್ಯದೊಳಗಿರುವುದಕ್ಕೂ ಹಿಂಜರಿಯುವುದಿಲ್ಲವಂತೆ.

ನು. ೨ : **ಅಜಮಿಳನ ಕಾಯ್ದದೆ ಸತ್ಯ :** (ನೋಡಿ : ಕೀ. ೭೯ ಟಿಪ್ಪಣಿ).

ಭಕ್ತವಾಲ್ಮೀಕನ್ನ ಉಕುತಿನಿತ್ತದ್ದೆ ಸತ್ಯ : ವಾಲ್ಮೀಕಿ ಒಬ್ಬ ಬ್ರಹ್ಮರ್ಷಿ. ಕಾಡಿನಲ್ಲಿ ಬೇಡರ ಜೊತೆ ಸೇರಿ ದಾರಿಗಳ್ಳನಾಗಿದ್ದ. ಒಮ್ಮೆ ಸಪ್ತರ್ಷಿಗಳನ್ನು ಇದಿರಿಸಿ, ಅವರ ಮೂಲಕ ಜ್ಞಾನವನ್ನು ಪಡೆದು, ರಾಮಮಂತ್ರ ಜಪದಿಂದ ಮೈಮರೆತಿದ್ದಾಗ ಈತನ ಮೇಲೆ ಹುತ್ತ ಬೆಳೆದಿತ್ತು. ಈತ ತಮಸಾನದಿಗೆ ಸ್ನಾನಕ್ಕೆ ಹೋಗಿದ್ದಾಗ ಕ್ರೌಂಚ ಪಕ್ಷಿಗಳ ಯುಗ್ಮದಲ್ಲಿ ಗಂಡು ಹಕ್ಕಿಯನ್ನು ಕೊಂದ ಬೇಡನಿಗೆ ಶಾಪ ಕೊಡಹೋಗಿ, ಆತನ ಬಾಯಿಂದ ಛಂದೋರೂಪವಾದ ಶ್ಲೋಕಗಳು ಹೊರಬಂದುವು. ಮುಂದೆ ಬ್ರಹ್ಮನ ಆದೇಶದಂತೆ, ನಾರದನ ಸಹಾಯದಿಂದ ವಾಲ್ಮೀಕಿ ರಾಮಾಯಣವನ್ನೇ ರಚಿಸಿದ (ಪು. ನಾ. ಚೂ. ಪು. ೫೬೦)

ಭಕ್ತಕುಬ್ಜೆಯನ್ನು ಚಕಿತ ಮಾಡಿದ್ದೆ ಸತ್ಯ : (ನೋಡಿ : ಕೀ. ೨೫೮ರ ಟಿಪ್ಪಣಿ).

೨೩

ಇದೊಂದು ನಿಂದಾಸ್ತುತಿ. ಶ್ರೀಹರಿಯ ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳನ್ನು ಕುರಿತು ದಾಸರು ಅಣಕವಾಡಿದ್ದಾರೆ.

೨೪

ತಮ್ಮ ಮೇಲೆ ದಯವಿಡಬೇಕೆಂಬುದಾಗಿ ದಯಾಮಯನಾದ ಶ್ರೀಹರಿಯನ್ನು ಕೈಮುಗಿದು ಕೇಳಿಕೊಂಡಿದ್ದಾರೆ ದಾಸರು. ತಾವು ತೀರ್ಥಯಾತ್ರೆ ಮಾಡುವ ಉದ್ದೇಶವನ್ನು 'ನದ್ಯಾದಿ ಕ್ಷೇತ್ರ ಮೂರ್ತಿಗಳಲ್ಲಿ ನಿಜಜ್ಞಾನವೃದ್ಧ ಜನರ ಹುಡುಕಿ ನಿನ್ನ ತಿಳಿಯಲು' ಬಂದೆ – ಎಂದು ನಿವೇದಿಸಿಕೊಂಡಿದ್ದಾರೆ.

ನು. ೫ : ಈ ಭವಬಂಧನವನ್ನು ಕಡಿದುಹಾಕುವಂತಹ ಭಕುತಿ ಜ್ಞಾನಗಳನ್ನು ದಯಪಾಲಿಸೆಂದು ಬೇಡುವುದು.

ನು. ೬ : ತಮ್ಮನ್ನು ಮಾತ್ರವಲ್ಲದೆ ಎಲ್ಲ ವೈಷ್ಣವರನ್ನೂ ಕಾಪಾಡ ತಕ್ಕಂತಹ ಭಕ್ತಿಯ ಅಪೇಕ್ಷೆ.

ನು. ೭ : ಸುರಗಂಗೆಯಲ್ಲಿ ಸ್ನಾನ ಮಾಡಬೇಕೆನ್ನುವ ಅವರ ಅಭಿಲಾಷೆ.

೨೫

ಈ ಕೀರ್ತನೆಯಲ್ಲಿ ಪಂಚಪ್ರಾಣರಿಗೆ ಪ್ರಾಣ ಸ್ವರೂಪನಾಗಿರುವ ಮುಖ್ಯ ಪ್ರಾಣಾಂತರ್ಗತನಾದ ಹರಿಯನ್ನು ಧ್ಯಾನಿಸುವಂತೆ ಬೋಧಿಸಿದ್ದಾರೆ. ಸರ್ವವ್ಯಾಪಿಯಾದ ಅವನ ಅಸ್ತಿತ್ವವನ್ನು ಶ್ರುತಿಗಳ ಪ್ರಮಾಣವಾಕ್ಯಗಳಿಂದ ನಿರೂಪಿಸಿದ್ದಾರೆ.

ನು. ೨ : **ಹರಿಪೂರ್ಣ ವ್ಯಾಪ್ತ** : ಶ್ರೀಹರಿಯನ್ನು ಕುರಿತ 'ಪೂರ್ಣಮದಃ ಪೂರ್ಣಮಿದಂ' ಎಂಬ ಈಶಾವಾಸ್ಯೋಪನಿಷತ್ತಿನ ಭಾವ.

ನು. ೫ : ಲಿಂಗ ದೇಹದಲ್ಲಿ ಪರಮಾತ್ಮ ಹೇಗೆ ವ್ಯಾಪಿಸಿರುತ್ತಾನೆಂಬ ವಿಚಾರ. ಸಪ್ತಾವರಣ (ನೋಡಿ ಕೀ. ೧೧೫ರ ಟಿಪ್ಪಣಿ – ಸಪ್ತಧಾತು).

ನು. ೬,೭ : ಶ್ರುತಿ ವಾಕ್ಯಗಳ ಪ್ರಮಾಣ.

ನು. ೮ : ಕಾಳಿಂಗ ಸರ್ಪನ ಮರ್ದನ (ನೋಡಿ ಕೀ. ೧೫೧ರ ಟಿಪ್ಪಣಿ).

ನು. ೧೦ : **ಧರೆಯನಳೆದ ದಿವ್ಯಚರಣ** : ವಾಮನಾವತಾರ (ನೋಡಿ ಕೀ. ೧೫೫ರ ಟಿಪ್ಪಣಿ).

ನಖದಿ ಸುರನದಿಯ ಪೆತ್ತ : ಗಂಗೆ ವಿಷ್ಣುಪಾದದಿಂದ ಹುಟ್ಟಿದಳೆಂಬ ವಿಷಯ (ಭಾಗವತ ೮. ಅ. ೨೧).

ಕುಬುಜೆ ಡೊಂಕು ತಿದ್ದಿದ : ಶ್ರೀಕೃಷ್ಣ ಮಧುರೆಗೆ ಹೋದಾಗ ತ್ರಿವಕ್ರೆ ಎಂಬುವಳು ರಾಜನಿಗೆ ಗಂಧ ತೆಗೆದುಕೊಂಡು ಹೋಗುತ್ತಿದ್ದಳು. ಆಗ ಶ್ರೀಕೃಷ್ಣ ಆ ಗಂಧವನ್ನು ಬಳಿದುಕೊಂಡು ಆಕೆಯ ಗೂನನ್ನು ಹೋಗಲಾಡಿಸಿ, ಸುರೂಪಿಯನ್ನಾಗಿ ಮಾಡಿದ (ಭಾಗವತ ೧೦. ಅ. ೪೨).

೨೬

ಬಿಂಬರೂಪಿಯಾದ ಶ್ರೀಹರಿಯಲ್ಲಿ ದೃಢನಂಬಿಕೆಯನ್ನು ಕೊಡಬೇಕೆಂದು ದಾಸರು ಇಲ್ಲಿ ಶ್ರೀಹರಿಯನ್ನು ಪ್ರಾರ್ಥಿಸಿದ್ದಾರೆ.

೨೭

ದಾಸರನ್ನು ಲೌಕಿಕ ಆಸೆ ಆಮಿಷಗಳಲ್ಲಿ ಪ್ರೇರಿಸಿದವನು ಶ್ರೀಹರಿಯೇ ಎನ್ನುವ ಭಾವನೆ ಇಲ್ಲಿ ವ್ಯಕ್ತವಾಗಿದೆ. ಹಾಗೆ ವಿಷಯಲಾಲಸೆಯಲ್ಲಿ ಸಿಲುಕಿ ತೊಳಲುತ್ತಿರುವ ತಮ್ಮನ್ನು ಕಂಡು ಅಪಹಾಸ್ಯ ಮಾಡಿ ನಗದೆ, ಕೈಹಿಡಿದು ರಕ್ಷಿಸಬೇಕಾದ್ದು ಶ್ರೀಹರಿಯ ಕರ್ತವ್ಯವೆಂಬುದನ್ನು ಸೂಚಿಸಿದ್ದಾರೆ.

೨೮

ಈ ಸುಳಾದಿ ಒಂದು ನಿಂದಾಸ್ತುತಿ. ಸಿರಿ, ಅಜಾದಿಗಳ ಅತ್ಯುತ್ತಮ ಜೀವನ ವನ್ನು ಹರಿಗೆ ತೋರಿಸಿ, ಅವರನ್ನೆಲ್ಲ ಸೃಷ್ಟಿಸಿದ ನೀನೇ ನನ್ನನ್ನೂ ಸೃಷ್ಟಿಸಿದ್ದೀಯೆ. ಆದರೂ ನನಗೆ ಅಂತಹ ಪದವಿ, ಪರಿಕರಗಳಿಲ್ಲ ಎಂದು ಹೇಳುತ್ತಾ 'ಅವರೆಲ್ಲ ನಿನಗೇನು ಕೊಟ್ಟರು ? ನಾನು ಕೊಡದಿರುವುದೇನು ?' ಎಂದು ಅವನನ್ನು ತರಾಟೆಗೆ ತೆಗೆದುಕೊಂಡಿದ್ದಾರೆ ಗೋಪಾಲದಾಸರು.

ನು. ೨ : ಎರಡೇಳು ಲೋಕ (ನೋಡಿ ಕೀ. ೧೨೩ರ ಟಿಪ್ಪಣಿ)

ನು. ೩ : ಗಂಡಹೆಂಡಿರ ಜಗಳದ ನಡುವೆ ಒದ್ದಾಡುವ ಕೂಸಿನ ರೀತಿ ದಾಸರು ರಕ್ಷಣೆಯಿಲ್ಲದೆ ಇದ್ದಾರೆ.

ನು. ೪ : ಡಂಗುರಸಾರಿ, ಊರವರಿಗೆಲ್ಲ ಔತಣಕ್ಕೆ ಹೇಳಿದವನು, ಔತಣಕೂಟ ನಡೆಯುತ್ತಿದ್ದಾಗ ಬಾಗಿಲಲ್ಲಿ ಭಿಕ್ಷುಕನೊಬ್ಬ ಬಂದು ಬೇಡಿದರೆ ಅವನನ್ನು ಆಚೆ ಅಟ್ಟುತ್ತಾನೆಯೇ ? ಹಾಗೆಯೆ ಎಲ್ಲರನ್ನೂ ಸಾಕುವ ದೊರೆ ನೀನು, ನನ್ನನ್ನು ಉಪೇಕ್ಷಿಸುವುದು ತರವಲ್ಲ.

೨೯

ಸರ್ವಸ್ವತಂತ್ರನೂ ಸರ್ವಕರ್ತನೂ ಆದ ಶ್ರೀಹರಿಯ ನಿತ್ಯಸ್ಮರಣೆಯೇ ದಾಸರಿಗೆ ಸಾರಸರ್ವಸ್ವ. ಅವನ ಸ್ಮರಣೆಯೇ ಪುಣ್ಯ : ಅವನ ಮರೆವು ದೋಷ ಎಂಬ ನಿಲವು ಅವರದು. ತಮ್ಮನ್ನು ಜನ್ಮಾಂತರಗಳ ಜಾಲದಿಂದ ಮುಕ್ತರಾಗಿ ಮಾಡಬೇಕೆಂದು ಹರಿಯಲ್ಲಿ ಮೊರೆಯಿಟ್ಟಿದ್ದಾರೆ.

ನು. ೪ : **ಉಗ್ರಸೇನ** : ಕಂಸನ ತಂದೆ. ಕಂಸವಧೆಯ ಬಳಿಕ ಕೃಷ್ಣ ಈತನಿಗೆ ಮತ್ತೆ ಪಟ್ಟಕಟ್ಟಿದ (ಪು. ನಾ. ಚೂ. ಪು. ೫೩).

ನೀ ವಟುವಿಪ್ರನಾಗಿ ... ಪಾಲಿಸಿದೆ : ವಾಮನಾವತಾರ (ನೋಡಿ ಕೀ. ೧೫೫ರ ಟಿಪ್ಪಣಿ).

ನು. ೬ : ದಾಸರ ಬಂಧು, ಬಾಂಧವ, ಸಕಲ ಸಂಪತ್ತುಗಳೂ ಶ್ರೀಹರಿಯ ಅಡಿಗಳು.

೩೦

ಈ ಸುಳಾದಿಯಲ್ಲಿ ಶ್ರೀಹರಿಯ ಧ್ಯಾನದ ಆವಶ್ಯಕತೆಯನ್ನೂ ಅದರ ಫಲಾ ಫಲಗಳನ್ನೂ ಹೇಳಿ, ಧ್ಯಾನಕ್ಕೆ ವಿಷಯನಾಗಬೇಕೆಂದು ಶ್ರೀಹರಿಯನ್ನು ಹಿಡಿದು ನಿಲ್ಲಿಸಿದ್ದಾರೆ.

ನು. ೩ : ಸಕಲ ತತ್ತ್ವ ತೀರ್ಥಕ್ಷೇತ್ರಗಳೂ ಹರಿಯಲ್ಲಿವೆ.

ನು. ೪–೫ : ಶ್ರೀಹರಿಯಿಂದಾದ ತಮ್ಮ ಜನ್ಮಜನ್ಮಾಂತರಗಳ ಚಲನವಲನಗಳೆಲ್ಲ ಶ್ರೀಹರಿಗೆ ಪೂಜೆ ನೈವೇದ್ಯವೆನ್ನುತ್ತಾರೆ.

ನು. ೬ : **ದಶ ಇಂದ್ರಿಯಗಳು** : ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವೆ, ನಾಸಿಕ, ವಾಕ್, ಪಾಣಿ, ಪಾದ, ಪಾಯು, ಉಪಸ್ಥಾ (ಶ್ರೀನಿ. ಪು ೬೨ – ೬೩).

೩೧

ಇದು ಒಂದು ನಿಂದಾಸ್ತುತಿ. ತಾವು ಎಷ್ಟು ರೀತಿಯಲ್ಲಿ ಬೇಡಿಕೊಂಡರೂ ತಮ್ಮನ್ನು ನಿರ್ಲಕ್ಷಿಸುತ್ತಿರುವ ಹರಿಯ ಬಗ್ಗೆ ದಾಸರಿಗೆ ಸಿಟ್ಟು ಬರುತ್ತದೆ. ಅವನನ್ನು ನಾನಾ ರೀತಿಯಲ್ಲಿ ಪ್ರಶ್ನಿಸುವ ನೆವದಲ್ಲಿ ಅವನ ದಶಾವತಾರಗಳನ್ನು ಹೇಳುವುದು ಇಲ್ಲಿಯ ಸ್ವಾರಸ್ಯ.

ನೀರೊಳಗೆನಿತು....ಮದವೊ	:	ಮತ್ಸ್ಯ
ಭಾರಬೆನ್ನಲಿ....ಮದವೊ	:	ಕೂರ್ಮ
ಮೋರೆಯಲಿ... ಮದವೊ	:	ವರಾಹ
ಕಾರುಕರುಳನು... ಮದವೊ	:	ನರಸಿಂಹ
ಮೂರಡಿಯ... ಮದವೊ	:	ವಾಮನ

ಧಾರುಣಿಯನಿತ್ತು... ಮದವೊ	:	ಭಾರ್ಗವ
ನಾರಿಯನು....ಮದವೊ	:	ರಾಮ
ಪೋರನಾರಿಯರಿಂದ.... ಮದವೊ	:	ಕೃಷ್ಣ
ಊರೆಲ್ಲ ನೋಡೆ...ಮದವೊ	:	ಬೌದ್ಧ
ಘೋರತುರಗ... ಮದವೊ	:	ಕಲ್ಕಿ

(ವಿವರಗಳಿಗೆ ನೋಡಿ ಕೀ. ೧೫೫೮ ಟಿಪ್ಪಣಿ)

೩೨

ಶ್ರೀಹರಿಯ ಗುಣಾತಿಶಯಗಳನ್ನು ಸ್ತುತಿಸುವ ಉಗಾಭೋಗವಿದು.

೩೩

ಶ್ರೀಹರಿಯನ್ನು ಕುರಿತ ಒಂದು ಸ್ತುತಿ. ಬಡವರನ್ನು ಕಾಪಾಡುವ ಶಕ್ತಿ ಶ್ರೀಹರಿ ಎನ್ನುವಲ್ಲಿ ಬಡವರ ಬಗ್ಗೆ ದಾಸರಿಗಿರುವ ಅನುಕಂಪ ವ್ಯಕ್ತವಾಗಿದೆ.

೩೪

ಕಾಯದ ಸುಖಕ್ಕಾಗಿ ಕಂಡವರನ್ನು ಆಶ್ರೈಸಿ ತಮ್ಮ ಜನ್ಮ ವ್ಯರ್ಥವಾಗಿ ಹೋಯಿತೆಂದೂ ಶ್ರೀಹರಿಯನ್ನು ಭಜಿಸದೆ ಬಲುದಣಿದೆವೆಂದೂ ಪಶ್ಚಾತ್ತಾಪಪಟ್ಟು, ಶ್ರೀಹರಿಯನ್ನು 'ಅನ್ಯಥಾ ಶರಣಂ ನಾಸ್ತಿ' ಎಂದು ಮೊರೆಹೊಕ್ಕಿದ್ದಾರೆ, ಗೋಪಾಲದಾಸರು. ತಾವು ಮಾಡಿದ ಅಪರಾಧಗಳಿಗೂ ಶ್ರೀಹರಿಯೇ ಪ್ರೇರಕನೆಂಬುದನ್ನು ಅವರು ಮರೆತಿಲ್ಲ.

ನು. ೨ : ತೋರಿಕೆಗೆ ಹರಿಭಕ್ತನಂತೆ ಕಂಡರೂ ತಮ್ಮೊಳಗೆ ಹುರುಳಿಲ್ಲ ವೆನ್ನುತ್ತಾರೆ.

ನು. ೩ : ಹೊನ್ನು, ಹೆಣ್ಣು, ಮಣ್ಣು ಮೊದಲಾದ ಅನ್ಯವಾರ್ತೆಗಳಲ್ಲಿ ತೊಡಗುವ ತಮ್ಮ ಮನಸ್ಸನ್ನು ಹರಿಪರವಾಗಿ ಮಾಡಬೇಕೆಂದು ಶ್ರೀಹರಿಯನ್ನು ಪ್ರಾರ್ಥಿಸಿದ್ದಾರೆ.

೩೫

ಶ್ರೀಹರಿಯನ್ನು ತಮ್ಮ ಮನೋಮಂದಿರಕ್ಕೆ ಆಹ್ವಾನಿಸಿರುವ ದಾಸರು ಭವದ ಕಡಲಿನಿಂದ ತಮ್ಮನ್ನು ಬೇಗ ದಾಟಿಸಬೇಕೆಂದು ಪ್ರಾರ್ಥಿಸಿದ್ದಾರೆ.

ನು. ೩ : ಶ್ರೀಹರಿಯ ಸಾಕ್ಷಾತ್ಕಾರವೆ ಬದುಕಿನ ಪರಮಪ್ರಯೋಜನ.

ನು. ೪ : ಸಂಸಾರವೆಂಬ ಬಂಧನವನ್ನು ಬಿಡಿಸಿ ಭವದಿಂದ ಕಡೆಹಾಯಿಸಬೇಕೆಂದು ಪ್ರಾರ್ಥಿಸುತ್ತಾರೆ.

ಭವದ ಸಿಂಧುವಿಗೆ ಅಗಸ್ತ್ಯ : (ನೋಡಿ : ಕೀ. ೧೬೮ರ ಟಿಪ್ಪಣಿ).

ವೃಂದಾರಕ – ಆನೆ. **ವೃಂದಾರಕಪಾಲ** (ನೋಡಿ : ಕೀ. ೧೫೭೭ರ ಟಿಪ್ಪಣಿ).

೩೬

ಶ್ರೀಹರಿಯೇ ಒಂದು ರೂಪದಿಂದ ತಮ್ಮಲ್ಲಿ ನಿಂತು ತಮ್ಮನ್ನು ತಿರುಪತಿಗೆ ಕರೆತಂದಿರುವುದು, ಶ್ರೀಹರಿ ತನ್ನ ಸಂದರ್ಶನಕ್ಕೆ ತಾನೇ ಬಂದಂತಾಗಿದೆ ಯೆನ್ನುತ್ತಾರೆ ದಾಸರು. ಆ ಸಂದರ್ಶನದ ಸೊಗಸನ್ನು ನೋಡಲು ತಾವು ಬಂದುದಾಗಿ ಹೇಳಿದ್ದಾರೆ.

೩೭

ಬದುಕಿನಲ್ಲಿ ಏನಿಲ್ಲ ದುಃಖ, ಕಷ್ಟ, ಕಾರ್ಪಣ್ಯಗಳು ಬಂದರೂ ಸರಿಯೆ : ಆದರೆ ಶ್ರೀಹರಿಯ ಕರುಣೆ ಮಾತ್ರ ಸದಾಕಾಲವೂ ತಮ್ಮ ಮೇಲಿರಲಿ ಎಂಬುದು ದಾಸರ ಬಯಕೆ.

೩೮

ಶ್ರೀಹರಿಗಿಂತ ಅವನ ಭಕ್ತರೇ ಮೇಲು ಎಂಬ ಭಾವವನ್ನು ಈ ಸುಳಾದಿಯ ಉದ್ದಕ್ಕೂ ಪೋಷಿಸುತ್ತಾ ಹೋಗಿ ಕೊನೆಗೆ ಭಕ್ತರೆಲ್ಲ ಭಾಗ್ಯವಂತರು, ಗೋಪಾಲವಿಠಲನೊಬ್ಬನೇ ಬಡವನೆಂದು ಸಾರಿದ್ದಾರೆ. ಇಲ್ಲಿ ನಿಂದಾಸ್ತುತಿಯ ಹೊಳಹನ್ನು ಕಾಣಬಹುದು.

ನು. ೧ : ಪರಮಾತ್ಮ ಸರ್ವಗುಣಸಂಪನ್ನನಾದರೂ ಅವನ ಗುಣಗಳು ಪ್ರಕಟವಾಗುವುದು ಭಕ್ತರ ಮೂಲಕವೇ.

ನು. ೨ : ಜಗವನ್ನೇ ಹೊತ್ತಿರುವ ಶ್ರೀಹರಿಯನ್ನು ಭಕ್ತರು ಹೊತ್ತಿದ್ದಾರೆ ; ಅವನು ಜಗದ್ವ್ಯಾಪಿಯಾದರೆ, ಭಕ್ತರು ಅವನಲ್ಲೇ ವ್ಯಾಪಿಸಿದ್ದಾರೆಂಬ ಅಂಶ.

ನು. ೩–೪ ಜಗವನ್ನೇ ಆಡಿಸುವ ಪರಮಾತ್ಮನನ್ನು ಅವನ ಭಕ್ತರು ಹೇಗೆ ಆಡಿಸಿದರೆಂಬ ವಿವರಣೆ.

ಮಗನ ಮಾಡಿ ಆಡಿಸುವರು : ಯಶೋದೆ ಕೃಷ್ಣನನ್ನು ಮಗುವಾಗಿ ಎತ್ತಿ ಆಡಿಸಿದ್ದು.

ಯುಗಮಹಾ..... ಗಾಬರಿಗೊಳಿಸಿದರು ನಿನ್ನ : ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗ.

ಸತ್ಯವಚನ.... ಚಕ್ರವನು : ಮಹಾಭಾರತ ಯುದ್ಧಕಾಲದಲ್ಲಿ ಅಭಿಮನ್ಯುವಿನ ಕೊಲೆಯ ಅನಂತರ ರೋಷತಪ್ತನಾದ ಅರ್ಜುನ 'ನಾಳಿನ ಸಂಜೆಯೊಳಗಾಗಿ ನಾನು ಸೈಂಧವನ ರುಂಡವನ್ನು ಕೆಡಹದಿದ್ದರೆ ಅಗ್ನಿಪ್ರವೇಶ ಮಾಡುವೆನು' ಎಂದು ಪ್ರತಿಜ್ಞೆ ಮಾಡಿದನು. ಅದನ್ನು ಕೇಳಿ ಹೆದರಿದ ದುರ್ಯೋಧನ ಸೈಂಧವನನ್ನು ಬಚ್ಚಿಟ್ಟು, ತಾನೆ ಕಾವಲು ಕಾಯುತ್ತಾ ನಿಂತನು. ಆಗ ಕೃಷ್ಣ ತನ್ನ ಭಕ್ತನಾದ ಅರ್ಜುನನನ್ನು ಕಾಪಾಡಲು ಸೂರ್ಯನಿಗೆ ಚಕ್ರವನ್ನು ಮರೆಮಾಡಿ ಮಾಯಾಂಧಕಾರವನ್ನು ಕಲ್ಪಿಸಿ, ಎರಡು

ಸೇನೆಯವರಿಗೂ ಸೂರ್ಯಾಸ್ತವಾಯಿತೆಂಬ ಭ್ರಮೆಯನ್ನುಂಟು ಮಾಡಿದನು. ಕೌರವರು ಆನಂದಪರವಶ ವಾದರು. ವೇಳೆ ಮೀರಿತೆಂದು ಜಯದ್ರಥ (ಸೈಂಧವ) ಕಾಣಿಸಿಕೊಂಡ. ಕೃಷ್ಣನ ಸೂಚನೆಯಂತೆ ಅರ್ಜುನ ಅವನ ಶಿರವನ್ನು ತರಿದು ಹಾಕಿದ. ಜಯದ್ರಥ ಹತನಾದ ಕೂಡಲೆ ಸೂರ್ಯ ಬೆಳಗತೊಡಗಿದ (ಮಹಾಭಾರತ, ದ್ರೋಣಪರ್ವ).

ಎತ್ತಿ ಹಾಕಿಸಿದರೆಲ್ಲರ ಉಂಡ ಪರ್ಣಗಳ : ಸಂದರ್ಭ ತಿಳಿಯಲಿಲ್ಲ.

ಮತ್ತೆ ಬಾಣದಿ ಎಚದು ತೋರಿದರು ನಿನ್ನವರು : ಭೀಷ್ಮನು ಅರ್ಜುನನೊಂದಿಗೆ ಯುದ್ಧ ಮಾಡುತ್ತಿದ್ದಾಗ ಏನು ಮಾಡಿದರೂ ಅವನನ್ನು ಗೆಲ್ಲಲಾಗುವುದಿಲ್ಲ. ಕಾರಣ–ಅರ್ಜುನನಿಗೆ ಶ್ರೀಕೃಷ್ಣನ ಬೆಂಬಲವಿರುತ್ತದೆ. ಆದುದರಿಂದ ಹೇಗಾದರೂ ಮಾಡಿ ಶ್ರೀಕೃಷ್ಣನ ಪ್ರತಾಪ ನಿಲ್ಲಿಸಲು ಭೀಷ್ಮ ಶ್ರೀಕೃಷ್ಣನ ಮೇಲೆ ಬಾಣಗಳ ಮಳೆಗರೆದ (ಮಹಾಭಾರತ, ಭೀಷ್ಮಪರ್ವ).

ಎತ್ತಿ ಕಾಲಲಿ ಎದೆಗೆ ಒದ್ದರು ನಿನ್ನವರು : (ನೋಡಿ : ಕೀ. ೧೭೦ರ ಟಿಪ್ಪಣಿ).

ಮತ್ತೆ ಕಟ್ಟಿದ.... ಆ ಬಲಿರಾಯ : ವಾಮನಾವತಾರವೆತ್ತಿದ ವಿಷ್ಣುವು, ಬಲಿಚಕ್ರವರ್ತಿಯನ್ನು ಸುತಳಕ್ಕೆ ಮೆಟ್ಟಿದನು. ಅನಂತರ ತಾನು ಬಲಿಯ ಮನೆಯ ಬಾಗಿಲಲ್ಲಿಯೇ ಕಾದಿದ್ದು, ಆಗಾಗ ಅವನಿಗೆ ದರ್ಶನ ಕೊಡುವುದಾಗಿ ಆಶ್ವಾಸನೆ ಕೊಡುತ್ತಾನೆ (ಭಾಗವತ, ಅ. ೨೨).

ಮತ್ತೆ ಮಳೆಗರೆದು....ಹೊರಿಸಿದರವರು : ಯಾದವರೆಲ್ಲ ಶ್ರೀಕೃಷ್ಣನ ನೇತೃತ್ವದಲ್ಲಿ ದೇವೇಂದ್ರನಿಗೆ ಪೂಜೆ ಸಲ್ಲಿಸುವ ಬದಲು, ಗೋವರ್ಧನ ಪರ್ವತಕ್ಕೂ ಗೋಬ್ರಾಹ್ಮಣರಿಗೂ ಪೂಜೆ ಸಲ್ಲಿಸಲು, ಕೋಪಗೊಂಡ ದೇವೇಂದ್ರ ಸಿಡಿಲುಗುಡುಗಿನಿಂದ ಕೂಡಿದ ಭಯಂಕರ ಮಳೆಯನ್ನು ಸುರಿಸುತ್ತಾನೆ. ಆಗ ಮಳೆಯ ಆರ್ಭಟಕ್ಕೆ ದನಕರುಗಳಾದಿಯಾಗಿ ಎಲ್ಲರೂ ಬೆದರಲು ಶ್ರೀಕೃಷ್ಣ ಗೋವರ್ಧನ ಗಿರಿಯನ್ನೆತ್ತಿ ಎಲ್ಲರಿಗೂ ಮಳೆಗಾಳಿಯಿಂದ ಆಶ್ರಯ ಕೊಡುತ್ತಾನೆ. ದೇವೇಂದ್ರನ ಗರ್ವಕ್ಕೆ ಪೆಟ್ಟು ಬೀಳುತ್ತದೆ (ಭಾಗವತ ೧೦. ಅ. ೨೫).

ನು. ೫ : ಪ್ರತಿಫಲದ ಅಪೇಕ್ಷೆಯಿಲ್ಲದೆ ಭಗವಂತ ಭಕ್ತರನ್ನು ಸೇವಿಸುತ್ತಾನೆ.

ನು. ೬–೭ : ಭಕ್ತನ ಚರ್ಯವೇ ಭಗವಂತನ ಚರ್ಯೆ. ಅವರೆಲ್ಲಿ ಹೋದರೂ ಭಗವಂತ ಹಿಂಬಾಲಿಸುತ್ತಾನೆ.

೩೯

ವಿಷ್ಣುವನ್ನು ಕುರಿತ ಮಂಗಳ

೪೦

ವಿಷ್ಣುವನ್ನು ಕುರಿತ ಮಂಗಳ

೪೧

ಎಲ್ಲವನ್ನೂ ಮಾಡಿಸುವವನು ಶ್ರೀಹರಿ. ಅವನು ನಡೆಸಿದಂತೆ ನಡೆಯುವುದು ಭಕ್ತನ ಕರ್ತವ್ಯ ಎಂಬುದು ಈ ಉಗಾಭೋಗದ ವಸ್ತು. ಭಕ್ತ ಕೆಟ್ಟರೂ ಭಗವಂತನಿಗೆ ಕೇಡು ಎಂದು ಹೇಳಿ, ತಾವು ಬೇಡಿದುದನ್ನು ನೀಡಬೇಕೆಂದು ಕೇಳಿಕೊಂಡಿದ್ದಾರೆ.

೪೨

ಈ ಕೀರ್ತನೆಯಲ್ಲಿ ಅಣುಮಹತ್ತುಗಳಲ್ಲಿ ವ್ಯಾಪ್ತನಾದ ವ್ಯಾಸಕಪಿಲಾದಿ ಅವತಾರ ಗಳನ್ನು ತಳೆದ (ಭಾಗವತ ೨, ಅ. ೭) ಚೈತನ್ಯಕ್ಕೆ ಮೂಲಸ್ವರೂಪಿಯಾದ ಶ್ರೀಹರಿಯಲ್ಲಿ ತಮ್ಮ ಮನಸ್ಸು ನಿಲ್ಲುವಂತೆ ಮಾಡಬೇಕೆಂದು ಅವನನ್ನೇ ಪ್ರಾರ್ಥಿಸಿದ್ದಾರೆ.

೪೩

ಮೃತ್ಯು ಮನುಷ್ಯನನ್ನು ಸದಾಕಾಲ ಹಿಂಬಾಲಿಸಿಕೊಂಡೇ ಬರುವುದರಿಂದ, ವ್ಯರ್ಥ ದೇಹದಂಡನೆ ಮಾಡದೆ, ಜ್ಞಾನಪೂರ್ವಕವಾಗಿ ದೇಹದಲ್ಲಿರುವ ಕ್ಷೇತ್ರಜ್ಞನನ್ನು ಅರಿತು, ಆ ಬಿಂಬರೂಪಿಯನ್ನು ಧ್ಯಾನಿಸು ಎನ್ನುತ್ತಾರೆ ಗೋಪಾಲದಾಸರು. ಈ ರೀತಿ 'ಗೃಹಮೇಧಿ' ಯಾಗವನ್ನು ಮಾಡಿ, ಈ ಶರೀರದಲ್ಲಿರುವ ಗೋಪಾಲವಿಠಲನನ್ನು ಸ್ಮರಿಸಬೇಕು (ಗೃಹ – ಶರೀರ).

೪೪

ಲೌಕಿಕದಲ್ಲೇ ಮುಳುಗಿರುವ ತಮ್ಮನ್ನು ಉದ್ಧರಿಸಬೇಕೆಂದು ರಂಗನನ್ನು ಪ್ರಾರ್ಥಿಸಿದ್ದಾರೆ.

೪೫

ಸರ್ವವ್ಯಾಪ್ತನೂ ಸರ್ವೇಶನೂ ಸರ್ವಚೇಷ್ಟಪ್ರದಾಯಕನೂ ಆದ ಶ್ರೀಹರಿ ಭಕ್ತರಲ್ಲಿ ನಿಂತು ಅವರನ್ನು ಸದಾಕಾಲ ರಕ್ಷಿಸುವನೆಂಬುದು ಈ ಸುಳಾದಿಯ ಸಾರಾಂಶ.

ನು. ೨ : ಕರುಣಾಮಯನಾದ ಶ್ರೀಹರಿಯಲ್ಲಿ, ತಮ್ಮ ಪಾಪವನ್ನೆಲ್ಲ ಪರಿಹರಿಸಬೇಕೆಂದು ದಾಸರ ಪ್ರಾರ್ಥನೆ.

ವತ್ಸನ ಬಿನ್ನಪ.... ಮಾಡಿದ್ದಂತೆ : ಪ್ರಹ್ಲಾದನ ವೃತ್ತಾಂತ ? (ನೋಡಿ ಕೀ. ೧೫೫ರ ಟಿಪ್ಪಣಿ).

ನು. ೩ : ಜಗತ್ತಿನಲ್ಲಿರುವ ಎಲ್ಲ ವಸ್ತುಗಳನ್ನೂ ಭಗವಂತ ತನ್ನ ಭಕ್ತರಿಗಾಗಿ ಸೃಷ್ಟಿಸಿದ್ದಾನೆ ; ಅವರಿಗಾಗಿ ಅವನು ಹಲವು ಅವತಾರಗಳನ್ನೆತ್ತಿದ್ದಾನೆ ಎಂಬ ಅಭಿಪ್ರಾಯ.

ನು. ೬ : ಶ್ರೀಹರಿ ತಮಗೆ ಸಂದರ್ಶನವನ್ನಿತ್ತು ಸಲಹಬೇಕೆಂಬ ದಾಸರ ಹಂಬಲ.

೪೬

ಹಾವಿನ ಹೆಡೆಯ ನೆರಳಿನಂತಿರುವ ಈ ಸಂಸಾರದಿಂದ ಜೀವರನ್ನು ಪಾರು ಮಾಡಿ, ಹರಿಯ ಚರಣದಾಶ್ರಯವನ್ನು ಕೊಟ್ಟು ಕಾಪಾಡಬೇಕೆಂಬ ಪ್ರಾರ್ಥನೆ ಈ ಉಗಾಭೋಗದ ವಸ್ತು. ಆ ಮೂಲಕ ಶರಣಾಗತ ರಕ್ಷಕನೆಂಬ ಬಿರುದನ್ನು ಅವನು ಸಾರ್ಥಕಪಡಿಸಿ ಕೊಳ್ಳಬೇಕೆಂದು ಭಾವ.

೪೭

ಕಷ್ಟಪಡುತ್ತಿರುವ ಅಲ್ಪರನ್ನು ಕಂಡು ಸಹಾನುಭೂತಿ ವ್ಯಕ್ತಪಡಿಸಿದ್ದಾರೆ ದಾಸರು. ಅವರ ಅಸಹಾಯಕತೆಯನ್ನು ಬಣ್ಣಿಸಿ, ಅವರನ್ನು ಕಾಪಾಡಬೇಕೆಂದು ಶ್ರೀಹರಿಯನ್ನು ಪ್ರಾರ್ಥಿಸಿದ್ದಾರೆ.

೪೮

ಇದೊಂದು ನಿಂದಾಸ್ತುತಿ. ತಮ್ಮನ್ನು ಕಾಪಾಡಲು ಸಾಧ್ಯವಿಲ್ಲದಿದ್ದಲ್ಲಿ ಕೃಷ್ಣ ತನ್ನ ಭಕ್ತವತ್ಸಲನೆಂಬ ಬಿರುದನ್ನು ಬಿಟ್ಟುಕೊಡಬೇಕೆಂಬುದು ಗೋಪಾಲದಾಸರ ಆಗ್ರಹ.

ನು. ೨ : ಭಗವಂತನ ಕಾರ್ಯಗಳೆಲ್ಲ ಭಕ್ತನಿಗಾಗಿ ಎಂಬ ವಿಚಾರ ಹಾಗೂ ಭಗವಂತನ ಶ್ರೇಷ್ಠತೆಯನ್ನು ಎತ್ತಿ ಹಿಡಿದವರು ಕರಿರಾಜ, ದ್ರೌಪದಿ, ಪ್ರಹ್ಲಾದ ಮೊದಲಾದ ಭಕ್ತರೇ. ಆದ್ದರಿಂದ ಭಕ್ತರ ಮುಂದೆ ಭಗವಂತನ ಆಟವೇನೂ ನಡೆಯುವುದಿಲ್ಲವೆನ್ನುತ್ತಾರೆ.

ನು. ೩ : ಪರಿಪರಿಯಾದ ಪರಿಕರಗಳಿಂದ ಹರಿಯನ್ನು ಪೂಜಿಸಲು ತಾವು ಸಮರ್ಥರಲ್ಲವೆಂದೂ ತಮ್ಮ ಮನಸ್ಸು, ಶರೀರ ಮೊದಲಾದ ಅಂಗಾಂಗಗಳನ್ನೇ ಪರಿಕರಗಳನ್ನಾಗಿ ಮಾಡಿ ಪೂಜಿಸಿ, ತಮ್ಮ ಸರ್ವಾಂಗವನ್ನು ಸಮರ್ಪಿಸುವುದಾಗಿ ಹೇಳುತ್ತಾರೆ.

ನು. ೪ : ಮೇಲುನೋಟಕ್ಕೆ ನಿಷ್ಠುರವಾಗಿ ಬೈದಂತೆ ಕಂಡರೂ, ಆ ಮೂಲಕ ದಾಸರು ಇಲ್ಲಿ ಭಗವಂತನ ದಶಾವತಾರಗಳನ್ನು ಹೇಳುತ್ತಿದ್ದಾರೆ.

ಕಡುಗುಷ್ಟು... ಸೇರು	–	ಮತ್ಸ್ಯ
ಬಿಡದೆ... ನೀನು	–	ಕೂರ್ಮ
ಅಡವಿಸೂಕರ... ನಿನಗೆ	–	ವರಾಹ
ಕೆಡಲಿ... ಘೋರನಾಗಲೊ	–	ನರಸಿಂಹ
ಒಡಲಿಗಿಲ್ಲದೆ... ಬೇಡೊ	–	ವಾಮನ
ಕೊಡಲಿಯ.... ಸಂಚಾರನಾಗೊ	–	ಭಾರ್ಗವ

ಮಡದಿಯ....ನೀನು	–	ರಾಮ
ತುಡುಗ...ಜನರೆಲ್ಲ	–	ಕೃಷ್ಣ
ಉಡವಸ್ತ್ರ...ನಿಲ್ಲೊ	–	ಬುದ್ಧ

(ವಿವರಗಳಿಗೆ ನೋಡಿ : ಕೀ. ೧೫೫ರ ಟಿಪ್ಪಣಿ)

೪೯

ಪರಮಾತ್ಮನ ವಿಷಯವಾಗಿ ಪರಮಜ್ಞಾನಿಯಾಗಲು ಹಂಬಲಿಸುವವನಿಗೆ ದಾಸರು ಈ ಸುಳಾದಿಯಲ್ಲಿ ಮಾರ್ಗದರ್ಶನ ಮಾಡಿದ್ದಾರೆ. ಹರಿಯ ಸರ್ವ ವ್ಯಾಪಕತೆಯನ್ನು ಮನಸ್ಸಿಗೆ ತಂದುಕೊಂಡು, ಹರಿ ನಡೆಸಿದಂತೆ ಜಗತ್ತು ನಡೆಯುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು.

ನು. ೨ : ನೀಚ ವಿಷಯಗಳನ್ನೆಲ್ಲ ಬಿಟ್ಟು ಏಕಪತ್ನೀ ವ್ರತಸ್ಥನಾಗಬೇಕು.

ನು. ೩ : ಗುಪ್ತಾರ್ಚನೆಯ ಮೂಲಕ ಮನದಲ್ಲಿರುವ ಹರಿಯನ್ನು ತೃಪ್ತಿಪಡಿಸಬೇಕು.

ನು. ೪ : ಆಮಿಷಗಳಿಗೆ ಸಿಲುಕದೆ ಶ್ರೀಹರಿ ಮುಖ್ಯ ವಿಷಯನೆಂದು ತಿಳಿದು ತಾರತಮ್ಯ ತತ್ತ್ವವನ್ನರಿತು ಗುರುಮುಖೇನ ಪ್ರಸಾದವನ್ನು ಪಡೆಯಬೇಕು.

ನು. ೫ : ಇಂದ್ರಿಯಗಳಿಗೆ ವಶನಾದರೆ ಜನನಮರಣಗಳು ಸಿದ್ಧ. ಆದ್ದರಿಂದ ಇಂದ್ರಿಯ ನಿಯಾಮಕ ಹರಿಸರ್ವೋತ್ತಮನೆಂದು ತಿಳಿಯಬೇಕು.

ನು. ೬ : ನೀಚರಸಂಗವನ್ನು ತ್ಯಜಿಸಿ, ಹರಿಯನ್ನು ಕುರಿತು ಆಲೋಚನೆಮಾಡಬೇಕು.

ನು. ೭ : ಯೋಗ್ಯರಲ್ಲಿ ಯೋಗ್ಯರನ್ನು ಆರಿಸಿ, ಆಲೋಚಿಸಿ, ಈ ನಷ್ಟದೇಹದ ಆಸೆಯನ್ನು ಬಿಟ್ಟು ಶ್ರೀಹರಿಯ ಗುಣಗಳನ್ನು ಸ್ಮರಿಸಬೇಕು. ನಾನು ಕೇವಲ ಭಕ್ತ ; ಶಕ್ತನಲ್ಲ ಎಂಬ ಅರಿವಿರಬೇಕು.

೫೦

ಶ್ರೀಹರಿಯನ್ನು ಕುರಿತ ಒಂದು ಪ್ರಾರ್ಥನಾ ಸುಳಾದಿ. ಸರ್ವೋತ್ತಮನೂ ಸಕಲಗುಣ ಪರಿಪೂರ್ಣನೂ ಆದ ಶ್ರೀಹರಿ ತಮ್ಮನ್ನು ಸನ್ಮಾರ್ಗದಲ್ಲಿರಿಸಿ, ಅರಿಷಡ್ವರ್ಗಗಳಿಂದ ಮುಕ್ತರನ್ನಾಗಿಸಿ, ಕಾಪಾಡಬೇಕೆಂದು ಬೇಡಿಕೊಂಡಿದ್ದಾರೆ ದಾಸರು.

ಸ್ಮರಣೆ ಮಾತ್ರದಲ್ಲಿ ಅಜಮಿಳನ ರಕ್ಷಿಸಿದಂತೆ – (ನೋಡಿ : ಕೀ. ೧೫೨ರ ಟಿಪ್ಪಣಿ)

ನು. ೫ : **ಆರು ಮಂದಿ ಖಳರು** : ಅರಿಷಡ್ವರ್ಗಗಳು (ನೋಡಿ : ಕೀ. ೯೬ರ ಟಿಪ್ಪಣಿ)

೫೧

ಮಾತೃಸ್ಥಾನದಲ್ಲಿರುವ ಶ್ರೀಹರಿ, ಹಸಿದೂ ಉಣಲೊಲ್ಲದ ಮಗುವಿಗೆ ತಾಯಿ ಹೇಗೆ

ರಮಿಸಿ, ಮುದ್ದಿಸಿ ಉಣಿಸುತ್ತಾಳೋ ಹಾಗೆ, ತಮ್ಮನ್ನು ಕಾಪಾಡಬೇಕೆನ್ನುತ್ತಾರೆ ದಾಸರು. ಪತಿವ್ರತಾಸ್ತ್ರೀಗೆ ಹೇಗೆ ಪತಿ ಆಜ್ಞೆಯೇ ವ್ರತವೋ ಹಾಗೆಯೇ ಭಕ್ತನಿಗೆ ಭಗವಂತನ ಆಜ್ಞೆಯೇ ವ್ರತವೆಂಬ ಭಾವನೆ.

೫೨

ಈ ಸುಳಾದಿಯಲ್ಲಿ, ಲಕ್ಷ್ಮಿ ಶ್ರೀಹರಿಯನ್ನು ಅಡಿಯಿಂದ ಮುಡಿಯವರೆಗೆ ಹೇಗೆ ಸೇವಿಸುತ್ತಿದ್ದಾಳೆ, ಯಾವ ರೀತಿಯಲ್ಲಿ ಅವನಿಗೆ ಅನುಕೂಲೆಯಾಗಿ, ಅವನ ಇಚ್ಛೆಯ ಮೇರೆಗೆ ಸೃಷ್ಟಿಕಾರ್ಯ ಮಾಡುತ್ತಿದ್ದಾಳೆ – ಇತ್ಯಾದಿ ವಿವರಗಳಿವೆ.

೫೩

ಲಕ್ಷ್ಮೀದೇವಿಯ ಸ್ತುತಿ. 'ಕಮಲನಾಭನ ಪಾದಕಮಲಗಳಿಗೆ ದುಂಬಿ'ಯೆಂದು ಆಕೆಯನ್ನು ಕರೆದು, ನಖಶಿಖಾಂತವಾಗಿ ವರ್ಣಿಸಿದ್ದಾರೆ. ಇಷ್ಟೆಲ್ಲ ವರ್ಣಿಸಿ, ಕೊನೆಗೆ ಅಕ್ಷಯಫಲದಾತನಾದ ಗೋಪಾಲವಿಠಲನನ್ನು ಕಾಣುವ ತಮ್ಮ ಅಪೇಕ್ಷೆಯನ್ನು ಅವಳಲ್ಲಿ ತೋಡಿಕೊಂಡು, ಆ ಅಪೇಕ್ಷೆಯನ್ನು ಪೂರೈಸುವಂತೆ ಪ್ರಾರ್ಥಿಸಿಕೊಂಡಿದ್ದಾರೆ.

೫೪

ಕೊಲ್ಲಾಪುರದ ಲಕ್ಷ್ಮೀದೇವಿಯ ಸ್ತುತಿ. ಆಕೆಯ ರೂಪಾಲಂಕಾರಗಳ ವರ್ಣನೆ ಇಲ್ಲಿದೆ. ಕೀಳು ವಿಷಯದಲ್ಲಿ ಬೀಳುವ ತಮ್ಮ ಮನಸ್ಸನ್ನು ಗೋಪಾಲವಿಠಲನ ಸೇವೆಯಲ್ಲಿ ನಿಯೋಜಿಸಬೇಕೆಂದು ದಾಸರು ಲಕ್ಷ್ಮೀದೇವಿಯಲ್ಲಿ ಮೊರೆಯಿಟ್ಟಿದ್ದಾರೆ.

೫೫

ಇದು ಲಕ್ಷ್ಮೀದೇವಿಯನ್ನು ಕುರಿತ ಕೀರ್ತನೆ. ದಾಸ್ಯಭಾವದಿಂದ ಭಜಿಸಿದಲ್ಲಿ ಆಕೆ ತಾನು ಕರುಣಿಸುವುದಲ್ಲದೆ ಶ್ರೀಹರಿಯ ಕೃಪೆಯನ್ನೂ ಗಳಿಸಿಕೊಡುತ್ತಾಳೆ.

೫೬

ಶ್ರೀ ಮಹಾಲಕ್ಷ್ಮಿಯ ಸ್ತುತಿ.

ನು. ೧ : ಬ್ರಹ್ಮಾಂಡವೆಂಬ ಪಾತ್ರೆ, ಜೀವರೆಂಬ ಧಾನ್ಯ, ಜನರ ಯೋಗ್ಯತೆಯೆಂಬ ನೀರು, ಕರ್ಮವೆಂಬ ಇಂಧನ ಇತ್ಯಾದಿಗಳಿಂದ ಅಡುಗೆ ಮಾಡಿ ಶ್ರೀಹರಿಯ ಭೋಜನಕ್ಕೆ ಅನುಕೂಲ ಮಾಡಿದವಳೆನ್ನುತ್ತಾರೆ. ಸೃಷ್ಟಿಕಾರ್ಯದ ಪ್ರಸ್ತಾಪ.

ನು. ೨-೩ : ಆಕೆ ಶ್ರೀಹರಿಯನ್ನು ಅರ್ಚಿಸುವ ಪರಿ ಹಾಗೂ ಆಕೆಯ ರೂಪಾಲಂಕಾರ ವರ್ಣನೆ.

೫೭

ಕೈಯಲ್ಲಿ ಜಪಮಾಲೆ ಹಿಡಿದು ಧ್ಯಾನಮುದ್ರೆಯಲ್ಲಿ ಕುಳಿತ, ಹಂಪೆಯ ಯಂತ್ರೋದ್ಧಾರ ಹನುಮಂತನನ್ನು ಕಂಡು ಗೋಪಾಲದಾಸರು ಸೋಜಿಗಪಟ್ಟಿದ್ದಾರೆ. ಸಮುದ್ರಲಂಘನ ಮಾಡಿ, ಕೌರವರನ್ನು ಮರ್ದಿಸಿ, ಮಧ್ವಾಚಾರ್ಯರಾಗಿ ಅವತರಿಸಿ ಹೀನ ಮತಗಳನ್ನು ಅಲ್ಲಗಳೆದು ಮಧ್ವಮತವನ್ನು ಸ್ಥಾಪಿಸಿದ ಹನುಮ, ಭೀಮ, ಮಧ್ವಾವತಾರ ಗಳನ್ನು ಪ್ರಸ್ತಾವಿಸಿದ್ದಾರೆ. ಅಂತಹ ಅಸಮ ಪರಾಕ್ರಮಿ ಹೀಗೆ ಅಮಾಯಕನಂತೆ ಮೌನವಾಗಿ ಕುಳಿತು ಮಣಿ ಎಣಿಸುತ್ತಿರುವ ಮಹಿಮೆ ದಾಸರಿಗೆ ವಿಚಿತ್ರವಾಗಿ ಕಂಡಿದೆ.

೫೮

ವಾಯುದೇವರ ಸ್ತುತಿ.

ಪ್ರಾಣಾಪಾನವುದಾನರಿಗೆ ಪ್ರಾಣ ಮುಖ್ಯ ಪ್ರಾಣ ಇವ : ಪಂಚ ಪ್ರಾಣರಿಗೂ (ನೋಡಿ : ಕೀ. ೯೬ರ ಟಿಪ್ಪಣಿ) ಮುಖ್ಯನಾದವನು ಹನುಮಂತ.

೫೯

ಗುರುಗಳಾದ ಮಧ್ವಾಚಾರ್ಯರ ಮಹಿಮೆಯನ್ನು ಸಾರುವ ಕೃತಿ.

ನು. ೨ : ಮಧ್ವಮತ ತತ್ತ್ವಗಳಾದ ಹರಿಸರ್ವೋತ್ತಮ, ವಾಯುವಿನ ಗುರುಸ್ಥಾನ, ಪಂಚಭೇದಗಳು (ನೋಡಿ : ಕೀ. ೬೦ರ ಟಿಪ್ಪಣಿ) ಇವುಗಳ ಪ್ರಸ್ತಾವ.

೬೦

ರಾಮನ ಎದುರಿನಲ್ಲಿ ಹನುಮಂತ ಕೈಮುಗಿದು ನಿಂತಿರುವ ಒಂದು ಚಿತ್ರವನ್ನು ದಾಸರು ಇಲ್ಲಿ ನೀಡಿದ್ದಾರೆ. ದುಷ್ಟರನ್ನು ಸಂಹರಿಸಿ ಶಿಷ್ಟರನ್ನು ಪರಿಪಾಲಿಸಬೇಕೆಂದು ಒಡೆಯನಲ್ಲಿ ನಮ್ರನಾಗಿ ಬೇಡುತ್ತಿದ್ದಾನೆ ಹನುಮಂತ.

ನು . ೧ : ಜೀವ ಮತ್ತು ಈಶ್ವರ ಐಕ್ಯ, ಜಗತ್ತು ಮಿಥ್ಯೆ ಎಂಬ ತತ್ತ್ವಗಳನ್ನು ನಂಬಿರುವ ಮಾಯಿಗಳನ್ನು, ಅಂದರೆ ಅದ್ವೈತಿಗಳನ್ನು ಅಳಿಸಿ ಹಾಕಬೇಕೆಂದು ಬೇಡಿದನಂತೆ.

ನು. ೨ : **ತಾರತಮ್ಯ** : ಲಕ್ಷ್ಮೀದೇವಿ, ಹನುಮಂತ, ಸರಸ್ವತಿಯರಾದಿಯಾಗಿ ಮನುಷ್ಯರವರೆಗೂ ಅವರೋಹಣ ಕ್ರಮದಲ್ಲಿ ತರತಮ ಭಾವವಿದೆ. ಪರಸ್ಪರ ಭಿನ್ನರೂ

ನಿತ್ಯರೂ ಅನಾದಿಕರ್ಮಬದ್ಧರೂ ಆದಂಥ ಚೇತನರಲ್ಲಿ ಈ ರೀತಿಯ ತಾರತಮ್ಯ ಹೇಳಿರುವುದು ಮಧ್ವಸಿದ್ಧಾಂತದ ಮುಖ್ಯ ಪ್ರಮೇಯಗಳಲ್ಲಿ ಒಂದು.

ಪಂಚಭೇದ : ಜಗತ್ತಿನಲ್ಲಿಯ ಭೇದತತ್ತ್ವವನ್ನು ಐದು ರೀತಿಯಲ್ಲಿ ಹೆಸರಿಸಿ, ಪಂಚಭೇದಗಳೆಂದು ಕರೆದಿದ್ದಾರೆ. ಜೀವಜಡಕ್ಕೆ ಭೇದ, ಜೀವ ಜೀವಕ್ಕೆ ಭೇದ, ಜಡಜಡಕ್ಕೆ ಭೇದ, ಜೀವ ಈಶರಿಗೆ ಭೇದ, ಜಡ ಈಶರಿಗೆ ಭೇದ ಈ ಭೇದತತ್ತ್ವವೂ ಮಧ್ವಸಿದ್ಧಾಂತದ ಮುಖ್ಯ ಪ್ರಮೇಯಗಳಲ್ಲಿ ಒಂದು.

ಈ ತತ್ತ್ವಗಳನ್ನು ಒಪ್ಪಿ, ಮಧ್ವಮತದ ಅನುಯಾಯಿಗಳಾದವರನ್ನು ಕಾಪಾಡ ಬೇಕೆಂದು ಶ್ರೀಹರಿಯಲ್ಲಿ ಹನುಮನ ಪ್ರಾರ್ಥನೆ.

ನು. ೩ : ಅದ್ವೈತಿಗಳ ಖಂಡನೆ.

೬೧

ಭೀಮನನ್ನು ಕುರಿತ ಕೀರ್ತನೆ.

ನು. ೧ : **ಜೀಮೂತ** : ಕೌರವರ ಕಡೆಯ ಜಟ್ಟಿ. ಕೀಚಕ ಹಾಗೂ ಜೀಮೂತ ಇಬ್ಬರನ್ನೂ ಪಾಂಡವರು ಕೊಂದು ದಕ್ಷಿಣಗೋಗ್ರಹಣದಲ್ಲಿ ಕೌರವರನ್ನು ಗೆದ್ದರು (ಭೀಮ). (ಪುಭಾಕೋ. ಪು. ೪೪೦)

ಮಣಿಮಂತ : ಸೌಗಂಧಿಕ ಪುಷ್ಪ ತರುವಾಗ ಭೀಮನನ್ನು ಅಡ್ಡಗಟ್ಟಿದ ಒಬ್ಬ ರಾಕ್ಷಸ. ಇವನನ್ನು ಕೊಂದು ಭೀಮ ಸೌಗಂಧಿಕ ಪುಷ್ಪ ತಂದ (ವನ. ೧೧). (ಪುನಾಚೂ. ಪು. ೪೭೨)

ನು. ೨ : **ಬಕ** : ಏಕಚಕ್ರ ನಗರದ ಸಮೀಪದಲ್ಲಿ ವಾಸವಾಗಿದ್ದ ರಾಕ್ಷಸ. ಇವನು ಭೀಮನಿಂದ ಹತನಾದ (ಆದಿ. ೬೧. ೧೭೭) (ಪುನಾಚೂ. ಪು ೪೩೦ – ೩೨)

ಜಟಾಸುರ : ಒಬ್ಬ ರಾಕ್ಷಸ. ಪಾಂಡವರು ಅರಣ್ಯವಾಸ ಸಮಯದಲ್ಲಿ ಬದರಿಕಾಶ್ರಮದಲ್ಲಿದ್ದಾಗ ಮುನಿವೇಷದಿಂದ ಅವರಲ್ಲಿಗೆ ಬಂದು, ಅತಿಥಿಯಾಗಿದ್ದು ಪಾಂಡವರ ನಂಬಿಕೆಗೆ ಪಾತ್ರನಾದ. ಭೀಮಸೇನ ಇಲ್ಲದ ಸಮಯ ನೋಡಿ ಮಿಕ್ಕ ಪಾಂಡವರನ್ನು ಕೊಂದು ದ್ರೌಪದಿಯನ್ನು ಅಪಹರಿಸಲು ಹೊಂಚು ಹಾಕುತ್ತಿದ್ದ. ಪಾಂಡವರಿಗೆ ಇವನ ದುರುದ್ದೇಶ ತಿಳಿಯದೆ ಮುನಿಯೆಂದೇ ಭಾವಿಸಿ ಸೇವೆ ಮಾಡುತ್ತಿದ್ದರು. ಒಂದು ದಿನ ಭೀಮ ಹಣ್ಣುಹಂಪಲು ತರಲು ಹೋಗಿದ್ದಾಗ ದ್ರೌಪದಿ, ಯುಧಿಷ್ಠಿರ, ನಕುಲ, ಸಹದೇವರನ್ನು ಹೊತ್ತುಕೊಂಡು ಹೊರಟ. ಆಗ ಅರ್ಜುನ ದೇವಲೋಕದಲ್ಲಿದ್ದ. ಯುಧಿಷ್ಠಿರನ ನೀತಿ ಮಾತುಗಳನ್ನು ಕೇಳದೆ ವೇಗವಾಗಿ ಹೊರಟ ರಾಕ್ಷಸ. ಭೀಮ ಆಶ್ರಮಕ್ಕೆ ಬಂದು ಯಾರನ್ನೂ ಕಾಣದೆ ಹುಡುಕುತ್ತ ಹೊರಟ. ಇವನನ್ನು ಕಂಡುಹಿಡಿದು ಯುದ್ಧ ಮಾಡಿ ಕೊಂದ (ವನ. ೧೫೮) (ಪುನಾಚೂ. ಪು. ೨೨೭)

ಹಿಡಿಂಬಕಾಸುರ : ಒಬ್ಬ ರಾಕ್ಷಸ. ಪಾಂಡವರು ಅರಗಿನ ಮನೆಯಿಂದ ಹೊರಬಿದ್ದು

ಅರಣ್ಯವನ್ನು ಸೇರಿದಾಗ ಭೀಮನನ್ನು ಕೆಣಕಿ ಅವನಿಂದ ಹತನಾದ (ಭಾರ ಆದಿ. ೬೧, ೬೩ – ೧೬೬) (ಪುನಾಚೂ. ಪು. ೬೮೨)

ಮಾಗಧ : ಮಗಧ ದೇಶಾಧಿಪತಿಯಾದ ಜರಾಸಂಧನ ಇನ್ನೊಂದು ಹೆಸರು. ಇವನು ನರಮೇಧ ಮಾಡಲು ಎಂಬತ್ತಾರು ಸಾವಿರ ರಾಜಪುತ್ರರನ್ನು ಸೆರೆಯಲ್ಲಿಟ್ಟಿದ್ದ. ಅವರೆಲ್ಲ ತಮ್ಮ ಪ್ರಾಣ ಉಳಿಸಬೇಕೆಂದು ಶ್ರೀಕೃಷ್ಣನಿಗೆ ರಹಸ್ಯವಾಗಿ ಹೇಳಿ ಕಳುಹಿಸಿದರು. ಕೃಷ್ಣ, ಭೀಮಸೇನನಿಂದ ಜರಾಸಂಧನನ್ನು ಕೊಲ್ಲಿಸಿದ (ಸಭಾ ೧೫). (ಪುನಾಚೂ. ಪು. ೨೪೪ – ೪೫)

೬೨

ಶ್ರೀಮಧ್ವಾಚಾರ್ಯರ ಹನುಮ, ಭೀಮ, ಮಧ್ವಾವತಾರಗಳನ್ನು ಕುರಿತ ಕೀರ್ತನೆ.

ನು. ೧, ೨, ೩ : ಹನುಮಾವತಾರದಲ್ಲಿ ರಾಮನಿಗೆ ನೆರವಾದ ಪ್ರಸಂಗ. ಸೀತೆಯನ್ನು ಹುಡುಕಿದ್ದು, ಲಂಕೆಯನ್ನು ಸುಟ್ಟಿದ್ದು, ಸಮುದ್ರಕ್ಕೆ ಸೇತುವೆ ಕಟ್ಟಿದ್ದು ಇತ್ಯಾದಿ ರಾಮಾಯಣದ ಪ್ರಸಂಗಗಳು.

ನು. ೭, ೮, ೯ : ಈ ನುಡಿಗಳಲ್ಲಿ ಮಧ್ವಾವತಾರದಲ್ಲಿ ಮಧ್ಯಗೇಹಭಟ್ಟರಲ್ಲಿ ಜನಿಸಿ, ಅಚ್ಯುತ ಪ್ರೇಕ್ಷರ ಶಿಷ್ಯರಾಗಿದ್ದು, ಕುಸುಮನಾಭತೀರ್ಥರೇ ಮೊದಲಾದವರಿಗೆ ತಮ್ಮ ತತ್ತ್ವಾರ್ಥ ಬೋಧಿಸಿದ್ದು, ವಾದದಲ್ಲಿ ತ್ರಿವಿಕ್ರಮ ಪಂಡಿತಾಚಾರ್ಯರಂತಹ ಅದ್ವೈತ ಕೇಸರಿಗಳನ್ನು ಒಲಿಸಿಕೊಂಡದ್ದು, ವ್ಯಾಸಮುನಿಗಳನ್ನು ಸೇವಿಸಿದ್ದು – ಇತ್ಯಾದಿ ವಿಷಯಗಳನ್ನು ಪ್ರಸ್ತಾವಿಸಿದ್ದಾರೆ.

ನು. ೧೦ : **ಮೂರ್ವತ್ತು ಎರಡು ಲಕ್ಷಣ** : ೩ X ೧೦ = ೩೦ + ೨ = ೩೨

ಐದು ಸೂಕ್ಷ್ಮಗಳು : ತ್ವಕ್, ಕೇಶ, ಅಂಗುಲಿ, ದಂತ, ಅಂಗುಲಿಪರ್ವ.

ಐದು ದೀರ್ಘಗಳು : ಭುಜ, ನೇತ್ರ, ಹನು, ಜಂಘೆ, ನಾಸಿಕ.

ಏಳು ರಕ್ತಗಳು : ಹಸ್ತತಲ, ಪಾದತಲ, ಅಧರೋಷ್ಠ, ನೇತ್ರ, ತಾಲು, ನಾಲಗೆ, ಉಗುರು.

ಆರು ಉನ್ನತಗಳು : ವಕ್ಷಸ್ಥಲ, ಕುಕ್ಷಿ, ಕೇಶ, ಸ್ಕಂದ, ಹಸ್ತ, ಬಾಯಿ.

ಮೂರು ಪೃಥುಗಳು : ವಕ್ಷಸ್ಥಲ, ಕಟಿ, ಲಲಾಟ.

ಮೂರು ಲಘುಗಳು : ಗ್ರೀವಾ, ಜಂಘಾ, ಶಿಶ್ನ.

ಮೂರು ಗಂಭೀರಗಳು : ಸ್ವರ, ಕರ್ಣ, ನಾಭಿ(ಶ್ರೀ ನಿ. ಪು.೩೩೦)

ಮೂರವತಾರ : ಹನುಮ, ಭೀಮ, ಮಧ್ವ.

ಮೂರೆರಡುರೂಪ : ಪಂಚಪ್ರಾಣಗಳು – ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ

ಮೂರುಕೋಟಿರೂಪ : ?

ಮೂರೆರಡರಿಲೋಪ : ಅರಿಷಡ್ವರ್ಗಗಳಿಲ್ಲದವನು

ಮೂರೆಂಟು ತತ್ವೇಶರು : ೨೮ ತತ್ತ್ವಗಳು (ನೋಡಿ : ಕೀ. ೯೬ರ ಟಿಪ್ಪಣಿ)

ಮೂರೇಳಾಯತ : ೨೧ ಭಾಷ್ಯಗಳನ್ನು ತಿಳಿದಾತ.

ಮೂರೆರಡು ನೂರು ಮಂತ್ರ : ತಂತ್ರಸಾರ ಹಾಗೂ ಅದರಲ್ಲಿಯ ೬೦೦ ಮಂತ್ರಗಳು

ಮೂರು ಅವಸ್ಥೆ : ಸ್ವಪ್ನ, ಜಾಗರ, ಸುಷುಪ್ತಿ.

ಮೂರು ಶರೀರ : ಲಿಂಗಶರೀರ, ಸ್ಥೂಲಶರೀರ, ಕಾರಣಶರೀರ.

ಮೂರು ತಾಪ : ಆಧಿದೈವಿಕ, ಆಧಿಭೌತಿಕ, ಆಧ್ಯಾತ್ಮಿಕ

ಮೂರುಲೋಕ : ಸ್ವರ್ಗ, ಮರ್ತ್ಯ, ಪಾತಾಳ.

೬೩

ಭೀಮನ ಪರಾಕ್ರಮಗಳನ್ನು ತಿಳಿಸುವ ಕೀರ್ತನೆಯಿದು.

ನು. ೧ : **ಹಿಡಿಂಬಕಾಸುರ, ಬಕ** : ನೋಡಿ ಕೀ. ೬೧ರ ಟಿಪ್ಪಣಿ

ನು. ೨ : ಹಸ್ತಿನಾಪುರದಲ್ಲಿ ರಾಜಸೂಯಯಜ್ಞ ಮಾಡಿ ಬಂದ ದ್ವಿಜರಿಗೆ ದ್ರವ್ಯವನ್ನು ದಾನ ಮಾಡಿದ ಪ್ರಸಂಗ.

ನು. ೩ : **ಕೋಟಿಕಾಖ್ಯ** : ಶಿಬಿವಂಶದ ಸುರಥನೆಂಬ ರಾಜನ ಮಗ. ಸಿಂಧುದೇಶದ ಅರಸ ಸೈಂಧವನ (ಜಯದ್ರಥ) ಆಪ್ತ ಸ್ನೇಹಿತ. ಪಾಂಡವರು ಅರಣ್ಯವಾಸ ಮಾಡುತ್ತಿದ್ದಾಗ ದ್ರೌಪದಿಯನ್ನು ಒಲಿಸಿಕೊಳ್ಳುವ ಹಾಗೆ ಇವನು ಜಯದ್ರಥನನ್ನು ಪ್ರೇರೇಪಿಸಿದ. ದ್ರೌಪದಿ ಯನ್ನು ಜಯದ್ರಥ ಕೆಣಕಲಾಗಿ ಭೀಮಸೇನ ಜಯದ್ರಥನ ಮೇಲೆ ಬಿದ್ದ. ಆಗ ಕೋಟಿಕಾಖ್ಯ ಜಯದ್ರಥನಿಗೆ ಸಹಾಯ ಮಾಡಲು ಹೋಗಿ ಭೀಮನಿಂದ ಹತನಾದ. ಇವನಿಗೆ ಕೋಟಿಕ, ಕೋಟಿಕಾಸ್ಯ ಎಂತಲೂ ಹೆಸರು (ವನ) (ಪುನಾಚೂ.ಪು. ೧೬೩)

ನು. ೪ : **ಸುಶರ್ಮ** : ತ್ರಿಗರ್ತ ದೇಶಾಧಿಪತಿ. ದುರ್ಯೋಧನನ ಆಪ್ತಮಿತ್ರ. ದಕ್ಷಿಣಗೋಗ್ರಹಣಕ್ಕೆ ಇವನನ್ನು ದುರ್ಯೋಧನ ಪ್ರೇರೇಪಿಸಿದಾಗ ಕೃಷ್ಣಪಕ್ಷದ ಅಷ್ಟಮಿಯ ದಿನ ಗೋವುಗಳನ್ನು ಹಿಡಿದು ವಿರಾಟನನ್ನು ಸೆರೆಹಿಡಿದ. ಯುಧಿಷ್ಠಿರನ ಸೂಚನೆಯ ಮೇರೆಗೆ ಭೀಮ ಸುಶರ್ಮನನ್ನು ಎದುರಿಸಿ ವಿರಾಟನನ್ನು ಬಿಡಿಸಿದ (ವಿರಾ. ೩೫). (ಪುನಾಚೂ. ಪು. ೬೬೧)

೬೪

ಹನುಮಂತನನ್ನು ಕುರಿತ ಮಂಗಳ. ಇಲ್ಲಿ ಹನುಮ, ಭೀಮ, ಮಧ್ವಾವತಾರಗಳ ಪ್ರಸ್ತಾವವಿದೆ.

ನು. ೨ : **ಸತಿಯಳ.... ಮಂಗಳ** : ಮಹಾಭಾರತದ ದುಶ್ಶಾಸನ ವಧೆಯ ಸಂದರ್ಭ (ಮಹಾ, ಕರ್ಣಪರ್ವ).

೬೫

ಮುಖ್ಯ ಪ್ರಾಣನಾದ ಹನುಮಂತ ತಮಗೆ ಶ್ರೀಹರಿಯ ಸಾನ್ನಿಧ್ಯವನ್ನು ಕೊಡಲಿ ಎಂದು ದಾಸರು ಬೇಡುತ್ತಿದ್ದಾರೆ. ಶ್ರೀಹರಿ ಭವರೋಗ ವೈದ್ಯನಾದರೆ, ಹನುಮಂತ ಭವರೋಗದ ಧಾತು ನೋಡಿ ನಡೆಸುವ ಮಂತ್ರಿ ಎಂಬ ಹೋಲಿಕೆ ಸುಂದರವಾಗಿದೆ.

೬೬

ಯದುಗಿರಿಸೀಮೆಯ ಕಾಮವರ (?) ಎಂಬಲ್ಲಿ ಇರುವ ರಾಮದೂತನಾದ ಹನುಮಂತನನ್ನು ಕುರಿತ ಕೀರ್ತನೆ. ಇಲ್ಲಿ ಹನುಮ, ಭೀಮ, ಮಧ್ವ – ಈ ಅವತಾರತ್ರಯದ ಪ್ರಸ್ತಾವವಿದೆ.

ನು. ೧ : ರಾಮಾಯಣದ ಸುಂದರಕಾಂಡದ ಕಥೆ

ನು. ೨ : ಮಹಾಭಾರತದ ದುಶ್ಶಾಸನ, ಕೌರವರ ವಧಾಪ್ರಸಂಗ.

ನು. ೩ : ಮಧ್ವಾಚಾರ್ಯರಾಗಿ ಜನಿಸಿ, ಸನ್ಯಾಸಾಶ್ರಮ ಸ್ವೀಕರಿಸಿ, ಗ್ರಂಥ ರಚನೆ ಮಾಡಿದ್ದು.

೬೭

ಗುರುಸ್ವರೂಪರಾದ ಹನುಮ, ಭೀಮ, ಮಧ್ವರ ವರ್ಣನೆ ಇಲ್ಲಿದೆ.

ನು. ೨ : **ಬದ್ಧದ್ವೇಷಿ....ಮುದ್ದಾಡಿಸಿದನೆ** : ಮಹಾಭಾರತದ ದುರ್ಯೋಧನನ ವಧಾಪ್ರಸಂಗ.

ಸುದ್ದಿ ಕೊಂಡು ಪೋಗಿ.... ನಿಂತನೆ : ರಾಮಾಯಣದಲ್ಲಿ ರಾಮದೂತನಾಗಿ ಸೀತೆಯಲ್ಲಿಗೆ ಹೋಗಿ ಬಂದು ಸುದ್ದಿ ತಿಳಿಸಿದ ಪ್ರಸಂಗ.

ನು. ೩ : **ಮೂರು ಅವತಾರ** : ಹನುಮ, ಭೀಮ, ಮಧ್ವ.

ಮೂರು ಮೂರು ಭಕುತಿ – ನವವಿಧ ಭಕುತಿ (ನೋಡಿ : ಕೀ . ೧–೩ ರ ಟಿಪ್ಪಣಿ)

ಮೂರು ಮೂರ್ತಿಗಳ – ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ.

೬೮

ತಮ್ಮ ಹಿರೀಕರು ಶ್ರೀಹರಿಗೆ ಮಾಡಿದ ಉಪಕಾರವನ್ನೇ ಬಂಡವಾಳ

ವಾಗಿಟ್ಟುಕೊಂಡು ಗೋಪಾಲದಾಸರು ಅದನ್ನು ಮರೆಯದೆ ತಮ್ಮನ್ನು ಕಾಪಾಡಬೇಕೆಂದು ಅವನನ್ನು ಕೇಳಿಕೊಂಡಿದ್ದಾರೆ. ಆ ಮೂಲಕ ಹನುಮ, ಭೀಮ, ಮಧ್ವ ಅವತಾರಗಳನ್ನು ಎತ್ತಿಹಿಡಿದಿದ್ದಾರೆ.

ನು. ೧ : ರಾಮಾಯಣದ ಹನುಮದೂತ ಪ್ರಸಂಗ. ಯುದ್ಧಕಾಂಡದಲ್ಲಿ ಹನುಮಂತ ರಾಮನಿಗೆ ವಾಹನನಾದ ಪ್ರಸಂಗ.

ನು. ೨ : ಮಹಾಭಾರತದ ಭೀಮ ಜರಾಸಂಧನನ್ನು ಕೊಂದ ಪ್ರಸಂಗ (ಸಭಾಪರ್ವ)

ನು. ೩ : ಮಧ್ವಾಚಾರ್ಯರ ಅವತಾರದಿಂದ ಅದ್ವೈತಮತ ಖಂಡಿಸಿದ್ದು.

೬೯

ಭಾರತೀದೇವಿಯ ಸ್ತುತಿ. ಮಾಧ್ವರಲ್ಲಿ ಭಾರತಿ ಹನುಮಂತನ ಹೆಂಡತಿಯೆಂಬ ಕಲ್ಪನೆಯಿದೆ. ಆಕೆ ಜ್ಞಾನಪ್ರದಾಯಕಳು. ಗೋಪಾಲವಿಠಲನನ್ನು ಅರಿಯುವ ಜ್ಞಾನವನ್ನು ದಯಪಾಲಿಸ ಬೇಕೆಂಬುದಾಗಿ ದಾಸರು ಅವಳನ್ನು ಮೊರೆಹೊಕ್ಕಿದ್ದಾರೆ.

೭೦

ಭಾರತೀದೇವಿಯನ್ನು ಕುರಿತ ಸ್ತುತಿ. ತಮ್ಮನ್ನು ಶ್ರೀಹರಿಯ ಭಕ್ತನೆಂದೆನಿಸಬೇಕೆಂದು ದಾಸರ ಪ್ರಾರ್ಥನೆ.

೭೧

ಹನುಮನ ಸತಿಯಾದ ಭಾರತೀದೇವಿಯ ಸ್ತುತಿ. ಶ್ರೀಹರಿಯಲ್ಲಿ ಅನನ್ಯಭಕ್ತಿ ಕೊಡು ಎಂಬುದಾಗಿ ದಾಸರು ಆಕೆಯನ್ನು ಕೇಳಿಕೊಂಡಿದ್ದಾರೆ.

೭೨

ವ್ಯಾಸರಾಯರನ್ನು ಕುರಿತ ಕೀರ್ತನೆ.

ನು. ೧ : ವ್ಯಾಸರಾಯರು ಬನ್ನೂರಿನಲ್ಲಿ ಜನಿಸಿ, ಬ್ರಹ್ಮಣ್ಯತೀರ್ಥರ ಶಿಷ್ಯರಾಗಿ ಸನ್ಯಾಸಾಶ್ರಮ ಸ್ವೀಕರಿಸಿದ್ದು.

ನು. ೨ : ಶ್ರೀಪಾದರಾಜರಲ್ಲಿ ವಿದ್ಯಾರ್ಜನೆ ಮಾಡಿದ್ದು ; ಅದ್ವೈತಿಗಳನ್ನು ಖಂಡಿಸಿ, ಮಧ್ವಮತವನ್ನು ಪ್ರಚಾರ ಮಾಡಿದ್ದು.

ನು. ೪ : ನ್ಯಾಯಾಮೃತ, ಚಂದ್ರಿಕಾ, ತರ್ಕತಾಂಡವ ಮೊದಲಾದ ಗ್ರಂಥರಚನೆ.

ನು. ೫-೭ : ಶಿಷ್ಯಪರಿವಾರದೊಂದಿಗೆ, ಕೃಷ್ಣನ ಅನುಗ್ರಹಕ್ಕೆ ಪಾತ್ರರಾಗಿ

ಮಧ್ವಮತಾಬ್ಧಿಗೆ ಚಂದ್ರನಂತೆ, ವಿಜಯನಗರದ ಸಿಂಹಾಸನದಲ್ಲಿ ಕುಳಿತು ರಾಜ್ಯಭಾರ ಮಾಡಿದ್ದು.

೭೩

ವಾದಿರಾಜರನ್ನು ಕುರಿತ ಸ್ತುತಿ. ವಾದಿರಾಜರಿಗೆ ಸಂಬಂಧಿಸಿದ ನಾರಾಯಣಾ ಚಾರ್ಯನೆಂಬ ತಮ್ಮ ಶಿಷ್ಯನಿಗೆ ಬ್ರಹ್ಮರಾಕ್ಷಸ ಜನ್ಮ ಬರಲೆಂದು ಶಪಿಸಿದ್ದು, ಮುಂದೆ ಅವನಿಂದ ಪಲ್ಲಕ್ಕಿ ಹೊರೆಸಿದ್ದು, ತ್ರಿವಿಕ್ರಮ ದೇವರನ್ನು ತರಿಸಿದ್ದು ಇತ್ಯಾದಿ ಪ್ರವಾಡಗಳ ಪ್ರಸ್ತಾವವಿದೆ.

೭೪

ಮಾಧ್ವರಲ್ಲಿ 'ಗುರು'ಗಳೆಂದೂ 'ರಾಯ'ರೆಂದೂ ಪ್ರಸಿದ್ಧರಾಗಿರುವ ಶ್ರೀರಾಘವೇಂದ್ರ ಸ್ವಾಮಿಗಳನ್ನು ಕುರಿತ ಕೀರ್ತನೆ. ರಾಯರ ಸ್ಮರಣೆಯ ಮಹತ್ತ್ವವನ್ನೂ ಅದರಿಂದ ಒದಗುವ ಸತ್ಫಲಗಳನ್ನೂ ಇಲ್ಲಿ ತಿಳಿಸಲಾಗಿದೆ.

ನು. ೧-೨ : ಶ್ರೇಷ್ಠವಾದ ಮಧ್ವಮತದಲ್ಲಿ ಜನಿಸಿ, ಹರಿ ಸರ್ವೋತ್ತಮ ತತ್ತ್ವ, ತಾರತಮ್ಯ, ಪಂಚಭೇದಗಳೇ ಮೊದಲಾದ ಮಧ್ವಮತತತ್ತ್ವಗಳನ್ನು ಒಪ್ಪಿ ನಡೆದು ಪ್ರಸಾರ ಮಾಡಿದಂತಹ ಗುರುಗಳನ್ನು ಸ್ಮರಿಸುವವರಿಗೆ ಕಷ್ಟ ಕಾರ್ಪಣ್ಯಗಳು ಇರುವುದಿಲ್ಲ.

ನು. ೩ : **ಒಂದಾರುನೂರು..... ದೇವಾಂಶರ** : ಏಳುನೂರು ವರ್ಷಗಳ ಕಾಲ ರಾಘವೇಂದ್ರ ಸ್ವಾಮಿಗಳು ಬೃಂದಾವನದಲ್ಲಿದ್ದು ಕೊಂಡು ಭಕ್ತರ ಅಭೀಷ್ಟವನ್ನು ಪೂರೈಸುತ್ತಾರೆಂಬ ಪ್ರತೀತಿ.

೭೫

ಶ್ರೀಗುರುರಾಘವೇಂದ್ರರು ನೆಲೆಸಿರುವ ಮಂತ್ರಾಲಯದ ಮಹಾತ್ಮೆಯನ್ನು ಕುರಿತ ಸುಳಾದಿ. ರಾಘವೇಂದ್ರರು ಭಕ್ತಪ್ರಹ್ಲಾದನ ಅವತಾರವೆಂಬ ನಂಬಿಕೆಯಿದೆ.

ನು. ೧-೨ : ಪ್ರಹ್ಲಾದ ಯಾಗಮಾಡಿ ದೇವತೆಗಳಿಗೆ ಅಮೃತ ಉಣಿಸಿದುದರಿಂದ ಪವಿತ್ರವಾದ ಸ್ಥಳ : ಶ್ರೀಹರಿ ತಾನೇ ಸ್ವತಃ ಬಂದು ನಿಂತು ಪೂಜೆಗೊಳ್ಳುತ್ತಿರುವ ಸ್ಥಳ ಮಂತ್ರಾಲಯ. ಮಧ್ವಾಚಾರ್ಯರೇ ಮೊದಲಾದ ಯತಿಗಳು ವೇದಶಾಸ್ತ್ರಾದಿಗಳಿಂದ ಹಗಲು ಇರುಳೆನ್ನದೆ ಇಲ್ಲಿ ಹರಿಯನ್ನು ಸೇವಿಸುತ್ತಿರುವರು.

ನು. ೪ : ರಾಘವೇಂದ್ರರೆಂಬ ಹೆಸರಿನಿಂದ ಶ್ರೀಹರಿ ತಾನೇ ಪೂಜೆ ಸ್ವೀಕರಿಸುತ್ತಿದ್ದಾನೆ.

ನು. ೫ : ಮಂತ್ರಾಲಯದಲ್ಲಿ ಪ್ರತಿದಿನವೂ ನಡೆಯುವ ಪೂಜೆ, ಉತ್ಸವ, ಭೋಜನಾದಿಗಳ ಸೇವೆ, ಫಲಪ್ರಾಪ್ತಿಗಳ ವರ್ಣನೆ.

ದಿನಸಪ್ತಶತ ವರುಷ – ಏಳುನೂರು ವರ್ಷ (ವಿವರಗಳಿಗೆ ನೋಡಿ : ಕೀ. ೭೪ರ ಟಿಪ್ಪಣಿ).

೭೬

ಗುರುರಾಘವೇಂದ್ರ ಸ್ವಾಮಿಗಳನ್ನು ಕುರಿತ ಕೀರ್ತನೆ.

ಈ ಜಗತ್ತನ್ನು ಕಾಪಾಡುವ ಸಲುವಾಗಿ ಸಾಕ್ಷಾತ್ ಶ್ರೀಹರಿಯೇ ಒಂದು ರೂಪದಲ್ಲಿ ಬಂದು ಇವರಲ್ಲಿ ನೆಲೆಸಿರುವನೆನ್ನುತ್ತಾರೆ.

೭೭

ಮಂತ್ರಾಲಯದ ಗುರುರಾಘವೇಂದ್ರರ ರಥೋತ್ಸವವನ್ನು ಕಂಡು ಪುಳಕಿತರಾದ ಗೋಪಾಲದಾಸರು, ಭಕ್ತರ ಮನೋರಥವನ್ನು ಈಡೇರಿಸಲು ಗುರುಗಳು ರಥವೇರಿದ್ದಾರೆನ್ನುತ್ತಾರೆ.

ನು. ೧ : ರಥೋತ್ಸವ ಕಾಲದಲ್ಲಿನ ಅಪಾರ ಜನಸಂದಣಿಯನ್ನು ಸೂಚಿಸುತ್ತಾರೆ.

ನು. ೨–೩ : ರಾಘವೇಂದ್ರಸ್ವಾಮಿಗಳು ತಮ್ಮ ಮೊದಲನೆಯ ಅವತಾರದಲ್ಲಿ ಪ್ರಹ್ಲಾದನಾಗಿಯೂ ಎರಡನೆಯ ಅವತಾರದಲ್ಲಿ ವ್ಯಾಸರಾಯರಾಗಿಯೂ ಹುಟ್ಟಿದ್ದರೆಂದು ಪ್ರತೀತಿ. ಎರಡನೆಯ ನುಡಿಯಲ್ಲಿ ಪ್ರಹ್ಲಾದನ ಕಥೆಯನ್ನು ಹೇಳಿದ್ದಾರೆ (ನೋಡಿ : ಕೀ. ೧೫೫ರ ಟಿಪ್ಪಣಿ).

೭೮

ರಾಘವೇಂದ್ರಸ್ವಾಮಿಗಳನ್ನು ಕುರಿತ ಕೀರ್ತನೆ. ಮಂತ್ರಾಲಯದಲ್ಲಿರುವ ಅವರ ಬೃಂದಾವನದಲ್ಲಿ ಶ್ರೀಹರಿ ತಾನೆ ಒಂದಂಶದಿಂದ ನಿಂತು ಪೂಜೆಗೊಳ್ಳುತ್ತಿರುವನೆಂದು ನಂಬಿಕೆ.

ನು. ೨ : ಮಂತ್ರಾಲಯದಲ್ಲಿ ನಡೆಯುವ ಭೂತಪ್ರೇತಗಳ ಉಚ್ಚಾಟನೆ.

ನು. ೩ : ಪ್ರಹ್ಲಾದ, ವ್ಯಾಸರಾಯ, ರಾಘವೇಂದ್ರ – ಇವು ಮೂರು ಅವತಾರಭೇದಗಳು ಮಾತ್ರ.

ನು. ೫ : ಮಂತ್ರಾಲಯ ಕ್ಷೇತ್ರ ಮಹಿಮೆ

೭೯

ಗೋಪಾಲದಾಸರ ಕಾಲದಲ್ಲಿ ಶ್ರೀಉತ್ತರಾದಿಮಠದ ಧರ್ಮ ಪೀಠಾಧಿಕಾರಿಗಳಾಗಿದ್ದ ಸತ್ಯಬೋಧರನ್ನು ಕುರಿತದ್ದು ಈ ಕೀರ್ತನೆ. ಒಮ್ಮೆ ಗುರುಗಳು, ಗೋಪಾಲದಾಸರು ಹಾಗೂ

ಅವರ ತಮ್ಮಂದಿರಾದ ಸೀನಪ್ಪದಾಸರು ಮತ್ತು ದಾಸಪ್ಪದಾಸರ ಅಪರೋಕ್ಷಾನುಭೂತಿಯನ್ನು ಪರೀಕ್ಷೆ ಮಾಡಲು ಆ ಮೂವರನ್ನೂ ಪ್ರತ್ಯೇಕ ಕೊಠಡಿಗಳಲ್ಲಿ ಕೂಡಿಸಿ ಮೂವರೂ ಸೇರಿ ಒಂದು ಪದವನ್ನು ಪೂರ್ತಿಮಾಡಿರೆಂದು ಆಜ್ಞಾಪಿಸಿದರಂತೆ. ಆ ಸಂದರ್ಭದಲ್ಲಿ ಈ ಕೃತಿಯ ಪಲ್ಲವಿ, ಅನುಪಲ್ಲವಿ, ಮೂರನೆಯ ನುಡಿಗಳನ್ನು ಗೋಪಾಲದಾಸರೂ ಒಂದನೆಯ ನುಡಿಯನ್ನು ಸೀನಪ್ಪದಾಸರೂ ಎರಡನೆಯ ನುಡಿಯನ್ನು ದಾಸಪ್ಪದಾಸರೂ ರಚಿಸಿ, ಗುರುಗಳಾದ ಸತ್ಯಬೋಧರ ಆದರ ವಿಶ್ವಾಸಗಳಿಗೆ ಪಾತ್ರರಾದರೆಂದು ಪ್ರತೀತಿ (ನೋಡಿ : ಕ. ಭ. ವಿ. ಪು. ೪೫೬-೫೯).

ನು. ೧. ೨ : **ಅಷ್ಟಾಂಗಯೋಗಸಾಧನ ಬಲದಿ :** (ನೋಡಿ : ಕೀ. ೧೭೧ರ ಟಿಪ್ಪಣಿ). ಸತ್ಯಬೋಧರು ತಮ್ಮ ಮನೋಬಲದಿಂದ ಹಾಗೂ ಯೋಗಸಾಧನೆಯ ಬಲದಿಂದ ಮಾರನನ್ನೂ ಅವನ ಪಡೆಯನ್ನೂ ಜಯಿಸಿದ ಪರಿಯನ್ನು ಈ ಕೀರ್ತನೆಯಲ್ಲಿ ವಿವರಿಸಿದ್ದಾರೆ.

ನು. ೩ : ಗುರುಗಳ ಅಸಾಧಾರಣ ಪಾಂಡಿತ್ಯವನ್ನೂ ತ್ಯಾಗಬುದ್ಧಿಯನ್ನೂ ಸ್ಮರಿಸಿ, ಅವರಿಗೆ ನಮಸ್ಕರಿಸಿದ್ದಾರೆ.

೮೦

ಪುರಂದರದಾಸರನ್ನು ಕುರಿತ ಸ್ತುತಿ. ಅವರ ನಾಮಸ್ಮರಣೆ ಮುಕ್ತಿಯನ್ನು ತಂದುಕೊಡುವುದೆಂಬುದು ಗೋಪಾಲದಾಸರ ನಂಬಿಕೆ. 'ಪುರಂದರ' ಎಂಬ ಹೆಸರಿನ ಒಂದೊಂದು ಅಕ್ಷರದ ಉಚ್ಚಾರದಿಂದಲೂ ದೊರಕುವ ಫಲವನ್ನು ಹೇಳಿದ್ದಾರೆ.

೮೧

ತಮ್ಮ ಗುರುಗಳಾದ ವಿಜಯದಾಸರನ್ನು ಕರೆತಂದು ತೋರಿಸಬೇಕೆಂಬುದಾಗಿ ಶ್ರೀಹರಿಯನ್ನು ಕೇಳುತ್ತಾ, ವಿಜಯದಾಸರ ಮತನಿಷ್ಠೆಯನ್ನು ಸಾರಿದ್ದಾರೆ.

ನು. ೧ : **ಹಿಂದೆ ನೀನಿವರ ಪುರಂದರದಾಸರ ಮಂದಿರದಲಿ ಸೃಜಿಸಿ :** ಪುರಂದರದಾಸರ ಮಕ್ಕಳಲ್ಲಿ ಒಬ್ಬರಾದ ಮಧ್ವಪತಿಯೇ ವಿಜಯದಾಸರಾಗಿ ಅವತರಿಸಿ ಬಂದರೆಂದು ಪ್ರತೀತಿ.

೮೨

ಮಧ್ವಮತಕ್ಕೆ ಭೂಷಣಪ್ರಾಯರಾಗಿರುವ ವಿಜಯದಾಸರನ್ನು ಸ್ತುತಿಸಿ, ಅವರ ಚರಣಕಮಲಗಳನ್ನು ನೆನೆದು ತಮ್ಮ ಬದುಕನ್ನು ಸಾರ್ಥಕಪಡಿಸಿಕೊಳ್ಳುವುದಾಗಿ ದಾಸರು ಅಭಿಪ್ರಾಯಪಟ್ಟಿದ್ದಾರೆ.

೮೩

ವಿಜಯದಾಸರ ಸ್ತುತಿ. ಅಖಿಲ ಕರ್ಮದೂರನೂ ದುರ್ಗುಣ ವರ್ಜಿತನೂ ಅದ್ವೈತ ಮತ ಕೋಲಾಹಲನೂ ದ್ವೈತಸಿದ್ಧಾಂತ ಜ್ಞಾನನಿಧಿಯೂ ಆದ ವಿಜಯರಾಯ ತನ್ನನ್ನು ಸ್ಮರಿಸುವ ಜನರ ದುರಿತಗಳನ್ನು ದೂರಮಾಡುತ್ತಾನೆ.

ದುರಿತವಾರಿವಾಹಜಂಝೂನಿಳ : ಕೆಟ್ಟ ನೀರನ್ನು ಒಯ್ಯುವ ಬಿರುಗಾಳಿ ಯೋಪಾದಿಯಲ್ಲಿರುವವನು (ಕೆಟ್ಟ ಗುಣಗಳನ್ನು ತೊಡೆದು ಹಾಕುವವನೆಂದರ್ಥ).

೮೪

ವಿಜಯದಾಸರ ಮಹಿಮೆಯನ್ನು ಕುರಿತ ಕೀರ್ತನೆ. ವಿಜಯದಾಸರನ್ನು ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಗಳಿಗೆ ಹೋಲಿಸಿರುವುದನ್ನು ಗಮನಿಸಿದರೆ, ಗೋಪಾಲದಾಸರಿಗೆ ತಮ್ಮ ಗುರುಗಳ ಮೇಲಿದ್ದ ಭಕ್ತಿ, ಗೌರವಗಳು ವ್ಯಕ್ತವಾಗುತ್ತವೆ.

ನು. ೧ : ಕರೆಕೊಂಬಿವಿಹಿಯನ < ಕರೆಕೊಂಬಿವ್ಹಿಯನ – ಕರೆದು ಕೊಳ್ಳವಿಯೇನೊ.

೮೫

ವಿಜಯದಾಸರನ್ನು ಕುರಿತ ಕೀರ್ತನೆ. ಸದಾ ಶ್ರೀಹರಿಯ ಉಪಾಸನೆಯಲ್ಲಿ ತೊಡಗಿ ಹರಿಸರ್ವೋತ್ತಮನೆಂದು ಸಾರಿದ ತಮ್ಮ ಗುರುಗಳನ್ನು ಭಕ್ತಿಯಿಂದ ನೆನೆಯುತ್ತಾರೆ, ಗೋಪಾಲದಾಸರು.

೮೬

ವಿಜಯದಾಸರನ್ನು ಕುರಿತ ಕೀರ್ತನೆ. ಜನರು ತಮ್ಮ ಕಾರ್ಯಾಚರಣೆಯ ಪ್ರತಿ ನಿಮಿಷದಲ್ಲೂ ವಿಜಯದಾಸರನ್ನು ನೆನೆಯಬೇಕೆಂಬುದು ದಾಸರ ಆಶಯ. ಹಾಗೆ ಮಾಡಿದಲ್ಲಿ ವಿರಕ್ತಿ, ಮುಕ್ತಿಗಳು ದೊರೆಯುವುವೆಂಬುದು ಅವರ ನಂಬಿಕೆ.

೮೭

ಗೋಪಾಲದಾಸರು ತಮ್ಮ ಗುರುಗಳಾದ ವಿಜಯದಾಸರನ್ನು ಇಲ್ಲಿ ಸ್ತುತಿಸಿದ್ದಾರೆ. ಈ ಕೀರ್ತನೆಯಿಂದ ವಿಜಯದಾಸರ ಜೀವನಕ್ಕೆ ಸಂಬಂಧಿಸಿದ ಕೆಲವಾರು ಸಂಗತಿಗಳು ತಿಳಿದುಬರುತ್ತವೆ.

೮೮

ಇದು 'ವಾಸುದೇವ ವಿಠಲಾಂಕಿತರಾದ ವ್ಯಾಸತತ್ತ್ವಜ್ಞ'ರನ್ನು ಕುರಿತ ಕೀರ್ತನೆ. ಗೋಪಾಲದಾಸರಿಗೆ ಸ್ವಪ್ನದಲ್ಲಿ ಅವರ ಕರುಣ ಉಪದೇಶವಾದುದನ್ನು ಸೂಚಿಸುತ್ತದೆ. ವೆಂಕಟರಾಮಾಚಾರ್ಯರು ಗೋಪಾಲದಾಸರ ಸನಿಹದಲ್ಲೇ ಇದ್ದುಕೊಂಡು ಜ್ಞಾನವನ್ನು ಪಡೆದವರು. ಪರಸ್ಪರರಲ್ಲಿದ್ದ ಪ್ರೀತಿ, ವಿಶ್ವಾಸ, ಗೌರವ ಭಾವಗಳಿಗೆ ಈ ಕೃತಿ ಸಾಕ್ಷಿಯಾಗಿ ನಿಲ್ಲುತ್ತದೆ (ವಿವರಗಳಿಗೆ ನೋಡಿ : ಕಭವಿ. ತ್ಯ. ಮು. ಪು. ೪೩೩).

೮೯

ಶ್ರೀಹರಿಯನ್ನು ಕಾಣುವುದಕ್ಕೆ ಜ್ಞಾನಚೇತನನಾಗಬೇಕು ಎಂಬ ತಮ್ಮ ಹಂಬಲವನ್ನು ದಾಸರು ಈ ಸುಳಾದಿಯಲ್ಲಿ ತೋಡಿಕೊಂಡಿದ್ದಾರೆ. ಅದರ ಸಾಧನೆಗೆ ಅನುಸರಿಸಬೇಕಾದ ಮಾರ್ಗವನ್ನು ಈ ಸುಳಾದಿಯಲ್ಲಿ ಹೇಳಿದ್ದಾರೆ.

ನು. ೨ : **ಜೀವನ ಸರ್ವಗತಿಗೂ ನಿಯಾಮಕ ಹರಿ** : ಅವನು ಸರ್ವವ್ಯಾಪ್ತ ಎಂಬುದನ್ನು ತಿಳಿಯಬೇಕು.

ನು. ೩ – ೪ : ಕರ್ಮ ಮುಖ್ಯವೆಂದು ತಿಳಿದು ಮಾಡಬೇಕು. ಆದರೆ ಮಾಡಿಸಿದವನು ಹರಿ ಎಂಬ ತಿಳಿವಳಿಕೆ ಬೇಕು.

ನು. ೫ : **ಎಲ್ಲ ಪಾಪಗಳಿಗೂ ಹರಿನಾಮಸ್ಮರಣೆಯೇ ಪ್ರಾಯಶ್ಚಿತ್ತ** : ದೀನಜನರ ಬಂಧುವಾದ ಶ್ರೀಹರಿ ಜ್ಞಾನಿಗಳಲ್ಲಿ ನೆಲಸಿರುವನು.

೯೦

ಈ ಸುಳಾದಿಯಲ್ಲಿ ಶ್ರೀಹರಿ ಎಲ್ಲರಲ್ಲಿಯೂ ಇದ್ದು ಅಭೇದನಾಗಿದ್ದರೂ ತನ್ನ ಸರ್ವೋತ್ತಮತ್ವಾದಿ ಗುಣಗಳಿಂದ ಎಲ್ಲರಿಂದ ಭೇದನಾಗಿರುವನೆಂಬುದನ್ನು ಪ್ರತಿಪಾದಿಸಿದ್ದಾರೆ. ಸರ್ವಕ್ಕೂ ಮೂಲ ಕಾರಣ ಶ್ರೀಹರಿ. ಈ ಜಗವೆಲ್ಲ ಅವನು ಆಡಿಸಿದಂತೆ ಆಡುತ್ತಿರುವುದರಿಂದ ಆ ಕಾರಣಪುರುಷನನ್ನು 'ಕಪಟನಾಟಕಧಾರಿ' ಎಂದು ಕರೆದಿದ್ದಾರೆ.

ನು. ೫ : ಅವಿದ್ಯೆ ತಮ್ಮನ್ನು ಆವರಿಸಿರುವುದರಿಂದ ತಾವು ಶ್ರೀಹರಿಯನ್ನು ಮರೆತಿರುವುದು ; ಆದರೆ ಶ್ರೀಹರಿ ತಮ್ಮನ್ನು ಮರೆಯಲು ಕಾರಣವೇ ಇಲ್ಲವೆಂಬುದು ದಾಸರ ಸವಾಲು. ಜೀವರನ್ನು ಎಳ್ಳಿಗೂ ಸಂಸಾರನ್ನು ಗಾಣದ ಒರಳಿಗೂ ಹೋಲಿಸಿ ಅದನ್ನು ತಿರುಗಿಸುವವನು ಶ್ರೀಹರಿ ಎನ್ನುತ್ತಾರೆ.

ನು. ೬ : ಹುಟ್ಟಿಸಿದ ಶ್ರೀಹರಿ ತಮ್ಮನ್ನು ಪೊರೆಯಬೇಕಲ್ಲದೆ ತಾವಾಗಿ ಏನು ಮಾಡಲೂ ಸ್ವತಂತ್ರರಲ್ಲ ಎಂಬ ಭಾವನೆ.

೬೧

ಶ್ರೀಹರಿ ಒಲಿದವನಿಗೆ ಸುಖದುಃಖಗಳೆರಡೂ ಒಂದೇ ಆದ್ದರಿಂದ ಸರ್ವವ್ಯಾಪ್ತನೂ ಸರ್ವಚೇಷ್ಟನೂ ಆದ ಪರಮಾತ್ಮ ತಮಗೆ ಮೋಚಕಮಾರ್ಗವನ್ನು ತೋರಿಸಿ, ಉದ್ಧರಿಸಬೇಕೆಂಬುದಾಗಿ ಈ ಸುಳಾದಿಯಲ್ಲಿ ಕೇಳಿಕೊಂಡಿದ್ದಾರೆ.

೬೨

ಭಾವಶುದ್ಧಿಯೇ ಭಗವಂತವನ್ನು ಒಲಿಸುವ ಬಂಡವಾಳ. ಅದನ್ನು ಅರಿಯದೆ ವಿಷಯಲಾಲಸೆಯಲ್ಲಿ ತೊಳಲಿ ಬಳಲುವ, ತಮ್ಮ ಚಿತ್ತವೃತ್ತಿಯನ್ನು ತೋಡಿಕೊಂಡು ದಾಸರು ಪಶ್ಚಾತ್ತಾಪಪಟ್ಟಿದ್ದಾರೆ. ಈ ಶರೀರವನ್ನು ದೃಢವೆಂದು ನಂಬಿ ಪರಿಪರಿ ಅಲಂಕರಿಸಿಕೊಂಡು ವೈಷ್ಣವನೆಂದು ಹಿಗ್ಗಿ ಹಾರಾಡಿದರೆ ಏನೂ ಪ್ರಯೋಜನವಿಲ್ಲ : ಕೃಷ್ಣನಲ್ಲಿ ಭಕ್ತಿ ಮುಖ್ಯವೆಂಬುದು ಈ ಸುಳಾದಿಯ ಸಾರಾಂಶ.

ನಸುಗುನ್ನಿಕಾಯಿಯ.... ಉಣ್ಣದನಕ : ಹಸಿವೆಯಿಂದ ಹೋಗಿ ಕ್ಷುಲ್ಲಕವಾದ ನಸುಗುನ್ನಿಕಾಯಿಯನ್ನು ತಿಂದರೆ ಅದರಿಂದ ಬಾಧೆ ಹೆಚ್ಚಾಗುತ್ತದೆಯೇ ಹೊರತು ಹೊಟ್ಟೆ ತುಂಬಿ, ಹಸಿವು ನೀರಡಿಕೆಗಳು ಹೋಗುವುದಿಲ್ಲ.

ನು. ೫ : ಮುಖದಲ್ಲಿ ಕುಷ್ಟವಿರುವಾಕೆ ಎಷ್ಟು ಅಲಂಕರಿಸಿಕೊಂಡರೂ ಹೇಗೆ ವ್ಯರ್ಥವೋ ಹಾಗೆಯೇ ಕೃಷ್ಣನಲ್ಲಿ ಭಕ್ತಿಯಿಲ್ಲದವನ ಕರ್ಮಾಚರಣೆಗಳೂ ವ್ಯರ್ಥ.

೬೩

ಜಗದ್ವ್ಯಾಪ್ತನೂ ನಿರ್ದೋಷನೂ ಜ್ಞಾನಪೂರ್ಣನೂ ಸರ್ವವ್ಯಾಪ್ತನೂ ಸೃಷ್ಟಿಸ್ಥಿತಿ ಲಯಕ್ಕೆ ಕಾರಣನೂ ಆಗಿರುವ ಆ ಶ್ರೀಹರಿಯನ್ನು ಆಶ್ರೈಸು, ಅವನೇ ನಿನ್ನನ್ನು ಸುಖಾಂಬುಧಿಯಲ್ಲಿ ಓಲಾಡಿಸಲು ಸಮರ್ಥ ಎಂಬುದಾಗಿ ದಾಸರು ತಮ್ಮ ಮನಸ್ಸಿಗೆ ಆ ಮೂಲಕ ಜನರಿಗೆ ಬೋಧಿಸಿದ್ದಾರೆ.

೬೪

ಶ್ರೀಹರಿಯ ಭಕ್ತಿಗೆ ದಾಸರ ಮೈಮನಗಳು ಒಲಿಯುತ್ತಿಲ್ಲವಾದ ಕಾರಣ ಭವರೋಗಿಯಾದ ತಮ್ಮನ್ನು ದೇವವೈದ್ಯನಾದ ಗೋಪಾಲವಿಠಲ ಕಾಪಾಡಬೇಕೆಂದು ಪ್ರಾರ್ಥಿಸಿದ್ದಾರೆ. ಭವರೋಗಿ ಹಾಗೂ ದೇವ ಧನ್ವಂತ್ರಿಗಳ ಕಲ್ಪನೆ ಚೆನ್ನಾಗಿದೆ.

೬೫

ಶ್ರೀಹರಿ ಅನಾದಿಸ್ವಾಮಿಯೆಂದೂ ತಾವು ಅನಾದಿಭೃತ್ಯರೆಂದೂ ಭಾವಿಸಿ, ಅವನ

ಸರ್ವವ್ಯಾಪಕತೆ, ಜ್ಞಾನಪರಿಪೂರ್ಣತೆ, ಗುಣಸಂಪನ್ನತೆಗಳನ್ನು ಎತ್ತಿ ಹಿಡಿದು ತಮ್ಮ ದಾಸತ್ವವನ್ನು ಅವನಿಗೆ ನಿವೇದಿಸಿಕೊಂಡಿದ್ದಾರೆ, ಗೋಪಾಲದಾಸರು.

೯೬

ಸುಖವಿಲ್ಲದ ಈ ಸಂಸಾರ ನಮಗೆ ಬೇಡವೆಂದರೂ ಪ್ರಾರಬ್ಧಕರ್ಮವನ್ನು ಅನುಭವಿಸಿಯೇ ತೀರಬೇಕೆಂದು ಶ್ರೀಹರಿಯ ನಿಯಮ. ಆದ್ದರಿಂದ ಈ ಕಡುಕಷ್ಟಕರವಾದ ಸಂಸಾರದ ಅಂದರೆ, ಭವದ ಸಂಕಷ್ಟಗಳನ್ನು ಬಣ್ಣಿಸಿ ಅದರಿಂದ ಜೀವರನ್ನು ಪಾರುಮಾಡಬೇಕೆಂದು ಪ್ರಾರ್ಥಿಸಿದ್ದಾರೆ.

ನು. ೧ : **ಮೂರು ಬಣ್ಣಿಗೆ... ಭೂತಗಳು** : ಸತ್ವ, ರಜಸ್ಸು, ತಮಸ್ಸುಗಳಿಂದ ಕೂಡಿದ ಶರೀರ ಪಂಚಭೂತಗಳಿಂದ ನಿರ್ಮಿತವಾಗಿದೆ (ನೋಡಿ ಕೀ. ೧೯೯ರ ಟಿಪ್ಪಣಿ).

ಮೂರುನಾಲ್ಕು... ಛಿದ್ರಗಳು : ಸಪ್ತಧಾತುಗಳು (ನೋಡಿ. ಕೀ. ೧೧೫ರ ಟಿಪ್ಪಣಿ) ಮತ್ತು ಎರಡು ಕಣ್ಣುಗಳು, ಎರಡು ಮೂಗಿನ ಹೊಳ್ಳೆಗಳು, ಒಂದು ಬಾಯಿ, ಎರಡು ಕಿವಿಗಳು, ಒಂದು ಗುದ, ಒಂದು ಉಪಾಸ್ಥ – ಹೀಗೆ ಒಂಭತ್ತು ಕಂಡಿಗಳಿವೆ. ಇವೇ ನವದ್ವಾರಗಳು ಅಥವಾ ನವರಂಧ್ರಗಳು.

ಮೂರು ಅವಸ್ಥೆ : ಜಾಗ್ರತ, ಸ್ವಪ್ನ, ಸುಷುಪ್ತಿ

ಮೂರು ನೂರಾರು ಹತ್ತರಲಿ : ಮುನ್ನೂರ ಅರವತ್ತು ದಿವಸಗಳಲ್ಲಿ

ಮೂರು ವಿಧದನ್ನ : ಸಂಚಿತ, ಆಗಾಮಿ, ಪ್ರಾರಬ್ಧ

ಮೂರುತಾಪ : (ನೋಡಿ ಕೀ. ೧೧೫ರ ಟಿಪ್ಪಣಿ)

ನು. ೨ : **ಐದು ಮಂದಿ ಭಾವನವರು** : ಶ್ರವಣ, ನಯನ, ಘ್ರಾಣ, ತ್ವಕ್ಕು, ರಸನ ಎಂಬ ಜ್ಞಾನೇಂದ್ರಿಯಗಳು.

ಐದು ಮೈದುನರು : ವಾಕ್, ಪಾಣಿ, ಪಾದ, ಪಾಯ, ಉಪಸ್ಥ ಎಂಬ ಕರ್ಮೇಂದ್ರಿಯಗಳು.

ಐದು ಪರಿ ತಾನಾಗಿ : ಶಬ್ದ, ಸ್ಪರ್ಶ, ರೂಪ, ರಸ, ಗಂಧ.

ಐದು ಕತ್ತಲೆ ಕೋಣೆ : ತಾಮಿಸ್ರ, ಅಂಧತಾಮಿಸ್ರ, ಮೋಹ, ಮಹಾಮೋಹ, ನಿಧನವೆಂಬ ಅವಿದ್ಯೆ.

ಐದು ತಂದು : ಮೋಹನ, ವಶೀಕರಣ, ಉಚ್ಚಾಟನ, ವಿದ್ವೇಷಣ, ಮಾರಣ ಎಂಬ ಐದು ತಂತ್ರಗಳಿಂದ.

ಐದನೆ ಬೊಕ್ಕಸದ ಮನೆ : ಪಂಚಕೋಶಗಳಲ್ಲಿ ಒಂದಾದ ಆನಂದಮಯವೆಂಬ ಕೋಶ (ನೋಡಿ ಕೀ. ೧೧೫ರ ಟಿಪ್ಪಣಿ) ಅಥವಾ ತುರ್ಯಾತೀತಾವಸ್ಥೆಯಾದ ಉನ್ಮನೀ ಅವಸ್ಥೆ.

ನು. ೩ : **ಆರಾರು... ನಿತ್ಯದಿ** : ೬ ಘ ೬ = ೩೬, ೩೬ ಘ ೨ = ೭೨ ಹೀಗೆ ೭೨ - ಸಾವಿರ ನಾಡಿಗಳೆಂಬ ದಾರಿಯಲ್ಲಿ ವಾಯುದೇವರು ಉಚ್ಛ್ವಾಸ ನಿಶ್ವಾಸಗಳ ಮೂಲಕ ಹೋಗಿ ಬರುತ್ತಾ ದಿನವೊಂದಕ್ಕೆ ೬ ಘ ೩ = ೧೮, ೧೮ + ೩ = ೨೧. ಹೀಗೆ ಇಪ್ಪತ್ತೊಂದು ಸಾವಿರದ ಆರುನೂರು ಶ್ವಾಸಜಪಗಳನ್ನು ಮಾಡುತ್ತಿರುತ್ತಾರೆ.

ಆರುನಾಲ್ಕು ಮಂದಿ.... ಗಾರುಮಾಡುತಿಪ್ಪರೊ : ಈ ಶರೀರಕ್ಕೆ ೨೪ ಮಂದಿ ಪಾರುಪತ್ಯೆಗಾರರು : ಪಂಚಭೂತಗಳು, ಪಂಚತನ್ಮಾತ್ರೆಗಳು, ಪಂಚ ಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಅಥವಾ ೬+೪=೧೦ ಇಂದ್ರಿಯಗಳು. ಇವಲ್ಲದೆ ತತ್ವಗಳು, ಜಡಗಳು, ಅವುಗಳ ಅಭಿಮಾನಿ ದೇವತೆಗಳು ಸೇರಿ ಎಂಟು ರೀತಿಯಿಂದ, ಎಂದರೆ ಅಷ್ಟಮದಗಳಿಂದ (ಅನ್ನಮದ, ಅರ್ಥಮದ, ಅಹಂಕಾರಮದ, ವೈಭವಮದ, ಸಾಹಸಮದ, ಧಾತ್ರಿವಶಮದ, ಪ್ರಾಯಮದ, ಮೋಹಮದ) ಜೀವರನ್ನು ಹಾಳು ಮಾಡುತ್ತಾರೆ.

ನು. ೪ : **ಒಬ್ಬ ಬೆಳಕು...... ಗೈಸುವ** : ವಿಶ್ವನಾಮಕ ಪರಮಾತ್ಮ ದಕ್ಷಣಾಕ್ಷಿಸ್ಥಿತನಾಗಿ ಜಾಗ್ರದವಸ್ಥೆಗೆ ಪ್ರೇರಕನಾಗುತ್ತಾನೆ. ಪ್ರಾಜ್ಞನಾಮಕ ಪರಮಾತ್ಮ ಹೃದಯದಲ್ಲಿದ್ದು ಕತ್ತಲೆಯೆಂಬ ಗಾಢನಿದ್ದೆಗೆ ಪ್ರೇರಿಸುವನು.

ಒಬ್ಬ ಎರಡೂ.... ನೋಡುವ : ತೈಜಸನಾಮಕ ಪರಮಾತ್ಮ ಕಂಠದಲ್ಲಿದ್ದು ಎಚ್ಚರವೂ ಅಲ್ಲದ ನಿದ್ರೆಯೂ ಅಲ್ಲದ ಸ್ವಪ್ನಾವಸ್ಥೆಗೆ ಪ್ರೇರಕನಾಗಿದ್ದಾನೆ. ತುರ್ಯನಾಮಕ ಪರಮಾತ್ಮ ಶಿರಸ್ಸಿಗೆ ಹನ್ನೆರಡು ಅಂಗುಲ ಮೇಲೆ ಇದ್ದು, ಆನಂದವನ್ನುಂಟು ಮಾಡುತ್ತಾನೆ.

ಒಬ್ಬ ಮೂವರ.... ತಬ್ಬಿಬ್ಬಿಗೊಳಗಾದೆ : ಒಬ್ಬನಾದ ಪರಮಾತ್ಮನು ಆತ್ಮ, ಅಂತರಾತ್ಮ, ಜ್ಞಾನಾತ್ಮ ರೂಪಗಳಲ್ಲಿ ವ್ಯಾಪಿಸಿರುತ್ತಾನೆ. ಆ ಸಾಕ್ಷೀಭೂತನಾದ ('ಸಾಕ್ಷೀಚೇತಾ' ಶ್ವೇತಾಶ್ವತರೋಪನಿಷತ್) ಪರಮಾತ್ಮನನ್ನು ಕಾಣದೆ ತಬ್ಬಿಬ್ಬಾದೆ.

ನು. ೫ : **ಆರು ಹತ್ತರ ಮೂಲದಿ** : ಪಂಚಭೂತಗಳು, ಪಂಚತನ್ಮಾತ್ರೆಗಳು, ಪಂಚಜ್ಞಾನೇಂದ್ರಿಯಗಳು ಮತ್ತು ಮನಸ್ಸು.

ಆರು ಮಂದಿ : ಅರಿಷಡ್ವರ್ಗಗಳು (ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ).

ಆರು ಮೂರು ವಿಧದ ಸೋಪಸ್ಕರ : ನವವಿಧಭಕ್ತಿ (ನೋಡಿ ಕೀ. ೧೨೩ರ ಟಿಪ್ಪಣಿ) – ಇವು ಮುಕ್ತಿಮಾರ್ಗದ ಪಾಥೇಯವಿದ್ದಂತೆ.

ಇಬ್ಬರು ಸವತೇರು : ಆಶಾ, ಲಜ್ಜಾ (ವಿದ್ಯಾ, ಅವಿದ್ಯಾ ?)

ನು. ೬ : **ಹಡೆದತಾಯಿ** : ಮೂಲ ಪ್ರಕೃತಿಯಾದ ಮಾಯಾದೇವಿ.

ಒಡ ಹುಟ್ಟಿದೈವರು : ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ಪಂಚಪ್ರಾಣರು.

ಹಿರಿಯಣ್ಣ : ಮುಖ್ಯಪ್ರಾಣ : ಅವನ ಮಡದಿಯಾದ ಭಾರತಿದೇವಿಯು ತನ್ನ ಒಡವೆಗಳಾದ ಜ್ಞಾನ, ಭಕ್ತಿ, ವೈರಾಗ್ಯಗಳಲ್ಲಿ ಒಂದನ್ನೂ ನನಗೆ ಕೊಡುವುದಿಲ್ಲ.

ನು. ೭ : **ಅತ್ತೆ ಅತ್ತಿಗೆಯು** : ಸಂಶಯ, ವಿಪರ್ಯ.

ನೃಪನ ಭೃತ್ಯರು : ಯಮನ ಆಳುಗಳು.

ಹೆತ್ತಯ್ಯ : ಲೋಕಜನಕ, ತಂದೆ. ಸಂಶಯಾದಿಗಳ ಮುಸುಕು ಮುಚ್ಚಿ ಭವದಲ್ಲಿ ತೊಳಲಾಡುತ್ತಿರುವ ಜೀವರಿಗೆ ಮೃತ್ಯು ಬಾಧೆಯನ್ನು ಬಿಡಿಸಿ ಅವರನ್ನು ವೈಕುಂಠಕ್ಕೆ ಸೇರಿಸು ಎಂದು ಇಲ್ಲಿಯ ಭಾವ.

ನು. ೮ : **ಮನೆಯೊಳು** : ಈ ದೇಹದಲ್ಲಿ. ನಾಳಿನ ಗ್ರಾಸಮುಂದಿನ ಜನ್ಮಕ್ಕೆ ಸಾಧನೆ.

ಋಣದಿಂದ.... ಕಾಣೆ : 'ಋಣ' ಎಂದರೆ ಸಾಲ. ಇದು ಮೂರು ಬಗೆಯಾದದ್ದು. ದೇವ ಋಣ, ಋಷಿ ಋಣ, ಪಿತೃಋಣ. ಇವುಗಳಿಂದ ಬಿಡುಗಡೆ ಹೊಂದುವ, ಪಾರಾಗುವ ರೀತಿ ತಿಳಿಯದು.

ನು. ೯ : ನಾನು ಕಷ್ಟಪಟ್ಟರೆ ಜನ ನಿನ್ನನ್ನು ಆಡಿಕೊಂಡು ನಗುತ್ತಾರೆ. ಆದ್ದರಿಂದ ನಿನ್ನ ಭಕ್ತನಾದ ನನ್ನನ್ನು ಉದ್ಧರಿಸುವ ಹೊಣೆ ನಿನ್ನದು ಎಂಬ ಭಾವ.

೯೭

ಘೋರತರ ಮೃತ್ಯುವಿನಿಂದ ಕಾಪಾಡು ಎಂದು ಭಗವಂತನನ್ನು ಮೊರೆಯಿಟ್ಟಿದ್ದಾರೆ.

೯೮

ಸರ್ವ ಕರ್ತೃತ್ವ ಶ್ರೀಹರಿಯೆಂಬ ಜ್ಞಾನವನ್ನು ತಮಗೆ ಕೊಟ್ಟು ಕಾಪಾಡಬೇಕೆಂಬ ಪ್ರಾರ್ಥನೆ ಈ ಉಗಾಭೋಗದ ವಸ್ತು.

೯೯

ಶ್ರೀಹರಿಯ ಸ್ವಾತಂತ್ರ್ಯವನ್ನೂ ಜೀವಿಗಳ ಅಸ್ವಾತಂತ್ರ್ಯವನ್ನೂ ಕುರಿತ ಸುಳಾದಿ. ಶ್ರೀಹರಿಯ ಅಧೀನದವರಾದ ಜೀವಿಗಳ ಹೀನಕರ್ಮಗಳನ್ನೆಲ್ಲ ಹಿಮ್ಮೆಟ್ಟಿಸಿ, ಅವನ ಸಂದರ್ಶನಾನಂದವನ್ನು ಇತ್ತು, ಅಹಂಕಾರವನ್ನು ಹೋಗಲಾಡಿಸಿ ಕಾಪಾಡಬೇಕೆಂಬುದು ದಾಸರ ಕೋರಿಕೆ.

೧೦೦

ಕಂಸನ ಆದೇಶದಂತೆ ಬಿಲ್ಲಹಬ್ಬಕ್ಕೆಂದು ಅಕ್ರೂರ ಬಂದು ಶ್ರೀಕೃಷ್ಣನನ್ನು ಮಧುರೆಗೆ ಕರೆದುಕೊಂಡು ಹೋದ ಸಂದರ್ಭದಲ್ಲಿ ನೊಂದ ಗೋಕುಲದ ಗೋಪಿಯರ ವಿರಹತಾಪ ಈ ಕೀರ್ತನೆಯ ವಸ್ತು. ಕೃಷ್ಣ ತಮ್ಮನ್ನು ತೊರೆದು ಹೋಗಲು ಕಾರಣವೇನಿರಬಹುದೆಂದು ಅವರೆಲ್ಲ ಒಂದಾಗಿ ಯೋಚಿಸುತ್ತಾರೆ. ಅವರ ಮುಗ್ಧತೆ, ನಿಷ್ಕಪಟತೆಗಳು ಅವರ

ಯೋಚನೆಗಳೊಂದಿಗೇ ಹರಿದಿವೆ. ತಮ್ಮ ಕಳವಳ, ಪರಿತಾಪ, ಅತೃಪ್ತಿ, ಅಸಹಾಯಕತೆಗಳನ್ನು ಕೃಷ್ಣನ ಗೆಳೆಯನಾದ ಉದ್ಧವನ ಎದುರಿನಲ್ಲಿ ತೋಡಿಕೊಂಡಿದ್ದಾರೆ.

ಉದ್ಧವ : ಶ್ರೀಕೃಷ್ಣನ ಮಂತ್ರಿ, ಸ್ನೇಹಿತ, ವಸುದೇವನ ತಮ್ಮನಾದ ದೇವಭಾಗನ ಮಗ. ಕೃಷ್ಣ ಮಥುರೆಯಲ್ಲಿ ಕಂಸನನ್ನು ಕೊಂದ ಸಮಾಚಾರವನ್ನು ಗೋಕುಲಕ್ಕೆ ತಿಳಿಸಿದವ (ಪು. ನಾ. ಚೂ. ಪು. ೫೮).

ನು. ೨ : **ಅಕ್ರೂರ** : ಕಂಸನ ಅಷ್ಟಮಂತ್ರಿಗಳಲ್ಲಿ ಒಬ್ಬ. ಶ್ರೀಕೃಷ್ಣ ಬಲರಾಮರನ್ನು ಮಧುರೆಗೆ ಕರೆತರುತ್ತಿದ್ದಾಗ ಯಮುನಾ ನದಿಯಲ್ಲಿ ಸ್ನಾನಮಾಡುತ್ತಿದ್ದ ಕೃಷ್ಣನ ದಿವ್ಯರೂಪ ಅಕ್ರೂರನಿಗೆ ಕಾಣುತ್ತದೆ (ಪು. ನಾ. ಚೂ. ಪು ೧-೨).

ನು. ೩ : **ಸ್ವರಮಣ** : ತನ್ನಲ್ಲಿಯೇ ಆನಂದವನ್ನು ಅನುಭವಿಸುವವನು. "ಲಕ್ಷ್ಮೀ ಭುಜಾಂತರಗತಃ ಸ್ವರತ್ಯೋಪಿಚಾಗ್ರೇ" (ಭಾ.ತಾ.ನಿ. ೧, ಪ. ೨).

೧೦೧

ತಮ್ಮೆಲ್ಲ ವರ್ತನೆಗಳಿಗೂ ಸುಖ, ದುಃಖಾದಿಗಳಿಗೂ ಕಾರಣನಾದಂತಹ ಶ್ರೀಹರಿಯನ್ನು ಕಾಯಾವಾಚಾಮನಸಾ ಮೊರೆ ಹೊಕ್ಕಿದ್ದಾರೆ, ಗೋಪಾಲದಾಸರು. ಹರಿಗಲ್ಲದ್ದು ತಮಗೆ ಬೇಡ, ಹರಿಯನ್ನುಳಿದು ಅನ್ಯದೈವಕ್ಕೆ ತಲೆಬಾಗುವುದಿಲ್ಲವೆಂಬ ತಮ್ಮ ದೃಢ ನಿರ್ಧಾರವನ್ನು ವ್ಯಕ್ತಪಡಿಸಿದ್ದಾರೆ. ಪರಮಾತ್ಮ ತಮ್ಮನ್ನು ಹೇಗೆ ಇರಿಸುತ್ತಾನೋ ಹಾಗೆ ತಾವು ಇರುವ ಹಂಬಲ ಅವರಿಗೆ.

ನು. ೪ : **ಶತಾನಂದ** : ಒಬ್ಬ ಋಷಿ. ಸಪ್ತರ್ಷಿಗಳಲ್ಲಿ ಒಬ್ಬನಾದ ಗೌತಮ ಮುನಿಯಿಂದ ಅಹಲ್ಯೆಯಲ್ಲಿ ಜನಿಸಿದವನು (ಪು. ನಾ. ಚೂ. ಪು. ೫೯೬). ಅಂತಹ ಋಷಿಯೇ ಕಾಣಲು ಸಾಧ್ಯವಾಗದವನನ್ನು ನನ್ನಂತಹ ಹುಲುಮನುಜ ಕಾಣಲು ಸಾಧ್ಯವಿಲ್ಲ ಎಂಬ ಭಾವ.

ನು. ೫ : ಪರಸ್ಪರರ ಸಂಬಂಧವನ್ನೂ ದಾಸತ್ವವಿಲ್ಲದ ಈಶತ್ವ ಹಾಗೂ ಈಶತ್ವವಿಲ್ಲದ ದಾಸತ್ವ ಎರಡೂ ಪ್ರಯೋಜನವಿಲ್ಲವೆಂಬುದನ್ನೂ ಸ್ಪಷ್ಟಪಡಿಸುತ್ತಾರೆ.

ಕ್ಲೇಶಕೊಬ್ಬನ ಮಾಡಿ ಕ್ಲೇಶರಹಿತನಾಗಿ – ಲಿಂಗದೇಹ ಕ್ಲೇಶಕ್ಕೊಳಗಾಗುತ್ತದೆ ; ದೇಹಿಯಲ್ಲ.

ನು. ೬ : ಶ್ರೀಹರಿಯ ಅನಿಮಿತ್ತ ಬಾಂಧವ್ಯವನ್ನು ಎತ್ತಿ ಹಿಡಿಯುತ್ತಾರೆ.

ನು. ೭ : ತಮ್ಮ ಸರ್ವಸ್ವವೂ ಶ್ರೀಹರಿಯೆಂದು ಅವನನ್ನೇ ಮೊರೆಹೊಕ್ಕಿದ್ದಾರೆ.

೧೦೨

ಸಕಲವೂ ಶ್ರೀಹರಿಯ ಅಧೀನವೆಂಬ ಭಾವ ಇಲ್ಲಿದೆ. ಯಾವುದು ಶ್ರೀಹರಿ ಯಿಂದ

ದತ್ತವಾದುದು ಎಂದು ಗುರುತಿಸುವಲ್ಲಿ ತಮ್ಮ ಅಸಾಮರ್ಥ್ಯವನ್ನು ತೋಡಿಕೊಂಡಿದ್ದಾರೆ ದಾಸರು.

೧೦೩

ತಾವು ಮಾಡುವ ಎಲ್ಲ ಕರ್ಮಗಳಿಗೂ ಹರಿ ಮೂಲವೆಂದು ತಿಳಿದು, ಅವನನ್ನು ನಂಬಿದರೆ ಅವನು ಎಂದೆಂದಿಗೂ ಕೈಬಿಡನೆಂಬುದು ಈ ಉಗಾಭೋಗದ ಆಶಯ. ಶ್ರಮ ಕಡಿಮೆ, ಫಲ ಅಧಿಕವಾದ ಈ ತಿಳಿವಳಿಕೆಯಿಂದ ದಿನದಿನಕ್ಕೆ ಮನಸ್ಸು ಹದಗೊಳ್ಳುತ್ತದೆ.

೧೦೪

ಪರಗತಿಯ ಚಿಂತೆಯಿಲ್ಲದೆ ಸಂಸಾರದಲ್ಲಿ ಮುಳುಗಿದ ತಮ್ಮನ್ನು ತಾವು ಎಚ್ಚರಿಸಿಕೊಂಡು ಮುಕುಂದನ ಪಾದಸೇವೆ ಮಾಡಬೇಕೆಂದುಕೊಂಡಿದ್ದಾರೆ.

೧೦೫

ಸಾಂಸಾರಿಕ ಜೀವನದಲ್ಲಿ ಮುಳುಗಿ ಮುನಿಗಳಾದಿಯಾಗಿ ಅನೇಕರು ನಾಶ ಹೊಂದಿದರು. ಆದ್ದರಿಂದ ತಮ್ಮನ್ನು ಗೋಪಾಲವಿಠಲನ ಗುಣಚಿಂತನೆಯಲ್ಲಿ ಇರಿಸೆಂದು ದಾಸರು ಪ್ರಾರ್ಥಿಸಿದ್ದಾರೆ.

೧೦೬

ಶ್ರೀಹರಿ ಸರ್ವವ್ಯಾಪ್ತ, ಸರ್ವರಂತರ್ಗತ ಎಂಬುದು ಈ ಸುಳಾದಿಯ ವಸ್ತು. ಈ ಶರೀರದಲ್ಲಿ ಸಪ್ತರೂಪದಲ್ಲಿ ಅಡಗಿ, ನಿಯಾಮಕನಾಗಿರುವ ಶ್ರೀಹರಿಯನ್ನು ದಾಸರು ತಮ್ಮನ್ನು ಲೋಕದ ಆಸೆ ಆಮಿಷಗಳಲ್ಲಿಟ್ಟು ಕುದಿಸಬೇಡ ಎಂದು ಬೇಡಿಕೊಂಡಿದ್ದಾರೆ.

ನು. ೪ : ಸಪ್ತಾವರಣ – (ನೋಡಿ : ಕೀ ೧೧೫ರ ಟಿಪ್ಪಣಿ)

ಸಪ್ತಮದ್ವಾರಗಳು – ಪಂಚೇಂದ್ರಿಯಗಳು + ಮನಸ್ಸು, ಬುದ್ಧಿ.

ಸಪ್ತಮರೂಪ – ಶುಕ್ಲ, ನೀಲ, ಪೀತ, ರಕ್ತ, ಹರಿತ, ಕಪಿಶ, ಚಿತ್ರ.

ಸಪ್ತೆರಡು ಭುವನ – ಹದಿನಾಲ್ಕು ಲೋಕ. (ನೋಡಿ : ಕೀ. ೧೫೫ರ ಟಿಪ್ಪಣಿ)

ನು. ೫ : ದಶಾವತಾರಗಳ ವಿವರ (ನೋಡಿ : ಕೀ. ೧೨೩ರ ಟಿಪ್ಪಣಿ)

ನು. ೬ : ಹರಿಯ ರೂಪದ ಆದಿಅಂತ್ಯಗಳನ್ನು ಬಣ್ಣಿಸಲು ದಾಸರ ಅಸಾಮರ್ಥ್ಯ.

ನು. ೭ : ಭಕ್ತರು ಬೇಡಿದಷ್ಟೂ ಸ್ತುತಿಸಿದಷ್ಟೂ ಭಗವಂತನ ಮಹಿಮೆ ಅಕ್ಷಯವಾಗುತ್ತದೆಂಬ ಭಾವ.

೧೦೭

ಎಲ್ಲಕ್ಕೂ ಹರಿಯೇ ಮೂಲವೆಂದರಿತವ ಜ್ಞಾನಿ : ತನ್ನಿಂದಲೇ ಎಲ್ಲ ಎನ್ನುವವ ಅಜ್ಞಾನಿ, ದಾಸರ ದೃಷ್ಟಿಯಲ್ಲಿ.

ನು. ೨ : ಹರಿಯನ್ನು ಅರಿತು ಮಾಡದ ಕರ್ಮವೆಲ್ಲ ವ್ಯರ್ಥ.

ನು. ೩ : ಹರಿಯ ಪ್ರೇರಣೆಯಿಲ್ಲದೆ ತೃಣವೂ ಚಲಿಸಲಾರದು ಎಂಬ ಅಭಿಪ್ರಾಯ.

ನು. ೫ : ಹರಿಯನ್ನು ಮರೆತು ಮಾಡುವ ಕರ್ಮ ವ್ಯರ್ಥ. ಹರಿಯನ್ನು ಅರಿತವರನ್ನು ಅವನು ಸದಾಕಾಲ ರಕ್ಷಿಸುವನು.

ನು. ೬ : ಜೀವನಿಗೆ ಕರ್ತೃತ್ವವೆಂಬುದು ಹರಿಯಿಂದ ದತ್ತವಾದದ್ದು ಎಂದು ತಿಳಿದ ಭಕ್ತರ ಮನದ ವ್ಯಾಕುಲವನ್ನು ದೂರಮಾಡುವನು ಶ್ರೀಹರಿ.

ನು. ೭ : ಎಲ್ಲವನ್ನೂ ಹರಿ ಮಾಡಿಸಿದ ಎಂಬ ಭಾವನೆ ಬಲವಾಗಿರಬೇಕು.

೧೦೮

ಅವಿದ್ಯೆ ತಮ್ಮನ್ನು ಆವರಿಸಿದೆ : ಅದನ್ನು ಹೊತ್ತಿಸಲು ತಮಗೆ ಜ್ಞಾನವೆಂಬ ಅಗ್ನಿಯ ಬಲ ಸಾಲದು. ವಿಷಯಗಳಲ್ಲಿ ಮುಳುಗಿರುವ ತಮ್ಮ ಮನ ಶ್ರೀಹರಿಯತ್ತ ತಿರುಗದೆ ತಮ್ಮ ಜನ್ಮವೇ ವ್ಯರ್ಥವಾಗುತ್ತಿದೆ ಎಂದಿದ್ದಾರೆ ದಾಸರು.

ನು. ೨ : ಹರಿಯ ಸ್ಮೃತಿಯೇ ಪುಣ್ಯ ; ಅವನ ವಿಸ್ಮೃತಿಯೇ (ಮರೆವು) ಪಾಪ.

ನು. ೩ : ಭಗವಂತನ ಕರುಣೆ ಒಂದಿದ್ದರೆ ಮನುಷ್ಯನ ಪಾಪವೆಲ್ಲ ಕ್ಷಣಮಾತ್ರದಲ್ಲಿ ನಾಶವಾಗುತ್ತವೆಂಬ ನಂಬಿಕೆ.

ನು. ೪ : ಭಗವಂತ ಆಡಿಸಿದಂತೆ ಮನುಷ್ಯ ಆಡುವನೆಂಬುದನ್ನು 'ಮರ್ಕಟ ಕಿಶೋರ ನ್ಯಾಯ'ದ ಮೂಲಕ ಹೇಳಿರುವುದು ಚೆನ್ನಾಗಿದೆ.

ನು. ೬ : ತಮ್ಮ ಜೀವಿತದ ಪ್ರಾರಂಭದ ವರ್ಷಗಳಲ್ಲಿ ತಾವು ಅನುಭವಿಸಿದ ಕಷ್ಟಕಾರ್ಪಣ್ಯಗಳನ್ನು ನೆನೆದು, ಕಡೆಹಾಯಿಸೆಂದು ಆ ಕರುಣಾಮಯಿಯಾದ ಭಗವಂತನನ್ನು ಬೇಡಿದ್ದಾರೆ.

ನು. ೭ : ತಮಗೆ ಈ ಶರೀರವನ್ನು ತಂದಿತ್ತ ಹರಿಯೇ ಅದರಿಂದ ನಾನಾ ಸಾಧನೆಗಳನ್ನು ಮಾಡಿಸಬೇಕೆಂಬ ಆಶಯ.

೧೦೯

ಈ ಜಗತ್ತಿನಲ್ಲಿ ಯಾರಿಗೆ ಯಾರೂ ಆಗುವುದಿಲ್ಲ . ಶ್ರೀಹರಿಯೇ ಸರ್ವವ್ಯಾಪಾರಕ್ಕೂ

ಕಾರಣಕರ್ತನೆಂದು ತಿಳಿದವರಿಗೆ ಅವನ ಕರುಣೆ ಪ್ರಾಪ್ತವಾಗುತ್ತದೆಂಬುದು ಈ ಉಗಾಭೋಗದ ವಸ್ತು.

೧೧೦

ಈ ನಶ್ವರ ದೇಹವನ್ನು ನಂಬಿ ಕೆಡಬೇಡ, ಮಮತೆಯನ್ನು ಬಿಟ್ಟು, ಹೃಷಿಕೇಶನನ್ನು ಸ್ಮರಿಸಿ ಮುಕ್ತಿ ಪಡೆ ಎಂಬುದಾಗಿ ಮನಸ್ಸನ್ನು ದಾಸರು ಎಚ್ಚರಿಸಿದ್ದಾರೆ.

೧೧೧

ಹರಿದಾಸರ ಸಂಗ, ಸುಖಸಂತೋಷಗಳನ್ನುಂಟು ಮಾಡುತ್ತದೆಂಬುದು ಈ ಕೀರ್ತನೆಯ ಅಭಿಪ್ರಾಯ. ಹರಿದಾಸರ ಬಾಹ್ಯವೇಷ ಹಾಗೂ ಅಂತರಂಗದ ತುಡಿತಮಿಡಿತಗಳ ಪರಿಚಯ ಮಾಡಿಕೊಟ್ಟಿದ್ದಾರೆ ಗೋಪಾಲದಾಸರು.

೧೧೨

ಈ ಸುಳಾದಿಯಲ್ಲಿ 'ಮಡಿ'ಯ ನಿಜವಾದ ಅರ್ಥವನ್ನು ಹೇಳಹೊರಟಿದ್ದಾರೆ, ದಾಸರು. ಗೋಪಾಲವಿಠಲ ಸರ್ವವ್ಯಾಪ್ತನೆಂಬ ತಿಳಿವಳಿಕೆಯೇ ನಿಜವಾದ ಮಡಿ ಎನ್ನುತ್ತಾರೆ. ಹಾಗೆ ತಿಳಿದು ಮಡಿ ಮಾಡುವವನೇ ಮಡಿವಂತ ; ಡಾಂಭಿಕತನದಿಂದ ಮಾಡುವ ಪೂಜೆ ಪುರಸ್ಕಾರಗಳಿಂದ ಏನೂ ಸಾಧಿತವಾಗುವುದಿಲ್ಲ – ಎಂಬ ತಮ್ಮ ಅಭಿಪ್ರಾಯಗಳನ್ನು ಪುರಾಣವ್ಯಕ್ತಿಗಳ ಉದಾಹರಣೆಗಳಿಂದ ಸ್ಪಷ್ಟೀಕರಿಸಿದ್ದಾರೆ.

ನು. ೨ : **ಕರಿರಾಜ** ; **ಧ್ರುವರಾಯ** : (ನೋಡಿ : ಕೀ. ೧೫೭ರ ಟಿಪ್ಪಣಿ)

ಅಜಾಮಿಳ : ಈತ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವನಾದರೂ ಧರ್ಮಪತ್ನಿಯನ್ನೂ ತಂದೆತಾಯಿಗಳನ್ನೂ ತ್ಯಜಿಸಿ ಶೂದ್ರ ಸ್ತ್ರೀಯೊಬ್ಬಳಲ್ಲಿ ಮೋಹಗೊಂಡು ದುರಾಚಾರ ಮಗ್ನನಾಗಿದ್ದ. ಈತ ತನ್ನ ಕೊನೆಗಾಲದಲ್ಲಿ ತನ್ನ ಮಗ ನಾರಾಯಣನನ್ನು 'ನಾರಗ' ಎಂದು ಕರೆದ. ಆ ಮೂಲಕ ಶ್ರೀಹರಿ ಅವನಿಗೆ ಸದ್ಗತಿಯಿತ್ತ (ಭಾಗವತ ಅ. ೧,೨).

ಪ್ರಹ್ಲಾದ (ನೋಡಿ : ಕೀ. ೧೫೫ರ ಟಿಪ್ಪಣಿ).

ನು. ೩ ಸನ್ನಡತೆ ಹಾಗೂ ಸದಾಚಾರಗಳನ್ನು ಹೇಳಿದ್ದಾರೆ.

ನು. ೪ : ನಿತ್ಯ ಸಂಸಾರಿಗಳಿಗೆ ದೂರವಾದ, ದೈತ್ಯರಿಗೆ ಸಾಧ್ಯವೇ ಇಲ್ಲದ ಮುಕ್ತಿಯನ್ನು ಶ್ರೀಹರಿಯ ಭಕ್ತರು ತಮ್ಮ ತಮ್ಮ ಶಕ್ತ್ಯಾನುಸಾರ ಪಡೆಯಲು ಸಮರ್ಥರು.

ನು. ೫ : **ವ್ಯಾಘ್ರನ ನೋಡಿ ನರಿಸುಟ್ಟುಕೊಂಡಂತೆ** : ಹುಲಿಯ ಮೈಪಟ್ಟೆಯನ್ನು ನೋಡಿ, ತಾನೂ ಹಾಗಾಗಬೇಕೆಂದು ಮೈಸುಟ್ಟುಕೊಂಡು ನೋವು ಅನುಭವಿಸಿದಂತೆ.

ಅಂದರೆ, ಹರಿಯ ಭಕ್ತರು ಆಡಿದಂತೆ ಇತರರೂ ಆಡಲು ಹೊರಟರೆ ಏನೂ ಪ್ರಯೋಜನವಿಲ್ಲ ; ಹರಿಭಕ್ತನಲ್ಲದವನ ಪಾಡು ನರಿಯ ಪಾಡಾಗುತ್ತದೆ.

೧೧೩

ಮುಕ್ತಿಯನ್ನು ಗಳಿಸುವುದು ಸುಲಭವಲ್ಲ ; ಲೌಕಿಕ ವ್ಯಾಪಾರಗಳನ್ನು ದೃಢಮನಸ್ಸಿನಿಂದ ತ್ಯಜಿಸಿ, ಸಜ್ಜನಿಕೆಯಿಂದ ಗೋಪಾಲವಿಠಲನನ್ನು ನಂಬಿದವರಿಗೆ ಮಾತ್ರ ಮುಕ್ತಿ ದೊರೆಯಬಲ್ಲುದೆನ್ನುತ್ತಾರೆ, ದಾಸರು.

೧೧೪

ಸಕಲ ವ್ಯಾಪಾರಗಳನ್ನು ಮಾಡಿಸುವ, ಸರ್ವವ್ಯಾಪ್ತನಾದ, ಸರ್ವಸ್ವತಂತ್ರನಾದ, ಕರುಣಾಳು ಶ್ರೀಹರಿಯಿರಲು ತಮಗೆ ಅನ್ಯರ ಗೊಡವೆ ಬೇಡವೆನ್ನುತ್ತಾರೆ ಗೋಪಾಲದಾಸರು.

ನು. ೧ : **ಸಪುತದ್ವಿಲೋಕ** : ಹದಿನಾಲ್ಕು ಲೋಕಗಳು (ನೋಡಿ : ಕೀ. ೧೨೩ರ ಟಿಪ್ಪಣಿ).

ಸಪುತದ್ವೀಪ : ಜಂಬುದ್ವೀಪ, ಪ್ಲಕ್ಷದ್ವೀಪ, ಕುಶದ್ವೀಪ, ಕ್ರೌಂಚದ್ವೀಪ, ಶಾಕದ್ವೀಪ, ಶಾಲ್ಮಲಿದ್ವೀಪ, ಪುಷ್ಕರದ್ವೀಪ (ಶ್ರೀ. ನಿ. ಪು. ೨೧೭).

೧೧೫

ಅಪರೋಕ್ಷ ಜ್ಞಾನವನ್ನು ಗಳಿಸುವ ವಿಧಾನವನ್ನು ತಿಳಿಸುತ್ತಾ, ಶ್ರೀಹರಿಯ ಗುಣ, ರೂಪ, ಅವತಾರಾತಿಶಯಗಳನ್ನು ವರ್ಣಿಸಿದ್ದಾರೆ ('ಬೃಹತೀಸಹಸ್ರ'ದಲ್ಲಿ ಬರುವ ಪರಮಾತ್ಮನ ರೂಪಗಳ ವಿವರಗಳನ್ನು ನೋಡಿ). ಧ್ಯಾನದಿಂದ ಗೋಪಾಲವಿಠಲನನ್ನು ಒಲಿಸಿಕೊಳ್ಳುವ ರೀತಿಯನ್ನು ತಿಳಿಸಿದ್ದಾರೆ.

ನು. ೨ : **ಒಂದು ಮೂರುತಿ... ಎಲ್ಲ ಒಂದೆ ಮೂರ್ತಿಕಾಣೋ** : ಪರಮಾತ್ಮ ನಾನಾ ರೂಪದಿಂದ ನಾನಾ ಸ್ಥಳಗಳಲ್ಲಿದ್ದರೂ ಮೂಲತಃ ಒಂದೇ ರೂಪ. 'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್' ಎಂಬ ಈಶಾವಾಸ್ಯೋಪನಿಷತ್ತಿನ ಭಾವವನ್ನಿಲ್ಲಿ ಕಾಣಬಹುದು.

ನು. ೬ : **ಸೃಷ್ಟಿ, ಸ್ಥಿತಿ, ಲಯ ಕಾರಣ ಮೂರುತಿ** : ಶ್ರೀ ಹರಿ ಅನಿರುದ್ಧನೆಂಬ ಹೆಸರಿನಲ್ಲಿ ಸೃಷ್ಟಿಕಾರ್ಯವನ್ನೂ ಪ್ರದ್ಯುಮ್ನನಾಮಕನಾಗಿ ಸ್ಥಿತಿಕಾರ್ಯವನ್ನೂ ಸಂಕರ್ಷಣ ನಾಮಕನಾಗಿ ಲಯಕಾರ್ಯವನ್ನೂ ಮಾಡುತ್ತಾನೆಂಬ ನಂಬಿಕೆ (ಭಾ.ತಾ.ನಿ. ೧–೯).

೧೧೬

ಶ್ರೀಹರಿ ಎಲ್ಲರಲ್ಲಿಯೂ ನಿಂತು, ಬಗೆಬಗೆಯ ವ್ಯಾಪಾರಗಳನ್ನು ಮಾಡಿಸಿ, ಅವರಿಂದ

ಭಿನ್ನವಾಗಿ ನಿಂತು ಆ ಕರ್ಮಫಲಗಳನ್ನು ಅವರಿಗೇ ಉಣಿಸುತ್ತಾನೆಂಬ ತತ್ತ್ವದ ಪ್ರತಿಪಾದನೆಯಿದೆ ಇಲ್ಲಿ.

ನು. ೬ : **ತ್ರಿವಿಧಜೀವರು** : ಮುಕ್ತಿಯೋಗ್ಯರು, ತಮೋಯೋಗ್ಯರು, ನಿತ್ಯ ಸಂಸಾರಿಗಳು.

ತ್ರಿವಿಧಕರ್ಮ – ಸಂಚಿತ, ಆಗಾಮಿ, ಪ್ರಾರಬ್ಧ.

ತ್ರಿವಿಧಗುಣ – ಸತ್ವ, ರಜಸ್ಸು, ತಮಸ್ಸು.

ನು. ೭ : ಹರಿಯೇ ತಮ್ಮ ಸರ್ವಸ್ವ. ಅವನನ್ನು ಬಿಟ್ಟರೆ ಬೇರೆ ದೈವವಿಲ್ಲ.

೧೧೭

ಸರ್ವಾಂತರದಲ್ಲಿ ವ್ಯಾಪ್ತನಾಗಿ, ಅನಂತ ಅವತಾರಿಯಾಗಿ ಭಕ್ತರಿಗೆ ಒಡೆಯನಾಗಿ ಹಿತದಿಂದ ಪಾಲಿಸುವ ಶ್ರೀಹರಿ, ಅವನನ್ನು ತಮ್ಮ ಸಮಾನದವನೆಂದು ಭಾವಿಸಿದವರಿಗೆ ಹೀನಗತಿಗಳನ್ನು ಕೊಡುತ್ತಾನೆ ಎಂದಿದ್ದಾರೆ ದಾಸರು.

ನು. ೪ : ಶ್ರೀಹರಿ ಪ್ರಾಕೃತದೇಹರಹಿತ ; ಅಪ್ರಾಕೃತನೆಂಬ ತತ್ತ್ವ (ಪ್ರಕೃತಿಯನ್ನೂ ಮೀರಿದವನು).

ನು. ೫ : ಶ್ರೀಹರಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣನಾಮಕನಾಗಿ ಸೃಷ್ಟಿ, ಸ್ಥಿತಿ, ಲಯಾದಿಗಳನ್ನು ಮಾಡುತ್ತಾನೆ (ಭಾ.ತಾ.ನಿ.ಅ. ೧–೯).

ಮಗಳಿಗೆ ಪತಿಯಾದ ಮಗಳಿಗಳಿಯನಾದ : ಭೂಮಿಯನ್ನು ಸೃಷ್ಟಿಸಿ, ತಂದೆಯೆನಿಸಿಕೊಂಡ ಶ್ರೀಹರಿ, ಭೂದೇವಿಯನ್ನು ಮದುವೆಯಾಗುವ ಮೂಲಕ ಮಗಳಿಗೆ ಪತಿಯಾದ. ರಾಮಾವತಾರದಲ್ಲಿ ಭೂಮಿಯ ಮಗಳಾದ ಸೀತೆಯನ್ನು ಮದುವೆಯಾದುದರಿಂದ ಮಗಳಾದ ಭೂಮಿಗೇ ಅಳಿಯನೆನಿಸಿಕೊಂಡ.

ಮಗುವಾಗಿ ಗೋಪಿಯ ಮೊಲೆಯನುಂಡ : ಕೃಷ್ಣಾವತಾರ.

ನು. ೬ : ನಿತ್ಯನೂ ಸತ್ಯಸಂಕಲ್ಪನೂ ಆದ ಶ್ರೀಹರಿಯ ಆಜ್ಞೆಯ ಮೇರೆಗೆ ಎಲ್ಲ ದೇವತೆಗಳೂ ವರವನ್ನು ಕೊಡಬಲ್ಲರು. ತಾವೇ ಸ್ವತಂತ್ರರಲ್ಲ. ಎಲ್ಲವೂ ಹರಿಯಾಧೀನ.

೧೧೮

ಇದು ಶ್ರೀಹರಿಯ ಸರ್ವೋತ್ತಮತ್ವ ಹಾಗೂ ಸ್ವಾತಂತ್ರ್ಯಗಳನ್ನು ಸಾರುವ ಕೀರ್ತನೆ. ಹರಿ ಹೇಗೆ ಮುಖ್ಯನೋ ಅವನ ಪರಿವಾರದವರಾದ ದೇವಾಧಿದೇವತೆಗಳೂ ಹಾಗೆಯೇ ಮುಖ್ಯರು. ಇದನ್ನು ಅರಿತು ಅರ್ಚಿಸುವವರಿಗೆ ಮೋಕ್ಷಪ್ರಾಪ್ತಿ.

೧೧೯

ಸಕಲ ಜೀವಜಡತತ್ವಾದಿಗಳಲ್ಲಿ ಆನಂದಮಯನಾಗಿ ವ್ಯಾಪಿಸಿರುವ, ಸಕಲಚೇತನರಿಗೆ ಬಿಂಬಸ್ವರೂಪಿಯಾಗಿರುವ ಬಿಂಬರೂಪಿ ಶ್ರೀಹರಿಯ ಗುಪ್ತ ಉಪಾಸನಾ ಕ್ರಮವನ್ನು ಈ ಸುಳಾದಿಯಲ್ಲಿ ಹೇಳಿದ್ದಾರೆ.

ನು. ೨-೩ : ಭಿನ್ನ ಭಿನ್ನ ತತ್ತ್ವಗಳಲ್ಲಿ ಭಿನ್ನಭಿನ್ನರೂಪನಾಗಿ ಹರಿ ಪ್ರವೇಶಿಸಿರುವನೆಂಬ ಅಂಶ.

ನು. ೫ : ಸುಖದುಃಖಗಳನ್ನೆಲ್ಲ ಶ್ರೀಹರಿಯೇ ಉಣುವವ ಎಂದು ತಿಳಿದು ಉಪಾಸನೆ ಮಾಡಿದಾಗ ಶ್ರೀಹರಿ ಆ ಎಲ್ಲ ಭಿನ್ನರಸಗಳನ್ನೂ ಸುಖವಾಗಿ ಪರಿಣಮಿಸಿ ಜೀವರನ್ನು ಸುಖಪಡಿಸುತ್ತಾನೆ.

ನು. ೬ : ತಾರತಮ್ಯದಿಂದ ತತ್ತ್ವಾಭಿಮಾನಿ ದೇವತೆಗಳಿಗೆ ಶ್ರೀಹರಿ ವಹಿಸಿರುವ ಭಿನ್ನರಸಗಳ ವಿವರ ಹಾಗೂ ಮನುಷ್ಯನಿಗೆ ಭೌತಿಕ ರಸವನ್ನು ಅನುಗ್ರಹಿಸಿರುವನೆಂಬ ಅಂಶ.

ತ್ರಿವಿಧ ಮೂಲರಜಗಕೆ.... ವಿಟಪನಾಗಿ : ಮುಕ್ತಿ ಯೋಗ್ಯರು, ತಮೋ ಯೋಗ್ಯರು, ನಿತ್ಯ ಸಂಸಾರಿಗಳು – ಈ ಮೂರು ಬಗೆಯ ಜೀವರನ್ನುಳ್ಳ ಜಗತ್ತಿಗೂ ವಿಷ್ಣು ಮೂಲ ಕಾರಣನಾಗಿ ಆಶ್ರಯದಾತನಾಗಿ ಅವರನ್ನು ಪಾಲಿಸುತ್ತಾನೆ ಎಂಬ ಭಾವ.

೧೨೦

ಈ ಕೀರ್ತನೆಯಲ್ಲಿ ಜೀವನ ಪಾರತಂತ್ರ್ಯ, ದೇವನ ಸ್ವಾತಂತ್ರ್ಯ ; ಎಲ್ಲಕ್ಕೂ ಹರಿ ಮೂಲವೆಂಬ ಜ್ಞಾನ ; ಶ್ರೀಹರಿ ಬಿಂಬ, ಜೀವ ಪ್ರತಿಬಿಂಬ ಎನ್ನುವ ತಿಳುವಳಿಕೆ ಹಾಗೂ – ಪ್ರತಿಬಿಂಬಗಳ ಪರಸ್ಪರ ಭೇದ, ತಾರತಮ್ಯಾನುಸಾರ ಫಲಪ್ರಾಪ್ತಿ – ಇತ್ಯಾದಿ ಮಧ್ವಮತಗಳ, ತತ್ತ್ವಗಳ ತಿಳಿವಳಿಕೆಯನ್ನು ತಮಗಿತ್ತು ಕಾಪಾಡಬೇಕೆಂಬುದಾಗಿ ಶ್ರೀಹರಿಯನ್ನು ದಾಸರು ಪ್ರಾರ್ಥಿಸಿದ್ದಾರೆ.

೧೨೧

ಲೋಕದಲ್ಲಿ ಸಜ್ಜನರ ರಕ್ಷಣೆಗೆ ದುರ್ಜನರ ಆವಶ್ಯಕತೆಯೂ ಇದೆಯೆಂಬುದು ದಾಸರ ಅಭಿಪ್ರಾಯ. ತೆಂಗು, ಏಲಕ್ಕಿ, ಬಾಳೆ ಮೊದಲಾದ ಗಿಡಗಳ ರಕ್ಷಣೆಗೆಂದು ಜಾಲಿ ಮುಂತಾದ ಮುಳ್ಳುಕಂಟಿಗಳಿಂದ ಬೇಲಿ ಕಟ್ಟುತ್ತಾರೆ. ಹಾಗಿಯೇ ಕಣ್ಣಿಗೆ ರೆಪ್ಪೆಯಿದ್ದಂತೆ ಜೀವರಿಗೆ ಶ್ರೀಹರಿಯಿದ್ದು ಪರಿಪಾಲಿಸುತ್ತಾನೆ ಎನ್ನುತ್ತಾರೆ.

೧೨೨

ಚಿಂತೆಯನ್ನು ಮಾಡದೆ ಗೋಪಾಲವಿಠಲನನ್ನು ಚಿಂತನೆಗೆ ವಿಷಯೀಕರಿಸಿಕೊಳ್ಳುವ ಮೂಲಕ ನಿಶ್ಚಿಂತನಾಗಬೇಕೆಂಬುದು ದಾಸರ ಹಂಬಲ.

೧೨೩

ಹರಿಯ ಸರ್ವೋತ್ತಮತ್ವವನ್ನು ಸಾರುವುದು ಈ ಸುಳಾದಿಯ ಉದ್ದೇಶ. ಎಲ್ಲಕ್ಕೂ ಹರಿ ಮೂಲವೆಂದು ತಿಳಿದು ಅರ್ಚಿಸಬೇಕು ಎಂದಿದ್ದಾರೆ ದಾಸರು. ದೋಷಗಳ ಪಟ್ಟಿಯನ್ನು ಕೊಡುವ ಮೂಲಕ ಜೀವನಿಗೆ ಕರ್ತೃತ್ವವಿಲ್ಲ, ಜೀವೇಶರಿಗೆ ಐಕ್ಯವಿಲ್ಲ ಎಂಬಿತ್ಯಾದಿ ಮಧ್ವಮತತತ್ತ್ವಗಳನ್ನು ಜಾಣ್ಮೆಯಿಂದ ಬೋಧಿಸಿದ್ದಾರೆ.

ಬೊಮ್ಮಾಂಡವ್ಯಾಪ್ತನ.... ದೋಷ : ಹರಿ ನಿರಾಕಾರ ಎನ್ನುವುದು ದೋಷ ಎಂದು ಹೇಳಿ, ಹರಿಯ ಸಾಕಾರರೂಪವನ್ನು ಎತ್ತಿಹಿಡಿದಿದ್ದಾರೆ.

೧೨೪

ಈ ಶರೀರವನ್ನು ಒಳಗೊಂಡಂತೆ ಭೌತಿಕವಾದ ಯಾವ ವಸ್ತುವೂ ಶಾಶ್ವತವಲ್ಲ. ವ್ಯಕ್ತಿ, ಕ್ಷೇತ್ರ, ಬಂಧುಬಳಗ, ಸತಿಸುತರು ಎಲ್ಲವೂ ಕ್ಷಣಿಕ. ಸಾವು ಸಮನಿಸಿದಾಗ ಯಾವುದೂ ಜೊತೆಯಲ್ಲಿ ಬರುವುದಿಲ್ಲ. ಆದ್ದರಿಂದ ಸೃಷ್ಟಿ, ಸ್ಥಿತಿ, ಲಯಕರ್ತನಾದ ಶ್ರೀಹರಿಯನ್ನು ಒಡೆಯನೆಂದರಿತು ಪ್ರಾರ್ಥಿಸು ಎನ್ನುತ್ತಾರೆ ಗೋಪಾಲದಾಸರು.

ನು. ೨ : ನಮಗಲ್ಲದ್ದನ್ನು ನಮಗೆಂದು ತಿಳಿದು, ನಂಬಿ ನಡೆದರೆ ಹಾಸ್ಯಾಸ್ಪದ ಅಷ್ಟೆ.

ನು. ೩ : ಮೂರುದಿನದ ಅಶಾಶ್ವತವಾದ ಭಾಗ್ಯವನ್ನು ಸ್ಥಿರವೆಂದು ನಂಬಿ ಹರಿಯನ್ನು ಮರೆಯಬಾರದು.

೧೨೫

ಈ ಭೂಮಿಯನ್ನು ಆಳಿದ ಸಾವಿರಾರು ಮಂದಿ ರಾಜಮಹಾರಾಜರುಗಳು ಅಷ್ಟು ಸಂಪತ್ತು, ವೈಭೋಗಗಳಲ್ಲಿ ಮುಳುಗಿ ಏಳುತ್ತಿದ್ದರೂ ಸಾಯುವಾಗ ಒಂದು ತೃಣವನ್ನೂ ತಮ್ಮೊಂದಿಗೆ ಕೊಂಡೊಯ್ಯಲು ಸಮರ್ಥರಾಗಲಿಲ್ಲ. ಆದ್ದರಿಂದ ಈ ನಶ್ವರ ಜೀವನವನ್ನು ನಂಬದೆ, ಸರ್ವವೂ ಹರಿಯಾಧೀನವೆಂದು ನಂಬಿ ನಡೆದವರಿಗೆ ಗೋಪಾಲವಿಠಲ ಸರ್ವಾಭೀಷ್ಟಗಳನ್ನು ಪೂರೈಸುತ್ತಾನೆ.

೧೨೬

ಅನಂತ ಒಂದೇ ರೂಪ : ಒಂದೇ ಅನಂತ ರೂಪನಾದ ಹರಿಯ ಗುಣ,

ರೂಪ, ಕ್ರಿಯೆಗಳನ್ನು ಪರಿಚಯಿಸುವ ವಿಶ್ವರೂಪೋಪಾಸನೆ ಈ ಸುಳಾದಿಯ ವಸ್ತು.

ನು. ೨ : ಅವರವರ ಯೋಗ್ಯತೆಗನುಗುಣವಾಗಿ ಶ್ರೀಹರಿ ದರ್ಶನ ಕೊಡುತ್ತಾನೆ.

ನು. ೩ : ಶ್ರೀಹರಿ ತನ್ನ ವಿವಿಧ ಕ್ರಿಯೆಗಳಿಂದ ರೂಪನಾಗಿ ಏಕಕಾಲದಲ್ಲಿ ಹೇಗೆ ಗೋಚರಿಸಬಲ್ಲನೆಂಬುದನ್ನು ಈ ನುಡಿ ಸೂಚಿಸುತ್ತದೆ.

ನು. ೪ : ಮಹಾಭಾರತ ಯುದ್ಧ ಸಂದರ್ಭ ಹಾಗೂ ಗೀತೋಪದೇಶದ ಪ್ರಸಂಗ.

ನು. ೬ : ಅಣೋರಣೀಯಾನ್ ಮಹತೋ ಮಹೀಯಾನ್ ಎಂಬ ತೈತ್ತಿರೀಯ ಉಪನಿಷತ್ತಿನ ಭಾವ ಇಲ್ಲಿದೆ.

ನು. ೭ : ಚತುರವಿಂಶತಿ ತತ್ವ (ನೋಡಿ ಕೀ. ೯೬ರ ಟಿಪ್ಪಣಿ).

೧೨೭

ಮುಕ್ತಿಬೇಕೆನ್ನುವವರು ಹರಿಯಕರ್ತೃತ್ವ, ತಾರತಮ್ಯ ಪಂಚಭೇದಗಳನ್ನು ಅರಿಯಲು (ನೋಡಿ : ಕೀ. ೬೦ರ ಟಿಪ್ಪಣಿ) ಮಾಡಬೇಕಾಗಿರುವ ಸಾಧನೆಯ ರೀತಿಯನ್ನು ತಿಳಿಸುವುದೇ ಈ ಸುಳಾದಿಯ ವಸ್ತು.

ನು. ೧ : ಪರಮಾತ್ಮ ಬಿಂಬ ; ಜೀವ ಪ್ರತಿಬಿಂಬ. ಈ ಭೌತಿಕ ಶರೀರಕ್ಕೆ ನಾಶವುಂಟೇ ವಿನಾ ಆತ್ಮಕ್ಕೆ ಅಲ್ಲ. ಸಕಲ ಕರ್ಮಗಳನ್ನು ಹರಿ ಮಾಡಿಸುವನೆಂದರಿತು ತತ್ವಾದಿಗಳ ಪರಿಚಯ ಪಡೆದು ಸಾಧನೆ ಮಾಡಬೇಕೆನ್ನುತ್ತಾರೆ ದಾಸರು.

ನು. ೨-೩ : ಸಾಧನೆ ಮಾಡುವ ಕ್ರಮವನ್ನೂ ಫಲಾಫಲಗಳನ್ನೂ ತಿಳಿಸಿದ್ದಾರೆ.

ನು. ೪ : ಹರಿಯ ಸ್ವರೂಪವರ್ಣನೆ

ನು. ೫ : ಎಲ್ಲ ಕರ್ಮಗಳೂ ಹರಿಯಾಧೀನವೆಂಬ ತಿಳಿವು ; ನಿಷ್ಕಾಮ ಕರ್ಮಗಳ ಅಗತ್ಯಗಳನ್ನು ಹೇಳುತ್ತಾರೆ.

೧೨೮

ಎಲ್ಲವನ್ನೂ ಮಾಡಿಸುವವನು ಶ್ರೀಹರಿಯೆಂಬ ಜ್ಞಾನವಿಲ್ಲದೆ ಏನು ಕರ್ಮ ಮಾಡಿದರೂ ಆನೆ ತಿಂದ ಬೇಲದ ಹಣ್ಣಿನಂತೆ ವ್ಯರ್ಥ ಎನ್ನುತ್ತಾರೆ ಗೋಪಾಲದಾಸರು (ಆನೆ ಚಿಪ್ಪಿನ ಸಮೇತ ತಿಂದ ಬೇಲದ ಹಣ್ಣು ಲದ್ದಿಯಲ್ಲಿ ಹಾಗೆಯೇ ಬಿದ್ದು ಹೋಗುತ್ತದೆ).

ನು. ೧ : ನಾನು, ನನ್ನದು ಎಂಬ ಅಹಂಕಾರ ಮಮಕಾರಗಳನ್ನು ಬಿಟ್ಟು ಎಲ್ಲವೂ ಶ್ರೀಹರಿಯದೆಂಬ ಭಾವನೆ ಬೆಳೆಯಬೇಕು.

ನು. ೨ : **ಎಣ್ಣೆ.... ನಡೆವದೆ** : ಎಣ್ಣೆ ಎಷ್ಟು ಪ್ರಮಾಣದಲ್ಲಿದ್ದರೂ ಜೋಡಿ ದೀಪದ ಮುಂದೆ ಅದು ನಿಲ್ಲಲಾರದು ಎಂಬ ಭಾವ.

೧೨೯

ಚಲಾಚಲಗಳಲ್ಲಿ ಸರ್ವಕ್ರಿಯೆಗಳಲ್ಲಿ ಶ್ರೀಹರಿ ತಾನೇ ನಿಂತು ಜೀವಿಗಳ ಮುಖಾಂತರ ಎಲ್ಲವನ್ನೂ ಮಾಡಿಸುತ್ತಾನೆ, ಹರಿ ಸರ್ವಕರ್ತೃ : ಸರ್ವನಿಯಾಮಕನೆಂಬುದು ಈ ಸುಳಾದಿಯ ವಸ್ತು.

ನು. ೧-೨ : ಎಲ್ಲವನ್ನೂ ಹರಿ ಮಾಡಿಸುವನೆಂಬ ಭಾವನೆಯಿಂದ, ಭಾವ, ಕ್ರಿಯಾ, ದ್ರವ್ಯ ಎಲ್ಲವೂ ಹರಿಮಯವೆಂದು ತಿಳಿದು ಅವನನ್ನು ಧ್ಯಾನಿಸಬೇಕು.

ನು. ೩ : ಹರಿ ಮಾಡಿಸಿದಂತೆ ಮಾಡಬೇಕು.

ಷೋಡಶಕಳೆ.... ತಿಳಿ : ಪಂಚಭೂತಗಳು, ಪಂಚತನ್ಮಾತ್ರೆಗಳು, ಪಂಚ ಜ್ಞಾನೇಂದ್ರಿಯಗಳು ಮತ್ತು ಮನಸ್ಸು – ಈ ಹದಿನಾರು ಕಳೆಗಳುಳ್ಳ ಲಿಂಗಶರೀರದ (ಈ ಭೌತಿಕಶರೀರ) ಒಳಹೊರಗೆ ನಿಂತು ಸಕಲವನ್ನೂ ಮಾಡಿಸುತ್ತಿರುವ ಹರಿಯ ಮಹಿಮೆಯನ್ನು ತಿಳಿದುಕೊ.

ನು. ೩ : ಜೀವ ಬಿಂಬವನ್ನು ಕುರಿತು ಹೇಗೆ ಚಿಂತಿಸುತ್ತಾನೋ ಹಾಗೆಯೇ ಅವನು ಪ್ರತಿಬಿಂಬನಲ್ಲಿ ಕಾಣಿಸಿಕೊಳ್ಳುತ್ತಾನೆ. ಆದರೆ ಬಿಂಬನ ಸ್ವಾತಂತ್ರ್ಯ ಪ್ರತಿಬಿಂಬನಿಗಿರುವುದಿಲ್ಲ. ಜೀವನ ಸಂತೋಷಾದಿಗಳೆಲ್ಲ ಶ್ರೀಹರಿಯ ಅಧೀನ. ಬಿಂಬ ಸ್ವಾಮಿ, ಪ್ರತಿಬಿಂಬ ಭೃತ್ಯ ಎನ್ನುವ ತಿಳಿವಳಿಕೆಯಿಂದ ಉಪಾಸನೆ ಮಾಡಬೇಕು.

೧೩೦

ಬಿಂಬ ಮೂರುತಿಯನ್ನು ಕುರಿತು ಅಂತರಂಗದಲ್ಲಿ ಧ್ಯಾನಿಸುವ ಕ್ರಮವನ್ನು ದಾಸರು ಈ ಕೀರ್ತನೆಯಲ್ಲಿ ವಿವರಿಸಿದ್ದಾರೆ. ಯೋಗದ ಹಿನ್ನೆಲೆಯಲ್ಲಿ ಸಾಧನೆಯ ರೀತಿಯನ್ನು ತಿಳಿಸಿದ್ದಾರೆ.

ನು. ೧ : **ಮೂಲಮಂತ್ರ** – ಓಂಕಾರ

ನು. ೪ : **ಮೂರುರಂಧ್ರದಿಂದಲಿ** : ಯೋಗಶಾಸ್ತ್ರದಲ್ಲಿ ಬರುವ ತ್ರಿಕೂಟ, ಶ್ರೀಪಾಟ, ಗೊಲ್ಲಾಟ ?

ನು. ೫ : **ನಾಡಿಗಳ ಗ್ರಹಿಸಿ** : ನಮ್ಮ ಶರೀರದ ರಚನೆಯಲ್ಲಿರುವ ದಶನಾಡಿಗಳು (ಇಡಾ, ಪಿಂಗಲಾ, ಸುಷುಮ್ನಾ, ಗಾಂಧಾರೀ, ಗಜಜಿಹ್ವಾ, ಪೂಷಾ, ಯಶಸ್ವಿನೀ, ಆಲಂಬುಷಾ, ಕುಹೂ, ಶಂಖಿನೀ).

೧೩೧

ಲೌಕಿಕ ಜೀವನ ಶಾಶ್ವತವಾದದ್ದಲ್ಲ : ಆದ್ದರಿಂದ ಅದನ್ನು ನಂಬಿ ಮೋಸ

ಹೋಗದೆ ಪರಲೋಕಕ್ಕೆ ಸಾಧನವಾದ ಭಕ್ತಿಮಾರ್ಗವನ್ನು ಮನುಷ್ಯರು ಹಿಡಿಯಬೇಕು ಎಂಬುದು ಈ ಕೀರ್ತನೆಯ ಸಾರ.

ಕಂಬಳಿಯೊಳಬುತ್ತಿ ನಿಂಬೆಲೆಯಾಗಿನೂಟ : ಇಲ್ಲಿ ದಾಸರು ಭೌತಿಕ ಜಗತ್ತಿನಲ್ಲಿ ಸಿಗುವ ಸುಖಸಂಪತ್ತುಗಳನ್ನು ಕುರಿತು ಹೇಳುತ್ತಿದ್ದಾರೆ. ಕಂಬಳಿಯಲ್ಲಿ ಕಲಸಿದ ಬುತ್ತಿ ಏನೇ ಮಾಡಿದರೂ ತಿನ್ನಲು ಯೋಗ್ಯವಲ್ಲ ; ನಿಂಬೆ ಎಲೆಯ ಊಟದಿಂದಲೂ ತೃಪ್ತಿ ದೊರೆಯುವುದಿಲ್ಲ. ಹಾಗೆಯೇ ಲೌಕಿಕ ಜಗತ್ತಿನ ಬದುಕೂ ಕೂಡ. ಹೋಲಿಕೆ ತುಂಬ ಸಾರ್ಥಕವಾಗಿದೆ. ಹೀಗೆ ಬೇರೆ ಬೇರೆ ಹೋಲಿಕೆಗಳಿಂದ ಜೀವನದ ಅಶಾಶ್ವತತೆಯನ್ನು ಹೇಳುತ್ತಾ ಹೋಗಿ, ಕೊನೆಗೆ ಮಹಾಸುಕೃತ ಫಲವಾಗಿ ಮನುಷ್ಯ ಜನ್ಮ ಬಂದಿದೆ, ಅದನ್ನು ಶ್ರೀಹರಿಯ ಧ್ಯಾನದಿಂದ ಸಾರ್ಥಕಗೊಳಿಸು ಎನ್ನುತ್ತಾರೆ.

೧೩೨

ಸರ್ವವ್ಯಾಪ್ತನೂ ಸರ್ವಪ್ರೇರಕನೂ ಆದ ಶ್ರೀಹರಿಯೇ ತಮಗೆ ಆಪ್ತಬಂಧುವೆಂದು ದಾಸರು ಸಾರಿದ್ದಾರೆ. ಶ್ರೀಹರಿಯನ್ನು ವಿಷಯೀಕರಿಸುವುದೇ ಪುಣ್ಯ, ಧರ್ಮ ದಾಸರ ದೃಷ್ಟಿಯಲ್ಲಿ.

ನು. ೪ : ಹರಿ ಸರ್ವಸ್ವತಂತ್ರನೆಂಬ ತತ್ತ್ವ.

ನು. ೫ : 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಶ್ರುತಿಯ ಭಾವವನ್ನಿಲ್ಲಿ ಕಾಣಬಹುದು.

ನು. ೬ : **ಮತ್ತೆಂದಿಗೆ ಲಿಂಗದೇಹವು ದಹಿಸುವುದೊ** : ಮಧ್ವತತ್ತ್ವದ ಪ್ರಕಾರ ಚೇತನರಲ್ಲಿ ಜ್ಞಾನವಿರುವುದರಿಂದ ಅದಕ್ಕೆ ಕಾರಣವಾದ ಶರೀರವು ಇರುತ್ತದೆ. ಆ ಶರೀರವು ಸ್ವರೂಪದೇಹ, ಲಿಂಗದೇಹ, ಅನಿರುದ್ಧದೇಹ, ಸ್ಥೂಲದೇಹ ಎಂದು ನಾಲ್ಕು ರೀತಿಯಲ್ಲಿರುತ್ತದೆ. (ಮಧ್ವಾಚಾರ್ಯರ ಛಾಂದೋಗ್ಯ ಭಾಷ್ಯ).

ಜನ್ಮನಾಶಗಳಿಲ್ಲದ ಚೇತನರಿಗೂ ಅವರ ದೇಹಕ್ಕೂ ಭೇದವಿಲ್ಲ. ಅಂದರೆ ಚೇತನರಿಂದ ಅಭಿನ್ನವಾಗಿರುವ ಈ ದೇಹ ಸ್ವರೂಪದೇಹವೆನಿಸುತ್ತದೆ. ಈ ಸ್ವರೂಪದೇಹದ ಮೇಲೆ ಒಂದು ದೇಹವಿದೆ. ಅದಕ್ಕೆ ಲಿಂಗದೇಹವೆಂದು ಹೆಸರು. ಅನಾದಿಕಾಲದಿಂದಲೂ ಈ ಲಿಂಗದೇಹವು ಅಕ್ಕಿಯ ಹೊಟ್ಟು ಅಕ್ಕಿಯನ್ನು ಅಂಟಿಕೊಂಡಿರುವಂತೆ ಚೇತನರನ್ನು ಅಂಟಿಕೊಂಡಿರುತ್ತದೆ. ಆದರೆ ಲಿಂಗದೇಹವು ಸ್ವರೂಪ ದೇಹದಂತೆ ನಿತ್ಯವಲ್ಲ ; ಇದಕ್ಕೆ ಬಿಡುಗಡೆಯಿದೆ. ಜೀವನಿಗೆ ಮುಕ್ತಿಯಾಗುವ ಸಮಯದಲ್ಲಿ ಇದು ಜೀವನನ್ನು ಬಿಟ್ಟು ಹೋಗುತ್ತದೆ. ಮುಕ್ತಿಯೋಗ್ಯರಿಗೆ ಶ್ರೀಹರಿಭಕ್ತಿಯಿಂದಲೂ ತಮೋಯೋಗ್ಯರಿಗೆ ಶ್ರೀಹರಿ ದ್ವೇಷದಿಂದಲೂ ನಿತ್ಯ ಸಂಸಾರಿಗಳಿಗೆ ಶ್ರೀಹರಿಯಲ್ಲಿ ಉದಾಸೀನಭಾವದಿಂದಲೂ ಈ ಲಿಂಗದೇಹ ಬಿಟ್ಟುಹೋಗುತ್ತದೆ. ಈ ಲಿಂಗದೇಹದ ಬಿಡುಗಡೆಯೇ ಮರಣ. ಹೀಗೆ ಒಮ್ಮೆ ಈ ದೇಹ ಜೀವರನ್ನು ಬಿಟ್ಟು ಹೋದ ಮೇಲೆ ಪುನಃ ಬರುವುದಿಲ್ಲ. ಲಕ್ಷ್ಮೀದೇವಿಗೂ ನಾರಾಯಣನಿಗೂ ಈ ಲಿಂಗದೇಹವಿಲ್ಲ.

೧೩೩

ಶ್ರೀಹರಿಯ ನಾನಾರೂಪ, ಅವತಾರಗಳ ಐಕ್ಯಚಿಂತನೆ ಈ ಸುಳಾದಿಯ ವಸ್ತು. ಶ್ರೀಹರಿಯನ್ನು ಅವನ ಭಕ್ತರು ಯಾವ ಯಾವ ರೀತಿಯಲ್ಲಿ ಚಿಂತಿಸಿ ಧ್ಯಾನಿಸುವರೋ ಆಯಾ ರೀತಿಯಲ್ಲೇ ಅವನು ಅವರಿಗೆ ಒದಗುತ್ತಾನೆ ಎಂದು ಸಾರುತ್ತಾ ಹರಿಯ ಗುಣಕ್ರಿಯಾದಿಗಳನ್ನು ಬಣ್ಣಿಸಿದ್ದಾರೆ.

ನು. ೩ : ಸೃಷ್ಟಿ, ಸ್ಥಿತಿ, ಲಯಗಳೆಲ್ಲ ಪರಮಾತ್ಮನ ಲೀಲೆ ಎಂಬ ಭಾವನೆ ಇಲ್ಲಿದೆ.

ನು. ೫ : ಹೃದಯ – ಆಕಾಶ, ಹರಿ – ಸೂರ್ಯ, ಜ್ಞಾನ – ಕಿರಣ, ಮನಸ್ಸು – ರಥ, ಬುದ್ಧಿ – ಸಾರಥಿ, ಸಂಸಾರ – ಸಾಗರ – ಎಂಬ ಈ ರೂಪಕಾಲಂಕಾರ ಗಮನಿಸತಕ್ಕದ್ದು.

ಹರಿ ಸರ್ವ ಕರ್ತೃ ಸರ್ವಸ್ವತಂತ್ರ ಎಂಬ ತತ್ತ್ವಗಳ ನಿರೂಪಣೆ ಈ ಸುಳಾದಿಯ ವಸ್ತು. ಅನೇಕ ದೃಷ್ಟಾಂತಗಳಿಂದ ಈ ತತ್ತ್ವಗಳನ್ನು ಸಮರ್ಥಿಸಿದ್ದಾರೆ.

ನು. ೩ : ಇಲ್ಲಿ ದಾಸರು ತಮ್ಮ ದೇಹವನ್ನು ರಥವೆಂದೂ ಶ್ರೀಹರಿಯನ್ನು ಅದಕ್ಕೆ ಸಾರಥಿಯೆಂದೂ ತತ್ತ್ವಾಭಿಮಾನಿ ದೇವತೆಗಳನ್ನು ಹಗ್ಗವೆಂದೂ ಹೋಲಿಸಿ ಹೇಳಿರುವ ರೀತಿ ಸುಂದರವಾಗಿದೆ.

ನು. ೪ : ದಾಸರು ತಮ್ಮ ಹಾಗೂ ಶ್ರೀಹರಿಯ ಸಂಬಂಧವನ್ನು ಸತಿಪತಿ ಸಂಬಂಧವೆಂದು ಕರೆದುಕೊಂಡಿದ್ದಾರೆ. ಪಾಪಪುಣ್ಯದ ವ್ರತವನ್ನು ಮಾಡಲು ಸತಿಗೆ ಹೇಳುವ ಹಕ್ಕು ಪತಿಗಿದೆ. ಅಂತೆಯೇ ತಮ್ಮ ವರ್ತನೆಗಳೆಲ್ಲ ಶ್ರೀಹರಿಯ ನಿರೂಪಕ್ಕೆ ಅಧೀನವೆನ್ನುತ್ತಾರೆ.

ನು. ೫ : ಸೂರ್ಯನ ಎದುರಿಗೆ ಹೇಗೆ ಕತ್ತಲೆ ನಿಲ್ಲುವುದಿಲ್ಲವೋ ಆ ರೀತಿ ಶ್ರೀಹರಿಯ ಸ್ಮರಣೆಯ ಬಲವೊಂದು ತಮಗಿದ್ದರೆ ತಾವು ಯಾರಿಗೂ ಅಂಜುವುದಿಲ್ಲವೆನ್ನುತ್ತಾರೆ.

ನು. ೭ : ಹರಿ ಯಾವ ವೇಷದಲ್ಲಿದ್ದರೂ ತಾವು ಬಿಡದೆ ಆತನ ಕೃಪೆಗಾಗಿ ಅವನನ್ನು ಹಿಡಿದು ನಿಲ್ಲಿಸುವುದಾಗಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಹರಿಯ ದಶಾವತಾರಗಳನ್ನೂ ಚಿತ್ರಿಸಿದ್ದಾರೆ.

ಜಲಧಿಪೊಕ್ಕರು ಬಿಡೆ – ಮತ್ಸ್ಯ

ಜಲದಲಡಗೆ ಬಿಡೆ – ಕೂರ್ಮ

ನೆಲದ ಮರೆಯಲಿ...ಬಿಡೆನೊ – ವರಾಹ

ಬಲುಘೋರ...ಬಿಡೆ – ನರಸಿಂಹ

ಸುಲಭದಿ...ಬಿಡೆ – ವಾಮನ

ಬಲವಂತಿಕೆ...ಬಿಡೆ – ಭಾರ್ಗವ

ತಲೆಜಡೆ...ಬಿಡೆ – ರಾಮ

ಕುಲಹೀನ...ಬಿಡೆ – ಕೃಷ್ಣ

ಬಲುಕಿರ್ಭಿಕ... ಬಿಡೆ –ಬೌದ್ಧ

ಸಿಲುಕದೆ ವಾಜಿಯನೇರಿ – ಕಲ್ಕಿ (ವಿವರಗಳಿಗೆ ನೋಡಿ ಕಿ.೧೫೫ರ ಟಿಪ್ಪಣಿ).

೧೩೫

ಈ ಸಂಸಾರ ಶರಧಿಯಲ್ಲಿ ಈಸಲಾರೆ ಎಂದು ಪ್ರಲಾಪಿಸಿ, ತಮ್ಮನ್ನು ಕಾಪಾಡಬೇಕೆಂಬುದಾಗಿ ವೆಂಕಟೇಶನನ್ನು ಬೇಡಿಕೊಂಡಿದ್ದಾರೆ ದಾಸರು.

ನು. ೨ : **ಮೂರುಗುಣಗಳು** : ಸತ್ವ, ರಜಸ್ಸು, ತಮಸ್ಸು.

ಮೂರುತಾಪಗಳು : ಆಧಿದೈವಿಕ, ಆಧಿಭೌತಿಕ, ಆಧ್ಯಾತ್ಮಿಕ : **ಮೂರು ಅವಸ್ಥೆಗಳು** : ಜಾಗ್ರತ, ಸ್ವಪ್ನ, ಸುಷುಪ್ತಿ : **ಮೂರು ಐದರಿಂದ** : ಅಷ್ಟಮದಗಳಿಂದ (ನೋಡಿ. ಕೀ. ೯೬ರ ಟಿಪ್ಪಣಿ) ; **ಮೂರು ಏಳರಿಂದ** : ದಶೇಂದ್ರಿಯಗಳಿಂದ (ನೋಡಿ. ಕೀ. ೩೦ರ ಟಿಪ್ಪಣಿ) ; **ಮೂರಾರುದಾರಿ** : ನವವಿಧಭಕ್ತಿಗಳು (ನೋಡಿ. ಕೀ. ೧೨೩ ರ ಟಿಪ್ಪಣಿ) : **ಮೂರಾದೆ** : ಸೃಷ್ಟಿಸ್ಥಿತಿಲಯಕ್ಕೆ ಗುರಿಯಾದೆ : **ಮೂರು** : ಜ್ಞಾನ, ಭಕ್ತಿ, ವೈರಾಗ್ಯ : **ಮೂರೆರಡು** : ಅರಿಷಡ್ವರ್ಗಗಳು (ನೋಡಿ. ಕೀ. ೯೬ರ ಟಿಪ್ಪಣಿ) : **ಮೂರು ಮೂರುಭಕ್ತಿ** : ನವವಿಧ ಭಕ್ತಿ ; ಮೂರುಕಾಲಕೆ : ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ ; **ಮೂರು ರೂಪನಾಗಿ** : ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ; **ಮೂರು ಲೋಕ** : ಸ್ವರ್ಗ, ಮರ್ತ್ಯ, ಪಾತಾಳ ; **ಮೂರು ಮಾಡಿದ** : ಸೃಷ್ಟಿ, ಸ್ಥಿತಿ, ಲಯಗಳು.

ನು. ೩ : ಆತ್ಮ ನಿವೇದನಭಕ್ತಿಯನ್ನಿಲ್ಲಿ ಕಾಣಬಹುದು.

೧೩೬

ಜಡಚೇತನರ ನಾನಾ ಬಗೆಯ ವ್ಯಾಪಾರಗಳನ್ನು ಮಾಡಿಸುವವನು ಶ್ರೀಹರಿ. ಅವನು ಸೂತ್ರಧಾರನಾಗಿ ನಿಂತು ಜೀವಿಗಳ ಮೂಲಕ ಮಾಡಿಸುತ್ತಾನೆ. ಈ ಗುಟ್ಟನ್ನು ತಿಳಿಯದೆ ನಾನೇ ಕರ್ತೃವೆಂದು ಮೆರೆದಾಡಿದರೆ ಅದೇ ಬಂಧನವಾಗುತ್ತದೆ. ಸರ್ವರಾಂತರ್ಗತನಾಗಿ ಎಲ್ಲ ವ್ಯಾಪಾರಗಳನ್ನೂ ಶ್ರೀಹರಿ ಮಾಡಿಸುತ್ತಾನೆಂಬ ಅರಿವು ಈ ಬಂಧನವನ್ನು ಹರಿದೊಗೆಯಬಲ್ಲುದು.

ನು. ೨–೩ : ಒಂದೊಂದು ರೂಪದಲ್ಲಿ ಒಂದೊಂದು ವಸ್ತುವಿನಲ್ಲಿ ನಿಂತು ಕರ್ಮ ಮಾಡಿಸುವವನು. ತಾಯಿ ತನ್ನ ಮಕ್ಕಳನ್ನು ಕಾಪಾಡುವಂತೆ ಕಾಪಾಡುವ ಶ್ರೀಹರಿಯ ಸ್ವರೂಪ, ಕ್ರಿಯೆಗಳ ವರ್ಣನೆ.

ನು. ೪ : ಶ್ರೀಹರಿ ಕರ್ತೃವೆಂದರಿಯದೆ, ಮಾಡಿದ ಕರ್ಮಗಳೆಲ್ಲವೂ ವ್ಯರ್ಥ.

ನು. ೫ : ನಿಷ್ಕಾಮಕರ್ಮದ ಅಗತ್ಯ, ಫಲಗಳನ್ನು ಹೇಳಿದ್ದಾರೆ.

ನು. ೭ : ಗೋಪಾಲವಿಠಲನಿಗಿಂತ ಮಿಗಿಲಾದ ದೈವ ಬೇರೆ ಇಲ್ಲ.

೧೩೭

ವಿಷಯಾಸಕ್ತಿಯಲ್ಲಿ ಮುಳುಗಿರುವವನಿಗೆ ಅದು ಶಾಶ್ವತವಾದುದೆಂಬ ಭ್ರಾಂತಿ ಸಹಜ. ಆ ಭ್ರಾಂತಿಯಲ್ಲೇ ಆಯುಷ್ಯವನ್ನು ಕಳೆಯದೆ, ವಿಷಯಗಳನ್ನು ಬಿಟ್ಟು ಶ್ರೀಹರಿಯ ಮಹಿಮಾದಿಗಳನ್ನರಿತು ಶಾಂತಚಿತ್ತನಾಗಿ ಆ ಭ್ರಾಂತಿಯಿಂದ ಮುಕ್ತನಾಗಬೇಕೆಂದು ಈ ಕೀರ್ತನೆಯಲ್ಲಿ ಜೀವನಿಗೆ ಉಪದೇಶಿಸಿದ್ದಾರೆ ದಾಸರು.

ನು. ೧ : ಹರಿಸಂಬಂಧವಾದ ವಿಷಯಗಳನ್ನು ಶ್ರವಣ, ಮನನ, ನಿಧಿಧ್ಯಾಸನ ಗಳಿಂದ ತನ್ನದನ್ನಾಗಿ ಮಾಡಿಕೊಳ್ಳಬೇಕು.

ನು. ೨ : ತಾರತಮ್ಯ, ಪಂಚಭೇದಗಳ ಅರಿವು ಇರಬೇಕು (ನೋಡಿ : ಕೀ. ೬೦ರ ಟಿಪ್ಪಣಿ).

ಅಣಿಮಾದಿ..... ಧಾರಣನಾಗಿ : ಯೋಗದಿಂದ ಸಿದ್ಧಿಸುವ ಸಿದ್ಧಿಗಳು : ಅಣಿಮಾ (ಸೂಕ್ಷ್ಮರೂಪವನ್ನು ಧರಿಸುವ ಶಕ್ತಿ), ಮಹಿಮಾ (ದೊಡ್ಡ ರೂಪವನ್ನು ಧರಿಸುವ ಶಕ್ತಿ), ಗರಿಮಾ (ಭಾರವಾಗುವಿಕೆ), ಲಘಿಮಾ (ಹಗುರವಾಗುವಿಕೆ), ಪ್ರಾಪ್ತಿ (ಪಡೆಯಲು ಸಾಧ್ಯವಲ್ಲದ್ದನ್ನು ಪಡೆಯುವಿಕೆ), ಪ್ರಾಕಾಮ್ಯ (ಸ್ವಲ್ಪವನ್ನು ವಿಪುಲವಾಗಿಸುವಿಕೆ), ಈಶಿತ್ವ (ಎಲ್ಲೆಲ್ಲಿಯೂ ಪ್ರಭಾವವನ್ನು ಬೀರುವಿಕೆ), ವಶಿತ್ವ (ಇಂದ್ರಿಯ ನಿಗ್ರಹ) (ಶ್ರೀ. ನಿ. ಪು. ೪೮೭). ಅಷ್ಟಾಂಗಯೋಗ : ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ (ಶ್ರೀ. ನಿ. ಪು. ೧೨).

ನು. ೪ : ಜೀವ ಪರಮಾತ್ಮರ ಅಂಶಿಅಂಶಭಾವ, ಪರಮಾತ್ಮನ ನಲೆ, ಅಂತರ್ಯಾಮಿತ್ವ, ಭೇದತತ್ವ ಇತ್ಯಾದಿಗಳನ್ನು ತಿಳಿದು ಶ್ರೀಹರಿಯನ್ನು ಉಪಾಸನೆ ಮಾಡುವವರೆಗೆ ಭ್ರಾಂತಿ ಬಿಡದು.

ನು. ೭ : ಶ್ರೀಹರಿ ಸ್ವತಂತ್ರ : ಜೀವರುಗಳಿಗೆ ದತ್ತಸ್ವಾತಂತ್ರ್ಯ ಮಾತ್ರ ಎಂಬ ಅರಿವು.

ನು. ೮ : ಗೋಪಾಲವಿಠಲನೇ ಬಿಂಬ, ಸ್ವತಂತ್ರ, ಸರ್ವಾಂತರ್ಯಾಮಿಯೆಂದು ತಿಳಿದು ಎಲ್ಲ ಕಾರ್ಯಗಳಲ್ಲೂ ಹರಿಯ ಪ್ರೇರಣೆಯನ್ನು ತಿಳಿಯುವವರೆಗೂ ಭ್ರಾಂತಿ ಬಿಡದು.

೧೩೮

ತ್ರಿವಿಧಜೀವರಿಗೆ (ಮುಕ್ತಿಯೋಗ್ಯರು, ನಿತ್ಯಸಂಸಾರಿಗಳು, ತಮೋಯೋಗ್ಯರು) ಅವರವರ ಕರ್ಮಗಳಿಗನುಗುಣವಾದ ಫಲಗಳನ್ನಿತ್ತು, ಮಧ್ವತತ್ವಾನುಸಾರ ತಿಳಿವಳಿಕೆ

ಯನ್ನಿತ್ತು ಅವರೆಲ್ಲರನ್ನೂ ಉದ್ಧರಿಸಬೇಕೆಂದು ಪ್ರಾರ್ಥಿಸಿದ್ದಾರೆ ದಾಸರು.

ನು. ೧ : ನವವಿಧಭಕ್ತಿ (ನೋಡಿ : ಕೀ. ೧೨೩ರ ಟಿಪ್ಪಣಿ).

೧೩೯

ಮುಕ್ತಿಯನ್ನು ಅಪೇಕ್ಷಿಸುವ ಭಕ್ತರು ಅನುಸರಿಸಬೇಕಾದ ಸಾಧನೆಯ ರೀತಿಯನ್ನು ಇಲ್ಲಿ ತಿಳಿಸಿದ್ದಾರೆ. ತಾರತಮ್ಯ ಜ್ಞಾನವರಿತು ಶ್ರೀಹರಿಯನ್ನು ನಖಶಿಖಪರಿಯಂತ ಧ್ಯಾನಮಾಡುವ ಕ್ರಮವನ್ನು ಬೋಧಿಸಿದ್ದಾರೆ.

ನು. ೨ : ಅರಿಷಡ್ವರ್ಗಗಳ ನಿಯಾಮಕ ಶ್ರೀಹರಿಯೆಂದರಿತು ಅವುಗಳನ್ನು ನೇಮದಲ್ಲಿಟ್ಟುಕೊಳ್ಳುವ ಬಗ್ಗೆ ವಿವರ.

ನು. ೩ : ಹರಿಸರ್ವೋತ್ತಮ, ಜೀವರ ಎಲ್ಲ ಕ್ರಿಯೆಗಳಿಗೂ ಹರಿಯೇ ಮೂಲಕಾರಣನೆಂಬ ತತ್ತ್ವ.

ನು. ೪ : ಆರುಪರಿಯ ಭೇದ – ಪಂಚಭೇದ (ನೋಡಿ : ಕೀ. ೬೦ರ ಟಿಪ್ಪಣಿ) + ನಾರಾಯಣ ಹಾಗೂ ಲಕ್ಷ್ಮಿಯರಿಗಿರುವ ಭೇದ. ಆರು ಮೂರು ಭಕುತಿ – ನವವಿಧ ಭಕ್ತಿ.

ನು. ೫ : ಭಕ್ತಿಯೇ ಮುಕ್ತಿಗೆ ಸೋಪಾನ ; ಶ್ರೀಹರಿ ಲಕ್ಷ್ಮಿಯನ್ನು ಬಿಟ್ಟರೂ ಬಿಡುತ್ತಾನೆ. ಭಕ್ತರನ್ನು ಬಿಡಲಾರ ಇತ್ಯಾದಿ ಭಾವನೆಗಳ ನಿರೂಪಣೆ.

ನು. ೬ : ಸತಿಸುತ ಮೊದಲಾದ ತನುಸಂಬಂಧಿಗಳು ಯಾರೂ ಸಮಯಕ್ಕೆ ಬರುವುದಿಲ್ಲ ; ಆದ್ದರಿಂದ ಕ್ಷಣಕ್ಷಣಕ್ಕೂ ಸುಖದುಃಖಗಳನ್ನುಣಿಸುತ್ತಿರುವ ಗೋಪಾಲವಿಠಲನನ್ನು ಭಜಿಸಬೇಕೆಂದು ತಾತ್ಪರ್ಯ.

ನು. ೭ : ಶ್ರೀಹರಿಯನ್ನು ತಿಳಿಯುವ ಮನಸ್ಸಿದ್ದವರಿಗೆ ಅವನು ತಾನಾಗಿಯೇ ಗೋಚರಿಸುವನು. ಡಂಭಕರ ಭಕ್ತಿಗೆ ಒಲಿಯುವುದಿಲ್ಲ.

೧೪೦

ಮುಕ್ತರ ಸ್ಥಿತಿಯನ್ನು ವರ್ಣಿಸುವ ಸುಳಾದಿ. ಜೀವರು ಉತ್ತಮ, ಮಧ್ಯಮ, ಅಧಮ ತಾರತಮ್ಯದಿಂದ ಮುಕ್ತಿಯಲ್ಲಿರುತ್ತಾರೆ. ಸತ್ವರಜತಮೋಗುಣಗಳಿಂದ ಕೂಡಿದ, ಲಿಂಗದೇಹರಹಿತರಾದ ಮುಕ್ತರು ಕೇವಲ ಚಿತ್‌ಸ್ವರೂಪರು, ನಿತ್ಯಾನಂದಾನುಭೋಗಿಗಳು. ಛತ್ರಚಾಮರಾದಿಗಳನ್ನು ಹಿಡಿದು ಶ್ರೀಹರಿಯ ಸೇವೆಗೆ ಸಿದ್ಧರಾಗಿ ನಿಂತಿರುವರು. ಮನೋಬಲದಿಂದಲೇ ಇಂದ್ರಿಯ ಸುಖಾನುಭವಿಗಳು ಇತ್ಯಾದಿಯಾಗಿ ಅವರ ಆನಂದದ ಸ್ಥಿತಿಯನ್ನು ಬಣ್ಣಿಸಿದ್ದಾರೆ.

ನು. ೪ : ಮುಕ್ತರು ಜ್ಞಾನ, ಭಕ್ತಿ, ವಿರಕ್ತಿ ಸಂಪನ್ನರು ; ಎಲ್ಲವೂ ಕಾಣಿಸುವುದು,

ಬೇಡಿದ್ದು ಒದಗುವುದು, ಹೆಚ್ಚಿನದಕ್ಕೆ ಅಪೇಕ್ಷೆ ಪಡದಿರುವುದು ಇವೇ ಅವುಗಳ ಫಲ. ಹಿರಿದು ಕಿರಿದೆಂಬ ಭೇದವಿಲ್ಲ ; ಪರಸ್ಪರ ವೈರತ್ವವಿಲ್ಲ ಇತ್ಯಾದಿ.

ನು. ೫ : ಶ್ರೀಹರಿಯ ಅಷ್ಟಕರ್ತೃತ್ವದ ವರ್ಣನೆ – ಸೃಷ್ಟಿ, ಪಾಲನೆ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ.

ನು. ೬ : ಬಿಂಬನಾದ ಶ್ರೀಹರಿ ಮುಕ್ತರೊಳಗಿದ್ದು ಅವರು ಇಚ್ಛಿಸುವ ಸುಖಾನುಭೋಗವನ್ನುಂಟು ಮಾಡುತ್ತಾನೆ.

೧೪೧

ವಿಷಯಾಸಕ್ತಿಯಲ್ಲಿ ಮುಳುಗಿದ ಮಹನೀಯರೆಲ್ಲ ಏನಾದರು, ಅವರ ಬದುಕೆಲ್ಲ ಏನಾಯಿತು ಎಂಬುದನ್ನು ತಿಳಿಸುವ ಕೀರ್ತನೆ. ಮಹಾಮಹಾ ಜ್ಞಾನಿಗಳೇ ಕೈ ಸುಟ್ಟು ಕೊಂಡಿರುವಾಗ ಹುಲುಮನುಜನ ಗತಿಯೇನು ಎಂಬುದು ಗೋಪಾಲದಾಸರ ಪ್ರಶ್ನೆ.

ನು. ೧ : ಭರತರಾಯನ ನೋಡು....ಮನುಜ : ಜಡಭರತ ಒಬ್ಬ ರಾಜ. ಪ್ರಿಯವ್ರತವಂಶದ ಋಷಭ–ಜಯಂತಿಯರ ಮಗ. ತನ್ನ ರಾಜ್ಯವನ್ನೆಲ್ಲ ಮಕ್ಕಳಿಗೆ ಹಂಚಿ ತಪಸ್ಸಿಗಾಗಿ ಅರಣ್ಯಕ್ಕೆ ಹೋದ. ಅಲ್ಲಿ ಅನಾಥ ಜಿಂಕೆಮರಿಯೊಂದನ್ನು ಕಂಡು, ಕರುಣೆಯಿಂದ ಅದನ್ನು ತನ್ನ ಆಶ್ರಮಕ್ಕೆ ತಂದು ಸಾಕತೊಡಗಿದ. ಅದರ ಮೇಲಿನ ಮೋಹ ದಿನದಿನಕ್ಕೆ ಬೆಳೆದು, ಸಾಯುವಾಗಲೂ ಅದನ್ನೇ ಧ್ಯಾನಿಸುತ್ತಿದ್ದ ಪರಿಣಾಮವಾಗಿ ಮುಂದಿನ ಜನ್ಮದಲ್ಲಿ ಜಿಂಕೆಯಾಗಿ ಹುಟ್ಟಿದ. ಆದರೆ ಹಿಂದಣಜನ್ಮದ ತಪೋಬಲದಿಂದ ಅವನಿಗೆ ತನ್ನ ವೃತ್ತಾಂತವೆಲ್ಲ ನೆನಪಿನಲ್ಲಿತ್ತು. ಮರುಜನ್ಮದಲ್ಲಿ ಒಬ್ಬ ಹುಚ್ಚು ಬ್ರಾಹ್ಮಣನಾಗಿ ಹುಟ್ಟಿದ. ಹೀಗೆ ಜಿಂಕೆಯ ಮರಿಯ ಮೇಲಣ ಮೋಹದಿಂದ ಭರತರಾಯ ಮೂರು ಜನ್ಮಗಳನ್ನೆತ್ತಬೇಕಾಗಿ ಬಂತು (ಪು. ನಾ. ಚೂ. ಪು. ೨೨೭ – ೨೮).

ನು. ೨ : **ವಿಶ್ವಾಮಿತ್ರ** : ಒಬ್ಬ ಋಷಿ. ಬ್ರಾಹ್ಮಣ್ಯವನ್ನು ಸಂಪಾದಿಸಲು ತಪಸ್ಸು ಮಾಡುತ್ತಿದ್ದಾಗ ತಪೋಭಂಗ ಮಾಡಲು ಬಂದ ಮೇನಕೆ(ಊರ್ವಶಿ)ಯೊಂದಿಗೆ ಸಂಸಾರಮಾಡಿ, ಶಕುಂತಲೆಯನ್ನು ಪಡೆದ (ಪು. ನಾ. ಚೂ. ಪು. ೫೭೬).

ನು. ೩ : **ವಿಪುಳಮತಿಯಾದ ಸೌಭರಿ.... ಮನುಜ** : ಒಬ್ಬ ಮಹರ್ಷಿ. ಜಲಮಧ್ಯದಲ್ಲಿ ತಪಸ್ಸು ಮಾಡುತ್ತಿದ್ದಾಗ, ಅಲ್ಲಿ ಕ್ರೀಡಿಸುತ್ತಿದ್ದ ಮತ್ಸ್ಯದಂಪತಿಗಳನ್ನು ಕಂಡು ಇವನಿಗೂ ಗೃಹಸ್ಥನಾಗಬೇಕೆಂಬ ಅಭಿಲಾಷೆ ಹುಟ್ಟಿತು. ಬಳಿಕ ಮಾಂಧಾತ ರಾಜನಲ್ಲಿಗೆ ಹೋಗಿ ಅವನ ಐವತ್ತು ಮಂದಿ ಪುತ್ರಿಯರನ್ನೂ ವಿವಾಹವಾದ (ಪು. ನಾ. ಚೂ. ಪು. ೬೬೯).

ನು. ೪ : **ಲೇಸಾದ ಕುಲದಲ್ಲಿ....ಮಾಡಿದ** : (ನೋಡಿ. ಕೀ. ೧೫೨ರ ಟಿಪ್ಪಣಿ)

ದಾಶರಾಯನ ಮಗಳ.....ಮನುಜ : ಶಕ್ತಿ ಮಹರ್ಷಿ ಅದೃಶ್ಯಂತಿಯರ ಮಗ. ಈತ ತೀರ್ಥಯಾತ್ರೆ ಮಾಡುತ್ತಾ ಯಮುನಾ ನದಿಯ ಬಳಿಗೆ ಬರುವಲ್ಲಿ ಬೆಸ್ತರ ಯಜಮಾನ

ದಾಶರಾಯ ಊಟಮಾಡುತ್ತಿದ್ದ. ಋಷಿ ಶಾಪಕೊಡುವನೆಂದು ಹೆದರಿ, ದೋಣಿ ನಡೆಸಲು ತನ್ನ ಮಗಳು ಸತ್ಯವತಿಯನ್ನು ಕಳುಹಿಸಿದ. ಸತ್ಯವತಿ ದೋಣಿಯನ್ನು ನಡೆಸುವಾಗ ಪರಾಶರ ಆಕೆಯನ್ನು ಮೋಹಿಸಿ ವ್ಯಾಸಮುನಿಯನ್ನು ಪಡೆದ (ಪು. ನಾ. ಚೂ. ಪು. ೨೯೮-೯೯.)

ನು. ೫ : **ಅಂದಣವನೇರಿದ.... ಮನುಜ** : (ನೋಡಿ : ಕೀ. ೧೫೭ ರ ಟಿಪ್ಪಣಿ)

೧೪೨

ವೈರಾಗ್ಯದ ಅರ್ಥ, ಅದನ್ನು ಸಾಧಿಸುವ ಬಗೆ, ಅದು ಹೇಗೆ ಎಲ್ಲಕ್ಕಿಂತಲೂ ಮಿಗಿಲಾದದ್ದು ಎಂಬುದನ್ನು ಈ ಸುಳಾದಿಯಲ್ಲಿ ಪ್ರಸ್ತಾವಿಸಿದ್ದಾರೆ ಗೋಪಾಲದಾಸರು. ಭೋಗವಸ್ತುಗಳನ್ನು ಬಿಟ್ಟುಬಿಡುವುದೇ ವೈರಾಗ್ಯವಲ್ಲ, ನಮ್ಮ ಯೋಗ್ಯತೆಯನ್ನರಿತು, ಶ್ರೀಹರಿಯಿಂದ ದತ್ತ ಸ್ವಾತಂತ್ರ್ಯದ ಅರಿವಿನಿಂದ, ಎಲ್ಲವೂ ಅವನಿತ್ತುದೆಂಬ ಭಾವನೆಯಿಂದ ಹರಿಯನ್ನು ಆರಾಧಿಸುವುದೇ ನಿಜವಾದ ವೈರಾಗ್ಯ ದಾಸರ ದೃಷ್ಟಿಯಲ್ಲಿ.

ನು. ೪ : ಅಂತರಂಗ ಶುದ್ಧಿಯಿಲ್ಲದ ಡಾಂಭಿಕರ ವೈರಾಗ್ಯಾಚರಣೆಯನ್ನು ಟೀಕಿಸುತ್ತಾರೆ.

೧೪೩

ಅದ್ವೈತಿಗಳ ಖಂಡನೆ ಈ ಸುಳಾದಿಯ ವಸ್ತು. ನಾಲ್ಕಾರು ನಿದರ್ಶನಗಳನ್ನು ಕೊಡುವುದರ ಮೂಲಕ ದಾಸರು ಹರಿ ಸಾಕಾರ, ಸಗುಣ, ಸರ್ವೋತ್ತಮ ಇತ್ಯಾದಿ ದ್ವೈತ ಸಿದ್ಧಾಂತದ ತತ್ತ್ವಗಳನ್ನು ನಿರೂಪಿಸಿದ್ದಾರೆ.

ಏಕವಾಗಿ ಸುರರ....ಮೋಹಕರಾಗಲಿಲ್ಲವೆ : ಅಮೃತವನ್ನು ಹಂಚುವ ಕಾಲದಲ್ಲಿ ವಿಷ್ಣು ರಾಕ್ಷಸರನ್ನು ವಂಚಿಸಲು ಧರಿಸಿದ ಸ್ತ್ರೀರೂಪ (ಮೋಹಿನಿ) (ಪುನಾಚೂ. ಪು. ೫೦೪).

ಸೋಕಿದ ಮಾತ್ರ.....ಅಹಲ್ಯಾ : (ನೋಡಿ : ಕೀ. ೧೭೩ ಟಿಪ್ಪಣಿ).

ಆ ಖಳನು.....ನಾದ : ಹಿರಣ್ಯಕಶಿಪುವಿನ ವಧೆ (ನೋಡಿ : ಕೀ. ೧೫೫ ರ ಟಿಪ್ಪಣಿ).

ಆಕಳು ಗಳಿಸಿದ...... ಮೀಟಿದ್ದು : ಗೋವರ್ಧನನೋದ್ಧರಣ (ನೋಡಿ : ಕೀ. ೩೮ ರ ಟಿಪ್ಪಣಿ).

ಕರಿಯು ನಕ್ರಗೆ..... ಬಿಡಿಸಿದನು : ಗಜೇಂದ್ರಮೋಕ್ಷ (ನೋಡಿ : ಕೀ. ೧೫೭ ರ ಟಿಪ್ಪಣಿ).

೧೪೪

ಈ ಭವದ ಜಂಜಾಟವನ್ನು ಕುರಿತು 'ಸಾಕು' ಎಂದು ಉದ್ಗರಿಸಿದ್ದಾರೆ. ಶೋಕ, ಮೋಹಗಳಿಗೆ ಕಾರಣವಾದಂತಹ, ಇಂದ್ರಿಯಗಳಿಗೆ ವಶವಾಗಿ ವಿವೇಕವನ್ನು ಕಳೆದುಕೊಳ್ಳಬೇಕಾಗುವಂಥ ಪರಿಸ್ಥಿತಿಯನ್ನು ತಂದಿಡುವ ಈ ಜೀವನ ಸಾಕೆನ್ನುತ್ತಾರೆ. ಇದರಿಂದ ಬಿಡುಗಡೆ ಪಡೆಯಬೇಕಾದರೆ ಹರಿಕೀರ್ತನೆಗಳನ್ನು ಹಾಡು, ನಿನ್ನಂತೆ ಸಕಲ ಭೂತಗಳನ್ನೂ ಕಾಣು, ಕೋಪತಾಪಗಳನ್ನು ಬಿಡು ಎಂದು ಮುಂತಾಗಿ ಉಪದೇಶಿಸಿದ್ದಾರೆ.

೧೪೫

ಹರಿ ಇಟ್ಟ ಹಾಗೆ ಜೀವರು ಇರಬೇಕು. ಅವನೇ ಸರ್ವಕರ್ತೃ. ಸರ್ವವ್ಯಾಪಿಯಾಗಿ ಜೀವರನ್ನು ಪ್ರೇರಿಸುವವನು. ಗುರುಮುಖೇನ ಭಗವತ್ಪ್ರಸಾದವನ್ನು ಗಳಿಸಬೇಕು, ಭಕ್ತರ ಎಲ್ಲ ಕ್ರಿಯೆಗಳೂ ಹರಿಮಯವಾಗಿರಬೇಕು. ಹೀಗೆ ಭಕ್ತಿಯನ್ನು ಸಾಧಿಸುವ ಮೂಲಕ ಮುಕ್ತಿ ಸಾಧ್ಯವಾಗುತ್ತದೆ. ನಿಷ್ಕಾಮಕರ್ಮವೇ ಜೀವರ ಗುರಿಯಾಗಬೇಕು ಇತ್ಯಾದಿ ಭಾವನೆಗಳ ನಿರೂಪಣೆ ಇಲ್ಲಿದೆ.

೧೪೬

ಶ್ರೀಹರಿಯನ್ನು ಹೊಂದಬೇಕಾದರೆ ಮನುಷ್ಯನ ಎಲ್ಲ ಪಾಪಗಳೂ ನಾಶವಾಗ ಬೇಕೆಂಬುದು ಈ ಉಗಾಭೋಗದ ವಸ್ತು. ಇಲ್ಲಿ 'ಹರಿ' ಎಂಬ ಪದವನ್ನು ಕ್ರಿಯಾಪದವಾಗಿಯೂ ನಾಮಪದವಾಗಿಯೂ ಬಳಸಲಾಗಿದೆ.

೧೪೭

ಕ್ಷರಲಕ್ಷರರಿಂದ ಭಿನ್ನನಾದ ಮೂಲದೈವ ಶ್ರೀಹರಿ ಜಗದ್ವ್ಯಾಪಕನೂ ಚಿದಾನಂದಚಿದ್ರೂಪನೂ ಉತ್ಪತ್ತಿನಾಶದೂರನೂ ಆಗಿದ್ದಾನೆ ಎನ್ನುತ್ತಾರೆ ಗೋಪಾಲದಾಸರು. ರುದ್ರನೇ ಮೊದಲಾದ ಸಕಲದೇವತೆಗಳೂ ಶ್ರೀಹರಿಯ ಕಿಂಕರರು : ಶ್ರೀಹರಿ ಜನನ ಮರಣಗಳಿಲ್ಲದವನು, ಸಂಚಿತ ಪ್ರಾರಬ್ಧ ಆಗಾಮಿಗಳಿಗೆ ಅತಿದೂರನಾದವನು ಇತ್ಯಾದಿ ತತ್ತ್ವಗಳ ನಿರೂಪಣೆ ಈ ಸುಳಾದಿಯಲ್ಲಿದೆ. ಹರಪರವಾಗಿರುವ ಅದ್ವೈತಿಗಳ ಖಂಡನೆಯೂ ಈ ಸುಳಾದಿಯಲ್ಲಿದೆ.

ನು. ೩ : ಶ್ರೀಹರಿ ಅಪ್ರಾಕೃತಶರೀರಿ, ಪರಿಪೂರ್ಣ.

ನು. ೪ : ಹರಿಸರ್ವೋತ್ತಮತ್ವದ ಪ್ರತಿಪಾದನೆ. ಶಿವ ಶರಭಾವತಾರವನ್ನು ತಳೆದು ಹರಿಯ ನೃಸಿಂಹಾವತಾರವನ್ನು ಶಾಂತಿಗೊಳಿಸಿದ ಪ್ರಸ್ತಾವ ಲಿಂಗ ಪುರಾಣದಲ್ಲಿ ಮಾತ್ರ

ಬರುತ್ತದೆ. ಆದರೆ ಹರನ ಗೆಲುವನ್ನು ಹೇಳಿರುವ ಈ ಪುರಾಣ ದಾಸರ ಪ್ರಕಾರ ತಾಮಸಜೀವರಿಗಾಗಿ ಹೇಳಿದ್ದು. ಸಮಸ್ತ ವೇದಶಾಸ್ತ್ರಾದಿಗಳೂ ಶ್ರೀಹರಿಯ ಸರ್ವೋತ್ತಮತ್ವವನ್ನು ಸಾರುತ್ತಿವೆ ಎಂಬುದನ್ನು ಎತ್ತಿ ತೋರಿಸಿದ್ದಾರೆ. ಶರಭಭಂಜನನೆಂದು ಅವನನ್ನು ಕೊಂಡಾಡಿದ್ದಾರೆ.

ನು. ೫ : ಭೀಮಸೇನ ಪುರುಷಾಮೃಗವನ್ನು ತಂದ ಸಂದರ್ಭ.

ನು. ೬ : ಇಲ್ಲಿಯ ವ್ಯಾಸ, ಹಯಗ್ರೀವರ ಪ್ರಸಂಗ ಸ್ಪಷ್ಟವಾಗುವುದಿಲ್ಲ.

ಉಮೇಶಗೆ ಭೃಗುಶಾಪ ಲಿಂಗವಾಗೆಂದು : ತ್ರಿಮೂರ್ತಿಗಳಲ್ಲಿ ಯಾರು ಶ್ರೇಷ್ಠರು ಎಂದು ನಿರ್ಣಯಿಸಲು ದೇವತೆಗಳ ಕೋರಿಕೆಯಂತೆ ಭೃಗುಮಹರ್ಷಿ ಶಿವನಲ್ಲಿಗೆ ಹೋದಾಗ ನಂದಿ ಅವನನ್ನು ತಡೆಯುತ್ತಾನೆ. ಶಿವನು ಕ್ರೀಡಾ ನಿರತನಾಗಿದ್ದುದನ್ನು ನೋಡಿ 'ನಿನ್ನ ಲಿಂಗದ ಪೂಜೆಯಷ್ಟೇ ಆಗಲಿ' ಎಂದು ಭೃಗು ಶಾಪಕೊಡುತ್ತಾನೆ (ಪದ್ಮ, ಉತ್ತರಕಾಂಡ ೨೫೫).

ಈ ಸುಳಾದಿಯಲ್ಲಿ ಒಂದುನುಡಿ ಸಿಕ್ಕಿಲ್ಲ (ಆದಿತಾಳ).

೧೪೮

ಎಲ್ಲ ಒಂದೆ ಎನ್ನುವ ಅದ್ವೈತವಾದಿ ಏನು ಮಾಡಿದರೂ ವ್ಯರ್ಥವೆಂಬುದು ಈ ಉಗಾಭೋಗದ ಅರ್ಥ. ಅವನು ಮುಕ್ತಿಗೆ ಅನರ್ಹ ಎಂದಿದ್ದಾರೆ ದಾಸರು.

೧೪೯

ಕ್ರೋಧದಿಂದ ಸರ್ವನಾಶವೆಂಬ ಅಭಿಪ್ರಾಯ ಈ ಉಗಾಭೋಗದ ವಸ್ತು. ಆದ್ದರಿಂದ ಕ್ರೋಧವನ್ನು ಬಿಟ್ಟು ಗೋಪಾಲವಿಠಲನ ಪಾದಸೇವೆಯನ್ನು ಮಾಡೆನ್ನುತ್ತಾರೆ ಗೋಪಾಲದಾಸರು.

೧೫೦

ಕೃಷ್ಣನನ್ನು ಅವನ ಮಾವ ಕಂಸ ಬಿಲ್ಲಹಬ್ಬಕ್ಕೆ ಮಧುರೆಗೆ ಕರೆಸಿಕೊಳ್ಳುವನೆಂಬ ಗೋಪಿಯರ ವಿರಹಾಲಾಪದ ಕೃತಿಯಿದು. ಕೃಷ್ಣನ ರೂಪಾಲಂಕಾರಗಳನ್ನೂ ತಮ್ಮ ಅವನ ನಡುವಿನ ಸಂಬಂಧವನ್ನೂ ವರ್ಣಿಸುತ್ತಾರೆ.

೧೫೧

ಕಾಳಿಂಗಮರ್ದನನ ಕಥೆ ಈ ಕೃತಿಯ ವಸ್ತು. ಬಾಲಕ ಕೃಷ್ಣ ತನ್ನ ಜೊತೆಗಾರರೊಡನೆ ಹಸುಗಳನ್ನು ಅಟ್ಟಿಕೊಂಡು ಕಾಳಿಂದಿ ನದಿಯ ದಂಡೆಗೆ ಬರುತ್ತಾನೆ.

ಬಾಲಕರೆಲ್ಲ ಸಂತೋಷದಿಂದ ಆಟವಾಡುತ್ತಿರುವಾಗ ಗೋವುಗಳೆಲ್ಲ ಕಾಳಿಂದಿಯ ಮಡುವಿನ ನೀರನ್ನು ಕುಡಿದು ಕೆಳಗೆ ಬೀಳಲು, ಅದಕ್ಕೆ ಕಾರಣನಾದ ಕಾಳಿಂಗನ ಗರ್ವವನ್ನು ಮುರಿದ ಕೃಷ್ಣ ತನ್ನ ಕೊಳಲಿನ ನಾದದಿಂದ ಗೋವುಗಳನ್ನೆಲ್ಲ ಎಚ್ಚರಿಸುತ್ತಾನೆ (ಭಾಗವತ ೧೦. ಅ. ೧೩).

೧೫೨

ಇದು ಉಡುಪಿಯ ಶ್ರೀಕೃಷ್ಣನನ್ನು ಕುರಿತ ಸುಳಾದಿ. ಇಲ್ಲಿ ಗೋಪಾಲ ದಾಸರು ಕೃಷ್ಣನ ಲೀಲಾವಿನೋದಗಳನ್ನು ಮಹಿಮೆಗಳನ್ನೂ ಭಕ್ತವತ್ಸಲತೆಯನ್ನೂ ದಯಾಪರತೆಯನ್ನೂ ಚಿತ್ರಿಸಿದ್ದಾರೆ.

ನು. ೨ : **ನಿನಗೆ ಯಮುನಾದೇವಿ ಗಕ್ಕನೆ ಮಾರ್ಗವನಿತ್ತಳೆಂಬೋದೇನೊ :** ದೇವಕಿಯ ಎಂಟನೆಯ ಸಂತಾನವಾಗಿ ಕೃಷ್ಣ ಜನಿಸಿದಾಗ, ಆ ಶಿಶುವಿನ ಪ್ರೇರಣೆಯ ಮೇರೆಗೆ ವಸುದೇವ ಶಿಶುವನ್ನು ಗೋಕುಲಕ್ಕೆ ತೆಗೆದುಕೊಂಡು ಹೋಗಿ ತನ್ನ ಮಾನ್ಯ ಮಿತ್ರನಾದ ನಂದನ ಮನೆಯಲ್ಲಿಟ್ಟು, ನಂದನ ಪತ್ನಿಯಾದ ಯಶೋದೆ ಆಗ ತಾನೇ ಪ್ರಸವಿಸಿದ್ದ ಹೆಣ್ಣು ಶಿಶುವನ್ನು ಎತ್ತಿಕೊಂಡು ಬಂದು ದೇವಕಿಯ ಬಳಿಯಲ್ಲಿಟ್ಟ. ಆಗ್ಗೆ ಶೇಷ ಬೆಳಕು ತೋರಿದ. ಪೂರ್ಣ ಪ್ರವಾಹದಿಂದ ಹರಿಯುತ್ತಿದ್ದ ಯಮುನಾ ನದಿ ಮಗುವನ್ನು ಕೊಂಡೊಯ್ಯಲು ದಾರಿಬಿಟ್ಟಿತು (ಭಾಗವತ ೧೦, ಅ. ೪).

ನು. ೩ : ಶೃಂಗಾರದೀಪುರದ.... ಏನೊ : ಕೃಷ್ಣ ಮಧುರೆಯನ್ನು ಹೊಕ್ಕು ಕಂಸನ ಅಗಸನನ್ನು ಕೊಂದು ರಾಜಯೋಗ್ಯವಾದ ವಸ್ತ್ರಗಳನ್ನು ಧರಿಸಿದ ಪ್ರಸಂಗ (ಭಾಗವತ ೧೦, ಅ. ೪೧).

ರಂಗ ಪೂಗಾರನ ಮಾಲೆ ಕೊಂಡದ್ದು ಏನೋ : ಸಂದರ್ಭ ಸ್ಪಷ್ಟವಾಗಲಿಲ್ಲ.

೧೫೩

ಈ ಕೀರ್ತನೆಯಲ್ಲಿ ಶ್ರೀಕೃಷ್ಣನ ಒಂದೇ ಕ್ರಿಯೆಯ ಎರಡು ಪರಿಣಾಮಗಳನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ. ದುಷ್ಟಜನ ಸಂಹಾರಕ ; ಶಿಷ್ಟಜನ ಪರಿಪಾಲಕ ಎಂಬ ಅವನ ಬಿರುದನ್ನು ಇಲ್ಲಿ ಸಮರ್ಥಿಸಿದ್ದಾರೆ.

ನು. ೧ : ಶ್ರೀಕೃಷ್ಣ ತನ್ನ ಜನನದಿಂದ ದೇವಕಿಗೆ ಆನಂದವುಂಟು ಮಾಡಿದನು : ಬುದ್ಧನಾಗಿ ಹುಟ್ಟಿ ಸನ್ಯಾಸವನ್ನು ಸ್ವೀಕರಿಸಿ ಜೈನನ ವಂಶೋದ್ಧಾರಕ್ಕೆ ಕೊಡಲಿಪೆಟ್ಟು ಹಾಕಿದನು (ಭಾಗವತ ೧, ಅ. ೩). ಅಂತೆಯೇ ಕೃಷ್ಣ ಸ್ತನ್ಯಪಾನ ಮಾಡಿದ್ದರಿಂದ ಯಶೋದೆಗೆ ಮುದವಾದರೆ ಪೂತನಿಯ ಪ್ರಾಣಕ್ಕೇ ಸಂಚಕಾರ ಬಂದಿತು.

ಪೂತನಿ : ಕಂಸನಿಂದ ಪ್ರೇರಿತಳಾಗಿ ಕೃಷ್ಣನನ್ನು ಕೊಲ್ಲಲು ಬಂದ ಒಬ್ಬ ರಾಕ್ಷಸಿ, ತನ್ನ

ವಿಷಭರಿತ ಮೊಲೆಗಳಿಂದ ಕೃಷ್ಣನಿಗೆ ಹಾಲೂಡಲು ಅವನು ಹಾಲು ಕುಡಿಯುವ ನೆವದಲ್ಲಿ ಅವಳ ಪ್ರಾಣವನ್ನೇ ಹೀರಿ ಬಿಡುತ್ತಾನೆ (ಭಾಗವತ ೧೦, ಅ. ೬).

ನು. ೨ : **ಯಮಳಾರ್ಜುನರ ಪಾಲಿಸಿತೊ..... :** ಕುಬೇರನ ಮಕ್ಕಳಾದ ನಳಕೂಬರ ಮತ್ತು ಮಣಿಗ್ರೀವರು ತಮ್ಮ ಅಹಂಕಾರದಿಂದ ನಾರದರ ಶಾಪಕ್ಕೆ ಗುರಿಯಾಗಿ ಗೋಕುಲದಲ್ಲಿ ಅವಳಿ ಮತ್ತಿ ಮರಗಳಾಗಿ ರೂಪತಾಳುತ್ತಾರೆ. ಶ್ರೀಕೃಷ್ಣ ತನ್ನ ಸೊಂಟಕ್ಕೆ ಕಟ್ಟಿದ್ದ ಒರಳಿನ ಸಮೇತ ಆ ಅವಳಿ ಮರಗಳ ಮಧ್ಯೆ ನುಸುಳಿದಾಗ ಮರಗಳು ಮುರಿದು ಬಿದ್ದು ಕುಬೇರನ ಮಕ್ಕಳಿಗೆ ಶಾಪ ವಿಮೋಚನೆಯಾಗುತ್ತದೆ (ಭಾಗವತ ೧೦, ಅ. ೧೦).

ಶಕಟಾದ್ಯರನು ಮೂಲನಾಶನ ಮಾಡಿತೊ : ಕಂಸನಿಂದ ಕೃಷ್ಣನ ಕೊಲೆಗೆ ನಿಯೋಜಿಸಲ್ಪಟ್ಟ ಶಕಟನೆಂಬ ಈತ ಬಂಡಿಯ ರೂಪದಲ್ಲಿ ಬರಲು, ಕೃಷ್ಣ ಅವನನ್ನು ಒದೆಯುತ್ತಾನೆ. ಆಗ ಬಂಡಿಯ ರೂಪದಲ್ಲಿದ್ದ ಶಕಟಾಸುರನು ಪುಡಿಪುಡಿಯಾಗಿ ಸಾಯುತ್ತಾನೆ (ಭಾಗವತ ೧೦, ಅ. ೭).

ಮುಚುಕುಂದನಿಗೆ ಪ್ರಾಣವನಪಹರಿಸಿತೊ : ಸೂರ್ಯವಂಶದ ಮಾಂಧಾತ ರಾಜನ ಮಗನಾದ ಮುಚುಕುಂದ ಒಂದು ಗವಿಯಲ್ಲಿ ಮಲಗಿದ್ದಾಗ, ಗಗನ ಮಹರ್ಷಿ ಮಗನೂ ಅತ್ಯಂತ ಪರಾಕ್ರಮಿಯೂ ಆದ ಕಾಲಯವನ ಕೃಷ್ಣನನ್ನು ಬೆನ್ನಟ್ಟಿ ಬಂದ. ಅವನನ್ನು ಎದುರಿಸಲಾರದ ಕೃಷ್ಣ ಮುಚುಕುಂದ ಮಲಗಿದ್ದ ಗವಿಯೊಳಗೆ ನುಸುಳಿದ. ಗವಿಯನ್ನು ಹೊಕ್ಕು ಕಾಲಯವನ ಮಲಗಿದ್ದ ಮುಚುಕುಂದನನ್ನೇ ಕೃಷ್ಣನೆಂದು ಭಾವಿಸಿ ತನ್ನ ಎಡಗಾಲಿನಿಂದ ಒದೆಯಲಾಗಿ, ಎಚ್ಚೆತ್ತ ಮುಚುಕುಂದನ ದೃಷ್ಟಿಗೆ ಸಿಲುಕಿ ಕಾಲಯವನ ಬೂದಿಯಾದ (ಪುನಾಚೂ. ಪು. ೯೬).

ನು. ೩ : **ಒಂದೆ ವಚನವೆ.... ತಂದಿಟ್ಟಿತೊ :** ವಿಷ್ಣು ವಾಮನಾವತಾರಿಯಾಗಿ ಬಲಿಚಕ್ರವರ್ತಿಯನ್ನು ಮೂರಡಿ ಭೂಮಿಯನ್ನು ದಾನವಾಗಿ ಬೇಡಿ, ಮೂರನೆಯ ಅಡಿಯನ್ನು ಅವನ ತಲೆಯ ಮೇಲೆ ಇರಿಸಿ ಅವನನ್ನು ಪಾತಾಳಕ್ಕೆ ಮೆಟ್ಟಿದನು (ಪು. ನಾ. ಚೂ. ಪು. ೫೭೫ ಮತ್ತು ೪೩೫). ಇದರಿಂದ ಇಂದ್ರಾದಿ ದೇವತೆಗಳಿಗೆ ಆನಂದವಾಯಿತು. ಬಲಿಯ ತಂದೆಯಾದ ವಿರೋಚನನಿಗೆ ದುಃಖವಾಯಿತು.

ಪೌಂಡ್ರಕರಸನ ಮಂದಭಾಗ್ಯನ ಮಾಡಿತೊ : ಯಾದವರ ಪೌಂಡ್ರಕನೆಂಬುವವನು (ವಸುದೇವನೆಂಬ ರಾಜನ ಮಗ) ಶ್ರೀಕೃಷ್ಣನಂತೆಯೇ ತಾನೂ ಕೀರ್ತಿವಂತನಾಗಬೇಕೆಂಬ ದುರಾಸೆಯಿಂದ ಅವನಂತೆಯೇ ಶಂಖಚಕ್ರಗಳನ್ನು ಧರಿಸಿ, ಕೃಷ್ಣನ ಮೇಲೆ ಯುದ್ಧಕ್ಕೆ ಹೋಗಿ ಸೋತು, ಶಿವನನ್ನು ತಪಸ್ಸಿ ನಿಂದ ಮೆಚ್ಚಿಸಿ ಅನೇಕ ಶಸ್ತ್ರಾಸ್ತ್ರಗಳನ್ನು ಪಡೆದು ಎಲ್ಲವೂ ವ್ಯರ್ಥವಾಗಲು, ಕಡೆಗೆ ಕಾಶಿರಾಜನನ್ನು ಮೊರೆಹೊಕ್ಕು ಆತನೊಂದಿಗೆ ತಾನೂ ಕೃಷ್ಣನಿಂದ ಹತನಾದ (ಪುನಾಚೂ. ಪು. ೪೨೦).

ಕೇಶಿಗೆ ಮರಣವೆ ಒದಗಿತೊ : ಕಂಸನ ಪರಿವಾರಕ್ಕೆ ಸೇರಿದ ಒಬ್ಬ ರಾಕ್ಷಸ. ಇವನು ಕುದುರೆಯ ರೂಪತಾಳಿ, ಗೋಕುಲದಲ್ಲಿ ಬಲರಾಮಕೃಷ್ಣರನ್ನೂ, ಗೊಲ್ಲ ಹುಡುಗರನ್ನೂ ಪೀಡಿಸಲಾಗಿ, ಕೃಷ್ಣ ಇವನನ್ನು ಕೊಂದ (ಪುನಾಚೂ. ಪು. ೧೫೯).

೧೫೪

ಉಡುಪಿಯ ಶ್ರೀಕೃಷ್ಣನ ಸ್ತೋತ್ರ. ಕೃಷ್ಣನ ಕೊಳಲಗಾನವನ್ನು ಕೇಳುತ್ತಾ, ಆತನ ಸ್ಪರ್ಶಸುಖವನ್ನು ಅನುಭವಿಸುತ್ತಾ ಅವನ ರೂಪವನ್ನು ಆಸ್ವಾದಿಸುತ್ತಾ ಸುಖಿಸಿದ್ದಾರೆ, ಗೋಪಾಲದಾಸರು. ಉಡುಪಿಯ ಬಾಲಕೃಷ್ಣನನ್ನು 'ಮಕ್ಕಳ ಮಾಣಿಕ್ಯ' ಎಂದಿದ್ದಾರೆ.

ನು. ೩ : ದ್ವಾಪರಯುಗದಲ್ಲಿ ಗೋಪಾಲರ ಒಡನಾಟ ಅಪೂರ್ಣವಾಯಿತೆನಿಸಿ, ಅಂದಿನ ಗೋವುಗಳೂ ಗೋಪಾಲಕರೂ ಆಗಿದ್ದವರನ್ನು ಇಂದಿನ ಸನ್ಯಾಸಿಗಳನ್ನಾಗಿ ಮಾಡಿ ಅವರಿಂದ ಸೇವೆಯನ್ನು ಕೈಗೊಳ್ಳುತ್ತಿದ್ದಾನೆ.

ನು. ೪ : ಅಣಿಮಾದಿ ಅಷ್ಟಾಂಗಯೋಗ (ನೋಡಿ : ಕೀ. ೧೭೧ರ ಟಿಪ್ಪಣಿ).

ಫಣಿಫಣದಲ್ಲಿ ನಾಟ್ಯವಾಡಿ – ಕಾಳಿಂಗಮರ್ದನ ಪ್ರಸಂಗ (ನೋಡಿ : ಕೀ. ೧೫೧ ಟಿಪ್ಪಣಿ).

ನು. ೫ : 'ಭಾವದಂತೆ ದೇವ' ಅನ್ನುವ ಹಾಗೆ ಶ್ರೀಹರಿ ಅವರವರ ಭಾವಕ್ಕೆ ತಕ್ಕ ಆಕಾರನಾಗಿ, ಅವರವರ ಇಷ್ಟರೂಪನಾಗಿ ತೋರುತ್ತಾನೆ.

ನು. ೬ : ಶ್ವೇತದ್ವೀಪ, ಅನಂತಾಸನ, ವೈಕುಂಠ – ಶ್ರೀಹರಿಯ ತ್ರಿಧಾಮಗಳು.

೧೫೫

ಇದು ಶ್ರೀಹರಿಯ ಸರ್ವವ್ಯಾಪಕತ್ವವನ್ನು ಕುರಿತ ಸುಳಾದಿ. ಸಿರಿಪರಮೇಷ್ಟಿಗಳಾದಿಯಾಗಿ ಎಲ್ಲರಲ್ಲಿಯೂ ಇದ್ದು ಎಲ್ಲಕ್ಕೂ ಪ್ರೇರಕ ಶ್ರೀಹರಿ.

ನು. ೧ : **ನಿನಗೆ ತನಗೆ..... ಏನೆಂದೆ ಹರಿಯೆ** : ಅದ್ವೈತಮತ ಖಂಡನೆ.

ನು. ೨ : ವೇದದಲ್ಲಿ ಬರುವ ಸ್ವರೂಪ ವರ್ಣನೆ. 'ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ' (ಋಗ್ವೇದ ಮಂ. ೧೦).

ನಿಗಮವ ತಂದಂಥ ನಗಧರನು ನೀನೆ : ಶ್ರೀಹರಿಯ ಮತ್ಸ್ಯ ಹಾಗೂ ಕೂರ್ಮಾವತಾರಗಳ ವರ್ಣನೆ. ಸೋಮಕನೆಂಬ ರಾಕ್ಷಸ ವೇದಗಳನ್ನು ಅಪಹರಿಸಿ ಪ್ರಳಯ ಜಲದಲ್ಲಿ ಅಡಗಿದ್ದಾಗ ವಿಷ್ಣು ಮತ್ಸ್ಯರೂಪ ತಾಳಿ ವೇದಗಳನ್ನು ಹಿಂದಕ್ಕೆ ತರುತ್ತಾನೆ. ದೇವಾಸುರರು ಅಮೃತಕ್ಕಾಗಿ, ಮಂದರ ಪರ್ವತವನ್ನು ಕಡೆಗೋಲಾಗಿಯೂ ವಾಸುಕಿಯನ್ನು ಹಗ್ಗವಾಗಿಯೂ ಮಾಡಿಕೊಂಡು ಸಮುದ್ರವನ್ನು ಕಡೆದಾಗ, ಭಾರದಿಂದ ಆ ಪರ್ವತ ಮೆಲ್ಲನೆ ಮುಳುಗಲಾರಂಭಿಸಿತು. ಆಗ ವಿಷ್ಣು ಕೂರ್ಮರೂಪಿಯಾಗಿ ಪರ್ವತವನ್ನು ಬೆನ್ನ ಮೇಲೆ ಧರಿಸಿ ನಿಲ್ಲುತ್ತಾನೆ (ಭಾಗವತ ೮. ಅ. ೨೪ ; ಭಾಗವತ ೮, ಅ. ೭).

ಜಗವನು ತಂದಂಥ ಅಸುರಾಂತಕ ನೀನೆ : ಹರಿಯ ವರಾಹಾವತಾರದ ನಿರೂಪಣೆ. ಹಿರಣ್ಯಾಕ್ಷ ಭೂಮಿಯನ್ನು ಚಾಪೆಯಂತೆ ಸುತ್ತಿಕೊಂಡು ಸಮುದ್ರದ ತಳದಲ್ಲಿದ್ದಾಗ ವಿಷ್ಣು

ವರಾಹಾವತಾರವನ್ನೆತ್ತಿ ಅವನನ್ನು ಸಂಹರಿಸಿ, ಭೂಮಿಯನ್ನು ತನ್ನ ಕೋರೆದಾಡೆಗಳಿಂದ ಎತ್ತಿ ತಂದ (ಭಾಗವತ ३, ಅ. ೧३).

ಕಂಬದಿ ಬಂದ ನರಸಿಂಹನು ನೀನೆ : ಹರಿಯ ನರಸಿಂಹಾವತಾರ. ಬಾಲಕ ಪ್ರಹ್ಲಾದನ ಕರೆಗೆ ಓಗೊಟ್ಟು ನರಸಿಂಹಾವತಾರ ತಾಳಿ ಕಂಬದಿಂದ ಹೊರಕ್ಕೆ ಬಂದು, ಹಿರಣ್ಯಕಶಿಪುವನ್ನು ಸಂಹರಿಸಿದನು (ಭಾಗವತ ೭, ಅ. ೮).

ಜಗವನೋರಡಿ.....ನೀನೆ : ಹರಿಯ ವಾಮನಾವತಾರ. ಬಲಿ ಚಕ್ರವರ್ತಿಯಲ್ಲಿಗೆ ವಾಮನಾವತಾರಿಯಾಗಿ ಬಂದ ವಿಷ್ಣು, ಮೂರು ಹೆಜ್ಜೆ ಅಳತೆಯ ಭೂಮಿಯನ್ನು ದಾನವಾಗಿ ಬೇಡಿ, ಆ ನೆಪದಲಿ ಅವನನ್ನು ಸುತಳಕ್ಕೆ ತುಳಿದ (ಭಾಗವತ ೮, ಅ. ೧३).

ಮಗನಾಗಿ ಮಾತೆಯ....ನೀನೆ : ಹರಿಯ ಪರಶುರಾಮಾವತಾರ. ತಂದೆ ಜಮದಗ್ನಿಯ ಅಪ್ಪಣೆಗೆ ಅನುಗುಣವಾಗಿ ತಾಯಿ ರೇಣುಕೆಯ ಕೊರಳನ್ನು ಕಡಿದು, ಮತ್ತೆ ತಂದೆಯಿಂದಲೇ ವರ ಪಡೆದು ಆಕೆಯನ್ನು ಬದುಕಿಸಿದ (ಪುನಾಚೂ. ಪು. ३೯३).

ರಾವಣಾಂತಕನು ನೀನೆ : ರಾವಣನನ್ನು ಸಂಹಾರ ಮಾಡಿದ ಹರಿಯ ರಾಮಾವತಾಗದ ವಿವರಣೆ.

ಕಂಸನಕೊಂದ ಶ್ರೀಕೃಷ್ಣನು ನೀನೆ : ಉಗ್ರಸೇನನ ಮಗನಾದ ಕಂಸನನ್ನು ಕೊಂದ ಕೃಷ್ಣಾವತಾರದ ನಿರೂಪಣೆ.

ಮೃಗಧರಗೊಲಿದು....ಬೌದ್ಧಾವತಾರನು ನೀನೆ : ಹರಿಯ ಬೌದ್ಧಾವತಾರ. ದೇವದ್ವೇಷಿಗಳು ಹೆಚ್ಚಿದ ಕಲಿಯುಗದ ಆದಿಯಲ್ಲಿ ಜಿನನೆಂಬಾತನ ಮನೆಯಲ್ಲಿ ವಿಷ್ಣು ಅವತರಿಸಿದ (ಭಾಗವತ ೧, ಅ. ३). ತ್ರಿಪುರಾಸುರರ ಪತ್ನಿಯರ ಪಾತಿವ್ರತ್ಯಕ್ಕೆ ಭಂಗತರುವ ಉದ್ದೇಶದಿಂದ ಅವರೆದುರಿಗೆ ಬೆತ್ತಲಾಗಿ ಬಂದನೆಂದೂ ಆ ಮೂಲಕ ತ್ರಿಪುರಾಸುರರಿಗೆ ಕೇಡು ಸಂಭವಿಸಿ ಮರಣ ಸನ್ನಿಹಿತರಾದರೆಂದೂ ಹೆಂಗಸರ ಹಾಡುಗಳಲ್ಲಿ ಉಲ್ಲೇಖವಿದೆ. ಈ ತ್ರಿಪುರಾಸುರರ ಸಂಹಾರ ಕಾಲದಲ್ಲಿ ಶಿವನದು ಪ್ರಧಾನಪಾತ್ರ.

ಹಯವೇರಿದ ಕಲ್ಕಿಯು ನೀನಾನೆ : ಕಲಿಯುಗದಲ್ಲಿ ಅನಾಚಾರಗಳು ಮೇರೆಮೀರಿ ದಾಗ ವಿಷ್ಣು ಕಲ್ಕಿಯ ಅವತಾರದಿಂದ ಕುದುರಿಯೇರೆ ಬಂದ (ಭಾಗವತ ೧೨, ಅ. ೨).

೧३೬

ಉಡುಪಿಯ ಕೃಷ್ಣದೇವರನ್ನು ಕಂಡ ಗೋಪಾಲದಾಸರಿಗೆ ತಮ್ಮ ಅವಿದ್ಯೆಯ ಆವರಣ ಕಳಚಿಬಿದ್ದಂತೆನಿಸಿದೆ. ಅದಕ್ಕೆ ಕಾರಣ ಆ ಪುಣ್ಯಕ್ಷೇತ್ರದಲ್ಲಿದ್ದ ಹರಿಭಕ್ತರ ಚರಣರಜವೋ ಮಧ್ವಮುನಿ ಸರೋವರವೋ ತೇರನೇರಿ ಮೆರೆವ ಕೃಷ್ಣನ ಮೂರುತಿಯ ದರ್ಶನವೋ ತಿಳಿಯದೆಂದು ಅಚ್ಚರಿಪಟ್ಟಿದ್ದಾರೆ.

೧೫೭

ಧನ ಧಾನ್ಯ ಅಷ್ಟೈಶ್ವರ್ಯಗಳು, ಸತಿ ಸುತ ಬಾಂಧವರು ಶಾಶ್ವತವಾಗಿ ಉಳಿಯುವಂಥವರಲ್ಲ ಎಂಬ ಅಭಿಪ್ರಾಯವನ್ನು ಪುರಾಣ ವ್ಯಕ್ತಿಗಳ ದೃಷ್ಟಾಂತದಿಂದ ಇಲ್ಲಿ ಸ್ಪಷ್ಟೀಕರಿಸಲಾಗಿದೆ. ತಮಗೆ ಇನ್ನಾವ ಐಶ್ವರ್ಯವೂ ಬೇಡವೆಂದೂ ಪರರನ್ನು ಬೇಡದಂತೆ ಮಾಡಿದರೆ ಸಾಕೆಂದೂ ಪ್ರಾರ್ಥಿಸಿದ್ದಾರೆ.

ನು. ೧ : **ಧ್ರುವರಾಯ** : ಉತ್ತಾನಪಾದರಾಯನ ಹಿರಿಯ ಹೆಂಡತಿಯಾದ ಸುನೀತಿಯ ಮಗ. ತನ್ನ ಚಿಕ್ಕಮ್ಮ ಸುರುಚಿಯ ಅನಾದರಕ್ಕೆ ಒಳಗಾಗಿ, ತಾಯಿ ಸುನೀತಿಯ ಉಪದೇಶದಂತೆ ಯಮುನಾತೀರದ ಮಧುವನಕ್ಕೆ ಬಂದು ಒಂಟಿಗಾಲಿನಲ್ಲಿ ನಿಂತು ತಪಸ್ಸು ಮಾಡಿ ಹರಿಯನ್ನು ಒಲಿಸಿಕೊಳ್ಳುತ್ತಾನೆ. (ಭಾಪವತ ೪, ಅ. ೮, ೧೪) **ಪ್ರಹ್ಲಾದ** : (ನೋಡಿ ಕೀ. ೧೫೩ರ ಟಿಪ್ಪಣಿ).

ನು. ೨ : **ವಾಲಿ** : ಇಂದ್ರನ ಮಗ ಸುಗ್ರೀವನ ಅಣ್ಣ. ಅಣ್ಣ ತಮ್ಮಂದಿರಿಗೆ ದ್ವೇಷ ಬೆಳೆದು ಸುಗ್ರೀವನ ಇಚ್ಛೆಯಂತೆ ರಾಮ ವಾಲಿಯನ್ನು ಸಂಹರಿಸಿದ (ರಾಮಾಯಣ, ಕಿಷ್ಕಿಂಧಾಕಾಂಡ).

ನು. ೩ : **ದ್ಯುನಾಮಕ** : ಅಷ್ಟವಸುಗಳಲ್ಲಿ ಒಬ್ಬ. ವಸಿಷ್ಠಮುನಿಯ ಧೇನುವನ್ನು ಅಪಹರಿಸಲು ಪ್ರಯತ್ನಪಟ್ಟು ಮನುಷ್ಯನಾಗಿ ಜನಿಸುವಂತೆ ಶಾಪವನ್ನು ಪಡೆದು ಭೀಷ್ಮಾಚಾರ್ಯನಾಗಿ ಹುಟ್ಟಿದ (ಪುನಾಚೂ. ಪು. ೩೩೦).

ನು. ೪ : **ಗಜರಾಜ** : ಪೂರ್ವದ ಇಂದ್ರದ್ಯುಮ್ನನೆಂಬ ವಿಷ್ಣುಭಕ್ತ ಅಗಸ್ತ್ಯರ ಶಾಪದಿಂದ ಆನೆಯ ಜನ್ಮ ತಾಳುತ್ತಾನೆ. ತ್ರಿಕೂಟ ಪರ್ವತದ ತಪ್ಪಲಲ್ಲಿದ್ದ ಈ ಆನೆ ಒಮ್ಮೆ ಪದ್ಮ ಸರೋವರಕ್ಕೆ ಹೋಗಿ ನೀರು ಕುಡಿಯುತ್ತಿದ್ದಾಗ ಒಂದು ಮೊಸಳೆ ಅದರ ಕಾಲನ್ನು ಹಿಡಿದುಬಿಟ್ಟಿತು. ಸಾವಿರವರ್ಷ ಕಾಲ ಸತತವಾಗಿ ಹೋರಾಡಿದರೂ ಯಾರಿಂದಲೂ ಅದನ್ನು ಬಿಡಿಸಲಾಗಲಿಲ್ಲ. ಆಗ ಆನೆ ಶ್ರೀಹರಿಯನ್ನು ಪ್ರಾರ್ಥಿಸಲು ಅವನು ಚಕ್ರಾಯುಧ ದಿಂದ ಮೊಸಳೆಯನ್ನೂ ಸೀಳಿ, ಗಜೇಂದ್ರನನ್ನೂ ರಕ್ಷಿಸುತ್ತಾನೆ (ಭಾಗವತ ೮, ಅ.೪).

ನಹುಷ : ಇಂದ್ರಪಟ್ಟವನ್ನೇರಿದ್ದ ನಹುಷ ಒಮ್ಮೆ ಶಚೀದೇವಿಯನ್ನು ಕಾಣಲು ಸಪ್ತಋಷಿಗಳು ಹೊತ್ತು ತರುತ್ತಿದ್ದ ಪಲ್ಲಕ್ಕಿಯಲ್ಲಿ ಹೊರಟನು. ದಾರಿಯಲ್ಲಿ ಅಗಸ್ತ್ಯರನ್ನು ಹಿಯ್ಯಾಳಿಸಲು ಅವರಿಂದ ಶಾಪಗ್ರಸ್ತನಾಗಿ ಆ ಕ್ಷಣದಲ್ಲೇ ಸರ್ಪರೂಪ ತಾಳಿದನು (ಪುನಾಚೂ. ಪು. ೩೭೧-೩೭೨).

೧೫೮

ರುಕ್ಮಿಣಿ ಕೃಷ್ಣರ ಸರಸಸಲ್ಲಾಪದ ಚಿತ್ರಣ. ಆ ಮೂಲಕ ಶ್ರೀಹರಿಯ ಗುಣಾತಿ ಶಯಗಳನ್ನು ಬಣ್ಣಿಸುತ್ತಾರೆ.

ನು. ೪ : **ನಾ ನಿನ್ನ..... ತಿಳಿಯದ್ದೋದೆ** : ಲಕ್ಷ್ಮೀದೇವಿ ಶ್ರೀಹರಿಯ ಪಾದದ ಕಿರುಬೆರಳಿನ ಉಗುರನ್ನು ಕೂಡ ತಿಳಿಯಲು ಅಸಮರ್ಥಳು.

೧೫೯

ಜೀವಿ ಒಂಟಿಯಲ್ಲ ; ಶ್ರೀಹರಿ ಅವನ ಒಳಹೊರಗೆ ವ್ಯಾಪಿಸಿ, ನಾನಾ ರೂಪದಿಂದ ಅವನಲ್ಲಿ ವಾಸವಾಗಿದ್ದು ಕ್ಷಣಕ್ಷಣಕ್ಕೂ ಅವನಿಂದ ವಿವಿಧ ಕ್ರಿಯೆಗಳನ್ನು ಮಾಡಿಸುತ್ತಿರುತ್ತಾನೆಂಬುದು ಈ ಸುಳಾದಿಯ ವಸ್ತು.

ನು. ೪ : ದಶಾವತಾರದ ವರ್ಣನೆ (ವಿವರಗಳಿಗೆ ನೋಡಿ : ಕೀ. ೧೫೫ರ ಟಿಪ್ಪಣಿ).

ನು. ೬ : 'ಬೃಹತೀಸಹಸ್ರ'ದಲ್ಲಿ ಬರುವ ಪರಮಾತ್ಮನ ರೂಪಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ.

೧೬೦

ನರಸಿಂಹದೇವನ ಸ್ತುತಿ.

ತ್ರಿಯಂಬಕಾದ್ಯಮರೇಶ : ಈಶ್ವರನೇ ಮೊದಲಾದ ದೇವತೆಗಳ ಒಡೆಯ.

ಭಯ.... ಮಾರ್ತಾಂಡ : ಭಯವೆಂಬ ಕತ್ತಲೆಗೆ ಸೂರ್ಯ.

ಸುಷುಮ್ನಾನಾಡಿಸ್ಥಿತ : ಮಧ್ಯಭಾಗದ ನಾಡಿಯಲ್ಲಿರುವವನು.

೧೬೧

ಅಂಟಿಯೂ ಅಂಟದಂತಿರುವ ಶ್ರೀಕೃಷ್ಣನ ಲೀಲಾ ವಿನೋದಗಳನ್ನು ಕಂಡು ದಾಸರು ಅಚ್ಚರಿಯಿಂದ ವಂದಿಸಿದ್ದಾರೆ.

೧೬೨

ಗೋಪಿಯರ ಪೂರ್ವಜನ್ಮದ ವ್ರತ ಸಾರ್ಥಕವಾಯಿತೆನ್ನುವಂತೆ, ಕೃಷ್ಣ ಅವರೊಡನೆ ರಾಸಕ್ರೀಡೆಯನ್ನಾಡಿದ ಚಿತ್ರಣ.

ನು, ೧–೪ : ಕೃಷ್ಣನ ರೂಪಾಲಂಕಾರಗಳ ವರ್ಣನೆ.

ನು. ೫–೯ : ರಾಸಕ್ರೀಡೆಯ ವರ್ಣನೆ

೧೬೩

ಮಂತ್ರಾಲಯದ ಶ್ರೀರಾಘವೇಂದ್ರ ಮಹಾಪೀಠಕ್ಕೆ ಗೋಪಾಲದಾಸರ ಕಾಲದಲ್ಲಿ

ಅಧಿಕಾರಿಗಳಾಗಿದ್ದ ಶ್ರೀವಸುಧೇಂದ್ರರು ಪೂಜಿಸುತ್ತಿದ್ದ ಮೂಲರಾಮ ದೇವರ ವಿಗ್ರಹವನ್ನು ಕುರಿತ ಸುಳಾದಿ.

ನು. ೧ : **ಕ್ಷರ ಅಕ್ಷರದಿಂದ ವಂದಿತ** : ಚೇತನದಲ್ಲಿ ಎರಡು ವಿಧ. ಕ್ಷರ – ಅಕ್ಷರ. ಲಕ್ಷ್ಮೀದೇವಿ ಅಕ್ಷರಳು ; ಉಳಿದ ಜೀವರು ಕ್ಷರರು. ಲಕ್ಷ್ಮೀದೇವಿ ಈ ಎರಡು ರೀತಿಯ ಚೇತನರಲ್ಲಿ ವ್ಯಾಪ್ತಳು.

ಅರಿತು ಫಲವ ತ್ರಿವಿಧರಿಗೆ ಇಪ್ಪುವ ದಾತ : ಮುಕ್ತಿಯೋಗ್ಯರು, ತಮೋಯೋಗ್ಯರು, ನಿತ್ಯಸಂಸಾರಿಗಳೆಲ್ಲರಿಗೂ ಅವರವರ ಯೋಗ್ಯತೆಯರಿತು ಫಲ ಕೊಡುತ್ತಾನೆ ಶ್ರೀಹರಿ.

ಧರೆ ಈರೇಳು : ಹದಿನಾಲ್ಕು ಲೋಕಗಳು (ನೋಡಿ : ಕೀ. ೧೨೩೮ ಟಿಪ್ಪಣಿ).

ನು. ೨ : **ಪಾದಸೋಕಿದ ಶಿಲೆಯ ಪಾವನ್ನ ಮಾಡಿದ** : ರಾಮಾಯಣದ ಬಾಲಕಾಂಡದಲ್ಲಿ ಬರುವ ಅಹಲ್ಯೆಯ ಉದ್ಧರಣದ ಪ್ರಸಂಗ.

ನು. ೩–೪ : ವಿಗ್ರಹದ ಮಹತ್ತ್ವ, ಪೂಜೆಯ ಫಲಾಫಲಗಳನ್ನು ಹೇಳಿದ್ದಾರೆ.

ನು. ೫ : ರಾಮನ ನಖಶಿಖಾಂತ ವರ್ಣನೆ.

೧೬೪

ಇಲ್ಲಿ ದಾಸರು ತಾವು ಹಿಂದಿನ ರಾತ್ರಿ ಕನಸಿನಲ್ಲಿ ಒಬ್ಬ ಚೆನ್ನಿಗ ಪುರುಷನನ್ನು ಕಂಡುದಾಗಿ ಹೇಳಿ, ಅವನು ಯಾರೆಂದು ಅಚ್ಚರಿಯಿಂದ ಪ್ರಶ್ನಿಸಿದ್ದಾರೆ. ಅವನ ರೂಪಾತಿಶಯಗಳನ್ನು ವರ್ಣಿಸುವ ಮೂಲಕ ಶ್ರೀಹರಿಯ ದಶಾವತಾರಗಳನ್ನು ನಿರೂಪಿಸಿರುವ ದಾಸರ ಜಾಣ್ಮೆ ಮೆಚ್ಚುವಂಥದು.

೧೬೫

ಶ್ರೀಹರಿಯ ಅನಂತರೂಪಗಳನ್ನೂ ಅಪಾರ ಕರುಣೆಯನ್ನೂ ಅವನು ಅಪ್ರಾಕೃತನೆಂಬ ಅಂಶವನ್ನೂ ಈ ಸುಳಾದಿಯಲ್ಲಿ ವಿವರಿಸಿ ಅಂತಹ ಶ್ರೀಹರಿ ತಮ್ಮನ್ನು ಕಾಪಾಡಬೇಕೆಂಬುದು ದಾಸರ ಆಸೆ.

ನು. ೧ : ಶ್ರೀಹರಿಯ ದಶಾವತಾರಗಳಾದಿಯಾಗಿ ಕೇಶವ, ಅಜಾದಿ ಹಲವು ಅವತಾರಗಳ ವರ್ಣನೆ. ಈ ನುಡಿಯ ಮೊದಲ ಹತ್ತು ಸಾಲುಗಳಲ್ಲಿ ಒಂದೊಂದು ದಶಾವತಾರದ ಒಂದೊಂದು ಅವತಾರವನ್ನು ಕ್ರಮವಾಗಿ ಸೂಚಿಸುತ್ತದೆ.

ನು. ೨ : ಹರಿಯ ವಿಶ್ವರೂಪದ ಕಲ್ಪನೆ.

ನು. ೪ : ಜನ್ಮಜನ್ಮಾಂತರಗಳಲ್ಲಿ ತಮ್ಮ ಜೊತೆಗಿದ್ದು ದಣಿಸಿದ ಶ್ರೀಹರಿ, ತಮಗೆ ಮನುಷ್ಯಜನ್ಮ ಪ್ರಾಪ್ತವಾಗಿರುವಾಗ ಅವನ ಸ್ಮರಣೆಯನ್ನಿತ್ತು ಸಾಧನೆ ಮಾಡಿಸ ಬೇಕೆಂಬುದಾಗಿ ಪ್ರಾರ್ಥಿಸಿದ್ದಾರೆ.

ನು. ೫ : ಶ್ರೀಹರಿ ಪ್ರಾಕೃತ ದೇಹರಹಿತನೆಂದರಿತು ಪೂಜಿಸಿದವರಿಗೆ ಅವನು ಮುಕ್ತಿಯನ್ನು ನೀಡುತ್ತಾನೆಂಬ ಭಾವ.

ನು. ೬ : ಧನ, ವನಿತೆ ಇತ್ಯಾದಿ ಆಸೆಗಳನ್ನುಳಿದ ನಿಷ್ಕಾಮ ಭಕ್ತಿಯನ್ನು ಕೊಡಬೇಕೆಂದು ಶ್ರೀಹರಿಯಲ್ಲಿ ದಾಸರು ಪ್ರಾರ್ಥಿಸಿದ್ದಾರೆ.

ನು. ೭ : ಜಗತ್ತಿನ ಎಲ್ಲ ವ್ಯಾಪಾರಗಳಿಗೂ ಶ್ರೀಹರಿಯೇ ಮೂಲ ಎಂಬ ಭಾವನೆ.

೧೬೬

ಗೋಪಾಲದಾಸರ ದೈವಸಾಕ್ಷಾತ್ಕಾರದ ಅಭಿವ್ಯಕ್ತಿ ಈ ಕೀರ್ತನೆ. ಬಡವರಾದ ತಮ್ಮ ಅಂತರಂಗದ ಮನೆಗೆ ಬಂದಂತಹ ವಿಠಲನ ಸುಳಿಗುರುಳು, ಸಿರಿಕಿರೀಟ, ತಿಲಕ, ಕೊರಳ ಪಚ್ಚೆಪದಕಾದಿಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ.

೧೬೭

ತಮ್ಮ ಮನದಂಗಳದಲ್ಲಿ ಆಡಲು ಬಂದಿದ್ದ ಚೆಲುವನಾದ ಶ್ರೀಹರಿಯನ್ನು ಮಧುರಭಾವದಿಂದ ವರ್ಣಿಸಿದ್ದಾರೆ.

೧೬೮

ಇಲ್ಲಿ ಶ್ರೀನಿವಾಸನನ್ನು ದಾಸರು ತಮ್ಮ ಮನೋಮಂದಿರಕ್ಕೆ ಬಾರೆಂದು ಆತ್ಮೀಯತೆಯಿಂದ ಕರೆದಿದ್ದಾರೆ.

ನು. ೩ : **ಮಡುವಿನೊಳಗೆ.... ಬಿಡಿಸಿದನೆ** : ಗಜೇಂದ್ರಮೋಕ್ಷ (ನೋಡಿ : ಕೀ. ೧೫೭ರ ಟಿಪ್ಪಣಿ).

೧೬೯

ಮಧುರಭಾವದ ಕೀರ್ತನೆಯಿದು. ಕೃಷ್ಣನ ತುಂಟಾಟಗಳನ್ನು ದಾಸರು ಒಬ್ಬ ಗೋಪಿಯಾಗಿ ಯಶೋದೆಯ ಮುಂದೆ ಬಣ್ಣಿಸಿ, ಅವನಿಗೆ ಸರಿಯಾಗಿ ಬುದ್ಧಿ ಕಲಿಸೆಂದು ಹೇಳಿ ಅವಳ ಕಾಲಿಗೆರಗಿದ್ದಾರೆ.

೧೭೦

ಈ ಸುಳಾದಿಯಲ್ಲಿ ದಯೆ, ಧರ್ಮ, ಕ್ಷಮೆ, ದಮೆ, ಜ್ಞಾನ, ಧ್ಯಾನ, ಸತ್ಯ, ಇಂದ್ರಿಯ ನಿಗ್ರಹ – ಈ ಭಾವಾಷ್ಟಪುಷ್ಪಗಳು ಆ ಪರಮಾತ್ಮನಿಂದ ಜೀವರಲ್ಲಿ ಮೂಡಿಬಂದಂಥವು

ಎಂದು ತಿಳಿದು, ದೇವನಲ್ಲೇ ಆ ಗುಣಗಳುಂಟು ಎಂಬ ಅರಿವಿನೊಂದಿಗೆ ಶ್ರೀಹರಿಯನ್ನು ಧ್ಯಾನಮಾಡಿದಲ್ಲಿ ಜೀವನ ಉದ್ಧಾರವಾಗುತ್ತದೆ ಎನ್ನುತ್ತಾರೆ ಗೋಪಾಲದಾಸರು.

ನು. ೨ : ಸೃಷ್ಟಿಸ್ಥಿತಿಲಯ ಕರ್ತನಾದ ಶ್ರೀಹರಿಗೆ ಲಯದ ದೋಷವಿಲ್ಲ ; ಅದು ಅವನ ಧರ್ಮ. ಹಂಸಡಿಬಿಕರನ್ನು (ಹಂಸ ಡಿಬಿಕರು ಸಹೋದರರು. ಇಬ್ಬರೂ ಜರಾಸಂಧನ ಮಂತ್ರಿಗಳು. ಕರೂಶ ದೇಶದ ಅರಸರಾಗಿದ್ದರು. ಇವರಿಬ್ಬರೂ ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ, ಶಸ್ತ್ರದಿಂದ ಹತರಾಗದಂತೆ ವರ ಪಡೆದಿದ್ದರು. ಒಮ್ಮೆ ಜರಾಸಂಧ, ಕೃಷ್ಣಬಲರಾಮ ರೊಂದಿಗೆ ಯುದ್ಧಕ್ಕೆ ಹೋಗಿದ್ದಾಗ ಇವರಿಬ್ಬರೂ ಆತನ ಸಂಗಡ ಹೋಗಿದ್ದರು. ಹಂಸ ಮೂರ್ಛಿತನಾಗಿ ನೆಲದ ಮೇಲೆ ಬಿದ್ದಿರಲಾಗಿ ಅವನು ಸತ್ತು ಹೋದನೆಂಬ ಭ್ರಾಂತಿಯಿಂದ ಡಿಬಿಕ ಯಮುನೆಯಲ್ಲಿ ಬಿದ್ದು, ನಾಲಗೆ ಕಿತ್ತುಕೊಂಡು ಪ್ರಾಣ ತ್ಯಾಗಮಾಡಿದ ಎಚ್ಚೆತ್ತ ಹಂಸ, ಈ ವರ್ತಮಾನವನ್ನು ಕೇಳಿ ತಾನೂ ಯಮುನೆಯಲ್ಲಿ ಬಿದ್ದು ಸತ್ತ) (ಪುನಾಚೂ. ಪು. ೨೫೪) ಕೊಂದರೂ ಅವನ ಧರ್ಮಕ್ಕೆ ಚ್ಯುತಿಯಿಲ್ಲ.

ನು. ೫ : **ಸರ್ವಉತ್ತಮದೇವ.....ತುತಿಸಿ ನಲಿದ** : ಇದರ ಹಿನ್ನೆಲೆಯಲ್ಲಿ ಒಂದು ಕತೆಯಿದೆ. ಒಮ್ಮೆ ತ್ರಿಮೂರ್ತಿಗಳಾದ ಹರಿ, ಹರ, ಬ್ರಹ್ಮರಲ್ಲಿ ಯಾರು ದೊಡ್ಡವರೆಂದು ಶ್ರೇಷ್ಠ ಮುನಿಗಳೆಲ್ಲರೂ ಸೇರಿ ತರ್ಕ ಮಾಡತೊಡಗಿದರು. ಅದರ ಇತ್ಯರ್ಥಕ್ಕಾಗಿ ಭೃಗುಮುನಿ ಯನ್ನು ಕರೆಸಿ, ವಿಚಾರಿಸಿ ಬರುವಂತೆ ತಿಳಿಸಿದರು. ಆ ಪ್ರಕಾರ ಭೃಗು ಮೊದಲು ಬ್ರಹ್ಮನಲ್ಲಿಗೆ ಬರಲು, ಆತ ಭೃಗುಮುನಿ ತನಗೆ ನಮಸ್ಕರಿಸದೆ ಅವಮಾನಿಸಿದನೆಂದು ಸಿಟ್ಟಾಗಿ ಮುನಿಯನ್ನು ನಿಂದಿಸಿದನು. ಆಗ ಭೃಗು ಅವನು ತಕ್ಕವನಲ್ಲವೆಂದು ಬಗೆದು, ಈಶ್ವರನಲ್ಲಿಗೆ ಬಂದನು. ಈಶ್ವರ ಭೃಗುವನ್ನು ತಮ್ಮನೆಂಬ ಪ್ರೀತಿಯಿಂದ ತಬ್ಬಿಕೊಳ್ಳಬಂದಾಗ ಮುನಿ ನಿರಾಕರಿಸಿದ. ಈಶ್ವರ ಕೋಪಗೊಂಡು ಭೃಗುವನ್ನು ಸಂಹರಿಸುವುದಕ್ಕೆ ಬಂದ. ಅಲ್ಲಿಂದ ಭೃಗು ವೈಕುಂಠಕ್ಕೆ ಬಂದು, ಅಲ್ಲಿ ಲಕ್ಷ್ಮಿಯ ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದ ವಿಷ್ಣುವನ್ನು ತನ್ನ ಕಾಲಿನಿಂದ ಒದೆದ. ಅವನು ಸ್ವಲ್ಪವೂ ಕೋಪಿಸಿಕೊಳ್ಳದೆ ಕೃತಾರ್ಥಭಾವವನ್ನು ವ್ಯಕ್ತಪಡಿಸಿದ. ಅವನ ಕ್ಷಮಾಗುಣವನ್ನೂ ಸಹನೆಯನ್ನೂ ಕಂಡ ಭೃಗುಮುನಿ ಅವನೇ ಪರತತ್ತ್ವವೆಂದು ಸ್ತುತಿಸಿ ನಲಿದ (ಭಾಗವತ ೧೦, ಅ. ೮೯).

೧೭೧

ವಾತ್ಸಲ್ಯಭಾವದ ಕೃತಿಯಿದು. ಗೋಪಾಲದಾಸರು ತಮಗೆ ಶ್ರೀಹರಿ ಮಗುವಾಗಿ ಕಾಣಿಸಿಕೊಂಡು ಮರೆಯಾದಂತಹ ತಮ್ಮ ಅನುಭವವನ್ನು ಇಲ್ಲಿ ಹೇಳಿದ್ದಾರೆ.

ನು. ೩ : **ಪುಟ್ಟಿದ ಶಿಶುವೆಲ್ಲಿ.....ಎಲ್ಲ ಬಿಟ್ಟವನಿಗೆ** : ಇಲ್ಲಿ ಒಂದು ಶಿಶುವಿನ ಮರಣದ ಸಂಗತಿಯನ್ನು ಹೇಳಿದಂತಿದೆ (?). ಕೊಟ್ಟವನೇ ಕೊಂಡೊಯ್ದನೆಂದು ಮನಸ್ಸನ್ನು ಸ್ತಿಮಿತಕ್ಕೆ ತಂದಕೊಳ್ಳುತ್ತಿರುವಂತೆಯೇ ಶ್ರೀಹರಿ ತಮ್ಮ ಕನಸಿನಲ್ಲಿ ಅದೇ ರೂಪದಲ್ಲಿ ಬಂದು ಸುಳಿದು, ತನ್ನ ಹೆಸರು ಬಾಲಕೃಷ್ಣನೆಂದು ಹೇಳಿ, ಮಾಯವಾದುದನ್ನು ಹೇಳುತ್ತಾರೆ.

ಕೇವಲ ಕನಸಿನಲ್ಲಿ ಕಾಣುವುದಷ್ಟೇ ಪ್ರಾಪ್ತಿಯೋ ಅಥವಾ ಮುಂದೆ ಆತನ ಸಂದರ್ಶನ ಸಾಧ್ಯವೋ ಎಂಬುದಾಗಿ ಉಡುಪಿಯ ಬಾಲಕೃಷ್ಣನನ್ನು ಕೇಳುತ್ತಾರೆ.

ನು. ೪ : ಆ ಕನಸಿನ ರೂಪ ಮನಸ್ಸಿನಲ್ಲಿ ನೆಲೆಯಾಗಿ ನಿಲ್ಲಲಿ ಎಂಬ ಆಸೆಯನ್ನು ವ್ಯಕ್ತಪಡಿಸಿದ್ದಾರೆ.

ನು. ೫ : ಅಜ್ಞರಾದ ತಮ್ಮನ್ನು ದಯಾಮಯನಾದ ಶ್ರೀಹರಿ ಕಾಪಾಡಬೇಕೆನ್ನುತ್ತಾರೆ.

ಜೇನುಕ್ರಿಮಿಗಳ..... ನಿನಗೆ : ಜ್ಞಾನಿಗಳು ಜೇನುನೊಣಗಳ ವಾಂತಿಯನ್ನು ತಂದು ಶ್ರೀಹರಿಗೆ ಸ್ನಾನ ಮಾಡಿಸುತ್ತಾರಂತೆ ! (ಜೇನುತುಪ್ಪಕ್ಕೆ ದಾಸರು ನೀಡುವ ವಿವರಣೆಯಿದು !).

೧೭೨

ಬೇಲೂರು ಚೆನ್ನಕೇಶವನ ಸ್ತುತಿ. ಜಯದೇವನ ಗೀತ ಗೋವಿಂದದ ಲಯವನ್ನು ಈ ಕೀರ್ತನೆಯಲ್ಲಿ ಕಾಣಬಹುದು.

೧೭೩

ಹರಿಯ ಚರಣವನ್ನು ನಂಬಿದವರಿಗೆ ಭಯವಿಲ್ಲ ; ಸ್ಥಿರಪದವಿ ದೊರೆಯುತ್ತದೆಂಬುದು ಈ ಕೀರ್ತನೆಯ ವಸ್ತು. ಇದರಲ್ಲಿ ಹರಿಭಕ್ತನಾದ ಪ್ರಹ್ಲಾದನ ಚರಿತ್ರೆಯನ್ನು ಹೇಳಲಾಗಿದೆ. ಇದರಲ್ಲೇ ನರಸಿಂಹಾವತಾರಿಯಾದ ಹರಿಯ ಸ್ತುತಿಯೂ ಇದೆ.

೧೭೪

ಇದು ಅಹೋಬಲ ನರಸಿಂಹದೇವರನ್ನು ಕುರಿತ ಸುಳಾದಿ (ಅಹೋಬಲದಲ್ಲಿ ಶ್ರೀನರಸಿಂಹನ ಬೇರೆ ಬೇರೆ ಹೆಸರಿನ ಒಂಬತ್ತು ವಿಗ್ರಹಗಳಿವೆ. ಸ್ಥಳಪುರಾಣದಲ್ಲಿ ಇದು ಹಿರಣ್ಯಕಶಿಪುವಿನ ರಾಜಧಾನಿಯಾಗಿತ್ತೆಂಬ ಉಲ್ಲೇಖವಿದೆ).

ನು. ೧ : ಆ ಮಾರ್ಕಂಡೇಯಗೊಲಿದು ಗೆಲಿಸಿ : ಮಾರ್ಕಂಡೇಯ ಒಬ್ಬ ಮಹರ್ಷಿ. ಮೃಕಂಡುಮುನಿಯ ಮಗ. ಇವನು ಪರಮಾತ್ಮನನ್ನು ತಪಸ್ಸಿನಿಂದ ಮೆಚ್ಚಿಸಿ, ಆತನ ಮಾಯೆಯನ್ನು ತೋರುವಂತೆ ಕೇಳಿದ. ಭಗವಂತ ತಥಾಸ್ತು ಎಂದು ಹೇಳಿ ಕಣ್ಮರೆಯಾಗಿ ಮಾರ್ಕಂಡೇಯನಿಗೆ ತನ್ನ ಮಾಯೆ ತೋರಿಸಿದ (ಪುನಾಚೂ. ಪು. ೪೯೫).

ನು. ೨ : ಆ ಕ್ಷೇತ್ರದಲ್ಲಿರುವ ತೀರ್ಥಗಳ ಬಗ್ಗೆ ಹೇಳುತ್ತಾರೆ. ಪ್ರತಿಯೊಂದು ತೀರ್ಥದಲ್ಲೂ ಶ್ರೀಹರಿ ಇದ್ದಾನೆ.

ನು. ೩ : ನರಸಿಂಹನ ರೂಪಾಲಂಕಾರಗಳ ವರ್ಣನೆ.

ನು. ೬–೭ : ಹರಿಯ ಅನಂತ ರೂಪಗಳ ವರ್ಣನೆ.

೧೭೫

ಈ ಕೀರ್ತನೆಯಲ್ಲಿ ಮನುಷ್ಯನ ದೇಹವನ್ನು ಕೋಟೆ ಮತ್ತು ಗ್ರಾಮಗಳೆಂದು ರೂಪಕ ಮಾಡಿ ಹೇಳಿದ್ದಾರೆ. ಈ ಕೋಟೆ, ಗ್ರಾಮಗಳಲ್ಲಿ ವಿಷಯಾದಿ ವೈರಿ ವರ್ಗಗಳ ಉಪಟಳ ಹೆಚ್ಚಾಗಿರುವುದರಿಂದ ಅಲ್ಲಿಯ ನಾಯಕತ್ವ ತಮಗೆ ಬೇಡವೆಂದೂ ಈ ಕೊಂಪೆಯ ವಾಸವನ್ನು ಬಿಡಿಸಿ ಗೋಪಾಲವಿಠಲನು ತನ್ನ ಪಟ್ಟಣದಲ್ಲಿ ಆಶ್ರಯ ಕೊಡಬೇಕೆಂದೂ ದಾಸರು ಪ್ರಾರ್ಥಿಸಿದ್ದಾರೆ. ಅರಿಷಡ್ವರ್ಗಗಳ ಮೇಲುಗೈಯನ್ನೂ ದಾಸರ ಮನದ ದೌರ್ಬಲ್ಯವನ್ನೂ ಈ ಕೃತಿ ಶಕ್ತಿಯುತವಾಗಿ ಬಿಂಬಿಸಿದೆ.

೧೭೬

ಭಾವೀ ಜಗನ್ನಾಥದಾಸರು ಹೊಟ್ಟೆನೋವಿನಿಂದ ನರಳುತ್ತಿದ್ದಾಗ, ಅದನ್ನು ಪರಿಹರಿಸಬೇಕೆಂದು ದೇವಧನ್ವಂತ್ರಿಯಾದ ಶ್ರೀಹರಿಯಲ್ಲಿ ಪ್ರಾರ್ಥಿಸಿರುವ ಕೃತಿ ಇದು ಎಂಬ ಮಾತಿದೆ.

೧೭೭

ಇಲ್ಲಿ ಲಕ್ಷ್ಮೀದೇವಿಯಾದಿಯಾಗಿ ದೇವತೆಗಳೆಲ್ಲ ಭಗವಂತನ ಕೈಂಕರ್ಯಕ್ಕೆ ಸಿದ್ಧರಾಗಿರುವರೆಂದೂ ತಡಮಾಡದೆ ಅವರ ಸೇವೆಯನ್ನು ಕೈಗೊಳ್ಳಬೇಕೆಂದೂ ಶ್ರೀಹರಿಯನ್ನು ಪ್ರಾರ್ಥಿಸಿದ್ದಾರೆ.

೧೭೮

ಶ್ರೀಮುಷ್ಣಕ್ಷೇತ್ರದ ಭೂವರಾಹಸ್ವಾಮಿಯನ್ನು ಕುರಿತ ಕೀರ್ತನೆ.

ನು. ೪ : ಕೈಗಳೆರಡನ್ನೂ ಸೊಂಟದ ಮೇಲಿಟ್ಟು, ಕೋರೆದಾಡೆಯನ್ನು ತೋರಿಸುತ್ತಾ ಸಾಲಿಗ್ರಾಮದ ಸರವನ್ನು ಧರಿಸಿ ನಿಂತಿರುವ ಮೂರ್ತಿಯ ವರ್ಣನೆ.

೧೭೯

ಇಲ್ಲಿ ರಥಾರೂಢನಾದ ತಿರುಪತಿಯ ತಿಮ್ಮಪ್ಪನನ್ನು ದಾಸರು ತಮ್ಮ ಮನೋಮಂದಿರಕ್ಕೆ ಆಹ್ವಾನಿಸುತ್ತಿದ್ದಾರೆ. ಭವಕಡಲಿಗೆ ಅಗಸ್ತ್ಯನೆಂಬ ವಿಶೇಷಣ ಸೊಗಸಾಗಿದೆ.

ಅಗಸ್ತ್ಯ : ಇವನು ಸಮುದ್ರಗರ್ಭದಲ್ಲಿ ಅಡಗಿಕೊಂಡಿದ್ದ ಕಾಲೇಯರೆಂಬ ರಾಕ್ಷಸರನ್ನು ಹೊರಗೆಡಹುವುದಕ್ಕಾಗಿ ಸಮುದ್ರನನ್ನೇ ಕುಡಿದನು (ಕ.ವಿ.ಸಂ. ೧).

ನು. ೨ : **ತಕ್ಷಕ ನರರ..... ನೆಲಕೊತ್ತಿದೆ** : ಮಹಾಭಾರತ ಯುದ್ಧ ಕಾಲದಲ್ಲಿ ಕರ್ಣಾರ್ಜುನರಿಗೆ ಯುದ್ಧವಾಗುತ್ತಿದ್ದಾಗ ಕರ್ಣ ತಕ್ಷಕ ಎಂಬ ಸರ್ಪಾಸ್ತ್ರವನ್ನು ಅಭಿಮಂತ್ರಿಸಿ, ಅರ್ಜುನನತ್ತ ಪ್ರಯೋಗಿಸುತ್ತಾನೆ. ಅದನ್ನು ನೋಡಿದ ಕೃಷ್ಣ ಕೂಡಲೇ ರಥದಿಂದಿಳಿದು, ನೆಲವನ್ನು ಐದು ಅಂಗುಲ ಒಳಕ್ಕೆ ಒತ್ತಿ, ರಥವನ್ನು ಕೆಳಕ್ಕಿಳಿಸುತ್ತಾನೆ (ಮಹಾಭಾರತ, ಕರ್ಣಪರ್ವ).

ನು. ೪ : **ಸುದಾಮನ ಸಖ ಹರಿಯೆ** : ಸುದಾಮ ಕೃಷ್ಣನ ಬಾಲ್ಯಮಿತ್ರ. ಕಡುಬಡವನಾದ ಸುದಾಮ ಕೊಟ್ಟಂತಹ ಒಂದು ಹಿಡಿ ಅವಲಕ್ಕಿಗೆ ಪ್ರೀತನಾದ ಕೃಷ್ಣ ಅವನಿಗೆ ಅಷ್ಟೈಶ್ವರ್ಯಗಳನಿತ್ತು ಅನುಗ್ರಹಿಸುತ್ತಾನೆ (ಭಾಗವತ ೧೦, ಅ. ೮೦).

ನು. ೫ : **ಕರಿಯ ಮೊರೆಯ....ಮಗನೇನೋ** : ಗಜೇಂದ್ರಮೋಕ್ಷ (ನೋಡಿ ಕೀ. ೧೫೭ರ ಟಿಪ್ಪಣಿ).

೧೮೦

ಪಂಡರಾಪುರದ ಪಾಂಡುರಂಗವಿಠಲನನ್ನು ಕುರಿತ ಸ್ತುತಿ. ಒಮ್ಮೆ ಒಬ್ಬ ಕುದುರೆ ಸವಾರ ದಾಸರನ್ನು ಎಲ್ಲಿ ಹೋದರೂ ಬಿಡದೆ ಬೆನ್ನಟ್ಟಿ ಬಂದು 'ಆಲೇನಾಹಿ' ಎಂದು ಕೂಗಿ ಅದೃಶ್ಯನಾದನಂತೆ. ಈ ರೀತಿ ತಮ್ಮನ್ನು ಕರೆದವನು ಪಾಂಡುರಂಗನೇ ಎಂದು ನಿಶ್ಚೈಸಿ ದಾಸರು ಪಂಡರಾಪುರಕ್ಕೆ ಹೋಗಿ ಅವನ ಸೇವೆ ಮಾಡಿದರೆಂದು ಪ್ರತೀತಿ (ನೋಡಿ : ಶ್ರೀ ಕರ್ಣಾಟಕ ಭಕ್ತವಿಜಯ ತೃ.ಮು.ಪು. ೪೪೬–೪೮).

ನು. ೧ : ಪಾಂಡುರಂಗನ ವರ್ಣನೆ.

ನು. ೨–೩ : ಸುಳಿದು ಕಣ್ಮರೆಯಾದ ಅವನನ್ನು ಹುಡುಕುತ್ತಾರೆ. ಅವನ ಲೀಲೆಗಳನ್ನು ಬಣ್ಣಿಸುತ್ತಾರೆ. **ಪುಂಡರೀಕನ ಭಕುತಿಗೊಲಿದು ಬಂದ ನಿಂದ** : ಪಂಡರಾಪುರದ ವಿಠಲಮೂರ್ತಿ ಇಟ್ಟಿಗೆಯ ಮೇಲೆ ನಿಂತುದಕ್ಕೆ ಒಂದು ಕತೆಯಿದೆ. ವೃದ್ಧರಾದ ತಂದೆತಾಯಿಗಳನ್ನು ಸೇವಿಸುತ್ತಿದ್ದ ಪುಂಡರೀಕನೆಂಬ ಒಬ್ಬ ಬ್ರಾಹ್ಮಣನನ್ನು ಪರೀಕ್ಷಿಸಲು ಒಮ್ಮೆ ಶ್ರೀಹರಿ ಬಂದನಂತೆ. ಶ್ರದ್ಧೆಯಿಂದ ತಂದೆ ತಾಯಿಗಳನ್ನು ಸೇವಿಸುತ್ತಿದ್ದ ಪುಂಡರೀಕ ತಾನು ಅವರ ಸೇವೆ ಮುಗಿಸಿ ಬರುವತನಕ ನಿಂತಿರಬೇಕೆಂದು ಇಟ್ಟಿಗೆಯೊಂದನ್ನು ಹರಿಯತ್ತ ಎಸೆದನಂತೆ. ದೇವರು ಅವನ ಭಕ್ತಿಗೆ ಮೆಚ್ಚಿ, ಅವನ ಆಜ್ಞೆಯಂತೆ ಇಟ್ಟಿಗೆಯ ಮೇಲೆ ನಿಂತನಂತೆ.

ನು. ೫ : ಹರಿಯ ಸರ್ವವ್ಯಾಪ್ತಿತ್ವವನ್ನು ಹೇಳಿ ತಮ್ಮನ್ನು ಕಾಪಾಡಬೇಕೆನ್ನುತ್ತಾರೆ.

ನು. ೬ : ಹರಿಯ ಸ್ವರೂಪ, ಗುಣಾದಿಗಳನ್ನು ಹೇಳಿ ವಂದಿಸಿದ್ದಾರೆ.

ನು. ೭ : ಹರಿಯ ಕೃಷ್ಣಾವತಾರ, ರಾಮಾವತಾರದ ಪ್ರಸ್ತಾವವಿದೆ.

೧೮೧

ಪ್ರತಿ ವ್ಯಕ್ತಿಯಲ್ಲೂ ಪಾಪದ ಅಂಶ ಇದ್ದೇ ಇರುತ್ತದೆ. ಇಲ್ಲಿ ಆ ಪಾಪವನ್ನೇ 'ಪಾಪಿಪುರುಷ'ನನ್ನಾಗಿ ಕಲ್ಪಿಸಿಕೊಂಡಿದ್ದಾರೆ. ದೇಹದಲ್ಲಿಯ ನವದ್ವಾರಗಳ (ನೋಡಿ : ಕೀ. ೯೬ರ ಟಿಪ್ಪಣಿ) ಮಲಗಳನ್ನು, ಆ ಪಾಪಿಪುರುಷನಿಗೆ ಪೂಜಾ ಪರಿಕರಗಳನ್ನಾಗಿ ಅರ್ಪಿಸುವ ಮೂಲಕ ಅವುಗಳನ್ನು ತ್ಯಜಿಸಿ, ಪರಿಶುದ್ಧರಾದಲ್ಲಿ ಶ್ರೀಹರಿ ಒಲಿಯುವನೆಂಬ ಭಾವನೆ ದಾಸರದು.

೧೮೨

ಗೋಪಾಲದಾಸರ ಜೀವಿತಕಾಲದಲ್ಲಿ ಬಂದಿದ್ದ ಬರಗಾಲದ ಚಿತ್ರಣ ಇಲ್ಲಿದೆ. ಬರಗಾಲದಲ್ಲಿ ಬವಣೆ ಪಡುತ್ತಿರುವ ಜನರ ಗಮನವನ್ನು ಶ್ರೀಹರಿಯ ಭಕ್ತಿಯತ್ತ ಸೆಳೆದು, ಆ ಮೂಲಕ ಅವರನ್ನು ಸಂತೈಸಲು ಪ್ರಯತ್ನಿಸಿದ್ದಾರೆ. 'ಹರಿಯ ಮರೆದಿಪ್ಪುದೆ ಬರಗಾಲ : ಹರಿಸ್ಮೃತಿ ಮಾಡುವುದು ಶೋಭನಕಾಲ' ಎಂದು ವಾಸ್ತವಿಕತೆಗೆ ಆಧ್ಯಾತ್ಮಿಕ ತಿರುವನ್ನು ಕೊಟ್ಟಿದ್ದಾರೆ.

ನು. ೪ : ಬರಗಾಲಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ.

ನು. ೫ : ಜನರಿಗೆ ಜ್ಞಾನಬರಗಾಲ ಬಂದಿದೆ ಎಂದು ಅರ್ಥೈಸಿದ್ದಾರೆ.

೧೮೩

ಗೋಪಾಲದಾಸರು ಶ್ರೀನಿವಾಸಾಚಾರ್ಯರಿಗೆ ಅಪಮೃತ್ಯುವನ್ನು ಪರಿಹರಿಸಿದ ಸಂದರ್ಭದಲ್ಲಿ ಹಾಡಿದ (?)

ನು. ೧೪ : **ಬಿಂಬ ಪ್ರತಿಬಿಂಬ** : ನೋಡಿ ಕೀ. ೪ರ ಟಿಪ್ಪಣಿ.

ನು. ೧೫ : ಸಾಕಾರ ಪುರುಷನೂ ಪ್ರಾಕೃತರಹಿತನೂ ಆದ ಹರಿಯನ್ನು ನಾಲ್ಕುಬಗೆಯ ಉಪಾಸನೆ ಮಾಡಿ ಒಲಿಸಿಕೊಳ್ಳಬೇಕು ಎಂದಿದ್ದಾರೆ.

ನು. ೧೬ : **ಮೂರೆರಡುಭೇದ** : ಪಂಚಭೇದ (ನೋಡಿ ಕೀ. ೬೦ರ ಟಿಪ್ಪಣಿ)

ನು. ೨ : **ಪೌಂಡ್ರ (ಪೌಂಡ್ರಕ)** : ಪುಂಡ್ರವಂಶದ ವಸುದೇವನೆಂಬ ರಾಜನ ಮಗ. ಕೃಷ್ಣನಂತೆಯೇ ತಾನೂ ಕೀರ್ತಿವಂತನಾಗಬೇಕೆಂಬ ದುರಾಸೆಯಿಂದ ಕೃಷ್ಣನ ಮೇಲೆ ಯುದ್ಧಕ್ಕೆ ಹೋಗಿ ಸೋತ. ಅನಂತರ ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ, ಅನೇಕ ಶಸ್ತ್ರಾಸ್ತ್ರಗಳನ್ನು ಪಡೆದು ಎಲ್ಲ ವ್ಯರ್ಥವಾದುವು. ಕಡೆಗೆ ಕೃಷ್ಣನನ್ನು ಕೊಲ್ಲಲು ಕ್ಷುದ್ರಶಕ್ತಿಯನ್ನು ಕಳುಹಿಸಿ ಆ ಶಕ್ತಿಯೂ ಸೋತ ಮೇಲೆ ಕಾಶೀರಾಜನ ಮೊರೆಹೊಕ್ಕು ಇಬ್ಬರೂ ಕೃಷ್ಣನಿಂದ ಹತರಾದರು (ಭಾರ. ಆ. ೨೦೧ ಸ. ೧೪, ೩೧, ಭಾಗ, ೧೧-೬೬, ಹರಿ ಭವಿಷ್ಯ ೯೧, ೧೦೧) (ಪುನಾಚೂ. ಪು. ೪೨೦).

ಅನುಬಂಧ ೩

ಅಸಮಗ್ರ ಕೀರ್ತನೆ*

................ಪ್ರಾರಬ್ಧ ಅಲ್ಪಿಷ್ಟ ಆಹ
ಬಿಂಬ ಪ್ರತಿಬಿಂಬ ಇಂಬನವಗೆ ತೋರಿ
ಗುಂಭ ಸಂಸಾರೆಂಬೊ ಅಂಬುಧಿದಾಟಿಪ ೧೪

ಸಾಕಾರ ಪುರುಷನು ಅಹುದು ಇವನ
ಆಕಾರ ತಿಳಿಯಲಿ ಬಹುದು ಇನ್ನು
ಪ್ರಾಕೃತರಹಿತನೆಂದರಿದು ನಿಗಮ
ವಾಕುಗಳಿಂದಲಿ ಕರೆದು ಆಹ
ನಾಕು ಬಗೆಯುಪಾಸನೆ ಕಂಡು ಮಾಡಲು
ಲೋಕರಕ್ಷಕ ತನ್ನನಾ ಕಾಣಿಸಿಕೊಂಬ ೧೫

ಎಂತೆಂತುಪಾಸನೆ ಅವಗೆ ಫಲ
ಅಂತಂತೆನೀವನು ಕೊನೆಗೆ ತನ್ನ
ಅಂತು ತೋರನು ಒಬ್ಬರಿಗೆ ಸರ್ವ
ತಂತ್ರ ಸ್ವಾಧೀನ ಶ್ರೀಹರಿಗೆ ಆಹ
ಎಂತು ನುಡಿವ ಸೋಹಂ ಅಂತಮಾಯಿಯಬಾಯಿ
ದಂತವ ಮುರಿದಿನ್ನು ಸಂತ್ರಿಸದಿಹೊನೆ ೧೬

---

* ಈ ಕೀರ್ತನೆಯ ಪ್ರಾರಂಭದ ಹದಿನಾಲ್ಕು ನುಡಿಗಳು ಲಭ್ಯವಿಲ್ಲ. ಒಟ್ಟು ನಲವತ್ತೊಂದು ನುಡಿಗಳಿರುವ ದೀರ್ಘಕೀರ್ತನೆಯಾದುದರಿಂದ ಇದನ್ನು ಕೈಬಿಡಲು ಮನಸ್ಸಿಲ್ಲದೆ ಅನುಬಂಧದಲ್ಲಿ ಸೇರಿಸಲಾಗಿದೆ.

ಬೇಡಿ ಬೇಸತ್ತರು ಕೊಡನು ಮನ
ಕೂಡಿದ ಮ್ಯಾಲೆ ಕ್ಷಣಯಿಡನು ಎಲ್ಲಿ
ಓಡಿಪೋದರು ಅಲ್ಲಿ ಬಿಡನು ತನ್ನ
ಪಾಡುವ ಭಕ್ತರಾಧೀನನು ಆಹ
ಮಾಡಿಪ ಸುಕೃತ ಓಡಿಪೆ ದುಷ್ಕೃತ
ನಾಡ ಜೀವರಲ್ಲಿ ಓಡ್ಯಾಡುತಿಹ ಬಿಡದೆ ೧೭

ಸಿರಿದೇವಿ ಅವನಿಗೆ ಅರಸಿ ಚೆಲ್ವ
ಪರಮೇಷ್ಠಿ ಸುತನೆಂದು ವಲಿಸಿ ರುದ್ರ
ಹರಿಗೆ ಮೊಮ್ಮಗನೆಂದು ಭಜಿಸುತ್ತ
ಪುರುಹೂತ ಸುರರನು ನಿಲಿಸಿ ಆಹ
ತರತಮನು ಸರಿ ಹರಿಯ ಭಕ್ತರುಗಳ
ಅರಿದು ಗುಣಿಸು ನಿತ್ಯ ಪರಿವಾರದೊಡೆಯನ ೧೮

ಮೂರೆರಡು ಭೇದವ ತಿಳಿಯೊ ಅಲ್ಲಿ
ಆರಿಸುತ ಮುಂದೆ ನಡೆಯೊ ಸರ್ವ
ಭಾರಕರ್ತ ಹರಿ ಎಂದರಿಯೊ ಅಲ್ಲಿ
ನಾರಾಯಣನ ಮುಟ್ಟಿ ಕರೆಯೊ ಆಹ
ಆರುಸ್ವತಂತ್ರರು ಆರಸ್ವತಂತ್ರರು
ಕಾರಣ ನಿಂದಲ್ಲ್ಯವೆ ಕಾರ್ಯವ ಚಿಂತಿಸೊ ೧೯

ಸಜ್ಜನ ಸಂಗವ ಮಾಡು ದುಷ್ಟ
ದುರ್ಜನ ಸಂಗ ನೀ ಬಿಡು ಹರಿಯ
ವ್ಯಾಜರಹಿತ ಪೂಜೆ ಮಾಡು ನೀ ನಿ-
ರ್ಲಜ್ಜನಾಗಿ ನಿತ್ಯ ಪಾಡು ಆಹ
ಹೆಜ್ಜೆಹೆಜ್ಜೆಗೆ ಹರಿ ವಜ್ರಾಂಕುಶ
ಧ್ವಜನ ಭಜಿಸು ಮನದಲ್ಲಿ ನಿರ್ಜರನಾಗುವಿ ೨೦

ಕಾಮವೆಂಬುದು ನಿನಗಿರಲೊ ಅಲ್ಲಿ
ಪ್ರೇಮಮುಖ್ಯ ಹರಿಯಿರಲು ದುಷ್ಟ

ಕಾಮವೆಂಬುದು ಅರಿತಿರಲೊ ನಿಜ
ಕಾಮ ಹರಿಯೆಂಬ ಸ್ಮೃತಿ ಬರಲೊ ಆಹ
ನೇಮ ನಿಮಿತ್ಯಾದಿ ಆ ಮಹಾ ಕರ್ಮವು
ಸಮಸ್ತವೆಲ್ಲ ಶ್ರೀರಾಮನಿಗೆ ಅರ್ಪಿಸು ೨೧

ಅರ್ಪಣೆ ಬಗೆ ಮುಂಚೆ ಅರಿಯೊ ನಿನ್ನ
ದರ್ಪಕೋಪಗಳೆಲ್ಲ ಮರಿಯೊ ಅನ
ಅರ್ಪಕಾರ ಸಂಗ ಜರಿಯೊ ಸುಸ
ಮರ್ಪಕ ದಾರಿಯ ಹಿಡಿಯೊ ಆಹ
ಜರ್ಪಿಸದಿರು ದಿನ ವ್ಯರ್ಥವೆಂದು ಕಂ–
ದರ್ಪನಯ್ಯನಂಘ್ರಿ ತೋರ್ಪುವರೊಡನಾಡು ೨೨

ಆರಿತ್ತ ಸ್ವಾತಂತ್ರ ನಿನಗೆ ಬಿಡದೆ
ಆರಿಸಿ ನೋಡು ನಿನ್ನೊಳಗೆ ಮುಖ್ಯ
ಪ್ರೇರಕ ಆವನು ನಿನಗೆ ಕರ್ಮ
ಆರೋಪಿಸು ಎಲ್ಲ ಅವಗೆ ಆಹ
ಭಾರವ ಹೊರದೆ ನೀ ಆರಿಂದ ಆದದ್ದು
ವಾರಣಗರ್ಪಿಸಿ ಆರಾಧಿಸನುದಿನ ೨೩

ಸುಖವ ಬಡಿಸುವನು ಅವನೇ ಹಾಗೆ
ದುಃಖ ಬಡಿಸುವನು ಇವನೆ ಎರಡು
ಸಿಕ್ಕಿ ಉಣಿಸುವನು ಇವನೆ ತನ್ನ
ಭಕುತನೆಂದವನ ಸಹ ಬಿಡನೆ ಆಹ
ಕಕುಲಾತಿ ತನ್ನಲ್ಲಿ ಮುಕರ ಬಿದ್ದವನಿಗೆ
ಯುಕುತವ ಉಣಿಸಿ ಅಯುಕುತವ ಬಿಡಿಸುವ ೨೪

ಕಂಡ ದೇವನ ಕೇಳಬೇಡ ಹರಿಯ
ಕಂಡವ ಒಳ್ಳೆಯವನೆನಬೇಡ ದುಷ್ಟ
ಚಾಂಡಾಲರಿಗೆ ಕರುಣ ಮಾಡ ನಿಷ್ಠೆ
ಪಂಡಿತರನು ಕಂಡು ಬಿಡ ಆಹ

ಕಂಡರೇನು ಹರಿಯ ಕಂಡು ಎರಗದಂಥ
ಭಂಡಾನ ಮುಂದಿನ್ನು ದಂಡಿಸದಿಪ್ಪನೆ ೨೫

ಕೃಷ್ಣನ ಕಟ್ಟಬೇಕೆನನೆ ಕಂಡ
ಭ್ರಷ್ಟ ದುರ್ಯೋಧನ ಘನನೆ ಪೌಂಡ್ರ
ಕೃಷ್ಣಗೆ ಸರಿಯು ಆತನನೆ ಅಂದು
ಸುಟ್ಟುಕೊಳ್ಳನೆ ಹೃದಯವನೆ ಆಹಾ
ಭ್ರಷ್ಟರ ದೃಷ್ಟಿಗೆ ದುಷ್ಟನಂತೆ ತೋರಿ
ಪುಟ್ಟಿಸಿ ದ್ವೇಷವರಿಷ್ಠ ಆವರಿಗೀವ ೨೬

ಪರಿಪರಿ ಕರ್ಮ ಮಾಡೆನು ಹರಿ
ಅರಿಕೆಯಿಲ್ಲದಿದ್ದವನು ನಾನಾ
ಪರಿವ್ರತ ತಪಸುಗಳನು ಮಾಡಿ
ದೊರವುವ ಫಲ ತನಗೇನು ಆಹ
ಹುರಿದ ಬೀಜವ ಬಿತ್ತಿ ಧರೆಯ ಮ್ಯಾಲೆ ಇನ್ನು
ಮರಳೆ ಫಲಕೆ ಬಾಯಿ ತೆರೆದುಕೊಂಡಿದ್ದಂತೆ ೨೭

ಮರಳಿ ಮರಳಿ ಹರಿಯು ಕರಿಯೊ ಬಿಡದೆ
ಇರುಳು ಹಗಲು ಆಲ್ಪರಿಯೊ ಇದೆ
ದೊರಿಯ ಬೇಕೆಂಬೋರ ಬೆರೆಯೊ ನಿತ್ಯ
ಹರಿಕಥಾಮೃತ ಸುರಿಸುರಿಯೊ ಆಹ
ಹರಿಯನ್ನೆ ನೆನದಾವ ನಿರಯವ ಗೆದ್ದಾವ
ಹರಿಯನು ಮರೆದವ ನಿರಯವ ಬಿದ್ದವ ೨೮

ಪುಣ್ಯಪಾಪ ಮಿಶ್ರ ಕರ್ಮ ತ್ರೈ
ಗುಣ್ಯದಿಂದಾಗೋದೀ ಧರ್ಮಫಲ
ವಿನ್ನೇನಿದಕೆ ಮರ್ಮ ಇದರ
ಭಿನ್ನುಪಾಸನೆ ನಿನಗೆ ಧರ್ಮ ಆಹ
ನಿನ್ನಿಂದಾಗೋ ಮೂರು ವರ್ಣಗುಣದ ಕಾರ್ಯ
ನಿನ್ನಂತೆ ಮಾಡದೆ ಚಿನ್ಮಯಗರ್ಪಿಸು ೨೯

ದೋಷವೆಂತೆಂಬೋದು ಬೇರೆ ಇನ್ನು
ದೋಷವೆಂತೆಂಬೋದು ಸಾರೆ ಕರ್ಮ
ಪಾಶದಿಂದಾಗೋದು ಬೇರೆ ಹರಿ
ದೂಷಕರು ಸುತ್ತ ಹಾರೆ ಆಹ
ದೋಷ ತಮಸ್ಸಿನ್ನು ಏಸುಕಾಲಕು ನಿತ್ಯ
ದೋಷಕ್ಕೆ ದುಃಖವನುಣಿಸಿ ಬಿಡುವದು ೩೦

ಮನಸ ಆಗುವದು ದೋಷ ಇನ್ನು
ಅನಿಸು ವಾಚಕಾಯದೋಷ ಇದಕೆ
ಉಣಿಸಾದೆ ಬಿಡ ಫಲ ಈಶಾ ತನ್ನ
ನೆನೆಸುವಗೆ ಬಹಳ ದಣಿಸ ಆಹ
ಕನಸಿನೊಳಗೆ ಸಹಿತ ಮನಸಾದ ಪಾಪಕ್ಕೆ
ಘನ ಪ್ರಾಯಶ್ಚಿತ್ತಾವು ಉಣಿಸುವ ಹರಿಯೆನ್ನು ೩೧

ದಾರಿಗೆ ಶ್ರೀಹರಿ ದೂರ ಇದ್ದು
ಆರಿಗೆ ಶ್ರೀಹರಿ ಸಾರಾ ನೀನು
ಆರಿಸಿ ನೋಡಿನ್ನು ಪೂರಾ ಇದರ
ಕಾರಣಗಳ ವಿಸ್ತಾರ ಆಹ
ದೂರನಹುದು ಅಲ್ಲಿ ಸಾರ್‍ಯನಹುದು ಅವ
ಆರಾರ ಯೋಗ್ಯತೆ ಆರಿಸಿ ಕರುಣಿಪ ೩೨

ಹಂಬಲಗೊಡಲೀಸ ತನ್ನ ನಂಬೆ
ಹಂಬಲಿಸೀಸ ಅನ್ಯರನ್ನ ಭವ
ಅಂಬುಧಿ ದಾಟಿ ಪೋಪನ್ನ ಬಿಡದೆ
ಡಿಂಬದೊಳಗೆ ಸುಳಿವರನ್ನ ಆಹ
ಕಂಬುಚಕ್ರ ಪೀತಾಂಬರಧರ ಚೆಲ್ವ
ಕುಂಭಿಣಿಪತಿ ಕುಟುಂಬಿ ಭಕ್ತರ ಪೊರೆವ ೩೩

ಏಸು ಕಲ್ಪಕೆ ಗತಿಯೆಂದು ನಾನಾ ಯೋ–
ಚಿಸಬೇಡ ನೀ ಒಂದು ಯಿಂತಾ–

ಲೆ ಸುಳ್ಳು ಜನ್ಮವು ಬಂದು ಹರಿ
ದಾಸನೆನಿಪೆನೆಗಾಪ್ತ ಬಂಧು ಆಹ
ಮೋಸ ಬೇಡವೊ ನಿನ್ನದೇಸು ಸಾಧನ
ಶ್ರೀಶನ ಕರುಣ ಸಂಪಾದಿಸೊ ಬಗೆಯ ತಿಳಿ ೩೪

ಹರಿಯ ಕರುಣ ನಿನಗಾಗೆ ನಿನ್ನ
ದಾರಿದ್ರ್ಯವೆಲ್ಲವು ಹೊರಗೆ ತಾ
ವೆರಗುತ ಬರಲು ಒಳಗೆ ಆಗ
ಹರಿದು ಹೋಹದು ಹೋಗಿ ಹೊರಗೆ ಆಹ
ಅರಳೆಯ ರಾಶಿಗೆ ಉರಿ ಕಿಡಿ ಸೋಕಲು
ಇರಬಲ್ಲದೆ ರಾಜಅರಳೆಯೆಂಬೊ ರಾಶಿ ೩೫

ಹ್ಯಾಗ್ಹ್ಯಾಗೆ ಹರಿಯ ನೀ ತಿಳಿವೆ ನಿತ್ಯ
ಹಾಗ್ಹಾಗೆ ನೀನು ಬಾಳುವೆ ದೋಷ
ರೋಗ ಅನಾದೀದು ಕಳಿವೆಕ್ಲುಪ್ತ
ಭೋಗ ಬೇಡದೆ ನೀನು ಉಳಿವೆ ಆಹ
ಆಗಮ ಸಮ್ಮತವಾಗಿ ಹರಿಯ ಗುಣ
ಭಾಗದ್ವಯವರಿತು ಭಾಗಿಸು ಚೆನ್ನಾಗಿ ೩೬

ಅಭಿಮಾನವೆಂಬೋದು ಕ್ಲೇಶಾ ನಿನಗೆ
ಶುಭವೆಂದು ತೋರದು ಲೇಶಾ ಅದರ
ದ್ವಿಭಾಗವನು ಕಾಣಲೀಸ ಜಡದಿ
ಅಭಿಮಾನ ಪ್ರಕಟಿಸಿ ಶ್ರೀಶಾ ಆಹ
ಶುಭವು ಅಶುಭವು ನಮಗೆ ಈಡಾ
ಶುಭ ಅಶುಭ ಫಲದಾತನು ಇಭರಾಜವರದನು ೩೭

ಜ್ಞಾನ ಭಕುತಿ ನಿನಗೆ ಬಲವು ಅನ್ಯ
ಕಾಣೆ ಇದರ ವಿನಹವು ಅರಿಯೆ
ಏನೇನು ಕರ್ಮವು ಜಡವು ಬಿಡದೆ
ಅನಂತ ಮಾಡೆ ಅಘ ಕೆಡವು ಆಹ

ಧ್ಯಾನ ಮೂರು ಪರಿ ತಾನು ಇಪ್ಪುವದು
ಶ್ರೀನಿವಾಸನ ಪ್ರಸಾದಾನುಸರಿಪ್ಪುದು ೩೮

ಜ್ಞಾನಕ್ಕೆ ಸಾಧನ ಶ್ರವಣ ಜನ್ಯ
ಜ್ಞಾನದಿಂದಾಹೋದು ಮನನ ಮಾಡು
ತಾನಿತ್ತು ನಿಧಿಧ್ಯಾಸನ ಆಗ
ಕಾಣಿಸುವದು ನಿಜ ಜ್ಞಾನ ಆಹ
ಜ್ಞಾನಭಕುತಿ ವಿರಕುತಿ ಮುಕುತಿ ಸಾ
ಧನವಲ್ಲದೆ ಬೇರೆ ಕಾಣೆನು ನಿನಗೊಂದು ೩೯

ಆಪ್ತರೆಂಬರು ನಿನಗಾರು ಎ–
ನ್ನಾಪ್ತರು ದೇಹ ಸಂಬಂಧರು ದೇಹ
ಕ್ಲುಪ್ತ ಮೀರಿದ ಮೇಲೆ ನೀರು ಒಳ್ಳೆ
ಪ್ರಾಪ್ತಿ ತಂದಿನ್ನು ಈಯರು ಆಹ
ಗುಪ್ತನಾಗಿಹದಿ ವ್ಯಾಪ್ತಿಸಿ ನಿನ್ನೊಳು
ಆಪ್ತನಾಗಿ ನಿಜಪ್ರಾಪ್ತಿ ಫಲವನೀವ ೪೦

ಆವಾವ ಕರ್ಮ ನೀ ಮಾಡು ಅಲ್ಲಿ
ಈವ ಶ್ರೀಮೂರ್ತಿಯ ನೋಡು ಹರಿ
ಕಾವ ತಾನೆಂದು ನೀನಾಡು ವಾಯು
ದೇವನ್ನ ನೀ ಬಲಮಾಡು ಆಹ
ಶ್ರೀವಲ್ಲಭನಮ್ಮ ಗೋಪಾಲವಿಠಲ ತ–
ನ್ನವನೆಂದು ಎತ್ತಿ ಪಾವನ್ನಮಾಡುವ ೪೧

ಅನುಬಂಧ ೪

ಸಂಕೇತಾಕ್ಷರಗಳ ವಿವರ

ಸಂಕೇತಗಳು	ಮೂಲ
ಅ	ಅಧ್ಯಾಯ/ಅನುಬಂಧ
ಅ.ಪ.	ಅನುಪಲ್ಲವಿ
ಕ.ಭ.ವಿ	ಕರ್ಣಾಟಕ ಭಕ್ತವಿಜಯ
ಕ.ವಿ	ಕನ್ನಡ ವಿಶ್ವಕೋಶ
ಕೀ	ಕೀರ್ತನೆ
ನು.	ನುಡಿ
ಪ.	ಪಲ್ಲವಿ/ಪದ್ಯ
ಪು.	ಪುಟ
ಪು.ನಾ.ಚೂ	ಪುರಾಣನಾಮ ಚೂಡಾಮಣಿ
ಪ್ರ.	ಪ್ರಕಾಶಕರು
ಮ.ಭಾ.	ಮಹಾಭಾರತ
ಮಂ.	ಮಂಡಲ
ಲೇ.	ಲೇಖಕರು
ಶ್ರೀ.ನಿ.	ಶ್ರೀವತ್ಸ ನಿಘಂಟು
ಸಂ.	ಸಂಪುಟ/ಸಂಪಾದಕರು

ಅನುಬಂಧ ೫

ಕೀರ್ತನೆಗಳ ಅಕಾರಾದಿ

ಕ್ರಮ ಸಂಖ್ಯೆ	ಕೀರ್ತನೆಯ ಮೊದಲ ಸಾಲು	ಕೀರ್ತನೆ ಸಂಖ್ಯೆ
೧.	ಅಗಲಿ ಸೈರಿಸಲಾರೆವೊ ವೇಣುಗೋಪಾಲನ	೧೫೦
೨.	ಅನಂತ ಜೀವ ಮುಕ್ತಿಯೋಗ್ಯರ (ಸುಳಾದಿ)	೮೯
೩.	ಅನಂತನ್ನ ನೋಡಿ ಅಗಣಿತ ಗುಣಗಣನ (ಸುಳಾದಿ)	೧೭೫
೪.	ಅನ್ನಂತ ಅಪರಾಧ ಎನ್ನಲ್ಲಿ ಉಂಟೊ ದೇವ (ಸುಳಾದಿ)	೨
೫.	ಅನ್ಯರಿಂದಲಿ ಸುಖವಾಯಿತೆಂಬುದಕಿಂತ (ಉಗಾಭೋಗ)	೩
೬.	ಅಪಕಾರ ಉಪಕಾರ ಹರಿಯೆ ನಿನ್ನಂದಲೇವೆ (ಸುಳಾದಿ)	೧೧೪
೭.	ಅಪರೋಕ್ಷವೆಂಬುದು ಬಹುದೂರವಿಲ್ಲವಿನ್ನು (ಸುಳಾದಿ)	೧೧೫
೮.	ಅರಿಯಾಗಿ ಸಖನಾಗಿ ಸರ್ವೇಶನೆ (ಸುಳಾದಿ)	೯೦
೯.	ಆಕಳ ಕಾಯ್ದ ಗೋಕುಲವಾಸನು	೧೫೧
೧೦.	ಆಡಿ ಆಡಿಸುವನು ನಾಡ ಜೀವನರನ್ನು (ಸುಳಾದಿ)	೧೧೬
೧೧.	ಆದಿನಾರಾಯಣ ಅನಿಮಿತ್ತ ಬಂಧು ದೇವ (ಸುಳಾದಿ)	೧೧೭
೧೨.	ಆನ್ಯಾತರವನಯ್ಯ ಅಲ್ಪ (ಸುಳಾದಿ)	೯೧
೧೩.	ಆಪತ್ತು ಕಾಲ ಈಗ ಬಂದಿದೆ ಅಯ್ಯ (ಸುಳಾದಿ)	೪
೧೪.	ಆಪ್ತ ಮಾತಿದು ನಿಜ ಪ್ರಾಪ್ತ ಜನಕೆ	೧೧೮
೧೫.	ಆರಿಗಾರಾಗುವರೊ ಆಪತ್ತು ಕಾಲಕ್ಕೆ (ಉಗಾಭೋಗ)	೧೦೯
೧೬.	ಆವ ಕರ್ಮಗಳಿನ್ನು ಆವಧರ್ಮಗಳಿನ್ನು (ಸುಳಾದಿ)	೯೨
೧೭.	ಆವನ್ನೀ ಧರೆಯ ವ್ಯಾಪ್ತನೆಂದೆನಿಸುವ (ಸುಳಾದಿ)	೯೩

ಅನುಬಂಧ ೬

ಸಹಾಯಕ ಗ್ರಂಥಗಳು

ಉಪನಿಷತ್ಪ್ರಕಾಶ (೧೯೫೧)	: ರಂಗನಾಥ ರಾಮಚಂದ್ರ ದಿವಾಕರ
ಕನ್ನಡ ವಿಶ್ವಕೋಶ (ಸಂ. ೧, ೧೯೬೯)	: ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
ಕರ್ನಾಟಕದ ಹರಿದಾಸರು (೧೯೬೫)	: ಎಚ್. ಕೆ. ವೇದವ್ಯಾಸಾಚಾರ್ಯ
ದಾಸಸಾಹಿತ್ಯ	: ದ್ವಿತೀಯ ಘಟ್ಟದ ಸಾಧನೆ(೧೯೭೦), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಪುರಾಣನಾಮ ಚೂಡಾಮಣಿ (ಪುನಾಚೂ. ೧೯೫೯)	: ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರೀ
ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ (ಭಾ.ತ.ಸಂ.) (೧೯೬೨)	: ಎಚ್. ಎಸ್. ರಾಘವೇಂದ್ರಾಚಾರ್ಯ
ಮಹಾಭಾರತ ತಾತ್ಪರ್ಯ ನಿರ್ಣಯ (ಮ.ತಾ.ನಿ)	: ಆನಂದ ತೀರ್ಥರು
ವಚನ ಭಾರತ (ವ.ಭಾ.) (೧೯೫೦)	: ಎ.ಆರ್. ಕೃಷ್ಣಶಾಸ್ತ್ರೀ
ಶ್ರೀ ಕರ್ಣಾಟಕ ಭಕ್ತವಿಜಯ (ಕ.ಭ.ವಿ) (೧೯೬೩)	: ಬೇಲೂರು ಕೇಶವದಾಸರು
ಶ್ರೀ ಮದ್ಭಾಗವತವು (ಹತ್ತು ಸ್ಕಂಧಗಳು)	: ದೇವಶಿಖಾಮಣಿ ಅಳಸಿಂಗಾಚಾರ್ಯ
ಶ್ರೀಮಧ್ವಾಚಾರ್ಯರು (೧೯೭೬)	: ಕೊರಟಿ ಶ್ರೀನಿವಾಸರಾವ್
ಶ್ರೀವತ್ಸ ನಿಘಂಟು (ಶ್ರೀ. ನಿ) (೧೯೭೦)	: ಸಂ. ಟಿ. ವಿ. ವೆಂಕಟಾಚಲಶಾಸ್ತ್ರೀ